ಪ್ರಪಂಚದಲ್ಲಿ ನಾವು ಸಹಜವಾಗಿ ಜ್ಞಾನವನ್ನು ಕೂಡಿಸುವಾಗ ಅದನ್ನು ನಾವು ವಿಷಯವಿಭಾಗದಂತೆ ಕಲಿಯುವೆವೊ ? ಎಂದೂ ಇಲ್ಲ. ನಿರಕ್ಷರಿಯಾದ ಹಳ್ಳಿಗನೂ ವ್ಯವಹಾರವನ್ನು ಉತ್ಕೃಷ್ಟರೀತಿಯಿಂದ ನಡೆಯಿಸಬಲ್ಲನು. ಬಂದ ತೊಡಕುಗಳನ್ನು ಬಗೆಹರಿಸಬಲ್ಲನು. ತನ್ನ ಮನಸಿನ ಅಭಿಪ್ರಾಯವನ್ನು ಮಾತಿನಿಂದ ಚೆನ್ನಾಗಿ ತಿಳಿಸಬಲ್ಲನು. (ಹರಕುಮುರಕು ಮಾತಿನಿಂದ ಆಗಲೊಲ್ಲದೇಕೆ) ಇತರರ ಮಾತಿನ ಆಶಯವನ್ನು ತಿಳಿದುಕೊಳ್ಳಬಲ್ಲನು, ಜೇಷ್ಟೆಯ ಮಾತನ್ನು ತಿಳಿದುಕೊಂಡು ಅದಕ್ಕೆ ತಕ್ಕ ಉತ್ತರ ಕೊಡಬಲ್ಲನು. ಇವೆಲ್ಲ ಕೆಲಸಗಳನ್ನು ಸುಶಿಕ್ಷಿತನು ಮಾಡುವ ರೀತಿಗೆ ಎಷ್ಟೂ ಕಡಿಮೆಯಾಗದಂತೆ ಮಾಡಬಲ್ಲನು. ಅವನು ಇದನ್ನೆಲ್ಲ ಹೇಗೆ ಕಲಿತನು ? " ಜೀವನದ ಮುಖಾಂತರ " ಎಂಬ ಉತ್ತರದ ಸರಿಯಾದ ಮನವರಿಕೆಯಾದರೆ, ಶಿಕ್ಷಕರು ಯಾವದೊಂದು ಸಂಗತಿಯನ್ನು ಕಲಿಸಲಿಕ್ಕೆ ತಕ್ಕ ಸಮಯವನ್ನು ಧೈರ್ಯದಿಂದಲೂ ವಿಶ್ವಾಸದಿಂದಲೂ ಕಾಯುವರು.

ಉದ್ಯೋಗದ ಮುಖಾಂತರ ಕಲಿಸುವದು ಸ್ವಾಭಾವಿಕವಾದದ್ದು. ಯಾಕೆಂದರೆ ಅದು ಕಲಿಯುವದಕ್ಕೆ ತಕ್ಕ ಆಂತರಿಕ ಹೇತುವನ್ನು ಒದಗಿಸಿಕೊಡುವದು. ಕಲಿಯುವದರ ಅಗತ್ಯವು ಹುಡುಗನಿಗೆ ಭಾಸವಾಗುವದು. ಆದ್ದರಿಂದ ಶಿಕ್ಷಕರು ಉದ್ಯೋಗದ ಬೇರೆ ಬೇರೆ ವಿಧಾನಗಳನ್ನು ಮನಸ್ಸಿನಲ್ಲಿ ವಿಂಗಡವಾಗಿ ತಿಳಿದು ಕೊಳ್ಳಬೇಕು. ಇಲ್ಲವೆ ಯಾವದಾದರೊಂದು ಚಟುವಟಿಕೆಯ ಬೇರೆ ಬೇರೆ ಅಂಗಗಳನ್ನು ನೋಡಿಕೊಂಡು ಆಯಾ ಅವಸ್ಥೆಯಲ್ಲಿ ಇಲ್ಲವೆ ಮೆಟ್ಟಿನಲ್ಲಿ ಯಾವ ಸಂಗತಿಗಳನ್ನು ಸುಲಭವಾಗಿ ಕಲಿಸಲಿಕ್ಕೆ ಬರುವದೆಂಬುದನ್ನು ಜೆನ್ನಾಗಿ ಆಲೋಚಿಸಿ ನೋಡಬೇಕು. ತನಗೆ ಕಲಿಸಬೇಕಾದ ವಿಷಯಗಳನ್ನು ಅವನು ಲಕ್ಷ್ಯದಲ್ಲಿಡಬೇಕು. ಆದರೆ ಅವು ಗೌಣವಾಗಿ ಮೂಲ ಉದ್ಯೋಗವು ಕೇಂದ್ರಸ್ಥಾನದಲ್ಲಿ ಇರಬೇಕು. ವಿಷಯಾಂಶಗಳು ಉದ್ಯೋಗಕ್ಕೆ ಪೋಷಕವಾಗಿಯೂ ಸಹಕಾರಿಯಾಗಿಯೂ ಇರಬೇಕು. ಯಾಕೆಂದರೆ ಮಗುವಿಗೆ ಈ ಉದ್ಯೋಗದಿಂದ ತನ್ನ ಕೈಕಾಲುಗಳನ್ನು ಅಲ್ಲಾಡಿಸುವದಕ್ಕೆ ಅವಕಾಶ ಸಿಕ್ಕುವದಲ್ಲದೆ, ಅದರಿಂದಾಗುವ ಸೃಷ್ಯ ಫಲದಿಂದ ಆತ್ಮವಿಶ್ವಾಸವೂ ಆನಂದವೂ ದೊರಕುವವು.

ಈ ಮೇಲಿನ ಮಾತುಗಳನ್ನು ಲಕ್ಷ್ಯದಲ್ಲಿಟ್ಟು ಮೂಲ ಉದ್ಯೋಗವಾಗಿ ಆರಿಸಿಕೊಂಡ ನೂಲುವದರಲ್ಲಿ ಯಾವ ಯಾವ ವಿಧಾನಗಳು ಬರುವವು? ಎಂಬುದನ್ನೂ ಆ ವಿಧಾನಗಳ ಉಪಯೋಗಮಾಡಿಕೊಂಡು ಅಂಕಗಣಿತದ ಬೇರೆ ಬೇರೆ ವಿಷಯಾಂಶಗಳನ್ನು ಹೇಗೆ ಕಲಿಸಬಹುದೆಂಬುದನ್ನೂ ನೋಡೋಣ.

ಇದಕ್ಕೂ ಮೊದಲು ಮಕ್ಕಳು ಅಂಕಗಣಿತದ ಯಾವ ಯಾವ ಸಂಗತಿಗಳನ್ನು ಕಲಿಯಬೇಕಾಗಿದೆಯಂಬುದನ್ನು ನೋಡೋಣ. ಮೊದಲಿನ ಮೂರು ಇಯತ್ತೆಗಳ ವಿಷಯಗಳನ್ನು ವಿಚಾರಿಸಬೇಕಾಗಿದೆ. ಸಂಖ್ಯಾಲೇಖನ ಸಂಖ್ಯಾವಾಚನ, ಆರಂಭದ ನಾಲ್ಕು ಕೃತಿಗಳು, ವಿವಿಧ ಪರಿಮಾಣಗಳ ಕೃತಿಗಳು ಹಾಗೂ ಅಪೂರ್ಣಾಂಕಗಳ ಆರಂಭ. ಮಕ್ಕಳಿಗೆ ತಿಳಿಯಬೇಕಾದ ವಿವಿಧ ಪರಿಮಾಣಗಳೆಂದರೆ. ಹಣ, ತೂಕ, ಉದ್ದಳತೆ, ವೇಳೆ ಇವುಗಳಿಗೆ ಸಂಬಂಧಿಸಿದವು ಇರುತ್ತವೆ. ಆರಂಭದ ನಾಲ್ಕು ಕೃತಿಗಳನ್ನು ಪ್ರತಿಯೊಂದರಲ್ಲಿಯೂ ಪುನಃ ಸಣ್ಣ ಸಣ್ಣ ಮೆಟ್ಟುಗಳಿರುವವು. ಉದಾ :— ಬೇರೀಜಿನ ಕೃತಿಗಳಲ್ಲಿ ಕೈಲೆ ಜಾರದ ಬೇರೀಜು, ಕೈಲೆ ಬರುವ ಬೇರೀಜು, ಎರಡೆರಡರಂತೆ ಮೂರರ ಮೂರರಂತೆ ನಾಲ್ಕು ನಾಲ್ಕರಂತೆ, ಕೂಡಿಸುತ್ತ ಹೋಗುವ ಬೇರೀಜು. ಮುಗ್ಗಿಗಳು ಇತ್ಯಾದಿ.

ಮೇಲಿನ ವಿಷಯವನ್ನು ಕಲಿಯುವದರಲ್ಲಿ ಎರಡು ಭಾಗಗಳಿವೆ.

೧. ಕೃತಿಯನ್ನು ಮಾಡುವ ಹಾಗೂ ಬರೆಯುವ ವಿಧಾನವನ್ನು ಕಲಿಯೋಣ.

೨. ಕಲಿತದ್ದನ್ನು ಗಟ್ಟಿಪಮಾಡಿ ದಿನದ ಲೆಕ್ಕಗಳಿಗೆ ಉಪಯೋಗಿಸುವಂತೆ ಮಾಡೋಣ.

ಮೂಲ ಉದ್ಯೋಗಗಳೊಳಗಿನ ಹಾಗೂ ಇತರ ಚಟುವಟಿಕೆಗಳೊಳಗಿನ ಬೇರೆ ಬೇರೆ ಮೆಟ್ಟುಗಳು ಇದರ ಅಭ್ಯಾಸಕ್ಕೆ ಪ್ರಸಂಗಗಳನ್ನು ತಂದುಕೊಡುತ್ತವೆ. ಉದ್ಯೋಗವಾಗಲಿ ಚಟುವಟಿಕೆಯಾಗಲಿ ಕೇಂದ್ರವಾಗಿರಬೇಕಾದುದರಿಂದ ಅದರ ಬೇರೆ ಬೇರೆ ಮೆಟ್ಟುಗಳಲ್ಲಿ ಮೇಲೆ ಕಾಣಿಸಿದ ಅಂಕಗಣಿತದ ಯಾವ ಭಾಗವನ್ನು ಕಲಿಸಬಹುದು ? ಮೇಲಿನ ಎರಡೂ ಮಾತುಗಳನ್ನು ಹೇಗೆ ರೂಢಿ ಮಾಡಬಹುದು? ಎಂಬುದನ್ನು ಹೆಚ್ಚು ಸ್ಪಷ್ಟವಾಗಿಯೂ ಸೂಕ್ಷ್ಮವಾಗಿಯೂ ನೋಡಬೇಕಾಗಿದೆ. ನಾವು ನಮ್ಮ ಶಾಲೆಯಲ್ಲಿ ಹಿಂಜುವದನ್ನು ನೂಲುವದನ್ನು ಮೂಲ ಉದ್ಯೋಗವನ್ನಾಗಿ ಇಟ್ಟುಕೊಂಡಿದ್ದೇವೆ. ಆದುದರಿಂದ ಈ ಉದ್ಯೋಗದಲ್ಲಿ ಯಾವ ಬೇರೆ ಬೇರೆ ವಿಧಾನಗಳನ್ನು ಯಾವ ಕ್ರಮದಿಂದ ಹುಡುಗರು ಕಲಿಯಬೇಕಾಗಿದೆ ಎಂಬುದನ್ನು ನೋಡಿ, ಅವುಗಳೊಡನೆ ಅಂಕಗಣಿತದ ಜ್ಞಾನದ ಎಷ್ಟೊಂದು ಭಾಗವನ್ನು ಕಲಿಸಬಹುದೆಂಬುದನ್ನು ನೋಡೋಣ.

ಮಕ್ಕಳು ಅವಗತವಮಾಡಿಕೊಳ್ಳಬೇಕಾಗಿರುವ ಉದ್ಯೋಗದ ವಿಧಾನಗಳು ಕೆಳಗೆ ಬರೆದಂತೆ ಇವೆ.

೧. **ನೂಲುವದಕ್ಕಿಂತ ಪೂರ್ವದಲ್ಲಿಯು ಚಟುವಟಿಕೆಗಳು.**

(ಅ) ಹಂಜಿಗಳನ್ನು ಮಾಡುವದು.

(ಬ) ಸಿದ್ಧಮಾಡಿದ ನೂಲನ್ನು ಸುತ್ತುವದು.

೨. **ನೂಲುವ ಚಟುವಟಿಕೆಗಳು.**

ನೂಲುವದು ಹಾಗೂ ನೂತ ನೂಲನ್ನು ಲಪೇಟಿಗೆ ಸುತ್ತುವದು.

೩. **ನೂಲುವ ಮುಂದಿನ ಚಟುವಟಿಕೆಗಳು.**

೧. ದಿನಾಲು ನೂತ ನೂಲಿನ ಲೆಕ್ಕವನ್ನು ಇಡುವದು.

೨. ದಿನಾಲು ಬಳಿಸಿದ ಹಂಜಿಗಳ ಲೆಕ್ಕವನ್ನು ಇಡುವದು.

೩. ಸಿದ್ಧವಾದ ನೂಲಿನ ಲಟಿಗಳನ್ನೂ, ಗುಂಡಿಗಳನ್ನೂ ಮಾಡುವದು.

೪. ಹಿಂಜಿದ ಅರಳಿಯ ಲೆಕ್ಕವನ್ನು ತೂಕದಲ್ಲಿ ಇಡುವದು.

೫. ಹಾಳಾದ ಅರಳಿಯ ಲೆಕ್ಕವನ್ನು ತೂಕದಲ್ಲಿ ಇಡುವದು.

೬. ನೂಲುವದರ ವೇಗದ ಲೆಕ್ಕವನ್ನು ತೆಗೆಯುವದು.

೭. ಕೂಲಿಯ ಲೆಕ್ಕವನ್ನು ಮಾಡುವದು.

ನೂಲಿನ ಲೆಕ್ಕವನ್ನು ಉದ್ದಳತೆಯಲ್ಲಿ ಇಡುವದು ಹೇಗಂದರೆ— ಗುಂಡಿ, ಲಟಿ, ಫೂಟ ಯಾರ್ಡ, ಇತ್ಯಾದಿ. ನೂಲಿನಿಂದ ನೇಯಲಿಕ್ಕೆ ಬರುವ ಅರಿವೆಯ ಪ್ರಮಾಣ.

ಮೇಲೆ ವಿವರಿಸಿದ ಮೆಟ್ಟುಗಳಲ್ಲಿಯೂ ಎಷ್ಟೋ ಹೆಚ್ಚು ಮೆಟ್ಟುಗಳಾಗ ಬಹುದು. ಆದರೆ, ಅವೆಲ್ಲವುಗಳಲ್ಲಿ ಮೇಲಿನವು ಮುಖ್ಯವಾದವುಗಳು. ಇವು ಗಳಲ್ಲಿ ಕೆಲವು ಚಟುವಟಿಕೆಗಳು ಉದ್ಯೋಗದ ಭಾಗವಲ್ಲೆಂದು ಕೆಲವರು ಆಕ್ಷೇಪಿಸ ಬಹುದು. ಪ್ರತ್ಯಕ್ಷ ನೂಲುವ ಇಲ್ಲವೆ ಹಿಂಜುವ ಕೆಲಸವು ಗಣಿತವಾಗಲಾರದು. ಉದ್ಯೋಗಕ್ಕೆ ಬೇಕಾಗುವ ಸಲಕರಣೆಗಳನ್ನು ಸಿದ್ಧಗೊಳಿಸುವದರಲ್ಲಿ ಗಣಿತವು ಸಮಾವೇಶವಾಗಬಹುದು. ಉದ್ಯೋಗವು ಶಾಸ್ತ್ರ ವಿಷಯಗಳ ತತ್ವಗಳ ಮೇಲೆ ರಚಿಸಿದ್ದು, ಶಾಸ್ತ್ರೀಯ ಜ್ಞಾನದ ಫಲವಾಗಿರುತ್ತದೆ. ಆದುದರಿಂದ ನೂಲುವ ಹಾಗೂ ಹಿಂಜುವ ಕೆಲಸಗಳಿಗೆ ಸಂಬಂಧಿಸಿದ ಲೆಕ್ಕವಿಡುವ ಭಾಗವು ಮಾತ್ರ ಅಂಕಗಣಿತವನ್ನು ಕಲಿಸಲಿಕ್ಕೆ ಉಪಯೋಗ ಬೀಳುವದು.

ಮೇಲೆ ಹೇಳಿದ ಪ್ರತಿಯೊಂದು ಮೆಟ್ಟಿನಲ್ಲಿ ಏನೇನು ಕಲಿಸಲಿಕ್ಕೆ ಬರುತ್ತ ದೆಂಬುದನ್ನು ನೋಡೋಣ.

ಹಂಜಿಗಳನ್ನು ಮಾಡುವದು.

ಪಕ್ಕಾ ನೂಲನ್ನು ಸುತ್ತುವದು.

ತಕಲಿಯನ್ನು ತಿರುಗಿಸುವದು (ನೂಲನ್ನು ಲಪೇಟಿಗೆ ಸುತ್ತುವದು).

ಈ ವಿಧಾನಗಳಲ್ಲಿ ಸಂಖ್ಯಾಲೇಖನ ಸಂಖ್ಯಾವಾಚನಗಳನ್ನು ಸುಲಭವಾಗಿ ಕಲಿಸಬಹುದು. ಮಕ್ಕಳಿಗೆ ಹಂಜಿಗಳನ್ನು ಮಾಡುವದನ್ನು ಪ್ರಾರಂಭದಲ್ಲಿಯೇ ಕೊಡಬಹುದು. ಶಿಕ್ಷಕನು ಹಿಂಜಿದ ಅರಳೆಯ ಪ್ರಮಾಣವನ್ನು ತನ್ನ ಕೆಲಸಕ್ಕೆ ಬೇಕಾಗುವಷ್ಟು ಹೆಚ್ಚು ಕಡಿಮೆ ಇಟ್ಟುಕೊಳ್ಳಬಹುದು. ಒಂದೆರಡು ಹಂಜಿಗಳಾಗು ವಷ್ಟು ಮಾತ್ರ ಅರಳೆಯನ್ನು ಮೊದಲು ತೆಗೆದುಕೊಳ್ಳಬಹುದು. ಆರಂಭದಲ್ಲಿ ಮಕ್ಕಳಿಗೆ ಮೂರರವರೆಗೆ ಎಣಿಸಲಿಕ್ಕೆ ಬಹಳ ತೊಂದರೆಯಾಗಲಿಕ್ಕಿಲ್ಲ. ಮಕ್ಕಳಿಗೆ ಹಂಜಿಗಳನ್ನು ಮಾಡಲಿಕ್ಕೆ ಹಚ್ಚಿ ಅವುಗಳಲ್ಲಿ ಒಂದು, ಎರಡು, ಮೂರು ಹೀಗೆ ಎಣಿಸಲಿಕ್ಕೆ ಹಚ್ಚಬೇಕು. ಸಂಖ್ಯಾಲೇಖನದ ಜೊತೆಯಲ್ಲಿಯೇ ಸಂಖ್ಯಾವಾಚನವೂ ಸಾಗಬಹುದು. ಎರಡನೆಯ ಮೆಟ್ಟಿನಲ್ಲಿ ಸಿದ್ಧವಾದ ನೂಲನ್ನು ಲಪೇಟಿಗೆ ಸುತ್ತು ವಾಗ ಮಕ್ಕಳಿಗೆ ಸಂಖ್ಯಾವಾಚನದ ರೂಢಿಯೂ ಅದರೊಡನೆ ಸಂಖ್ಯಾಲೇಖನದ ರೂಢಿಯೂ ಆಗುವದು. ಹೀಗೆ ೯೦ ವರೆಗೆ ಎಣಿಸುವದು ಮತ್ತು ಬರೆಯುವದು. ಇವು ಕೆಲವು ವಾರಗಳವರೆಗೆ ಸಾಗಬಹುದು. ಎರಡು ಅಂಕಿಯ ಸಂಖ್ಯೆಗಳಿಗೆ

ನಾವು ಬಂಡಾಗ ಸುತ್ತುವ ಚಟುವಟಿಕೆಯ ಲಾಭವನ್ನು ಪೂರ್ಣವಾಗಿ ಮಾಡಿ ಕೊಳ್ಳಬಹುದು. ಹತ್ತು ಹತ್ತು ಸುತ್ತು ಗಳ ಒಂದೊಂದು ಸಣ್ಣ ಲಟಿಯನ್ನಾಗಿ ಮಾಡಿ ಹತ್ತೂ ಒಂದು ಹನ್ನೊಂದು, ಹನ್ನೊಂದು ಒಂದೂ ಹನ್ನೆರಡು, ಅಥವಾ ಹತ್ತೂ ಒಂದೂ ಹನ್ನೊಂದು, ಹತ್ತೂ ಎರಡೂ ಹನ್ನೆರಡು, ಹತ್ತೂ ಮೂರೂ ಹದಿಮೂರು ಈ ಮಾತುಗಳನ್ನು ಕಲಿಸಬಹುದು. ಇದೇ ಪದ್ಧತಿಯನ್ನು ಮೂರು ಅಂಕಿಯ ಸಂಖ್ಯೆಗಳಿಗೂ ಹಚ್ಚಿ ಬೆಳೆಯಿಸಬಹುದು.

ಸಂಖ್ಯಾವಾಚನದಲ್ಲಿ ಸಾಕಷ್ಟು ರೂಢಿಯನ್ನು ಮಾಡಿಸಲಿಕ್ಕೆ ಉದ್ಯೋಗಕ್ಕೆ ಸಂಬಂಧಿಸಿದ ಆಟಗಳನ್ನು ಆಡಿಸಬಹುದು. ನೂಲನ್ನು ಸುತ್ತುತ್ತಿರುವಾಗ ಎಲ್ಲರೂ ಡ್ರಿಲ್ ಮಾಡುತ್ತಿರುವಂತೆ ಸಾಮೂಹಿಕವಾಗಿ ಆ ಕೆಲಸವನ್ನು ಮಾಡುತ್ತ ಬಾಯಿಯಿಂದ ಒಂದೂ ಒಂದೂ ಎರಡು, ಎರಡೂ ಒಂದೂ ಮೂರು, ಮೂರೂ ಒಂದೂ ನಾಲ್ಕು ಅಥವಾ ಹತ್ತೂ ಒಂದೂ ಹನ್ನೊಂದು, ಹತ್ತೂ ಎರಡೂ ಹನ್ನೆರಡು, ಹತ್ತೂ ಮೂರು ಹದಿಮೂರು, ಅಥವಾ ಇಪ್ಪತ್ತೂ ಒಂದೂ ಇಪ್ಪತ್ತೊಂದು, ಇಪ್ಪತ್ತೊಂದೂ ಒಂದೂ ಇಪ್ಪತ್ತೆರಡು ಇತ್ಯಾದಿ ಅನ್ನಬಹುದು. ತಕಲಿಯನ್ನು ತಿರುಗಿಸುವ ಒಂದು ಆಟವನ್ನು ಹೀಗೆ ಆಡಬಹುದು :— ವರ್ಗದೊಳಗಿನ ಒಂದು ಮಗುವು ವರ್ಗದ ಮುಂದೆ ಬಂದು ತನ್ನ ತಕಲಿಗೆ ವೇಗವಾಗಿ ಗತಿಯನ್ನು ಕೊಟ್ಟು, ಒಂದು, ಎರಡು, ಮೂರು, ಹೀಗೆ ಎಣಿಸಹತ್ತುವದು. ಉಳಿದ ಹುಡುಗರು ಅದನ್ನು ಕೇಳಿ ಅದರಲ್ಲಿ ತಪ್ಪುಗಳಿದ್ದರೆ ಹೇಳುವರು. ಬಹಳ ಹಂಜಿ ಗಳ ಒಂದು ಸಂಗ್ರಹವನ್ನು ಮಾಡಿ ಅದರಲ್ಲಿ ಹತ್ತು-ಹತ್ತು, ನೂರುನೂರು ಹಂಜಿಗಳ ಒಂದೊಂದು ಕಟ್ಟುಗಳನ್ನು ಮಕ್ಕಳಿಂದ ಕಟ್ಟಿಸಬಹುದು.

ಸಾಧಾರಣವಾಗಿ ಮನುಷ್ಯನು ಮೂರು ಅಂಕಿಯ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಗಳನ್ನು ಪೆಚಾಟ್ಟಿಗೆ ಉಪಯೋಗಿಸಿಬೇಕಾಗುವದಿಲ್ಲ. ಸಣ್ಣಮಕ್ಕಳಂತೂ ಪ್ರತ್ಯಕ್ಷ ವ್ಯವಹಾರದಲ್ಲಿ ಉಪಯೋಗಿಸಬೇಕಾಗುವದಿಲ್ಲ. ಆದುದರಿಂದ ಶಿಕ್ಷಕನು ಮೂರು ಅಂಕಿಯ ಸಂಖ್ಯೆಗಳ ವರೆಗೆ ಸಂಖ್ಯಾಲೇಖನ ಸಂಖ್ಯಾವಾಚನಗಳನ್ನು ಮಾಡಿಸಿದರೆ ಸಾಕಾಗುವದು.

ದಿನದ ನೂಲಿನ ಅಥವಾ ಹಂಜಿಗಳ ಲೆಕ್ಕವನ್ನು ಇಡುವದು :— ಈ ಚಟು ವಟಿಕೆಯನ್ನು ಬೇರೀಜು ಕಲಿಸಲಿಕ್ಕೆ ಉಪಯೋಗಿಸಿಕೊಳ್ಳಬೇಕು. ನಮಗೆ ವಾಡಿಕೆಯಾಗಿ ಬೇಕಾಗುವ ಹತ್ತು ಹತ್ತು ಇಲ್ಲವೆ ನೂರು ನೂರು ಹಂಜಿಗಳ ಸುತ್ತುಗಳು ಇಲ್ಲವೆ ಕಟ್ಟುಗಳು ಇರುವವು. ಸಣ್ಣ ಸಣ್ಣ ಅಂಕಿಗಳ ಬೇರೀಜು ಕಲಿಸಲಿಕ್ಕೆ ಶಿಕ್ಷಕನು ಹೀಗೆ ಮಾಡಬಹುದು.— ನಾಲ್ಕತ್ತು ಮಿನಿಟಿನ ನೂಲಿನ

ಕಾಸನ್ನು ಏಳೆಂಟು ವಿಭಾಗಗಳಾಗಿ ಮಾಡಿಕೊಂಡು ಮಕ್ಕಳು ೫ ನಿಮಿಟು ಸೂಲುವದು. ಆ ಸೂಲನ್ನು ಸುತ್ತಿಕೊಳ್ಳುವದು. ಮತ್ತು ಅದರ ಅಂಕೆಯನ್ನು ಎರೆದುಕೊಳ್ಳುವದು. ಹೀಗೆ ಪ್ರತಿಯೊಂದು ಅವಧಿಯ ಲೆಕ್ಕವನ್ನು ಇಟ್ಟು ೨ ಮೇಲೆ ಎಲ್ಲ ಅಂಕಿಗಳನ್ನು ಕೂಡಿಸಲಿಕ್ಕೆ ಹೇಳಬೇಕು. ಒಂದು ಮಗುವು ಮೂರು ಅವಧಿಗಳಲ್ಲಿ ಅನುಕ್ರಮವಾಗಿ ನಾಲ್ಕು, ಐದು, ನಾಲ್ಕು ಹೀಗೆ ಸುತ್ತುಗಳನ್ನು ಸುತ್ತಿದರೆ ಅದರ ಬೇರೀಜನ್ನು ಮಾಡಲಿಕ್ಕೆ ಹೇಳಬೇಕು. ನಾಲ್ಕಕ್ಕೆ ಐದನ್ನು ಕೂಡಿಸುವಲ್ಲಿ ತೊಂದರೆಯುಂಟಾಗುವದಿಲ್ಲ. ಬಂದಂಥ ಒಂಬತ್ತರಲ್ಲಿ ಮತ್ತು ನಾಲ್ಕನ್ನು ಕೂಡಿಸುವಾಗ ಕೈಲೆ ಬರುವ ಅಂಕೆಯ ಕಲ್ಪನೆಯು ತಾನಾಗಿಯೇ ಬರುವದು. ಇಂತಹ ಎರಡು ಮೂರು ಸಂದರ್ಭಗಳಿಂದ ಕೈಲೆ ತೆಗೆದುಕೊಳ್ಳುವ ಕಲ್ಪನೆಯು ಮಕ್ಕಳಿಗೆ ಸಹಜವಾಗಿ ಬರುವದು. ಇದರಂತೆಯೆ ಬೇರೀಜಿನ ವಿಶೇಷ ರೂಢಿಯನ್ನು ಮಾಡಿಸಬಹುದು.

ಸಧ್ಯಕ್ಕೆ ಮೂಲ ಶಿಕ್ಷಣ ಶಾಲೆಗಳಲ್ಲಿ ಇಂತಹ ರೂಢಿಗಾಗಿ ಕಾಲ್ಪನಿಕ ಲೆಕ್ಕಗಳನ್ನು ಹೇಳುವ ಪರಿಪಾಠವಿದೆ. ಇವು ಶಿಕ್ಷಣ ಶಾಸ್ತ್ರಕ್ಕೆ ವಿರುದ್ಧವಾದವು, ಸಮಗೆ ಹಾಗೆ ಮಾಡಬೇಕಾಗುವದಿಲ್ಲ. ಪ್ರತಿಯೊಂದು ನಾಲ್ವತ್ತು ನಿಮಿಟಿನ ಅವಧಿಯಲ್ಲಿ ಎರಡು ಮೂರು ಬೇರೆ ವಿಭಾಗಗಳನ್ನು ಮಾಡಿ ಅವುಗಳಲ್ಲಿ ಬಂದ ಅಂಕಿಗಳನ್ನೇ ಲೆಕ್ಕವಾಗಿ ಹೇಳುತ್ತೇವೆ. ಎರಡು ಅಂಕೆಯ ಸಂಖ್ಯೆಗಳ ಬೇರೀಜಿಗೆ ಮಕ್ಕಳು ಬಂದಾಗ ತಾಸಿನಲ್ಲಿ ಎರಡೇ ಭಾಗಗಳನ್ನು ಮಾಡಿಕೊಳ್ಳಬಹುದು. ಅಥವಾ ದಿನದಲ್ಲಿ ನೂತ ಒಟ್ಟು ನೂಲಿನ ಲೆಕ್ಕ ಮಾಡಬಹುದು. ಈ ಯೋಜನೆಯಂತೆ ಒಂದು ವೇಳೆ ಸಾಕಷ್ಟು ರೂಢಿಯು ಮಕ್ಕಳಿಗೆ ದೊರೆಯದೆ ಹೋಗಬಹುದು. ಬೇರೀಜಿನ ರೂಢಿಯು ಪ್ರತಿದಿನ ಒಂದೆರಡು ಲೆಕ್ಕಗಳಂತೆ ಇಡಿಯ ವರುಷವೂ ನಡೆಯಬಹುದು. ಯಾವಾಗಾದರೊಮ್ಮೆ ಇಂತಹ ಲೆಕ್ಕಗಳನ್ನು ವಿಶೇಷವಾಗಿ ಹೇಳಿ ಹೆಚ್ಚು ರೂಢಿ ಮಾಡಿಸಬಹುದು.

ಹಂಜಿಗಳ ಪ್ರತಿನಿತ್ಯದ ಲೆಕ್ಕಗಳನ್ನು ಇಡುವದು:— ಈ ಜಟುವಟಿಕೆಯಿಂದ ಬೇರೀಜು ವಜಾಬಾಕಿಗಳ ರೂಢಿಯು ಸಾಕಷ್ಟು ಆಗುವದು. ಒಂದು ದಿನ ಒಬ್ಬ ಹುಡುಗನಿಗೆ ಐದು ಹಂಜಿಗಳನ್ನು ಕೊಟ್ಟೆವೆಂದು ತಿಳಿಯೋಣ. ಅವನು ಅವುಗಳಲ್ಲಿ ಎರಡು ನೂತು ಮೂರೂ ಉಳಿಸಿದನು. ಅದರ ಲೆಕ್ಕವನ್ನು ಕೆಳಗಿನಂತೆ ಹುಡುಗನು ಬರೆಕೊಳ್ಳಬಹುದು.

ಕೊಟ್ಟ ಹಂಜಿಗಳು	೫
ನೂತ ಹಂಜಿಗಳು	೨
ಉಳಿದ ಹಂಜಿಗಳು	೩

ಕೆಳಗೆ ತೋರಿಸಿದ ನಮೂನೆಯಲ್ಲಿ ಲೆಕ್ಕವನ್ನು ಇಡುವದು ಹೆಚ್ಚು ಉಪಯುಕ್ತವಾಗುವದು.

ಕೊಟ್ಟ ಹಂಜಿಗಳು	೫	೭	೬	
ನೂತ ಹಂಜಿಗಳು	೩	೪	೫	
ಉಳಿದ ಹಂಜಿಗಳು	೨	೩	೧	
ತಾರೀಖು	೧	೨	೩	೪ ಇದರಂತೆ—

ಈ ತರದ ಲೆಕ್ಕಗಳನ್ನು ಒಂದು ವಾರದ ವರೆಗೂ ಕೊಡಬಹುದು. ಆಮೇಲೆ ಕೆಳಗೆ ಕೊಟ್ಟಂತೆ ಲೆಕ್ಕವನ್ನು ಬರೆಯಿಸಬೇಕು.

ಹಿಂದಿನ ವಾರದಲ್ಲಿಯು

ಉಳಿದ ಹಂಜಿಗಳು	೦	೨	೪	೭

ಈ ವಾರದಲ್ಲಿ ಹೊಸದಾಗಿ

ಕೊಟ್ಟ ಹಂಜಿಗಳು	೭	೮	೮	೬	
ಒಟ್ಟು ಹಂಜಿಗಳು	೭	೧೦	೧೨	೧೩	
ನೂತ ಹಂಜಿಗಳು	೫	೬	೫	೬	ಇದರಂತೆ—
ಉಳಿದ ಹಂಜಿಗಳು	೨	೪	೭	೭	
ತಾರೀಖು	೧	೨	೩	೪	

ಈ ತರದಿಂದ ಲೆಕ್ಕಗಳನ್ನು ಇಡುವದನ್ನು ನಾಲ್ಕಾರು ತಿಂಗಳುಗಳ ವರೆಗೆ ಸಾಗಿಸಬೇಕು. ಇದರಲ್ಲಿ ಕೈಲೆ ಬರುವ ಒಂಟಿ ಅಂಕಿಗಳ ವಜಾಬಾಕಿಯು ಸೇರಿದೆ. ಎರಡು ಅಂಕೆಯ ಸಂಖ್ಯೆಗಳ ವಜಾಬಾಕಿಗಾಗಿ ನೂಲಿನ ಸುತ್ತುಗಳ ಲೆಕ್ಕವನ್ನು ಇಡಬೇಕು. ಎಂದರೆ ಸುತ್ತುಗಳ ಸಂಖ್ಯೆಯು ೧ ಲಟಿಗೆ ಅಥವಾ ೧ ಗುಂಡಿಗೆ ಎಷ್ಟು ಕಡಿವೆ ಬೀಳುವದು? ಎಂಬುದನ್ನು ತೆಗೆಯುವದರಲ್ಲಿ ವಜಾಬಾಕಿಯು ರೂಢಿಯಾಗುವದು.

(ಮುಂದೆ ಸಾಗುವದು.)

ಪ್ರಾಥಮಿಕ ಶಿಕ್ಷಣ

ಸಂಪಾದಕರು :
ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ.ಏ.,

ಸಂಪುಟ ೭೯	ಜೂನ ೧೯೪೦	ವರ್ಷ ೧೨. ಸಂ. ೩

ಸಂಪಾದಕೀಯ ಬಿಡಿನುಡಿಗಳು.

೧. **ಶಿಕ್ಷಣಕಾರ್ಯದಲ್ಲಿ ರೇಡಿಯೋಗಳ ಉಪಯುಕ್ತತೆ:—** ಇದೇ ವರುಷದ ಫೆಬ್ರುವರಿ ತಿಂಗಳ ಇಂಡಿಯನ್ ಸೊಸಿಯಲ್ ರಿಫೊರ್ಮರ ಪತ್ರಿಕೆಯಲ್ಲಿ ಶಾಲೆಗಳಲ್ಲಿ ಉಪಯೋಗಿಸತಕ್ಕ ರೇಡಿಯೊಗಳ ವಿಷಯಕ್ಕೆ ಕೆಳಗೆ ಕೊಟ್ಟಂತೆ ಬರೆಯಲ್ಪಟ್ಟಿದೆ: —"ರೇಡಿಯೊಗಳಿಗೆ ಶಿಕ್ಷಣ ಕಾರ್ಯದಲ್ಲಿ ಇತ್ತಿತ್ತ ಹೆಚ್ಚಿನ ಮಹತ್ವವನ್ನು ಕೊಡುವುದು ಎಲ್ಲಾ ಕಡೆಯಲ್ಲಿಯೂ ಕಂಡು ಬರುತ್ತದೆ. ತಲೆಯಲ್ಲಿ ಬರೇ ಜ್ಞಾನವನ್ನಷ್ಟೇ ತುಂಬುವದು ಶಿಕ್ಷಣದ ಉದ್ದೇಶವಾದರೆ ಶಿಕ್ಷಣ ಸಾಧನಗಳಲ್ಲಿ ರೇಡಿಯೊ ಒಂದೆಂದು ಒಪ್ಪಿಕೊಳ್ಳಬಹುದು. ಆದರೆ ಈ ನಿರ್ಜೀವ ಸಾಧನಕ್ಕೆ ಸಜೀವ ಶಿಕ್ಷಕನಂತೆ ತನ್ನ ಹೇಳಿಕೆಯನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ. ಇದಲ್ಲದೆ ಜ್ಞಾನ ಕೊಡುವದರಲ್ಲಿಯೂ ಸಹ ಇದು ಅಪೂರ್ಣವಾದದ್ದೆಂದು ಹೇಳಬಹುದು. ಯಾಕೆಂದರೆ ಸಂದರ್ಭಾನುಸಾರವಾಗಿ ಬದಲಾಯಿಸಿ ಹೇಳಲು ಅಗತ್ಯವಿಲ್ಲದ ಜ್ಞಾನ ವಿಷಯವನ್ನಷ್ಟೇ ಇದರ ಮೂಲಕ ತಿಳಿಸಬಹುದು. ಇಂತಹ ಕೆಲಸವನ್ನು ಗ್ರಾಮೊಫೋನಿನ ಮೂಲಕ ಸಹ ಅಷ್ಟೇ ಪರಿಣಾಮಕರವಾಗಿ ಮಾಡಬಹುದು. ಬೇರೆ ಬೇರೆ ಸ್ಥಳಗಳಲ್ಲಿರುವ ವಿವಿಧ ಸಂಸ್ಕೃತಿಯ ಬಾಲಕರಿಗೆಲ್ಲಾ ಒಮ್ಮೆಲೆ ತಿಳಿಯುವಂತೆ ಕೊಡತಕ್ಕ ಜ್ಞಾನವು ತೀರ ಸುಲಭವಾದದ್ದಿರಬೇಕಾದುದರಿಂದ ಎಲ್ಲ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಲಾರದು. ಇದಲ್ಲದೆ ಒಬ್ಬ ವಿದ್ಯಾರ್ಥಿಗೆ ಒಮ್ಮೆ ಅದು ತಿಳಿಯದೆ ಅಥವಾ ಸರಿಯಾಗಿ ಕೇಳಿಸದೆ ಇದ್ದಲ್ಲಿ ಅದನ್ನು ನಿಲ್ಲಿಸಿ ತಿರುಗಿ ಹೇಳಿಸಿಕೊಳ್ಳಲಿಕ್ಕೆ ಅಥವಾ ಸ್ಪಷ್ಟೀಕರಿಸಿಕೊಳ್ಳಲಿಕ್ಕೆ ಆಗುವಂತಿಲ್ಲ. ಆದುದರಿಂದ ಶಿಕ್ಷಕನಲ್ಲಿ ಕಂಡು ಬರುವಂತೆ ಇದರಲ್ಲಿ ವ್ಯಾಕ್ತಿಕ

ಮತ್ತು ವೈಯಕ್ತಿಕ ಗುಣಗಳು ಕಂಡುಬರುವಹಾಗಿಲ್ಲ. ಶಾಲೆಯಲ್ಲಿ ಕಲಿಸುವ ಶಿಕ್ಷಕನಲ್ಲಿ ಕಂಡು ಬರತಕ್ಕ ಇಂತಹ ಗುಣ ವೈಶಿಷ್ಟ್ಯವೇ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿ ರಂಜಿಸುವದು. ರೇಡಿಯೊವಿನಿಂದ ಹೊರಡುವ ಒಂದೇ ತರದ ದನಿಯನ್ನು ಕೇಳಿ ಕೇಳಿ ವಿದ್ಯಾರ್ಥಿಯು ಬೇಸತ್ತು ನಿದ್ರಾಸಕ್ತನಾಗುವನಲ್ಲದೆ ಅದರ ಕಡೆಗೆ ತನ್ನ ಪೂರ್ಣ ಲಕ್ಷ್ಯವನ್ನು ಕೊನೆಯವರೆಗೆ ಕೊಡಲಾರನು. ರೇಡಿಯೊ ಸಂಬಂಧವಾಗಿ ಹೆಚ್ಚಿನ ಉತ್ಸಾಹ ಮತ್ತು ಪ್ರೀತಿಯುಳ್ಳವರು ಸಹ ಕೆಲವು ದಿವಸಗಳಲ್ಲಿ ತಪ್ಪು ಉತ್ಸಾಹವನ್ನು ಕಳೆದುಕೊಂಡು ಬೇಸತ್ತು ರೇಡಿಯೊವನ್ನು ತೆರೆಯದೆ ಅದಕ್ಕೆ ಅನೇಕ ದಿವಸಗಳ ಮೌನದೀಕ್ಷೆಯನ್ನು ಕೊಟ್ಟ ಉದಾಹರಣೆಗಳು ಎಲ್ಲೆಲ್ಲಿಯೂ ಕಂಡು ಬರುತ್ತವೆ. ಶಿಕ್ಷಣ ಕಾರ್ಯದಲ್ಲಿ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಶಿಕ್ಷಕನೇ ಮಾರ್ಗದರ್ಶಕನಲ್ಲದೆ ಬರೇ ಅವನ ಧ್ವನಿ ಮಾತ್ರವಲ್ಲ."

× × ×

೨. ಡಾ. ಎರುಂಡೇಲರು "ರಾಷ್ಟ್ರೀಯ ಶಿಕ್ಷಣ" ಎಂಬ ವಿಷಯವನ್ನು ಕುರಿತು ಕೊಟ್ಟ ವ್ಯಾಖ್ಯಾನದಲ್ಲಿ ಶಿಕ್ಷಣದ ವಿಷಯವಾಗಿ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು :— "ಶಿಕ್ಷಣದ ಮೊದಲನೇ ಉದ್ದೇಶವು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸ್ವಾವಲಂಬಿ ಮತ್ತು ವೈಯಕ್ತಿಕನನ್ನಾಗಿ ಮಾಡುವದು. ಎರಡನೇ ಉದ್ದೇಶವೆಂದರೆ ಈ ರೀತಿಯಿಂದ ಬೆಳೆದ ಆತ್ಮೀಯ ಭಾವವನ್ನು ಸಾರ್ವತ್ರಿಕ ಭಾವಕ್ಕೆ ಸರಿಪಡಿಸಿ ಕೂಡಿಸುವದು. ಜಗತ್ತೆಂಬುದೊಂದು ಶಾಲೆ, ರಾಷ್ಟ್ರವೆಂಬುದೊಂದು ವರ್ಗ, ಮತ್ತು ಅದರಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ದೇವರ ಯಾತ್ರಿಕರು. ಶಿಕ್ಷಣದ ಧ್ಯೇಯವು ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ನಿಜವಾದ ಆತ್ಮೀಯ ತೇಜವನ್ನೂ, ಜೀವನದ ನಿಜವಾದ ಸುಖಾನಂದವನ್ನು ಕಂಡುಹಿಡಿಯುವದು".

× × ×

೩. **ಚಿಕ್ಕ ಬಾಲಕರ ಶಾರೀರಿಕ ಶಿಕ್ಷಣ :—** ಶಿಕ್ಷಣ ಮತ್ತು ಮಾನಸಿಕ ಶಾಸ್ತ್ರದ ಅಭ್ಯಾಸ, ಅನುಭವಗಳಿಂದ ಹಿರಿಯರೆನಿಸಿಕೊಳ್ಳುವವರು ಚಿಕ್ಕ ಬಾಲಕರು ಐದು ವರುಷ ಪ್ರಾಯದವರಾಗುವದರ ಪೂರ್ವದಲ್ಲಿ ಸರಿಯಾಗಿ ಹೇಗೆ ನಿಲ್ಲಬೇಕು, ಕುಳಿತುಕೊಳ್ಳಬೇಕು ಮತ್ತು ನಡೆಯಬೇಕೆಂಬದನ್ನು ಕಲಿಸುವದೇ ಅವರಿಗೆ ಕೊಡತಕ್ಕ ಉಪಯುಕ್ತವಾದ ಶಾರೀರಿಕ ಶಿಕ್ಷಣವೆಂದು ಒಪ್ಪಿಕೊಂಡಿರುವರು. ಈ ರೀತಿಯ ಶಿಕ್ಷಣವನ್ನು ಶೈಶವದಲ್ಲಿಯೇ ಕೊಟ್ಟಲ್ಲಿ, ಎಲ್ಲಾ ಶಾಲೆಗಳಲ್ಲಿ ಕಂಡು ಬರುವ 'ಗೂನ ಬೆನ್ನು', 'ಸೊಟ್ಟ ನಡೆ', 'ಬೊಗ್ಗಿಕೊಂಡು ಬರೆಯುವದು' ಇವೇ ಮೊದಲಾದ ಎಲ್ಲ ದೋಷಗಳು ಅದೃಶ್ಯವಾಗಬಹುದೆಂದು ಅನುಭವಿಕರ

ಅಭಿಪ್ರಾಯವದೆ. ಇಂತಹ ಶಿಕ್ಷಣವು ಬಾಲಕರ ಮುಂದಿನ ಶಾರೀರಿಕ ಬೆಳವಣಿಗೆಗೆ ಹೆಚ್ಚಿನ ನೆರವನ್ನೀಯುವದರಿಂದ ಅದರ ಕ್ರಮವನ್ನು ಈ ಕೆಳಗೆ ಕೊಡಲ್ಪಟ್ಟಿದೆ. " ನೆಟ್ಟಗೆ ತಲೆ ಎತ್ತಿ ಸರಿಯಾಗಿ ನಿಲ್ಲುವದರಲ್ಲಿ ಚಿಕ್ಕ ಬಾಲಕನು ಪ್ರೀತಿ ಮತ್ತು ಹೆಮ್ಮೆ ಪಡುವಂತೆ ಮೊದಲಿನಿಂದಲೂ ಮಾಡಿರಿ. ತರುವಾಯ ತನ್ನ ಭುಜಗಳನ್ನು ಹಿಂಬದಿಗೆ ಹೊರಳಿಸು ಎಂತ ಹೇಳುವ ಬದಲಾಗಿ, ಅವನ ಬೆನ್ನೆಲುವಿನ ವಿಷಯದ ತಿಳುವಳಿಕೆಯನ್ನು ಮಾಡಿಕೊಡಿರಿ. ನೀವು ನಿಲ್ಲುವಾಗ ಇರುವಂತೆ ಆ ಬಾಲಕನ ಬೆನ್ನೆಲುವಾದರೂ ತಕ್ಕ ಮಟ್ಟಿಗೆ ಒಂದೇ ಸರಳ ರೇಖೆಯಾಗುವಂತೆ ನಿಲ್ಲಲಿಕ್ಕೆ ಕಲಿಸಿರಿ. ಬೆನ್ನೆಲುವು ಬಿಲ್ಲಿನಂತೆ ಬಾಗುವಂತೆ ನಿಲ್ಲಲಿಕ್ಕೆ ಎಂದೂ ಬಿಡಬೇಡಿರಿ. ಕಾಲಡಿಗಳನ್ನು ಸಪಾಟ ಗೋಡೆಯಿಂದ ಆರು ಇಂಚು ಮುಂದೆ ಇಟ್ಟು ಬೆನ್ನೆಲುವಿನ ಮಧ್ಯಭಾಗವು ಆ ಗೋಡೆಗೆ ಸರಿಯಾಗಿ ತಾಗುವಂತೆ ನೀಟವಾಗಿ ನಿಲ್ಲುವದನ್ನು ಕಲಿಸಿರಿ. ಮೊದಲನೇ ಸಾರೆ ಹೀಗೆ ಮಾಡಿದಾಗ ಆ ಬಾಲಕನ ಭುಜಗಳು ಸ್ವಲ್ಪ ಮುಂದಕ್ಕೆ ಬಾಗಬಹುದು. ಆದರೆ ಹೀಗೆ ಗೋಡೆಗೆ ತಾಗಿ ನಿಲ್ಲುವ ಅಭ್ಯಾಸ ಮಾಡಲು, ಅವನ ಭುಜಗಳು ಕ್ರಮೇಣ ಗೋಡೆಗೆ ಸರಿಯಾಗಿ ತಗಲುವವು, ಮತ್ತು ಬೆನ್ನೆಲುವಿನ ಮಧ್ಯ ಭಾಗವು ತಕ್ಕಮಟ್ಟಿಗೆ ತಗಲುವುದು. ಬೆನ್ನೆಲುವಿನ ತುದಿಯನ್ನು ಸ್ವಲ್ಪ ಮೇಲಕ್ಕೆ ಸರಿಸಿ ಗೋಡೆಯಿಂದ ಒಂದಿಷ್ಟು ಮುಂದಿಡಬೇಕು. ಹೀಗೆ ಗೋಡೆಗೆ ತಾಗಿ ನೀಟವಾಗಿ ನಿಂತಾಗ ಕಿಬ್ಬೊಟ್ಟೆಯನ್ನು ಸ್ವಲ್ಪ ಒಳಗೆ ಎಳಕೊಂಡು ಎದೆಯನ್ನು ಮುಂದಕ್ಕೆ ಉಬ್ಬಿಸಲು ಕಲಿಸಿರಿ. ಹೀಗೆ ಮಾಡುವದರಿಂದ ಬೆನ್ನೆಲುವಿನ ಗೂನಾಕಾರದ ಭಯವು ದೂರವಾಗುವದು. ಒಮ್ಮೆ ಈ ಪ್ರಕಾರ ಸರಳ ರೇಖಾಕೃತಿಯಿಂದ ನಿಲ್ಲಲು ಕಲಿತನೆಂದರೆ ಮುಂದೆ ಆ ಬಾಲಕನ ತಲೆಯ ಮೇಲೆ ಒಂದು ಪುಸ್ತಕವನ್ನಿಟ್ಟು ಅದು ಕೆಳಗೆ ಬೀಳದಂತೆ ಅವನನ್ನು ಕೋಣೆಯೊಳಗೆ ಅತ್ತಿತ್ತ ನಡೆಯುವಂತೆ ಮಾಡಿರಿ. ಇವು ಬಾಲಕರಿಗೆ ಕೊಡತಕ್ಕ ಸುಲಭವಾದ ಶಾರೀರಿಕ ಶಿಕ್ಷಣದ ಪ್ರಯೋಗಗಳು. ಆದರೂ ಇವು ಅತಿ ಉಪಯುಕ್ತವಾದವುಗಳಾಗಿದ್ದು ಬಾಲಕರು ಇವನ್ನು ವಿನೋದದ ಆಟಗಳೆಂದು ಎಣಿಸುವರು. "

ಧಾರವಾಡದ ನಗರಸಭೆಯ ಶಾಲೆಗಳ ಇನಾಮಿನ ಸಮಾರಂಭವು

ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ನಮ್ಮ ದಕ್ಷಿಣ ಭಾಗದ
ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ

ಶ್ರೀ. ಸೀತಾರಾಮರಾವ್ ತಾವಡೆ ಎಮ್. ಏ.

ಅವರ ಇಂಗ್ಲಿಷು ಭಾಷಣದ ಅನುವಾದವು

ನನ್ನ ಚಿಕ್ಕ ಗೆಳೆಯರೇ, ಮಾನ್ಯರಾದ ಬಂಧುಭಗಿನಿಯರೇ

ಈ ನನ್ನ ಚಿಕ್ಕ ಗೆಳೆಯರ ಗುಂಪಿನ ಮಧ್ಯದಲ್ಲಿ ನಿಂತು ಮಾತಾಡಲು ನನಗೆ ಅತ್ಯಂತ ಆನಂದವಾಗುವದು. ನಾನು ಇವರ ಆಟನೋಟಗಳನ್ನು ನೋಡಿದೆನು ಇವರ ಮಾತು ಕಥೆಗಳನ್ನು ಕೇಳಿದೆನು. ಇವರ ಹಲವು ಚಟುವಟಿಕೆಗಳನ್ನು ಕಂಡು ನನಗೆ ಅತ್ಯಂತ ಆನಂದವಾಗಿರುವದು. ಇವರಿಗೆ ತಮ್ಮ ತಾಯಿ ತಂದೆಗಳ ಮತ್ತು ಧಾರವಾಡ ನಗರದ ಬಗ್ಗೆ ಅಭಿಮಾನವೆನಿಸುವದು. ನಮ್ಮ ಮುಂದಿನ ಆಶೆ ಆಕಾಂಕ್ಷೆಗಳೆಲ್ಲ ಇವರಲ್ಲಿ ಅಡಕವಾಗಿರುವವು. ಮುಂದೆ ತುಸು ದಿನಗಳಲ್ಲಿಯೇ ಇವರು ಬೆಳೆದು ದೊಡ್ಡವರಾಗುವರು. ಇವರಲ್ಲಿಯೇ ಮುಂದಿನ ನಗರಸಭೆಯ ಸಭಾಸದರೂ ಅದರ ಅಧ್ಯಕ್ಷರೂ ಕಾರ್ಯಕರ್ತರೂ ಇರುವರೆಂಬದಂತೂ ನಿಸ್ಸಂಶಯವಾದ ಮಾತು. ಇವರಲ್ಲೊಬ್ಬನು ನನ್ನ ಸ್ಥಾನಕ್ಕೆ ಬಂದು ಎಜ್ಯುಕೇಶನಲ್ ಇನ್‌ಸ್ಪೆಕ್ಟರನಾಗಲಾರನೆಂದು ಯಾರು ಹೇಳಬಹುದು? ಹಿರಿಯರಾದ ನಾವು ಇಂದಿಲ್ಲದಿದ್ದರೆ ನಾಳೆಯಾದರೂ ಹಿಂದುಳಿಯಲೇಬೇಕಾಗುವದು; ಮತ್ತು ಈ ತರುಣ ಪೀಳಿಗೆಗೆ ನಮ್ಮ ಸ್ಥಾನವನ್ನು ಬಿಟ್ಟುಕೊಟ್ಟ ಹೊರತು ಗತ್ಯಂತರವುಳಿಯದು; ಇಲ್ಲಿ ಈಗ ನಮ್ಮ ಮುಂದೆ ಕುಳಿತು ಈ ಭಾಷಣವನ್ನು ಕೇಳುತ್ತಿರುವ ಈ ಚಿಕ್ಕ ಬಾಲಕರಲ್ಲಿಯೇ ಹಲವರು ನಮ್ಮ ಸ್ಥಾನಕ್ಕೆ ಬರತಕ್ಕವರಿರುವರು. ಎಂದ ಮೇಲೆ ಈಗ ನಾವು ಮಾಡುತ್ತಿರುವ ಕಾರ್ಯವನ್ನು ನಮಗಿಂತಲೂ ಹೆಚ್ಚು ಚೆನ್ನಾಗಿ ಮಾಡಲಿಕ್ಕೆ ತಕ್ಕದ್ದಾದ ಶಿಕ್ಷಣವನ್ನು ನಾವು ಇವರಿಗೆ ಕೊಡಬೇಕೆಂಬ ಮಾತು ತಾನಾಗಿ ಸಿದ್ಧವಾಗುವದಲ್ಲವೇ? ನಾವು ಅನುಭವದಿಂದ ನಮ್ಮ ಹಿಂದಿನ ಕೊರತೆಗಳನ್ನೆಲ್ಲ ಕಂಡುಕೊಂಡಿದ್ದೇವೆ. ಅಂಥ ಕೊರತೆಗಳು ನಮ್ಮ ಮುಂದಿನ ಪೀಳಿಗೆಗೆ ಉಂಟಾದಂತೆ ನಾವು ನೋಡಿಕೊಳ್ಳಬೇಕಾಗಿದೆ.

ನಮ್ಮಲ್ಲಿರುವ ಕುಂದುಕೊರತೆಗಳನ್ನು ಈ ಅಪರ ವಯಸ್ಸಿನಲ್ಲಿ ನಾವು ಸರಿ ಪಡಿಸಿಕೊಳ್ಳಲು ಶಕ್ಯವಿಲ್ಲ. ನಮ್ಮ ಸ್ವಾರ್ಥ, ನಮ್ಮ ತಪ್ಪುತಿಳಿವಳಿಕೆ, ನಮ್ಮಲ್ಲಿ ಪರಸ್ಪರ ಸಹನೆಯಿಲ್ಲದಿರುವಿಕೆ, ಇವು ನಮ್ಮ ಸರಳ ಜೀವನವನ್ನು ಕೆಡಿಸಿ ದೇಶ ವನ್ನು ಒಡೆದು ಚೂರುಚೂರು ಮಾಡಿವೆ. ಆದ್ದರಿಂದ ಈ ದುರ್ಗುಣಗಳು ನಮ್ಮ ಬಾಲಕರಲ್ಲಿ ಬರದಂತೆ ನಾವು ನೋಡಿಕೊಳ್ಳಬೇಕು. ಓದು ಬರೆಹ ಗಣಿತ ಇತಿ ಹಾಸ ಭೂಗೋಲ ಮುಂತಾದ ಯಾಂತ್ರಿಕ ವಿಷಯಗಳನ್ನು ಕಲಿಸುವದಷ್ಟೇ ನಮ್ಮ ಸಾಲೆಗಳ ಧ್ಯೇಯವಲ್ಲ. ಈ ಸಾಲೆಗಳೊಳಗಿನ ಬಾಲಕರನ್ನು ಭಾವೀ ರಾಷ್ಟ್ರದ ಉತ್ತಮ ಪ್ರಜೆಗಳಾಗುವಂತೆ ನೋಡಿಕೊಳ್ಳುವದೇ ನಮ್ಮೆಲ್ಲರ ಗುರಿ ಯಾಗಿರಬೇಕು. ಮೇಲೆ ಹೇಳಿದ ಓದು ಬರೆಹ ಮೊದಲಾದವುಗಳನ್ನು ನಾವು ಕಲಿಸಲೇಬೇಕಾಗಿದ್ದರೂ ಅವೇ ನಮ್ಮ ಕೊನೆಯ ಗುರಿಯಲ್ಲ. ನಮ್ಮ ಧ್ಯೇಯ ಸಾಧನೆಗೆ ಅವು ಸಾಧನಗಳು ಮಾತ್ರ. **'ಯೋಗ್ಯ ಜೀವನ'** ದ ಸಾಧನೆಗೆ ಇವು ಸಹಾಯಕಗಳು.

ಶಿಕ್ಷಣವು ನಮ್ಮ ಬಾಲಕ ಬಾಲಿಕೆಯರಲ್ಲಿ ಶೀಲವನ್ನುಂಟು ಮಾಡಬೇಕು. ಪಾಠಪುಸ್ತಕದೊಳಗಿನ ಕೆಲವೊಂದು ಭಾಗವನ್ನು ಕಲಿಸಿ ಮುಗಿಸುವದರಿಂದ ತಮ್ಮ ಹೊಣೆಗಾರಿಕೆ ಮುಗಿಯಿತೆಂದು ಶಿಕ್ಷಕರು ಎಂದೂ ಭಾವಿಸಲಾಗದು. ಬಾಲಕರು ಪಾಠಮಾಡಿದ ಸಂಗತಿಗಳು ತುಸು ಕಾಲದಲ್ಲಿಯೇ ಮರೆತು ಹೋಗುವವು. ಹಿಂದೆ ಸಾಲೆ ಕಾಲೇಜಗಳಲ್ಲಿ ಕಲಿತ ಸಂಗತಿಗಳೆಲ್ಲಾ ನಮಗೆ ಈಗ ನೆನಪಿರುವವೇನು? ಇಂದಿನ ದಿನದ ಜೀವನದಲ್ಲಿ ಆ ವಿಷಯಗಳಲ್ಲಿ ಎಷ್ಟು, ಎಷ್ಟು ಮಟ್ಟಿಗೆ ಉಪಯೋಗ ವಾಗುತ್ತಿವೆ? ಸಾಲೆಯಲ್ಲಾದ ಸಂಸ್ಕಾರ, ಅಲ್ಲಿ ಗಳಿಸಿದ ಒಳ್ಳೆಯ ಇಲ್ಲವೆ ಕೆಟ್ಟ ಚಟಗಳು, ನಾವು ಕಲಿತ ವಿಷಯಗಳ ಮೂಲಕ ನಮ್ಮ ಮನಸ್ಸಿನ ಮೇಲಾದ ಸಾಮಾನ್ಯ ಪರಿಣಾಮ, ಇವಿಷ್ಟೇ ಈಗ ನಮ್ಮ ಸಂಗಡ ಉಳಿದಿರುವವು. ಆದ್ದರಿಂದ ನಮ್ಮ ಶಿಕ್ಷಕರು ಕೇವಲ ಸಾಲೆಯ ವಿಷಗಳ ಶಿಕ್ಷಣದಿಂದಲೇ ತೃಪ್ತರಾಗದೆ ತಮ್ಮ ಬಾಲಕರಲ್ಲಿ ಒಳ್ಳೆಯ ಚಟಗಳನ್ನು ಹುಟ್ಟಿಸಿ ಸದ್ವರ್ತನೆಯ ಕಡೆಗೆ ಅವರ ಮನಸ್ಸನ್ನು ತಿರುಗಿಸುವದರ ಕಡೆಗೇ ಲಕ್ಷವಿಟ್ಟು ಕೆಲಸಮಾಡುತ್ತಿರಬೇಕು. ಪ್ರತಿಯೊಂದು ಪಾಠ ಸಾಗಿಸುವಾಗಲೂ ಈ ಬಾಲಕರು ಇದೇ ಸ್ಥಿತಿಯಲ್ಲಿಯೇ ಕಡೆತನಕ ಉಳಿ ಯುವದಿಲ್ಲವೆಂಬದನ್ನೂ ಇವರೇ ನಮ್ಮ ಭಾವೀ ರಾಷ್ಟ್ರದ ಜೀವಾಳವೆಂಬು ದನ್ನೂ ಶಿಕ್ಷಕರು ಮರೆಯಲಾಗದು. ಇವರೇ ನಮ್ಮ ಮುಂದಿನ ಮ್ಯುನಿಸಿಪಾಲಿಟಿ ಲೋಕಲ್‌ಬೊರ್ಡುಗಳ ಸದಸ್ಯರು. ಇವರೇ ಕೌನ್ಸಿಲು ಅಸೆಂಬಲಿಗಳ ಸದಸ್ಯರು. ಇವರೇ ಸರಕಾರದ ಬೇರೆ ಬೇರೆ ಶಾಖೆಗಳ ಮಂತ್ರಿ, ಮುಖ್ಯ ಮಂತ್ರಿಗಳು. ನನ್ನ ಮುಂದಿರುವ ಈ ಚಿಕ್ಕ ಬಾಲಕರಲ್ಲಿ ಎಷ್ಟೋಜನ ಶಿವಾಜಿಗಳಿರುವರು, ಎಷ್ಟೋ

ಜನ ಗಾಂಧಿಗಳಿರುವರು; ಎಷ್ಟೋ ಸರೋಜಿನೀ ದೇವಿಯರಿರುವರು, ಕವಿಗಳಿರುವರು; ಶಾಸ್ತ್ರಜ್ಞರಿರುವರು. ಭವಿಷ್ಯದ ಭಾರತ ರಾಷ್ಟ್ರವನ್ನು ಕಟ್ಟಲು ಹುಟ್ಟಿದವರೆಲ್ಲ ಈಗ ಬಾಲಕರಾಗಿರುವರೆಂದು ಭಾವಿಸುವದರಲ್ಲಿ ತಪ್ಪೇನಿದೆ?

ಶಿಕ್ಷಕ ಬಂಧುಗಳೇ, ನಿಮ್ಮ ಹೊಣೆಗಾರಿಕೆಯು ಚಿಕ್ಕದಲ್ಲ. ಜನತೆಯು ನಿಮ್ಮ ಯೋಗತೆಯನ್ನು ಸರಿಯಾಗಿ ಅರಿತುಕೊಂಡಿರಲಿಕ್ಕಿಲ್ಲ. ಭವಿಷ್ಯದ ಭಾರತ ರಾಷ್ಟ್ರವನ್ನು ನಿರ್ಮಾಣಮಾಡುವಂಥ ಅತ್ಯಂತ ಗೌರವದ ಮತ್ತು ಇನ್ನಿಲ್ಲದಷ್ಟು ಹೊಣೆಗಾರಿಕೆಯ ಕಾರ್ಯವನ್ನು ನೀವು ಕೈಕೊಂಡಿರುವಿರಿ. ನೀವು ಪ್ರಾಥಮಿಕ ಶಾಲೆಗಳ ಶಿಕ್ಷಕರೆಂಬ ಕಾರಣದಿಂದ ನಿಮ್ಮನ್ನು ಹಲವರು ಕಡೆಗಣಿಸಿರಬಹುದು. ಅಂಥವರು ತಪ್ಪುದಾರಿಯನ್ನು ತುಳಿದಿದ್ದಾರೆಂದು ನಾನು ನಿಶ್ಚಯವಾಗಿ ಹೇಳುವೆನು. ನಿಮ್ಮ ಕಾರ್ಯವು ಅತ್ಯಂತ ಗೌರವಾರ್ಹವಾಗಿದ್ದು ಭಾರತರಾಷ್ಟ್ರ ಮಂದಿರದ ಅಸ್ತಿವಾರವನ್ನು ಹಾಕುವ ಕೆಲಸದಲ್ಲಿ ತೊಡಗಿದ್ದೀರಿ. ನಿಮ್ಮ ಕಾರ್ಯದ ಗೌರವವನ್ನೂ ಮಹತ್ವವನ್ನೂ ತೀರ ಸ್ವಲ್ಪ ಜನರು ಮಾತ್ರ ಸರಿಯಾಗಿ ತಿಳಿದುಕೊಂಡಿರುವರು. ಆದರೂ ನೀವು ಮಾತ್ರ ಮನಸೊಂದುಕೊಳ್ಳದೆ ನಿಮ್ಮ ಕಾರ್ಯದ ಗೌರವವನ್ನು ಸ್ಮರಿಸಿಕೊಂಡು ಭಕ್ತಿ ವಿಶ್ವಾಸಗಳಿಂದ ಕೆಲಸಮಾಡಿರಿ. ಭಾವೀ ಜನಾಂಗವು ನಿಮ್ಮ ಕೈಯಲ್ಲಿದೆ. ನೀವು ನಿಮ್ಮ ಕರ್ತವ್ಯದಲ್ಲಿ ನಿಷ್ಠೆಯುಳ್ಳವರಾಗಿ ಹೊಣೆಗಾರಿಕೆಯನ್ನು ಅರಿತುಕೊಂಡು ಕೆಲಸಮಾಡಿದರೆ ಭವಿಷ್ಯದ ಸರಕಾರವನ್ನೇ ನೀವು ನಿರ್ಮಿಸಬಹುದು.

ದುರ್ದೈವದಿಂದ ಶಿಕ್ಷಕ ವರ್ಗವು ಆತ್ಮ ವಿಶ್ವಾಸವನ್ನು ಕಳೆದುಕೊಂಡಿದೆ ಅವರು ಜನತೆಯ ಜೀವಾಳವನ್ನು ಆಕರ್ಷಿಸಿಕೊಳ್ಳಲು ಅಸಮರ್ಥರಾಗಿದ್ದಾರೆ ಪಲಕೆಲವರಂತೂ ತಾವು ಕೂಲಿಗಾಗಿ ಕೆಲಸಮಾಡುವ ಆಳುಗಳೆಂಬ ತಪ್ಪು ತಿಳುವಳಿಕೆಯಲ್ಲಿದ್ದಾರೆ. ಶಿಕ್ಷಕ ವರ್ಗವು ಈ ರೀತಿ ಆತ್ಮ ವಿಶ್ವಾಸವನ್ನು ಕಳೆದುಕೊಂಡಿರುವದರಿಂದಲೇ ಜನತೆಯು ಅವರನ್ನು ಕಡೆಗಣಿಸಲು ಕಾರಣವಾಯಿತು. ಮಾಧ್ಯಮಿಕ ಶಿಕ್ಷಕರದೂ ಇದೇ ಹಾಡು. ಸಾಲೆಗಳು ಸಾಕ್ಷರಿಗಳಾದ ಮನುಷ್ಯ ಮೂರ್ತಿಗಳನ್ನು ನಿರ್ಮಿಸುವ ಕಾರಖಾನೆಗಳಂತಾಗಿವೆ. ತೀರ ಸ್ವಲ್ಪೇ ಸಾಲೆಗಳು ಕೆಲವೊಂದು ನಿಶ್ಚಿತವಾದ ಉಚ್ಚ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡುತ್ತಿವೆ. ಈ ಬಾಲಕರು ದೊಡ್ಡವರಾದ ಬಳಿಕ ಇವರಲ್ಲಿ ಎಷ್ಟು ಜನವು ತಮ್ಮ ಸಾಲೆಯ ಬಗ್ಗೆ ಅಭಿಮಾನವುಳ್ಳವರಾಗುವರು? ಪ್ರಬುದ್ಧರಾದ ನಿಮ್ಮಲ್ಲಿ ಎಷ್ಟು ಜನರು ನೀವು ಹಿಂದೆ ಕಲಿತ ಸಾಲೆಯ ಬಗ್ಗೆ ಆನಂದ ಅಭಿಮಾನಗಳ ಭಾವನೆಯುಳ್ಳವರಾಗಿರುವಿರಿ.

ನಾನು ನಿಮ್ಮನ್ನು ದೂಷಿಸುವೆನೆಂದು ತಿಳಿಯಬೇಡಿರಿ. ಸಾಲೆಯಾದರೂ ನಿಮಗಾಗಿ ಮಾಡಿದ್ದೇನು? ಅದು, ಹಲಕೆಲವು ಪಾಠಪುಸ್ತಕಗಳ ವಿಷಯಗಳನ್ನು

ಿಸುವದಕ್ಕಿಂತಲು ಹೆಚ್ಚಿಗೇನೂ ಮಾಡಿದಂತಿಲ್ಲ. ಶಿಕ್ಷಕರ ವಿಷಯದಲ್ಲಿಯೂ
ವು ಇದಕ್ಕೂ ಹೆಚ್ಚಿಗೆ ಏನೂ ಹೇಳುವಂತಿರಲಿಕ್ಕಿಲ್ಲ. ನನಗೆ ಮರಾಠಿ ನಾಲ್ಕ
ು ಇಯತ್ತ್ಯೆಯನ್ನು ಕಲಿಸಿದ ಒಬ್ಬ ಶಿಕ್ಷಕರ ನೆನಪಿರುವದು. ಅವರು
ಬ್ರೋಂಡರಾದರೂ ಒಳ್ಳೆಯ ಶಿಕ್ಷಕರಾಗಿದ್ದರು. ಅವರು ನಮಗೆ ಒಳ್ಳೆಯ
ತೆಗಳನ್ನು ಕಲಿಸಿದರು. ಒಳ್ಳೆಯ ಕತೆಗಳನ್ನು ಹೇಳಿದರು. ಅವರು ನವೊಳಗಿನ
ವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಭಾರತ-ರಾಮಾಯಣಗಳ
ಗಳನ್ನು ಓದಿ ತೋರಿಸುತ್ತಿದ್ದರು. ಅವರು ಸ್ವತಃ ಕವಿತೆಗಳನ್ನು ರಚಿಸು
ದ್ದರು. ಅವರ ತಿಂಗಳದ ಸಂಬಳ ೯ ರೂ. ಮಾತ್ರ. ಆದರೂ ಅವರು ತಾವೂ
ಖದಿಂದಿದ್ದು ನಮ್ಮನ್ನೂ ಸುಖಪಡಿಸುತ್ತಿದ್ದರು. ನನಗೆ ಇನ್ನೂ ಒಬ್ಬ ಶಿಕ್ಷಕರ
ಕಪಿದೆ. ಅವರು ಮೂರನೆಯ ಇಯತ್ತ್ಯೆಯನ್ನು ಕಲಿಸಿದರು. ಅವರು ನನ್ನ
ಂಬಿದ ಗಲ್ಲವನ್ನೂ ಪಕ್ಕಡಿಯ ಭಾಗವನ್ನೂ ಕೈತುಂಬ ಹಿಡಿದು ಚಿವುಟುತ್ತಿ
ರು. ಆ ನೋವಿನ ನೆನಪಾದರೆ ನನಗೆ ಈಗಲೂ ಭಯವಾಗುವದು. ಇವರಿಬ್ಬ
ಲ್ಲಿ ನೀವು ಯಾರಂತಾಗಲು ಬಯಸುವಿರಿ?

ಶಿಕ್ಷಕನ ವ್ಯವಸಾಯವು ತುಂಬ ಗೌರವವುಳ್ಳದ್ದು. ಅಂಥ ವಿಶ್ವಾಸವುಳ್ಳ
ೇ ಈ ಕೆಲಸಕ್ಕೆ ಬರಬೇಕು. ಮಿಕ್ಕವರು ದೂರಿರುವದೇ ಒಳಿತು.

ಇನ್ನು ಪಾಲಕರ ವಿಚಾರ. ಅವರ ಹೊಣೆಗಾರಿಕೆಯೂ ಕಡಿಮೆ ತರಗತಿಯ
ಲ್ಲ. ನೀವೂ ಕೂಡ ಶಿಕ್ಷಕರೇ ಆಗಿರುವಿರಿ. ಮಕ್ಕಳು ಮನೆಯಲ್ಲಿಯೇ ಹಲವು
ಷಯಗಳನ್ನು ಕಲಿಯುವರು. ಶಿಕ್ಷಣದ ಕ್ಷೇತ್ರವು ಬಹು ವಿಸ್ತಾರವಾದುದು.
ು ಬರೆಹಗಳು ಅದರಲ್ಲೊಂದು ಚಿಕ್ಕ ಭಾಗ ಮಾತ್ರ. ಮಗುವಿನ ಆಯುಷ್ಯ
ಲ್ಲಿ ತಾಯಿಯ ಸ್ಥಾನವು ಅತಿ ಮಹತ್ವವುಳ್ಳದ್ದು. ತಾಯಿಯ ನಡೆನುಡಿಗಳು,
ತಿನೀತಿಗಳು, ಸಾಮಾಜಿಕ ಜೀವನ, ಇವೆಲ್ಲವುಗಳ ಪರಿಣಾಮವು ಮಗುವಿನ
ೀಲಾಗುವದು. ಆದ್ದರಿಂದ ತಾಯಿತಂದೆಗಳು ಈ ವಿಷಯದಲ್ಲಿ ತುಂಬ ಎಚ್ಚ
ರಿಯಿಂದಿರಬೇಕು. ಮಕ್ಕಳಿಗೆ, ನಾವು ಭಾವಿಸುವಷ್ಟಕ್ಕಿಂತಲೂ ಹೆಚ್ಚು ತಿಳಿ
ವಿಕೆಯಿರುವದು. ಕುತೂಹಲ ಅನುಕರಣೆಗಳಿಂದಲೇ ಅವರು ಹಲವು ಸಂಗತಿ
ಗಳನ್ನು ಕುಲಿತುಕೊಳ್ಳುವರು. ಅವರ ನಿರೀಕ್ಷಣಶಕ್ತಿಯು ತುಂಬ ಜೂರುಕಾಗಿರು
ವದು. ಬಾಲಕರನ್ನು ಅನಾದರಮಾಡಬಾರದು. ಅವರಿಗೆ ತಕ್ಕ ಮನ್ನಣೆ ಕೊಡ
ಬೇಕಬೇಕು. ಅವರಿಗೂ ವ್ಯಕ್ತಿತ್ವವಿರುವದು; ನಾವು ಅದನ್ನು ದುರ್ಲಕ್ಷಿಸಿದರೆ
ಆಗದು. "ಓ! ಬಿಡು. ಇದೇನು, ಚಿಕ್ಕ ಮಗು. ಇದಕ್ಕೇನು ಗೊತ್ತು?"
ಾದು ಅನಾದರ ಮಾಡಬೇಡಿರಿ.

ಜನ ಗಾಂಧಿಗಳಿರುವರು; ಎಷ್ಟೋ ಸರೋಜಿನೀ ದೇವಿಯರಿರುವರು, ಕವಿಗ ರುವರು; ಶಾಸ್ತ್ರಜ್ಞರಿರುವರು. ಭವಿಷ್ಯದ ಭಾರತ ರಾಷ್ಟ್ರವನ್ನು ಕಟ್ಟಲು ಹುಟ್ಟಿ ದವರೆಲ್ಲ ಈಗ ಬಾಲಕರಾಗಿರುವರೆಂದು ಭಾವಿಸುವದರಲ್ಲಿ ತಪ್ಪೇನಿದೆ?

ಶಿಕ್ಷಕ ಬಂಧುಗಳೇ, ನಿಮ್ಮ ಹೊಣೆಗಾರಿಕೆಯು ಚಿಕ್ಕದಲ್ಲ. ಜನತೆಯು ನಿಮ್ಮ ಯೋಗತೆಯನ್ನು ಸರಿಯಾಗಿ ಅರಿತುಕೊಂಡಿರಲಿಕ್ಕಿಲ್ಲ. ಭವಿಷ್ಯದ ಭಾರತ ರಾಷ್ಟ್ರವನ್ನು ನಿರ್ಮಾಣಮಾಡುವಂಥ ಅತ್ಯಂತ ಗೌರವದ ಮತ್ತು ಇನ್ನಿಲ್ಲದಷ್ಟು ಹೊಣೆಗಾರಿಕೆಯ ಕಾರ್ಯವನ್ನು ನೀವು ಕೈಕೊಂಡಿರುವಿರಿ. ನೀವು ಪ್ರಾಥಮಿಕ ಶಾಲೆಗಳ ಶಿಕ್ಷಕರೆಂಬ ಕಾರಣದಿಂದ ನಿಮ್ಮನ್ನು ಹಲವರು ಕಡೆಗಣಿಸಿರಬಹುದು. ಅಂಥವರು ತಪ್ಪುದಾರಿಯನ್ನು ತುಳಿದಿದ್ದಾರೆಂದು ನಾನು ನಿಶ್ಚಯವಾಗಿ ಹೇಳುವೆನು. ನಿಮ್ಮ ಕಾರ್ಯವು ಅತ್ಯಂತ ಗೌರವಾರ್ಹವಾಗಿದ್ದು ಭಾರತರಾಷ್ಟ್ರ ಮುಂದಿ ರದ ಅಸ್ತಿವಾರವನ್ನು ಹಾಕುವ ಕೆಲಸದಲ್ಲಿ ತೊಡಗಿದ್ದೀರಿ. ನಿಮ್ಮ ಕಾರ್ಯದ ಗೌರವವನ್ನೂ ಮಹತ್ವವನ್ನೂ ತೀರ ಸ್ವಲ್ಪ ಜನರು ಮಾತ್ರ ಸರಿಯಾಗಿ ತಿಳಿದು ಕೊಂಡಿರುವರು. ಆದರೂ ನೀವು ಮಾತ್ರ ಮನಸೊಂದುಕೊಳ್ಳದೆ ನಿಮ್ಮ ಕಾರ್ಯದ ಗೌರವವನ್ನು ಸ್ಮರಿಸಿಕೊಂಡು ಭಕ್ತಿ ವಿಶ್ವಾಸಗಳಿಂದ ಕೆಲಸಮಾಡಿರಿ. ಭಾವೀ ಜನಾಂಗವು ನಿಮ್ಮ ಕೈಯಲ್ಲಿದೆ. ನೀವು ನಿಮ್ಮ ಕರ್ತವ್ಯದಲ್ಲಿ ನಿಷ್ಠೆಯುಳ್ಳವರಾಗಿ ಹೊಣೆಗಾರಿಕೆಯನ್ನು ಅರಿತುಕೊಂಡು ಕೆಲಸಮಾಡಿದರೆ ಭವಿಷ್ಯದ ಸರಕಾರವನ್ನೇ ನೀವು ನಿರ್ಮಿಸಬಹುದು.

ದುರ್ದೈವದಿಂದ ಶಿಕ್ಷಕ ವರ್ಗವು ಆತ್ಮ ವಿಶ್ವಾಸವನ್ನು ಕಳೆದುಕೊಂಡಿದೆ. ಅವರು ಜನತೆಯ ಜೀವಾಳವನ್ನು ಆಕರ್ಷಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ಹಲಕೆಲವರಂತೂ ತಾವು ಕೂಲಿಗಾಗಿ ಕೆಲಸಮಾಡುವ ಆಳುಗಳೆಂಬ ತಪ್ಪು ತಿಳುವ-ಳಿಕೆಯಲ್ಲಿದ್ದಾರೆ. ಶಿಕ್ಷಕ ವರ್ಗವು ಈ ರೀತಿ ಆತ್ಮ ವಿಶ್ವಾಸವನ್ನು ಕಳೆದುಕೊಂಡಿ-ರುವದರಿಂದಲೇ ಜನತೆಯು ಅವರನ್ನು ಕಡೆಗಣಿಸಲು ಕಾರಣವಾಯಿತು. ಮಾಧ್ಯಮಿಕ ಶಿಕ್ಷಕರದೂ ಇದೇ ಹಾಡು. ಶಾಲೆಗಳು ಸಾಕ್ಷರಿಗಳಾದ ಮನುಷ್ಯ ಮೂರ್ತಿ ಗಳನ್ನು ನಿರ್ಮಿಸುವ ಕಾರಖಾನೆಗಳಂತಾಗಿವೆ. ತೀರ ಸ್ವಲ್ಪೇ ಶಾಲೆಗಳು ಕೆಲ-ವೊಂದು ನಿಶ್ಚಿತವಾದ ಉಚ್ಚ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡುತ್ತಿವೆ. ಈ ಬಾಲಕರು ದೊಡ್ಡವರಾದ ಬಳಿಕ ಇವರಲ್ಲಿ ಎಷ್ಟು ಜನರು ತಮ್ಮ ಶಾಲೆಯ ಬಗ್ಗೆ ಅಭಿಮಾನವುಳ್ಳವರಾಗುವರು? ಪ್ರಬುದ್ಧರಾದ ನಿಮ್ಮಲ್ಲಿ ಎಷ್ಟು ಜನರು ನೀವು ಹಿಂದೆ ಕಲಿತ ಶಾಲೆಯ ಬಗ್ಗೆ ಆನಂದ ಅಭಿಮಾನಗಳ ಭಾವನೆಯುಳ್ಳವರಾಗಿರುವಿರಿ?

ನಾನು ನಿಮ್ಮನ್ನು ದೂಷಿಸುವೆನೆಂದು ತಿಳಿಯಬೇಡಿರಿ. ಶಾಲೆಯಾದರೂ ನಿಮಗಾಗಿ ಮಾಡಿದ್ದೇನು? ಅದು, ಹಲಕೆಲವು ಪಾಠಪುಸ್ತಕಗಳ ವಿಷಯಗಳನ್ನು

ಸುವದಕ್ಕಿಂತಲು ಹೆಚ್ಚಿಗೇನೂ ಮಾಡಿದಂತಿಲ್ಲ. ಶಿಕ್ಷಕರ ವಿಷಯದಲ್ಲಿಯೂ ವು ಇದಕ್ಕೂ ಹೆಚ್ಚಿಗೆ ಏನೂ ಹೇಳುವಂತಿರಲಿಕ್ಕಿಲ್ಲ. ನನಗೆ ಮರಾಠಿ ನಾಲ್ಕು ಯ ಇಯತ್ತೆಯನ್ನು ಕಲಿಸಿದ ಒಬ್ಬ ಶಿಕ್ಷಕರ ನೆನಪಿರುವದು. ಅವರು ಟ್ರೇಂಡರಾದರೂ ಒಳ್ಳೆಯ ಶಿಕ್ಷಕರಾಗಿದ್ದರು. ಅವರು ನಮಗೆ ಒಳ್ಳೆಯ ತೆಗಳನ್ನು ಕಲಿಸಿದರು. ಒಳ್ಳೆಯ ಕತೆಗಳನ್ನು ಹೇಳಿದರು. ಅವರು ಸಮ್ಮೊಳಗಿನ ವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಭಾರತ-ರಾಮಾಯಣಗಳ ಗಳನ್ನು ಓದಿ ತೋರಿಸುತ್ತಿದ್ದರು. ಅವರು ಸ್ವತಃ ಕವಿತೆಗಳನ್ನು ರಚಿಸು ದ್ದರು. ಅವರ ತಿಂಗಳದ ಸಂಬಳ ೯ ರೂ. ಮಾತ್ರ. ಆದರೂ ಅವರು ತಾವೂ ಖದಿಂದಿದ್ದು ನಮ್ಮನ್ನೂ ಸುಖಪಡಿಸುತ್ತಿದ್ದರು. ನನಗೆ ಇನ್ನೂ ಒಬ್ಬ ಶಿಕ್ಷಕರ ನಪಿದೆ. ಅವರು ಮೂರನೆಯ ಇಯತ್ತೆಯನ್ನು ಕಲಿಸಿದರು. ಅವರು ನನ್ನ ಂಬಿದ ಗಲ್ಲವನ್ನೂ ಪಕ್ಕಡಿಯ ಭಾಗವನ್ನೂ ಕೈತುಂಬ ಹಿಡಿದು ಚಿವುಟುತ್ತಿ ರು. ಆ ನೋವಿನ ನೆನಪಾದರೆ ನನಗೆ ಈಗಲೂ ಭಯವಾಗುವದು. ಇವರಿಬ್ಬ ಲ್ಲಿ ನೀವು ಯಾರಂತಾಗಲು ಬಯಸುವಿರಿ ?

ಶಿಕ್ಷಕನ ವ್ಯವಸಾಯವು ತುಂಬ ಗೌರವವುಳ್ಳದ್ದು. ಅಂಥ ವಿಶ್ವಾಸವುಳ್ಳ ೇ ಈ ಕೆಲಸಕ್ಕೆ ಬರಬೇಕು. ಮಿಕ್ಕವರು ದೂರಿರುವದೇ ಒಳಿತು.

ಇನ್ನು ಪಾಲಕರ ವಿಚಾರ. ಅವರ ಹೊಣೆಗಾರಿಕೆಯೂ ಕಡಿಮೆ ತರಗತಿಯ ಲ್ಲ. ನೀವೂ ಕೂಡ ಶಿಕ್ಷಕರೇ ಆಗಿರುವಿರಿ. ಮಕ್ಕಳು ಮನೆಯಲ್ಲಿಯೇ ಹಲವು ಷಯಗಳನ್ನು ಕಲಿಯುವರು. ಶಿಕ್ಷಣದ ಕ್ಷೇತ್ರವು ಬಹು ವಿಸ್ತಾರವಾದುದು. ದು ಬರೆಹಗಳು ಅದರಲ್ಲೊಂದು ಚಿಕ್ಕ ಭಾಗ ಮಾತ್ರ. ಮಗುವಿನ ಆಯುಷ್ಯ ಲ್ಲಿ ತಾಯಿಯ ಸ್ಥಾನವು ಅತಿ ಮಹತ್ವವುಳ್ಳದ್ದು. ತಾಯಿಯ ನಡೆನುಡಿಗಳು, ತಿನೀತಿಗಳು, ಸಾಮಾಜಿಕ ಜೀವನ, ಇವೆಲ್ಲವುಗಳ ಪರಿಣಾಮವು ಮಗುವಿನ ೀಲಾಗುವದು. ಆದ್ದರಿಂದ ತಾಯಿತಂದೆಗಳು ಈ ವಿಷಯದಲ್ಲಿ ತುಂಬ ಎಚ್ಚ ಕೆಯಿಂದಿರಬೇಕು. ಮಕ್ಕಳಿಗೆ, ನಾವು ಭಾವಿಸುವಷ್ಟಕ್ಕಿಂತಲೂ ಹೆಚ್ಚು ತಿಳಿ ವಳಿಕೆಯಿರುವದು. ಕುತೂಹಲ ಅನುಕರಣೆಗಳಿಂದಲೇ ಅವರು ಹಲವು ಸಂಗತಿ ಳನ್ನು ಕುಲಿತುಕೊಳ್ಳುವರು. ಅವರ ನಿರೀಕ್ಷಣಶಕ್ತಿಯು ತುಂಬ ಚುರುಕಾಗಿರು ದು. ಬಾಲಕರನ್ನು ಅನಾದರಮಾಡಬಾರದು. ಅವರಿಗೆ ತಕ್ಕ ಮನ್ನಣೆ ಕೊಡ ಡಬೇಕು. ಅವರಿಗೂ ವ್ಯಕ್ತಿತ್ವವಿರುವದು; ನಾವು ಅದನ್ನು ದುರ್ಲಕ್ಷಿಸಿದರೆ ಾಗದು. " ಓ ! ಬಿಡು. ಇದೇನು, ಚಿಕ್ಕ ಮಗು. ಇದಕ್ಕೇನು ಗೊತ್ತು ? " ದು ಅನಾದರ ಮಾಡಬೇಡಿರಿ.

ಇನ್ನುಳಿದುದು ನಗರಸಭೆಯ ಸದಸ್ಯರ ವಿಚಾರ. ಕಡೆಯದಾದರೂ ಕಡೆಗಣಿಸಲಾಗದ ಮಾತು. ನೀವು ಆರಿಸಿಬಂದ–ಚುನಾವಣೆಯಲ್ಲಷ್ಟೇ ಅಲ್ಲ—ನಗರವಾಸಿಗಳ ಸಮೂಹದಿಂದ ಆರಿಸಿ ತೆಗೆದ—ಮಹನೀಯರು! ನಿಮಗೆ ನಗರ-ಪಾಲಕರೆಂಬ ಬಿರುದಿದೆ. ಶಿಕ್ಷಕರಿಗಿಂತಲೂ ಪಾಲಕರಿಗಿಂತಲೂ ಹೆಚ್ಚಿನ ಹೊಣೆಗಾರಿಕೆಯು ನಿಮ್ಮದು. ಊರೊಳಗಿನ ಎಲ್ಲ ಬಾಲಕರಿಗೆ ಯೋಗ್ಯ ಶಿಕ್ಷಣ ಸೌಕರ್ಯಗಳು ದೊರೆಯುವಂತೆ ನೋಡಿಕೊಳ್ಳುವದು ನಿಮ್ಮ ಕರ್ತವ್ಯ. ಅವರಿಗೆ ಉತ್ತಮವೂ ಯೋಗ್ಯವೂ ಆದ ಶಿಕ್ಷಣವು ದೊರೆಯಬೇಕು. ಶಿಕ್ಷಕರಿಗೂ ಯೋಗ್ಯವಾದ ಶಿಕ್ಷಣವೂ ಸಂಸ್ಕಾರವೂ ದೊರೆದಿರಬೇಕು. ಶಾಲೆಯ ವೇಳೆಯು ಅನುಕೂಲವಾದದ್ದಿರಬೇಕು. ಶಾಲಾಗೃಹವೂ ಉಪಕರಣಗಳೂ ಶಿಕ್ಷಣೋಪಕರಣಗಳೂ ಯೋಗ್ಯವಾದವಿರಬೇಕು. ಶಾಲೆಗಳು ನಿಮ್ಮವು. ಬಾಲಕರೂ ಶಿಕ್ಷಕರೂ ನಿಮ್ಮವರು. ಅವರೆಲ್ಲರ ಸಂರಕ್ಷಣೆಯ ಮತ್ತು ಅವರಿಗೆ ಯೋಗ್ಯ ರೂಪಗಳ ತೋರಿಸುವ ಭಾರವು ನಿಮ್ಮದು. ಶಿಕ್ಷಣದ ಅಭಿವೃದ್ಧಿ ಕಾರ್ಯವು ಸರಿಯಾಗಿ ಸಾಗಬೇಕಾದರೆ ಆಡಳಿತೆಯ ಮತ್ತು ತಪಾಸಣೆಯ ಕಾರ್ಯಗಳು ಚೆನ್ನಾಗಿ ಸಾಗುವಂತೆ ಯೋಗ್ಯ ಅಧಿಕಾರಿಗಳ ಯೋಜನೆಯಿರಬೇಕಾಗುವದು. ಈ ಎಲ್ಲ ಜನರು ನಮ್ಮ ಮುಂದಿನ ಪೀಳಿಗೆಯ ಉದ್ಧಾರವೆಂಬ ಒಂದೇ ಒಂದು ಉತ್ತಮ ಧ್ಯೇಯವನ್ನಿಟ್ಟುಕೊಂಡು ಕೆಲಸ ಮಾಡಬೇಕು.

ನನ್ನ ಚಿಕ್ಕ ಗೆಳೆಯರೇ, ನಾನು ನಿಮ್ಮನ್ನು ಮರೆತಿಲ್ಲ. ನಾನು ನಿಮಗೆ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ನೀವು ಬೆಳೆಯುತ್ತ ಹೋದಂತೆ ನಿಮ್ಮ ಜ್ಞಾನವೂ ಹೆಚ್ಚುತ್ತ ಹೋಗುವದು. ನಿಮ್ಮಲ್ಲಿ ಕೆಲವರು ಪಾರಿತೋಷಿಕಗಳನ್ನು ಪಡೆದಿರುವಿರಿ. ನನಗೆ ಇದನ್ನು ನೋಡಿ ಸಂತೋಷವಾಯಿತು. ನೀವು ನಿಮ್ಮ ಜೀವನದಲ್ಲಿ ಇನ್ನೂ ಎಷ್ಟೋ ಪಾರಿತೋಷಿಕಗಳನ್ನು ಪಡೆಯಬಹುದು. ನಿಮ್ಮಲ್ಲಿ ಹಲವರಿಗೆ ಬಹುಮಾನ ಸಿಕ್ಕಿಲ್ಲ. ಅಂಥವರು ಇನ್ನೂ ಹೆಚ್ಚು ಮನಮುಟ್ಟಿ ದುಡಿಯಬೇಕು; ದುಡಿದವರಿಗೆ ಪಾರಿತೋಷಿಕಗಳು ದೊರೆಯುವದರಲ್ಲಿ ಸಂಶಯವಿಲ್ಲ. ನೀವೆಲ್ಲರೂ ಚೆಲ್ಲೆಯವರಾಗಿರಿ. ಗುರುಹಿರಿಯರನ್ನು ಮನ್ನಿಸಿರಿ. ಆಡುವಾಗ ಆಡಿರಿ. ಓದುವಾಗ ಓದಿರಿ. ಸದ್ಭಕ್ತರೂ ನಿರೋಗಿಗಳೂ ಆಗಲು ಯತ್ನಿಸಿರಿ. ನೀವೆಲ್ಲರೂ ಸುಖಿಗಳಾಗಿರಿ. ದೀರ್ಘಾಯುಷ್ಯವನ್ನು ಪಡೆಯಿರಿ. ನಿಮ್ಮೆಲ್ಲರಿಗೂ ನಾನು ಎಂಬ ಆಭಾರಿಯಾಗಿರುವೆನು.

ಹೊತ್ತಿಗೆ ತಕ್ಕ ಹತ್ತು ಸೂಚನೆಗಳು

ಕೆಲವೊಂದು ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ತಯಾರಿಸುವದು ಶಾಲೆಗಳ ಧ್ಯೇಯವೆಂಬ ಭಾವನೆಗೆ ಈಗ ಅವಕಾಶವುಳಿದಿಲ್ಲ. ತನ್ನ ಕಾಲಮೇಲೆ ನಿಂತು ಜೀವನ ಸಾಗಿಸಬಲ್ಲ ಸತ್ಪ್ರಜಾನಿರ್ಮಾಣವೇ ಶಿಕ್ಷಣದ ಗುರಿಯೆಂಬುದು ಜನ ಜನಿತವಾಗಿದೆ. ನಮ್ಮ ಮುಂಬಯಿ ಸರಕಾರದವರು ವಿದ್ಯಾಪ್ರಸಾರ, ಯೋಗ್ಯವಾದ ಪದ್ಧತಿಯ ಶಿಕ್ಷಣಪ್ರಚಾರ, ಶಿಕ್ಷಕ ಶಿಕ್ಷಣಾಲಯಗಳ ವಿಸ್ತಾರ, ಈ ಕಾರ್ಯಗಳನ್ನು ಕೈಕೊಂಡು ವಿದ್ಯಾರ್ಥಿಗಳ ಮತ್ತು ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿದಂತೆಯೇ ಈಗೆರಡು ವರುಷಗಳಿಂದ ಮೇಲ್ವಿಚಾರಣೆಯ ಅಧಿಕಾರಿಗಳ ಸಂಖ್ಯೆಯನ್ನೂ ಹೆಚ್ಚಿಸಿರುವರು. ಯೋಗ್ಯ ಮೇಲ್ವಿಚಾರಣೆಯಿಲ್ಲದಿದ್ದರೆ—ಶಿಕ್ಷಕರಿಗೆ ತಕ್ಕ ಮಾರ್ಗದರ್ಶಕರಿಲ್ಲದಿದ್ದರೆ—ವಿದ್ಯಾಇಲಾಖೆಯವರು ಮಾಡುವ ವೆಚ್ಚದ ಬಹುಭಾಗವು ನಿರರ್ಥಕ (waste) ವಾಗುವದೆಂಬುದು ಸರಕಾರದ ಲಕ್ಷ್ಯಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಮೇಲ್ವಿಚಾರಣೆಯ ಅಧಿಕಾರಿಗಳೂ ಶಿಕ್ಷಕರೂ ಕೂಡಿಯೇ ತಮ್ಮ ಕೆಲಸದಲ್ಲಿ ತಕ್ಕ ಸುಧಾರಣೆಯ ಮಾರ್ಗವನ್ನು ಕಂಡುಕೊಂಡು ಕೆಲಸಮಾಡಿ ಸರಕಾರದ ಕೋರಿಕೆಯನ್ನು ಕೊನೆಗಾಣಿಸಬೇಕಾಗಿರುವದು.

ಕಾಲವು ಬದಲಾಗಿದೆ. ಸುಧಾರಣೆಯು ಬೌದ್ಧಿಕ ಜೀವನದ ಲಕ್ಷಣ. ಶಿಕ್ಷಣದ ಕಾರ್ಯಕ್ಷೇತ್ರದಲ್ಲಿಯೂ ಕಾಲಕ್ರಮದಲ್ಲಿ ಹಲವು ಬದಲಾವಣೆಗಳಾಗುತ್ತ ಬಂದಿವೆ. ಸ್ವಾತಂತ್ರ್ಯಪ್ರೀತಿಯು ಪ್ರಾಣಿಗಳ ಹುಟ್ಟುಗುಣ. ಅಧಿಕಾರಲಾಲಸೆಗೂ ಸ್ವಾತಂತ್ರ್ಯಪ್ರೀತಿಗೂ ಪರಸ್ಪರ ವಿರೋಧವಿರುವದಾದರೂ ಅವೆರಡೂ ಮಾನವಜೀವನದಲ್ಲಿ ಅಸ್ವಾಭಾವಿಕವಾದುವಲ್ಲ. ಆದುದರಿಂದಲೇ ಪ್ರಜಾಸತಾತ್ಮಕ ಸ್ವತಂತ್ರ ರಾಷ್ಟ್ರಗಳಲ್ಲಿಯೂ ಸರ್ವಾಧಿಕಾರಿಗಳ ಉದಯವಾಯಿತು. ನಮ್ಮ ದೇಶದ ಶಿಕ್ಷಣದ ಕಾರ್ಯಕ್ಷೇತ್ರದಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಮೇಲಿನ ಸರ್ವತಂತ್ರ ಸ್ವತಂತ್ರ ವ್ಯಕ್ತಿಗಳು; ಮೇಲ್ವಿಚಾರಣೆಯ ಅಧಿಕಾರಿಗಳು ಅವರ ಮೇಲಿನ ಸರ್ವಾಧಿಕಾರಿಗಳು, ಎಂಬ ವಿಚಾರವಿದ್ದುದನ್ನು ಈಗ ಕೆಲಸಮಾಡುತ್ತಿರುವ ಶಿಕ್ಷಕರಲ್ಲಿಯೇ ಹಲವರು ಕಂಡು ಅನುಭವಿಸಿದವರಿರುವರು. ಆದರೆ ಆ ಮಾತು ಈಗ ಉಳಿದಿಲ್ಲ. ವಿದ್ಯಾರ್ಥಿಗಳಿಗೂ ಶಿಕ್ಷಕವರ್ಗಕ್ಕೂ ವಿಚಾರ ಸ್ವಾತಂತ್ರ್ಯ ವ್ಯಕ್ತಿಸ್ವಾತಂತ್ರ್ಯಗಳು ಬಂದು ಹೋಗಿವೆ. ಈ ಮಾತಿಗೆ ಉದಾಹರಣೆಗಳನ್ನು ಹುಡುಕುತ್ತ ಹೋಗುವ ಕಾರಣವಿಲ್ಲ.

ಮೊನ್ನೆ ನನ್ನ ಸ್ವಂತದ ಒಂದು ಕೆಲಸದ ಸಲುವಾಗಿ ನಾನು ನನ್ನ ಸ್ನೇಹಿತ ರೊಬ್ಬರ ಮನೆಗೆ ಹೋಗಿದ್ದೆನು. ಅವರು ವಿದ್ಯಾಖಾತೆಯಲ್ಲಿ ಮೇಲ್ವಿಚಾರಣೆಯ ಅಧಿಕಾರದಲ್ಲಿರುವರು. ಬೇರೆ ಬೇರೆ ವಿಷಯಗಳ ಮಾತು ನಡೆದಾಗ ಅಕಸ್ಮಾತ್ ಅವರ ಮೇಜಿನ ಮೇಲಿರುವ ಒಂದು ಕಾಗದದ ಕಡೆಗೆ ನನ್ನ ದೃಷ್ಟಿಯು ಹೊರಳಿತು. ಅವರ ಅನುಮತಿಯಿಂದ ನಾನು ಆ ಕಾಗದವನ್ನು ತೆಗೆದುಕೊಂಡು ಸಾದ್ಯಂತವಾಗಿ ಓದಿ ನೋಡಿದೆನು. ಅದು ಮೇಲ್ವಿಚಾರಣೆಯ ಅಧಿಕಾರಿಗಳಿಗೆ ಸದ್ಯದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ **ಮೆ॥ ತಾವಡೆ ಸಾಹೇಬ**ರಿಂದ ಬಂದ ಒಂದು ಪರಿಪತ್ರ (Circular) ವಾಗಿತ್ತು. ಅದರಲ್ಲಿರುವ ವಿಚಾರಗಳು ನಮ್ಮ ಶಿಕ್ಷಕಬಂಧುಗಳಿಗೆ ತುಂಬ ಮಾರ್ಗದರ್ಶಿಯಾಗಬಹುದೆಂಬ ಭಾವನೆಯಿಂದ ಅವನ್ನು ಇಲ್ಲಿ ಪ್ರಕಟಿಸಲು ಸಾಹಸಪಟ್ಟಿರುವೆನು. ಇದಕ್ಕೆ ಯಾರೂ ಅಪಾರ್ಥಮಾಡಿಕೊಳ್ಳಲಾರರೆಂದೂ ಅದರ ದುರುಪಯೋಗಮಾಡಿಕೊಳ್ಳಲಾರ ರೆಂದೂ ಭಾವಿಸುವೆನು.

ಮೇಲ್ವಿಚಾರಣೆಯ ಅಧಿಕಾರಿಗಳ ಕರ್ತವ್ಯಗಳೂ ಹೊಣೆಗಾರಿಕೆಯೂ.

೧. ಮೇಲ್ವಿಚಾರಣೆಯ ಅಧಿಕಾರಿಯು ಶಿಕ್ಷಕರ ಸ್ನೇಹಿತನು, ಮಾರ್ಗ ದರ್ಶಿಯು, ಅವರ ಗುಟ್ಟುಮಟ್ಟುಗಳನ್ನು ಅರಿತ ತತ್ವದರ್ಶಿಯು. ಅವನು ಯಾವ ತರದ ಆಡಂಬರವಿಲ್ಲದೆ ಶಾಲೆಗೆ ಹೋಗಿ ವರ್ಗದ ಹಿಂಭಾಗದಲ್ಲಿ ಕುಳಿತು ಅಲ್ಲಿ ಸಾಗುತ್ತಿರುವ ಪಾಠವನ್ನು ನಿರೀಕ್ಷಿಸಬೇಕು. ಮತ್ತು ಅವಶ್ಯಕವೆನಿಸಿದಾಗ ವಿದ್ಯಾರ್ಥಿಗಳ ಮುಂದೆ ಶಿಕ್ಷಕನ ದೋಷೋದ್ಘಾಟನೆ ಮಾಡದೆ ತಕ್ಕ ಮಾರ್ಗ ಸೂಚನೆ ಮಾಡಬೇಕು.

೨. ಅವನು ಶಾಲೆಯ ದಿನದ ಕೆಲಸ ನಡೆಯುವ ವೇಳೆಯಲ್ಲಿ, ಅಲ್ಲಿ ಸ್ವಾಭಾವಿಕವಾಗಿ ನಡೆಯುವ ಕೆಲಸಗಳ ತಪಾಸಣೆ ಮಾಡಬೇಕು. ಶಾಲೆಯ ಅಭ್ಯಾಸಕ್ರಮಕ್ಕೆ ಸಂಬಂಧಿಸಿದ ಕೆಲಸವನ್ನು ಅಥವಾ ಅದಕ್ಕೆ ಸಂಬಂಧಿಸದೆ ಇದ್ದ ಹೆಚ್ಚಿನ ಚಟುವಟಿಕೆಗಳನ್ನು ನೋಡುವದಿದ್ದಾಗಲೂ ಸಾಧ್ಯವಾದಷ್ಟು ಶಾಲೆಯ ವೇಳೆಯಲ್ಲಿಯೇ ನೋಡಲು ಪ್ರಯತ್ನಿಸಬೇಕು. ಹೆಚ್ಚಿನ ವೇಳೆಯು ಬೇಕಾ ಗಿದ್ದಾಗ ಶಾಲೆಯ ಮುಖ್ಯ ಅಧಿಕಾರಿಯ ಅನುಮತಿಯಿಂದ ಕೆಲಸ ನಡೆ ಯಿಸಬೇಕು.

೩. ಮೇಲ್ವಿಚಾರಣೆಯ ಅಧಿಕಾರಿಗಳೂ ಶಿಕ್ಷಕರೂ ಪರಸ್ಪರ ತುಂಬ ಗೌರವವುಳ್ಳವರಾಗಿರಬೇಕು. ಅವರು ಯಾವ ತರದ ಅಡೆತಡೆಗಳಿಲ್ಲದೆ ಪರಸ್ಪರ

ವಿಚಾರವಿನಿಮಯ ಮಾಡುತ್ತಿರಬೇಕು. ಮತ್ತು ಅವರಲ್ಲಿ ಯಾವದೇ ತರದ ಆತ್ಮವಂಚನೆಗೆ ಅವಕಾಶವಿರಕೂಡದು. ಟೀಕೆಗಳು ವ್ಯಕ್ತಿಗತವಾಗಿರದೆ ವಿಚಾರ ಗಳಿಗೂ ತತ್ವಗಳಿಗೂ ಸಂಬಂಧಿಸಿರಬೇಕು. ಎಲ್ಲ ವ್ಯವಹಾರಗಳಲ್ಲಿ ಒಬ್ಬರೊಡ ನೊಬ್ಬರು ಅತ್ಯಂತ ಸೌಜನ್ಯದಿಂದ ನಡೆದುಕೊಳ್ಳಬೇಕು. ಮೇಲ್ವಿಚಾರಣೆಯ ಅಧಿಕಾರಿಗಳು ಶಿಕ್ಷಕರನ್ನು — ಅವರು ಪ್ರಾಥಮಿಕ ಶಿಕ್ಷಕರೇ ಇರಲಿ, ಅಥವಾ ಮಾಧ್ಯಮಿಕ ಶಿಕ್ಷಕರೇ ಇರಲಿ — ಅತಿಶಯ ಮರ್ಯಾದೆಯಿಂದ ನಡೆಯಿಸಿಕೊಳ್ಳ ಬೇಕು. ಒಟ್ಟಿನ ಮೇಲೆ ಶಿಕ್ಷಕರು ನಮ್ಮ ಮುಂದಿನ ಪೀಳಿಗೆಯನ್ನು ತಯಾರಿಸ ತಕ್ಕವರು. ಆದ್ದರಿಂದ ಅವರಲ್ಲಿ ಆತ್ಮಾಭಿಮಾನವು ಹುಟ್ಟಿ ಅವರು ಧೀರ ಮನೋ ವೃತ್ತಿಯುಳ್ಳವರಾಗದ ಹೊರತು ನಮ್ಮ ಮುಂದಿನ ಸಂತತಿಯಲ್ಲಿ ಆ ಗುಣಗಳು ವಿಕಾಸಹೊಂದಲಾರವು. 'ಜೀ ಹುಜೂರ್' ಎಂದು ನೆಲಮುಟ್ಟಿ ವಂದಿಸುವಂಥ ಕೀಳು ವಿಧೇಯತೆಯ ಜಟಗಳು ಶಿಕ್ಷಕರಲ್ಲಿ ಉಂಟಾಗದಂತೆ ನೋಡಿಕೊಳ್ಳಬೇಕು.

೪. ಒಳ್ಳೆಯ ಮಾತಿಗೆ ರೊಕ್ಕ ಬೀಳುವದಿಲ್ಲ. ಪ್ರಾಥಮಿಕ ಶಿಕ್ಷಕರಿಗೆ ಅವರ ಪರಿಸ್ಥಿತಿಯ ಮೇಲಿಂದ ನೋಡಿದರೆ ತುಂಬ ಸಹಾನುಭೂತಿಯೂ ಉತ್ತೇ ಜನಪರವಾದ ಮಾತುಗಳೂ ಬೇಕೇ ಬೇಕು. ಸಾಧ್ಯವಿದ್ದಮಟ್ಟಿಗೂ ಅವರ ಸುಖ ದುಃಖಗಳನ್ನು ವಿವರವಾಗಿ ಕೇಳಿಕೊಳ್ಳಬೇಕು. ಮತ್ತು ಮೇಲ್ವಿಚಾರಣೆಯ ಅಧಿಕಾರಿಗಳಿಗೆ ಅವರು ಹೇಳುವ ಕಷ್ಟಗಳು ನಿಜವೆಂದು ತೋರಿಬಂದರೆ ಸಹಾನು ಭೂತಿಯಿಂದ ವಿಚಾರಮಾಡುವದಕ್ಕಾಗಿ ಅವನ್ನು ಯೋಗ್ಯ ಅಧಿಕಾರಿಗಳ ಗಮ ನಕ್ಕೆ ತಂದುಕೊಡಬೇಕು. ಮೇಲ್ವಿಚಾರಣೆಯ ಅಧಿಕಾರಿಯು ತನ್ನ ಮಾತಿ ನಿಂದಲೂ ಕೃತಿಯಿಂದಲೂ ಪ್ರಾಥಮಿಕ ಶಿಕ್ಷಕರ ಮನಸ್ಸಿನಲ್ಲಿ ವಿಶ್ವಾಸವನ್ನೂ ನಂಬುಗೆಯನ್ನೂ ಆತ್ಮೀಯ ಭಾವನೆಯನ್ನೂ ಹುಟ್ಟಿಸಿಕೊಳ್ಳಬೇಕು.

೫. ಶಿಕ್ಷಕರು ನಮ್ಮ ಖಾತೆಯೊಳಗಿನ ತೀರ ಕಡಿಮೆ ವೇತನದ ನೌಕರರು. ಅಧಿಕಾರಿಗಳ ಆಗಮನವು ಯಾವದೇ ತರದ ವೆಚ್ಚಕ್ಕೆ ಕಾರಣವಾಗಕೂಡದು. ಮಾಲೆ ಹಾಕುವದು, ಉಪಾಹಾರ ಕೊಡುವದು ಮೊದಲಾದ ಅಧಿಕಾರಿಗಳನ್ನು ಸಂತೋಷಪಡಿಸುವ ಕೆಲಸಗಳನ್ನು ನಿಲ್ಲಿಸಲು ಮೊದಲು ಯತ್ನಿಸಬೇಕು. ಹಣವಿಲ್ಲದೆ ಈ ಕೆಲಸವಾಗದು. ಮತ್ತು ಈ ವೆಚ್ಚವನ್ನು ಬಹುಶಃ ಶಿಕ್ಷಕರೇ ಸಹಿಸಿಕೊಳ್ಳುವರು. ಅಧಿಕಾರಿಗಳ ಮುಕ್ಕಾಮಿನಲ್ಲಿ ಅವರಿಗಾಗಿ ಶಿಕ್ಷಕರು ಏನಾದರೂ ವೆಚ್ಚಮಾಡಿದ್ದರೆ ಆ ಎಲ್ಲ ಹಣವನ್ನು ಕೊಡುವದಕ್ಕೂ ಸರಿಯಾದ ಪಾವತಿಯನ್ನು ಪಡೆದುಕೊಳ್ಳುವದಕ್ಕೂ ತಪ್ಪಕೂಡದು. ಶಿಪಾಯಿಗಳು ಶಿಕ್ಷಕ ರಿಂದ ಇನಾಮು ತೆಗೆದುಕೊಳ್ಳಕೂಡದೆಂದು ಕಟ್ಟಪ್ಪಣೆ ಮಾಡಿರಬೇಕು.

ಮುಕ್ಕಾಮಿನಲ್ಲಿದ್ದಾಗ ತಾವು ಮಾಡಿಸಿಕೊಂಡ ಎಲ್ಲ ಕೆಲಸಗಳಿಗೆ ತಕ್ಕ ಸಂಬಳವನ್ನು ಕೊಡಲೇಬೇಕು. ಒಟ್ಟಿನ ಮೇಲೆ ಅಧಿಕಾರಿಗಳು ಮೇಲ್ವಿಚಾರಣೆಗಾಗಿ ಇಲ್ಲವೆ ತಪಾಸಣೆಗಾಗಿ ಬಂದು ಮುಕ್ಕಾಮು ಮಾಡಿದ ಸಂದರ್ಭದಲ್ಲಿ ಶಿಕ್ಷಕರ ಮೇಲಾಗಲಿ ಶಾಲೆಗಳ ಮೇಲಾಗಲಿ ಯಾವದೇ ತರದ ವೆಚ್ಚದ ಭಾರವು ಬೀಳಕೂಡದು.

೬. ತಪಾಸಣೆಯ ಕೆಲಸವು ಮುಗಿದ ಬಳಿಕ ಅಧಿಕಾರಿಗಳೂ ಶಿಕ್ಷಕರೂ ಶಾಲೆಯಲ್ಲಿ ಒಂದೆಡೆಗೆ ಕುಳಿತು ಶಾಲೆಯ ಕುಂದುಕೊರತೆಗಳ ಅಥವಾ ಅಡಚಣಿಗಳ ವಿಷಯವನ್ನು ಚರ್ಚೆಮಾಡಬೇಕು. ಶಾಲೆಯ ಮತ್ತು ಶಿಕ್ಷಣದ ಸುಧಾರಣೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಮನಬಿಚ್ಚಿ ಮಾತಾಡಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ಅಧಿಕಾರಿಗಳು ತಾವು ಇಳಿದುಕೊಂಡ ಸ್ಥಳಕ್ಕೆ ಶಿಕ್ಷಕರನ್ನು ಕರೆಯಿಸಲಾಗದು. ಶಿಕ್ಷಕರೇ ಅಧಿಕಾರಿಗಳನ್ನು ಬೇರೆಯಾಗಿ ಕಂಡು ತಮ್ಮ ವೈಯಕ್ತಿಕ ತೊಂದರೆಗಳನ್ನು ವಿವರಿಸುವದಕ್ಕಾಗಿ ಅಲ್ಲಿಗೆ ಹೋಗುವ ಮಾತು ಬೇರೆ. ಆದರೆ ಸಾಮಾನ್ಯವಾಗಿ ಭೆಟ್ಟಿ, ಚರ್ಚೆ ಇವು ಶಾಲೆಯಲ್ಲಿಯೇ ನಡೆಯಬೇಕು, ಶಾಲೆಯ ವೇಳೆಯಲ್ಲಿಯೇ ನಡೆಯಬೇಕು. ಶಿಕ್ಷಕೆಯರನ್ನಂತೂ ಶಾಲೆಯಲ್ಲಿಯೇ ಅಲ್ಲದೆ ತಾವು ಇಳಿದುಕೊಂಡ ಸ್ಥಳದಲ್ಲಿ ಎಂದೂ ಭೆಟ್ಟಿಯಾಗಕೂಡದು.

೭. ಪ್ರತಿಯೊಬ್ಬ ಮೇಲ್ವಿಚಾರಣೆಯ ಅಧಿಕಾರಿಯು ತನ್ನ ಅಧಿಕಾರಕ್ಕೊಳಪಟ್ಟ ಭಾಗ (ಬೀಟಿನ) ದ ಶಾಲೆಗಳ ಸುಧಾರಣೆಯ ಸಂಬಂಧದಿಂದ ನಿಶ್ಚಿತವೂ ಸುಸ್ಪಷ್ಟವೂ ಆದ ಗುರಿಯನ್ನು ಮುಂದಿಟ್ಟುಕೊಂಡಿರಬೇಕು. ಅವನ್ನೆಲ್ಲ ಮೂರು ವರುಷಗಳಲ್ಲಿ ನೆರವೇರಿಸುವ ಯೋಜನೆಯನ್ನು ಸಿದ್ಧಪಡಿಸಿಕೊಂಡು ಪ್ರತಿವರ್ಷ ಯಾವ ವಿಧದ ಕಾರ್ಯವನ್ನು ಎಷ್ಟು ಮಾಡಬೇಕೆಂಬುದನ್ನು ನಿರ್ಣಯಮಾಡಿಕೊಂಡಿರಬೇಕು. ಶಾಲೆಯ ಮತ್ತು ಬಾಲಕರ ಸಾಮಾನ್ಯ ಸ್ವಚ್ಛತೆ, ಕೈಬರೆಹ, ವಾಚನ, ವಾಚಾನಿಬಂಧ ಮತ್ತು ಲೇಖನಮೂಲಕವಾದ ನಿಬಂಧ, ಶಿಕ್ಷಣೋಪಕರಣಗಳು, ಶಾರೀರಿಕ ಶಿಕ್ಷಣ, ಅಭ್ಯಾಸಕ್ರಮದ ಹೊರಗಿನ ಚಟುವಟಿಕೆಗಳು ಇವುಗಳಲ್ಲಿ ಯಾವ ಪ್ರಕಾರದ ಸುಧಾರಣೆಗಳಾಗಬೇಕೆಂಬದನ್ನು ವಿವರಿಸುವ ಒಂದು ಪರಿಪತ್ರವನ್ನು ಹೊರಡಿಸಿ ತನ್ನ ಬೀಟಿನಲ್ಲಿಯ ಎಲ್ಲ ಶಾಲೆಗಳಿಗೆ ಕಳುಹಿಸಿಕೊಡಬೇಕು. ಪ್ರತಿಯೊಬ್ಬ ಅಧಿಕಾರಿಯು ತನ್ನ ಬೀಟಿನ ಶಾಲೆಗಳ ಶಿಕ್ಷಣ ವಿಷಯಕ ವೈಶಿಷ್ಟ್ಯವೇನೆಂಬುದನ್ನು ಒಡೆದು ತೋರವಂತೆ ಮಾಡುವ ಯತ್ನದಲ್ಲಿರಬೇಕು. ಅವನು ಶಿಕ್ಷಕರ ಸಮ್ಮೇಲನಗಳನ್ನು ಕೂಡಿಸಬೇಕು.

ಬಾಲಕರ ಕೈಬರೆಹ ಕೈಕೆಲಸ ಮೊದಲಾದವುಗಳ ಪ್ರದರ್ಶನಗಳನ್ನು ಏರ್ಪಡಿಸ ಬೇಕು. ಮಾದರಿಯ ಪಾಠಗಳನ್ನು ಕೊಡಿಸಬೇಕು, ಮತ್ತು ತನ್ನ ಬೀಟಿನೊಳಗಿನ ಗಾವಠೀ ಮತ್ತು ಖಾಸಗೀ ಶಾಲೆಗಳಿಗೂ ಇದೇ ರೀತಿಯಾಗಿ ಸಹಾಯ ಮಾಡ ಬೇಕು. ಬಾಲಕರಲ್ಲಿ ಬರೆಹದಿಂದಲೂ ಮಾತಿನಿಂದಲೂ ತಮ್ಮ ಮನೋಭಿಪ್ರಾಯು ಗಳನ್ನು ವ್ಯಕ್ತಪಡಿಸುವ ಶಕ್ತಿಯನ್ನು ಬೆಳಿಸುವದಕ್ಕಾಗಿ ವಿಶಿಷ್ಟ ಪ್ರಕಾರದ ಪ್ರಯತ್ನವು ನಡೆಯುಬೇಕಾಗಿದೆ. ಮೇಲ್ವಿಚಾರಣೆಯ ಅಧಿಕಾರಿಗಳು ವಾಚಾ ನಿಬಂಧ ಮತ್ತು ಲೇಖನನಿಬಂಧಗಳ ಒಂದು ಕ್ರಮಬದ್ಧವಾದ ಯೋಜನೆಯನ್ನು ತಯಾರಿಸಿ ತಮ್ಮ ಶಿಕ್ಷಕವರ್ಗದ ಮುಂದಿರಿಸಬೇಕು.

೮. ಪ್ರತಿಯೊಬ್ಬ ಮೇಲ್ವಿಚಾರಣೆಯ ಅಧಿಕಾರಿಯೂ ಶಾಲೆಗಳ ಬಾಹ್ಯ ಸ್ವರೂಪದಲ್ಲಿಯೂ ಒಲ್ಲಿ ಕಲಿಸುವ ವಿಷಯುಗಳಲ್ಲಿಯೂ ಮಾಡಬೇಕಾದ ವಿದ್ಯಾ ವಿಷಯಕ ಸುಧಾರಣೆಗಳ ಸಂಬಂಧದಿಂದ ಒಂದು ಯೋಜನೆಯನ್ನು ಸಿದ್ಧಪಡಿಸಿ ಅದರ ಒಂದು ಪ್ರತಿಯನ್ನು ಪ್ರತಿವರ್ಷ ಜೂನ್ ತಿಂಗಳ ಮೊದಲನೆಯ ವಾರದಲ್ಲಿ ತನ್ನ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೂ ಇನ್ನೊಂದು ಪ್ರತಿ ಯನ್ನು ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೂ ಕಳುಹಿಸಬೇಕು. ಹೆಣ್ಣುಮಕ್ಕಳ ಶಾಲೆಗಳ ಮೇಲ್ವಿಚಾರಣೆಯ ಅಧಿಕಾರಿಗಳು ಇದರ ಮೂರನೆಯ ದೊಂದು ಪ್ರತಿಯನ್ನು ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸ್‌ರಿಗೆ ಕಳಿಸಿ ಕೊಡಬೇಕು.

೯. ಜಿಲ್ಲೆಯ ಡೆ. ಎ. ಇನ್‌ಸ್ಪೆಕ್ಟರರೂ ಅಸಿ. ಡೆ. ಎ. ಇನ್‌ಸ್ಪೆಕ್ಟರರೂ ಅನುಕೂಲ ಪ್ರಸಂಗವು ಒದಗಿದಾಗಲೆಲ್ಲ ತಮ್ಮ ತಮ್ಮ ಕಾರ್ಯದ ವಿಮರ್ಶೆಗಾಗಿ ಒಂದೆಡೆಗೆ ಕೂಡಬೇಕು. ಜೂನ್ ತಿಂಗಳಲ್ಲಿ ತಮ್ಮ ತಮ್ಮ ಬೀಟುಗಳಿಗೆ ಹೋಗು ವದಕ್ಕೆ ಮೊದಲೊಮ್ಮೆ ಅಕ್ಟೋಬರ ತಿಂಗಳಲ್ಲೊಮ್ಮೆ ಹೀಗೆ ಎರಡು ಸಾರೆಯುಂತೂ ಒಂದೆಡೆಗೆ ಕೂಡಿ ತಾವು ಮಾಡಿದ ಕಾರ್ಯಗಳ ಸಿಂಹಾವಲೋಕನವನ್ನು ಮಾಡಿ ಕೊಳ್ಳಲೇಬೇಕು. ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ ಆಫೀಸರರೂ ಡೆ ಎ. ಇನ್‌ಸ್ಪೆಕ್ಟರರೂ ಪರಸ್ಪರ ಸ್ನೇಹಭಾವದಿಂದ ನಡೆದುಕೊಂಡು ಜಿಲ್ಲೆಯ ಶೈಕ್ಷಣಿಕ ಹಿತಸಂಬಂಧವನ್ನು ಕುರಿತು ಆಲೋಚನೆಮಾಡುವದಕ್ಕಾಗಿ ಮೇಲಿಂದ ಮೇಲೆ ಒಬ್ಬರನ್ನೊಬ್ಬರು ಕಂಡು ಮಾತಾಡುತ್ತಿರಬೇಕು. ಎ.ಓ., ಡೆ. ಎ. ಇನ್‌ಸ್ಪೆಕ್ಟರ್ ಮತ್ತು ಅಸಿ. ಡೆ. ಎ. ಇನ್‌ಸ್ಪೆಕ್ಟರರು ಇವರೆಲ್ಲರೂ ಆಡಷ್ಟು ಹೆಚ್ಚು ಸಾರೆ ಒಂದೆಡೆಗೆ ಕಲೆತು ವಿಚಾರವಿನಿಮಯ ಮಾಡುತ್ತಿರಬೇಕು. ಮೇಲ್ವಿಚಾರಣೆಯ ಅಧಿಕಾರಿಗಳು ತಾವು ಕೈಕೊಳ್ಳಬೇಕೆಂದಿರುವ ಶಿಕ್ಷಣವಿಷಯಕ ಸುಧಾರಣೆಯ

ಕಾರ್ಯಗಳಿಗೆ ಎಡ್ಮಿನಿಸ್ಟ್ರೇಟಿವ್ ಆಫೀಸರರ ಸಹಾಯ ಸಹಾನುಭೂತಿಗಳನ್ನು ದೊರಕಿಸಿಕೊಂಡಿರಬೇಕು. ಮತ್ತು ಜಿಲ್ಲೆಯೊಳಗಿನ ಶಾಲೆಗಳ ಸುಧಾರಣೆಯ ಯೋಜನೆಯನ್ನು ತಯಾರಿಸುವಾಗ ಎಡ್ಮಿನಿಸ್ಟ್ರೇಟಿವ್ ಆಫೀಸರರೊಡನೆ ಆಪಾ ಲೋಚನೆ ಮಾಡಿಕೊಂಡಿರಬೇಕು.

೧೦. ಸಂಸಾರದೊಳಗಿನ ಪ್ರತಿಯೊಂದು ಕಾರ್ಯಭಾಗದಲ್ಲಿಯೂ ಕೆಟ್ಟ ಜನರೂ ಒಳ್ಳೆಯ ಜನರೂ ಇದ್ದೇ ಇರುವರು. ಯಾರನ್ನೂ "ಇವನು ಕೆಟ್ಟ ಮನುಷ್ಯ" ಎಂದು ಅವನೇ ತನ್ನ ಕೃತಿಯಿಂದಲೇ ಕೆಟ್ಟವನಾಗಿ ತೋರಿಸಿಕೊಳ್ಳುವ ವರೆಗೂ ಪೂರ್ವಗ್ರಹ ಮಾಡಿಕೊಂಡಿರಲಾಗದು. ಇವರು ಕೆಟ್ಟವರು, ಎಂದು ಹೆಕ್ಕಿ ಇಡುವದಕ್ಕಿಂತ ಮೊದಲು ಅವನಿಗೆ ಅಥವಾ ಅವಳಿಗೆ ತನ್ನನ್ನು ಸುಧಾರಿಸಿ ಕೊಳ್ಳಲಿಕ್ಕೆ ಸಾಕಾದಷ್ಟು ಅವಕಾಶವನ್ನು ಕೊಡಲೇಬೇಕು. ಯಾವ ಶಿಕ್ಷಕ ರನ್ನೂ ಕತ್ತಲೆಯಲ್ಲಿ ಕೊಲೆಮಾಡಬಾರದು. ಕೆಟ್ಟ ಶಿಕ್ಷಕರೆಂದು ಹೇಳಲ್ಪಡುವಂಥ ಪ್ರತಿಯೊಬ್ಬರಿಗೂ ಅವರ ದೋಷಗಳೇನೆಂಬದನ್ನು ತೋರಿಸಿಕೊಡಬೇಕು. ಮತ್ತು ಆ ದೋಷಗಳನ್ನು ಸರಿಪಡಿಸಿಕೊಳ್ಳಲು ತಿಳಿಸಬೇಕು. ಶಿಕ್ಷೆಗೆ ಗುರಿಪಡಿಸುವ ದಕ್ಕಿಂತಲೂ ಮೊದಲು ಅವರಿಗೆ ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಸಾಕಷ್ಟು ಅವಕಾಶ ಕೊಡಲೇಬೇಕು. ಶಿಕ್ಷೆಯ ಮಾರ್ಗವನ್ನು ಅವಲಂಬಿಸುವದಕ್ಕಿಂತ ಮೊದಲು ಒಂದೆರಡು ಲೇಖೀ ಎಚ್ಚರಿಕೆಗಳನ್ನು ಕೊಟ್ಟಿರಬೇಕು. ಉಗ್ರವಾದ ಶಿಕ್ಷೆಗಿಂತಲೂ ಸಹಾನುಭೂತಿಪರವಾದ ಎಚ್ಚರಿಕೆಯೇ ಹೆಚ್ಚು ಸತ್‌ಪರಿಣಾಮ ವನ್ನುಂಟುಮಾಡುವದು.

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಿಕೆಯರ 'ರಿಫ್ರೆಶರ್ ಕೋರ್ಸ' ವರ್ಗ.

ಕಳೆದ ಮೇ ತಿಂಗಳಲ್ಲಿ ಇಲ್ಲಿಯ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಹಳೆಯ ಶಿಕ್ಷಿಕೆಯರ ಸಲುವಾಗಿ ಈ ವರ್ಗವು ನಡೆಯಿತು. ಪಿ. ಎಸ್. ಎಲ್. ಸಿ. ಪರೀಕ್ಷೆಗಾಗಿಯೂ ಹೆಣ್ಣುಮಕ್ಕಳ ಶಾಲೆಯಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟ ಏಳನೆಯ ಇಯತ್ತೆಗಾಗಿಯೂ ಗೊತ್ತುಪಡಿಸಲ್ಪಟ್ಟ ಅಭ್ಯಾಸಕ್ರಮದಲ್ಲಿ ಭೂಮಿತಿ ಜವಾಖರ್ಚು ಮೊದಲಾದ ಹೆಚ್ಚಿನ ವಿಷಯಗಳ ಸಮಾವೇಶವಾದದ್ದಲ್ಲದೆ ಗಣಿತ ಭಾಷಾ ಮೊದಲಾದ ವಿಷಯಗಳ ತರಗತಿಯೂ ಏರಿ ಶಿಕ್ಷಣದ ಕ್ರಮವೂ ಹೊಸ ಧೋರಣೆಯಿಂದ ನಡೆಯಬೇಕಾಗಿದೆ. ಈ ಬಗೆಯ ಬದಲಾವಣೆಗೆ ಅನುಸರಿಸಿ ಹಳೆಯ ಟ್ರೇಂಡ್ ಶಿಕ್ಷಿಕೆಯರು (ಒಂದೆಯ ವರ್ಷದ ಸರ್ಟಿಫಿಕೇಟನ್ನು ಪಡೆದಿದ್ದರೂ

ಸಹ) ಈ ವರ್ಗಗಳ ಮತ್ತು ಈ ವಿಷಯಗಳ ಶಿಕ್ಷಣವನ್ನು ಕೈಕೊಳ್ಳಲು ಅಸಮರ್ಥರಾಗಿರುವರು. ಮುಂದಿನ ವರ್ಷಗಳಲ್ಲಿ ಪಿ. ಎಸ್. ಎಲ್. ಸಿ. ಪರೀಕ್ಷೆಯು ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಒಂದೇ ಆಗುವ ವಿಚಾರಗಳು ಈಗಾಗಲೇ ಪ್ರಕಟವಾಗಿವೆ. ಟ್ರೇನಿಂಗ್ ಕಾಲೇಜದ ೨ನೆಯ ವರ್ಷದ ಅಭ್ಯಾಸಕ್ರಮವೂ ಪರೀಕ್ಷೆಯೂ ಇಬ್ಬರಿಗೂ ಒಂದೇ ಆಗಬೇಕೆಂಬ ಧೋರಣೆಯೂ ಪ್ರಸಿದ್ಧವಾಗಿ ಅಂಶತಃ ಪ್ರಚಾರದಲ್ಲಿಯೂ ಬಂದುಹೋಗಿದೆ. ಅರ್ಥಾತ್ ಇನ್ನು ಮುಂದೆ ಶಿಕ್ಷಣದ ಕ್ಷೇತ್ರದಲ್ಲಿ ಕೆಲವೊಂದು ವಿಶಿಷ್ಟ ವಿಷಯಗಳ ಹೊರತು ಮಿಕ್ಕವುಗಳಲ್ಲಿ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಅಭ್ಯಾಸಕ್ರಮವೂ ಶಿಕ್ಷಣವೂ ಒಂದೇ ಆಗಿಬಿಡುವದು ಅವಶ್ಯಕವೆನಿಸಿದೆ. ಆದ್ದರಿಂದ ಹಿಂದಿನ ಶಿಕ್ಷಿಕೆಯರನ್ನು ಈ ಹೊಸ ಧೋರಣೆಗೆ ಅನುಗೊಳಿಸುವದಕ್ಕಾಗಿ ಈ ವರ್ಗವು ನಡೆಯಿತು. ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಲೇಡಿ ಸುಪರಿಂಟೆಂಡೆಂಟರಾದ ಮಿಸ್ **ಎಲಾಯಿರ್ಸಾಬಾಯಿ**ಯವರು ಈ ಸಂದರ್ಭದಲ್ಲಿ ವಿಶೇಷ ರೀತಿಯಿಂದ ಶ್ರಮವಹಿಸಿ ಉತ್ಸಾಹದಿಂದ ಕೆಲಸ ಮಾಡಿದರು. ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಟ್ರೇನಿಂಗ್ ಕಾಲೇಜಗಳ ಶಿಕ್ಷಕರೂ ಬೇಸಿಕ್ ಟ್ರೇನಿಂಗ ಸೆಂಟರಿನ ಅಧ್ಯಾಪಕರೂ ಈ ಕೆಲಸದಲ್ಲಿ ಭಾಗವಹಿಸಿದ್ದರು ಮತ್ತು ಅಸಿಸ್ಟಂಟ ಇನ್‌ಸ್ಪೆಕ್ಟರರಾದ ಶ್ರೀ. **ಥಿಟೆ** ಸಾಹೇಬರೂ ಧಾರವಾಡ ಜಿಲ್ಹೆಯ ಡಿ. ಎ. ಇನ್‌ಸ್ಪೆಕ್ಟರರಾದ ಮಿ. **ಕೊಪ್ಪಳ**ರಾಯರೂ ಈ ಕಾರ್ಯಕ್ಕೆ ನೆರವಾಗಿದ್ದರು.

ಈ ವರ್ಗವು ಮೇ ತಿಂಗಳ ೮ನೆಯ ತಾರೀಖಿನ ದಿನ ಪ್ರಾರಂಭವಾಗಿ ೨೧ನೆಯ ತಾರೀಖಿಗೆ ಮುಗಿಯಿತು. ಆರಂಭದ ದಿವಸವೂ ಕೊನೆಯ ದಿವಸವೂ ನಮ್ಮ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ **ತಾವಡೆ**ಸಾಹೇಬರು ಆಗಮಿಸಿದ್ದು ಆಕಾಲದ ಅವರ ಭಾಷಣಗಳು ಮನನೀಯವಾಗಿರುವದರಿಂದ ಮುಂದೆ ಅವನ್ನು ಸಂಕ್ಷೇಪಿಸಿಕೊಡಲಾಗಿದೆ.

ಆರಂಭ ದಿನ— ಇದು ನಿಜವಾಗಿ ರಿಫ್ರೆಶರ್ ವರ್ಗವಲ್ಲ. ಹಿಂದೆ ಕಲಿತು ಮರಿನವಾದ ವಿಷಯಗಳನ್ನು ಪುನಃ ಸಂಸ್ಕಾರಗೊಳಿಸುವದಕ್ಕಾಗಿ ಪ್ರಾರಂಭಿಸಿದ ವರ್ಗಕ್ಕೆ ಈ ಹೆಸರು ಒಪ್ಪುವದು. ಆದರೆ ಇಲ್ಲಿ ನೆರೆದಿರುವ ಶಿಕ್ಷಿಕೆಯರು ಹಿಂದೆ ಎಂದೂ ಕಲಿಯದೆ ಇದ್ದ ಭೂಮಿತಿ ಜಮಾಖರ್ಚು ಮೊದಲಾದ ಹೆಚ್ಚಿನ ವಿಷಯಗಳನ್ನು ಈ ವರ್ಗದಲ್ಲಿ ಅಭ್ಯಾಸಮಾಡಬೇಕಾಗಿದೆ. ಈ ವರ್ಗಕ್ಕೆ ಬಂದಿರುವ ಶಿಕ್ಷಿಕೆಯರೆಲ್ಲರೂ ಜ್ಞಾನವೃದ್ಧರಾಗಿರುವಂತೆಯೇ ವಯೋವೃದ್ಧರೂ ಆಗಿರುವರು. ಅವರಿಗೆ ಈಗ ಅಭ್ಯಾಸಮಾಡುವ ರೂಢಿಯುಳಿದಿಲ್ಲ. ನನಗೂ ಹಿಂದೊಮ್ಮೆ, ನಾಲ್ವತ್ತೈದು ವರ್ಷ ವಯಸ್ಸಾದಾಗ, 'ಆಕ್ಸಫರ್ಡ' ವಿಶ್ವವಿದ್ಯಾಲಯಕ್ಕೆ

ವಿದ್ಯಾರ್ಥಿಯಾಗಿ ಹೋದ ಅನುಭವವಿದೆ. ಆದ್ದರಿಂದ ನೀವು ತುಂಬ ತೊಂದರೆಗೆ ಒಳಗಾಗಿರುವಿರೆಂಬದು ನನಗೆ ಗೊತ್ತು. ಆದರೂ ಧೈರ್ಯ ಉತ್ಸಾಹಗಳಿಂದ ಆದಷ್ಟು ಹೆಚ್ಚು ಜ್ಞಾನವನ್ನು ದೊರಕಿಸಿಕೊಂಡು ಹೆಣ್ಣುಮಕ್ಕಳು ಯಾವರೀತಿಯಿಂದಲೂ ಗಂಡುಮಕ್ಕಳಿಗಿಂತ ಕಡಿಮೆ ತರಗತಿಯವರಲ್ಲವೆಂಬದನ್ನು ಪ್ರಕಟಿಸುವ ಗುರಿಯನ್ನಿಟ್ಟುಕೊಂಡು ಶ್ರಮವಹಿಸಿ ಈ ವರ್ಗದಿಂದ ಆದಷ್ಟು ಹೆಚ್ಚು ಪ್ರಯೋಜನವನ್ನು ಹೊಂದುವರೆಂದು ನಾನು ನಂಬುವೆನು.

ಕೊನೆಯ ದಿನ—ಟ್ರೇ. ಕಾ. ದ ಲೇಡಿ ಸುಪರಿಂಟೆಂಡೆಂಟರ ಮತ್ತು ಇನ್ನಿತರ ಶಿಕ್ಷಕವರ್ಗದ ಪರಿಶ್ರಮದಿಂದ ಈ ವರ್ಗವು ಯಶಸ್ವಿಯಾಗಿ ಕೊನೆಗಂಡುದಕ್ಕಾಗಿ ನನಗೆ ತುಂಬ ಆನಂದವಾಗಿದೆ. ನಾನು ೧೨–೧೩ ವರ್ಷ ಪುಣೆಯ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲನಾಗಿದ್ದೆನು. ಶಿಕ್ಷಕವರ್ಗದ ಜ್ಞಾನಾಭಿವೃದ್ಧಿಗೆ ಕಾರಣವಾದ ಇಂಥ ವರ್ಗಗಳ ಮತ್ತು ಸಭೆಸಮ್ಮೇಲನಗಳ ವಿಷಯದಲ್ಲಿ ನನಗೆ ವಿಶ್ವಾಸ ಬಹಳ. ಪ್ರಾ. ಶಿಕ್ಷಕರು ಅಸಹಾಯಕರು. ಅವರಿಗೆ ಓದಲು ಶಿಕ್ಷಣವಿಷಯದ ಮೇಲೆ ತಕ್ಕ ಪುಸ್ತಕಗಳಿಲ್ಲ. ಹಳ್ಳಿಗಳಲ್ಲಿಯ ಸುಶಿಕ್ಷಿತರೆಂದರೆ ಅವರೇ. ಇಂಥ ಪರಿಸ್ಥಿತಿಯಲ್ಲಿ ಇವುಗಳಿಂದ ತುಂಬ ಪ್ರಯೋಜನವಾಗುವದೆಂದು ನನ್ನ ನಂಬುಗೆ ಇದೆ. ಆದ್ದರಿಂದ ನಾನು ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಮೊದಲಾದ ಮೇಲಿನ ಅಧಿಕಾರಿಗಳ ವಿರೋಧವನ್ನು ಕೂಡ ಲಕ್ಷಿಸದೆ ಇಂಥ ವರ್ಗಗಳನ್ನು ಪ್ರತಿವರ್ಷ ಪುಣೆಯಲ್ಲಿ ನಡೆಯಿಸುತ್ತಿದ್ದೆನು. ಇಂಗ್ಲಂಡ್ ಅಮೇರಿಕಾ ಮೊದಲಾದ ದೇಶಗಳಲ್ಲಿ ಪ್ರತಿಯೊಂದು ಸೂಟಿಯ ದಿನಗಳಲ್ಲಿ ಇಂಥ ವರ್ಗಗಳು ನಡೆಯುವವು. ಆದ್ದರಿಂದ ಪ್ರತಿ ವರ್ಷವೂ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಗಳಲ್ಲಿ ಇಂಥ ವರ್ಗಗಳು ನಡೆಯಲೇಬೇಕೆಂಬು ನನ್ನ ಅಭಿಪ್ರಾಯವಿದೆ.

ಶಿಕ್ಷಕರು, ತಪಾಸಣೆಯ ಅಧಿಕಾರಿಗಳು, ಅವರ ಮೇಲಿನ ಇನ್‌ಸ್ಪೆಕ್ಟರರು ಇವರೆಲ್ಲರ ಧ್ಯೇಯವೂ ಒಂದೆ. ವಿದ್ಯಾರ್ಥಿಗಳ ಕಲ್ಯಾಣವೆಂಬ ಒಂದೇ ಗುರಿಯನ್ನಿಟ್ಟುಕೊಂಡು ಇವರೆಲ್ಲರೂ ಕೆಲಸಮಾಡಬೇಕಾಗಿದೆ. ಶಾಲೆಗಳೊಳಗಿನ ಬಾಲಕ ಬಾಲಿಕೆಯರ ಉದ್ಧಾರ ಉತ್ಕರ್ಷಗಳೆಂಬ ಉಚ್ಚ ಹೇತುವಿನಿಂದ ಕೆಲಸ ಮಾಡುತ್ತಿರುವ ನಾವೆಲ್ಲರೂ ಒಂದೇ ಎಂದು ಭಾವಿಸಿ ನಡೆಯಬೇಕು. ಇದರಲ್ಲಿ ತಾರತಮ್ಯಕ್ಕೆ ಎಡೆಯಿಲ್ಲ. ನಿಮ್ಮಲ್ಲಿ ಕಲಿಯಲಿಕ್ಕೆ ಬರುವ ವಿದ್ಯಾರ್ಥಿನಿಯರ ಹಿತಚಿಂತನೆಯೇ ನಿಮ್ಮ ಯಾವತ್ತು ಕಾರ್ಯಕಲಾಪಗಳ ಗುರಿಯಾಗಿರಲಿ. ಇದರಿಂದ ನಿಮ್ಮ ಮತ್ತು ನಿಮ್ಮ ದೇಶದ ಕಲ್ಯಾಣವಾಗುವದು.

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಸ್ಕೂಲಿನ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ

ಎಪ್ರಿಲ್ ೧೯೪೦ ರಲ್ಲಿ ಪಾಸಾದವರು.

ಒಟ್ಟು ಗುಣಗಳು ೭೭೫

ಡಿ. ಎಸ್. ಬಿ. ಧಾರವಾಡ

ಹೆಸರು	ಗುಣಗಳು
ಕೃ. ನ. ಹಲರ್ಣಾಪುರ	೪೯೪
ವೀ. ಬ. ಬೆಳವತ್ತಿ	೪೪೧
ಪಾ. ರಾ. ಮಳಗಿ	೪೭೪
ಎ. ಸಿ. ಗುಬ್ಬಣ್ಣವರ	೪೫೪
ವೀ. ಚ. ಪಾಟೀಲ	೪೫೩
ಹ. ಗ. ಶಿಗ್ಗಾವಿ	೪೪೭
ಭೀ. ಗಂ. ಪುರದ	೪೪೦
ಫ. ತಿ. ಸುಣಗಾರ	೪೪೦
ಮು. ತಿ. ಜಾವೂರ	೪೩೭
ಅ. ಸಂ. ಹಿರೇಮಠ	೪೩೬
ಯ. ಮು. ಬಡಿಗೇರ	೪೩೬
ಸಂ. ನಾ. ಯಲ್ಲಪ್ಪಗೌಡರ	೪೩೧
ಹ. ಸಿ. ಹೊಲೇರ	೪೨೦
ಮು. ಹ. ಕುಡೇಕಾರ	೪೨೦
ಧ. ಮ. ಧರಣೆಪ್ಪಗೌಡರ	೪೦೭
ಗು. ಕ. ಬೀಲೇರಿ	೪೦೪
ಥಾ. ಯ. ಪಾಟೀಲ	೩೯೪
ಬ. ಅ. ಕುಲಕರ್ಣಿ	೩೯೫
ರಾ. ಬ. ಹಲವಾಲ	೩೯೦
ಶಿ. ಫ. ಕಿತ್ತೂರ	೩೯೦
ಶೇ. ಬಾ. ಪದಕಿ	೩೮೭
ಹ. ಫ. ಕಿಂದ್ರಿ	೩೮೬
ರಾ. ತಿ. ಕೊಣ್ಣೂರ	೩೮೨
ಗಂ. ಶಿ. ಮಠದ	೩೭೭
ಶಿ. ವೀ. ಹಿರೇಮಠ	೩೭೭
ಹೊ. ಹೊ. ನಾಯ್ಕರ	೩೭೫
ಜೀ. ಫ. ಉಮಚಗಿ	೩೭೫
ಹೊ. ಬ. ಗೌಡಪ್ಪಗೌಡರ	೩೭೨
ದು. ನಾ. ಮಾದರ	೩೬೭
ಫ. ಭೀ. ಬ್ಯಾಟಪ್ಪನವರ	೩೬೭
ಭ. ನೀ. ಚಲವಾದಿ	೩೬೬
ಯ. ಕೆಂ. ಪಾಟೀಲ	೩೬೬
ನೀ ಸಂ. ಬಾರಿಕೇರ	೩೬೪
ವೆ. ತಿ. ಅಧ್ಯಾಪಕ	೩೬೪
ಹ. ಭೀ. ನಾವಳ್ಳಿ	೩೬೧
ಮು. ಫ. ಪಿಂಜಾರ	೩೬೧
ಚ. ಭೀ. ಕಾಮರಡ್ಡಿ	೩೫೭
ಚಿ. ಕು. ವಿಭೂತಿ	೩೫೬
ಯ. ಅ. ಒಡ್ಡರ	೩೫೬
ಮೋ. ಚ. ಅಣ್ಣಿಗೇರಿ	೩೪೬
ಶಿ. ವೀ. ನೇಕಾರ	೩೪೩
ಹ. ಕೆಂ. ತಳವಾರ	೩೩೯

ತಿ. ಗೋ. ಕಣವಿ	೩೩೯
ಚ. ಬ. ಚಂದ್ರಶೇಖರಮಠ	೩೩೩
ಲಿಂ. ಕ. ಬೇಲೇರಿ	೩೩೩
ತಿ. ಯು. ಗಂಗಾಧರ	೩೨೪

ಡಿ. ಎಸ್. ಬಿ. ಬೆಳಗಾವಿ

ಕೃ. ಭೀ. ಪಾಟೀಲ	೫೨೯
ಮ. ಸೆ. ಕೇದನೂರ	೪೪೫
ಬ. ವೀ ಮೂಲೀಮನಿ	೪೭೯
ಶೇ. ಕೃ. ಮಾಹುಲಿ	೪೭೨
ಧ. ಬಾ. ಚೌಗಲೆ	೪೬೬
ಜಿ. ಚ. ಪಾಟೀಲ	೪೬೫
ಮೌ. ಮ. ಪಿಂಜಾರ	೪೬೨
ಪ. ಗು. ಕೊಕಟನೂರ	೪೫೪
ಸಿ. ಭೋ. ಪಾಟೀಲ	೪೫೨
ಭೀ. ಅ. ನರಸಾಯಿ	೪೪೦
ಲಿ. ಬಿ. ಜೀರಿಗವಾಡ	೪೩೪
ಬ. ಸಿ. ಮೇಳೇದ	೪೩೦
ಕ. ಅ. ಪಾಟೀಲ	೪೨೪
ರಾ. ಬ. ಪಾಟೀಲ	೪೨೪
ದಾ. ಬು. ಕಾಂಬಳೆ	೪೧೯
ಕೃ. ಗೋ. ಕುರಂದವಾಡ	೪೧೪
ಮೂ. ರಾ. ಗಲಗಲಿ	೪೧೨
ಬಾ. ತಾ. ಮೈಸಾಳೆ	೪೧೬
ಛಾ. ಚಾ. ಚೌಬಾರಿ	೪೧೩
ದಾ. ಬಾ. ಕುಲಕರ್ಣಿ	೩೯೯
ಗಿ. ದೇ. ಪಾಟೀಲ	೩೯೭
ಬಾ. ಮು. ಮಾದಗೌಡ	೩೯೬
ಚ. ಗ. ಹಿರೇಮಠ	೩೯೫
ಬಾ. ರಾ. ಅರಳೀಕಟ್ಟಿ	೩೪೫
ಶ. ಮು. ಬಡಿಗೇರ	೩೪೪
ಜಿ. ಅ. ಪಾಟೀಲ	೩೪೧
ಕಾ. ಗೌ. ಬಾಗವಾನ	೩೬೯
ಬ. ದು. ನಾವಲಗಿ	೩೬೨
ಹೋ. ವೀ. ಪಾಟೀಲ	೩೬೦
ರಾ. ಬ. ಪಾಟೀಲ	೩೬೦
ಚಿ. ಬ. ಸೊಪ್ಪಡಲ	೩೫೬
ತ. ಅ. ಚಿಕ್ಕೊಡಿ	೩೫೨
ದು. ವೀ. ಕರೀಕಟ್ಟಿ	೩೫೧
ರಾ. ಅ. ಇಜಂತಕರ	೩೪೯
ದ. ಶ. ಜಂಬಗಿ	೩೩೪
ಬಾ. ಶಿ. ಹುಡೇದ	೩೩೫
ಕೃ. ಭೀ. ದೇಶಪಾಂಡೆ	೩೩೨
ಗು. ಶಿ. ಕಿತ್ತೂರ	೩೨೪

ಡಿ. ಎಸ್. ಬಿ. ವಿಜಾಪುರ

ಗು. ಕೃ. ದೇಶಪಾಂಡೆ	೫೦೪
ತ. ಮ. ಹಾಳಕೇರಿ	೪೬೩
ಬ. ನು. ಮಠ	೪೬೧
ಹ. ಯ. ತಳವಾರ	೪೫೩
ವೀ. ದು. ಪಟ್ಟಣಸೆಟ್ಟಿ	೪೫೦
ಪಾ. ರಾ. ಪಾಟೀಲ	೪೪೯
ಕೃ. ಬ. ಕುಲಕರ್ಣಿ	೪೩೬
ಸು. ಲ. ಸರೂರ	೪೨೩
ವೆ. ಪು. ಜಾಲೀಹಾಳ	೪೨೨
ಬಾ. ಮ. ಸೂರ್ಯವಂಶಿ	೪೨೦
ಮ. ಮ. ಕುಂಬಾರ	೪೦೨
ರಾ. ಪು. ಶಾನುಭಾಗ	೪೦೨
ಕಾ. ಹು. ಇಳಕಲ್	೩೯೯
ಲ. ಲ. ಸುಣಗಾರ	೩೯೬

ಬ. ಚ. ಅಂಗಡಿ. ೩೯೪
ಸು. ಚ. ಎಲಿಗೋಡ ೩೮೫
ನ. ದಾ. ಪಿಂಜಾರ ೩೮೪
ರಾ. ಭೀ. ದಾಸರ ೩೮೩
ಗು. ಲಿ. ನಂದವಾಡಗಿ ೩೮೦
ನಿಂ. ಬ. ಪಾಟೀಲ ೩೫೧
ಸಿ. ಅ. ಪಾಟೀಲ ೩೬೭
ಲಿ. ಪ. ಪಾಟೀಲ ೩೬೪
ಸ. ಭೀ. ದಾಸರ ೩೬೦
ಆ. ಸು. ಆಶ್ರಿತ ೩೫೮
ಮು. ಬ. ಕವಟಗಿ ೩೫೨
ಸಿ. ಬ. ಕಮತರ ೩೩೫
ಯು. ಟಿ. ಒಡ್ಡರ ೩೩೦
ಹ. ಧು. ಛಪ್ಪರಬಂದ ೨೯೫

ಡಿ. ಎಸ್. ಬಿ. ಕಾರವಾರ

ಗ. ರಾ. ಸ್ವಾದಿ ೪೫೭
ಗೋ. ನಾ. ತೇಲಂಗ ೪೩೯
ಹ. ವೆಂ. ಪೈ. ೪೦೦
ಕು. ವಾ. ನಾಯಿಕ ೩೭೧
ವೆ. ಲಿ. ಸೆಟ್ಟಿ ೩೬೮
ರಾ. ಗೊ. ಸೆಟ್ಟಿ ೩೪೭
ಮು. ವೆಂ. ಭೋಮಕರ ೩೪೨

ಎಸ್. ಬಿ. ಎಲ್. ಎ. ಎಮ್. ಧಾರವಾಡ

ಹ. ಮು. ಕುಲಕರ್ಣಿ ೬೪೯
ಸ. ಗ. ದೀಕ್ಷಿತ ೪೧೯
ವೀ. ಬ. ಕೋರಿ ೩೭೯
ಬ. ಶಂ. ಪಾಣಿಗಟ್ಟಿ ೩೫೧
ಫ. ಗು. ಇಂಗಳಗಿಮಠ ೩೪೩
ಬು. ಬು. ಒಡ್ಡರ ೩೩೪

ಎಸ್. ಬಿ. ಎಲ್. ಎ. ಎಮ್. ಹುಬ್ಬಳ್ಳಿ

ಫ. ಚ. ಕುಲಕರ್ಣಿ ೪೩೬
ಸಂ. ಫ. ಮಾಳೆಕೊಪ್ಪ ೪೩೫
ಭೀ. ರಂ. ವಾಯಚಳ ೪೧೪
ದೇ. ಸಂ. ಪಾಟೀಲ ೪೧೦
ಸ. ಹು. ನವಲೂರ ೪೦೪
ಚ. ಬ. ಬೆಂಡಿಗೇರಿ ೪೦೩
ಶಿ. ನಾ. ನಲವಡಿ ೩೪೫
ವೀರು ಹಿರೇಮಠ ೩೪೫
ಚ. ಭ. ಭರಮಗೌಡರ ೩೫೧
ಶಿ. ಗ. ಗೊಡಚಿ ೩೪೫

ಎಸ್. ಬಿ. ಎಲ್. ಎ. ಎಮ್. ಗದಗ

ಅಂ. ಮಾ. ಸಿದ್ಲಿಂಗ ೪೫೩
ಕಾ. ಮು. ಹಳೇಮನಿ ೩೪೪
ಬಾ. ಶ್ರೀ. ಚವ್ಹಾಣ ೩೬೪
ಗ. ಸಿ. ಗಿರಿಮಠ ೩೧೯

ಎಸ್. ಬಿ. ಎಲ್. ಎ. ಎಮ್. ವಿಜಾಪೂರ

ಮು. ಅ. ಚಿಂತಾಮಣಿ ೪೭೨
ಹ. ಮು. ಅಂಬಿಗೇರ ೪೫೬
ಬ. ಸಿ. ಸಬರದ ೪೨೧
ಗು. ಬ. ಗಣಿ ೩೯೪
ಗು. ಸಿ. ದಿವೇಕರ ೩೬೨

ಸಿ. ಜೊ. ಜಾಡಗೌಡರ	೩೬೨
ಕು. ಸಿ. ಮುಧೋಳ	೩೫೮
ಅ. ಹ. ಪಾಟೀಲ	೩೫೪
ಇ. ನ. ಬಾಗೇವಾಡಿ	೩೨೫
ಕ್ರಿ. ಟ್ರಾ. ಸೆಟಿಲ್‌ಮೆಂಟ (ಗದಗ)	
ಧ. ರಾ. ಬೆನಕನಹಳ್ಳಿ	೪೧೧
ಮಿಶನ್ ಧೂಪದಾಳ (ಗೋಕಾಕ)	
ಶೆ. ಸಿ. ಕೊಂಪಿ	೩೮೫
ಗಾವಠಿಶಾಲಾ ಸವದತ್ತಿ	
ತ. ಶಿ. ಶಿವರಾಯನವರ	೩೫೪
ಗಾವಠಿಶಾಲಾ ಇಳಕಲ್	
ಮು. ಬ. ಜೊಳಚಗುಡ್ಡ	೩೯೧
ಶೀ. ಸಿ. ವ್ಹಿ. ವ್ಹಿ. ಕೆಕ್ಕಾರ	
ಮು. ಕು. ಹೆಗಡೆ	೪೯೬

ಪತ್ರಗಳ ಸಾರಾಂಶ

ಗುರ್ಲಹೊಸೂರ (ಜಿಲ್ಲೆ–ಬೆಳಗಾವಿ):— ತಾರೀಖು ೩–೫–೧೯೪೦ನೆಯ ದಿವಸ ಇಲ್ಲಿಯ ಶಾಲೆಯಲ್ಲಿ ಇನಾಮಿನ ಸಮಾರಂಭವಾಯಿತು. ಎಂಜನೀಯರಿಂಗ ಕಾಲೇಜ ಪುಣೆಯಲ್ಲಿಯ ಪ್ರೋ. ಖರೆ ಇವರು ಸಮಾರಂಭಕ್ಕೆ ಆಗಮಿಸಿ ೨೮ ರೂಪಾಯಿಗಳ ಪಾಟಿ, ಪುಸ್ತಕ, ನೋಟಬುಕ್ಕ ಮುಂತಾದವುಗಳನ್ನು ಕೊಟ್ಟರು. ಅವುಗಳನ್ನು ಹಂಚಲಾಯಿತು. ಪ್ರೊ. ಖರೆಯವರ ಈ ಉಪಕ್ರಮವು ಏಳೆಂಟು ವರುಷಗಳಿಂದ ತಪ್ಪದಲೆ ನಡೆದಿರುವದೆಂದು ಅಲ್ಲಿಯ ಹೆ| ಮಾ| ಬಾ. ದೇ. ಜೋಸಿಯವರು ತಿಳಿಸುತ್ತಾರೆ.

ಮಳಗಿ (ಜಿಲ್ಲೆ–ಕಾರವಾರ):— ಇಲ್ಲಿಯ ಶಾಲೆಯಲ್ಲಿ ಕಲಿತು ಈಗ ಸರಕಾರಿ ನವಕರರಾಗಿರುವ ಶ್ರೀ. ಗಣಪತಿ ಮಂಜಪ್ಪ ಅಂಡಗಿ ಶಾನಭಾಗ ಇವರು ಶಾಲೆಯ ಉಪಯೋಗಕ್ಕಾಗಿ ಒಂದು ಝಾಂಗಟೆಯನ್ನು ಪುಕ್ಕಟೆಯಾಗಿ ಕೊಟ್ಟರೆಂದು ಅಲ್ಲಿಯ ಹೆ| ಮಾ| ಕನ್ನಪ್ಪನವರು ತಿಳಿಸುತ್ತಾರೆ.

ಹುಬ್ಬಳ್ಳಿ :— ಉರ್ದು ಗ. ಮ. ಶಾ. ನಂ. ೧ ಸನ್ ೧೯೪೦ ರಲ್ಲಿ ಆದ ಪ್ರಾ. ಸ್ಕೂ. ಲಿ. ಸ ಪರೀಕ್ಷೆಯಲ್ಲಿ ಈ ಶಾಲೆಯಿಂದ ಕಳಿಸಿದ ೧೧ ಹುಡುಗರಲ್ಲಿ ೮ ಹುಡುಗರು ಉತ್ತಮ ರೀತಿಯಿಂದ ಪಾಸಾದರೆಂದು ಅಲ್ಲಿಯ ಅ. ಮಾ. ವೋಮಿನ ಇವರು ತಿಳಿಸುತ್ತಾರೆ.

ಬೆಳಗಾವಿ :— ಕನ್ನಡ ಗ. ಶಾ. ನಂ. ೧ ಈ ವರುಷ ಪ್ರಾ. ಸ್ಕೂ. ಲಿ. ಸ. ಪರಿಣಾಮವು ೧೦೦ಕ್ಕೆ ೫೮ರಂತೆ ಆಯಿತು. ಈ ಶಾಲೆಯ ಹುಡುಗರು ಬೆಳಗಾವಿ ಕೇಂದ್ರಕ್ಕೆ ೧೩ನೆಯ ೩ನೆಯ ನಂಬರುಗಳನ್ನು ಸಹ ಪಡೆದರೆಂದು ಏ. ಬೇ. ಕಟ್ಟಿಯವರು ತಿಳಿಸುತ್ತಾರೆ.

ಸನ್ ೧೯೪೦ ನೆಯ ಎಪ್ರಿಲ್‌ದಲ್ಲಿ ಆದ ಧಾರವಾಡದ ಗಂಡುಮಕ್ಕಳ ಟ್ರೇನಿಂಗ ಸ್ಕೂಲಿನ 'ಸರ್ಟಿಫಿಕೇಟ' ಪರೀಕ್ಷೆಯಲ್ಲಿ ಇನಾಮು ಪಡೆದವರ ವಿವರ

ಅ. ನ.	ಎಲ್ಲಿಯವರು	ಶಿಕ್ಷಕರ ಹೆಸರು	ಇನಾಮಿನ ಹೆಸರು	ಇನಾಮಿನ ಹಣ
				ರೂ. ಆ.
೧	ಮ್ಯು. ಸ್ಕೂ. ಬೋ. ವಿಜಾಪುರ	ಎಚ್. ಎಮ್. ಅಂಬಿಗೇರ	ಜಾಯಿಲ್ಸ ಪ್ರಾಯಿಝು ಮೊದಲನೆಯದು— ಶಿಕ್ಷಣದಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೫ರು.
೨	ಡಿ. ಸ್ಕೂ. ಬೋ. ಬೆಳಗಾವಿ	ಕೃ. ಭೀ. ಪಾಟೀಲ	ಜನರಲ್ ಪ್ರಾಯಿಝು ಮೊದಲನೆಯದು— ಶಿಕ್ಷಣದಲ್ಲಿ ಎರಡನೆಯ ನಂಬರು ಬಂದುದಕ್ಕಾಗಿ	೧೨ರು.
	ಡಿ. ಸ್ಕೂ. ಬೋ. ಬೆಳಗಾವಿ	ಕೃ. ಭೀ. ಪಾಟೀಲ	ಸರ್ ಜೇಮ್ಸ ಮಾಂಟೇಥ ಪ್ರಾಯಿಝು ಮೊದಲನೆಯದು— ಕನ್ನಡದಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೫ರು.
೪	ಡಿ. ಸ್ಕೂ. ಬೋ. ವಿಜಾಪುರ	ಜೀ. ಕೆ. ದೇಶಪಾಂಡೆ	ಸರ್ ಜೇಮ್ಸ ಮಾಂಟೇಥ ಪ್ರಾಯಿಝು ಎರಡನೆಯದು— ಕನ್ನಡದಲ್ಲಿ ಎರಡನೆಯ ನಂಬರು ಬಂದುದಕ್ಕಾಗಿ	೧೩ರು.
೫	ಶ್ರೀ. ಶಿ. ವಿ. ವಿ. ಕೆಕ್ಕಾರ	ಎಮ್. ಕೆ. ಹೆಗಡೆ	ಜನರಲ್ ಪ್ರಾಯಿಝು ಎರಡನೆಯದು— ಗಣಿತ ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೨ರು.
೬	ಡಿ. ಸ್ಕೂ. ಬೋ. ಕಾರವಾರ	ಜೀ. ಆರ್. ಸ್ವಾದಿ	ಜನರಲ್ ಪ್ರಾಯಿಝು ಮೂರನೆಯದು— ಚಿತ್ರಕಲೆ ಮತ್ತು ಕೈಕೆಲಸಗಳಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	
೧	ಡಿ. ಎಸ್. ಬೀ. ಬೆಳಗಾವಿ	ಕೃ. ಭೀ. ಪಾಟೀಲ	ಕೆ. ಎಮ್. ಚಾಟಫೀಲ್ಡ ಮೆಮೋರಿಯಲ್ ಪ್ರಾಯಿಝು— ಜನರಲ್ ಪ್ರೊಫೀಸಿಯನ್ಸಿ	೧೬ರು.

ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ

ಎಪ್ರಿಲ್ ೧೯೪೦ ರಲ್ಲಿ ಪಾಸಾದವರು.

ಒಟ್ಟು ಗುಣಗಳು ೭೦೦

ಮೊದಲನೆಯ ವರುಷ

ಡಿ. ಎಸ್. ಬಿ. ಧಾರವಾಡ

	ಹೆಸರು	ಗುಣಗಳು
೧	ಬಸವ್ವ ಪಾಟೀಲ	೫೫೫
೨	ಎಲ್ಲವ್ವ ದೇವಕರ	೫೪೪
೩	ಗಂಗವ್ವ ಕುರಗುಂದ	೫೬೯
೪	ಗುರುಸಿದ್ದವ್ವ ಮಾನವಿ	೫೧೨
೫	ಪ್ರೇಪೂಾ ಹೆಬ್ಬಾಳ	೪೫೯
೬	ರಮಾಬಾಯಿ ಮುಳಗೀಕರ	೫೫೪

ಡಿ. ಎಸ್. ಬಿ. ಬೆಳಗಾಂವಿ

೧	ದುಂಡವ್ವ ವಾಂಗಿ	೪೪೬
೨	ಸತ್ಯವ್ವ ಧಾಂಡ್ಲಿ	೪೦೫
೩	ಗುರವ್ವ ಜೌಗುಲೆ	೫೯೪

ಡಿ. ಎಸ್. ಬಿ. ವಿಜಾಪುರ

೧	ಗುರುಸಿದ್ದವ್ವ ಉಪ್ಪಾರ	೫೬೨
೨	ನೀಲವ್ವ ಮುಳವಾಡ	೫೫೯

ಎಸ್. ಬಿ. ಎಲ್. ಏ. ಎಮ್. ಹುಬ್ಬಳ್ಳಿ

೧	ಜನಾಬಾಯಿ ಕನ್ಯಾಳ	೬೭೬
೨	ಕಮಲಾಬಾಯಿ ಮಾಳವಾಡೆ	೫೩೬

ಎಸ್. ಬಿ. ಎಲ್. ಏ. ಎಮ್. ವಿಜಾಪುರ

೧	ನೀಲವ್ವ ಜಂಗಿನ	೪೧೦
೨	ಅಮೃತವ್ವ ಮಠಪತಿ	೫೫೪

ವನಿತಾ ಸೇವಾ ಸಮಾಜ, ಧಾರವಾಡ

೧	ಬಸವಣ್ಣೆವ್ವ ಶೀಲವಂತ	೫೫೪
೨	ರುಕ್ಮಿಣಿಬಾಯಿ ಗೋಸಾವಿ	೫೧೩

ರೋ. ಕ್ಯಾ. ವಿ. ಗುಳೇದಗುಡ್ಡ

೧	ಅಗ್ನೇಸವ್ವ ಉಳ್ಳೇಗಡ್ಡಿ	೫೯೦

ಕೆ. ಎಲ್. ಈ. ಸೋ. ಪ್ರಾ. ಶಾ. ಧಾರವಾಡ

೧	ಯಮನವ್ವ ಜವಾಣ	೫೩೯

ಹೊರಗಿನಿಂದ-ಹಳೆಯ ಕ್ರಮ

೧	ಬಸವಣ್ಣೆವ್ವ ಹೊಂಬಳ, ಒಂದೇ ವಿಷಯದಲ್ಲಿ ಕುಳಿತಿದ್ದರು ಪಾಸ	೪೫೩

ಎರಡನೆಯ ವರುಷ

ಒಟ್ಟು ೭೭೫ ಗುಣಗಳು

ಡಿ. ಎಸ್. ಬಿ. ಧಾರವಾಡ

೧	ಸೀತಾಬಾಯಿ ಕುಲಕರ್ಣಿ	೪೦೦
೨	ಸಾವಿತ್ರವ್ವ ಕೊಪ್ಪದ	೫೪೪

೩ ತಾಯವ್ವ ಲಾಟಿ ೪೦೭
೪ ಮಗ್ದಾಲಿನ್ ರೋಡ್ರಿಗಸ್ ೪೦೨
೫ ಎಲ್ಲವ್ವ ಹಡಪದ ೪೨೩

ಡಿ. ಎಸ್. ಬಿ. ಬೆಳಗಾಂವಿ

೧ ಪಾರ್ವತೆವ್ವ ಕಟ್ಟಿ ೩೭೪
೨ ಭಾಗೀರಥಿಬಾಯಿ ಅಸೋದೆ ೩೫೬
೩ ಗುರವ್ವ ಉಳ್ಳೇಗಡ್ಡಿ ೩೪೧
೪ ಚಂದ್ರಾಬಾಯಿ ಪ್ರಭು ೩೩೧
೫ ರುದ್ರವ್ವ ಅಸುಂಡಿ ೪೦೧
೬ ವೀರವ್ವ ಯಲ್ಲಾಯಿಕರ ೪೫೦
೭ ಸಾವಿತ್ರೆವ್ವ ಲಟ್ಟೆ ೪೯೬

ಡಿ. ಎಸ್. ಬಿ. ವಿಜಾಪುರ

೧ ಯಮನವ್ವ ತಳವಾರ ೩೪೬
೨ ಯಮನವ್ವ ಗಳವೆ ೩೪೫
೩ ಸಿದ್ದಲಿಂಗವ್ವ ಸಜ್ಜನರ ೫೦೪

ಡಿ. ಎಸ್. ಬಿ. ಕಾರವಾರ

೧ ಮುದ್ದಾಬಾಯಿ ಕಾನಡೆ ೪೫೬

ಎಸ್. ಬಿ. ಎಮ್. ಧಾರವಾಡ

೧ ತಂಗೆವ್ವ ಕಂಕೂರ ೪೩೫
೨ ಸೋಸೂಬಾಯಿ ಕ್ಷೀರಸಾಗರ ೪೪೯

ಎಸ್. ಬಿ. ಎಮ್. ಹುಬ್ಬಳ್ಳಿ

೧ ವೀರವ್ವ ಬ್ಯಾಲಾಳ ೩೪೯
೨ ಗುರುಸಿದ್ದವ್ವ ಅಂಗಡಿ ೩೪೨

ಎಸ್. ಬಿ. ಎಮ್. ಗದಗ

೧ ರುಕ್ಮಾಬಾಯಿ ನಿಗದೆ ೩೪೭

ಎಸ್. ಬಿ. ಎಮ್. ವಿಜಾಪುರ

೧ ಗುರುಲಿಂಗವ್ವ ಕಪಲೆ ೪೦೪

ಸೆಟಿಲ್‌ಮೆಂಟೆ ವಿಜಾಪುರ

೧ ಚಂದ್ರವ್ವ ಕಾತನಳ್ಳಿ ೩೬೫

ವನಿತಾ ಸೇವಾ ಸಮಾಜ ಧಾರವಾಡ

೧ ಸೀತಾಬಾಯಿ ಲಿಂಗದ್ಯೊನ ೪೧೩

ಎಮ್. ಈ. ಮಿಶನ್ ಧುಪದಾಳ

೧ ಪಾವುಲೀನಾ ಮೋಸೆಸ್ ೪೪೧

ಸ್ವೀಕಾರ

ಈ ಕೆಳಗೆ ಕಾಣಿಸಿರುವ ಪುಸ್ತಕಗಳು ವಿಮರ್ಶೆಗಾಗಿ ನಮ್ಮ ಕಡೆಗೆ ಬಂದಿರುವವು.

೧. **ಶರೀರ ಶಿಕ್ಷೆ**:— ಲೇ. ಪ್ರ. ಶ್ರೀ. ಜ. ಬಾಪಟ. ಮದಿಹಾಳ— ಧಾರವಾಡ ಬೆಲೆ ೩ ರೂ.

೨. **ಪುರಾಣಿಕ ಭಾಗೀರಥಿಬಾಯಿಯವರ ಚರಿತ್ರೆ**:— ಪ್ರಧಾನ ಕಾರ್ಯದರ್ಶಿ, ವನಿತಾ ಸೇವಾಸಮಾಜ ಧಾರವಾಡ. ಲೇ. ನಾರಾಯಣ ಶರ್ಮ ಬೆಲೆ ೮ ಆಣೆ.

೩. **ಪ್ರಕೃತಿ ವಿಮರ್ಶೆ**:— (ಳನೆಯ ಇಯತ್ತೆಯದು.) ಲೇ. ಪ್ರ. ಜಿ. ಡಿ. ಅಮರಗೋಳಮಠ, ಹೆ। ಮಾ। ಪಾರಿಶವಾಡ. **ಬೆಲೆ ೪ ಆಣೆ.**

—ಸಂ.

ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಶಾಲೆಗಳಲ್ಲಿ ಪಾಠಪುಸ್ತಕಗಳಂತೆ ಉಪಯೋಗಿಸತಕ್ಕ ಕನ್ನಡ ಪುಸ್ತಕಗಳ ಪಟ್ಟಿಯು

(ಮಾರ್ಚ ೧೯೪೦ ರ ಪ್ರಾಥಮಿಕ ಶಿಕ್ಷಣದ ಅಂಕದಲ್ಲಿಯು ೧೬ನೆಯ ಪುಟದಿಂದ ಮುಂದೆ ಸಾಗಿದ್ದು.)

ತರಗತಿ	ಪುಸ್ತಕಗಳ ಹೆಸರುಗಳು	ಮುದ್ರಣ	ಬೆಲೆ	ಗ್ರಂಥಕರ್ತರು	ಪ್ರಕಾಶಕರು
ಬಾ. ವ.	ಹೂಗನ್ನಡ ಪಾಠಮಾಲೆ ಒಂದನೆಯ ಪುಸ್ತಕ	೧೯೩೯	೦–೨–೦	ಶಿವರಾಮ ಕಾರಂತ	ಶೇಣ್ಯೈ ಬಂಧುಗಳು ಮಂಗಳೂರ
೧	,, ಎರಡನೆಯ ಪುಸ್ತಕ	,,	೦–೨–೦	ಸದರ	ಸದರ
೨	,, ಮೂರನೆಯ ಪುಸ್ತಕ	೧೯೩೭	೦–೩–೦	ಸದರ	ಸದರ
೩	,, ನಾಲ್ಕನೆಯ ಪುಸ್ತಕ	,,	೦–೪–೦	ಸದರ	ಸದರ
೪	,, ಐದನೆಯ ಪುಸ್ತಕ	,,	೦–೫–೦	ಸದರ	ಸದರ
೫	೧ ,, ಆರನೆಯ ಪುಸ್ತಕ	೧೯೩೬	೦–೬–೦	ಸದರ	ಸದರ
	೨ ನಾಡ ನೆಲೆಗಾರ	..	೦–೯–೦	ಎಸ್. ಎಸ್. ಕುಲಕರ್ಣಿ ಧಾ.	ಎಸ್. ಎಸ್. ಕುಲಕರ್ಣಿ ಧಾರವಾಡ
	೩ ಕವಿತಾ ಕುಸುಮ ಮಂಜರಿ ಭಾಗ ೧	೧೯೩. ಆ.	೦–೫–೦	ಎನ್. ವ್ಹಿ. ಕುರಡಿ ಧಾರವಾಡ	ಎನ್. ವ್ಹಿ. ಕುರಡಿ ಧಾರವಾಡ
	೪ ಕನ್ನಡ ಐದನೆಯ ಪುಸ್ತಕ	೧೯೩೭	೦–೬–೦	ಬಾಸೆಲ್ ಮಿ. ಬು. ಡಿ. ಮಂ.	ಮ್ಯಾಕಮಿಲನ್ ಕಂಪನಿ ಮುಂಬಯಿ
೬	೧ ಹೂಗನ್ನಡ ಪಾಠಮಾಲೆ ಏಳನೆಯ ಪುಸ್ತಕ	೧೯೩೬	೦–೬–೦	ಶಿವರಾಮ ಕಾರಂತ	ಶೇಣ್ಯೈ ಬಂಧುಗಳು ಮಂಗಳೂರ
	೨ ಕವಿತಾ ಕುಸುಮ ಮಂಜರಿ ಭಾಗ ೨	೧೯೩. ಆ.	೦–೫–೦	ಎನ್. ವ್ಹಿ. ಕುರಡಿ ಧಾರವಾಡ	ಎನ್. ವ್ಹಿ. ಕುರಡಿ ಧಾರವಾಡ
	೩ ಸತ್ಕಥಾ ಲಾಪ	..	೦–೮–೦	ಎವ್ಹ್. ಪಿ. ಪೂಜಾರ ಧಾರವಾಡ	ಎವ್ಹ್. ಪಿ. ಪೂಜಾರ ಧಾರವಾಡ
	೪ ಕನ್ನಡ ಆರನೆಯ ಪುಸ್ತಕ	೧೯೩೮	೦–೭–೦	ಬಾಸೆಲ್ ಮಿ. ಬು. ಡಿ. ಮಂ.	ಮ್ಯಾಕಮಿಲನ್ ಕಂಪನಿ ಮುಂಬಯಿ
೭	೧ ಹೂಗನ್ನಡ ಪಾಠಮಾಲೆ ಎಂಟನೆಯ ಪುಸ್ತಕ	೧೯೩೬	೦–೬–೦	ಶಿವರಾಮ ಕಾರಂತ	ಶೇಣ್ಯೈ ಬಂಧುಗಳು ಮಂಗಳೂರ
	೨ ಕನ್ನಡ ಏಳನೆಯ ಪುಸ್ತಕ	೧೯೩೮	೦–೮–೦	ಬಾಸೆಲ್ ಮಿ. ಬು. ಡಿ. ಮಂ.	ಮ್ಯಾಕಮಿಲನ್ ಕಂಪನಿ ಮುಂಬಯಿ
	೩ ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ	೧೯೩೯	೧–೦–೦	ಕುರಡಿ ಮತ್ತು ಪೂಜಾರ	ಎನ್. ವ್ಹಿ. ಕುರಡಿ ; ಎವ್ಹ್. ಪಿ. ಪೂಜಾರ ಧಾರವಾಡ

ಧಾರವಾಡ ಮ್ಯುನಸಿಪಲ್ ೫ನೇ ನಂಬರ ಕನ್ನಡ ಗಂಡು ಮಕ್ಕಳ ಶಾಲೆಯ ವಿಜಯೋತ್ಸವದ ದ್ವಿತೀಯ ವಾರ್ಷಿಕ ಸಮಾರಂಭವು.

ನಮ್ಮ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಎಸ್. ಆರ್. ತಾವಡೆ ಎಂ. ಎ., ಇವರ ಅಧ್ಯಕ್ಷತೆಯಲ್ಲಿ ಧಾರವಾಡ ಮ್ಯುನಸಿಪಾಲಟಿಯ ವಾರ್ಷಿಕ ಬಕ್ಷೀಸ ಸಮಾರಂಭವು ತಾ॥ ೪-೫-೪೦ ಇಸ್ವಿ ಶನಿವಾರ ಪ್ರಾತಃಕಾಲ ೪॥ ಗಂಟೆಗೆ ಮ್ಯುನಸಿಪಲ್ ಬಯಲಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಆ ಸಭೆಯಲ್ಲಿ, ೫ನೇ ನಂಬರ ಕನ್ನಡ ಶಾಲೆಯ ಗಂಡು ಮಕ್ಕಳು ಮ್ಯುನಸಿಪಲ್ ಏರಿಯಾದೊಳಗಿನ ಯಾವತ್ತೂ ಪ್ರಾಥಮಿಕ ಶಾಲೆಗಳ ಕೂಡ ಆಟವಾಡಿ, ಹುಡುತುತು, ಖೋ, ಖೋ, ಕುಂಟು ಮುಟ್ಟಾಟ ಈ ಮೂರೂ ಆಟಗಳಲ್ಲಿ ಗೆದ್ದುದರಿಂದ ಅಧ್ಯಕ್ಷರು ಈ ಶಾಲೆಯ ಬಾಲಕರಿಗೆ ಒಂದು ಸೀಲ್ಡು ೩ ಕಪ್ಪು, ೨೯ ಮೆಡಲ್‌ಗಳನ್ನು ದಯಪಾಲಿಸಿ ಒಂದೇಸವನೆ ಎರಡು ವರ್ಷ ಗೆದ್ದುದಕ್ಕೆ ಹುಡುಗರನ್ನು ಶ್ಲಾಘಿಸಿದರು.

ಈ ವಿಜಯೋತ್ಸಾಹದ ಬಾಲಕರು ತಮಗಾದ ಆನಂದವನ್ನು ವ್ಯಕ್ತಪಡಿಸಲು ಶ್ರೀಮಾನ್ ಎಲ್. ಆರ್. ಮಂಕಣಿ ಬಿ. ಎ. ಎಲ್. ಎಲ್. ಬಿ. ಜೆಆರಮನ್. ಸ್ಕೂಲಬೋರ್ಡ ಧಾರವಾಡ ಇವರ ಅಧ್ಯಕ್ಷತೆಯ ಕೆಳಗೆ ರವಿವಾರ ತಾ॥ ೫-೫-೧೯೪೦ ಇ. ಸಂಜೆಯ ೪॥ ಗಂಟೆಗೆ ಶಾಲೆಯ ಆಟದ ಅಂಗಳದಲ್ಲಿ ಸಭೆಯನ್ನು ಕರೆದರು. ಸಭೆಯ ಪಟಾಂಗಣವು ತಳಿರು ತೋರಣಗಳಿಂದಲೂ ಧ್ವಜ ಪತಾಕೆಗಳಿಂದಲೂ ನೀತಿಯ ವಾಕ್ಯಗಳ ಬೋರ್ಡುಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಸಭೆಗೆ ಮ್ಯುನಸಿಪಲ್ ಮೆಂಬರರೂ, ಸ್ಕೂಲ ಬೋರ್ಡಿನ ಸದಸ್ಯರೂ ಊರೊಳಗಿನ ಪ್ರಮುಖ ನಾಗರಿಕರೂ, ಬಾಲಕರ ಪಾಲಕರೂ ಮ್ಯುನಸಿಪಲ್ ಶಾಲೆಗಳ ಶಿಕ್ಷಕ ಶಿಕ್ಷಿಕೆಯರೂ, ಊರೊಳಗಿನ ವಿದ್ಯಾವತಿಯರಾದ ಸ್ತ್ರೀಯರೂ ಆಗಮಿಸಿದ್ದರು. ಸಭೆಯ ಸ್ಥಳವು ಜನಸಂದಣಿಯಿಂದ ಕಿಕ್ಕಿರಿದಿತ್ತು? ನಿಯೋಜಿತ ಅಧ್ಯಕ್ಷರು ಸಭೆಯ ಸ್ಥಳಕ್ಕೆ ಬಂದೊಡನೆ ಬಾಲಕರು 'ವಂದೇ ಮಾತರಂ' ಜಯಘೋಷ ಮಾಡಿ ಲಾಠಿಯ ಸಲಾಮಿನಿಂದ ಸತ್ಕರಿಸಿದರು. ಅಧ್ಯಕ್ಷರು ತಮ್ಮ ಸ್ಥಳವನ್ನು ಅಲಂಕರಿಸಿದ ಮೇಲೆ ಶಾಲೆಯ ಬಾಲಕರು ಅಧ್ಯಕ್ಷರ ಹಾಗೂ ಸಭೆಗೆ ಬಂದ

ನಾಗರಿಕರನ್ನು ಕುರಿತು ಸ್ವಾಗತ ಪದಗಳಿಂದ ಸ್ವಾಗತಿಸಿದ ನಂತರ ಶಾಲೆಯ ಹೆಡ್‌ಮಾಸ್ತರರು ಶಾಲಾ ವರದಿಯನ್ನು ಓದಿದರು. ಬಳಿಕ ಚಿಕ್ಕ ಬಾಲಕರು ಶೃಂಗಾರ ಹಾಗು ವೀರರಸ ಪ್ರಧಾನವಾದ ಕೆಲವು ಪದಗಳನ್ನೂ ಹಾಡುಗಳನ್ನೂ ಹಾಡಿದ ನಂತರ ಅಧ್ಯಕ್ಷರು ಆಟಗಳಲ್ಲಿ ಗೆದ್ದು ಒಂದು ಸೀಲ್ಡು ೩ ಕಪ್ಪು ೨೯ ಮೆಡಲ್‌ಗಳನ್ನು ದೊರಕಿಸಿದುದಕ್ಕೆ ಬಾಲಕರನ್ನು ಶ್ಲಾಘಿಸಿ ಅವರಿಗೆ ಮೆಡಲ್ ಗಳನ್ನೂ ಗಾಂಧೀಟೊಪ್ಪಿಗೆಗಳನ್ನೂ, ಪುಸ್ತಕಗಳನ್ನೂ ಇನಾಮು ಕೊಟ್ಟರು. ಮತ್ತು ಬಾಲಕರಿಗೆ ಉಪದೇಶಪರವಾದ ಭಾಷಣವನ್ನು ಮಾಡಿ ಆಟಗಳಲ್ಲಿ ಒಂದೇ ಸವನೆ ಎರಡು ವರ್ಷ ಗೆದ್ದುದಕ್ಕೆ ಬಾಲಕರನ್ನು ಕೊಂಡಾಡಿ ಕಲಿಸಿದ ಶಿಕ್ಷಕರನ್ನು ಅಭಿನಂದಿಸಿದರು. ಶಾಲೆಗೆ ಇರುವ ಅಡಚಣೆಗಳು ಬೇಗನೆ ದೂರಾಗುವಂತೆ ಪ್ರಯತ್ನಿಸುವೆನೆಂದು ಅಭಿವಚನವನ್ನಿತ್ತು ತಮ್ಮ ಭಾಷಣವನ್ನು ಮುಗಿಸಿದರು.

ಬಳಿಕ ಶಾಲೆಯ ಹೆಡ್‌ಮಾಸ್ತರರು ಅಧ್ಯಕ್ಷರ ಹಾಗು ಯಾವತ್ತೂ ನಾಗರಿಕರ, ವ್ಯವಸಾಯ ಬಂಧು ಭಗಿನಿಯರ, ನೆರೆದ ಸಭ್ಯಗೃಹಸ್ಥರ ಆಭಾರವನ್ನು ಮನ್ನಿಸಿ, ತಾವು ರಜೆಯ ಮೇಲೆ ಇದ್ದಾಗ ಸಹ ಒಳ್ಳೇ ದಕ್ಷತೆ ವಹಿಸಿ ಕಲಿಸಿದ ಎಂ. ಮಾಡೊಳ್ಳಿ, ಎಂ. ಅಸುಂಡಿ, ಎಂ. ಸಾಧನಿ ಇವರ ಆಭಾರವನ್ನು ಮನ್ನಿಸಿದರು. ಮತ್ತು ಬಾಲಕರ ಮೆರವಣಿಗೆಯ ಕಾಲಕ್ಕೆ ಯಾವತ್ತೂ ಹುಡುಗರನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ಎಲ್ಲರಿಗೂ ಹಾಲು, ಸಕ್ಕರೆ ಹಣ್ಣುಗಳಿಂದ ಸತ್ಕರಿಸಿ ೨೪ ಗಾಂಧೀ ಟೊಪ್ಪಿಗೆಗಳನ್ನು ಇನಾಮು ಕೊಟ್ಟ ಶ್ರೀಮಾನ್ ಕುಮಾರ ಸ್ವಾಮಿಗಳವರು ಸವಕಲ್ಯಾಣಮಠ ಭೂಸಗಲ್ಲಿ ಧಾರವಾಡ ಇವರ; ಸಭೆಯಲ್ಲಿಯೇ ಮಿಠಾಯಿ ಹಂಚಲಿಕ್ಕೆ ಎರಡು ರೂಪಾಯಿ ಕೊಟ್ಟ ಶ್ರೀ. ಬಸವಂತಪ್ಪನವರು ಹಾವೇರಿ ಇವರ, ಹಾಗು ಒಂದು ಬೆಳ್ಳಿಯ ಪದಕವನ್ನು ಇನಾಮಾಗಿ ಕೊಟ್ಟ ಎಂ. ಪಟ್ಟಣಶೆಟ್ಟಿ ಡ್ರಿಲ್ ಮಾಸ್ತರ, ಇವರೆಲ್ಲರ ಆಭಾರವನ್ನು ಮನ್ನಿಸಿ ಪೂಮಾಲಾದಿಗಳಿಂದ ಅಧ್ಯಕ್ಷರ ಹಾಗು ನೆರೆದ ಸಭಿಕರನ್ನು ಸತ್ಕರಿಸಿದ ಬಳಿಕ ರಾಷ್ಟ್ರಗೀತೆಯಾಗಿ ಸಭೆಯು ಮುಕ್ತಾಯವಾಯಿತು.

ತಮ್ಮ ಸೇವಕ,
ಕ. ಬ. ಮುಮ್ಮಿಗಟ್ಟಿ,
ಹೆಡ್‌ಮಾಸ್ತರ,
೫ನೇ ನಂ. ಕ. ಗಂ. ಮ. ಶಾಲಾ, ಧಾರವಾಡ

ಧಾರವಾಡ
ತಾ. ೨೩-೫-೧೯೪೦

ಧಾರವಾಡದ ಕನ್ನಡ ಟೆಕ್ಸ್ಟ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು.

ಕ್ರ. ಸ.	ಪುಸ್ತಕಗಳ ಹೆಸರುಗಳು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕೆ ಮಂಜೂರು.
೪	ನಮ್ಮ ಜಗತ್ತು (೧೯೧೨. ಆ. ೧೯೩೯)	..	ಮ್ಯಾಕಮಿಲನ್ ಮತ್ತು ಕಂ. ಮುಂಬಯಿ	೧–೮–೦	ಮಾಧ್ಯಮಿಕ ಶಾಲೆ ಟ್ರೈ. ಸ. ಪಠ್ಯಪುಸ್ತಕ
೫	ನಾಯಕ ಮಣಿ (೧೯೧೨. ಆ. ೧೯೩೫)	ವಿದ್ವಾನ್. ಎಮ್. ನಂಜುಂಡ ಶಾಸ್ತ್ರಿ	ವಿದ್ವಾನ್ ಎಮ್. ನಂಜುಂಡ ಶಾಸ್ತ್ರಿ ಚಾಮರಾಜಪೇಟೆ ಬೆಂಗಳೂರು	೧–೦–೦	ಪ್ರಾ. ಮಾ. ಟ್ರೈ. ವಿದ್ಯಾರ್ಥಿಗಳ ವಾಚನಾಲಯ
೬	ಕನ್ನಡ ಹೊಸ ಬಾಲಬೋಧೆ (೧೯೧೨. ಆ. ೧೯೩೯)	ಎಸ್. ಎಸ್. ಗುರಿಕಾರ	ಎಸ್. ಎಸ್. ಗುರಿಕಾರ ಲಕ್ಷ್ಮೇಶ್ವರ (ಜಿ. ಧಾ.)	೦–೧೧–೬	ಪ್ರಾ. ಪಠ್ಯಪುಸ್ತಕ
೭	ಶಿಕ್ಷಣದ ಮೂಲತತ್ವಗಳು	..	ಪ್ರಾಥಮಿಕ ಶಿಕ್ಷಣ ಪ್ರಸಾರ ಮಂ. ಧಾರವಾಡ	೧–೦–೦	ಪ್ರಾ. ಮಾ. ಟ್ರೈ. ವಿದ್ಯಾರ್ಥಿಗಳ ವಾಚನಾಲಯ ಹಾಗೂ ಶಿಕ್ಷಕರ ವಾಚನಾಲಯ
೮	ಶ್ರೀ. ರಾಮಕೃಷ್ಣ ಪರಮಹಂಸರ ನೀತಿಯ ಕಥೆಗಳು	..	ಸಿ. ಎಸ್. ಕುಲಕರ್ಣಿ ಮಾಸೂರ ಕಂಪಾವುಂಡ ಧಾರವಾಡ	೦–೧೧–೬	ಪ್ರಾ. ಮಾ. ಟ್ರೈ. ಶಿ. ವಾಚನಾಲಯ
೯	ಕಂಬನಿ (೧೯೧೨ ಆ. ೧೯೩೯)	..	ಮನೋಹರ ಗ್ರಂಥ ಭಾಂಡಾರ ಧಾರವಾಡ	೧–೦–೦	ಪ್ರಾ. ಮಾ. ಟ್ರೈ. ವಿ. ವಾಚನಾಲಯ
೧೦	ಶ್ರೀ. ಕೈವಲ್ಯಾಶ್ರಮ ಮಹಾರಾಜರವರ ಲಘು ಚರಿತ್ರವು	..	ಸಿ. ಎಸ್. ಕುಲಕರ್ಣಿ ಮಾಸೂರ ಕಂಪಾವುಂಡ ಧಾರವಾಡ	೦–೩–೦	ಪ್ರಾ. ಮಾ. ಟ್ರೈ. ಗಳ ವಿ. ಶಿ. ವಾಚನಾಲಯ

ಅ. ನಂ.	ಪುಸ್ತಕಗಳ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿದೆ
೧೧	ಕನ್ನಡ ಬಾಲಬೋಧೆ (೨ನೆ ಆ. ೧೯೩೯)	ಎಸ್. ಎಫ್. ಕಟ್ಟೀಮನಿ	ಎಸ್. ಎಫ್. ಕಟ್ಟೀಮನಿ ಹೆ.ಮಾ. ಕ.ಶಾ. ಹುಬ್ಬಳ್ಳಿ	೦—೧–೬	ಪ್ರಾ. ಪಠ್ಯಪುಸ್ತಕ
೧೨	ಗದ್ಯಾವಲಿ (೧ನೆ ಆ. ೧೯೩೯)	ಕೆ. ಬಿ. ಅಂಗಡಿ	ಕೆ. ಬಿ. ಅಂಗಡಿ ಹೆ. ಮಾ. ಸೆಂಟ್ರಲ್ ಸ್ಕೂಲ ಗದಗ	೦—೯–೦	ಪ್ರಾ. ವಿ. ವಾ. ಶಿ. ವಾಚನಾಲಯ
೧೩	ಹಿಂದದ ಹೊಸ ಭೂಗೋಲ (೨ನೆ ಆ. ೧೯೩೮)	ರ್.ಸಾ. ವ್ಹಿ. ಎನ್. ಮಗದಾಳ	ರಾವಸಾಹೇಬ ವ್ಹಿ. ಎನ್. ಮಗದಾಳ ಧಾರವಾಡ	೦—೮–೦	ಪ್ರಾ. ಮಾ. ಟ್ರೈ. ಪಠ್ಯಪುಸ್ತಕ
೧೪	ಸಂಗೀತ ಸ್ವರ ಬೋಧಿನಿ (೧ನೆ ಆ. ೧೯೩೧)	ಎಸ್. ಬಿ. ಉಳ್ಳಿ	ಎಸ್. ಬಿ. ಉಳ್ಳಿ ಪೆನ್‌ಶನರ ಗಾಯನಮಾಸ್ತರ ಹುಬ್ಬಳ್ಳಿ	೦–೧೨–೦	ಪ್ರಾ. ಮಾ. ಟ್ರೈ. ಶಿಕ್ಷಕರ ವಾಚನಾಲಯ
೧೫	ಕನ್ನಡ ನಾಡಿನ ಮಿಂಚಿದ ಮಹಿಳೆಯರು (೧ನೆ ಆ. ೧೯೩೮)	ಬಿ. ಎಮ್. ಬುರ್ಲಿ	ಬಿ. ಜಿ. ಅವಧಾನಿ ದೇಸಾಯಿಟಿಣಿ ಧಾರವಾಡ	೦–೧೨–೦	ಮಾ. ಟ್ರೈ. ಪಠ್ಯಪುಸ್ತಕ
೧೬	ಕನ್ನಡ ಬಾಲಬೋಧೆ (೨ನೆ ಆ. ೧೯೩೮)	..	ಬೆಂಗಳೂರ ಪ್ರಿಂಟಿಂಗ ವ ಪಬ್ಲಿಶಿಂಗ ಕಂ.ಬೆಂಗಳೂರು	೦—೨–೯	ಪ್ರಾ. ಶಾಲೆಗಷ್ಟಿಲ್ಲಿ ಪಠ್ಯಪುಸ್ತಕ
೧೭	ಕನ್ನಡ ಒಂದನೆಯ ಪುಸ್ತಕ (೩ನೆ ಆ. ೧೯೩೯)	..	ಸದರ	೦—೨–೯	ಸದರ
೧೮	ಕನ್ನಡ ಎರಡನೆಯ ಪುಸ್ತಕ (೩ನೆ ಆ. ೧೯೩೯)	..	ಸದರ	೦—೫–೬	ಸದರ
೧೯	ಕನ್ನಡ ಮೂರನೆಯ ಪುಸ್ತಕ (೧೯೩೯)	..	ಸದರ	೦—೬–೦	ಸದರ

೧೦	ಹಳ್ಳಿಯ ನಾಲ್ಕು ಸಿರಿಯ ಹೆಣ್ಣು (೧೯೮೮)	:	ಸದಸ್ಯ	೦—೬—೬	ಸದಸ್ಯ
೧೧	ಹಸಿರು ಬಯಲಿನ ಹಾಡು (೧೯೮೮)	:	ಸದಸ್ಯ	೦—೭—೦	ಸದಸ್ಯ
೧೨	ಹಸಿರು ಬಯಲಿನ ಹಾಡು (೧೯೮೮)	:	ಸದಸ್ಯ	೦—೮—೦	ಸದಸ್ಯ
೧೩	ಹಸಿರು ಬಯಲಿನ ಹಾಡು (೧೯೮೮)	:	ಸದಸ್ಯ	೦—೧೮—೦	ಸದಸ್ಯ
೧೪	ಹಸಿರು ಬಯಲಿನ ಹಾಡು (೧೯೮೮)	:	ಮಹಾಲಿಂಗಪ್ಪ ಮುಷ್ಟಿಗಿ ಹೊಬ್ಬಳ್ಳಿ	೦—೮—೦	ಪ್ರಾಥ. ಶಿ. ಕಾರ್ಯಗಳಿಗೆ ಸಚ್ಚಿನವಾಗಿದೆ. ಪ್ರಾ. ಪಠ್ಯಪುಸ್ತಕ
೧೫	ಪ್ರಾಥ ಶಿಕ್ಷಣ ಪ್ರೋತ್ಸಾಹ (೧೯೮೮)	:	ಸದಸ್ಯ	೮—೮—೦	ಪ್ರಾ. ಪಠ್ಯಪುಸ್ತಕ
೧೬	ಚಾಲಾ ಭಾಲಾ ಬಚ್ಚಾ ಬಚ್ಚಾ ಹಿಂದು ಸಾಮಾನ್ಯ ಪಠ್ಯ ಪುಸ್ತಕ (೧೯೮೮)	:	ಎಸ್. ಜಿ. ಸೋಮಶೇಖರ ಆರ್. ಆರ್. ಹುಮಲಾಪುರ ಹಿಪ್ಪರಗಿ	೦—೬—೦	ಪ್ರಾ. ಪಠ್ಯಪುಸ್ತಕ
೧೭	ಅಮರಾಪ್ತಿಸಂದಿ	:	ಬಿ. ಜಿ. ಹಾಳಿ	೮—೮—೦	ಪ್ರಾ. ಪಠ್ಯಪುಸ್ತಕ ಶಿಕ್ಷಣಾಧಿಕಾರಿಗಳಿಗೆ ಉಪಯುಕ್ತ
೧೮	ತಿಕ್ಕನು ಮಾಡಿದ ಕೆಲಸ ಕೆಟ್ಟಿತು	:	ಶಿ.ಲೆ. ಕೇಶವಾಚಲು ಗುಂಡಪ್ಪಾಲಾ ಉಗಡಿ ಎಸ್ಸೂ. ಜೆ. ಸಾಲೀಂಕರ ಹಿಂದುಮಾತಾ ಪ್ರಿಂಟಿಂಗ ಹೌಸ ಧಾರವಾಡ	೦—೧—೦	ಪ್ರಾ. ಪಠ್ಯಪುಸ್ತಕ ಶಿಕ್ಷಣಾಧಿಕಾರಿಗಳಿಗೆ ಉಪಯುಕ್ತ
೧೯	ಹಿಂದುಸ್ತಾನದ ಪುಣ್ಯಪುರುಷರು ಮತ್ತು ಕಥೆಗಳು (ಪ್ರಥಮ ಭಾಗ)	:	ಆರ್. ಆರ್. ಹುಮಲಾಪುರ ಹಿಪ್ಪರಗಿ	೦—೮—೦	ಪ್ರಾ. ಪಠ್ಯಪುಸ್ತಕ ಶಿಕ್ಷಣಾಧಿಕಾರಿಗಳಿಗೆ ಉಪಯುಕ್ತ
೨೦	ಪ್ರಾಥ ಶಿಕ್ಷಣ ಪ್ರೋತ್ಸಾಹ ಭಾಗ ೧	:	ಸದಸ್ಯ	೦—೬—೦	ಪ್ರಾ. ಪಠ್ಯಪುಸ್ತಕ ಶಿಕ್ಷಣಾಧಿಕಾರಿಗಳಿಗೆ ಉಪಯುಕ್ತ
೨೧	ಪಠ್ಯಪುಸ್ತಕ (೧೯೮೮)	:	ಕೆ. ಬಿ. ಅಂಗಡಿ ಹೆ. ಪಠ್ಯ. ಸಂಸ್ಥೆ. ಗದಗ	೦—೬—೦	ಪ್ರಾ. ಪಠ್ಯಪುಸ್ತಕ ಶಿಕ್ಷಣಾಧಿಕಾರಿಗಳಿಗೆ ಉಪಯುಕ್ತ

ಕ್ರ. ನಂ.	ಪುಸ್ತಕಗಳ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿದೆ
೧	ತೊರವೆ ರಾಮಾಯಣ ಸಾರ ಸಂಗ್ರಹವು	ವ್ಹಿ. ಬೀ. ಬಿಳೇ ಅಂಗಡಿ	ವ್ಹಿ. ಬೀ. ಬಿಳೇ ಅಂಗಡಿ ವಕೀಲ ಹುಬ್ಬಳ್ಳಿ	೦–೧೦–೦	ಪ್ರಾ. ಮಾ. ಟ್ರೇ. ವಿ. ವಾ.
೨	ಹರಿಹರನ ಇನಿಗಬ್ಬ (೧ನೆ ಆ. ೧೯೩೯)	ಎಸ್. ಡೀ. ಪಾವಟೆ ವಕೀಲ ಹುಬ್ಬಳ್ಳಿ	ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ	೦–೬–೦	ಪ್ರಾ. ಮಾ. ಟ್ರೇ. ಶಿ. ವಾ.
೩	ರಾಷ್ಟ್ರಗೀತಾವಲಿ (೧ನೆ ಆ. ೧೯೩೯)	ಆರ್.ವ್ಹಿ. ಕರಿಗುದರಿ	ಸದರ	೦–೧–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೪	ಅಥಣಿ ಗಚ್ಚಿನಮಠದ ಶ್ರೀ ಶಿದ್ಧಲಿಂಗ ಸ್ವಾಮಿಗಳವರ ಚರಿತ್ರವು	ಜೀ. ಎಮ್. ಮಿರಜಿ ವಕೀಲ ಹುಬ್ಬಳ್ಳಿ	ಎಮ್. ಎಮ್. ಮಿರಜಿ ಕಾಟನ್ ಕಮಿಶನ್ ಏಜಂಟ ದಾಜೀಬಾಪೇಟೆ ಹುಬ್ಬಳ್ಳಿ	೦–೫–೦	ಪ್ರಾ. ಮಾ. ಟ್ರೇ. ವಿ. ವಾ.
೫	ಇಂಗ್ಲಂಡದ ಅರ್ವಾಚೀನ ಇತಿಹಾಸವು (೧ನೆ ಆ. ೧೯೩೯)	..	ಮ್ಯಾಕಮಿಲನ್ ಮತ್ತು ಕಂ. ಮುಂಬಯಿ	೨–೮–೦	ಪೂರ್ಣ ಟ್ರೇ.ಗಳಲ್ಲಿ ಪಠ್ಯಪುಸ್ತಕ
೬	ದೇಶೀಯ ಜಮಾಖರ್ಚಿನ ಪದ್ಧತಿ (೧ಳನೆ ಆ. ೧೯೩೯)	..	ಎಸ್. ಎಸ್. ಕುಲಕರ್ಣಿ ಅಡಿಕೆ ಓಣಿ ಧಾರವಾಡ	೦–೧೦–೦	ಪ್ರಾ. ಶಾಲೆಗಳಲ್ಲಿ ಪಠ್ಯಪುಸ್ತಕ
೭	ಮಹಾರಾಷ್ಟ್ರರ ಹಾಗೂ ಇಂಗ್ಲಿಷರ ಆಳಿಕೆ (೬ನೆಯ ಇಯತ್ತೆಯ ಹಿಂದುಸ್ತಾನದ ಇತಿಹಾಸ)	ಎನ್. ಪಿ. ಮೋಡಕ	ಆರ್. ಆರ್. ಕಮುಲಾಪುರ ಗದಗ	೦–೧೦–೦	ಪ್ರಾ. ಮಾ. ಟ್ರೇ. ಪಠ್ಯಪುಸ್ತಕ
೮	ಗದಗ ತಾಲೂಕಿನ ಸಚಿತ್ರ ವರ್ಣನೆಯು	ಸದರ	ಸದರ	೦–೨–೬	ಪ್ರಾ. ಶಾಲೆಗಳ ಶಿಕ್ಷಕರ ವಾಚನಾಲಯ

೩೯	ಹುಬ್ಬಳ್ಳಿ ತಾಲೂಕಿನ ಸಚಿತ್ರ ಭೂಗೋಲ	ಸದರ	ವಾಗ್ವಿಲಾಸ ಹುಬ್ಬಳ್ಳಿ	ಬುಕ್‌ಡಿಪೋ	೦—೨–೦	ಸದರ
೪೦	ಕುಮಾರ ಕಿಟ್ಟಣ್ಣ	ಸೀ. ಎಸ್. ಕುಲಕರ್ಣಿ	ಸೀ. ಎಸ್. ಕುಲಕರ್ಣಿ ಮಾಳಮಡ್ಡಿ ಧಾರವಾಡ		೦—೧–೦	ಪ್ರಾ. ಶಾ. ವಿದ್ಯಾರ್ಥಿಗಳ ವಾಚನಾಲಯ
೪೧	ಮಕ್ಕಳ ಪುಸ್ತಕ ಮೂರನೆಯ ದರ್ಜೆಯ ಕಥೆಗಳು	ಸದರ	ರಾಮಾಶ್ರಯ ಧಾರವಾಡ	ಬುಕ್‌ಡಿಪೋ	೦—೨–೦	ಸದರ
೪೨	ಮಕ್ಕಳ ಪುಸ್ತಕ ಎರಡನೆಯ ದರ್ಜೆಯ ಕಥೆಗಳು	ಸದರ	ಸದರ		೦—೧–೬	ಸದರ
೪೩	ಲಕ್ಷ್ಮೀಶನ ಚಂದ್ರಹಾಸ (೧೯೦. ಆ. ೧೯೩೯)	..	ಮನೋಹರ ಗ್ರಂಥ ಭಾಂಡಾರ ಧಾರವಾಡ		೦—೮–೦	ಮಾ. ಟ್ರೇ. ಪಠ್ಯಪುಸ್ತಕ
೪೪	ಅನೆಯ ಇಯತ್ತೆಯ ಅಂಕಗಣಿತ (೧೯೩೮)	ಎಸ್. ಎಲ್. ಹಿರೇಗೌಡರ ಹುಬ್ಬಳ್ಳಿ	ಎಸ್. ಎಲ್. ಹಿರೇಗೌಡರ ಮುಂಗಳವಾರಪೇಟೆ ಹುಬ್ಬಳ್ಳಿ		೦—೬–೦	ಪ್ರಾ. ಪಠ್ಯಪುಸ್ತಕ
೪೫	ಸೃಷ್ಟಿವಸ್ತು ಪರಿಚಯ ಭಾಗ ೧ ೨ನೆ. ಆ. ೧೯೩೯	ಡಿ. ವ್ಹಿ. ಶೇಂಡೆ ಕರ್ನಾಟಕ ಕಾಲೇಜ ಧಾರವಾಡ	ಸ್ಟೂಡಂಟ ಓನ್ ಬುಕ್ ಡಿಪೊ ಧಾರವಾಡ		೦—೮–೦	ಪ್ರಾ. ಮಾ. ಟ್ರೇ. ಪಠ್ಯ ಪುಸ್ತಕ
೪೬	ರೋಣ ತಾಲೂಕಿನ ಸಚಿತ್ರ ವರ್ಣನೆಯು	ಎನ್.ಬೀ.ಮೋಡಕ, ವಾಯ್. ವ್ಹಿ. ಜಹಾಗೀರದಾರ	ಎನ್. ವೀ. ಮೋಡಕ, ವಾಯ್. ವ್ಹಿ. ಜಹಾಗೀರದಾರ ಗದಗ		೦—೨–೦	ಪ್ರಾ. ಶಾಲೆಗಳ ಶಿಕ್ಷಕರ ವಾಚನಾಲಯ
೪೭	ಬೆಳಗಾವಿ ಜಿಲ್ಲೆಯ ಚಿತ್ರಮಯ ಭೂಗೋಲ	ಜಿ. ಬಿ. ಉಗ್ರು	ಎ. ಆರ್. ಶಿವನಾಗಪ್ಪ ಹುಬ್ಬಳ್ಳಿ		೦—೪–೬	ಸದರ
೪೮	ಜೋದ್ಯಪುರದ ಜೋಜಿಗರಾಯ	ಬಿ. ಪಿ. ಕಾಳೆ	ಶೇಷಾಚಲ ಗ್ರಂಥಮಾಲೆ ಆನಂದವನ ಅಗಡಿ		೨—೦–೦	ಪ್ರಾ. ಮಾ. ಟ್ರೇ. ಶಿಕ್ಷಕರ ವಾಚನಾಲಯ

(ಮುಂದೆ ಸಾಗುವದು

ಕನ್ನಡ "ವರ್ಡ್‌ಪ್ರಾಯಿಜ" ಪರೀಕ್ಷೆ ೧೯೪೧

೧. ಪರೀಕ್ಷೆಯ ವಿಷಯಗಳು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಆವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಡ್‌ಸಾಹೇಬರು ರಚಿಸಿರುವ ಪ್ರಾಕ್ಟಿಕ್ಯಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ; ಟೀಕೆ ಟಿಪ್ಪಣಿ; ಸ್ವತಂತ್ರ ನಿಬಂಧ; ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. ಇನಾಮು:—ಈ ಮೊದಲು ಇದ್ದ ೬೦ ರೂ. ಯ ಒಂಟೇ ಇನಾಮಿನ ಬದಲಾಗಿ ಈಗ ಇನಾಮುಗಳು ಎರಡು ಎಂದು ಗೊತ್ತಾಗಿವೆ. ಮೊದಲನೆಯ ಇನಾಮು ೫೦ ರೂ. ಎನೆಯ ಇನಾಮು ೩೦ ರೂ.

ಮೊದಲನೆಯ ಇನಾಮು ಪಡೆಯುವ ಉಮೇದವಾರನು ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಇನಾಮು ಪಡೆಯುವ ಉಮೇದವಾರನು ೧೦೦ ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬರಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಇನಾಮುಗಳನ್ನು ಸರಿಯಾಗಿ ವಿಭಜಿಸಿ ಪಂಚಲಾಗುವದು.

೩. ಅರ್ಜಿಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡ್ರಲಪೇಕ್ಷಿಸುವವರು ೧೯೪೧ನೆಯ ಇಸವಿಯ ಜೂನ ತಿಂಗಳ ೧ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

೪. ಪರೀಕ್ಷೆಯ ಸ್ಥಳ:—

ಧಾರವಾಡ ಟ್ರೇನಿಂಗ್ ಸ್ಕೂಲಿನಲ್ಲಿ ಈ ಪರೀಕ್ಷೆಯು ನಡೆಯುವದು. ಪರೀಕ್ಷೆಯ ತಾರೀಖನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫ ಪ್ರಶ್ನಕಾಗದಗಳು ಕೆಳಗೆ ಬರೆದಂತೆ:—

೧ನೆಯದು	ವಿಷಯ	ಪ್ರಾಕ್ಟಿಕ್ಯಾವ್ಯಮಾಲೆ	ಅವಧಿ	೩ ಗಂಟೆ	ಗುಣ. ೧೦೦
೨ನೆಯದು	,,	ಹಳಗನ್ನಡ ನಿಬಂಧ ಮತ್ತು ಪದ್ಯರಚನೆ	,,	,,	,, ,,
೩ನೆಯದು		ಹೊಸಗನ್ನಡ ನಿಬಂಧ	,,	,,	,, ,,

ರಾಮಾಶ್ರಯ ಬುಕ್‌ಡಿಪೊ ಧಾರವಾಡ ಇವರಿಂದ ಪ್ರಕಟಿಸಲ್ಪಟ್ಟ ಹೊಸ ಪುಸ್ತಕಗಳು

೧. **೨ನೇ ಇಯತ್ತೆಯ ಅಂಕಗಣಿತ:—** ಎಮ್. ನಿಂಬಾಳಕರ ಇವರು ಹೊಸ ಇಯತ್ತಾ ಪತ್ರಿಕೆಯಂತೆ ಈ ಪುಸ್ತಕವನ್ನು ಬರೆದಿದ್ದು ಇದರಲ್ಲಿ ಪ್ರತಿ ಸೊಂದು ಮೆಟ್ಟು ಬಹಳ ಸುಲಭವಾಗಿಯೂ ಆಕೃತಿಗಳಿಂದಲೂ ವಿವರಿಸಲ್ಪಟ್ಟಿದೆ. ನೇ ಇಯತ್ತೆಯ ಡ್ರಾಯಿಂಗ ಹಾಗೂ ಭೂಮಿತಿಯ ಆಕೃತಿಗಳೂ ಇದರಲ್ಲಿ ಕೊಡಲ್ಪಟ್ಟಿರುತ್ತವೆ. ಪುಸ್ತಕದ ಯೋಗ್ಯತೆಯ ಬಗ್ಗೆ ಅನೇಕ ಅನುಭವಿಕ ಶಿಕ್ಷಕರು ತಮ್ಮ ಉತ್ತಮ ಅಭಿಪ್ರಾಯಪಟ್ಟಿರುತ್ತಾರೆ.

ಬೆಲೆ ಬಹಳ ಸ್ವಲ್ಪು ೪ ಆಣೆಗಳು ಮಾತ್ರ.

ಪ್ರಶ್ನೋತ್ತರ ಸುಲಭ ಭೂಗೋಲ:— ಕನ್ನಡದಲ್ಲಿದ್ದ ಭೂಗೋಲ ಪುಸ್ತಕಗಳು ಸದ್ಯದ ಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರವನ್ನೀಯಲು ತಕ್ಕವು ಇರುವದಿಲ್ಲ. ಇದು ಎಲ್ಲ ಶಿಕ್ಷಕರ ಅನುಭವಕ್ಕೆ ಬಂದಿರುತ್ತದೆ. ಹೀಗಾಗಿ ಮಿಲ್ಲಿಪರೀಕ್ಷೆಯಲ್ಲಾಗಲಿ, ಹೈಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಾಗಲಿ, ಭೂಗೋಲ ವಿಷಯದಲ್ಲಿ ನಾಪಾಸಾಗುವ ವಿದ್ಯಾರ್ಥಿಗಳೇ ಹೆಚ್ಚು. ಕಾರಣ ನಾವು ಸಿಜ್ಞ ರಕಡೆಯಿಂದ ಆಧುನಿಕ ಪರೀಕ್ಷೆಗಳಿಗೆ ಯೋಗ್ಯ ಉತ್ತರವನ್ನೀಯಬಹುದಾದ ಈ ಪುಸ್ತಕವನ್ನು ಬರೆಯಿಸಿರುತ್ತೇವೆ. ಇದರಲ್ಲಿ ಅನೇಕ ಉಪಯುಕ್ತ ವಿಷಯ ಗಳು ಕೊಡಲ್ಪಟ್ಟಿರುತ್ತವೆ. ಇದರ ಲಾಭವನ್ನು ಸರ್ವ ವಿದ್ಯಾರ್ಥಿಗಳೂ ಶಿಕ್ಷಕರೂ ಪಡೆಯಲೆಂಬದೇ ನಮ್ಮ ಅಭಿಲಾಷೆ. ಬೆಲೆ ೪ ಆಣೆಗಳು ಮಾತ್ರ.

ಇದಲ್ಲದೆ ಎಮ್. ನಿಂಬಾಳಕರ ಇವರಿಂದ ತಯಾರಿಸಲ್ಪಟ್ಟ ಯಾವತ್ತೂ ಪಾಠ್ಯರೇಷೆಯ ಸಕಾಶ ಪುಸ್ತಕ ಮೊದಲಾದವುಗಳು ನಮ್ಮಲ್ಲಿ ದೊರೆಯುತ್ತವೆ. ಕ್ರಯಪಟ್ಟಿಗಾಗಿ ಇಂದೇ ಬರೆಯಿರಿ.

೨. ಸರಕಾರದವರು ಪ್ರತಿಯೊಂದು ಶಾಲೆಯಲ್ಲಿ ಪ್ರೊಗ್ರೆಸ್ ರಿಕಾರ್ಡು ಇಡಬೇಕೆಂದು ಪ್ರಸಿದ್ಧಿಸಿದಂತೆ ನಾವು ಪ್ರೊಗ್ರೆಸ್ ರಿಕಾರ್ಡು ಫಾರ್ಮಗಳನ್ನು ನಾಪಿಸಿ ತಯಾರಿಸಿ ಇಟ್ಟಿದ್ದೇವೆ. ಒಂದು ರೂಪಾಯಕ್ಕೆ ಒಂದುನೂರರಂತೆ ಕೊಡುವ ಏರ್ಪಾಡು ಮಾಡಿದ್ದೇವೆ.

ರಾಮಾಶ್ರಯ ಬುಕ್‌ಡಿಪೋ,
ಮಾರ್ಕೆಟ್ ಧಾರವಾಡ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ಶಿಕ್ಷಕರೂ ವಿದ್ಯಾರ್ಥಿಗಳೂ ಈ ಮೊದಲೇ ಮನಗಂಡಿದ್ದರು. ಈಗ ಸರಕಾರದವರು ಇದನ್ನು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಯಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠ ಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠ ಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಒಳಗಿನ ಜೂನ್ ತಿಂಗಳ ಅಂಕದ ಒಳಸೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜುಲೈ ೧೯೪೦ Reg. No B. 3691

(ಇದರಲ್ಲಿ ಕನ್ನಡ ಕಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ.
೧.	ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ	೧
೨.	ಬ್ರಿಟನ್ನಿನ ವಿಮಾನಪಡೆ	೬
೩.	ಧಾರವಾಡ ಜಿಲ್ಲೆಯ ಪ್ರಚಾರಸಮಿತಿಯ ಪ್ರಕಟನೆಗಳು....	೮
೪.	ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವ	೯
೫.	ಶ್ರೀಮಾನ್ ಅಲೂರ ವೆಂಕಟರಾಯರ ಪರಿಚಯ	೧೪
೬.	ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು	೧೭
೭.	ಅಂಕಗಣಿತದ ಸಮನ್ವಿತ ಶಿಕ್ಷಣ (ನೂಲುವದರೊಡನೆ)....	೨೬
೮.	ಕನ್ನಡ ಟಿಕ್‌ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು	೩೦

Printed by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School Dharwar at his Office.

ಓದಿರಿ ! ತ್ವರೆಮಾಡಿರಿ ! !

ವಾಗ್ವಿಲಾಸ ಬುಕ್‌ಡಿಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ. ಎಜ್‌ಮಿನಿಸ್ಟ್ರೇಟಿವ್ ಆಫೀಸರ ಡಿಸ್ಟ್ರಿಕ್ಟ ಸ್ಕೂಲಜೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಪಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ಸಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೆ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ.ಏ.,

ಸಂಪುಟ ೭೯	ಜುಲೈ ೧೯೪೦	ವರ್ಷ ೧೨. ಸಂ. ೪

ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಗೂ ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ.

ಯುರೋಪಖಂಡದಲ್ಲಿ ಈಗ ನಡೆಯುತ್ತಲಿರುವ ಘೋರ ಯುದ್ಧದಲ್ಲಿ ಬ್ರಿಟಿಷ ಜನಾಂಗವು ಕೈಕೊಂಡ ಸದುದ್ದೇಶದ ಸಫಲತೆಗಾಗಿ ಹಿಂದುಸ್ಥಾನದ ಜನತೆ ಎಲ್ಲಕಡೆಯಲ್ಲಿ ಕೈಕೊಂಡ ನೆರವಿನ ಘನ ಕಾರ್ಯದಲ್ಲಿ ಶ್ರೀರಾಮಚಂದ್ರನ ಸೇತುಬಂಧನದ ವೇಳೆಯಲ್ಲಿ ಅಳಿಲುಮಾಡಿದ ಪುಟ್ಟ ಸಹಾಯದಂತೆ ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರು ತಮ್ಮ ಯೋಗ್ಯತೆ, ಶಕ್ತಿಗಳಿಗನುಸಾರವಾದ ಸಹಾಯವನ್ನು ನೀಡಬಹುದು ಮತ್ತು ಈಗಿನ ಯುದ್ಧದ ಪರಿಸ್ಥಿತಿಗನುಸರಿಸಿ ವಿಲಂಬಮಾಡದೆ ನೀಡುವದು ಆತ್ಯವಶ್ಯಕವು. ಈ ಘನಘೋರ ಯುದ್ಧವು ಹೇಗೆ ಪ್ರಾರಂಭವಾಯಿತು, ಅದರಲ್ಲಿ ನಮ್ಮ ಬ್ರಿಟಿಷ ಸಾಮ್ರಾಜ್ಯದ ಸೇರಿಕೆಯು ಯಾವಕಾರಣಗಳಿಂದುಂಟಾಯಿತು ಮತ್ತು ಈಗಿನ ಪರಿಸ್ಥಿತಿಯು ಹೇಗಿದೆ ಎಂಬದು ವರ್ತಮಾನಪತ್ರಿಕೆಗಳನ್ನು ಓದುವವರಿಗೆಲ್ಲ ತಿಳಿದಿರುವ ವಿಷಯವೇ. ಸರಿ. ಆದರೂ ಹಳ್ಳಿಗಳಲ್ಲಿ ವಾಸವಾಗಿದ್ದ ಶಿಕ್ಷಕರಲ್ಲಿ ಅನೇಕರಿಗೆ ಈ ವಿಷಯದ ನಿಜವಾದ ಮತ್ತು ಸಂಪೂರ್ಣ ಜ್ಞಾನವು ಇರಬಹುದೋ ಇಲ್ಲವೋ ಎಂಬ ಶಂಕೆಯ ಮೂಲಕ ಅವುಗಳನ್ನು ಸಂಕ್ಷೇಪವಾಗಿ ವಿವರಿಸುವದು ಅಗತ್ಯವೆಂದು ಕಂಡು ಬಂದುದರಿಂದ ಈ ಲೇಖದಲ್ಲಿ ಯುದ್ಧದ ಪೂರ್ವೇತಿಹಾಸವನ್ನು ಸಂಗ್ರಹಿಸಿ ಕೊಡಲಾಗಿದೆ.

೧೯೧೯ನೇ ಇಸವಿಯಲ್ಲಿ ನಡೆದ ಘನಘೋರ ಯುದ್ಧದಲ್ಲಿ ಜರ್ಮನ್ ರಾಷ್ಟ್ರಕ್ಕೆ ಸಂಭವಿಸಿದ ಪರಾಜಯ ಮತ್ತು ವರ್ಸಾಯಿ ಒಪ್ಪಂದದಿಂದ ಸಂಭವಿಸಿದ ಕೆಲವೊಂದು ಹಾನಿಗಳನ್ನು ಮನಸ್ಸಿಗೆ ಅಂಟಿಸಿಕೊಂಡು ಇದಕ್ಕೆ ತಕ್ಕ ಪ್ರತಿಕಾರವನ್ನು ಜಯಿಸೊಂದಿದ ರಾಷ್ಟ್ರಗಳಿಗೆ ಮಾಡಿಯೇ ತೀರಿಸಬೇಕು. ಮತ್ತು ತನ್ನ ಜರ್ಮನ್ ರಾಷ್ಟ್ರದ ಪುನರುದ್ಧಾರಮಾಡಿ ಯುಕ್ತಿಪ್ರಯುಕ್ತಿಗಳಿಂದ ಅದನ್ನು ಪೂರ್ವದ ಏಳ್ಗೆಯ ಸ್ಥಿತಿಗೆ ತರಬೇಕೆಂಬ ದೃಢನಿಶ್ಚಯದ ನಿಶ್ಚಲ ದೀಕ್ಷೆಯನ್ನು ಕೈಕೊಂಡ ಹಿಟ್ಲರನು ತಮ್ಮ ಪ್ರಾಣಗಳನ್ನು ಸಹ ಈ ಉದ್ದೇಶಕ್ಕೆ ಮುಡುಪನ್ನಾಗಿ ಇಟ್ಟ ಕೆಲವು ಜನರನ್ನು ಸೇರಿಸಿಕೊಂಡು ನಾಝಿ ಎಂಬ ಹೆಸರಿನ ಪಂಗಡವನ್ನು ಸ್ಥಾಪಿಸಿದನು. ಇದು ದಿನೇ ದಿನೇ ಬಳೆಯುತ್ತಾ ಬಲಿಷ್ಠವಾದ ಒಂದು ಸಂಘವಾಯಿತು.

ಈ ಸಂಘವು ಜರ್ಮನಿಯ ರಾಜ್ಯದಾಡಳಿತೆಯು ತಮ್ಮ ಪಕ್ಷದವರ ಕೈ ಸೇರಬೇಕೆಂದು ಮಾಡಿದ ಪ್ರಯತ್ನಗಳು ನಿಷ್ಫಲವಾಗಿ ಇವರಲ್ಲಿ ಕೆಲವು ಧುರೀಣರು ಕಾರಾಗೃಹವನ್ನು ಪ್ರವೇಶಿಸುವ ಪ್ರಸಂಗವು ಬಂದೊದಗಿತು. ಮುಂದೆ ಬಿಡುಗಡೆ ಹೊಂದಿದಂದಿನಿಂದ ಮಾಡಿದ ಘನ ಪ್ರಯತ್ನಗಳ ಮೂಲಕವಾಗಿಯೂ, ಸರ್ವಾಧಿಕಾರವುಳ್ಳ ನಾಯಕನಾದ ವಯೋವೃದ್ಧ ಹಿಂಡನಬರ್ಗನು ಈ ಪಂಗಡದವರಿಗೆ ತೋರಿಸಿದ ದಯೆ ಮತ್ತು ಕೊಟ್ಟ ಸಹಾಯಗಳಿಂದಲೂ, ಈ ಪಂಗಡವು ಬಳೆದು ಸರಕಾರವನ್ನು ತಮ್ಮ ಕೈವಶಪಡಿಸಿಕೊಳ್ಳುವಷ್ಟು ಬಲಿಷ್ಠವಾಯಿತು. ಕೊನೆಗೆ ಹಿಟ್ಲರನು ತನ್ನ ಪಂಗಡದವರ ಮುಖಾಂತರ ನಡೆಯಿಸಿದ ಒಳತಂತ್ರ, ಕುಯುಕ್ತಿಗಳ ಮೂಲಕ ಬಹುಮತದಿಂದ ಆರಿಸಲ್ಪಟ್ಟು. ಜರ್ಮನ್ ರಾಷ್ಟ್ರದ ಸರ್ವಾಧಿಕಾರವುಳ್ಳ ನಾಯಕನಾಗಿ ರಾಷ್ಟ್ರದ ಆಡಳಿತೆಯನ್ನು ಸಂಪೂರ್ಣವಾಗಿ ತನ್ನ ಮತ್ತು ತನ್ನ ಆಪ್ತಾಲೋಚನೆಯ ಮಿತ್ರರ ಕೈವಶಮಾಡಿಕೊಂಡು ತನ್ನ ದೀಕ್ಷೆಯ ಪೂರ್ಣತೆಗಾಗಿ ಮಾಡತಕ್ಕ ಬದಲಾವಣೆಗಳನ್ನು ಕೈಕೊಂಡನು.

ಅಂದು ಮೊದಲುಗೊಂಡು ತನ್ನ ಮನಸ್ಸಿನ ವಿರುದ್ಧವಾಗಿ ಜನರಲ್ಲಿ ತನ್ನ ತತ್ವದ ಬಗ್ಗೆ ಅಪ್ರೀತಿಯನ್ನು ಉಂಟುಮಾಡಿಸಬಹುದೆಂದು ತೋರಿದವರನ್ನೂ, ತನ್ನ ವಿರೋಧಮತವಾದಿಗಳನ್ನೂ ತಾನು ಆಕ್ರಮಿಸಿದ ಅಧಿಕಾರದ ಪ್ರಚಂಡ ಬಲದಿಂದ ನಾಶಮಾಡಲು ಯತ್ನಿಸಿದನು; ಮತ್ತು ಗೆಸ್ಟೆಪೊ ಎಂಬ ಒಂದು ಗುಪ್ತ ಪೋಲಿಸರ ಪಂಗಡವನ್ನು ಸ್ಥಾಪಿಸಿ, ಅವರ ಸಹಾಯದಿಂದ ಇಡಿಯ ದೇಶದಲ್ಲಿ ನಡೆಯುವ ಎಲ್ಲಸಂಗತಿಗಳನ್ನು ಕೇಳಿಕೊಳ್ಳುವದನ್ನೂ, ವಿರುದ್ಧ ಪಕ್ಷದವರನ್ನು ಗುಪ್ತರೀತಿಯಿಂದ ನಾಶಪಡಿಸುವ ಕೆಲಸವನ್ನೂ ನಡೆಯಿಸಿದನು.

ಈರೀತಿಯಲ್ಲಿ ಬಗೆಬಗೆಯ ಉಪಾಯಗಳನ್ನು ಕ್ರೂರತನದಿಂದ ಕೈಕೊಂಡು ಜರ್ಮನ ದೇಶವನ್ನು ನಾಝೀಮತವಾದಿಗಳಿಂದಲೇ ತುಂಬಿಬಿಡಲು ಯತ್ನಿಸಿದನು. ನೂತನ ಶಿಕ್ಷಣಪದ್ಧತಿಯಿಂದ ಯುವಕರಲ್ಲೆಲ್ಲಾ ನಾಝೀಮತದ ತತ್ವಗಳನ್ನು ಹರಡಿದನು. ವರ್ತಮಾನ ಪತ್ರಿಕೆಗಳ ಮುಖಾಂತರವೂ ಜರ್ಮನಿಯಲ್ಲೆಲ್ಲ ತನ್ನ ಮತಕ್ಕೇ ಅನುಕೂಲವಾಗುವಂತೆಯೂ, ಉಪನ್ಯಾಸಗಳ ಮುಖಾಂತರ ನೂತನ ಹುರುಪನ್ನು ಹುಟ್ಟಿಸುವಂತೆಯೂ ಮಾಡಿದನು. ಜರ್ಮನ್ ರಾಜ್ಯಕ್ಕೆ ಹೆಚ್ಚಿನ ಅನ್ಯಾಯವಾಗಿದೆಯೆಂತಲೂ, ಜರ್ಮನ್ನರು ಶುದ್ಧ ಆರ್ಯರಿದ್ದು ಉಳಿದವರಿಗೆ ಜರ್ಮನಿಯ ರಾಷ್ಟ್ರದಲ್ಲಿ ಸ್ಥಳಕೊಡಲಾಗದೆಂತಲೂ ನಾದಿಸಿ ಅನೇಕ ಯಹೂದಿ ಶ್ರೀಮಂತ ಸಾವುಕಾರರನ್ನೂ, ವಿಜ್ಞಾನಶಾಸ್ತ್ರಪಂಡಿತರನ್ನೂ ಜರ್ಮನಿಯಿಂದ ಹೊರಗಟ್ಟಿ, ಅವರ ಹಣಕಾಸನ್ನೆಲ್ಲ ಸರಕಾರ್‌ಕ್ಕೆ ಸೇರಿಸಿಕೊಂಡನು. ಮತ್ತು ತಿರುಗಿ ಜರ್ಮನ್ ರಾಷ್ಟ್ರಕ್ಕೆ ಸೇರಿಸಿಕೊಳ್ಳಬೇಕೆಂಬ ಪ್ರಾಂತಗಳಲ್ಲೆಲ್ಲಾ ಗುಪ್ತರೀತಿಯಿಂದ ನಾಝೀಪಕ್ಷದವರ ಬೆಳೆವಣಿಗೆಯಾಗುವಂತೆ ಮಾಡಿದನು. ಫ್ರಾನ್ಸ್ ದೇಶದ ಮೆಗಿನೊವ್ಯೂಹದಂತೆ ಜರ್ಮನ್ ದೇಶದ ಸಂರಕ್ಷಣೆಗಾಗಿ ಕಟ್ಟಿದ ಸಿಜಫ್ರಿಡ್ ವ್ಯೂಹವನ್ನು ಭದ್ರಪಡಿಸಿದನು. ಒತ್ತಾಯದ ಯುದ್ಧಶಿಕ್ಷಣದ ಮೂಲಕ ಹೊಸ ಸೈನ್ಯವನ್ನು ಕಟ್ಟಿ, ನೂತನ ವಿಜ್ಞಾನಶಾಸ್ತ್ರ ಶೋಧಗಳ ಮುಖಾಂತರ ನೂತನ ಯುದ್ಧಕ್ರಮಕ್ಕನುಗುಣವಾದ ಸಾಮಗ್ರಿಗಳನ್ನೂ ಉಪಕರಣಗಳನ್ನೂ ತಯಾರಿಸಿ ತನ್ನ ಮುಂದಿನ ಅಮಾನುಷಿಕ ಮತ್ತು ರಾಕ್ಷಸೀ ಕಾರ್ಯಕ್ರಮಕ್ಕೆ ಬೇಕಾಗುವ ಎಲ್ಲ ಪೂರ್ವಸಿದ್ಧತೆಯನ್ನು ಮಾಡಿದನು.

ಇಷ್ಟು ಸಿದ್ಧತೆಯ ಬೆಂಬಲದ ಮದದಿಂದ ಹಿಟ್ಲರನು ವರ್ಸಾಯಿ ಒಪ್ಪಂದಕ್ಕನುಸರಿಸಿಕೊಡತಕ್ಕ ಯುದ್ಧದ ಸಾಲ ಮುಂತಾದವುಗಳನ್ನು ಕೊಡಲಿಕ್ಕೆ ಜರ್ಮನಿಯು ಬದ್ಧವಲ್ಲವೆಂದೂ, ವರ್ಸಾಯಿ ಒಪ್ಪಂದವು ಅನ್ಯಾಯದ್ದಿದ್ದು ಅದಕ್ಕೆ ಜರ್ಮನಿಯು ಒಪ್ಪಿಗೆ ಇರುವದಿಲ್ಲವೆಂದೂ ಸಾರಿದನು. ಮುಂದೆ ಕಲ್ಲಿದ್ದಲಿಯ ಪ್ರಾಂತವಾದ ಸಾರಪ್ರದೇಶವನ್ನು ಬಹುಮತದ ಬಲದಿಂದ ಜರ್ಮನಿಗೆ ಸೇರಿಸಿ ಅಲ್ಲಿ ಹೊಸ ರಾಜ್ಯಾಡಳಿತೆಯ ಪದ್ಧತಿಯನ್ನು ಸ್ಥಾಪಿಸಿ, ಆಸ್ಟ್ರಿಯಾ ದೇಶವನ್ನು ಯುದ್ಧಮಾಡದೆ ತನ್ನ ಸೈನ್ಯಬಲದಿಂದಲೇ ಆಕ್ರಮಿಸಿ ಜರ್ಮನಿಗೆ ಸೇರಿಸಿಕೊಂಡನು.

ಈ ಸಮಯದಲ್ಲಿ ಉಳಿದ ಯುರೋಪದ ರಾಷ್ಟ್ರಗಳು ಅವನ ಸೈನ್ಯಬಲದ ಹೆದರಿಕೆಯಿಂದಲೋ ಅಥವಾ ಶಾಂತತೆಯನ್ನು ಕಾಪಾಡುವ ಸದುದ್ದೇಶದಿಂದಲೋ ಈ ಕಡೆಗೆ ಹೆಚ್ಚಿನ ಲಕ್ಷ್ಯಪೂರ್ವಸಲಿಲ್ಲ. ಮುಂದೆ ಝೆಕ್ಕೊಸ್ಲೊವೇಕಿಯಾ ರಾಷ್ಟ್ರದಲ್ಲಿ ಸ್ಯೂಡೆಟನ್ ಎಂಬ ಬಂದುಭಾಗದಲ್ಲಿ ಜರ್ಮನರ ವಸತಿಯು ಹೆಚ್ಚಾಗಿದ್ದ

ಅಲ್ಲಿರುವ ಜರ್ಮನರಿಗೆ ಉಂಟಾಗುವ ತೊಂದರೆಗಳನ್ನು ದೂರಪಡಿಸಲಿಕ್ಕೆ ಅದನ್ನು ಜರ್ಮನಿಗೆ ಸೇರಿಸಿಕೊಳ್ಳುವ ಪ್ರಯತ್ನ ನಡೆಸಿದನು. ಆಗ ಝೆಕೊ-ಸ್ಲೊವೇಕಿಯದವರು ಇದಕ್ಕೆ ಒಪ್ಪಿಗೆಯನ್ನೀಯದೆ ತಮ್ಮ ಮಿತ್ರರಾಷ್ಟ್ರಗಳಾದ ಇಂಗ್ಲಂಡ, ಫ್ರಾನ್ಸ್ ಮತ್ತು ರಸಿಯಾ ರಾಷ್ಟ್ರಗಳ ಸಹಾಯ ಬೇಡಿದರು. ಕೊನೆಗೆ ಈ ಪ್ರಶ್ನೆಯನ್ನು ಶಾಂತರೀತಿಯಿಂದ ಬಗೆಹರಿಸಲು ಈ ರಾಷ್ಟ್ರಗಳು ಮುಖ್ಯವಾಗಿ ಇಂಗ್ಲಂಡವು ಯತ್ನಿಸಿದ್ದಲ್ಲಿ, ಎರಡೂ ರಾಷ್ಟ್ರಗಳಿಗೂ ಸಮಾಧಾನಕರವಾದ ಕರಾರುಮಾಡಲು ಎಳಸಿದ ಯತ್ನಗಳು ನಿಷ್ಫಲವಾದವು. ಮುಂದೆ ಹಿಟ್ಲರನು ಯುದ್ಧಮಾಡಲು ಸನ್ನದ್ಧನಾಗಲು ಬ್ರಿಟಿಷ ಮುಖ್ಯಮಂತ್ರಿಯು ಈ ಯುದ್ಧದಿಂದ ಝೆಕೊ-ಸ್ಲೊವೇಕಿಯಾ ದೇಶಕ್ಕೆ ಆಗಬಹುದಾದ ಅಪಾರ ಹಾನಿಯನ್ನು ತಪ್ಪಿಸಲಿಕ್ಕೆ ಮ್ಯೂನಿಕದಲ್ಲಿ ಹಿಟ್ಲರನೊಡನೆ ರಾಜಿಯ ಒಡಂಬಡಿಕೆಮಾಡಿ ಇನ್ನು ಜರ್ಮನಿಯು ತನ್ನ ರಾಜ್ಯದ ಹೆಚ್ಚಿನ ಬೆಳವಣಿಗೆಮಾಡುವದಿಲ್ಲವೆಂಬ ಅವನ ವಚನದ ಮೇಲೆ ವಿಶ್ವಾಸವಿಟ್ಟು, ಝೆಕೊ-ಸ್ಲೊವೇಕಿಯಾದ ಅವನ ಬೇಡಿದ ಭಾಗವನ್ನೂ ಅದು ಒಳಕೊಂಡ ಎಲ್ಲ ವಸ್ತು, ಕೈಗಾರಿಕೆಯ ಸಂಗ್ರಹವನ್ನೂ ಹಿಟ್ಲರನಿಗೆ ಒಪ್ಪಿಸುವಂತೆ ಮಾಡಿದರು.

ಮುಂದೆ ಹಿಟ್ಲರನು ಝೆಕೊ-ಸ್ಲೊವೀಕಿಯಾದವರಲ್ಲಿ ಶಾಂತತೆಯ ರಾಜ್ಯ ಏಲ್ಲವೆಂದೂ, ಅವರಲ್ಲಿರುವ ತೊಂದರೆಗಳ ನಿವಾರಣೆಗಾಗಿ ಅವರ ಒಬ್ಬ ಮಂತ್ರಿಯ ಬೇಡಿಕೆಯಂತೆ ತನ್ನ ಸೈನ್ಯವನ್ನು ಮುಂದರಿಸಿ ಇಡೀ ರಾಷ್ಟ್ರವನ್ನು ಜರ್ಮನಿಯ ವಶವರ್ತಿಯಾಗಿ ಮಾಡಿದನು. ಇಲ್ಲಿಗೆ ಝೆಕೊ-ಸ್ಲೊವೇಕಿಯಾದ ಹಾಡು ಮುಗಿಯಿತು.

ಆಮೇಲೆ ಬಲಾಢ್ಯ ರಾಷ್ಟ್ರಗಳಾದ ಇಟಾಲಿ ಮತ್ತು ಜಪಾನಗಳೊಡನೆ ರಶಿಯಾದೇಶದ ವಿರುದ್ಧ ಪರಸ್ಪರ ಸಹಾಯದ ಕರಾರುಪತ್ರಿಕೆಯನ್ನು ಮಾಡಿ ತನ್ನ ರಾಜ್ಯದ ಭದ್ರತೆಯನ್ನು ಕಾದುಕೊಂಡನು. ಈ ರೀತಿಯಲ್ಲಿ ಯಾವರೀತಿಯ ತೊಂದರೆಯೂ ಇಲ್ಲದೆ ಅನೇಕ ದೇಶಗಳನ್ನು ಸೇರಿಸಿಕೊಂಡದ್ದರಿಂದ, ರಕ್ತಕುಡಿದು, ಕುಡಿದು ಕೊಬ್ಬಿದ ಹೆಬ್ಬುಲಿಯಂತೆ, ಇನ್ನೂ ಹೆಚ್ಚಿನ ರಾಜ್ಯಗಳನ್ನು ಜರ್ಮನಿಗೆ ಸೇರಿಸಿಕೊಳ್ಳುವ ಆಕಾಂಕ್ಷೆಗೆ ಠಾಕ್ಪಸೀ ಮಹತ್ವಾಕಾಂಕ್ಷೆಗೆ ಹಿಟ್ಲರನು ಬಲಿಯಾದನು, ಮತ್ತು ಪೋಲಂಡವನ್ನು ಜರ್ಮನಿಗೆ ಸೇರಿಸಲಿಕ್ಕೆ ಹವಣಿಸಿದನು.

ಈಪ್ರಕಾರ ಹಿಟ್ಲರನ ದುರಾಶೆಯ ಬೆಳವಣಿಗೆಯನ್ನು ನೋಡಿ ಇನ್ನು ಮುಂದೆ ಇವನನ್ನು ಹಾಗೆಯೇ ಬಿಡುವದು ಯೋಗ್ಯವಲ್ಲವೆಂದು ನಿಶ್ಚಯಿಸಿ ಇಂಗ್ಲಂಡ ಮತ್ತು ಫ್ರಾನ್ಸ್‌ದೇಶದ ಮಂತ್ರಿಗಳು ತಮ್ಮವೆರಡೂ ದೇಶಗಳು ಒಂದಾಗಿ ಇವನನ್ನು ಎದುರಾಯಿಸಿ ಇವನ ಮುಂದಿನ ಕಾರ್ಯಕ್ರಮಕ್ಕೆ ತಡೆ

ಹಾಕಲಿಕ್ಕೆ ಬೇಕಾದ ಸೈನ್ಯ, ವಿಮಾನಪಡೆ, ಹಡಗುಪಡೆಗಳನ್ನು ಸಜ್ಜುಗೊಳಿಸ ಹತ್ತಿದರು. ಮತ್ತು ಪೋಲಂಡದ ವಿಷಯದ ಇವನ ಧೋರಣಕ್ಕೆ ತಡೆಹಾಕಲಿಕ್ಕೆ ರಶಿಯಾ ಪೋಲಂಡದವರೊಡನೆ ಒಪ್ಪಂದಮಾಡುವ ಪ್ರಯತ್ನ ನಡೆಯಿಸಿದರು. ಆದರೆ ಕಪಟನಾಟಕಿಯಾದ ಹಿಟ್ಲರನು ತಾನು ರಸಿಯದ ವಿರುದ್ಧ ಜಗತ್ತಿಗೆಲ್ಲಾ ತಿಳಿಯುವ ರೀತಿಯಲ್ಲಿ ಪ್ರಕಟಿಸಿದ ಭಾವನೆಗಳನ್ನೆಲ್ಲಾ ಬದಿಗಿಟ್ಟು ತನ್ನ ಆಪ್ತ ಮಂತ್ರಿಯಾದ ರಿಬ್ಬನ ಟ್ರೊಪನೆಂಬವನನ್ನು ಕಳುಹಿಸಿ ಗುಪ್ತರೀತಿಯಿಂದ ರಶಿಯ ದೊಡನೆ ಪರಸ್ಪರ ಸಹಾಯಕ ಒಪ್ಪಂದವನ್ನು ಮಾಡಿ, ರಶಿಯವನ್ನು ಜರ್ಮನಿಯ ಗೆಳೆಯನನ್ನಾಗಿ ಮಾಡಿದನು.

ಇದರಿಂದ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳೆಣಿಸಿದ ಒಪ್ಪಂದದ ಯೋಜನೆಯು ನಿರರ್ಥಕವಾಯಿತು. ಆದರೂ ಈ ಸಲ ಹಿಟ್ಲರನನ್ನು ಎದುರಾಯಿಸಿ ಅವನ ಈ ರಾಕ್ಷಸೀ ಮಹಾತ್ವಾಕಾಂಕ್ಷೆಗೆ ತಡೆಹಾಕುವ ಬಗ್ಗೆ ಈ ಎರಡೂ ದೇಶಗಳು ನಿರ್ಧರಿಸಿ, ಪೋಲಂಡದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವದರಲ್ಲಿ ಸಹಾಯಮಾಡುವೆವೆಂತ ತಾವು ಕೊಟ್ಟ ವಚನದ ಪಾಲನೆಗಾಗಿ ಹಿಟ್ಲರನು ಪೋಲಂಡದಲ್ಲಿ ಪ್ರವೇಶಿಸಿದ್ದಾದರೆ ತಾವಿಬ್ಬರೂ ಕೂಡಿ ಜರ್ಮನಿಯ ವಿರುದ್ಧ ಯುದ್ಧಹೂಡುವೆವೆಂದು ಸಾರಿ ತಿಳಿಸಿದರು. ಆದರೆ ಹಿಟ್ಲರನು ಇವುಗಳ ಬೆದರಿಕೆಗೆ ಲಕ್ಷ್ಯವೂರೈಸದೆ, ಪೋಲಂಡದ ಪಶ್ಚಿಮ ಭಾಗವನ್ನು ತನಗೆ ಕೂಡಲೇ ಒಪ್ಪಿಸದಿದ್ದರೆ ತಾನು ಯುದ್ಧವನ್ನು ಮಾಡೇ ಮಾಡುವೆನೆಂದು ಪೋಲಂಡಕ್ಕೆ ತಿಳಿಸಿದನು. ಮತ್ತು ಸಮಾಧಾನಕರ ಪ್ರತ್ಯುತ್ತರ ಸಿಗಲಿಲ್ಲವೆಂದು ತನ್ನ ಅಪಾರ ಸಶಸ್ತ್ರಬಲ, ವಿಮಾನಪಡೆಗಳನ್ನು ಪೋಲಂಡದ ಮೇಲೆದಾಳಿ ಮಾಡಲು ಕಳುಹಿಸಿದನು.

ಪೋಲಂಡದವರು ಶೂರತನದಿಂದ ಕಾದಾಡಿದರೂ ಅವರ ಸೇನಾಬಲ, ಸಾಮಗ್ರಿ ಸಂಗ್ರಹ ಮೊದಲಾದವು ಕಡಿಮೆ ಇದ್ದುದರಿಂದ ಸಂಪೂರ್ಣವಾಗಿ ಸೋಲಬೇಕಾಯಿತು. ಇತ್ತಲಾಗಿ ಪೂರ್ವಭಾಗವನ್ನು ರಶಿಯಾದೇಶದ ದಳಗಳು ಬಂದು ಆಕ್ರಮಿಸಿದ್ದರಿಂದ ಸದ್ಯಕ್ಕೆ ಇಡೀ ಪೋಲಂಡದೇಶವೇ ಹೋದಂತಾಯಿತು.

(ಮುಂದೆ ಸಾಗುವದು.)

ಪ್ರಕಟನೆ:—ಸದಾಶಿವ ಜ್ಯೋತಿ ಶೇಲ್ಕೆ ಎಂಬ ಉಮೇದವಾರನು ಕಳೆದ ಪ್ರಾ. ಸ್ಕೂ. ಲಿ. ಸ. ಪ. ಯಲ್ಲಿ ಹೊರಗಿನಿಂದ ತಯಾರಿಸಿದ ಉತ್ತರಗಳನ್ನು ತನ್ನದಾಗಿ ಮಾಡಲು ಪ್ರಯತ್ನಿಸಿದ್ದಕ್ಕಾಗಿ ಈತನನ್ನು ತಾ॥ ೩೧-೫-೧೯೪೪ರವರೆಗೆ ಯಾವ ಶಾಲೆಯಲ್ಲಿಯೂ ತಕ್ಕೊಳ್ಳಬಾರದು; ಯಾವ ಸರಕಾರೀ ಪರೀಕ್ಷೆಗೂ ಕೂಡ್ರಗೊಡಬಾರದು; ಎಂದು ಮೈ. ಎ. ಇ. ದ. ಭಾ. ರವರು ತಿಳಿಸುತ್ತಾರೆ.

ಬ್ರಿಟನ್ನಿನ ವಿಮಾನಪಡೆ

ಬ್ರಿಟನ್ನಿನ "ರಾಯಲ್ ಎಅರ ಫೋರ್ಸ" ದ ಸಂಬಂಧದ ಈ ಕೆಳಗೆ ಹೇಳುವ ಮಾಹಿತಿಯು ನಮ್ಮ ವಾಚಕರಿಗೆ ಮನೋರಂಜಕವಾಗಬಹುದು. ಈ ವಿಮಾನದಳದಲ್ಲಿ ಕೆಳಗೆ ಹೇಳುವ ನಾಲ್ಕು ಬಗೆಯ ವಿಮಾನ ವಿಭಾಗಗಳಿರುವವು.

೧. **ಬಾಂಬರ ವಿಮಾನಗಳು**— ಇವು ವಿಮಾನದಳದ 'ಆಕ್ರಮಣ' ವಿಭಾಗಕ್ಕೆ ಸೇರಿದವು. ಇವನ್ನು ಭಾರವಾದ ಬಾಂಬುಗಳನ್ನು ಒಯ್ಯುವದಕ್ಕಾಗಿ ಕಟ್ಟಿರುವರು. ಇವು ಬಹು ಎತ್ತರದಲ್ಲಿ ಹಾರುವವು. ಮತ್ತು ಮದ್ದುಗುಂಡುಗಳ ಕಾರಖಾನೆ, ಪೆಟ್ರೋಲಿನ ಉಗ್ರಾಣ, ವಿಮಾನ ಗೃಹಗಳು, ರೈಲುದಾರಿಯ ಕೂಟ (ಜಂಕ್ಶನ್) ಮೊದಲಾದ ಸೈನ್ಯದ ಸಾಮಗ್ರಿ ಸಂಗ್ರಹ ಸ್ಥಳಗಳ ಮೇಲೆ ಬಾಂಬುಗಳನ್ನು ಚೆಲ್ಲುವವು. ಕೆಲಕೆಲವುಸಾರೆ ಸಬ್‌ಮರೀನ ಹಡಗವು ಅವುಗಳ ದೃಷ್ಟಿಗೆ ಬಿದ್ದರೆ ಅವು ಮುಳುಗುವದಕ್ಕಿಂತ ಮೊದಲೇ ಅವುಗಳ ಮೇಲೆ ಬಾಂಬುಗಳನ್ನು ಎಸೆಯುವವು. ಭೂಮಿಯ ಮೇಲಿನ ಯುದ್ಧದಲ್ಲಿ ಇವು ವೈರಿಗಳ ಸೈನ್ಯದ ಮೇಲೆ ಹಲ್ಲೆಮಾಡುವವು. ಮತ್ತು ಹಗೆಗಳ 'ಫಾಯಿಟರ' ವಿಮಾನಗಳಿಂದ ಆತ್ಮರಕ್ಷಣೆಮಾಡಿಕೊಳ್ಳುವಾಗ ವಿಶೇಷರೀತಿಯಿಂದ ಕಟ್ಟಿರುವ ಯಂತ್ರ ಸಾಧನಗಳಿಂದ ಅವುಗಳ ಮೇಲೆ ಯಾಂತ್ರಿಕ ತೋಪುಗಳನ್ನು ಹಾರಿಸುವವು. ಮತ್ತು ವಿಮಾನಗಳ ವಿರುದ್ಧ ಹೋರಾಡುವ ತೋಪುಗಳ ಹೊಡೆತಕ್ಕೆ ಸಿಕ್ಕು ಬಾರದೆಂದು ಅತಿಶಯ ಎತ್ತರದಲ್ಲಿ ಹಾರಾಡುವವು; ಆದಕ್ಕಾಗಿ ಈ ವಿಮಾನಗಳಲ್ಲಿರುವವರಿಗೆ ಆಕ್ಸಿಜನ್ (ಪ್ರಾಣವಾಯು) ದ ಪೂರೈಕೆಯ ವ್ಯವಸ್ಥೆಯಿರುವದು. ವೈರಿಗಳ 'ಫಾಯಿಟರ' ವಿಮಾನಗಳ ಹೊಡೆತವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಈ ವಿಮಾನಗಳು ತಮ್ಮ ಅರಕ್ಷಿತ ಭಾಗಗಳು ಸುರಕ್ಷಿತವಾಗುವಂತೆ ಯಾವಾಗಲೂ ಅನೇಕ ವಿಮಾನಗಳು ಕೂಡಿ ವ್ಯೂಹವನ್ನು ರಚಿಸಿಕೊಂಡು ಹಾರುವವು.

೨. **ಫಾಯಿಟರ ವಿಮಾನಗಳು**—ಇವು ವಿಮಾನದಳದಲ್ಲಿ 'ಆತ್ಮರಕ್ಷಣೆ' ಯ ಕಾರ್ಯವನ್ನು ಮಾಡುವವು. ಇವುಗಳ ವೇಗವೂ ಬಹಳ; ಬಾಂಬರ ವಿಮಾನಗಳನ್ನು ಹಿಮ್ಮೆಟ್ಟಿಸಿ ಸಾಗುವವು; ಮತ್ತು ಅವುಗಳ ಮೇಲೆ ಯಾಂತ್ರಿಕ ತೋಪುಗಳನ್ನು ಹಾರಿಸಿ ವೈರಿಪಕ್ಷದ ವೈಮಾನಿಕರನ್ನು ಕೊಲ್ಲುವದು, ಪೆಟ್ರೋಲಿನ ಸಂಗ್ರಹವನ್ನು ಒಡೆಯುವದು, ಯಂತ್ರಗಳನ್ನು ಕೆಡಿಸುವುದು ಅಥವಾ ಆ ವಿಮಾನಗಳಿಗೆ ಬೆಂಕಿ ಹಚ್ಚುವದು ಮೊದಲಾದ ಕೆಲಸಗಳನ್ನು ಮಾಡುವವು.

೩. **ಭೂಸೈನ್ಯದ ನೆರವಿಗಿರುವ ನಿರೀಕ್ಷಕ ವಿಮಾನಗಳು**—ಇವು ಬಹು ೀವ್ರಗತಿಯಿಂದ ಹಾರುವವು. ಇದರೊಳಗಿನ ವೈಮಾನಿಕರಿಗೆ ಸುತ್ತಲಿನ ಸ್ಥಳಗಳ ಸ್ಪಷ್ಟವಾದ ನಿರೀಕ್ಷಣೆಗೆ ಬೇಕಾಗುವ ಎಲ್ಲ ಅನುಕೂಲತೆಗಳಿರುವವು. ಕುಶಲರಾದ ವೈಮಾನಿಕರು ಇವುಗಳಲ್ಲಿ ಕುಳಿತು ಹೋಗಿ ವೈರಿಗಳ ಯುದ್ಧೋಪಕರಣಗಳು ಇವರ ಚಲನವಲನಗಳು ಮೊದಲಾದವುಗಳ ಫೋಟೋಗಳನ್ನು ತೆಗೆದುಕೊಂಡು ಬಂದು ವೈರಿಗಳ ಯುದ್ಧಕ್ರಮದ ಮಾಹಿತಿಯನ್ನು ಸಂಗ್ರಹಿಸಿಕೊಡುವವು.

೪. **ಹಡಗುಪಡೆಯ ನೆರವಿನ ವಿಮಾನಗಳು**— ಇವು ತಮಗೆ ಒಪ್ಪಿಸುವ ಎಲ್ಲಬಗೆಯ ಕೆಲಸಗಳನ್ನು ಮಾಡಬೇಕಾಗುವದು. ಬಹುಶಃ ಇವು ಸಮುದ್ರ ತೀರದಲ್ಲಿ ಇರುವವು, ಮತ್ತು ಹಡಗುಪಡೆಯನ್ನು ಹಿಂಬಾಲಿಸಿರುವವು.

ವೈಮಾನಿಕದಳದಲ್ಲಿರುವವರು ಅಕಸ್ಮಾತ್ ತಮ್ಮ ಮೇಲೊದಗುವ ಭಯಂಕರ ಗಂಡಾಂತರಗಳನ್ನು ಎದುರಿಸುವದಕ್ಕಾಗಿ ಅತಿಶಯ ಧೈರ್ಯವುಳ್ಳವರಾಗಿರಬೇಕಾಗುವದು; ಮತ್ತು ತೀವ್ರಸೇಗವನ್ನೂ ಅಕಸ್ಮಾತ್ ಬದಲಾಗುವ ಶೀತೋಷ್ಣಗಳನ್ನೂ ತಾಳಿಕೊಳ್ಳುವಷ್ಟು ಶಾರೀರಿಕ ಶಕ್ತಿಯುಳ್ಳವರೂ ಇರಬೇಕಾಗುವದಲ್ಲದೆ ಅವರ ಕಣ್ಣು ಕಿವಿಗಳ ಶಕ್ತಿಯೂ ಸಹ ಬಹುತೀಕ್ಷ್ಣವಾಗಿರಬೇಕಾಗುವದು. ಬ್ರಿಟನ್ನಿನ ಆರ್. ಎ ಎಫ್. ದಳದವರು ಈ ಎಲ್ಲ ಗುಣಗಳುಳ್ಳವರಾಗಿದ್ದು ಅತಿಶಯ ಮೇಲ್ತರಗತಿಯವರೆಂದು ಎಣಿಸಲ್ಪಟ್ಟಿರುವರು. ಮತ್ತು ಈ ವೈಮಾನಿಕರಿಗೆ ಎಲ್ಲ ಬಗೆಯ ಶಿಕ್ಷಣವು ತುಂಬ ಯೋಗ್ಯರೀತಿಯಿಂದ ಕೊಡಲ್ಪಟ್ಟಿದ್ದು ಅವರು ಬೇಕಾದಾಗ ಬೇರೆಬೇರೆ ವಿಭಾಗಗಳೊಳಗಿನ ತಮ್ಮ ಕೆಲಸವನ್ನು ಬಜಲಿಸಿಕೊಳ್ಳಲು ಸಮರ್ಥರಿರುವರು. ಅವರಿಗೆ ಮೇಲ್ತರದ ಯಾಂತ್ರಿಕ ಜ್ಞಾನದ ಶಿಕ್ಷಣವೂ ಕೊಡಲ್ಪಟ್ಟಿರುವರು. ಬ್ರಿಟನ್ನಿನ ವೈಮಾನಿಕ ದಳದೊಳಗಿನ ವಿಮಾನಗಳ ಯಾಂತ್ರಿಕ ರಚನೆಯು ಜರ್ಮನ್ ವಿಮಾನಗಳ ಯಾಂತ್ರಿಕ ರಚನೆಗಿಂತಲೂ ಮೇಲ್ತರಗತಿಯದೆಂಬದಂತೂ ನಿರ್ವಿವಾದವಾದ ಮಾತು.

ಈ ವಿಷಯದ ಹೆಚ್ಚಿನ ವಿವರಣೆಗಳನ್ನು ನಮ್ಮ ವಾಚಕರಿಗಾಗಿ "ಬ್ರಿಟನ್ನಿನ ವಿಮಾನದಳದ ಸಾಮರ್ಥ್ಯ" (Britain's Air Power) ಎಂಬ ಪುಸ್ತಕದಲ್ಲಿ ಹೇಳಿದಂತೆ ಕ್ರಮವಾಗಿ ಪ್ರಕಟಿಸಲಿರುವವು.

ಧಾರವಾಡ ಜಿಲ್ಲೆಯ ಪ್ರಚಾರಸಮಿತಿಯ ಪ್ರಕಟನೆಗಳು.

(ಮೆ॥ ಎಸ್. ಆರ್. ತಾವಡೆ ಎಮ್. ಎ. ಅವರಿಂದ)

ಬ್ರಿಟನ್ನವು ಯುದ್ಧದಲ್ಲಿ ಯಾಕೆ ತೊಡಗಿದೆ?

೧. ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯದ ಸಂರಕ್ಷಣೆಗಾಗಿ.
೨. ಸತ್ಯ, ಸತ್ಪಕ್ಷ, ಸದ್ಧರ್ಮ, ಸುವಿಚಾರಗಳ ಪರಿಪಾಲನೆಗಾಗಿ.
೩. ನಿರುಪದ್ರವಿಗಳಾದ ಚಿಕ್ಕರಾಷ್ಟ್ರಗಳ ಮೇಲಿನ ಆಕ್ರಮಣಭಯದ ನಿವಾರಣೆಗಾಗಿ.
೪. ರಾಕ್ಷಸನಂತೆ ಪರರ ನಾಶಕ್ಕಾಗಿಯೇ ಹೊರಟಿರುವ ಹಿಟ್ಲರನ ನಿಗ್ರಹ ಕ್ಕಾಗಿ.
೫. ಮಾನವಜಾತಿಯ ಹಾಗು ಮಾನವಧರ್ಮದ ಶತ್ರುವಾದ ಹಿಟ್ಲರನ ತತ್ವದ ನಾಶಕ್ಕಾಗಿ.
೬. ಮಾನವಧರ್ಮ ವಿಚಾರಸ್ವಾತಂತ್ರ್ಯ ವ್ಯಕ್ತಿಸ್ವಾತಂತ್ರ್ಯಗಳ ರಕ್ಷಣೆಗಾಗಿ.
೭. ಜಗತ್ತಿನಲ್ಲಿ ಸುಖಶಾಂತಿಗಳನ್ನು ಸ್ಥಾಪಿಸುವದಕ್ಕಾಗಿ.

ಹಿಟ್ಲರನು ಕಾಲುಕೆದರಿ ಯುದ್ಧವನ್ನು ಯಾಕೆ ಹೂಡಿದನು?

೧. ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಹರಣಮಾಡುವದಕ್ಕಾಗಿ.
೨. ತನ್ನ ರಾಕ್ಷಸೀವೃತ್ತಿಯ ಮತ್ತು ಪಶುಶಕ್ತಿಯ ಪ್ರಸಾರಕ್ಕಾಗಿ.
೩. ಸತ್ಯ, ಸದ್ಧರ್ಮ, ಸಹಕಾರ, ಸಹಾನುಭೂತಿಗಳ ನಾಶಕ್ಕಾಗಿ.
೪. ತನ್ನ ಅನುನಾಯಿಗಳಲ್ಲದ ಮಾನವಜಾತಿಯ ದಾಸ್ಯಕ್ಕಾಗಿ.
೫. ಜಗತ್ತಿನ ಆರ್ಥಿಕಸ್ವಾತಂತ್ರ್ಯ ವ್ಯಕ್ತಿಸ್ವಾತಂತ್ರ್ಯ ವಿಚಾರಸ್ವಾತಂತ್ರ್ಯ ಗಳ ಹರಣಕ್ಕಾಗಿ.
೬. ಜಗತ್ತಿನ ಎಲ್ಲ ರಾಷ್ಟ್ರಗಳನ್ನು ತನ್ನ ಖಡ್ಗದ ಬಲದಿಂದ ಆಳುವದಕ್ಕಾಗಿ.
೭. ಅಖಿಲ ಜಗತ್ತನ್ನೇ ಪಾದಾಕ್ರಾಂತಮಾಡುವದಕ್ಕಾಗಿ.

ಈಗ ನಾವು ನಮ್ಮ ಸರಕಾರಕ್ಕೆ ಯಾಕೆ ನೆರವಾಗಬೇಕು?

೧. ನಮ್ಮ ಮತ್ತು ನಮ್ಮ ದೇಶದ ಉದ್ಧಾರಕ್ಕಾಗಿ ಮತ್ತು ರಕ್ಷಣೆಗಾಗಿ.
೨. ನಮ್ಮ ಏತ್ತಜೀವಿತಗಳ ಮತ್ತು ಧರ್ಮಸಾಹಿತ್ಯಸಂಸ್ಕೃತಿಗಳ ರಕ್ಷಣೆಗಾಗಿ.
೩. ನಮ್ಮ ಚರ್ಚು ಮಶೀದಿಗಳ ದೇವರು ಗುಡಿಗುಂಡಾರಗಳ ಸಂರಕ್ಷಣೆಗಾಗಿ.
೪. ನಮ್ಮ ಹೆಂಡಿರು ಮಕ್ಕಳು ಹೊಲಮನೆ ಹಣಕಾಸುಗಳ ಸಂರಕ್ಷಣೆಗಾಗಿ.

೫. ನಮ್ಮ ಆರ್ಥಿಕಸ್ವಾತಂತ್ರ್ಯ ವಿಚಾರಸ್ವಾತಂತ್ರ್ಯ ವ್ಯಕ್ತಿಸ್ವಾತಂತ್ರ್ಯಗಳ ರಕ್ಷಣೆಗಾಗಿ.

೬. ನಮಗೂ ಬ್ರಿಟಿಷರಿಗೂ ಇರುವ ಬಹುಕಾಲದ ಸ್ನೇಹಸಂಬಂಧಗಳ ಸಂರಕ್ಷಣೆ ಮತ್ತು ಸ್ಥಿರತೆಗಳಿಗಾಗಿ.

೭. ಹಿಟ್ಲರನ ಪಶುಶಕ್ತಿಯ ನಾಶಕ್ಕಾಗಿ ಮತ್ತು ಸತ್ಯ, ಸದ್ಧರ್ಮ, ಸುವಿಚಾರಗಳ ವಿಜಯಕ್ಕಾಗಿ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ
ಸುವರ್ಣಮಹೋತ್ಸವ

ಕರ್ನಾಟಕ ವಿದ್ಯಾವರ್ಧಕ ಸಂಘ:—ಅನೇಕ ರಾಜ್ಯ-ಸಾಮ್ರಾಜ್ಯಗಳನ್ನು ಕಟ್ಟಿ, ವೈಭವಶಾಲಿಯಾದ ಪ್ರಾಚೀನ ಇತಿಹಾಸ-ಸಾಹಿತ್ಯಸಂಪತ್ತಿನಿಂದ ಬೆಳೆದುಬಾಳಿದ ಕನ್ನಡನುಡಿಗೆ, ತನ್ನ ನಾಡಿನಲ್ಲಿಯೆ ದೆಸೆಗೇಡಿಯಾಗುವ ಕಾಲ ಬಂದೊದಗಿದ್ದಿತು. ಪರಕೀಯರ ಆಧಿಪತ್ಯಕ್ಕೆ ಆಗಾಗ ಒಳಗಾಗುತ್ತ ಬಂದಿರುವ ಉತ್ತರಕರ್ನಾಟಕದಲ್ಲಿಯಂತೂ ಕನ್ನಡನುಡಿಗೆ ಕಾಲೂರಿ ನಿಲ್ಲಲಿಕ್ಕೆ ಅವಕಾಶವೇ ಇಲ್ಲದಂತಾಗಿದ್ದಿತು. ಇಂತಹ ಸಮಯದಲ್ಲಿ ಕರ್ನಾಟಕದ ಶುಭಭವಿಷ್ಯವನ್ನು ಚಿಂತಿಸುವ ಕನ್ನಡದ ಅಭಿಮಾನಿಗಳಲ್ಲಿ ಕೆಲವರು ಸೇರಿ, ಕರ್ನಾಟಕದ ಹೆಸರನ್ನು ಅಳಿಯಗೊಡಬಾರದೆಂಬ ದೊಡ್ಡ ಗುರಿಯನ್ನಿಟ್ಟುಕೊಂಡು, ಕ್ರಿ. ಶ. ೧೮೯೦ ನೆಯ ವರ್ಷ ಧಾರವಾಡದಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಿದರು. ಅಂದಿನಿಂದ ಇಂದಿನ ವರೆಗೆ ಕನ್ನಡ ಸಾಹಿತ್ಯಸಂಸ್ಕೃತಿಗಳ ಸೇವೆಯ ಕಾರ್ಯವನ್ನು ಈ ಸಂಘವು ಅಖಂಡವಾಗಿ ಮಾಡುತ್ತ ಬಂದಿದೆ.

ಸಂಘವು ಮಾಡಿದ ಕಾರ್ಯದ ವಿವರಣೆ:—ಕೇವಲ ಉತ್ತರಕರ್ನಾಟಕದ ಕೆಲವು ಜನರಷ್ಟೇ ಸೇರಿ ಸಂಘವನ್ನು ಪ್ರಾರಂಭಿಸಿದ್ದರೂ ಇದರ ಕಾರ್ಯಕ್ಷೇತ್ರವು ಉತ್ತರಕರ್ನಾಟಕದ ಪ್ರದೇಶವಷ್ಟೇ ಎಂಬ ಸಂಕುಚಿತ ಭಾವನೆ ಆ ಸಂಸ್ಥಾಪಕರ ಮನಸ್ಸಿನಲ್ಲಿರಲಿಲ್ಲ. ಅವರು ಈ ಸಂಸ್ಥೆಯನ್ನು ಕಟ್ಟಿದುದು ಅಖಂಡ ಕರ್ನಾಟಕವನ್ನು ಕಣ್ಣೆದುರಿಗೆ ಇಟ್ಟುಕೊಂಡು. ಈ ಮಾತನ್ನು ಇದುವರೆಗಿನ ಸಂಘದ ಕಾರ್ಯಕಲಾಪಗಳಿಂದ ಯಾರೂ ಸ್ಪಷ್ಟವಾಗಿ ಕಂಡುಕೊಳ್ಳುವಂತಿದೆ.

ಕನ್ನಡಿಗರಿಗೆ ಅವರ ಭಾಷೆಯ-ಸಾಹಿತ್ಯದ-ನಿಕಟಪರಿಚಯವುಂಟಾಗುವಂತೆಯೂ, ಅದರ ಮೂಲಕ ಅವರಲ್ಲಿ ತಾಯ್ನುಡಿಯ ಪ್ರೀತಿಯು ಬೆಳೆಯು-

ವಂತೆಯೂ, ಪ್ರತಿವರುಷವೂ ಸಂಘವು ಕನ್ನಡ ಪರೀಕ್ಷೆ, ಲೇಖನ-ಭಾಷಣ ಸ್ಪರ್ಧೆ, ಕನ್ನಡ ಸಾಹಿತ್ಯ-ಸಂಸ್ಕೃತಿಗಳ ವಿಷಯಕವಾದ ವಿದ್ವಜ್ಜನರ ಉಪನ್ಯಾಸ, ಕನ್ನಡ ಗ್ರಂಥಕರ್ತರಿಗೆ ಬಹುಮಾನ ಪ್ರೋತ್ಸಾಹನಗಳನ್ನು ಸಲ್ಲಿಸುವುದು ಇವೇ ಮೊದಲಾದ ವಿಧಾಯಕ ಕಾರ್ಯಗಳನ್ನು ನಡೆಯಿಸುತ್ತಿದ್ದಿತು. ಉತ್ತರಕರ್ನಾಟಕಕ್ಕೆ ಮೈಸೂರು ಕನ್ನಡದ ಸಂಬಂಧವನ್ನು ತಂದುಕೊಳ್ಳಬೇಕೆಂಬ ಉದ್ದೇಶದಿಂದ ಮೈಸೂರು ಮಹಾರಾಜರಲ್ಲಿ ಬಿನ್ನಹಮಾಡಿಕೊಂಡು, ಪರೀಕ್ಷೆ-ಸ್ಪರ್ಧೆಗಳಿಗಾಗಿ ಮೈಸೊರಿನಿಂದ ಕನ್ನಡ ಪಂಡಿತರನ್ನು ಕರೆಯಿಸಿಕೊಳ್ಳುವ ಏರ್ಪಾಡನ್ನು ಮಾಡಿತು. ಮುಂದೆ ೧೮೯೬ ರಲ್ಲಿ 'ವಾಗ್ಭೂಷಣ' ಮಾಸಪತ್ರಿಕೆಯನ್ನು ಹೊರಡಿಸಿ, ತನ್ನ ಕಾರ್ಯದ ವ್ಯಾಪ್ತಿಯನ್ನು ಸಂಘವು ಇನ್ನೂ ಹೆಚ್ಚಿಸಿತು. ಅಂದಿನಿಂದ ೧೯೩೧ ನೆಯ ಇಸ್ವಿಯ ವರೆಗೆ 'ವಾಗ್ಭೂಷಣವು' ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿತು. ಈ ಪತ್ರಿಕಾಪ್ರಕಟನೆಯ ಜೊತೆಗೆ ಗ್ರಂಥಪ್ರಕಟನೆಯ ಕಾರ್ಯವನ್ನೂ ಕೈಕೊಂಡು, ಅಖಿಲ ಕರ್ನಾಟಕದ ಬೇರೆ ಬೇರೆ ಲೇಖಕರು ಬರೆದ ಸುಮಾರು ೯೬ ಗ್ರಂಥಗಳನ್ನು ಸಂಘವು ಬೆಳಕಿಗೆ ತಂದಿತು.

ಗ್ರಂಥಕರ್ತರಿಗೆ ಬಹುಮಾನ-ಪ್ರೋತ್ಸಾಹನ ಧನವೆಂದು ಇದುವರೆಗೆ ೧೮,೭೯೦ ರೂಪಾಯಿಗಳನ್ನು ಸಂಘವು ಹಂಚಿರುವುದು. ಬಹುಮಾನ ಪಡೆದ ಗ್ರಂಥಕರ್ತರ ಸಂಖ್ಯೆ ೨೦೦ ನ್ನು ಮಿಕ್ಕಬಹುದು; ಗ್ರಂಥಗಳ ಸಂಖ್ಯೆ ೪೦೦ ಕ್ಕಿಂತ ಹೆಚ್ಚಾಗಬಹುದು. ಈ ಗ್ರಂಥಕರ್ತರು ಬರಿಯ ಉತ್ತರಕರ್ನಾಟಕದವರಾಗಿರದೆ ಕನ್ನಡನಾಡಿನ ಎಲ್ಲ ಭಾಗದವರೂ ಇರುವರು. ಗ್ರಂಥಗಳಲ್ಲಿ ಕಥೆ, ಕಾದಂಬರಿ, ನಾಟಕ, ಪ್ರಹಸನ, ಪ್ರಬಂಧ, ಇತಿಹಾಸ, ಜೀವನಚರಿತ್ರೆ, ವಿಜ್ಞಾನ ಇವೆಲ್ಲ ವಿಷಯಗಳನ್ನು ಒಳಗೊಂಡುವು ಇರುವವು. ವಾಚನಾಲಯ-ಪುಸ್ತಕಭಾಂಡಾರಗಳನ್ನೂ ಸಂಘವು ಸುವ್ಯವಸ್ಥಿತವಾಗಿ ನಡೆಯಿಸಿಕೊಂಡು ಬಂದಿದೆ. ಉತ್ತರ ಕರ್ನಾಟಕದಲ್ಲಿಯ ಸುಪ್ರಸಿದ್ಧ ಸಾಹಿತ್ಯಕರನೇಕರು ಸಂಘದ ಪುಸ್ತಕಭಾಂಡಾರದ ಸಹಾಯವನ್ನು ಪಡೆದಿದ್ದಾರೆ; ಪಡೆಯುತ್ತಲಿದ್ದಾರೆ.

ಸಂಘದ ಸಾಂಪತ್ತಿಕ ಸ್ಥಿತಿ:—ಸಂಘದ ಕಾರ್ಯಕಲಾಪ ಬಳೆದಂತೆಲ್ಲ ಅದರ ಕಾರ್ಯರಂಗಕ್ಕೊಂದು ಸ್ವತಂತ್ರ ಕಟ್ಟಡದ ಅವಶ್ಯಕತೆಯೆನಿಸತೊಡಗಿತು. ಅದಕ್ಕಾಗಿ ಪ್ರಯತ್ನಮಾಡಲು ಮುಂಬಯಿ ಸರಕಾರದಿಂದ ಧಾರವಾಡ ನಗರದಲ್ಲಿ ಒಂದು ನಿವೇಶನ (ಪ್ಲಾಟ್) ದೊರೆಯಿತು. ೨೪೦೦೦ ರೂ. ಗಳ ಬೆಲೆಯ ಸುಂದರವಾದ ಕಟ್ಟಡವೂ ಕ್ರಮವಾಗಿ ಸಿದ್ಧವಾಯಿತು. ಕಟ್ಟಡದ ನಿಧಿಗಾಗಿ ಮುಂಬಯಿ ಸರಕಾರದವರು ೬೦೦೦ ರೂ. ಗಳನ್ನು, ಮೈಸೂರ ಸರಕಾರವು

೬೦೦೦ ರೂ. ಗಳನ್ನೂ ಉತ್ತರಕರ್ನಾಟಕದಲ್ಲಿಯ ಬೇರೆಬೇರೆ ಸ್ಥಾನಿಕಸಂಸ್ಥೆಗಳೂ ಬೇರೆಬೇರೆ ವ್ಯಕ್ತಿಗಳೂ ಸೇರಿ ಸುಮಾರು ೯೫೦೦ ರೂ. ಗಳನ್ನೂ ಉದಾರ ಮನಸ್ಸಿನಿಂದ ಸಲ್ಲಿಸಿರುವರು. ಹೆಚ್ಚಿನ ಹಣಕ್ಕಾಗಿ ಸಂಘವು ಸಾಲತೆಗೆಯು ಬೇಕಾಯಿತು. ಆ ಸಾಲದ ಮೂಲಧನ ಬಡ್ಡಿ ಸೇರಿ ಈಗ ಸುಮಾರು ೮೦೦೦ ರೂಪಾಯಿಗಳನ್ನು ತೆರಬೇಕಾಗಿರುವುದರಿಂದ ಆ ತಲೆಹೊರೆಯು ಮೂಲಕ ಸಂಘದ ಕಾರ್ಯೋತ್ಸಾಹವು ಕುಗ್ಗಿದಂತಾಗಿದೆ. ಸದ್ಯ ಸಂಘದ ಆಸ್ತಿಯು ಬೆಲೆ ೫೯,೬೦೦ ರೂಪಾಯಿಗಳಿದ್ದು ಋಣ ೧೦,೮೦೦ ರೂಪಾಯಿಗಳದಿದೆ. ಸಾಲದ ತಲೆಹೊರೆಯಿಂದ ಹೊರಕ್ಕೆ ಬಂದರೆ ಸಂಘದಿಂದ ಅಖಿಲಕರ್ನಾಟಕವೂ ಸಾಕಷ್ಟು ಪ್ರಯೋಜನ ಪಡೆಯುವುದೆಂದು ಹೇಳಬಹುದು. ಸಂಘದ ಪುಸ್ತಕಭಾಂಡಾರದಲ್ಲಿ ಸುಮಾರು ೫೨೦೦ ರೂಪಾಯಿ ಬೆಲೆಬಾಳಬಹುದಾದ ಸುಮಾರು ೪೦೦೦ ಸಂಖ್ಯೆಯ ಬೇರೆಬೇರೆ ಗ್ರಂಥಗಳಿವೆ. ಸಂಘವು ಬರೆಯಿಸಿ ಪ್ರಕಟಿಸಿದ ಸುಮಾರು ೧೦,೦೦೨ ರೂ. ಬೆಲೆಬಾಳಬಹುದಾದ ಹೊಸ ಗ್ರಂಥಗಳೂ ಇವೆ.

ಸಂಘದ ಸದ್ಯದ ಸ್ವರೂಪ:—ಈಗ ಕ. ವಿ. ವ. ಸಂಘಕ್ಕೆ ೨೧೨ ಜನ ಆಜೀವ ಸದಸ್ಯರಿರುವರು. ವರ್ಷಕ್ಕೊಂದು ಸಲ ಅವರ ಸಾಮಾನ್ಯ ಸಭೆಸೇರಿ ಅಧ್ಯಕ್ಷರನ್ನೂ, ಉಪಾಧ್ಯಕ್ಷ—ಕೋಶಾಧ್ಯಕ್ಷರನ್ನೂ, ಇಬ್ಬರು ಕಾರ್ಯದರ್ಶಿಗಳನ್ನೂ ಕಾರ್ಯಾಧ್ಯಕ್ಷರು ಸಹಿತವಾಗಿ ೧೦-೧೧ ಜನರ ಕಾರ್ಯಕಾರಿ ಮಂಡಲವನ್ನೂ ಆರಿಸಿ ನಿಯಮಿಸುವುದು. ಸಂಘದ ಪ್ರತಿಯೊಂದು ಆಗು-ಹೋಗನ್ನು ಕುರಿತೂ ಕಾರ್ಯಕಾರಿ ಮಂಡಲದಲ್ಲಿ ಚರ್ಚೆಯಾಗಿ, ಅದು ಮಾಡಿದ ನಿರ್ಣಯದಂತೆ, ಆಡಳಿತವು ನಡೆಯುತ್ತದೆ. ಕಾರ್ಯಕಾರಿ ಮಂಡಲದಲ್ಲಿ, ಸಂಸ್ಥೆಗಳನ್ನು ಚೆನ್ನಾಗಿ ನಡೆಯಿಸಿ ಅನುಭವಪಡೆದವರೂ ವಿದ್ವಾಂಸರೂ ಕನ್ನಡ ನಾಡು-ನುಡಿಗಳ ಬಗೆಗೆ ತುಂಬ ಅಭಿಮಾನಿಗಳಾದವರೂ ಕಾರ್ಯಕುಶಲರೂ ಇರುವರು. ಮುಂಬಯಿ ಸರಕಾರದ ವಿದ್ಯಾಖಾತೆಯ ದಕ್ಷಿಣಭಾಗದ ಪಠ್ಯಪುಸ್ತಕದ ಮಂಡಲದಲ್ಲಿಯೂ ಮುಂಬಯಿ ಸರಕಾರದ ಕನ್ನಡ ಸಂಶೋಧನ ಸಮಿತಿಯಲ್ಲಿಯೂ ಸಂಘಕ್ಕೆ ಪ್ರಾತಿನಿಧ್ಯವಿದೆ. ಮುಂಬಯಿ ಸರಕಾರದ ಕನ್ನಡ ಪ್ರಾದೇಶಿಕ ಪುಸ್ತಕ ಭಾಂಡಾರದ ಆಡಳಿತವನ್ನು ಸಂಘದ ಕಡೆಗೇ ಒಪ್ಪಿಸಬೇಕೆಂದು ಪ್ರಯತ್ನ ನಡೆದಿದೆಯಲ್ಲದೆ ಈ ಪ್ರಯತ್ನಕ್ಕೆ ಮುಂಬಯಿ ಕರ್ನಾಟಕದ ಜನತೆಯೂ, ಬೇರೆಬೇರೆ ಸಭಾ-ಸಮ್ಮೇಳನಗಳಲ್ಲಿಯ ಗೊತ್ತುವಳಿಗಳ ಮೂಲಕ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಕಳೆದ ೨೦ ವರ್ಷಗಳಿಂದಲೂ ಧಾರವಾಡದಲ್ಲಿ ನಡೆದುಕೊಂಡು ಬಂದಿರುವ ಶ್ರೀ ಶಾಂತೇಶ ವಾಚನಾಲಯವು, ಕಾರ್ಯೌಚಿತ್ಯವನ್ನರಿತು ಸಂಘದೊಂದಿಗೆ ಸಮರಸವಾಗಿ, ಸಂಘದ ಬಲವನ್ನು ಬೆಳೆಯಿಸುವ ಏರ್ಪಾಡಿನಲ್ಲಿದೆ. ತಜ್ಞರ ಉಪನ್ಯಾಸ-

ಪ್ರವಚನಗಳು ಎಂದಿನಂತೆ ಕಾಲಕಾಲಕ್ಕೆ ನಡೆಯುತ್ತಲೆ ಇವೆ. ಸಾಹಿತ್ಯಪರಿಷತ್ತಿನ ಉತ್ತರ ಕರ್ನಾಟಕ ಪ್ರಾಂತಸಮಿತಿಯು ಕಾರ್ಯದರ್ಶಿಯಲ್ಲಿದ್ದು ಸಂಪೂರ್ಣ ಸಹಕಾರಿಯಾಗಿರುವುದಲ್ಲದೆ, ಸಂಘದ ಹಲವು ಜನ ಹಿತಚಿಂತಕರಿಂದಲೆ ಸಾಹಿತ್ಯ ಪರೀಕ್ಷೆಯ ಪಾಠಗಳು ಸಂಘದ ಆಟ್ಟದ ಮೇಲೆ ನಡೆಯುತ್ತಲಿವೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಕನ್ನಡ ನುಡಿಯ ಮತ್ತು ನಾಡಿನ ಏಳಿಗೆಗಾಗಿ ಹೆಣಗುವ ಯಾವ ವ್ಯಕ್ತಿಯೆ ಇರಲಿ, ಸಂಘವು ಅವರೊಂದಿಗೆ ಸಹಕಾರಬುದ್ಧಿಯಿಂದಲೂ ವಿಶ್ವಾಸದಿಂದಲೂ ನಡೆದುಕೊಳ್ಳುವುದು. ಸಂಘದ ಕಾರ್ಯಕಲಾಪಗಳು ಕಾಲಕಾಲಕ್ಕೆ ಕನ್ನಡಿಗರಿಗೆ ಗೊತ್ತಾಗುವಂತೆ–ಕೆಲವು ದಿನಗಳಿಂದ ನಿಂತು ಹೋಗಿದ್ದ–'ವಾಗ್ಭೂಷಣ' ಮಾಸಪತ್ರಿಕೆಯನ್ನು ಮರಳಿ ಪ್ರಾರಂಭಿಸಲಾಗಿದೆ. ಕನ್ನಡಿಗರಲ್ಲಿ ಸಾಹಿತ್ಯದ ಸದಭಿರುಚಿಯನ್ನು ಹರಡುವ ಗುರಿಯನ್ನೂ ಈ ಮಾಸಪತ್ರಿಕೆ ತನ್ನ ಕಣ್ಣೆದುರಿಗೆ ಇರಿಸಿಕೊಂಡಿದೆ.

ಸಂಘದ ಸುವರ್ಣಮಹೋತ್ಸವ:— ಸಂಘವು ಸಂಸ್ಥಾಪಿತವಾಗಿ ಈ ವರ್ಷಕ್ಕೆ ೫೦ ವರ್ಷಗಳು ಮುಗಿಯುವುದರಿಂದ, ಬರಲಿರುವ ಡಿಸೆಂಬರ್ (೧೯೪೦) ತಿಂಗಳ ಕೊನೆಯ ವಾರದಲ್ಲಿ ಸಂಘದ ಸುವರ್ಣಮಹೋತ್ಸವವನ್ನು ಜರುಗಿಸಬೇಕೆಂದು ನಿರ್ಣಯಿಸಲಾಗಿದೆ. ಸಂಘಕ್ಕೆ ಹೊಸ ಜೀವಕಳೆಯನ್ನೂ ಹೆಚ್ಚಿನ ಕರ್ತೃತ್ವಶಕ್ತಿಯನ್ನೂ ತಂದುಕೊಟ್ಟು, ಅದರ ಕಾರ್ಯದ ವ್ಯಾಪ್ತಿಯನ್ನು ಹೆಚ್ಚಿಸಬೇಕೆಂಬುದೆ ಸುವರ್ಣಮಹೋತ್ಸವದ ಪ್ರಧಾನೋದ್ದೇಶ. ಈ ಉದ್ದೇಶ ಸಫಲವಾಗಬೇಕಾದರೆ ಸಂಘದ ತಲೆಯ ಮೇಲಿರುವ ೧೦,೦೦೦ ರೂ. ಗಳ ಸಾಲದ ಹೊರೆ ಕೆಳಕ್ಕಿಳಿಯಬೇಕು. ಇದಾಗಬೇಕಾದರೆ ಕನ್ನಡಜನತೆ ಸಂಘದ ಮೇಲೆ ಸುವರ್ಣ ವೃಷ್ಟಿಯನ್ನು ಕರೆಯಬೇಕು. ಸುವರ್ಣಮಹೋತ್ಸವದ ನೆಪದಿಂದ ಸುವರ್ಣವೃಷ್ಟಿ ಮಾಡಿಸಿ, ಸಂಘವು ತಾನು ಚೈತನ್ಯಪಡೆದು, ಹೊಸ ಕನ್ನಡ ನಾಡನ್ನು ಕಟ್ಟುವ ಕಾರ್ಯದಲ್ಲಿ ಉತ್ಸಾಹದಿಂದ ಮುಂದುವರಿಯಬೇಕೆಂದಿದೆ.

ಉತ್ಸವದ ಪೂರ್ವಸಿದ್ಧತೆ:— ಸುವರ್ಣಮಹೋತ್ಸವದ ಪ್ರಕಟನೆಗಳೆಂದು ವಿದ್ವಜ್ಜನರಿಂದ ಬರೆಯಲ್ಪಟ್ಟ— ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ—ಐದು ಮಹತ್ವದ ಗ್ರಂಥಗಳು ಈಗಾಗಲೆ ಪ್ರಕಟವಾಗಿವೆ. 'ಶಬ್ದಾನುಶಾಸನ' ಎಂಬ ಇನ್ನೊಂದು ವ್ಯಾಕರಣ ಗ್ರಂಥವು ಅಚ್ಚಿನಲ್ಲಿದ್ದು ಬೇಗನೆ ಪ್ರಕಟವಾಗುವುದರಲ್ಲಿದೆ. 'ಕ. ವಿ. ವ. ಸಂಘದ ಚರಿತ್ರೆ', 'ಉತ್ತರ ಕರ್ನಾಟಕದ ಜನಜೀವನ ಚರಿತ್ರೆ' ಎಂಬೆರಡು ಗ್ರಂಥಗಳನ್ನು ಬರೆಯಿಸಿ, ಸುವರ್ಣಮಹೋತ್ಸವದ ಸಮಯದಲ್ಲಿ ಪ್ರಸಿದ್ಧಪಡಿಸಬೇಕೆಂಬ

ಯೋಜನೆಯೂ ಇದೆ. ಧನಸಹಾಯಕ್ಕಾಗಿ ಕರ್ನಾಟಕದಲ್ಲಿಯ ಬೇರೆ ಬೇರೆ ಸರಕಾರ ಸಂಸ್ಥಾನಿಕರುಗಳನ್ನೂ ಬಿನ್ನವಿಸಿಕೊಳ್ಳಲಾಗಿದೆ. ಕೆಲವೊಂದು ಸಂಸ್ಥಾನಿಕರ ಕಡೆಗೆ ಶಿಷ್ಟಮಂಡಲಿಯನ್ನು ಕಳುಹಬೇಕೆಂಬ ನಿರ್ಣಯವೂ ಆಗಿದೆ. ಈಗಾಗಲೇ ಕೆಲವು ಕಡೆಗಳಿಂದ ಧನಸಹಾಯದ ಆಶ್ವಾಸನೆಗಳು ಬಂದಿವೆ. ಸಂಘದ ಸಂಚಾಲಕರು ಕನ್ನಡನಾಡಿನಲ್ಲಿ ಸುತ್ತಾಡಿ, ವೈಯಕ್ತಿಕ ಸಹಾಯವನ್ನೂ ಕೇಳಬೇಕೆಂದು ಇದ್ದಾರೆ. ಅದುದರಿಂದ ಅವರ ಕಾರ್ಯಗೌರವವನ್ನರಿತು, ಅಖಿಲ ಕರ್ನಾಟಕವು ತನ್ನ ಸಾಹಾಯ್ಯ ಹಸ್ತವನ್ನು ಮುಂದೆಮಾಡುವುದೆಂಬ ಭರವಸೆ ಸಂಘದ ಸಂಚಾಲಕರಿಗಿದೆ. ಈ ಭರವಸೆಯಿಂದಲೆ ಸುವರ್ಣಮಹೋತ್ಸವದ ಕಾರ್ಯಭಾರವನ್ನವರು ವಹಿಸಿ ಹೊರಟಿದ್ದಾರೆ.

ಉತ್ಸವದ ಕಾರ್ಯಕಲಾಪ :— ೧೯೪೦ ನೆಯ ಇಸ್ವಿಯ ಡಿಸೆಂಬರ್ ತಾ. ೨೫–೨೬–೨೭ ಈ ಮೂರು ದಿನ ಸುವರ್ಣಮಹೋತ್ಸವದ ಕಾರ್ಯಕಲಾಪಗಳು ನಡೆಯಲಿರುವುವು. ಆ ಸಮಯದಲ್ಲಿಯೇ ೨೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನೂ ಜರುಗಿಸಬೇಕೆಂದು ಬೆಳಗಾಂವಿಯಲ್ಲಿ ಸಮ್ಮೇಳನ ಸೇರಿದ ಕಾಲಕ್ಕೆ ಔತಣಕೊಟ್ಟಾಗಿದೆ. ಕಾರ್ಯಕಾರೀ ಸಮಿತಿಯವರೂ ಇದನ್ನು ಒಪ್ಪಿಕೊಂಡಿದ್ದಾರೆ. ಸಾಹಿತ್ಯಸಮ್ಮೇಳನದ ಉಪಾಂಗಗಳಾದ 'ಸಾಹಿತ್ಯಗೋಷ್ಠಿ' 'ಮಹಿಳಾ ಸಮ್ಮೇಳನ' ಗಳು ಆಗ ನಡೆದೇ ನಡೆಯುವುವಲ್ಲದೆ 'ನಾಟಕಗೋಷ್ಠಿ' 'ಕರ್ನಾಟಕ ಸಂಗೀತ ಗೋಷ್ಠಿ' ಗಳನ್ನೂ ನಡೆಯಿಸಬೇಕೆಂಬ ವಿಚಾರವಿದೆ. ಇಷ್ಟಲ್ಲದೆ ಗ್ರಂಥಪ್ರದರ್ಶನ, ಪತ್ರಿಕಾಪ್ರದರ್ಶನ, ಐತಿಹಾಸಿಕ ವಸ್ತುಪ್ರದರ್ಶನ ಮೊದಲಾದುವುಗಳನ್ನು ಏರ್ಪಡಿಸಲಾಗುವುದು (ವಿಶೇಷವಿವರಣೆಗಾಗಿ ಇನ್ನೊಂದು ಪ್ರಕಟನೆ ಹೊರಡುವುದು). ಜಾನಪದ ಸಾಹಿತ್ಯದ ವಿವಿಧಾಂಗಗಳ ಪ್ರದರ್ಶನವನ್ನೂ ಮಾಡಬೇಕೆಂಬ ವಿಚಾರವಿದೆ.

ಹೇಗೆ ಹೇಗೆ ಸಹಾಯಮಾಡಬೇಕು ?

ಸ್ವಾಗತ ಸದಸ್ಯರಾಗಿ :—೧ನೆಯ ವರ್ಗದವರು ೧೦–೦–೦
೨ನೆಯ ವರ್ಗದವರು ೫ ೦–೦

ಇವರಿಗೆ ಸಂಘದ ಸುವರ್ಣಮಹೋತ್ಸವದ ಕಾರ್ಯಕ್ರಮಕ್ಕೂ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳಿಗೂ ಉಚಿತ ಪ್ರವೇಶದ ಅಧಿಕಾರವುಂಟು.

ಆಜೀವ ಸದಸ್ಯರಾಗಿ :—೧ನೆಯ ವರ್ಗದವರು ೫೦–೦–೦
೨ನೆಯ ವರ್ಗದವರು ೨೫–೦–೦

ಈ ಮೊದಲಿನ ಸಂಘದ ಆಜೀವ ಸದಸ್ಯರಿಗಿರುವ ಎಲ್ಲ ಅಧಿಕಾರಗಳು ಇವರಿಗಿರುವುವು. ಸುವರ್ಣಮಹೋತ್ಸವದ ಪ್ರತಿಯೊಂದು ಕಾರ್ಯಕಲಾಪಕ್ಕೂ ಇವರಿಗೆ ಉಚಿತ ಪ್ರವೇಶವಿರುವುದು.

ಪ್ರದಾತೃಗಳಾಗಿ: ೧೦೦ಕ್ಕಿಂತ ಹೆಚ್ಚು ರೂಪಾಯಿ ಕೊಟ್ಟು.

ಇವರನ್ನು ಸುವರ್ಣಮಹೋತ್ಸವಕಾಲದಲ್ಲಿ ಆಮಂತ್ರಿತಸದಸ್ಯರೆಂದು ಪರಿಗಣಿಸಲಾಗುವುದಲ್ಲದೆ ಸಂಘದ ಕಟ್ಟಡದಲ್ಲಿ ಇವರ ಹೆಸರನ್ನು ಶಾಶ್ವತವಾಗಿ ಉಳಿಯುವಂತೆ ಬರೆಯಿಸುವ ಏರ್ಪಾಡನ್ನು ಮಾಡಲಾಗುವುದು.

ಪೋಷಕರಾಗಿ: ೫೦ಕ್ಕಿಂತ ಹೆಚ್ಚಿಗೆ ರೂಪಾಯಿಗಳನ್ನು ಕೊಟ್ಟು.

ಇವರನ್ನೂ ಆಮಂತ್ರಿತ ಸದಸ್ಯರೆಂದು ಪರಿಗಣಿಸಲಾಗುವುದಲ್ಲದೆ ಸಂಘದ ಸಭಾಭವನದಲ್ಲಿ ಇವರ ಛಾಯಾಚಿತ್ರವನ್ನಿರಿಸುವ ಯೋಜನೆ ಮಾಡಲಾಗಿದೆ.

ಸ. ಕಾರ್ಯದರ್ಶಿಗಳು.

ಕರ್ನಾಟಕದ ಕುಲಪುರೋಹಿತರಾದ

ಶ್ರೀಮಾನ್ ಆಲೂರ ವೆಂಕಟರಾಯರ ಪರಿಚಯ

ಶ್ರೀ. ಆಲೂರ ವೆಂಕಟರಾಯರೆಂದೊಡನೆ, ಸಾಹಿತ್ಯ,—ಸಂಸ್ಕೃತಿ—ಕರ್ನಾಟಕ ಏಕೀಕರಣ—ಇತಿಹಾಸ—ಧರ್ಮ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಸರ್ವತೋಮುಖವಾಗಿ ಕಾರ್ಯಮಾಡಿದ ಒಂದು ವ್ಯಕ್ತಿಯು ಕಣ್ಮುಂದೆ ಬಂದು ನಿಲ್ಲುವದು. ಕರ್ನಾಟಕದ ಸರ್ವತೋಮುಖವಾದ ಉನ್ನತಿಯೆಂಬದು ಇವರ ಸಾರ್ವಜನಿಕ ಜೀವನದ ಬೀಜಮಂತ್ರ, ಈ ದೃಷ್ಟಿಯಿಂದ ಇವರು ಕನ್ನಡಿಗರಲ್ಲಿ ತನ್ನತನದ ಅರಿವನ್ನು ಹುಟ್ಟಿಸಿ, ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿದ್ದೊಂದು ಹಿರಿಯ ಕೆಲಸ. ಅದೇ ನಾಡಿನ ಮುಂದಿನೇಳಿಗೆಯ ತಳಹದಿ.

ಧಾರವಾಡದಲ್ಲಿ ಇವರು ಗ್ರಂಥಕರ್ತರ ಸಮ್ಮೇಲನವನ್ನು ಕರೆದು ಕ. ಸಾ ಪರಿಷತ್ತಿನ ಬೀಜಾರೋಪಣೆ ಮಾಡಿದರು; ಮತ್ತದನ್ನು ಬೆಳೆಸಲು ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಮಂಡಲದಲ್ಲಿ ಹಲವು ವರುಷ ದುಡಿದರು. ಮೈಸೂರಲ್ಲಿ ಸೇರಿದ ೧೬ ನೆಯ ಸಾಹಿತ್ಯಸಮ್ಮೇಲನದ ಅಧ್ಯಕ್ಷಪದದ ಬಹುಮಾನವು ಇವರಿಗೆ ಬಹುಮಾನವಲ್ಲ; ಕರ್ತವ್ಯ ನಿರತರಾದ ಮಹಾಜನರಿಗೆ ಸಾರ್ವಜನಿಕರು ಒಪ್ಪಿಸುವ

ಒಂದು ಚಿಕ್ಕ ಕಾಣಿಕೆ. ಕನ್ನಡ ಭಾಷಾಭ್ಯುದಯದ ಬಗೆಗೆ ಆಗ ಅವರು ಕೊಟ್ಟ ಸಲಹೆಗಳು ವಿಚಾರಾರ್ಹವಾಗಿವೆ.

ವೆಂಕಟರಾಯರಿಗೆ ಪ್ರಾಥಮಿಕ ಶಿಕ್ಷಕರಲ್ಲಿಯೂ, ಶಿಕ್ಷಣವಿಷಯಗಳಲ್ಲಿಯೂ, ತುಂಬ ಅಭಿರುಚಿಯಿದೆ; ಆಸ್ಥೆಯಿದೆ. ಇವರು ರಾವಸಾಹೇಬ ಮಗದಾಳರೊಡನೆ ಸಹಕರಿಸಿ, ಶಿಕ್ಷಣ ವಿಸ್ತಾರಣೆ ಎಂಬ ಉತ್ತಮ ಹೊತ್ತಿಗೆಯನ್ನು ಹೊರಪಡಿಸಿದ್ದಾರೆ. ಅದು ನಮ್ಮ ಶಿಕ್ಷಕ ಬಂಧುಗಳಿಗೆ ತುಂಬ ಪರಿಚಯದದು.

೧೯೨೨ ರಲ್ಲಿ ಇವರು 'ಜಯಕರ್ನಾಟಕ'ವನ್ನು ಪ್ರಾರಂಭಿಸಿದರು. ಕನ್ನಡ ನುಡಿಯ ಬೆಳಿಗೆಯ ಹಾಗೂ ಜನತೆಯ ತಿಳಿವಳಿಕೆಯ ಹೆಚ್ಚುಗೆಯ ದೃಷ್ಟಿಯಿಂದ ಕರ್ನಾಟಕಕ್ಕೆ ಸಲ್ಲಿಸಿದ ಚಿನ್ನದ ಮುಡಿಪದು. ಎಳು ವರ್ಷಕಾಲ ಜಯ ಕರ್ನಾಟಕದ ಸಂಪಾದಕತ್ವವನ್ನು ವಹಿಸಿ, ತನ್ಮೂಲಕ ತಮ್ಮ ವಿಶಿಷ್ಟವಾದ ಸ್ವತಂತ್ರ ವಿಚಾರಸರಣಿಯನ್ನು ಮಂಡಿಸಿದುದರ ಫಲವಾಗಿ, ಕರ್ನಾಟಕವು ಏಳಡಿಯಾದರೂ ಮುಂದರಿಯಿತೆಂದು ಹೇಳಲಡ್ಡಿಯಿಲ್ಲ.

ವೀರಶ್ರೀ—ವಿದ್ಯಾಶ್ರೀ— ಸಾಮ್ರಾಜ್ಯಶ್ರೀ ಗಳಿಂದ ಕೀರ್ತಿಪಡೆದ ಕರ್ನಾಟಕಗತವೈಭವ'ದ ಬೆಳಕನ್ನು ಶ್ರೀ. ವೆಂಕಟರಾಯರು ಇಂದಿನ ಕನ್ನಡಿಗರ ಮುಂದಿರಿಸಿದರು. ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದ ಸಂಸ್ಥಾಪಕರಲ್ಲಿ ಇವರೂ ಒಬ್ಬರು. ಆ ಸಂಸ್ಥೆಯಿಂದ 'ಪ್ರಾಚೀನ ಕರ್ನಾಟಕ'ವೆಂಬ ಪತ್ರಿಕೆಯನ್ನು ಹೊರಡಿಸಿದರು. ಅವರ 'ಕರ್ನಾಟಕದ ವೀರರತ್ನಗಳು' ಎಂಬ ಗ್ರಂಥವು ಹಿಂದಣ ಶಾಸನ ಭಾಷೆಯ ಓಜಸ್ವಿತೆಯನ್ನು ಮೈಗೂಡಿಸಿಕೊಂಡ ವೀರವಾಣಿಯಿಂದ ಓದುಗರ ಮೈಯುಬ್ಬಿಸುವದು. ಜಯಕರ್ನಾಟಕದಿಂದ ನಿವೃತ್ತರಾದ ಮೇಲೆ ಇವರು ವಿರಮಿಸದೆ 'ನವಜೀವನ ಗ್ರಂಥಭಾಂಡಾರ'ವನ್ನು ತೆರೆದರು. ಅದರಿಂದ ಕನ್ನಡ ಸಾಹಿತ್ಯಕ್ಕೆ ಅನೇಕ ಅಮೂಲ್ಯವಾದ ಉದ್ಗ್ರಂಥಗಳು ಒದಗಿದವು.

ಇವರ ಧಾರ್ಮಿಕ ಜೀವನದಲ್ಲಿ ಶ್ರೀಮದ್ಭಗವದ್ಗೀತೆಯ ಅಭ್ಯಾಸಕ್ಕೆ ಶ್ರೇಷ್ಠಸ್ಥಾನವಿದೆ. ಲೋ. ತಿಲಕರ 'ಗೀತಾರಹಸ್ಯ'ವನ್ನು ಕನ್ನಡಿಸಿದುದಲ್ಲದೆ ಗೀತೆಯನ್ನು ಕುರಿತು ೩-೪ ಸ್ವತಂತ್ರ ಗ್ರಂಥಗಳನ್ನು ಈಚೆಗೆ ರಚಿಸಿ ಅರ್ಪಿಸಿದ್ದಾರೆ.

ಕರ್ನಾಟಕವು ಒಂದಾಗದೆ ಮುಂದಾಗದು. ಸ್ವತಂತ್ರ ವಿಶ್ವವಿದ್ಯಾಲಯವಿಲ್ಲದೆ ಅದು ಹಿರಿಯದಾಗದು—ಎಂಬುದು ಇವರ ದೃಢವಿಶ್ವಾಸ. ವೈ. ವಾ. ಕಡಪಾ ರಾಘವೇಂದ್ರರಾಯರಂತಹ ಹುರುಪಿನ-ಸ್ನೇಹಿತರ ಜೋಡು ಇವರಿಗೆ

ದೊರೆಯಿತು. ಇವರಿಬ್ಬರೂ ಮಾಡಿದ ಕಾರ್ಯಗಳು ಚಿರಸ್ಮರಣೀಯವಾಗಿವೆ. ರಾಷ್ಟ್ರೀಯತೆಯೂ ಪ್ರಾಂತೀಯತೆಯೂ ಇವರ ಜೀವನದಲ್ಲಿ ಸಮರಸವಾಗಿವೆ.

ಹೀಗೆ ವಿಶಾಲ ಕಾರ್ಯಕ್ಷೇತ್ರದಲ್ಲಿ ಬಹುಮುಖವಾಗಿ ದುಡಿದು, ಕನ್ನಡ ನಾಡನ್ನು ಸ್ವತಂತ್ರ ವಿಚಾರದ ಮೇಲುಮಟ್ಟಕ್ಕೆ ಮುಟ್ಟಿಸಿ, ಭಾರತೀಯ ಪ್ರಪಂಚದಲ್ಲಿ ಅನಕೊಂದು ಗಣ್ಯಸ್ಥಾನವನ್ನು ದೊರಕಿಸಿಕೊಟ್ಟ ಶ್ರೇಯಸ್ಸಿನ ಬಹುಭಾಗವು ಶ್ರೀ. ವೆಂಕಟರಾಯರಿಗೆ ಸಲ್ಲಬೇಕು. ಹೊಸಗನ್ನಡ ನಾಡನ್ನು ಕಟ್ಟುವುದಕ್ಕಾಗಿ ಇವರು ಕಳೆದ ೩೬ ವರುಷಗಳಿಂದ ಸರ್ವಸ್ವವನ್ನೂ ಸೂರೆಗೈದಿದ್ದಾರೆ; ದೇಹವನ್ನು ಚಂದನದ ಕೊರಡಿನಂತೆ ಸವೆಸಿದ್ದಾರೆ. ಇವರಿಗೆ ಕರ್ನಾಟಕವು ಕೃತಜ್ಞತೆಗಳನ್ನು ಸಲ್ಲಿಸಿದಷ್ಟೂ ಕಡಿಮೆಯೇ ?

ಇದೇ ಜುಲಾಯಿ ೧೨ನೆಯ ತಾರೀಖಿಗೆ ಇವರಿಗೆ ೬೦ ವರ್ಷಗಳು ತುಂಬಿದವು ಆ ಆನಂದಕಾರಕ ಶುಭ ಪ್ರಸಂಗದಲ್ಲಿ ಎಲ್ಲ ಕನ್ನಡಿಗರು ಅವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿ ಅವರಿಂದ ಕರ್ನಾಟಕಕ್ಕೆ ಇತೋಪ್ಯತಿಶಯವಾದ ಸೇವೆ ದೊರೆಯಲೆಂದೂ ಕರ್ನಾಟಕವು ಬೇಗನೆ ಸ್ವತಂತ್ರ ಪ್ರಾಂತವಾಡುವನ್ನು ಅವರು ಕಣ್ಣಾರೆಕಾಣಲೆಂದೂ ಹಾರೈಸಿದರು.

ಪ್ರಕಟನೆ

ಪ್ರಾಥಮಿಕ ಖಾಸಗಿ ಶಾಲೆಗಳಿಗೆ ಕೊಡತಕ್ಕ ಸರಕಾರಿ ಗ್ರ್ಯಾಂಟಿನ ವಿಷಯದಲ್ಲಿ ಸರಕಾರಿ ವರ್ತಮಾನಗಳ ಪ್ರಚಾರಾಧಿಕಾರಿಯು ಪ್ರಕಟನೆ ಈ ಕೆಳಗಿನಂತೆ ಇದೆ.

ಜನತೆಯ ಸಾಕ್ಷರತಾಯೋಜನೆಯಲ್ಲಿ ಸರಕಾರವು ಕೊಡತಕ್ಕ ವಿತ್ತ ಸಹಾಯಕ್ಕನುಸರಿಸಿ ಪ್ರತಿವರುಷ ಅನೇಕ ಗಾಂವಠಿ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಡುತ್ತಿರುವವು. ಈ ಹೊಸ ಶಾಲೆಗಳ ಚಾಲಕರು ತಮ್ಮ ಶಾಲೆಗಳನ್ನು ರಜಿಸ್ಟರ ಮಾಡಿ, ಗ್ರ್ಯಾಂಟುಕೊಡಲಿಕ್ಕೆ ತಕ್ಕವೇಳೆಯಲ್ಲಿ ಅರ್ಜಿಯನ್ನು ಕೊಡದಿದ್ದರೆ ಆ ಶಾಲೆಗಳ ತಪಾಸನ್ನು ಮಾಡಿ, ಗ್ರ್ಯಾಂಟಿಗೆ ಶಿಫಾರಸುಮಾಡಲಿಕ್ಕೆ ಡೆ. ಎ. ಇನ್ಸ್‌ಪೆಕ್ಟರರಿಗೆ ಸಾಕಷ್ಟು ಅವಕಾಶದೊರೆಯುವದಿಲ್ಲವಾದುದರಿಂದ ಈ ವರ್ಷ ಗ್ರ್ಯಾಂಟುಗಳಿಗಾಗಿ ಬರುವ ಹೊಸ ಅರ್ಜಿಗಳು ದಿಶಂಬರ ೧೫ ನೇ ತಾರೀಖಿನ ಒಳಗಾಗಿ ಮುಟ್ಟತಕ್ಕದ್ದು. ಈ ತಾರೀಖಿನೊಳಗಾಗಿ, ಮುಟ್ಟದೆ ಇದ್ದಲ್ಲಿ ಅಂಥ ಶಾಲೆಗಳನ್ನು ರಜಿಸ್ಟರ ಮಾತ್ರ ಮಾಡಲಾಗುವದಲ್ಲದೆ ಅವಕ್ಕೆ ೧೯೪೧ ರಲ್ಲಿ ಸಲ್ಲತಕ್ಕ ಗ್ರ್ಯಾಂಟು ಸಿಗಲಾರದು.

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು

Department of Public Instruction, Bombay.

Middle School Scholarship Examination.

1940

ದಕ್ಷಿಣ ಭಾಗ.

ಗುರುವಾರ, ತಾರೀಖು ಆನೆಯ ಫೆಬ್ರುವರಿ ಸನ್ ೧೯ಆಂನೆಯ ಇಸವಿ.

(ವೇಳೆ: ೧೧-೩೦ ರಿಂದ ೧೨-೩೦ ರ ವರೆಗೆ.)

ಅಂಕಗಣಿತ.

ಸೂಚನೆ:—ಮೇಲ್ವಿಚಾರಕರ ಅಪ್ಪಣೆಯಿಲ್ಲದೆ ಈ ಪುಟವನ್ನು ತಿರುವಬೇಡಿರಿ.

ತೆರವಿದ್ದ ಸ್ಥಳವನ್ನು ತೀವ್ರವೇ ತುಂಬಿರಿ :—

ಹೆಸರು (ಅಡ್ಡಹೆಸರನ್ನು ಮೊದಲು ಬರೆಯಿರಿ) _____

_____

ನಂಬರು:— _____

ವಯಸ್ಸು:—(ಸಂಪೂರ್ಣ ವರ್ಷ) _____ ಮತ್ತು ತಿಂಗಳ _____

ಇವತ್ತಿನ ತಾರೀಖು _____

ಶಾಲೆಯ ಹೆಸರು _____

ಧರ್ಮ ಮತ್ತು ಜಾತಿ _____

ಕೆಳಗಿನ ಸೂಚನೆಗಳನ್ನು ಲಕ್ಷ್ಯಪೂರ್ವಕವಾಗಿ ಓದಿರಿ :—

(೧) ಪರೀಕ್ಷೆಗೆ ಗೊತ್ತುಪಡಿಸಿದ ಅವಧಿಯು ಒಂದು ತಾಸು.

(೨) ಪ್ರಶ್ನೆಗಳ ಉತ್ತರಗಳನ್ನು ನಿಮಗೆ ಕೊಟ್ಟ ಪುಸ್ತಕಗಳಲ್ಲಿಯೇ ಬರೆಯಿರಿ

(೩) ೧ ರಿಂದ ೬ನೆಯ ಪ್ರಶ್ನೆಗಳ ಉತ್ತರಗಳನ್ನು ಮುಂದೆ ಕೊಟ್ಟ ಗೆರೆಗಳ ಮೇಲೆ ಬರೆಯಿರಿ: ಕಚ್ಚಾ ಕೆಲಸವನ್ನು ಬಲಗಡೆಯ ದಂಡೆಯಲ್ಲಿ ಮಾಡ ತಕ್ಕದ್ದು.

೭ ರಿಂದ ೯ನೆಯ ಪ್ರಶ್ನೆಗಳನ್ನು ಮಾದರಿಯ ರೀತಿಯಿಂದ ಬಿಡಿಸ ತಕ್ಕದ್ದು. ಪ್ರಶ್ನೆಗಳ ಬುಡದಲ್ಲಿ ಇರುವ ಸ್ಥಳದಲ್ಲಿ ರೀತಿಯನ್ನು ಚೆನ್ನಾಗಿ ವಿವರಿಸತಕ್ಕದ್ದು.

(೪) ಅದಷ್ಟು ತೀವ್ರ ಮತ್ತು ಸರಿಯಾಗಿ ಲೆಕ್ಕಗಳನ್ನು ಬಿಡಿಸಿರಿ. ಒಂದೇ ಲೆಕ್ಕವನ್ನು ಬಿಡಿಸುವದರಲ್ಲಿ ಹೆಚ್ಚು ವೇಳೆಯನ್ನು ಕಳೆಯಬೇಡಿರಿ

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. (೧) ೧೮೩೫
+೧೨೦೯
+ ೪೩೨
+೧೦೨೬
.....

(೨) ೯೬೮೭
−೩೨೯೨
.....

(೩) ೯೩೨ + ೨೪೬ + ೨೪ + ೧೫೬ = ...

(೪) ೭೩೨ ರಲ್ಲಿ ೨೯೩ ಕಳೆಯಿರಿ. .....

ಕೆಳಗೆ ಕೊಟ್ಟವುಗಳಲ್ಲಿ ಬೇಕಾಗುವ ಸಂಖ್ಯೆಗಳನ್ನು ಬರೆಯಿರಿ:—

(೫) ೧೫
೧೩
..

೪೩

(೬) ..
೩೨
೭೨

೧೫೦

(೭) ....
− ೩೫

೭೩

(೮) ಕೆಳಗಿನ ಸಂಖ್ಯೆಯನ್ನು ಅಂಕಿಯಲ್ಲಿ ಬರೆಯಿರಿ:—
ಎರಡು ಲಕ್ಷ ಮೂರು ಸಾವಿರದ ಏಳು.

೨. (೧) ೩೪೯೩
× ೧೯

---

(೨) ೩೭೨೪ ÷ ೭ = ...

ಕೆಳಗೆ ಕೊಟ್ಟವುಗಳಲ್ಲಿ ಬೇಕಾದ ಮೂರರಲ್ಲಿ ಬಿಟ್ಟಿರುವ ಸಂಖ್ಯೆಯನ್ನು ಬರೆಯಿರಿ:—

(೩) .....ಕ್ಕೆ ೭ ರಿಂದ ಗುಣಿಸಿದರೆ ೩೨೯ ಆಗುವದು.

(೪) ೨೫೩ ರಲ್ಲಿ ೩ ನ್ನು .....ಸಲ ಕಳೆಯಬಹುದು ಮತ್ತು ಬಾಕಿ .....ಉಳಿಯುವದು.

(೫) ೧೩; ೨೦; ೨೭; ೩೪; ಈ ಅಂಕಿಗಳನ್ನು ೬೯ ರ ವರೆಗೆ ಮುಂದೆ ಸಾಗಿಸಿರಿ.

(೬) ೨೯೪ ರ ಅವಿಭಾಜ್ಯ ಅವಯವಗಳು ಯಾವವು?

೨೯೪ = ೨ ×.....

(೧)

	ರೂ.	ಆ.	ಪೈ.
	೩	೬	೫
+	೪	೭	೯
+	೯	೩	೪

.....

(೨)

	ರೂ.	ಆ.	ಪೈ.
	೧೦	೦	೦
−	೬	೩	೯

.....

(೩)

	ಯಾ.	ಘ.	ಇಂ.
	೩	೪	೫
+	೬	೭	೪
+	೧೩	೩	೨

.....

(೪)

	ರೂ.	ಆ.	ಪೈ.
	೫	೩	೯
×			೩

.....

(೫) ೧೯೨೬ ಜನವರಿ ೧ ನೆಯ ತಾರೀಖು ಮತ್ತು ೧೯೨೪ ನೆಯ ಡಿಸಂಬರ ೩೧ ನೆಯ ತಾರೀಖು ಇವೆರಡರ ನಡುವೆ ಎಷ್ಟು ತಿಂಗಳುಗಳು ಆಗುವವು?

.....

(೩) ೪, ೬, ಅಥವಾ ೪ ಇಂಚಿಸಂತೆ ಸರಿಯಾದ ತುಂಡುಗಳನ್ನು ಮಾಡ ಬೇಕಾದರೆ ತೀರ ಕಡಿಮೆಯಾದ ತಂತಿಯು ಎಷ್ಟು ಉದ್ದ ಇರಬೇಕು?

.....

(೭) ರಾಮನ ತೂಕವು ೧೦೦ ಪೌಂ. ಅವನ ತಂಗಿಯ ತೂಕವು ೮೩ ಪೌಂಡು. ರಾಮನ ತೂಕವು ತಂಗಿಯ ತೂಕಕ್ಕಿಂತ ಎಷ್ಟು ಹೆಚ್ಚು?

.....

೪. (೧)

	೪	೨೬	೩
×			೨೩೧

.....

(೨) ೩೮೬೯÷೫೩=.....

(೩) ೩೯ ರೂಪಾಯಿಗಳನ್ನು ೩೨ ಭಿಕ್ಷುಕರಲ್ಲಿ ಸರಿಯಾಗಿ ಹಂಚಿರಿ. ಪ್ರತಿಯೊಬ್ಬನಿಗೆ ಎಷ್ಟು ಸಿಗುವದು ?

.....

(೪) ಆಂಜೇಕಟ್ಟಿಯ ಶಿಪಾಯಿಯು ದಿನಾಲು ೧೯ ಮೈಲಿನಂತೆ ವಾರದಲ್ಲಿ ೬ ದಿವಸಗಳ ವರೆಗೂ ಮತ್ತು ಆದಿತ್ಯವಾರ ೮ ಮೈಲಿನಂತೆಯೂ ನಡೆಯುವೆನೆಂದು ಹೇಳಿದನು. ೫೨ ವಾರಗಳಲ್ಲಿ ಅವನು ಎಷ್ಟು ಮೈಲು ನಡೆಯುವನು ?

.....

೫. (೧) $\frac{೧}{೫} + \frac{೧}{೨}$ = ...

(೨) $\frac{೩}{೪} - \frac{೧}{೫}$ = ...

(೩) $\frac{೨}{೩} \times \frac{೫}{೬}$ = ...

(೪) ೭ ÷ $\frac{೨}{೩}$ = ...

(೫) $\frac{೧}{೧೦} + \frac{೧}{೫} + \frac{೧}{೨}$ = ...

(೬) $\frac{೬}{೭} \times \frac{೩}{೪} \div \frac{೫}{೬}$ = ...

(೭) $\frac{೩}{೨} = \frac{೯}{....} = \frac{....}{೮}$

(೮) ೨$\frac{೫}{೬}$ − ೧$\frac{೨}{೩}$ = ...

೬. (೧) ೬ ಆಣೆಗೆ ಎರಡು ಪೌಂಡು ಕೆಂಪು ಬಣ್ಣ ಸಿಕ್ಕರೆ ೭ ಪೌಂಡಿಗೆ ನಾನು ಎಷ್ಟು ಬೆಲೆ ಕೊಡಬೇಕಾಗುವದು ?

.....

(೨) ೧$\frac{೨}{೩}$ ಆಣೆಯಂತೆ ೯ ಪತ್ರಗಳನ್ನೂ, ಒಂದಾಣೆಗೆ ಒಂದರಂತೆ ೯ ಪಾಕೀಟುಗಳನ್ನೂ ಮತ್ತು ೩ ಬಿಲ್ಲಿಗೆ ಒಂದರಂತೆ ೯ ಕಾರ್ಡುಗಳನ್ನು ಕೊಂಡರೆ ನಾನು ಎಷ್ಟು ಟಪಾಲು ಖರ್ಚು ಕೊಡಬೇಕಾಗುವದು ?

.....

(೩) ೫ ಆಣೆಯ $\frac{೨}{೩}$ ಮತ್ತು $\frac{೩}{೪}$ ಇವುಗಳಲ್ಲಿಯ ಅಂತರವೆಷ್ಟು ?

.....

(೪) ನನ್ನ ಅಣ್ಣನಿಗೆ ೨೧ ವರುಷ. ಅವನು ಹತ್ತು ವರುಷದವನಿದ್ದಾಗ್ಗೆ ನಾನು ಹುಟ್ಟಿದೆನು. ಇಬ್ಬರ ವಯಸ್ಸನ್ನು ಕೂಡಿ ಎಷ್ಟು ವರುಷಗಳಾದವು ?

೭. ೧೪ ಜನರಿಗೆ ಒಂದು ಬಾವಿಯನ್ನು ಅಗಿಯಬೇಕಾದರೆ ೨೮ ದಿವಸಗಳು ಹತ್ತುವವು. ಆದರೆ ೨೧ ಜನರಿಗೆ ಎಷ್ಟು ದಿವಸಗಳು ಹತ್ತುವವು?

೮. ಕೆಳಗೆ ಕೊಟ್ಟ ಸಾಮಾನುಗಳ ಕ್ರಯದ ಪಟ್ಟಿಯನ್ನು ಸಿದ್ಧಗೊಳಿಸಿರಿ:—

ಸೇರಿಗೆ ೧೪ ಆಣೆಯಂತೆ ೧೪ ಸೇರು ಬೆಣ್ಣೆ.
ಸೇರಿಗೆ ೩೪ ಆಣೆಯಂತೆ ೭ ಸೇರು ಸಕ್ಕರಿ.
ಒಂದು ಡಜ್ಜನಿಗೆ ೧೫ ಆಣೆಯಂತೆ ೧೪ ಮೇಣಬತ್ತಿ.
ಒಂದು ಡಬ್ಬಿಗೆ ೩ ರೂ. ೫ ಆಣೆಯಂತೆ ಒಂದು ಚಿಮಣಿ ಎಣ್ಣೆಯ ಡಬ್ಬಿ,

೯. ಒಬ್ಬ ಸೈನಿಕನು ಒಂದು ಹೆಜ್ಜೆಗೆ ೩೪ ಫೂಟು ನಡೆಯುತ್ತಾನೆ ತೀವ್ರವಾಗಿ ನಡೆಯುವಾಗ ಪ್ರತಿ ನಿಮಿಟಿಗೆ ೧೮೦ ಹೆಜ್ಜೆಗಳನ್ನು ಹಾಕುತ್ತಾನೆ. ಅವನು ಮೂರು ತಾಸಿನಲ್ಲಿ ಎಷ್ಟು ನಡೆಯುವನು?

(ವೇಳೆ: ೯–೩೦ ರಿಂದ ೨–೧೫ ರ ವರೆಗೆ.)

ಸಾಮಾನ್ಯ ಜ್ಞಾನ—ಕಾಗದ ೧ (ಐತಿಹಾಸಿಕ ಹಾಗೂ ಭೌಗೋಲಿಕ ರಾಜಕೀಯ).

GENERAL INFORMATION—PAPER I.

ಭಾಗ ೧ (ಐತಿಹಾಸಿಕ).

ಸೂಚನೆ:— (೧) ಪ್ರಶ್ನೆಗಳ ಎದುರಿಗೆ ಇಲ್ಲವೆ ನಡುವೆ ಬಿಟ್ಟಿರುವ ಸ್ಥಳಗಳಲ್ಲಿ ಉತ್ತರಗಳನ್ನು ಬರೆಯಿರಿ.
(೨) ಉತ್ತರಗಳನ್ನು ಆದಷ್ಟು ತೀವ್ರ ಬರೆಯಿರಿ.
(೩) ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.

೧. ಕೆಳಗೆ ಕೆಲವು ಸಂಗತಿಗಳನ್ನೂ ಇಸವಿಗಳನ್ನೂ ಕೊಟ್ಟಿದೆ. ಆಯಾ ೭ ಸಂಗತಿಗಳ ಎದುರಿಗೆ ಯೋಗ್ಯ ಇಸವಿಗಳನ್ನು ಬರೆಯಿರಿ:—

(೧) ಅಲಾವುದ್ದೀನನು ದೇವಗಿರಿಯನ್ನು ಮುತ್ತಿದ್ದು.....
(೨) ಮೌರ್ಯವಂಶದ ಚಂದ್ರಗುಪ್ತನು ಉತ್ತರ ಹಿಂದುಸ್ತಾನದ ಮೊದಲನೆಯ ಚಕ್ರವರ್ತಿಯಾದದ್ದು.....
(೩) ನರಗುಂದದ ಬಂಡಾಯ.....
(೪) ರಕ್ಕಸಗಿ ತಂಗಡಗಿಯ ಕಾಳಗ.....
(೫) ಪೇಶ್ವೆಯರ ಅಳಿಗಾಲ.....

(೬) ರಾಷ್ಟ್ರೀಯ ಸಭೆಯ (ಕಾಂಗ್ರೆಸ್ಸಿನ) ಜನ್ಮ.....

(೭) ವಿದ್ಯಾರಣ್ಯರು ಹಂಪೆಯಲ್ಲಿ ದೇಹವಿಟ್ಟರು.....

೧೮೫೫, ೧೫೬೫, ಕ್ರಿ. ಪೂ. ೩೨೧, ೧೨೯೪, ೧೮೮೫, ೧೩೬೬, ೧೮೫೮.

೨. ತೆರವಿದ್ದ ಸ್ಥಳಗಳಲ್ಲಿ ಸರಿಯಾದ ಶಬ್ದಗಳನ್ನು ಬರೆಯಿರಿ :— ೭

(೧) 'ಕನ್ನಡ ಭಾರತ,' 'ಶಿವತತ್ತ್ವ ಚಿಂತಾಮಣಿ' ಎಂಬ ಗ್ರಂಥಗಳು.....ಇವನ ಆಳಿಕೆಯಲ್ಲಿ ಬರೆಯಲ್ಪಟ್ಟವು.

(೨) ಪ್ರತಾಪಸಿಂಹನು ಮೊಗಲ ಚಕ್ರವರ್ತಿಯಾದ.....ನ ಸೈನ್ಯವನ್ನು ವಿರೋಧಿಸಿದನು.

(೩) ಶಿವಾಜಿಯು ಗೆದ್ದ ಮೊದಲನೆಯ ಕೋಟೆಯು.....

(೪) 'ಮೈಸೂರ ಹುಲಿ' ಯೆಂದು.....ನಿಗೆ ಹೆಸರು.

(೫) ಬಸವೇಶ್ವರರು.....ದಲ್ಲಿ ಐಕ್ಯರಾದರು.

(೬) ಹಸನ ಗಂಗೂ ಇವನು.....ರಾಜ್ಯವನ್ನು ಸ್ಥಾಪಿಸಿದನು.

(೭) .....ಇವನಿಗೆ 'ಪೂರ್ವ ಪಶ್ಚಿಮ ದಕ್ಷಿಣಾಧೀಶ್ವರ'ನೆಂಬ ಘನವಾದ ಬಿರುದು ಇತ್ತು.

೩. ಕೆಳಗೆ ಕೆಲವು ಐತಿಹಾಸಿಕ ಸಂಗತಿಗಳನ್ನೂ ಹೆಸರುಗಳನ್ನೂ ಕೊಟ್ಟಿದೆ. ೭
ಅವುಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ :—

(೧) ಶೀಖ ಧರ್ಮ ಸ್ಥಾಪಿಸಿದ್ದು.....

(೨) ಸ್ಥಾನೇಶ್ವರವನ್ನು ಸುಲಿದದ್ದು.....

(೩) ಶಿವಾಜಿಯ ಸೈನಿಕರನ್ನು ಬೆಳವಡಿಯಲ್ಲಿ ಸೋಲಿಸಿದ್ದು.....

(೪) ದಕ್ಷಿಣ ಮಹಾಸಾಗರ ದಂಡೆಯ ಮೇಲೆ ಜಯಸ್ತಂಭವನ್ನು ಏರಿಸಿದ್ದು.....

(೫) 'ಕರ್ನಾಟಕ ಚಕ್ರವರ್ತಿ' ಎಂಬ ಬಿರುದನ್ನು ದೊರಕಿಸಿದ್ದು....

(೬) 'ವಿದ್ಯಾರಣ್ಯಪುರ'ವೆಂಬ ನಗರವನ್ನು ಕಟ್ಟಿಸಿದ್ದು.....

(೭) ಮೊಗಲ ಸಾಮ್ರಾಜ್ಯವನ್ನು ಹಿಂದುಸ್ತಾನದಲ್ಲಿ ಸ್ಥಾಪಿಸಿದ್ದು....

ಬಾಬರ, ವಿಕ್ರಮಾದಿತ್ಯ, ಮಲ್ಲಪ್ಪ, ನಾನಕ, ಗಝನಿಯ ಮಹಮದ, ವೀರಬಲ್ಲಾಳ, ಇಮ್ಮಡಿಹರಿಹರ.

೪, ಕೆಳಗೆ ಕಂಸಿನಲ್ಲಿ ಕೊಟ್ಟವುಗಳಲ್ಲಿಯ ಸರಿಯಾದದ್ದನ್ನು ಇಟ್ಟು ಉಳಿದವು ೫ ಗಳ ಮೇಲೆ ಗೆರೆಯನ್ನು ಹೊಡೆಯಿರಿ ;—

(೧) ಶಿವಾಜಿಯು (ತಂದೆಯು, ಮಗನು, ತಮ್ಮನು) ಸಂಭಾಜಿಯು.

(೨) (ಮಯೂರವರ್ಮ, ಜಯಸಿಂಹ, ಚಂದ್ರಗುಪ್ತ) ಇವನು ಚಾಲುಕ್ಯ ವಂಶದ ಮೂಲ ಪುರುಷನು.

(೩) ಬಾಳಾಜಿಬಾಜೀರಾವ ಉರ್ಫ ನಾನಾಸಾಹೇಬನ ತರುವಾಯ (ಮೊದಲನೆಯ ಬಾಜೀರಾಯ, ಸವಾಯಿ ಮಾಧವರಾಯ, ಮಾಧವರಾಯ) ನು ಪಟ್ಟಕ್ಕೆ ಬಂದನು.

(೪) ಔರಂಗಜೇಬನು (೧೬೮೦, ೧೭೦೭, ೧೭೪೪, ೧೭೪೭) ನೆಯ ಇಸವಿಯಲ್ಲಿ ಮರಣ ಹೊಂದಿದನು.

(೫) ಚಾಂದಬೀಬಿಯು (ದಿಲ್ಲಿಯ, ಪುಣೆಯ, ಅಹಮದನಗರದ, ವಿಜಾಪುರದ) ರಾಣಿಯು.

ಭಾಗ ೨ (ಭೌಗೋಲಿಕ, ರಾಜಕೀಯ).

೧. (ಅ) ಹಿಂದುಸ್ತಾನದಲ್ಲಿಯ ಐದು ನದಿಗಳ ಹೆಸರುಗಳನ್ನು ಬರೆಯಿರಿ :—೭

. . . . . .

(ಬ) ಆ ನದಿಗಳು ಎಲ್ಲಿ ಹುಟ್ಟಿರುವವೆಂಬುದನ್ನು ಹೇಳಿರಿ :—

. . . . . .

(ಕ) ಪ್ರತಿಯೊಂದು ನದಿಯ ಮೇಲಿನ ಒಂದು ಪಟ್ಟಣದ ಹೆಸರನ್ನು ಬರೆಯಿರಿ :—

. . . . . .

೨. ಹಿಂದುಸ್ತಾನದ ಬಾಹ್ಯರೇಷೆಯ ನಕಾಶೆಯಲ್ಲಿ ಕೆಳಗೆ ಕೊಟ್ಟವುಗಳನ್ನು ೧೧ ಗುರುತಿಸಿರಿ :—

(ಅ) ಎಲ್ಲ ಪರ್ವತಾವಳಿಗಳು.

(ಬ) ಉತ್ತರ ಹಿಂದುಸ್ತಾನದ ಮೂರು ನದಿಗಳು.

(ಕ) ಹಿಂದುಸ್ತಾನದ ರಾಜಧಾನಿ, ಪುಣೆ, ಬಡೋದ, ಲಾಹೋರ, ಸಿವಮ್ಲಾ, ಕಾನಪುರ, ಮೈಸೂರು ಮತ್ತು ತ್ರಿಚಿನಾಪಳ್ಳಿ.

[ಪಟ್ಟಣಗಳನ್ನು × ಈ ಗುರುತಿನಿಂದ ತೋರಿಸಿ ಅದರ ಹತ್ತರ ಆಯಾ ಪಟ್ಟಣಗಳ ಮೊದಲನೆಯ ಅಕ್ಷರವನ್ನು ಬರೆಯಿರಿ. ಉದಾ: ಪುಣೆ: × ಪು.

೩. ತೆರವಿದ್ದ ಸ್ಥಳಗಳನ್ನು ತುಂಬಿರಿ :—
ಅಹಮದಾಬಾದವು.....ಗಳ ಸಲುವಾಗಿ ಪ್ರಸಿದ್ಧವದೆ.
ಕಾನಪುರವು.....ಗಳ ಸಲುವಾಗಿ ಪ್ರಸಿದ್ಧವದೆ.
ಮೈಸೂರು.....ಗಳ ಸಲುವಾಗಿ ಪ್ರಸಿದ್ಧವದೆ.

೪. ಹಿಂದುಸ್ತಾನದಲ್ಲಿಯ ಐದು ಗಿರಿನಿವಾಸಸ್ಥಾನಗಳ ಹೆಸರನ್ನು ಬರೆಯರಿ.

(ಜೇಳೆ : ೩ ರಿಂದ ೩-೪೫ ರ ವರೆಗೆ)

ಸಾಮಾನ್ಯ ಜ್ಞಾನ—೨ನೆಯ ಕಾಗದ (ಭೌಗೋಲಿಕ ಹಾಗು ಶಾಸ್ತ್ರೀಯ.)

GENERAL INFORMATION—PAPER II

ಸೂಚನೆ:—(೧) ತೆರವು ಬಿಟ್ಟ ಸ್ಥಳಗಳಲ್ಲಿಯೇ ಉತ್ತರ ಬರೆಯಿರಿ.
(೨) ಆದಷ್ಟು ತೀವ್ರ ಉತ್ತರ ಬರೆಯಿರಿ.
(೩) ನಿಮಗೆ ಯಾವದೊಂದು ಪ್ರಶ್ನೆಯ ಉತ್ತರವು ಗೊತ್ತಿಲ್ಲದಿದ್ದರೆ ಹೊತ್ತು ಕಳೆಯದೆ ಮುಂದಿನ ಪ್ರಶ್ನೆಗೆ ಸಾಗಿರಿ.

೧. ಮುಂಬಯಿ ಇಲಾಖೆಗೆ ಮಳೆ ತರುವ ಗಾಳಿಗಳು ಯಾವ ಯಾವ ದಿಕ್ಕಿನಿಂದ ಬೀಸುವವು ?.....

೨. ರತ್ನಾಗಿರಿಯಲ್ಲಿಯ ಮನೆಗಳಿಗೆ ಇಳಿದಾದ ಹಂಚಿನ ಚಪ್ಪರಗಳೂ, ಮತ್ತು ಸೊಲ್ಲಾಪುರದಲ್ಲಿಯ ಮನೆಗಳಿಗೆ ಮೇಲುಮುದ್ದಿ ಹಾಕಿದ ಮಾಳಿಗಳು ಏಕೆ ಇರುವವು ?.....

೩. ಮುಂಬಯಿ ಇಲಾಖೆಯಲ್ಲಿ ಹತ್ತಿ ಬೆಳೆಯುವ ಮೂರು ಜಿಲ್ಲೆಗಳು ಯಾವವು ?.....

೪. ಡೆಕ್ಕನದಲ್ಲಿಯ ಜನರ ಮುಖ್ಯ ಆಹಾರವು ಯಾವದು ?.....

೫. ಮುಂಬಯಿಂದ ಅಹಮದಾಬಾದಕ್ಕೂ ಮತ್ತು ಮುಂಬಯಿಂದ ಪುಣೆಗೆ ಹೋಗತಕ್ಕ ಗಾಡಿಗಳು ಯಾವ ಕಂಪನಿಯಿಂದ ನಡಿಸಲ್ಪಡುತ್ತವೆ ?.....

೬. ಮುಂಬಯಿ ಇಲಾಖೆಯ ಎರಡು ಮುಖ್ಯ ಬಂದರಗಳ ಹೆಸರನ್ನು ಹೇಳಿರಿ :— ....

೭. ಗುಜರಾಥದಲ್ಲಿಯ ಎರಡು ಮುಖ್ಯ ನದಿಗಳು ಯಾವವು ? .....

೮. ಪಶ್ಚಿಮ ಘಟ್ಟದ ಸರಾಸರಿ ಎತ್ತರವು ೧೦೦೦-೨೦೦೦, ೨೦೦೦-೩೦೦೦, ೩೦೦೦-೪೦೦೦ ಫೂಟು ಇರುತ್ತದೆ (ತಪ್ಪಿದ್ದ ಅಂಕಿಗಳ ಮೇಲೆ ಗೆರೆ ಹೊಡೆಯಿರಿ.)

೯. ಹಿಂದುಸ್ತಾನವು ಯಾವ ಖಂಡದಲ್ಲಿ ಇರುವದು ? .....

೧೦. ಕೊಂಕಣದಲ್ಲಿ ಗೋದಿಯು ಏಕೆ ಬೆಳೆಯುವದಿಲ್ಲ ? .....

೧೧. ಹಿಂದುಸ್ತಾನದಲ್ಲಿಯ ಉಷ್ಣ ಮರುಭೂಮಿಯು ಯಾವುದು? ....

೧೨. ಕೊಂಕಣದಲ್ಲಿ ಮಳೆಗಾಲದಲ್ಲಿ ಪ್ರವಾಸಮಾಡುವದು ತೀರ ಕಠಿಣ ವಾದುದು. ಏಕೆ? .....

೧೩. ಹಿಂದುಸ್ತಾನದಲ್ಲಿ ಯಾವ ಎರಡು ಸ್ಥಳಗಳಿಂದ ಚಹವು ಸಿಗುತ್ತದೆ? .....

೧೪. ಉತ್ತರ ಹಿಂದುಸ್ತಾನದಲ್ಲಿಯ ಎರಡು ಗಿರಿನಿವಾಸ ಸ್ಥಳಗಳು ಯಾವವು? .....

೧೫. ಮುಂಬಯಿ ಇಲಾಖೆಯಲ್ಲಿಯ ಮೂರು ಮುಖ್ಯ ಹತ್ತಿಯ ಗಿರಣಿಗಳ ಕೇಂದ್ರಗಳು ಯಾವವು? .....

೧೬. ಹಿಂದುಸ್ತಾನದ ಯಾವ ಭಾಗದಲ್ಲಿ ದಟ್ಟಾದ ವಸತಿಯು ಇರುವದು? .....

೧೭. ದಕ್ಷಿಣ ಹಿಂದುಸ್ತಾನದ ನದಿಗಳಲ್ಲಿ (ವ್ಯಾಪಾರದ) ದೊಡ್ಡ ಡೋಣಿಗಳು ಓಡಾಡುವದಿಲ್ಲ. ಏಕೆ? .....

೧೮. ಹಿಂದುಸ್ತಾನದಲ್ಲಿ ಕಲ್ಲಿದ್ದಲಿಯ ಕಣಿಗಳು ಎಲ್ಲಿ ಇವೆ? .....

೧೯. ಮುಂಬಯಿ ಇಲಾಖೆಯ ಯಾವ ಭಾಗದಲ್ಲಿ ತೆಂಗಿನ ಗಿಡಗಳು ಇರುವವು? .....

೨೦. ಮುಂಬಯಿ ಇಲಾಖೆಯಲ್ಲಿಯ ಯಾವ ಜಿಲ್ಲೆಯಲ್ಲಿ ಬರಗಾಲವು ಮೇಲಿಂದ ಮೇಲೆ ಬೀಳುವದು? .....

೨೧. ಹಿಂದುಸ್ತಾನದ ಯಾವ ಭಾಗದಲ್ಲಿ ಒಂಟೆಯನ್ನು ಸರಕುಗಳನ್ನು ಒಯ್ಯುವದಕ್ಕಾಗಿ ಉಪಯೋಗಿಸುವರು? .....

೨೨. ಮುಂಬಯಿ ಇಲಾಖೆಯಲ್ಲಿ ತಂಬಾಕು ಎಲ್ಲಿ ಬೆಳೆಯುವದು? .....

೨೩, ಕೆಳಗಿನ ಕೋಷ್ಟಕದಲ್ಲಿ ಮಳೆಯು ಬೀಳದೆ ಇದ್ದ ತಿಂಗಳುಗಳ ಕೋಷ್ಟಕವನ್ನು '*' ಈ ಚಿಹ್ನದಿಂದ ತುಂಬಿರಿ:—

ಜಾನೆ.	ಫೆಬ್ರು	ಮಾ.	ಎಪ್ರಿ.	ಮೇ.	ಜೂನ	ಜುಲೈ	ಅಗ.	ಸಪ್ಟಂ	ಅಕ್ಟೋ	ನವಂ.	ಡಿಸೆಂ.

(ಮುಂದೆ ಸಾಗುವದು.)

ಅಂಕಗಣಿತದ ಸಮನ್ವಿತ ಶಿಕ್ಷಣ (ನೂಲುವಪರಿಯನ್ನು)

ಶ್ರೀ. ಎಲ್. ಆರ್. ದೇಸಾಯಿ, ಸ್ಪೆಶಲ್ ಆಫೀಸರ್ ಫಾರ್ ಬೇಸಿಕ್ ಎಜ್ಯುಕೇಶನ್
ಬಾಂಬೆ ಪ್ರೆಸಿಡೆನ್ಸಿ ಅವರಿಂದ.

[ಪೀ ೧೯೪೦ನೆಯ ಸುಚಿಕೆಯಿಂದ ಮುಂದೆ ಸಾಗಿದ್ದು.]

ನೂತ ನೂಲಿನ ಲೆಕ್ಕವಿಡುವದರಲ್ಲಿ ಗುಣಾಕಾರ ಭಾಗಾಕಾರಗಳ ಪ್ರಸಂಗಗಳೂ ಬರುವವು. ಒಂದು ವಾರದಲ್ಲಿ ಒಬ್ಬ ಹುಡುಗನು ಎಷ್ಟು ನೂಲನ್ನು ತೆಗೆದನು? ಪ್ರತಿಯೊಬ್ಬ ಹುಡುಗನು ದಿನಾಲು ಅಷ್ಟೇ ಸಮಯ ಹಾಗೂ ಅಷ್ಟೇ ವೇಗದಿಂದ ನೂತರೆ ಒಂದುವರ್ಗದಲ್ಲಿ ಒಂದುದಿನದಲ್ಲಿ ಎಷ್ಟು ನೂಲಿನ ಸುತ್ತುಗಳನ್ನು ತೆಗೆಯಬಹುದು? ಇದು ಗುಣಾಕಾರವಾಯಿತು. ಇದರಂತೆಯೆ ವೇಗದ ಲೆಕ್ಕಮಾಡುವಾಗ ಎರಡರಿಂದ ಇಲ್ಲವೆ ಮೂರರಿಂದ ಭಾಗಾಕಾರ ಮಾಡುವ ಪ್ರಸಂಗ ಬರುವದು. ಒಂದು ದಿವಸದಲ್ಲಿ ಎಷ್ಟು ಅವಧಿಗಳನ್ನು ಶಿಕ್ಷಕನು ಮಾಡಿಕೊಂಡಿರುವನೋ ಅಷ್ಟರಿಂದ ಭಾಗಿಸಲಾಗಿ ದಿನದ ಸರಾಸರಿ ವೇಗವು ಬರುವದು. ಇದರಂತೆಯೆ ತೂಕದಿಂದ ಇಲ್ಲವೆ ಉದ್ದಳತೆಯಿಂದ ಗುಂಡಿ, ಲಟಿ ಮುಂತಾದ ಪರಿಮಾಣಗಳಿಂದ ಲೆಕ್ಕವನ್ನು ಇಡುವಾಗ ವಿವಿಧಪರಿಮಾಣಗಳೊಡನೆ ನಾಲ್ಕು ಕೃತಿಗಳ ಪರಿಚಯವಾಗುವದು. ಹಾಳಾದ ಅರಳೆಯ ಲೆಕ್ಕವನ್ನು ತೆಗೆಯುವಾಗ ವಿವಿಧ ಪರಿಮಾಣಗಳ ವಜಾಬಾಕಿಯು ಬರುವದು.

ಹಣದ ಪರಿಮಾಣವ ಲೆಕ್ಕಗಳು ಮತ್ತು ಕೊಟ್ಟ ನೂಲಿನ-ಪ್ರಮಾಣದಿಂದ ಎಷ್ಟು ಅರಿವೆಯು ತಯಾರಾಗುವದು? ಎಂಬ ಲೆಕ್ಕಗಳು ಮುಂದೆಬರುವವು. ಈ ಲೆಕ್ಕಗಳಿಂದ ವಿವಿಧಪರಿಮಾಣಗಳ ಗುಣಾಕಾರ ಭಾಗಾಕಾರಗಳು ಬರುವವು.

ಪ್ರತಿಯೊಬ್ಬ ಹುಡುಗನು ತನ್ನ ಸ್ವಂತದ ಖಾತೆಯ ಲೆಕ್ಕವನ್ನು ಹೀಗೆ ಇಡಬಹುದು—ನನಗೆ ಇಂತಿಷ್ಟು ವಾರ ಅರಿವೆಯು ಬೇಕಾಗುವದು. ನಾನು ಒಟ್ಟು ಇಂತಿಷ್ಟು ಗುಂಡಿ, ಇಂತಿಷ್ಟು ಲಟಿಗಳನ್ನು ನೂಲಬೇಕಾಗುವದು. (ಈ ಮಾಹಿತಿಯನ್ನು ಶಿಕ್ಷಕನು ಕೊಡಬೇಕು) ಇದರ ಪ್ರತಿದಿನದ ಲೆಕ್ಕವನ್ನು ಕೆಳಗಿನಂತೆ ಇಡಬಹುದು.

ನೂಲಬೇಕಾದ ನೂಲಿನ ಪ್ರಮಾಣ.	ಲಟಿ	ಗುಂಡಿ
ಆ ದಿವಸ ನೂತದ್ದು.	..	..
ಇನ್ನು ನೂಲುವದು ಉಳಿದದ್ದು.	..	..
ತಾರೀಖು ಇಲ್ಲವೆ ವಾರಗಳು.	..	..

(೪ ಪೂಟು=೧ ಸುತ್ತು; ೧೬೦ ಸುತ್ತುಗಳು=೧ ಲಟಿ; ೪ ಲಟಿಗಳು=೧ ಗುಂಡಿ)

ತನ್ನ ಸಮವಸ್ತ್ರಕ್ಕಾಗಿ ಪ್ರತಿಯೊಬ್ಬನಿಗೆ ಇಂತಿಷ್ಟು ವಾರು ಅರಿವೆಯು ಬೇಕು, ವರ್ಗದಲ್ಲಿ ಇಂತಿಷ್ಟು ಹುಡುಗರು ಇರುವರು. ಆದುದರಿಂದ ಇಂತಿಷ್ಟು ವಾರು ಅರಿವೆಯು ಬೇಕಾಗುವದು. ಇಷ್ಟು ನೂಲನ್ನು ತೆಗೆಯುವದಕ್ಕೆ ಇಂತಿಷ್ಟು ದಿವಸಗಳು ಹತ್ತುವವು. ಅದಕ್ಕೆ ಪ್ರತಿನಿತ್ಯ ಎಷ್ಟು ತಾಸುಗಳಂತೆ ನೂಲ ಬೇಕಾಗುವದು ? ಮುಂತಾದವುಗಳ ಲೆಕ್ಕಮಾಡಬಹುದು. ವ್ಯಕ್ತಿಯ ಲೆಕ್ಕಗಳು ವರ್ಗದ ಲೆಕ್ಕಗಳು ಶಾಲೆಯ ಲೆಕ್ಕಗಳು ಹೀಗೆ ಬೇರೆಬೇರೆ ಲೆಕ್ಕಗಳನ್ನು ಇಡ ಬಹುದು. ಅಂತೂ ಅಂಕಗಣಿತದ ಶಿಕ್ಷಣವು ಹೀಗೆ ಲೆಕ್ಕಗಳನ್ನು ಇಡುವದು ಮತ್ತು ವಿರ್ಚನ್ನು ತೆಗೆಯುವದು ಮುಂತಾದ ಪ್ರಶ್ನೆಗಳನ್ನು ಆಶ್ರಯಿಸಿರುವದು. ವರ್ಗದ ಶಿಕ್ಷಕನು ಪ್ರತಿನಿತ್ಯ ಇಡುವ ಲೆಕ್ಕಗಳೂ ಈ ಲೆಕ್ಕಗಳೂ ಒಂದೇ ಇರುವ ಕಾರಣವಿಲ್ಲ. ಶಿಕ್ಷಕನ ಲೆಕ್ಕದಪುಸ್ತಕದಿಂದ ಪ್ರಸಂಗಬಿದ್ದಾಗ ಅಂಕೆಗಳನ್ನು ತೆಗೆದುಕೊಳ್ಳಬಹುದು.

ಮೇಲಿನ ವಿವರಣೆಯು ನೂಲುವ ಉದ್ಯೋಗಕ್ಕೆ ಸಂಬಂಧಿಸಿ ಮೊದಲಿನ ಮೂರು ಇಯತ್ತೆಗಳಲ್ಲಿ ಹೇಗೆ ಕಲಿಸಬೇಕೆಂಬುದನ್ನು ತಿಳುಹಿಸುವದಾಗಿದೆ.

ಈ ಸಂದರ್ಭಗಳಲ್ಲಿ ಶಿಕ್ಷಕರಿಗೆ ಎರಡು ಎಚ್ಚರಿಕೆಯ ಮಾತುಗಳನ್ನು ನಾನು ಹೇಳಲು ಬಯಸುವೆನು

೧. ನೂಲುವ ಉದ್ಯೋಗಕ್ಕೆ ಸಂಬಂಧಿಸಿದ ಅಂಕಗಣಿತವೊಂದನ್ನೇ ಮಕ್ಕಳು ಕಲಿಯಬೇಕಾಗಿಲ್ಲ. ನೂಲುವ ಉದ್ಯೋಗಕ್ಕೆ ಸಂಬಂಧಿಸದೇ ಇದ್ದ ಅನೇಕ ಚಟುವಟಿಕೆಗಳು ಶಾಲೆಯಲ್ಲಿ ಇದ್ದೇ ಇರುವವು. ಪ್ರಕೃತಿವಿಮರ್ಶೆ ಗೋಸುಗ ಪ್ರವಾಸಗಳು, ಸಾಮಾಜಿಕ ಜ್ಞಾನಕ್ಕೋಸ್ಕರ ಮಾಡಿದ ಪರ್ಯಟಣ ಗಳು ಮೊದಲಾದ ಚಟುವಟಿಕೆಗಳಲ್ಲಿ ಸಹ ಅಂಕಗಣಿತ ಶಿಕ್ಷಣವನ್ನು ಸಾಧಿಸ ಬಹುದು. ಈ ಚಟುವಟಿಕೆಗಳಲ್ಲಿ ಮಕ್ಕಳು ತಾವಾಗಿ ತಿಳಿದು ಭಾಗವಹಿಸು ವಂತಿದ್ದರೆ, ಅವುಗಳಲ್ಲಿ ಬರುವ ಪ್ರಸಂಗಗಳು ವಾಸ್ತವವಾಗುವವು. ಹೀಗೆ ಕಲಿಸು ವದರಿಂದ ಕೆಲವು ವಿಷಯಗಳು ಬಾರದೆ ಉಳಿಯುವವೆಂದು ಹೆದರುವ ಕಾರಣವಿಲ್ಲ.

ಹಾಗೆ ಉಳಿದ ಸಂಗತಿಗಳು ಮಹತ್ವದವುಗಳಲ್ಲವೆಂದೇ ತಿಳಿಯಬಹುದು. ಇಲ್ಲವೆ ಮಹತ್ವವಾದವುಗಳಿದ್ದರೆ, ಮಕ್ಕಳು ಅವುಗಳನ್ನು ಕಲಿಯುವ ಕಾಲವು ಇನ್ನೂ ಬಂದಿಲ್ಲವೆಂದೇ ಹೇಳಬಹುದು. ಆದುದರಿಂದ ಕಾಲವು ಪ್ರಾಪ್ತವಾಗದಿದ್ದರೆ, ಸರಿಯಾದ ಕಾಲವು ಬರುವವರೆಗೆ ತಡೆಯಬೇಕು. ಮಹತ್ವದಲ್ಲದ ಸಂಗತಿಯು ಎಷ್ಟೇ ಉಪಯುಕ್ತವಿದ್ದರೂ ಕೂಡ ಅದನ್ನು ಆಗಿನಮಟ್ಟಿಗೆ ಮರೆಯಬೇಕು.

೨. ವಿಷಯವಿವೇಚನೆ ಹಾಗೂ ಪದ್ಧತಿ ಇವುಗಳಿಗೆ ಇಲ್ಲದ ಸೂಕ್ಷ್ಮ ಮಹತ್ವವನ್ನು ಕೊಡಲಾಗದು. ಯಾವ ಪದ್ಧತಿಯು ಮಕ್ಕಳಿಗೆ ತಿಳಿಯುವ ದೆಂಬುದನ್ನು ನಿರ್ಣಯಿಸಿ ಅದನ್ನು ಕಡೆಯವರೆಗೆ ಉಪಯೋಗಿಸಬೇಕು. ಉದ್ಯೋಗದಲ್ಲಿ ಪ್ರಾಪ್ತವಾದಮೆಟ್ಟಿಗೆ ಅನುರೂಪವಾಗದೇ ಇರುವ ವಿಷಯವನ್ನು ತರಬಾರದು.

ಟ್ರೇನಿಂಗ ಸ್ಕೂಲುಗಳಲ್ಲಿಯೂ ಬೇಸಿಕ್ ಶಾಲೆಗಳಲ್ಲಿಯೂ ನನಗೆ, ಅನುಭವದಿಂದ ಕಂಡುಬಂದುದೇನಂದರೆ, ಶಿಕ್ಷಕರು ವಿಷಯದಕಡೆಗೆ ವಿಶೇಷ ಗಮನ ಕೊಡುವರು. ಹೇಗಾದರೂ ಮಾಡಿ ಉದ್ಯೋಗದ ಸಂಬಂಧವನ್ನು ಎಳೆದು ತರುವರು. ಅವರು ಉದ್ಯೋಗಕ್ಕೆ ಸಂಬಂಧಿಸಿದ ಕಾಲ್ಪನಿಕ ಲೆಕ್ಕಗಳನ್ನು ಇಟ್ಟು ಕೊಂಡು, ಇದು ಸಮನ್ವಿತ ಶಿಕ್ಷಣವೆಂದು ತೋರಿಸುವರು. ಆದರೆ ಇದು ಉದ್ಯೋಗದ ಒಲವಿನ ಶಿಕ್ಷಣವಾದೀತೇ ವಿನಾ ಉದ್ಯೋಗವೇ ಕೇಂದ್ರವಾಗಿ ಉಳ್ಳ ಶಿಕ್ಷಣವಾಗಲಾರದು. ಈ ಎರಡರಲ್ಲಿಯೂ ಇರುವ ಭೇದವನ್ನು ಚೆನ್ನಾಗಿ ಲಕ್ಷ್ಯದಲ್ಲಿ ತರಬೇಕು— ಒಲವು ಮತ್ತು ಕೇಂದ್ರ. ಮೊದಲನ ಪ್ರಕಾರಗಳಲ್ಲಿ ಲೆಕ್ಕಗಳನ್ನು ಉದ್ಯೋಗದಿಂದಲೇ ಆರಿಸಿಕೊಂಡಿರುತ್ತವಷ್ಟೇ! ಇವು ಕಾಲ್ಪನಿಕ ವಾದವುಗಳಿದ್ದು ಉದ್ಯೋಗದ ಮುಖ್ಯ ಅಂಗವಾಗುವದಿಲ್ಲ. ಉದ್ಯೋಗದ ಮುಖಾಂತರ ಲೆಕ್ಕಗಳನ್ನು ಕಲಿಸಬೇಕಾಗಿದ್ದಲೆ ಅವು ಅದರಿಂದಲೇ ಹುಟ್ಟಿ, ಅದಕ್ಕೂ ಹಾಗೂ ಮಗುವಿನ ಅಗತ್ಯಕ್ಕೂ ಸಂಬಂಧಪಟ್ಟಿರಬೇಕು. ಮೇಲೆ ತೋರಿಸಿದ ಲೆಕ್ಕಗಳ ಸಮೂಸೆಗಳು ಉದ್ಯೋಗದಿಂದಲೇ ಹೊರಟು ಉದ್ಯೋಗಕ್ಕೆ ಸಂಬಂಧಿಸಿ, ತಾನು ಮಾಡುತ್ತಿರುವ ಉದ್ಯೋಗದಲ್ಲಿ ಹುಡುಗನು ತನಗೆ ಏನುತೊಂದರೆಯಾಗುವದೆಂಬುದನ್ನು ತಿಳಿದುಕೊಳ್ಳುವ ಅಗತ್ಯಗಳಿಗೆ ಸಂಬಂಧಿಸಿಯೂ ಇರುವವು.

ಶರೀರ ಶಿಕ್ಷೆ
(ಪುಸ್ತಕ ಪರಿಚಯ)

ಲೇಖಕರು:— ಕರಿಯಪ್ಪ ಹುಚ್ಚಣ್ಣನವರ, ವ್ಹಾ. ಚೇರ್‌ಮನ್. ಡಿ. ಎಸ್. ಬಿ. ಧಾರವಾಡ.

ಈ ಪುಸ್ತಕವನ್ನು ಧಾರವಾಡದ ಶ್ರೇಯುತರಾದ ಶ್ರೀ. ಜ. ಬಾಪಟ ಬಿ. ಪಿ. ಎಚ್. ಸಿ. ಇವರು ತಮ್ಮ ಅನುಭವಸಿದ್ಧವಾದ ವಿಷಯಗಳನ್ನು ಸೇರಿಸಿ, ಚೆಚ್ಚಳವಾಗಿ ತಿಳಿಯಲೆಂದು ಅನೇಕಬಗೆಯ ಚಿತ್ರಗಳನ್ನು ಜೋಡಿಸಿ ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಇಂಥ ಸಾಹಸಪೂರ್ಣವಾದ ಗ್ರಂಥಗಳು ವಿರಳ,-ಇಲ್ಲವೆಂದರೂ ಸರಿ. ಯಾವೊಂದು ವಿಷಯದಮೇಲೆ ಅನೇಕವಿಧದ ಗ್ರಂಥಗಳು ಬರೆಯಲ್ಪಟ್ಟಿದ್ದರೂ- ಶಾರೀರಿಕ ಶಿಕ್ಷಣದಮೇಲೆ ಒಳ್ಳೇ ಚಿತ್ತಾಕರ್ಷಕವಾಗುವಂತೆ ಕನ್ನಡಸಾಹಿತ್ಯದಲ್ಲಿ ಇತರದ ಪುಸ್ತಕಗಳು ಬರೆಯಲ್ಪಟ್ಟಿರುವದು ಇದೇ ಮೊದಲು; ಇದರಿಂದ ಲೇಖಕರು ಕರ್ನಾಟಕಸ್ಥರ ಮೇಲೊಂದು ಮಹದುಪಕಾರವನ್ನೇ ಮಾಡಿದ್ದಾರೆ.

ಇದರಲ್ಲಿಯ ಪ್ರತಿಯೊಂದು ಪುಟವನ್ನೂ, ನಾನು ಕೂಲಂಕುಷವಾಗಿ ಓದಿ ನೋಡಿದೆ. ವ್ಯಾಯಾಮದಂಥ ಕಠಿಣ ಸಾಧನೆಯ ವಿಷಯದಲ್ಲಿ ಅಂಗಸಾಧಕನು ಲೇಸರಿಯದೆ, ಮನೋರಂಜಕವಾಗಿಯೂ, ಅನ್ಯಥಿಯಿಂದಲೂ ತಿಳಿದುಕೊಳ್ಳಲೆಂದು ಲೇಖಕರು ಸುಲಭಶೈಲಿಯನ್ನು ಉಪಯೋಗಿಸಿದ್ದಾರೆ. ಇವರು ರಸಿಕರೂ ವಿಷಯ ಗಳನ್ನು ಸ್ಪಷ್ಟವಾಗಿ ತಿಳಿಸಬಲ್ಲವರೂ ಆಗಿದ್ದಾರೆ.

ಮುಖ್ಯವಾಗಿ ಮುಂಬೈ ವ್ಯಾಯಾಮ ಶಿಕ್ಷಣ ಸಮಿತಿಯವರು ಯೋಚಿಸಿದ ಪದ್ಧತಿಯನ್ನನುಸರಿಸಿ, ಈ ಹೊತ್ತಿಗೆಯು ನಿರ್ಮಿತವಾಗಿದೆ. ಆದ್ದರಿಂದ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಿಗೂ, ವ್ಯಾಯಾಮಮಂದಿರಗಳಿಗೂ ಇದು ಅತ್ಯಂತ ಉಪಯೋಗವುಳ್ಳದ್ದಾಗಿದೆ.

ಈ ಗ್ರಂಥದಲ್ಲಿ ವ್ಯಾಯಾಮ ಶಿಕ್ಷಣಕ್ಕೆ ಅವಶ್ಯಕವಾದ ಡ್ರಿಲ್ ಶಿಕ್ಷಣದ ವಿವರಗಳನ್ನು ಜೋಡಿಸಲಾಗಿದ್ದು, ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಆಜ್ಞೆ ಕೊಡುವ ರೀತಿಯನ್ನೂ ತಿಳಿಸಿದ್ದಾರೆ. ಸಾಂಘಿಕ ವ್ಯಾಯಾಮ, ಆಸನ, ನಮಸ್ಕಾರ ಮೊದಲಾದ ವಿಷಯಗಳನ್ನು ಸೇರಿಸಿ, ಅವುಗಳಿಗೆಲ್ಲ ಚಿತ್ರಗಳ ಸಹಾಯ ಕೊಟ್ಟಿರುವದರಿಂದ, ವ್ಯಾಯಾಮ ಪ್ರೇಮಿಗಳಿಗೊಳ್ಳೇ ಸಹಾಯವಾಗಿದೆ. ಒಟ್ಟಿಗೆ ಕನ್ನಡದಲ್ಲಿ ಇದೊಂದು ಮಾದರಿಯ ಪುಸ್ತಕವಾಗಿ, ಕೈಗನ್ನಡಿಯಂತೆ ಉಪಯೋಗ ವುಳ್ಳದ್ದಾಗಿದೆ.

ಲೇಖಕರು ವ್ಯಾಯಾಮ ಶಿಕ್ಷಕರಾಗಿ ದುಡಿದ ತಮ್ಮ ಅನೇಕ ವರ್ಷಗಳ ಅನು ಭವದಿಂದ ಇದನ್ನು ಬರೆದಿದ್ದಾರೆ. ಇದಕ್ಕಾಗಿ ಶ್ರೀ. ಬಾಪಟರಿಗೆ ಅಭಿನಂದನೆಗಳು.

ಇದರ ಬೆಲೆ: ೩ ರೂ. (ಕಾನ್ವಾಸ್ ಅಪೇರಿಕಾ) ಪುಟಗಳು ೧೨೫+೧೪೮+ ೧೬+೧೬ ಡೆಮಿ ಅಷ್ಟಪತ್ರಿ. ಚಿತ್ರಗಳು ೩೮೦.

ಧಾರವಾಡದ ಕನ್ನಡ ಟಕ್ಸ್ಟ ಬುಕ್ಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು.

ಅ. ನ.	ಪುಸ್ತಕಗಳ ಹೆಸರುಗಳು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕೆ ಮಂಜೂರು
೪೯	ಸೌಭಕ್ತಿತಿಲಕ	ಬಿ. ಪಿ. ಕಾಳೆ	ಸದರ	೧-೦-೦	ಪ್ರಾ. ಮೂ. ಟ್ರೈ. ಶಿ. ವಾಚನಾಲಯ
೫೦	ಶಬ್ದ ಸಂಕುಳ ಕೋಶವು (೧ನೆ. ಆ. ೧೯೩೯)	ಬಿ. ಡಿ. ಹಿರೇಮಠ	ಬಿ. ಡಿ. ಹಿರೇಮಠ ಮಾಸ್ತರ, ವಿಜಾಪುರ.	೦-೧೪-೦	ಸದರ
೫೧	ಗುಣವಿಮರ್ಶೆ ಅಥವಾ ಕನ್ನಡ ಭಾಷಾಭ್ಯಾಸದ ಗುಟ್ಟು (೧ನೆ. ಆ. ೧೯೩೯)	ಸಿ. ಎಸ್. ಕುಲಕರ್ಣಿ	ಸಿ. ಎಸ್. ಕುಲಕರ್ಣಿ ಕೇ. ಈ. ಬೋರ್ಡ ಮೂಳಮಡ್ಡಿ ಧಾರವಾಡ	೦-೪-೦	ಸದರ
೫೨	ಭಾರತ ಸ್ವರಾಜ್ಯ ಸಾಧನ	ಸದರ	ರಾಮಾಶ್ರಯ ಬುಕ್ ಡಿಪೋ, ಧಾರವಾಡ.	೦-೨-೦	ಪ್ರಾ. ಶಾಲೆಗಳ ಶಿಕ್ಷಕರ ವಾಚನಾಲಯ
೫೩	ಬಾಳಕೃಷ್ಣ	,,	ಕರ್ನಾಟಕ ಫೋಟೋ ಯಿಂಕೋ ವರ್ಕ್ಸ, ಬೆಳಗಾವಿ.	೦-೧-೬	ಪ್ರಾ. ಶಾಲೆಗಳ ವಿ. ವಾ.
೫೪	ಜಗನ್ನಾಥ ಪಂಡಿತರಾಜ ಚರಿತ್ರ (೧ನೆ. ಆ. ೧೯೩೯)	,,	ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.	೧-೦-೦	ಪ್ರಾ. ಮೂ. ಟ್ರೈ. ವಿ. ಶಿ. ವಾ.
೫೫	ಪದಾರ್ಥ ವಿಜ್ಞಾನ ಭಾಗ ೧ (೧ನೆ. ಆ. ೧೯೩೯)	ಕೇ. ಎನ್. ದೇಶಪಾಂಡೆ	ಲಾಂಗ್ಮನ್ಸ ಗ್ರೀನ ಮತ್ತು ಕಂಪನಿ, ಮುಂಬಯಿ.	೦-೧೨-೦	ಪ್ರಾ. ಶಾ. ಪಠ್ಯಪುಸ್ತಕ

೫೬	ಬಸವೇಶ್ವರನ ಇಪ್ಪತ್ತು ಶೀಲಗಳು (೧೯೬. ಟಿ. ೧೯೫೯)	,,	ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ.	೦–೨–೦	ಪ್ರಾ. ಮಾ. ಟ್ರೇ. ಶಿ.ವಾ.
೫೭	ಅನುಭವದ ಮೂಸು ಅಥವಾ ಕೋಳಿಯ ಕಥೆ (ಮುದ್ರಣ ದೋಷಗಳನ್ನು ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.)	ಕೇ. ಎಸ್. ಕುಲಕರ್ಣಿ	ಕೇ. ಎಸ್. ಕುಲಕರ್ಣಿ ಸ್ಟೇಶನ ರೋಡ, ಹುಬ್ಬಳ್ಳಿ.	೦–೧–೦	ಪ್ರಾ. ವಿ. ವಾ.
೫೮	ಮಕ್ಕಳ ಲೆಕ್ಕದ ಪುಸ್ತಕ	ಟಿ. ಎಸ್. ರಾಮಸ್ವಾಮಿ	ಟಿ. ಎಸ್. ರಾಮಸ್ವಾಮಿ ಹೆ। ಮಾ। ಗ. ವಿ. ಸ್ಕೂ. ಮೈಸೂರ	೦–೩–೦	ಪ್ರಾ. ಶಿ. ವಾ.
೫೯	ಕೋಳೂರ ಕೊಡಗೂಸು	,,	ಕರ್ನಾಟಕ ಫೋಟೋ ಝಿಂಕೋ ಪ್ರೇಸ್, ಬೆಳಗಾವಿ.	೦–೧–೦	ಪ್ರಾ. ವಿ. ವಾ.
೬೦	ಮಹಾತ್ಮರ ಪರಿಚಯ	ಸಿ. ಎಸ್. ಕುಲಕರ್ಣಿ	ಸಿ. ಎಸ್. ಕುಲಕರ್ಣಿ ಮೂಳಮಡ್ಡಿ ಧಾರವಾಡ.	೦–೧–೩	ಪ್ರಾ. ವಿ. ವಾ.
೬೧	ಮಕ್ಕಳ ಪುಸ್ತಕ–ಮೊದಲನೆಯ ದರ್ಜೆಯ ಕಥೆಗಳು	ಸದರ	ಅಕಳವಾಡಿ ಲ್ಯಾಂಡ ಸನ್ಸ್, ಧಾರವಾಡ.	೦–೧–೦	ಪ್ರಾ. ವಿ. ವಾ.
೬೨	ಹಾಲೂ ಅನ್ನದ ಗಿಡ	,,	ಕರ್ನಾಟಕ ಫೋಟೋ ಝಿಂಕೋ ಪ್ರೇಸ, ಬೆಳಗಾವಿ.	೦–೧–೩	ಪ್ರಾ. ವಿ. ವಾ.
೬೩	ಟಿವ್ ಟಿವ್ ಟಿವಕ್ಕಿ	,,	ಸದರ	೦–೧–೩	ಪ್ರಾ. ವಿ. ವಾ.
೬೪	ಶ್ರೀ. ಬಸವಗೀತೆ	,,	ವಾಗ್ವಿಲಾಸ ಬು. ಹುಬ್ಬಳ್ಳಿ	೦–೨–೦	ಪ್ರಾ. ಮಾ.ಟ್ರೇ.ವಿ.ವಾ.

ಅ.ನ.	ಪುಸ್ತಕಗಳ ಹೆಸರುಗಳು	ಲೇಖಕರು	ಪ್ರಕಾಶಕರು	ಬೆಲೆ	ಯಾತಕ್ಕೆ ಮಂಜೂರು.
೬೫	ಭಗವಾನದಾಸ	ಸಿ. ಎಸ್. ಕುಲಕರ್ಣಿ	ಶೇಷಾಚಲ ಗ್ರಂಥಮಾಲೆ ಅಗಡಿ	೧– ೦–೦	ಪ್ರಾ. ಮಾ.ಟ್ರೇ.ಶಿ. ವಾ.
೬೬	ಗೆಲವಿನ ಕತ್ತಿ	,,	ಸದರ	೯–೧೨–೦	ಪ್ರಾ. ಮಾ.ಟ್ರೇ.ವಿ. ವಾ.
೬೭	ಚಾಲುಕ್ಯರ ಅಭ್ಯುದಯ (ಎನೆ ಆ. ೧೯೩೯)	,,	ಸದರ	೦–೧೨-೦	ಪ್ರಾ. ಮಾ.ಟ್ರೇ.ವಿ. ವಾ.
೬೮	ಪದ್ಯಮಾಲೆ (೧೯೩೯)	,,	ರಾಮಾಶ್ರಯ ಬು. ಧಾರವಾಡ	೦– ೪–೦	ಪ್ರಾ. ಮಾ.ಟ್ರೇ.ಶಿ. ವಾ.
೬೯	ರಸಾಯನಶಾಸ್ತ್ರ ಭಾಗ ೨	ಕೇ. ಎನ್ ದೇಶಪಾಂಡೆ	ಲಾಂಗ್ಮನ್ಸ್ ಗ್ರೀನ ಕಂ.ಮುಂಬಯಿ	೦– ೬–೦	ಪ್ರಾ. ಶಾ. ಪಠ್ಯ ಪುಸ್ತಕ
೭೦	ಧರ್ಮ ಅಥವಾ ನಾಲ್ವರು ಮಹಾಪುರುಷರು	ವಾಸುದೇವಭಟ್ಟ	ಮಿತ್ರಮಾಲಾ ಮೈಸೂರ	೯– ೬–೦	ಪ್ರಾ. ಮಾ. ಟ್ರೇ.ವಿ.ವಾ
೭೧	ಬ್ರಹ್ಮಾನಂದ ಕೇಶವಚಂದ್ರಸೇನ,	ಡಿ. ರೇಣುಕಾಚಾರ್ಯ ಟ್ರಾನ್ಸ್‌ಲೇಟರ	ಸರ್ವಮಂಗಲ ಗ್ರಂಥಮಾಲೆ ಬೆಂಗಳೂರ	೧– ೦–೦	ಪ್ರಾ. ಮಾ.ಟ್ರೇ.ವಿ. ವಾ.
೭೨	ಅಕ್ಕನ ಬಾಳು	,,	ಶಿವಾನಂದ ಪ್ರಿಂ. ಪ್ರೆಸ್, ಗದಗ.	೦– ೮–೦	ಪ್ರಾ. ಮಾ.ಟ್ರೇ.ವಿ.ವಾ.
೭೩	ಮಹಾತ್ಮಾ ಗಾಂಧಿ	,,	ಸಂ. 'ಗ್ರಾಮಸೇವಾ' ಮೈಸೂರ	೦–೧೨-೦	ಪ್ರಾ. ಮಾ.ಟ್ರೇ.ವಿ.ವಾ.
೭೪	ನಮ್ಮ ಜಗತ್ತು. ಭಾಗ ೪ (ಮುದ್ರಣ ದೋಷಗಳನ್ನು ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು)	,,	ಮ್ಯಾಕ್ಮಿಲನ್ ಕಂಪನಿ ಮುಂಬಯಿ	೧– ೬–೦	ಮಾ. ಶಾ. ಪಠ್ಯಪುಸ್ತಕ
೭೫	ಪ್ರಕೃತಿ ವಿಮರ್ಶೆ	ಜೇ. ಡಿ. ಅಮರಗೋಳ ಮಠ	ಜೇ. ಡಿ. ಅಮರಗೋಳಮಠ ಹೆ। ಮಾ। ಪಾರಿಶವಾಡ ಜಿ. ಬೆಳಗಾವಿ	೦– ೪–೦	ಪ್ರಾ.ಶಾಲೆಗಳಲ್ಲಿ ವಿ.ವಾ.

(ಪ್ರಕಟಣೆ ಪುಟ)

ರಾಮಾಶ್ರಯ ಬುಕ್‌ಡಿಪೊ ಧಾರವಾಡ ಇವರಿಂದ ಪ್ರಕಟಿಸಲ್ಪಟ್ಟ
ಹೊಸ ಪುಸ್ತಕಗಳು

೧. **೨ನೇ ಇಯತ್ತೆಯ ಅಂಕಗಣಿತ:—** ಎಂ. ನಿಂಬಾಳಕರ ಇವರು ಹೊಸ ಇಯತ್ತಾ ಪತ್ರಿಕೆಯಂತೆ ಈ ಪುಸ್ತಕವನ್ನು ಬರೆದಿದ್ದು ಇದರಲ್ಲಿ ಪ್ರತಿಯೊಂದು ಮೆಟ್ಟು ಬಹಳ ಸುಲಭವಾಗಿಯೂ ಆಕೃತಿಗಳಿಂದಲೂ ವಿವರಿಸಲ್ಪಟ್ಟಿದೆ. ೨ನೇ ಇಯತ್ತೆಯ ಡ್ರಾಯಿಂಗ ಹಾಗೂ ಭೂಮಿತಿಯ ಆಕೃತಿಗಳೂ ಇದರಲ್ಲಿ ಕೊಡಲ್ಪಟ್ಟಿರುತ್ತವೆ. ಪುಸ್ತಕದ ಯೋಗ್ಯತೆಯ ಬಗ್ಗೆ ಅನೇಕ ಅನುಭವಿಕ ಶಿಕ್ಷಕರು ತಮ್ಮ ಉತ್ತಮ ಅಭಿಪ್ರಾಯಪಟ್ಟಿರುತ್ತಾರೆ.

ಬೆಲೆ: ಬಹಳ ಸ್ವಲ್ಪು **೪ ಆಣೆಗಳು ಮಾತ್ರ.**

ಪ್ರಶ್ನೋತ್ತರ ಸುಲಭ ಭೂಗೋಲ:— ಕನ್ನಡದಲ್ಲಿದ್ದ ಭೂಗೋಲ ಪುಸ್ತಕಗಳು ಸದ್ಯದ ಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರವನ್ನೀಯಲು ತಕ್ಕವು ಇರುವದಿಲ್ಲ. ಇದು ಎಲ್ಲ ಶಿಕ್ಷಕರ ಅನುಭವಕ್ಕೆ ಬಂದಿರುತ್ತದೆ. ಹೀಗಾಗಿ ಮುಲ್ಕಿಪರೀಕ್ಷೆಯಲ್ಲಾಗಲಿ, ಹೈಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಾಗಲಿ, ಭೂಗೋಲ ವಿಷಯದಲ್ಲಿ ನಾಪಾಸಾಗುವ ವಿದ್ಯಾರ್ಥಿಗಳೇ ಹೆಚ್ಚು. ಕಾರಣ ನಾವು ತಜ್ಞರಕಡೆಯಿಂದ ಆಧುನಿಕ ಪರೀಕ್ಷೆಗಳಿಗೆ ಯೋಗ್ಯ ಉತ್ತರವನ್ನೀಯಬಹುದಾದ ಈ ಪುಸ್ತಕವನ್ನು ಬರೆಯಿಸಿರುತ್ತೇವೆ. ಇದರಲ್ಲಿ ಅನೇಕ ಉಪಯುಕ್ತ ವಿಷಯುಗಳು ಕೊಡಲ್ಪಟ್ಟಿರುತ್ತವೆ. ಇದರ ಲಾಭವನ್ನು ಸರ್ವ ವಿದ್ಯಾರ್ಥಿಗಳೂ ಶಿಕ್ಷಕರೂ ಪಡೆಯಲೆಂಬದೇ ನಮ್ಮ ಅಭಿಲಾಷೆ. ಬೆಲೆ: **೪ ಆಣೆಗಳು ಮಾತ್ರ.**

ಇದಲ್ಲದೆ ಎಂ. ನಿಂಬಾಳಕರ ಇವರಿಂದ ತಯಾರಿಸಲ್ಪಟ್ಟ ಯಾವತ್ತೂ ಬಾಹ್ಯರೇಷೆಯ ನಕಾಶ ಪುಸ್ತಕ ಮೊದಲಾದವುಗಳು ನಮ್ಮಲ್ಲಿ ದೊರೆಯುತ್ತವೆ. ಕ್ರಯದಪಟ್ಟಿಗಾಗಿ ಇಂದೇ ಬರೆಯಿರಿ.

೨. ಸರಕಾರದವರು ಪ್ರತಿಯೊಂದು ಶಾಲೆಯಲ್ಲಿ ಪ್ರೊಗ್ರೆಸ್ ರಿಕಾರ್ಡು ಇಡಬೇಕೆಂದು ಪ್ರಸಿದ್ಧಿಸಿದಂತೆ ನಾವು ಪ್ರೊಗ್ರೆಸ್ ರಿಕಾರ್ಡು ಫಾರ್ಮುಗಳನ್ನು ಛಾಪಿಸಿ ತಯಾರಿಸಿ ಇಟ್ಟಿದ್ದೇವೆ. ಒಂದು ರೂಪಾಯಕ್ಕೆ ಒಂದುನೂರರಂತೆ ಕೊಡುವ ಏರ್ಪಾಡು ಮಾಡಿದ್ದೇವೆ.

ರಾಮಾಶ್ರಯ ಬುಕ್‌ಡಿಪೋ,
ಮಾರ್ಕೆಟ್ ಧಾರವಾಡ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳೂ ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. **ಶ್ರೀ. ಕುರಡಿಯವರು ರಚಿಸಿರುವ,**

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ

ಈ ಪುಸ್ತಕಗಳು ಪಾಠ ಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠ ಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ತಳನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಿಕ್ಷಣದ ಸಮಿತಿಯು ಶಿಫಾರಿಸಿಗೆ ಅನುಸರಿಸಿ ಬರೆಯುಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟ. ಬಿ. ಏಎಚ್. ಸಿ.

ಎಲ್ಲ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಕರಿಗಾಗಿ ಉಪಯುಕ್ತವಿರುವ ಅಮೂಲ್ಯವಾದ ಪುಸ್ತಕವು ಹೊರಟಿದೆ. ಇದರ ಬಗ್ಗೆ ಮೆ। ಹುಚ್ಚಣ್ಣವರ ವ್ಹಾ. ಜೇಅರ ಮುನ್ ಡಿ. ಎಸ್. ಬಿ. ಧಾರವಾಡ ಇವರ ಅಭಿಪ್ರಾಯವು ಪ್ರಾಥಮಿಕ ಶಿಕ್ಷಣದ ಇದೇ ಅಂಕಿನಲ್ಲಿದೆ; ಅವಲೋಕಿಸಬೇಕು. ಇಂದೇ ಕೊಂಡುಕೊಳ್ಳಿರಿ.

ಬೆಲೆ :— ಕೇವಲ ಮೂರೇ ರೂಪಾಯಿ.

ವಿಳಾಸ :— ಶ್ರೀ. ಜ. ಬಾಪಟ

ಮದಿಹಾಳ. ಧಾರವಾಡ.

ಆಗಸ್ಟ್ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಸಂಪಾದಕರ ಬಿಡಿನುಡಿಗಳು	೧
೨.	ಶ್ರೀಮಾನ್ ಎಸ್. ಆರ್. ತಾವಡೆ ಅವರ ಒಂದು ಪರಿಪತ್ರದ ಮುಖ್ಯಾಂಶಗಳು	೪
೩.	ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಗೂ ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ	೫
೪.	ನಮ್ಮ ವಿದ್ಯಾವಿಷಯಕ ಪ್ರಗತಿಪರ ವಿಚಾರಗಳು	೭
೫.	ಮಕ್ಕಳ ಆರೋಗ್ಯ	೧೫
೬.	ಬೇರೀಜು ವಜಾಬಾಕಿಯ ಕೋಷ್ಟಕಗಳು	೧೭
೭.	ಕೋಟೂರ ಶಾಲೆಯ ಹೊಸ ಕಟ್ಟಡದ ಉದ್ಘಾಟನ ಸಮಾರಂಭವು	೧೮
೮.	ಸುಯೋಧನು ಕಾಲುವೆಯು	೨೦
೯.	ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು	೨೪
೧೦.	ಕನ್ನಡ ಟಿಕ್‌ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು	೩೦

Printed by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School Dharwar at his Office.

ಓದಿರಿ ! ತ್ವರೆಮಾಡಿರಿ ! !

ವಾಗ್ವಿಲಾಸ ಬುಕ್‌ಡೀಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ., ಎಜ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರವೂರ ಕವಿಾಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ. ಎ.,

ಸಂಪುಟ ೭೯	ಅಗಸ್ಟ ೧೯೪೦	ವರ್ಷ ೧೨. ಸಂ. ೫

ಸಂಪಾದಕರ ಬಿಡಿನುಡಿಗಳು

೧. **ಹಳ್ಳಿಯ ಔಷಧಾಲಯಗಳು:**— ಗ್ರಾಮಸುಧಾರಣೆಯ ಕಾರ್ಯಕ್ರಮಗಳಲ್ಲಿ ಮಹತ್ವದ ಕಾರ್ಯವೆನಿಸುವ ಹಳ್ಳಿಯ ಆರೋಗ್ಯರಕ್ಷಣೆಯ ಧ್ಯೇಯದಿಂದ ಈಗಾಗಲೇ ಕಾರ್ಯಾರಂಭವಾಗಿರುವದು ಎಲ್ಲರಿಗೂ ಗೊತ್ತಿದ್ದ ವಾತು. ಧಾರವಾಡ ಜಿಲ್ಹೆಯಲ್ಲಿ ಈ ವರ್ಷ ನಾಲ್ಕು ಕೇಂದ್ರಗಳಲ್ಲಿ ಇಂಥ ಔಷಧಾಲಯಗಳನ್ನು ಪ್ರಾರಂಭಿಸಲಾಗಿದೆ. ಛಬ್ಬಿ, ಕುಪ್ಪೇಲೂರು, ಲಕ್ಕುಂಡಿ, ಈ ಮೂರು ಕೇಂದ್ರಗಳಲ್ಲಿ ಆಯುರ್ವೇದೀಯ ಔಷಧಗಳನ್ನೂ ಹುಲಗೂರು ಕೇಂದ್ರದಲ್ಲಿ ಯುನಾನಿ ಔಷಧಗಳನ್ನೂ ಉಪಯೋಗಿಸಬೇಕೆಂದು ಗೊತ್ತಾಗಿದೆ. ಇದೇ ಪೇರೆಗೆ ನಮ್ಮ ಇಲಾಖೆಯೊಳಗಿನ ಸಾತಾರೆ, ಸೂರತ ಜಿಲ್ಹೆಗಳಲ್ಲಿಯೂ ಇಂಥ ಔಷಧೋಪಚಾರದ ಕೇಂದ್ರಗಳನ್ನು ಪ್ರಾರಂಭಿಸಿರುವರು.

೨. **ಒಂದು ರೂಪಾಯಿಯ ನೋಟುಗಳು:**—ಸದ್ಯದ ಮಹಾಯುದ್ಧವು ಪ್ರಾರಂಭವಾದ ತರುವಾಯ ಹಲಕೆಲವು ಜನ ಶ್ರೀಮಂತರು ಬೆಳ್ಳಿಯ ನಾಣ್ಯಗಳನ್ನು ಸಂಗ್ರಹಿಸಿಡುವ ಒಂದು ಹುಚ್ಚು ವಿಚಾರವನ್ನು ಪ್ರಾರಂಭಿಸಿದರು. ಇದರಿಂದ ಹಿಂದುಸ್ತಾನದ ರಿಝರ್ವ ಬ್ಯಾಂಕಿನಲ್ಲಿಯೂ ಇತರ ಟ್ರೈಝರಿಗಳಲ್ಲಿಯೂ ನಾಣ್ಯಗಳ ಮತ್ತು ಸರಕಾರದಲ್ಲಿ ಬೆಳ್ಳಿಯ ಸಂಗ್ರಹವು ಬೇಕಾದಷ್ಟು ಇದ್ದರೂ ಬಡ ಜನರ ದಿನದ ವ್ಯವಹಾರಕ್ಕೆ ಸಾಕಾದಷ್ಟು ನಾಣ್ಯಗಳು ದೊರೆಯದಂತಾಗಿ

ಸಾರ್ವಜನಿಕರ ವ್ಯವಹಾರಕ್ಕೆ ಅಡಚಣಿಯಾಗಹತ್ತಿತು. ಈ ಯುದ್ಧಕಾಲದ ಪರಿಸ್ಥಿತಿಯಲ್ಲಿ ಬಡಜನರ ಮತ್ತು ಸಾರ್ವಜನಿಕರ ದಿನದ ವ್ಯವಹಾರವು ಸುಸೂತ್ರವಾಗಿ ಸಾಗಲಿಕ್ಕೆ ಚಿಲ್ಲರೆ ನಾಣ್ಯಗಳ ಆವಶ್ಯಕತೆಯು ಅನಿವಾರ್ಯವಾಗಿರುವದರಿಂದ ಹಿಂದುಸ್ಥಾನದ ಸರಕಾರದವರು ಟಂಕಸಾಲೆಗಳಲ್ಲಿ ಅಂಥ ಚಿಲ್ಲರೆ ನಾಣ್ಯಗಳನ್ನು ವಿಪುಲವಾಗಿ ಆಚ್ಚು ಹಾಕುವ ಕೆಲಸವನ್ನು ಕೈಕೊಂಡಿರುವರು. ಹುಚ್ಚು ಕಲ್ಪನೆಯಿಂದ ರೂಪಾಯಿಗಳನ್ನು ಸಂಗ್ರಹಿಸಿ ಹೂಳಿಡುವ ಶ್ರೀಮಂತರ ಅವಿಚಾರವನ್ನು ತಪ್ಪಿಸಿ ಬಡಜನರ ವ್ಯವಹಾರವನ್ನು ಸುಸೂತ್ರವಾಗಿ ಸಾಗಿಸುವದಕ್ಕಾಗಿ ಒಂದು ರೂಪಾಯಿಯ ಕರೆನ್ಸಿ ನೋಟುಗಳನ್ನು ಮುದ್ರಿಸಬೇಕಾಯಿತು. ಈಗ ಅಂಥ ಒಂದು ರೂಪಾಯಿಯ ನೋಟುಗಳು ಇಡಿಯ ಹಿಂದುಸ್ಥಾನದಲ್ಲಿ ಪ್ರಚಾರದಲ್ಲಿ ಬಂದಿವೆ.

೩. **ಯುದ್ಧದ ವೆಚ್ಚ**:—ಹೇರ ಹಿಟ್ಲರನ ಮತ್ತು ಅವನ ಅನುಯಾಯಿಗಳಾದ ನಾಝಿಗಳ ರಾಕ್ಷಸೀಯ ಮಹತ್ವಾಕಾಂಕ್ಷೆಯ ಪರಿಣಾಮದಿಂದ ನಡೆದಿರುವ ಈಗಿನ ಮಹಾಯುದ್ಧದಲ್ಲಿ ಬ್ರಿಟಿಷ ಸರಕಾರದವರು ಒಂದು ದಿನಕ್ಕೆ ೧೧ ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕಾಗಿರುವದಂತೆ. ನಾಲ್ಕು ತಿಂಗಳ ಹಿಂದೆ ಹೌಸ ಆಫ್ ಕಾಮನ್ಸ ಸಭೆಯ ಮುಂದೆ ಬಂದ ಅಂದಾಜ ಪತ್ರಿಕೆಯ ಮೇರೆಗೆ ಈ ವರ್ಷ ಯುದ್ಧದ ವೆಚ್ಚವು ೨೬೬೦ ಕೋಟಿ ರೂಪಾಯಿಗಳಾಗಬಹುದೆಂದು ಗೊತ್ತಾಗಿದ್ದಿತು. ಆದರೆ ಪರಿಸ್ಥಿತಿಯು ಬದಲಾದುದರಿಂದ ೧೧೦ ಕೋಟಿ ರೂಪಾಯಿಗಳು ಇನ್ನೂ ಹೆಚ್ಚಿಗೆ ಬೇಕೆಂದು ಚಾನ್ಸಲರ್ ಆಫ್ ಎಕ್ಸಚೆಕರ್‌ರಾದ ಸರ್ **ಕಿಂಗ್ಸ್‌ಲೇ ವುಡ್**‌ರವರು ಪಾರ್ಲಮೆಂಟಿಗೆ ಅರಿಕೆಮಾಡಿಕೊಂಡಿರುವರು. ಪ್ರಾಪ್ತಿಯ ಮೇಲಿನ ಕರವನ್ನು ಹೆಚ್ಚಿಸಿ, ಬೇರೆ ತರದ ಕರಗಳನ್ನು ಆಕರಣೆಮಾಡಿ, ಈ ವೆಚ್ಚಕ್ಕೆ ಬೇಕಾಗುವಷ್ಟು ಹಣವನ್ನು ತಾವು ಸಂಗ್ರಹಿಸಬಲ್ಲೆವೆಂದು ಅವರು ಸಾರಿದರು.

೪. **ನಾಝಿ ವಿಮಾನಗಳ ನಾಶ**:— ೧೧ ತಿಂಗಳಲ್ಲಿ ೨೬೬೧ ಜರ್ಮನ್ ವಿಮಾನಗಳನ್ನೂ ಒಂದು ಲಕ್ಷ ವೈಮಾನಿಕರನ್ನೂ ಬ್ರಿಟಿಷ ಆರ್. ಏ. ಎಫ್. ದಳದವರು ವಿಮಾನವಿರೋಧಕ ತೋಪುಗಳ ಮೂಲಕ ನಾಶಮಾಡಿರುವರಂತೆ. ಮತ್ತು ಈ ಯುದ್ಧದಲ್ಲಿ ಕೇವಲ ಬ್ರಿಟಿಷ ೧೪೫೫ ವಿಮಾನಗಳೂ ೧೪೦೦ ಕ್ಕಿಂತ ಕಡಿಮೆ ವೈಮಾನಿಕರೂ ಮಾತ್ರ ಅಪಘಾತಕ್ಕೆ ಒಳಗಾದರಂತೆ. ಇಂಥ ಸ್ಥಿತಿಯಲ್ಲಿ ಜರ್ಮನರು ಇನ್ನೆಷ್ಟು ದಿನ ತಾನೇ ಯುದ್ಧವನ್ನು ಮುಂದೆಸಾಗಿಸಬಲ್ಲರು?

ಶೋಕವಾರ್ತೆ

ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಇದೇ ಅಗಸ್ಟ ತಿಂಗಳ ೩ನೆಯ ತಾರೀಖಿನ ದಿನ ನಮ್ಮನ್ನಗಲಿ ನಡೆದ ವಾರ್ತೆಯನ್ನು ಕೇಳಿ ಅಖಿಲ ಕರ್ನಾಟಕವಷ್ಟೇ ಏಕೆ? ಅಖಿಲ ಭರತಖಂಡವೇ ದುಃಖಾವೇಗದಿಂದ ಮೈಮರೆಯಿತೆಂದು ಹೇಳುವದರಲ್ಲಿ ಅತಿಶಯವಿಲ್ಲ. ತಮ್ಮ ಗೌರವದ ನಡತೆಯಿಂದ ರಾಜರ್ಷಿ, ಕರ್ಮಯೋಗಿ, ಮೊದಲಾದ ಬಿರುದುಗಳನ್ನು ತಳೆದು ಪ್ರಜಾವಾತ್ಸಲ್ಯಪೂರ್ಣವಾದ ದಕ್ಷತೆಯ ಆಡಳಿತೆಯಿಂದ ಮೈಸೂರನ್ನು ರಾಮರಾಜ್ಯವೆನ್ನಿಸಿದ ಮಹಾಪ್ರಭುಗಳ ವಿಯೋಗವು ಮೈಸೂರು ಪ್ರಜೆಗಳಿಗೆ ಪ್ರತ್ಯಕ್ಷ ಪಿತೃವಿಯೋಗವೆನಿಸಿದುದರಲ್ಲಿ ಆಶ್ಚರ್ಯವೇನು? ಮಹಾಪ್ರಭುಗಳು ಸನ್ ೧೮೭೯ ರಲ್ಲಿ ಜನ್ಮಿಸಿ ೧೯೧೪ ರಲ್ಲಿ ತಮ್ಮ ವಯಸ್ಸಿನ ಹತ್ತನೆಯ ವರ್ಷದಲ್ಲಿ ಮೈಸೂರಿನ ರಾಜಸಿಂಹಾಸನವನ್ನು ಏರಿದರು. ಸನ್ ೧೯೨೭ ನೆಯ ಇಸವಿಯಲ್ಲಿ ಅವರ ಆಳಿಕೆಯ ಬೆಳ್ಳಿಯ ಹಬ್ಬವು ಬಹು ವಿಜೃಂಭಣೆಯಿಂದ ನೆರವೇರಿತು. ಈ ಮಹಾನುಭಾವರು ಮೊನ್ನೆ ಜೂನ್ ೩ನೆಯ ತಾರೀಖಿಗೆ ಬೆಂಗಳೂರಲ್ಲಿ ನಡೆಯಿಸಿದ ಅಖಿಲ ಕರ್ನಾಟಕದ ಇಂದಿನ ಏಕಮೇವಾದ್ವಿತೀಯ ಸಂಸ್ಥೆಯಾದ ಕನ್ನಡ ಸಾಹಿತ್ಯಪರಿಷತ್ತಿನ ಬೆಳ್ಳಿಯ ಹಬ್ಬವನ್ನು ಕನ್ನಡ ನಾಡು ನುಡಿಗಳಲ್ಲಿ ತಮಗಿರುವ ಅಭಿಮಾನ ಗೌರವಗಳ ಕುರುಹೆಂದು ತೋರಿಸುವಂತೆ ಅತ್ಯಂತ ವೈಭವದಿಂದ ನೆರವೇರಿಸಿಕೊಟ್ಟಿದ್ದರು. ಕನ್ನಡಿಗರ ಅತ್ಯಂತ ಅಭಿಮಾನಕ್ಕೆ ಕಾರಣವಾದ ವಿಜಯನಗರದ ಮಹಾ ಸಾಮ್ರಾಜ್ಯದ ಅಂಗವೆನಿಸಿಕೊಳ್ಳುವ ಮೈಸೂರಿನ ರತ್ನಸಿಂಹಾಸನದಲ್ಲಿ ವಿರಾಜಮಾನರಾಗಿ ಮೈಸೂರಿನ ಪ್ರಜೆಗಳನ್ನಷ್ಟೇ ಅಲ್ಲ; ಅಖಿಲ ಕರ್ನಾಟಕದ ಜನತೆಯ ಮನಸ್ಸನ್ನೂ ಆಳುತ್ತಿದ್ದ ಮಹಾಪ್ರಭುಗಳ ವಿಯೋಗದಿಂದ ತಮಗಾದ ದುಃಖಾವೇಗವನ್ನು ಧಾರವಾಡದ ಟ್ರೇನಿಂಗ್ ಕಾಲೇಜದ ಮತ್ತು ಪ್ರಾಕ್ಟೀಸಿಂಗ್ ಸ್ಕೂಲಿನ ಶಿಕ್ಷಕರೂ ವಿದ್ಯಾರ್ಥಿಗಳೂ ಸಭೆಸೇರಿ ಈ ಕೆಳಗಿನ ವಾಕ್ಯಗಳಲ್ಲಿ ವ್ಯಕ್ತಪಡಿಸಿದರು.

೧. "ಇಲ್ಲಿ ನೆರೆದ ಧಾರವಾಡದ ಟ್ರೇನಿಂಗ್ ಕಾಲೇಜದ ಮತ್ತು ಪ್ರಾಕ್ಟೀಸಿಂಗ್ ಸ್ಕೂಲಿನ ಶಿಕ್ಷಕರೂ ವಿದ್ಯಾರ್ಥಿಗಳೂ ಆದ ನಾವು ವಿದ್ಯೆ ಮತ್ತು ಕಲೆಗಳ ಪೋಷಕರೂ ಪ್ರೋತ್ಸಾಹಕರೂ ಎಂದು ಹೆಸರುಗೊಂಡ ಮೈಸೂರು ಮಹಾರಾಜರಾದ ಶ್ರೀಮನ್ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರವರ ಅಕಾಲಿಕ ನಿಧನದಿಂದ ನಮಗೆ ಉಂಟಾದ ಅಗಾಧ ದುಃಖವನ್ನು ವ್ಯಕ್ತಪಡಿಸುತ್ತೇವೆ. ಮತ್ತು ಇದು ಮೈಸೂರು ಪ್ರಜೆಗಳಿಗೆ ಮಾತ್ರವಲ್ಲ; ಅಖಂಡ ಕರ್ನಾಟಕದ ಜನತೆಗೇ ಒದಗಿದ ಬಹುದುಃಖದಾಯಕವಾದ ಅಪಘಾತವೆಂದು ಭಾವಿಸುತ್ತೇವೆ. ಮತ್ತು ಇದರಿಂದ ಶ್ರೀಮಹಾರಾಜರಿಗೂ ರಾಜಕುಟುಂಬದವರಿಗೂ ಇತರರಿಗೂ ಆದ ದುಃಖದಲ್ಲಿ ನಾವೆಲ್ಲರೂ ಸಮಭಾಗಿಗಳಾಗಿರುವೆವು. ಮಹಾಪ್ರಭುಗಳ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ದಯಪಾಲಿಸಲಿ."

ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಮೆ॥ ಎಸ್. ಆರ್. ತಾವಡೆ ಅವರು
ದಕ್ಷಿಣ ಭಾಗದೊಳಗಿನ ವಿದ್ಯಾ ಇಲಾಖೆಯ ಅಧಿಕಾರಿಗಳಿಗೂ ಶಿಕ್ಷಣ
ಸಂಸ್ಥೆಗಳ ಚಾಲಕರಿಗೂ ಕಳುಹಿಸಿದ

ಒಂದು ಪರಿಪತ್ರದ ಮುಖ್ಯಾಂಶಗಳು

ನಮ್ಮ ಭಾಗದೊಳಗಿನ ಎಲ್ಲ ಜಿಲ್ಹೆಗಳಲ್ಲಿ ಯುದ್ಧ ಸಹಾಯದ ಸಮಿತಿಗಳು ಸ್ಥಾಪಿತವಾಗಿವೆ. ಹೇರ ಹಿಟ್ಲರನೂ ಅವನ ಅನುಯಾಯಿಗಳಾದ ನಾಝಿಗಳೂ ಪಸರಿಸಿರುವ ಮಹಾ ಸೇನಾ ಸಮುದ್ರದ ವಿರುದ್ಧವಾಗಿ ಬ್ರಿಟಿಷರು ಒಬ್ಬೊಂಟಿಗರಾಗಿ ನಿಂತು ಹೋರಾಡಬೇಕಾಗಿದೆ. ಜಗತ್ತಿನ ಶಾಂತಿ ಸಮಾಧಾನಗಳೂ ಭಾರತದ ಮತ್ತು ಇತರ ಚಿಕ್ಕ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯವೂ ಕೇವಲ ಗ್ರೇಟ ಬ್ರಿಟನ್ನದ ವಿಜಯವನ್ನೇ ಅವಲಂಬಿಸಿರುವವು. ಈ ಸಂಧಿಕಾಲದಲ್ಲಿ ನಾವು ನಮಗೆ ಸಾಧ್ಯವಿದ್ದ ಎಲ್ಲ ರೀತಿಗಳಿಂದ ಬ್ರಿಟನ್ನಕ್ಕೆ ನೆರವಾಗುವದು ನಮ್ಮ ಕರ್ತವ್ಯವಾಗಿದೆ.

ಎಲ್ಲ ಸರಕಾರೀ ಬಿನ್ ಸರಕಾರೀ ಮಾಧ್ಯಮಿಕ ಶಾಲೆಗಳ ಮುಖ್ಯಾಧಿಕಾರಿಗಳೂ ತಸಾಸಣೆಯ ಅಧಿಕಾರಿಗಳೂ ಅಡಳತೆಯ ಅಧಿಕಾರಿಗಳೂ ತಮಗೆ ಸಾಧ್ಯವಿದ್ದ ಎಲ್ಲ ರೀತಿಗಳಿಂದ ಯುದ್ಧದ ಸಹಾಯಕ ಸಮಿತಿಗಳ ಕಾರ್ಯಗಳಿಗೆ ಸಹಾಯಮಾಡಬೇಕೆಂದು ಬಯಸುವೆವು. ತಮ್ಮ ವಿದ್ಯಾರ್ಥಿಗಳಲ್ಲಿಯೂ ಸಾರ್ವಜನಿಕರಲ್ಲಿಯೂ ಯುದ್ಧದ ಸತ್ಯ ಸಂಗತಿಗಳನ್ನು ಪ್ರಚಾರ ಮಾಡುವದು, ಅವರು ಮಾಡಬಹುದಾದ ಅತಿ ಮಹತ್ವದ ಮತ್ತು ಮೊದಲನೆಯ ಕಾರ್ಯವಾಗಿದೆ. ವೈರಿಗಳ ಪ್ರಚಾರಕರು ಹಬ್ಬಿಸಿರುವ ಯುದ್ಧದ ಸಂಬಂಧ ಸುಳ್ಳು ದುರ್ವಾರ್ತೆಗಳನ್ನು ಅವರು ಬಹು ಸುಲಭವಾಗಿ ಖಂಡಿಸಿ ತೋರಿಸಬಹುದು. ಬ್ರಿಟನ್ನವು ಯಾಕೆ ಯುದ್ಧ ಹೂಡಿತೆಂಬುದು ಅವರಿಗೆ ಗೊತ್ತಿದೆ. ಗ್ರೇಟಬ್ರಿಟನ್ನದ ಹಡಗುಪಡೆ ವಿಮಾನ ಪಡೆಗಳು ಎಷ್ಟು ಪ್ರಬಲವಾಗಿವೆಯೆಂಬುದೂ ಬ್ರಿಟಿಷರು ಕೊನೆಗೆ ವಿಜಯಶಾಲಿಗಳಾಗುವವರೆಗೂ ಯುದ್ಧವನ್ನು ಸಾಗಿಸುವ ನಿರ್ಧಾರದಿಂದಲೇ ರಣಭೂಮಿಗೆ ಇಳಿದಿರುವರೆಂಬುದನ್ನೂ ಅವರು ಚೆನ್ನಾಗಿ ಅರಿತಿರುವರು. ನಮ್ಮ ದೇಶದ ಪ್ರಜೆಗಳು ಇದರಿಂದ ಚಿಂತಾಕ್ರಾಂತರಾಗುವ ಇಲ್ಲವೆ ಗಾಬರಿಯಾಗುವ ಕಾರಣವಿಲ್ಲ. ಅವರು ತಮ್ಮ ದಿನದ ವ್ಯವಸಾಯಗಳನ್ನು

ನಿರಾತಂಕವಾಗಿ ನಡೆಯಿಸಬಹುದು. ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯೂ ತುಂಬ ಸಮಾಧಾನಕರವಾಗಿದೆ. ನಾವು ಯಾವ ಕಾರಣದಿಂದಲೂ ನಾಣ್ಯಗಳನ್ನು ಸಂಗ್ರಹಿಸಿ ಹೂಳಿಡುವ ಹುಚ್ಚಾಟ ಹೂಡಬೇಕಾಗಿಲ್ಲ. ಸರಕಾರೀ ಪ್ರಾಮಿಸರಿ ನೋಟುಗಳು, ಆಧಾರಪತ್ರಗಳು, ಸರಕಾರದ ಬ್ಯಾಂಕುಗಳು ಇವು ಎಂದಿನಂತೆಯೇ ಸುರಕ್ಷಿತವಾಗಿವೆ. ಈ ವಿಷಯದ ಎಲ್ಲ ಸುಳ್ಳು ಸುದ್ದಿಗಳು ನಿರಾಧಾರವಾಗಿವೆ. ವಿರೋಧಿ ಪಕ್ಷದವರು ಹಬ್ಬಿಸಿದ ಸುಳ್ಳು ಸುದ್ದಿಗಳಿಂದ ಅಕಾರಣವಾಗಿ ಗಾಬರಿಯಾಗಿ ತಪ್ಪು ದಾರಿಯಿಂದ ಹೊರಟಿರುವ ಸಾಮಾನ್ಯ ಜನರಿಗೆ ಸರಿಯಾದ ವಿಚಾರವನ್ನು ತಿಳಿಯುಹೇಳಬೇಕು. ಜಿಲ್ಲೆಯ ಎಲ್ಲ ಭಾಗಗಳಲ್ಲಿ ಸಂಚರಿಸುವ ನಮ್ಮ ತಪಾಸಣೆಯ ಅಧಿಕಾರಿಗಳು ಇಂಥ ಅಪಪ್ರಚಾರದ ವಿಷಯದಲ್ಲಿ ಹೆಚ್ಚು ಕೆಲಸ ಮಾಡಿ ಸರಿಯಾದ ಸಮಾಚಾರಗಳನ್ನು ಹಬ್ಬಿಸಲು ಸಾಧ್ಯವಿದೆ. ಅವರು ಯುದ್ಧವಿಷಯಕ ಉಪನ್ಯಾಸಗಳನ್ನು ಏರ್ಪಡಿಸಿ ಸತ್ಯ ಸಂಗತಿಗಳನ್ನು ಪ್ರಚಾರ ಮಾಡಬಹುದು. ಯುದ್ಧದ ಸಾಲವನ್ನು ಕೊಡುವದು, ಯುದ್ಧದ ನಿಧಿಗೆ ಸಹಾಯ ಮಾಡುವದು, ಮುಂತಾದ ಮಾರ್ಗಗಳಿಂದ ಯುದ್ಧದ ಕಾರ್ಯಕ್ಕೆ ನೆರವಾಗಲು ಶ್ರೀಮಂತರ ಮನವೊಲಿಸಬಹುದು. ಎಡ್ಮಿನಿಸ್ಟ್ರೇಟಿವ್ಹ ಆಫೀಸರರು ಪರಿಪತ್ರಗಳನ್ನು ಹೊರಡಿಸಿ ಹಳ್ಳಿಯ ಜನರಿಗೆ ಸತ್ಯವಾದ ಯುದ್ಧವಾರ್ತೆಗಳನ್ನು ತಿಳಿಯುಹೇಳುವಂತೆಯೂ ಸುಳ್ಳು ಭೀಕರ ವಾರ್ತೆಗಳನ್ನು ಖಂಡಿಸಿ ಮಾತಾಡುವಂತೆಯೂ ಶಿಕ್ಷಕರಿಗೆ ಅಪ್ಪಣೆ ಕೊಡಬಹುದು.

ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಗೂ ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ

(ಕಳೆದ ಜುಲೈ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

೧. ಯುರೋಪದ ಚಿಕ್ಕ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾದಿಡಲಿಕ್ಕೂ, ಕೊಲೆಗಡಕ ಹಿಟ್ಲರನ ಪಿಶಾಚವೃತ್ತಿಗೆ ತಡೆಹಾಕಲಿಕ್ಕೂ, ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ರಾಷ್ಟ್ರಗಳಿಗೆ ಹಿಟ್ಲರ, ಮುಸಲೋನಿಯವರಿಂದ ಉಂಟಾಗಬಹುದಾದ ನಾಶವನ್ನು ತಡೆದು ಹಿಡಿಯಲಿಕ್ಕೂ, ಜಗತ್ತಿನಲ್ಲಿ ಶಾಂತತೆಯನ್ನು ಚಿರಸ್ಥಾಯಿಯಾಗಿ ಸ್ಥಾಪನ ಮಾಡಲಿಕ್ಕೂ, ಹಿಟ್ಲರನ ದೆಸೆಯಿಂದ ಹಾಳಾಗಿದ್ದ ರಾಷ್ಟ್ರಗಳ ಪುನರುದ್ಧಾರಕ್ಕೂ, ಅವುಗಳಿಗೆ ತಿರುಗಿ ಸ್ವಾತಂತ್ರ್ಯ

ಕೊಡಲಿಕ್ಕೂ, ಹಿಟ್ಲರನಂತಹ ಪಾಪಿ ಮತ್ತು ದುಷ್ಟವ್ಯಕ್ತಿಯ ಹಾರಾಟವನ್ನು ಮುರಿದು, ಹಿಟ್ಲರಶಾಹಿಯ ದುರುಳತನ ಮಹತ್ವಾಕಾಂಕ್ಷೆಗಳನ್ನು ಮಣ್ಣು ಗೂಡಿಸಿ ಬೇರೊರಸಿ ಕಿತ್ತೊಗೆಯಲಿಕ್ಕೂ ಈ ಯುದ್ಧವನ್ನು ಹೂಡಿರುವೆವೆಂದು ಜಗತ್ತಿಗೆಲ್ಲಾ ತಿಳಿಯುವಂತೆ ಸಾರಿ, ನಿಜವಾದ ತಮ್ಮ ಉದ್ದೇಶವನ್ನು ಪ್ರಕಟಿಸಿ, ಉಳಿದ ಎಲ್ಲಾ ರಾಷ್ಟ್ರಗಳಿಗೂ ಹಿಟ್ಲರನು ಅವುಗಳ ಮೇಲೆ ದಂಡೆತ್ತಿ ಬಂದಲ್ಲಿ ತಮ್ಮ ಕೈಯಿಂದಾಗುವಷ್ಟು ಸಹಾಯಮಾಡುವೆವೆಂಬ ಭರವಸೆಯನ್ನಿತ್ತು, ಬ್ರಿಟಿಷರು ಮತ್ತು ಫ್ರೆಂಚರು ಕೂಡಿ ಜರ್ಮನಿಯ ವಿರುದ್ಧ ಯುದ್ಧವನ್ನು ಹೂಡಿದರು. ಹೀಗೆ ಕಳೆದ ೧೯೩೯ ಇಸ್ವಿ ಸಪ್ಟಂಬರ ತಿಂಗಳಿಂದ ನಮ್ಮ ಬ್ರಿಟಿಷ ಸಾಮ್ರಾಜ್ಯವು ಜರ್ಮನಿಯೊಡನೆ ಯುದ್ಧವನ್ನು ಹೂಡಿದೆ.

೨. ಇತ್ತ ಹಿಟ್ಲರನು ತನ್ನ ರಾಜ್ಯಕ್ಕೆ ವರ್ಸಾಯಿ ಒಪ್ಪಂದದಿಂದ ಉಂಟಾದ ಹಾನಿಯನ್ನಷ್ಟೇ ತುಂಬಿಕೊಳ್ಳಲು ತಾನು ಪೋಲಂಡದ ಮೇಲೆ ಯುದ್ಧ ಹೂಡಿದ್ದಿರುವುದರಿಂದ ಬ್ರಿಟಿಷರು ಮತ್ತು ಫ್ರೆಂಚರು ಕೂಡಿ ಹೂಡಿದ ಯುದ್ಧವು ಅನ್ಯಾಯುದ್ದಾಗಿದೆ ಎಂದು ಸಾರಿ, ಯುದ್ಧವೇ ಬೇಕಾದಲ್ಲಿ ತನ್ನ ಸಿದ್ಧತೆಯದೆ ಮತ್ತು ಅದರಿಂದುಂಟಾಗಬಹುದಾದ ಕೊಲೆ, ದುಷ್ಪರಿಣಾಮಗಳಿಗೆ ತಾನು ಹೊಣೆಗಾರನಲ್ಲವೆಂಬದಾಗಿ ಯುದ್ಧ ನಿಲ್ಲಿಸಲು ಯತ್ನಿಸಿದನು. ಆದರೆ ಬ್ರಿಟಿಷರು ಇವನ ದುಷ್ಟತನವನ್ನು ಹೊರಗೆಡವಿ, ಇವನ ವಚನಗಳಿಗೆ ಬೆಲೆ ಕೊಡುವಂತಿಲ್ಲವೆಂಬದನ್ನು ಇವನ ಹಿಂದಿನ ನಡತೆಯಿಂದ ಸ್ಪಷ್ಟೀಕರಿಸಿ, ಯುದ್ಧದ ಮುಖಾಂತರ ಹಿಟ್ಲರಶಾಹಿಯನ್ನು ಮಣ್ಣುಗೂಡಿಸುವ ವರೆಗೆ ಜಗತ್ತಿಗೆ ಸುಖ ಶಾಂತಿಗಳಿರಲಾರವೆಂದೂ, ತಾವಾಗಿ ಯುದ್ಧವನ್ನು ಬಯಸಿಲ್ಲವೆಂದೂ ಸ್ಪಷ್ಟೀಕರಿಸಿದರು. ಮತ್ತು ಹಿಟ್ಲರಶಾಹಿಯನ್ನು ನಾಶಪಡಿಸಿ, ಯುರೋಪಖಂಡದಲ್ಲಿ ಶಾಂತಿ ಮತ್ತು ಸ್ವಾತಂತ್ರ್ಯವು ತಿರುಗಿ ಸ್ಥಾಪನೆಯಾಗುವವರೆಗೆ ಯುದ್ಧವನ್ನು ಮಾಡುವೆವೆಂದು ಸಾರಿದರು. ಹೀಗಾಗಿ ಒಪ್ಪಂದವಾಗದೆ ಯುದ್ಧವು ಮುಂದರಿಯಿತು. ಈ ಪ್ರಕಾರ ಹಿಟ್ಲರನು ತನ್ನ ನಿಜವಾದ ವ್ಯಾಘ್ರಸ್ವರೂಪವನ್ನು ಕುರಿಮರಿಯ ತೊಗಲಿನ ಅಚ್ಛಾದನದಲ್ಲಿ ಅಡಗಿಸಲು ಯತ್ನಿಸಿದರೂ, ಜಗತ್ತಿನ ಬಹುತರ ಎಲ್ಲ ರಾಷ್ಟ್ರಗಳಿಗೆ ಇವನ ನಿಜಸ್ವರೂಪವು ತಿಳಿದು ಬಂದುದರಿಂದ, ಅವು ಬ್ರಿಟಿಷರ ಯುದ್ಧದ ಧೋರಣೆಯನ್ನು ಮನ್ನಿಸಿ, ಅವರಿಗೆ ಯುದ್ಧದ ಸಾಮಗ್ರಿ ಉಪಕರಣಗಳ ಪೂರೈಕೆ ಮಾಡಿ, ಅವರಿಗೆ ಜಯಲಾಭ ದೊರೆಯುವಂತೆ ಹಾರೈಸಿದವು. ಬ್ರಿಟಿಷ ವಸಾಹತುಗಳೂ ತಮ್ಮ ಕೈಯ್ಯಲ್ಲಾದ ಮಟ್ಟಿಗೆ, ಆಹಾರ ದ್ರವ್ಯ ಉಪಕರಣ ಮತ್ತು ಸೈನ್ಯಗಳ ಸಹಾಯವನ್ನು ಮಾಡತೊಡಗಿದವು.

(ಮುಂದೆ ಸಾಗುವುದು)

ನಮ್ಮ ವಿದ್ಯಾವಿಷಯಕ ಪ್ರಗತಿಪರ ವಿಚಾರಗಳು

ಮೆ. ಎಸ್. ಆರ್. ತಾವಡೆ, ಎಮ್. ಏ. ಅವರಿಂದ

ಹಿಂದೆ ಅನೇಕ ಸಾರೆ ಬರೆದಿರುವಂತೆ ನಮ್ಮ ದಕ್ಷಿಣಭಾಗದ ಇಂದಿನ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. **ಎಸ್. ಆರ್. ತಾವಡೆ**ಯವರು ನಮ್ಮ ಶಿಕ್ಷಣದ ಪ್ರಗತಿ ಮತ್ತು ಪ್ರಸಾರಗಳ ಬಗ್ಗೆ ಬಹು ದಕ್ಷತೆಯಿಂದ ಕೆಲಸಸಡೆಯಿಸಿದ್ದೂ ಅನೇಕ ಮುಖಗಳಿಂದ ಪ್ರಯತ್ನಿಸುತ್ತಿರುವದೂ ಎಲ್ಲರಿಗೂ ತಿಳಿದ ವಿಷಯಗಳೇ ಸರಿ. ಪ್ರಾಥಮಿಕ ಶಾಲೆಗಳ ಸುಧಾರಣೆಯಾಗಬೇಕು; ಅದಷ್ಟು ಕಡಿಮೆ ವೆಚ್ಚದಿಂದ ಈಗಿನ ಮಹಾಯುದ್ಧದಿಂದ ಉಂಟಾಗಿರುವ ಕಾಟಕಸರಿನ ದಿನಗಳಲ್ಲಿಯೂ ಸಹ ಶಿಕ್ಷಣದಲ್ಲಿ ಕಾಟಕಸರಾಗಕೂಡದು; ಇಷ್ಟೇ ಅಲ್ಲ; ಅದರ ಪ್ರಸಾರವೇ ಆಗಬೇಕು; ಎಂಬ ಧೋರಣೆಯಿಂದ ಅವರು ಅಹರ್ನಿಶ ಯೋಚಿಸಿ ಕಾರ್ಯನಡೆಯಿಸಿರುವರೆಂಬದು ಮುಂದೆ ಪ್ರಕಟಿಸಿರುವ ಎರಡು ಲೇಖಗಳಿಂದ ಪ್ರಕಟವಾಗುವಂತಿದೆ. ನಮ್ಮ ಶಿಕ್ಷಕವರ್ಗವು ಈ ಲೇಖನಗಳನ್ನು ಲಕ್ಷ್ಯ ಪೂರ್ವಕವಾಗಿ ಓದಿ ಪರ್ಯಾಲೋಚಿಸಿ ಅದರಂತೆ ಕೆಲಸನಡೆಯಿಸುವರೆಂದು ತುಂಬ ಭರವಸೆಯಿದೆ.

೧. ಶಾಲೆಗಳ ಸುವ್ಯವಸ್ಥಿತವಾದ ಕಾರ್ಯಕ್ರಮಗಳ ಯೋಜನೆ

ವಿದ್ಯಾಖಾತೆಯ ಅಡಳತೆಯ ಅಧಿಕಾರಿಗಳೆಂದರೆ ಅಡಳತೆಯ ಅಧಿಕಾರಿಗಳಷ್ಟೇ ಅಲ್ಲ; ಅವರು ಶಿಕ್ಷಣವಿಷಯದಲ್ಲಿ ತಜ್ಞರೂ ಹೌದು. ಅವರು ತಮ್ಮ ಶಾಲೆಗಳೊಳಗಿನ ಕುಂದುಕೊರತೆಗಳನ್ನು ತಪಾಸಣೆಯ ಅಧಿಕಾರಿಗಳು ನಿರ್ದೇಶ ಮಾಡಿಸಿ ತೋರಿಸುವವರೆಗೂ ದಾರಿನೋಡುತ್ತ ಕುಳಿತಿರಬಾರದು. ಅಡಳತೆಯ ಅಧಿಕಾರಿಗಳು ತಮ್ಮ ಶಾಲೆಗಳ ಶೈಕ್ಷಣಿಕ ಪ್ರಗತಿಯ ವಿಷಯದಲ್ಲಿ ನಿರ್ದಿಷ್ಟವಾದ ತಮ್ಮದೇ ಆದ ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಿಕೊಂಡಿರಬೇಕು. ಸದ್ಯದ 'ಮುಂದೆಸಾಗಲಿ' ಅಥವಾ 'ಪ್ರಕೃತಮನುಸರಾಮ' ಎಂಬ ಧೋರಣೆಯು ಇಲ್ಲಿಗೇ ನಿಂತುಹೋಗಬೇಕು. ಅವರು ಶಾಲೆಗಳ ಪ್ರಗತಿ, ಶಿಕ್ಷಣದ ಪ್ರಸಾರ, ಇವುಗಳ ಬಗ್ಗೆ ತೀವ್ರಗಾಮಿಯಾದ ಕೆಲವೊಂದು ವಿಧಾಯಕ ಕಾರ್ಯಕ್ರಮವನ್ನು ತಮ್ಮ ಮುಂದಿಟ್ಟುಕೊಂಡಿರಬೇಕು.

ಈ ಕೆಳಗಿನ ಮಹತ್ವದ ಸಮಸ್ಯೆಗಳನ್ನು ಕುರಿತು ಅವರು ಪರ್ಯಾಲೋಚಿಸಬೇಕಾಗುವದು.

ನಮ್ಮ ವಿದ್ಯಾವಿಷಯಕ ಪ್ರಗತಿಪರ ವಿಚಾರಗಳು

ಮಾ. ಎಸ್. ಆರ್. ತಾವಡೆ, ಎಮ್. ಎ, ಅವರಿಂದ

ಹಿಂದೆ ಅನೇಕ ಸಾರೆ ಬಂದಿರುವಂತೆ ನಮ್ಮ ದಕ್ಷಿಣಭಾಗದ ಇಂದಿನ ಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ಎಸ್. ಆರ್. ತಾವಡೆಯವರು ನಮ್ಮ ಶಿಕ್ಷಣದ ಪ್ರಗತಿ ಮತ್ತು ಪರಿಷ್ಕಾರಗಳ ಬಗ್ಗೆ ಬಹು ದಕ್ಷತೆಯಿಂದ ಕೆಲಸಮಾಡಿಯು ನ್ನೂ ಅನೇಕ ಮುಖಗಳಿಂದ ಪ್ರಯತ್ನಿಸುತ್ತಿರುವುದೂ ಎಲ್ಲರಿಗೂ ತಿಳಿದ ಷಯವೇ ಸರಿ. ಬ್ರಾಹ್ಮಣೇತರ ಶಾಲೆಗಳ ಸುಧಾರಣೆಯಾಗಬೇಕು; ಅದನ್ನು ಡಿಮೆ ವೆಚ್ಚದಿಂದ ಆಗುವ ಮುಖಾಯುನ್ನದಿಂದ ಉಂಟಾಗಿರುವ ಕಾಟಕಸರನ ನಗಳಲ್ಲಿಯೂ ಸಹ ಶಿಕ್ಷಣದಲ್ಲಿ ಕಾಟಕಪರಾಗಕೂಡದು; ಇಷ್ಟೇ ಅಲ್ಲ; ಅದರ ಸಾರವೇ ಆಗಬೇಕು; ಎಂಬ ಧೋರಣೆಯಿಂದ ಅವರು ಅನುಸರಿಸಿರುವ ಕಾರ್ಯನಡೆಯಿಸಿರುವರೆಂಬದು ಮುಂದೆ ಪ್ರಕಟಿಸಿರುವ ಎರಡು ಲೇಖನಗಳಿಂದ ಪ್ರಕಟವಾಗುವಂತಿದೆ. ನಮ್ಮ ವಿದ್ಯಾವರ್ಗವು ಈ ಲೇಖನಗಳನ್ನು ಲಕ್ಷ್ಯ ಪೂರ್ವಕವಾಗಿ ಓದಿ ಪರ್ಯಾಲೋಚಿಸಿ ಅದರಂತೆ ಕೆಲಸನಡೆಯಿಸುವುದೆಂದು ಎಂಬ ಭರವಸೆಯಿದೆ.

೧. ಶಾಲೆಗಳ ಸುವ್ಯವಸ್ಥಿತವಾದ ಕಾರ್ಯಕ್ರಮಗಳ ಯೋಜನೆ

ವಿದ್ಯಾಖಾತೆಯ ಅಡಳಿತೆಯ ಅಧಿಕಾರಿಗಳಿಂದರೆ ಅಡಳಿತೆಯ ಅಧಿಕಾರಿ ಗಳಷ್ಟೇ ಅಲ್ಲ; ಅವರು ಶಿಕ್ಷಣಪದ್ಧತಿಯಲ್ಲಿ ತಜ್ಞರೂ ಹೌದು. ಅವರು ತಮ್ಮ ಶಾಲೆಗಳೊಳಗಿನ ಕುಂದುಕೊರತೆಗಳನ್ನು ಶಾಲಾಸಂಸ್ಥೆಯ ಅಧಿಕಾರಿಗಳು ನಿರೀಕ್ಷಣ ಮಾಡಿಸಿ ತೋರಿಸುವವರೆಗೂ ದೂರಿಸೋಡುತ್ತ ಕುಳಿತಿರುವಾರದು. ಆಡಳಿತೆಯ ಅಧಿಕಾರಿಗಳು ತಮ್ಮ ಶಾಲೆಗಳ ಶಿಕ್ಷಣದ ಪ್ರಗತಿಯ ವಿಷಯದಲ್ಲಿ ನಿರಾಸ್ಥರಾದ ತಮ್ಮಲ್ಲೇ ಅದ ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಿಕೊಂಡಿರ ಬೇಕು. ಸದ್ಯದ 'ಮುಂದೆಸಾಗಲಿ' ಅಥವಾ 'ಪ್ರಗತಿಮುನ್ನುಗ್ಗಾವು' ಎಂಬ ಘೋಷಣೆಯು ಇಲ್ಲಿಗೇ ನಿಂತುಹೋಗಬೇಕು. ಅವರು ಶಾಲೆಗಳ ಪ್ರಗತಿ, ಶಿಕ್ಷಣದ ಪ್ರಸಾರ, ಇವುಗಳ ಬಗ್ಗೆ ತೀವ್ರಗಾಮಿಯಾದ ಕೆಲಸವೊಂದು ಸಂಸ್ಥೆಯಲ್ಲಿ ಕಾರ್ಯಕ್ರಮವನ್ನು ತಮ್ಮ ಮುಂದಿಟ್ಟುಕೊಂಡಿರಬೇಕು.

ಈ ಕೆಳಗಿನ ಮುಖ್ಯವಾದ ಸಮಸ್ಯೆಗಳನ್ನು ಕುರಿತು ಅವರು ಪರಿಶೀಲಿಸಿ ಪರ್ಯಾಲೋಚಿಸುವ ಬೇಕಾಗುವದು.

೧. ತಮಗೆ ದೊರೆಯಬಹುದಾದಷ್ಟೇ ನಿಯಮಿತ ಬಂಡವಲದಿಂದ ಪ್ರಾಥಮಿಕ ಶಿಕ್ಷಣವನ್ನು ತೀವ್ರಗತಿಯಿಂದ ಪ್ರಸಾರಮಾಡುವದು.

೨. ಸದ್ಯಕ್ಕಿರುವ ಶಾಲೆಗಳಲ್ಲಿ ನಡೆದಿರುವ ವಿದ್ಯಾರ್ಥಿಗಳ ಕುಂಠಿತ ಪ್ರಗತಿಯನ್ನು ತಡೆದು ಅದರಿಂದಾಗುವ ನಿರರ್ಥಕ ವೆಚ್ಚವನ್ನು ಕಡಿಮೆಮಾಡುವದು.

ನಮ್ಮ 'ಶಿಫ್ಟ್' ಪದ್ಧತಿಯ ಸಂಬಂಧದ ಲೇಖನಗಳನ್ನು ಲಕ್ಷ್ಯಗೊಟ್ಟು ಓದಿ ಅಭ್ಯಾಸಮಾಡುವದರಿಂದ ಮೊದಲನೆಯ ಸಮಸ್ಯೆಯನ್ನು ಬಿಡಿಸಲು ತಕ್ಕ ಮಾರ್ಗವು ಸೂಚಿತವಾಗಬಹುದು.

ಎರಡನೆಯ ಸಮಸ್ಯೆಯ ವಿಷಯದಲ್ಲಿ ನಾನು ಈ ಕೆಳಗಿನ ಸೂಚನೆಗಳನ್ನು ಆಡಳಿತೆಯ ಅಧಿಕಾರಿಗಳ ಮತ್ತು ಶಿಕ್ಷಣ ಪ್ರೇಮಿಗಳ ಮುಂದಿಡಲು ಬಯಸುವೆನು.

೧. ಪ್ರತಿಯೊಂದು ಶಾಲೆಯಲ್ಲಿ ಸಾಕಾದಷ್ಟು ಯೋಗ್ಯ ಶಿಕ್ಷಕರು ಇರುವಂತೆ ನೋಡಿಕೊಳ್ಳಬೇಕು. ಪ್ರತಿಯೊಂದು ಶಾಲೆಯಲ್ಲಿ ತೀರ ಆವಶ್ಯಕವೆನಿಸುವಷ್ಟಾದರೂ ಟ್ರೇಂಡ ಶಿಕ್ಷಕರಿರಬೇಕು. ಶಾಲೆಯ ವರ್ಗಗಳ ಹಂಚುವಿಕೆಯು ಯೋಗ್ಯವಾದದ್ದಿರಬೇಕು. ಆದಷ್ಟು ಒಂದಕ್ಕೊಂದು ಸಮೀಪದ ವರ್ಗಗಳನ್ನು ಜೋಡಿಸಲು ಯತ್ನಿಸುವದು ಒಳಿತು. ತಪಾಸಣೆಯ ಅಧಿಕಾರಿಗಳು ಈ ಬಗೆಯ ವರ್ಗಗಳ ಹಂಚುವಿಕೆಯಲ್ಲಾಗಬಹುದಾದ ದೋಷಗಳನ್ನು ತಿದ್ದಿ ಸರಿಪಡಿಸಬೇಕು. ಮತ್ತು ಆಯಾ ವರ್ಗಗಳು ಯೋಗ್ಯ ಶಿಕ್ಷಕರ ವಶದಲ್ಲಿರುವವೆಂಬವನ್ನು ನೋಡಿಕೊಳ್ಳಬೇಕು. ಶಿಕ್ಷಕರು ಈ ವಿಷಯದಲ್ಲಿ ತುಂಬ ಎಚ್ಚರಿಕೆಯಿಂದಲೂ ದಕ್ಷತೆಯಿಂದಲೂ ಕೆಲಸಮಾಡಬೇಕು.

೨. ಎಷ್ಟೋ ಶಾಲೆಗಳಲ್ಲಿ ವರ್ಗಗಳನ್ನು ಶಿಕ್ಷಕರಲ್ಲಿ ಸರಿಯಾಗಿ ಹಂಚದೆ ಇದ್ದದ್ದು ನಮ್ಮ ಲಕ್ಷ್ಯಕ್ಕೆ ಬಂದಿರುವದು. ಉದಾಹರಣೆಗಾಗಿ ಒಬ್ಬ ಶಿಕ್ಷಕನಿಗೆ ೪೦ ವಿದ್ಯಾರ್ಥಿಗಳು ಬರಬೇಕೆಂಬ ಮಾತೊಂದನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಬಾಲಕರ ವರ್ಗದ ೨೫ ವಿದ್ಯಾರ್ಥಿಗಳನ್ನೂ, ೫ನೆಯ ಇಯತ್ತೆಯ ೧೦ ವಿದ್ಯಾರ್ಥಿಗಳನ್ನೂ ೬ನೆಯ ಇಯತ್ತೆಯ ೫ ವಿದ್ಯಾರ್ಥಿಗಳನ್ನೂ ಕೊಟ್ಟಿರಬಾರದು. ಮೇಲಿನ ವರ್ಗಗಳನ್ನು ಕೆಳಗಿನ ತರಗತಿಗಳೊಂದಿಗೆ ಜೋಡಿಸುವದು ಶಿಕ್ಷಣದ ದೃಷ್ಟಿಯಿಂದ ಸಮಾಧಾನಕರವಾದ ಮಾತಲ್ಲ. ಬಾಲಕರವರ್ಗ ಮೊದಲನೆಯ ಇಯತ್ತೆ ಅಥವಾ ಮೊದಲನೆಯ ಇಯತ್ತೆ ಮತ್ತು ಎರಡನೆಯ ಇಯತ್ತೆ ಈ ರೀತಿಯಾಗಿ ಕೂಡಿಸುವದು ಒಳಿತು. ಹೀಗೆ ಸಮೀಪದ ವರ್ಗಗಳನ್ನು ಕೂಡಿಸುವೆದರಿಂದ ಶಿಕ್ಷಕರು ಎಷ್ಟೋ ಉಜಳಣಿಯ ಪಾಠಗಳನ್ನೂ ಹಲಕೆಲವು ಸಾಮಾನ್ಯ ಪಾಠಗಳನ್ನೂ ಎರಡೂ ವರ್ಗಗಳನ್ನು ಕೂಡಿಸಿ ಸಾಗಿಸಲು ಅನುಕೂಲವಾಗುವದು.

೩. ಸಾಲೆಗೆ ಬೇಕಾಗುವ ಪುಸ್ತಕಗಳನ್ನೂ ಉಪಕರಣಗಳನ್ನೂ ಪೂರೈಸಿ ಕೊಡಬೇಕು. ಶಾಲೆಗಿರುವ ಶಿಕ್ಷಣ ವಿಷಯಕ ಕೊರತೆಗಳನ್ನು ಸಕಾಲದಲ್ಲಿ ಗಮನಿಸಬೇಕು. ಮತ್ತು ಪೂರೈಸಲಿಕ್ಕೆ ಸಾಧ್ಯವಿದ್ದಷ್ಟನ್ನೆಲ್ಲ ಕೂಡಲೆ ಪೂರೈಸ ಬೇಕು. ಶೈಕ್ಷಣಿಕ ಸಾಧನ ಸಾಮಗ್ರಿಗಳನ್ನು ಪೂರೈಸುವದರಲ್ಲಿ ಒಂದು ಕ್ರಮವಿರಬೇಕು. ಒಂದು ಶಾಲೆಗೆ ತೀರ ಆವಶ್ಯಕವೆನಿಸುವ ಸಾಧನಗಳು ಇಷ್ಟೇ ಎಂದು ಮೊದಲು ನಿರ್ಣಯಿಸಿಕೊಳ್ಳಬೇಕು. ಮತ್ತು ಅವನ್ನು ನಿರ್ದಿಷ್ಟ ವಾದ ಕೆಲವೊಂದು ಅವಧಿಯ ಒಳಗಾಗಿ— ಉದಾಹರಣೆಗಾಗಿ ಒಂದು ವರ್ಷ— ಎರಡು ವರ್ಷ— ಇತ್ಯಾದಿ, ಅವನ್ನು ಪೂರೈಸುವದಕ್ಕೆ ಬೇಕಾದ ಒಂದು ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಶಿಕ್ಷಕರು ತಮ್ಮ ಈ ವಿಷಯದ ಬೇಡಿಕೆಯನ್ನು ಸಕಾಲದಲ್ಲಿ ಯೋಗ್ಯ ಅಧಿಕಾರಿಗಳ ಮುಂದಿಡಲು ತಪ್ಪಬಾರದು.

೪. ಶಾಲೆಯ ಕೆಲಸವು ಸರಿಯಾಗಿ ಸಾಗಬೇಕಾದರೆ ಅದಕ್ಕೆ ತಕ್ಕಷ್ಟು ಯೋಗ್ಯವಾದ ಸ್ಥಳದ ಅನುಕೂಲತೆಯು ಬೇಕು. ಎಷ್ಟೋ ಶಾಲೆಗಳ ಕಟ್ಟಡ ಗಳು ಅಯೋಗ್ಯವಾದುವಿಲ್ಲವೆಂಬುದೇನೋ ನಿಜ. ಆದರೆ ಕಟ್ಟಡಗಳು ಎಂಥವೇ ಇದ್ದರೂ ಅವಕ್ಕೆ ಕಾಲಕಾಲಕ್ಕೆ ಮಾಡಬೇಕಾದ ರಿಪೇರಿಯ ಕೆಲಸವನ್ನು ಮಾಡಿಸಿರ ಬೇಕು. ಎಷ್ಟೋ ಶಾಲೆಗಳ ನೆಲವು ಅಗೆದು ಹಕ್ಕಲಾಗಿರವದು; ಹೊಲಸಾಗಿರು ವದು. ಗೋಡೆಗಳಿಗೆ ಸುಣ್ಣ ಹಚ್ಚುವ ಕೆಲಸವನ್ನು ಎಂದೋ ಮಾಡಿರುವರು. ಸಾಲೆಗಳ ಬಾಹ್ಯದ ದೃಶ್ಯವು ತೀರ ಅಸಮಾಧಾನಕರವಾಗಿರುವುದೇ ಬಹಳ. ಒಳ್ಳೆಯ ನಕಾಶ, ಪಟಗಳು, ಚಿತ್ರಗಳು ಇವನ್ನು ತಾವೇ ತಯಾರಿಸಿ ಸಾಲೆಯ ಗೋಡೆಗಳನ್ನು ಆಕರ್ಷಕವಾಗುವಂತೆ ಸಿಂಗರಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಸಾಧ್ಯವಿದ್ದ ಸ್ಥಳಗಳಲ್ಲಿ ಸಾಲೆಗೆ ಹೊಂದಿ ಚಿಕ್ಕದೊಂದು ತೋಟ ವನ್ನು ವಿದ್ಯಾರ್ಥಿಗಳ ಸಹಾಯದಿಂದ ಮಾಡಿರಬೇಕು. ಸಾಲೆಯ ಆವರಣವನ್ನೂ ಒಳಭಾಗವನ್ನೂ ಆಕರ್ಷಕವೂ ಆನಂದದಾಯಕವೂ ಆಗುವಂತೆ ಇಟ್ಟುಕೊಳ್ಳಲಿಕ್ಕೆ ಯತ್ನಿಸುವುದು ಶಿಕ್ಷಕರ ಕರ್ತವ್ಯವು. ಅದಕ್ಕಾಗಿ ಅವರು ಕೆಲವೊಂದು ನಿಶ್ಚಿತ ವಾದ ಧೋರಣೆಯಿಂದ ಕೆಲಸ ಮಾಡಬೇಕು. ವಿದ್ಯಾರ್ಥಿಗಳ ಉಡುಗೆ-ತೊಡುಗೆ ಗಳ ಮೈಕೈಗಳ ಸ್ವಚ್ಛತೆ, ಓರಣ, ಅಚ್ಚುಕಟ್ಟುತನ ಇವುಗಳ ಬಗ್ಗೆ ಶಿಕ್ಷಕರು ಲಕ್ಷ್ಯಗೊಡಲೇ ಬೇಕು. ಹಣಿಗೆ, ಸೂಜಿ, ದಾರಗಳು, ಕೆಲವು ಆಂಗಿಯ ಗುಂಡಿ ಗಳು, ಸಾಬಾಣ, ನೀರು ಮುಂತಾದ ಹಲಕೆಲವು ಉಪಕರಣಗಳು ಸಾಲೆಯಲ್ಲಿ ಇರಬೇಕು. ಮತ್ತು ಶಿಕ್ಷಕರು ಬಾಲಕ ಬಾಲಿಕೆಯರಲ್ಲಿ ಸ್ವಚ್ಛತೆ ಓರಣಗಳ ಚಟಗಳು ಮೈಗೊಳ್ಳುವಂತೆ ನೋಡಿಕೊಳ್ಳಬೇಕು.

೫. ಶಿಕ್ಷಕರು ತಮ್ಮ ಕೈಕೆಳಗಿನ ವರ್ಗಕ್ಕೆ ಇಲ್ಲವೆ ವರ್ಗಗಳಿಗೆ ಈ ವರ್ಷದಲ್ಲಿ ಇಂಥ ವಿಷಯಗಳನ್ನು ಇಷ್ಟಿಷ್ಟು ಕಲಿಸತಕ್ಕದ್ದೆಂಬುದನ್ನು ಮೊದಲನೆಯ ವಾರದಲ್ಲಿಯೇ ನಿಶ್ಚಯಿಸಿಕೊಂಡಿರಬೇಕು. ಪ್ರತಿಯೊಬ್ಬ ಶಿಕ್ಷಕನು ಅಥವಾ ಶಿಕ್ಷಕಿಯು ಆ ಅಭ್ಯಾಸದ ಯಾದಿಯ ಒಂದು ಪ್ರತಿಯನ್ನು ತನ್ನ ಕಡೆಗೆ ಇಟ್ಟುಕೊಂಡು ಇನ್ನೊಂದು ಪ್ರತಿಯನ್ನು ತನ್ನ ಬೀಟಿನ ತಪಾಸಣೆಯ ಅಧಿಕಾರಿಗಳ ಕಡೆಗೆ ಕಳುಹಿಸಬೇಕು. ಈ ಅಭ್ಯಾಸಪತ್ರಿಕೆಯನ್ನು ತಯಾರಿಸುವಾಗ ಬಾಲಕರಲ್ಲಿ ತಮ್ಮ ಮನೋಭಿವ್ಯಾಯಗಳನ್ನು ಮಾತಿನಿಂದಲೂ ಬರೆಹ ಮೂಲಕವಾಗಿಯೂ ವ್ಯಕ್ತಪಡಿಸುವ ಶಕ್ತಿಯನ್ನು ಬೆಳೆಯಿಸುವ ಉದ್ದೇಶವನ್ನು ಮರೆಯಲಾಗದು. ವಾಚನದಲ್ಲಿ ಅಭಿರುಚಿಯನ್ನೂ ಬಾಲಕರಲ್ಲಿ ಜ್ಞಾನಸಂಪಾದನೆಯ ಲಾಲಸೆಯನ್ನೂ ಹುಟ್ಟಿಸುವದೂ ಅವರ ಶಿಕ್ಷಣದ ಗುರಿಯಾಗಿರಬೇಕು.

೬. ಮುಖ್ಯಾಧ್ಯಾಪಕನು ತನ್ನ ಶಾಲೆಯ ವಿದ್ಯಾರ್ಥಿಗಳನ್ನು ತಿಂಗಳಿಗೊಮ್ಮೆ ಪರೀಕ್ಷಿಸಬೇಕು; ಮತ್ತು ಅವರ ಅಭ್ಯಾಸದ ಪ್ರಗತಿಪತ್ರಿಕೆಯನ್ನು ತಯಾರಿಸಿ ಇಟ್ಟಿರಬೇಕು. ತಪಾಸಣೆಯ ಅಧಿಕಾರಿಗಳು ಶಾಲೆಯ ತಪಾಸಣೆಗೆ ಬಂದಾಗ ಈ ಪ್ರಗತಿಪತ್ರಿಕೆಯನ್ನು ತಪಾಸಿಸುವರು. ಆಡಳಿತೆಯ ಅಧಿಕಾರಿಗಳು ತಮ್ಮ ಕೈಕೆಳಗಿನ ಸಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿ ಪತ್ರಿಕೆಯನ್ನು ಬರೆದಿಡುವ ಫಾರ್ಮನ್ನು ತಯಾರಿಸಿ ಕೊಡುವರು. ಈ ನಿಯಮವು ಬೋರ್ಡಿನಿಂದ ಸಹಾಯ ಹೊಂದುವ ಶಾಲೆಗಳಿಗೂ ಗಾವಠೀ ಶಾಲೆಗಳಿಗೂ ಅನ್ವಯಿಸುವದು. ವರ್ಷಾಂತ್ಯದಲ್ಲಿ ವಿದ್ಯಾರ್ಥಿಗಳನ್ನು ಮೇಲಿನ ತರಗತಿಗೆ ಹಾಕುವದಕ್ಕೆ ಈ ಪ್ರಗತಿಪತ್ರಿಕೆಯು ಸಹಾಯಕಾರಿಯಾಗುವದು. ವಿದ್ಯಾರ್ಥಿಗಳನ್ನು ಅವೇ ವರ್ಗಗಳಲ್ಲಿ ಇಟ್ಟು ಕೊಳೆಯಹಾಕುವದನ್ನು ತಪ್ಪಿಸಲೇ ಬೇಕು. ಅಂಥ ಪ್ರಬಲ ಕಾರಣವಿಲ್ಲದೆ ವಿದ್ಯಾರ್ಥಿಗಳನ್ನು ಬಾಲಕರ ವರ್ಗದಲ್ಲಿ ಇಲ್ಲವೆ ಮೊದಲನೆಯ ಇಯತ್ತೆಯಲ್ಲಿ ಒಂದಕ್ಕಿಂತ ಹೆಚ್ಚು ವರ್ಷ ಇಡಲೇ ಬಾರದು.

೭. ಪ್ರತಿಯೊಂದು ಶಾಲೆಯಲ್ಲಿ ಶಾಲೆಯ ಅಭ್ಯಾಸಕ್ರಮದಲ್ಲಿ ಸೇರ್ಪಡೆಯಾಗದೆ ಇದ್ದ ಹಲಕೆಲವು ಚಟುವಟಿಕೆಗಳು ನಡೆಯಲೇ ಬೇಕು. ಬೇರೆ ಬೇರೆ ಪಂಗಡಗಳ ಆಟಗಳು, ಶಾರೀರಿಕ ಶಿಕ್ಷಣದ ಚಟುವಟಿಕೆ, ಹಳ್ಳಿಯ ಹಾಡುಗಳು, ಹಳ್ಳಿಯ ಕುಣಿತಗಳು, ಚರ್ಚಾಮಂಡಲಗಳು, ಸ್ವಯಂಸೇವಕ ದಳಗಳು, ಸ್ಕೌಟ ಚಟುವಟಿಕೆಗಳು, ಗರ್ಲಗಾಯಿಡದ ಕಾರ್ಯಕ್ರಮಗಳು, ರೆಡ್‌ಕ್ರಾಸ್ ಸಂಸ್ಥೆ, ಸಂಭಾಷಣ, ಹಾಡುಗಳು, ಚಿಕ್ಕ ನಾಟಕಗಳು ಮುಂತಾದವುಗಳನ್ನು ಪ್ರತಿಯೊಂದು ಶಾಲೆಯಲ್ಲಿ ಸಾಮಾನ್ಯವಾಗಿ ನಡೆಯಿಸಲು ಸಾಧ್ಯವಿರುವದು.

೨. 'ಶಿಫ್ಟ್' ಪದ್ಧತಿ

ಪ್ರಾಥಮಿಕ ಶಿಕ್ಷಣದ ಪ್ರಸಾರಕಾರ್ಯವು ಕೂಡಲೆ ಕೈಕೊಳ್ಳಬೇಕಾದ ಮತ್ತು ಅತಿ ಮಹತ್ವದ ದೇಶಕಾರ್ಯವೆಂಬದು ಸಕಲರೂ ಒಪ್ಪಬೇಕಾದ ಮಾತು. ಅದೇ ಮೇರೆಗೆ ಸದ್ಯಕ್ಕೆ ಪ್ರಚಾರದಲ್ಲಿರುವ ಕ್ರಮದಿಂದ ಸಾಗಿದರೆ ಪ್ರಾಥಮಿಕ ಶಿಕ್ಷಣ ಕಾರ್ಯಕ್ಕೆ ಬಹು ದೊಡ್ಡ ದ್ರವ್ಯನಿಧಿಯು ಬೇಕೆಂಬುದೂ ಸರಕಾರವಾಗಲಿ ಸ್ಥಾನಿಕ ಸಂಸ್ಥೆಗಳಾಗಲಿ ಇಷ್ಟು ಹಣವನ್ನು ಪೂರೈಸಲು ಸಾಧ್ಯವಿಲ್ಲವೆಂಬದೂ ಯಾರಿಗೂ ತಿಳಿಯದ ಮಾತಲ್ಲ. ನಮ್ಮ ದೇಶದ ನಿಯಮಿತ ಉತ್ಪನ್ನದೊಳಗಿಂದ ಸಾರ್ವತ್ರಿಕ ಶಿಕ್ಷಣದ ಪ್ರಸಾರದ ಸಲುವಾಗಿ ಬೇಕಾಗುವಷ್ಟು ಹಣವನ್ನು ಒದಗಿಸಿಕೊಡುವದು ಅಸಾಧ್ಯವಾಗಿದೆ. ಇಂಥ ಸ್ಥಿತಿಯಲ್ಲಿಯೇ ಎರಡನೆಯ ಜಾಗತಿಕ ಮಹಾಯುದ್ಧವೂ ಪ್ರಾರಂಭವಾಗಿರುವದರಿಂದ ನಮ್ಮ ದೇಶದ ಸಂರಕ್ಷಣೆಗಾಗಿ ದೇಶದ ಉತ್ಪನ್ನದ ದೊಡ್ಡ ಭಾಗವು ವೆಚ್ಚವಾಗಿ ಹೋಗುವ ಸಂಭವವೂ ಉಂಟು. ಜಗತ್ತಿನೊಳಗಿನ ಇತರ ರಾಷ್ಟ್ರಗಳ ಪ್ರಜೆಗಳಂತೆ ನಾವೂ ಸುಶಿಕ್ಷಿತರೆನ್ನಿಸಿಕೊಂಡು ಬಾಳಬೇಕೆಂದು ಬಯಸುತ್ತಿದ್ದರೆ ನಾವು ಮುಂದೆ ಒಳ್ಳೆಯ ದಿನಗಳು ಬರುವವರೆಗೂ ದಾರಿ ನೋಡುತ್ತ ಕೂಡ್ರುವದು ಸಮಂಜಸವಾಗಲಾರದು. ಆದ್ದರಿಂದ ಕೂಡಲೆ ಎಚ್ಚತ್ತು ಇಂಥ ಕಷ್ಟಕಾಲದಲ್ಲಿಯೂ ಕೂಡ ಪ್ರಾಥಮಿಕ ಶಿಕ್ಷಣದ ಪ್ರಸಾರಕಾರ್ಯವನ್ನು ಹೇಗೆ ಪ್ರಾರಂಭಿಸಬಹುದೆಂಬದನ್ನು ವಿಚಾರಮಾಡಬೇಕಾಗಿದೆ; ಮತ್ತು ಹೊಸ ಮಾರ್ಗಗಳನ್ನು ಶೋಧಿಸಿಕೊಂಡು ನಮ್ಮ ಸದ್ಯದ ಉತ್ಪನ್ನದ ಬಾಬುಗಳನ್ನೆಲ್ಲ ವ್ಯವಸ್ಥೆಗೊಳಿಸಿ ಆದಷ್ಟು ಹೆಚ್ಚು ಹಣವನ್ನು ದೊರಕಿಸಿಕೊಂಡು ವೆಚ್ಚದಲ್ಲಿಯೂ ಆದಷ್ಟು ಕಾಟಕಸರು ಮಾಡಿ ಸಣ್ಣ ಪ್ರಮಾಣದಿಂದಲೇ ಆದರೂ ಪ್ರಾಥಮಿಕ ಶಿಕ್ಷಣದ ಪ್ರಸಾರ ಕಾರ್ಯವನ್ನು ಪ್ರಾರಂಭಿಸಲೇಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಸ್ಥಾನಿಕ ಸಂಸ್ಥೆಯವರೂ ಸದ್ಯಕ್ಕೆ ತಮಗಿರುವ ನಿಯಮಿತ ಉತ್ಪನ್ನದಲ್ಲಿಯೇ ಆದಷ್ಟು ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಬಹುದಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

'ಶಿಫ್ಟ್ ಸಿಸ್ಟಿವ್' ಅಥವಾ 'ಕಾಲವಿಭಾಗದಂತೆ ಶಿಕ್ಷಣ ಕೊಡುವ ಯೋಜನೆ' ಎಂಬದು ವೆಚ್ಚವನ್ನು ಕಡಿಮೆ ಮಾಡುವದಕ್ಕೂ ಶಿಕ್ಷಣವನ್ನು ಪ್ರಸಾರ ಮಾಡುವದಕ್ಕೂ ಸೂಚಿಸಬಹುದಾದ ಅನೇಕ ಮಾರ್ಗಗಳಲ್ಲಿ ಒಂದಾ

ಗಿದೆ. ಇದರಿಂದ ಶಾಲೆಗಳಲ್ಲಿ ಬಾಲಕರಿಗೆ ಶಿಕ್ಷಣ ಕೊಡುವ ವೇಳೆಯು ಒಂದು ದಿನಕ್ಕೆ ಆರು ತಾಸು ಇದ್ದದ್ದನ್ನು ಕಡಿಮೆ ಮಾಡಿ ಮೂರು ತಾಸು ಮಾಡಬೇಕಾಗುವದು. ಮತ್ತು ಮೊದಲಿನ ಮೂರು ತಾಸುಗಳಲ್ಲಿ ಒಂದು ಭಾಗದ ವಿದ್ಯಾರ್ಥಿಗಳೂ ಎರಡನೆಯ ಮೂರು ತಾಸುಗಳಲ್ಲಿ ಇನ್ನೊಂದು ಭಾಗದ ವಿದ್ಯಾರ್ಥಿಗಳೂ ಕಲಿಯುವ ವ್ಯವಸ್ಥೆ ಮಾಡಬೇಕಾಗುವದು. ಒಬ್ಬ ಶಿಕ್ಷಕನು ಮೊದಲನೆಯ ಭಾಗದಲ್ಲಿ ಎಂದರೆ (ಮುಂಜಾನೆ ಮತ್ತು ಮಧ್ಯಾಹ್ನ ಈ ರೀತಿ ಎರಡು ಹೊತ್ತು ಸಾಲೆ ನಡೆಯುತ್ತಿದ್ದಲ್ಲಿ) ಮುಂಜಾನೆ ಒಂದು ಗುಂಪಿನ ೩೦ ವಿದ್ಯಾರ್ಥಿಗಳಿಗೂ ಮಧ್ಯಾಹ್ನ ಮತ್ತೊಂದು ಭಾಗದ ೩೦ ವಿದ್ಯಾರ್ಥಿಗಳಿಗೂ ಕಲಿಸುವನು. ಇದರಿಂದ ಒಬ್ಬನೇ ಶಿಕ್ಷಕನು ೩೦ ವಿದ್ಯಾರ್ಥಿಗಳ ಬದಲು ೬೦ ವಿದ್ಯಾರ್ಥಿಗಳಿಗೆ ಕಲಿಸಲು ಸಾಧ್ಯವಾಗುವದು. ಹೀಗೆ ಮಾಡುವದರಿಂದ ಶಿಕ್ಷಕನ ಕೆಲಸ ಮಾಡುವ ದಿನದ ವೇಳೆಯು ಹೆಚ್ಚಾಗುವದಿಲ್ಲ. ಈ ಸಂದರ್ಭದಲ್ಲಿ ನೀವು ಶ್ರೀ. ಪರೂಳೆಕರ ಇವರು ಬರೆದ, ಮ್ಯಾಕ್‌ಮಿಲನ್ ಕಂಪನಿಯವರು ಪ್ರಕಟಿಸಿರುವ, **'ಹಿಂದುಸ್ತಾನದಲ್ಲಿ ಸಾಕ್ಷರತೆ'** ಎಂಬ ಪುಸ್ತಕವನ್ನು ಅದರಲ್ಲಿಯೂ ವಿಶೇಷವಾಗಿ 'ಕಾಲವಿಭಾಗ ಮಾಡಿಕೊಂಡು ಶಿಕ್ಷಣ ಕೊಡುವದು' ಎಂಬ ಪ್ರಕರಣವನ್ನು ಲಕ್ಷ್ಯಗೊಟ್ಟು ಓದಬೇಕೆಂದು ಸೂಚಿಸುವೆನು.

'ಶಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರುವದರಿಂದ ಈ ಕೆಳಗೆ ಹೇಳುವ ಪ್ರಯೋಜನಗಳಾಗುವವು.

೧. ಹೆಚ್ಚಿನ ವೆಚ್ಚವಿಲ್ಲದೆ ಸಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಬಹುದು.

೨. ದೊಡ್ಡ ದೊಡ್ಡ ಶಾಲೆಗಳಲ್ಲಿಯ ಶಿಕ್ಷಕರ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಮತ್ತು ಈ ಪದ್ಧತಿಯಿಂದ ಹೆಚ್ಚಿನ ವಿದ್ಯಾರ್ಥಿಗಳ ಸಲುವಾಗಿ ಬೇಕಾಗುವ ಶಾಲೆಯ ಕಟ್ಟಡದೊಳಗಿನ ಸ್ಥಳದ ಕೊರತೆಯು ದೂರಾಗುವದು.

೩. ಒಬ್ಬನೇ ಶಿಕ್ಷಕನಿರುವ ಶಾಲೆಗಳಲ್ಲಿ ಒಬ್ಬ ಶಿಕ್ಷಕನು ಒಂದೇಕಾಲಕ್ಕೆ ಕಲಿಸಬೇಕಾಗುವ ವರ್ಗಗಳ ಸಂಖ್ಯೆಯು ಕಡಿಮೆಯಾಗುವದು. ಇಂಥ ಶಿಕ್ಷಕನು ಏಕಕಾಲಕ್ಕೆ ಐದು (ಬಾಲಕರವರ್ಗ ಮತ್ತು ನಾಲ್ಕು ಇಯತ್ತೆಗಳು) ವರ್ಗಗಳನ್ನು ಕಲಿಸುವದರ ಬದಲು ಮುಂಜಾನೆ ಮೂರುವರ್ಗಗಳು ಮಧ್ಯಾಹ್ನ ಇನ್ನುಳಿದ ಎರಡು ವರ್ಗಗಳು ಈ ರೀತಿಯಾಗಿ ವಿಭಾಗ ಮಾಡಿಕೊಳ್ಳಲು ಸಾಧ್ಯವಾಗುವದು.

೪. ಈ ವ್ಯವಸ್ಥೆಯಿಂದ ಹಳ್ಳಿಗಳಲ್ಲಿಯ ಬಾಲಕರು ಒಪ್ಪೊತ್ತು ಮಾತ್ರ ಸಾಲೆಗೆ ಹೋಗಬೇಕಾಗುವದರಿಂದ ಇನ್ನೊಂದು ಒಪ್ಪೊತ್ತು ಮನೆಯಲ್ಲಿ ಉಳಿದು

ಒಕ್ಕಲತನ ಮೊದಲಾದ ತಮ್ಮ ಮನೆತನದ ಕೆಲಸಗಳಲ್ಲಿ ಪಾಲಕರಿಗೆ ನೆರವಾಗಲು ಅನುಕೂಲವಾಗುವದು.

ಪ್ರಾರಂಭಕ್ಕೆ ಪ್ರಾಥಮಿಕ ಶಾಲೆಗಳ ಬಾಲಕರವರ್ಗ ಮತ್ತು ಮೊದಲನೆಯ ಇಯತ್ತೆ ಈ ಎರಡೇ ವರ್ಗಗಳಲ್ಲಿ 'ಶಿಫ್ಟ್' ಪದ್ಧತಿಯು ಪ್ರಾರಂಭಿಸಲ್ಪಡಬೇಕು. ಬರಬರುತ್ತ ಇದನ್ನು ನಾಲ್ಕನೆಯ ಇಯತ್ತೆಯವರೆಗೂ ಬೆಳಿಸಬಹುದಾದರೂ ಆರಂಭಕ್ಕೆ ಜಿಲ್ಲೆಯೊಳಗಿನ ದೊಡ್ಡ ದೊಡ್ಡ ಶಾಲೆಗಳಲ್ಲಿಯ ಬಾಲಕರವರ್ಗ ಮತ್ತು ಮೊದಲನೆಯ ಇಯತ್ತೆಗಳಲ್ಲಿ ಮಾತ್ರ ಈ ಪದ್ಧತಿಯನ್ನು ಪ್ರಾರಂಭಿಸಬೇಕು. ಇದರಿಂದ ಅಂಥ ಶಾಲೆಗಳಲ್ಲಿಯ ಹೆಚ್ಚಾಗುವ ಶಿಕ್ಷಕರನ್ನು ಬೇರೆಕಡೆಗೆ, ಹೆಚ್ಚಿನ ಶಿಕ್ಷಕರು ಬೇಕಾಗಿರುವ ಸಾಲೆಗಳಿಗೆ, ಕಳುಹಿಸಲಿಕ್ಕೆ ಅನುಕೂಲವಾಗುವದು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೆಚ್ಚಿನ ಅಸಿಸ್ಟಂಟರನ್ನು ಕೊಡಲೇಬೇಕಾಗಿರುವ ಎಷ್ಟೋ ಸಾಲೆಗಳು ಇದ್ದೇ ಇರುವವು. 'ಶಿಫ್ಟ್' ಪದ್ಧತಿಯನ್ನು ಪ್ರಾರಂಭಿಸುವದರಿಂದ ಈ ಸಮಸ್ಯೆಯನ್ನು ಬಹು ಸುಲಭವಾಗಿ ಬಿಡಿಸಬಹುದು. ಇದೂ ಅಲ್ಲದೆ ಎಷ್ಟೋ ಸಾಲೆಗಳಲ್ಲಿ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಿಕ್ಕೆ ಸ್ಥಳದ ಕೊರತೆಯಿರುವದು. 'ಶಿಫ್ಟ್' ಪದ್ಧತಿಯು ಈ ತೊಂದರೆಯನ್ನು ಪರಿಹರಿಸುವದು. ಆಡಳತೆಯ ಅಧಿಕಾರಿಗಳು ತಮ್ಮ ಜಿಲ್ಲೆಯೊಳಗಿನ ಇಂಥ ಅಡಚಣಿಗಳನ್ನು ಲಕ್ಷ್ಯಪೂರ್ವಕವಾಗಿ ಅಭ್ಯಾಸಮಾಡಿ 'ಶಿಫ್ಟ್' ಪದ್ಧತಿಯನ್ನು ಕೂಡಲೇ ಪ್ರಚಾರದಲ್ಲಿ ತರಬೇಕು.

೫ 'ಶಿಫ್ಟ್' ಪದ್ಧತಿಯನ್ನು ಪ್ರಾರಂಭಿಸುವದರಲ್ಲಿ ಸದ್ಯದ ವೆಚ್ಚದ ರಕಮನ್ನು ಕಡಿಮೆಮಾಡಿ ಹಣ ಉಳಿಸಿಕೊಳ್ಳಬೇಕೆಂಬ ವಿಚಾರವಿಲ್ಲ. ಎಲ್ಲ ಸ್ಥಾನಿಕ ಸಂಸ್ಥೆಗಳು ಈಗಿರುವ ಶಾಲೆಗಳ ಸಂಖ್ಯೆಯನ್ನೂ ಶಿಕ್ಷಕರ ಸಂಖ್ಯೆಯನ್ನೂ ಕಾದುಕೊಳ್ಳಲೇಬೇಕು. ಈಗ ಮಾಡುತ್ತಿರುವ ವೆಚ್ಚದಲ್ಲಿಯೇ ಹೆಚ್ಚು ಬಾಲಕರಿಗೆ ಶಿಕ್ಷಣಕೊಡುವ ಯೋಜನೆ ಮಾಡಬೇಕೆಂಬದಿಷ್ಟೇ ಈ ಪದ್ಧತಿಯ ಗುರಿ. ಆದ್ದರಿಂದ ಈ ಪದ್ಧತಿಯನ್ನು ಪ್ರಚಾರದಲ್ಲಿ ತರುವಾಗ ಪ್ರತಿ ಶಿಕ್ಷಕನು ಕಲಿಸುವ ವಿದ್ಯಾರ್ಥಿಗಳ ಸಂಖ್ಯೆಯ ಸರಾಸರಿ ಮಾನವು ೪೫ ರಿಂದ ೫೦ ರ ವರೆಗೆ ಆಗುವಂತೆ ನೋಡಿಕೊಳ್ಳಬೇಕು. ಸದ್ಯಕ್ಕೆ ಈ ಸರಾಸರಿ ಮಾನವು ೩೦ ಮಾತ್ರ ಇರುವದು. ಪ್ರತಿಯೊಂದು ಸ್ಥಾನಿಕ ಸಂಸ್ಥೆಯ ಆಡಳತೆಯ ಅಧಿಕಾರಿಗಳೂ ಈ ಪದ್ಧತಿಯಿಂದಾಗುವ ಪ್ರಯೋಜನವನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ ಪ್ರತಿ ೬ ತಿಂಗಳಿಗೊಮ್ಮೆ ತಮ್ಮ ವರದಿಯನ್ನು ತಯಾರಿಸಬೇಕು. ಈ ಪದ್ಧತಿಯು ಸಾಲೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕೆ ಹೇಗೆ ಸಹಾಯಕಾರಿಯಾಗುವದೊಬದನ್ನು ಕಾಲಕಾಲಕ್ಕೆ ಟಿಪ್ಪಣಿ ಮಾಡಿ

ಕೊಳ್ಳಬೇಕು. ಬೋರ್ಡಿನಿಂದ ಮಾನ್ಯತೆ ಪಡೆದ ಮತ್ತು ಧನಸಹಾಯ ಹೊಂದು ತ್ತಿರುವ ಶಾಲೆಗಳ ಚಾಲಕರೂ ಸಹ ಈ ಪದ್ಧತಿಯನ್ನು ಅನುಸರಿಸಲಿಕ್ಕೂ ಅಂಥ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಹೆಚ್ಚಿಸಲಿಕ್ಕೂ ಯತ್ನಿಸಬೇಕು.

೬. ಶಿಕ್ಷಕರೂ ಸಾರ್ವಜನಿಕರೂ ಈ 'ಪ್ರಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರಲು ತಕರಾರು ಮಾಡುವ ಸಂಭವವಿರುವದು. ಆದರೆ ನಮ್ಮ ಅಧಿಕಾರಿಗಳು ದೃಢಮನಸ್ಸಿನಿಂದಲೂ ಯುಕ್ತಿ ಪ್ರಯುಕ್ತಿಗಳಿಂದಲೂ ಅವರನ್ನು ಸಮಾಧಾನ ಪಡಿಸಬೇಕು. ಈ ಪದ್ಧತಿಯಿಂದ ಬಾಲಕರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಲಿ ಕೊರತೆಯಾಗಲಿ ಬರಲಾರದು. ಶಿಕ್ಷಣ ವಿಷಯವನ್ನು ಲಕ್ಷ್ಯಪೂರ್ವಕವಾಗಿ ಅಭ್ಯಾಸ ಮಾಡಿದವರಿಗೆ ಚಿಕ್ಕ ಬಾಲಕರಿಗೆ ಒಂದು ದಿನಕ್ಕೆ ೬ ತಾಸಿಗಿಂತ ಹೆಚ್ಚು ವೇಳೆ ಕಲಿಸಬೇಕಾಗುವದಿಲ್ಲವೆಂದು ಕಂಡುಬಂದಿರುವದು. ಒಂದು ದಿನಕ್ಕೆ ೩ ತಾಸು ಮಾತ್ರವೇ ಕಲಿಸುತ್ತ ಹೋದರೆ ಈಗಿರುವ ಅಭ್ಯಾಸ ಪತ್ರಿಕೆಯನ್ನು (ಅದರಲ್ಲಿ ಅವಶ್ಯಕವೆನಿಸುವ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡು) ಏನೂ ತೊಂದರೆಯಿಲ್ಲದೆ ಸಾಗಿಸಿಕೊಂಡು ಹೋಗಬಹುದಾಗಿದೆ. 'ಪ್ರಿಫ್ಟ್' ವದ್ಧತಿಯನ್ನು ನಿಷ್ಪಕ್ಷವಾತ ಬುದ್ಧಿಯಿಂದ ಪ್ರಯೋಗ ಮಾಡಿ ನೋಡಬೇಕಾಗಿದೆ. ಮತ್ತು ಈ ಪದ್ಧತಿಯ ಬಗ್ಗೆ ಸಾರ್ವಜನಿಕರ ಅನುಕೂಲ ಅಭಿಪ್ರಾಯವನ್ನು ಹುಟ್ಟಿಸಬೇಕಾಗಿದೆ. ಕೇವಲ ಪರಿಪತ್ರವನ್ನು ಹೊರಡಿಸುವದರಿಂದ ಕೆಲಸವಾಗುವಂತಿಲ್ಲ. ಈ ಸಮಸ್ಯೆಯ ಬಗ್ಗೆ ಸ್ಕೂಲಬೋರ್ಡಿನ ಅಧಿಕಾರಿಗಳೂ ಸಹ ವಿಶೇಷ ಲಕ್ಷ್ಯವೊರೈಸಬೇಕು. ಯಾರಾದರೂ ಈ ವಿಷಯದಲ್ಲಿ ನನ್ನ ಸಹಾಯವನ್ನು ಕೋರಿದರೆ ಅದನ್ನು ಒದಗಿಸಲು ನಾನು ಸದಾ ಸಿದ್ಧನಿದ್ದೇನೆ. ಹೆಚ್ಚು ಹುಡುಗರಿರುವ ಮತ್ತು ಶಿಕ್ಷಕರ ಕೊರತೆಯುಳ್ಳ ಶಾಲೆಗಳನ್ನು ಮೊದಲು ಆರಿಸಿಕೊಂಡು ಅವುಗಳಲ್ಲಿ ಈ ಪದ್ಧತಿಯನ್ನು ತಕ್ಕ ಹಂಚಿಕೆಯಿಂದ ಪ್ರಾರಂಭಿಸಬೇಕು. ನ್ಯಾಶನಿಕ ಸಂಸ್ಥೆಯ ಅಡಳಿತೆಗೆ ಒಳಗಾದ ಎಷ್ಟು ಶಾಲೆಗಳಲ್ಲಿ ಈ ವರ್ಷ ಈ ಪದ್ಧತಿಯನ್ನು ಪ್ರಚಾರದಲ್ಲಿ ತಂದಿರುವರೆಂಬುದನ್ನೂ ಇದರಿಂದ ಈಗಿರುವಷ್ಟೇ ವೆಚ್ಚದಿಂದ ಎಷ್ಟು ಹೆಚ್ಚು ಬಾಲಕರಿಗೆ ಶಿಕ್ಷಣ ಕೊಡಲು ಅನುಕೂಲವಾಯಿತೆಂಬುದನ್ನೂ ನಾನು ತಿಳಿದುಕೊಳ್ಳಲು ಬಯಸುವೆನು.

ಶಿಕ್ಷಕರು ಈ ಪದ್ಧತಿಯಿಂದಾಗುವ ಪ್ರಯೋಜನವನ್ನು ಲಕ್ಷದಲ್ಲಿಟ್ಟುಕೊಂಡು ಧೈರ್ಯದಿಂದ ಕೆಲಸವನ್ನು ಪ್ರಾರಂಭಿಸಬೇಕು. ಅವರು ಹೇಳಬಹುದಾದ ಅಡಚಣೆಗಳನ್ನೂ ಅವುಗಳ ನಿವಾರಣೋಪಾಯಗಳನ್ನೂ ಇನ್ನೊಂದು ಲೇಖನದಲ್ಲಿ ಪ್ರತಿಪಾದಿಸುವೆವು.

ಮಕ್ಕಳ ಆರೋಗ್ಯ

ಲೇಖಕರು:—ಶ್ರೀ. ಕರಿಯಪ್ಪ ಪುಜ್ಜಣ್ಣನವರ ಬೈ. ಜೀರಮನ್. ಡಿ. ಎಸ್. ಬಿ. ಧಾರವಾಡ.

ಮಕ್ಕಳೆಂದರೆ ಭಾವಿ ಜನಾಂಗದ ಯಜಮಾನರು. ಇಂದಿನ ಎಳೆಗರುವೇ ನಾಳಿನ ಎತ್ತು. ಈ ಹೊತ್ತಿನ ಪುಟ್ಟ ಗಿಡವೇ ನಾಳಿನ ಮಹಾವೃಕ್ಷ. ಸಣ್ಣ ವಸ್ತುವೆಂದರೆ ಸ್ವಾಭಾವಿಕವಾಗಿ ಅಲಕ್ಷ್ಯವುಂಟಾಗುತ್ತದೆ. ಮಕ್ಕಳ ಬೆಳವಣಿಗೆಯ ಅಭ್ಯಾಸದ ವಿಷಯದಲ್ಲಿ ಜನರು ಪರರಾಷ್ಟ್ರಗಳಲ್ಲಿ ಬಹುಮಟ್ಟಿಗೆ ಮುಂದುವರಿದಿದ್ದಾರೆ. ಮಕ್ಕಳ ಏಳ್ಗೆಯೇ ನಮ್ಮ ಮನೆಗಳ ಉದ್ಧಾರಕ್ಕೆ ಕಾರಣವಾಗುತ್ತದೆ. ನಮ್ಮ ದೇಶದಲ್ಲಿರುವಷ್ಟು ರೋಗಿಗಳೂ, ಅಶಕ್ತರೂ ಜಗತ್ತಿನೊಳಗಿನ ಇನ್ನಾವ ಜನಾಂಗದಲ್ಲಿಯೂ ದೊರೆಯುವದಿಲ್ಲ. ಇದಕ್ಕೆಲ್ಲ ನಮ್ಮ ಶಿಶುಪಾಲನ ಕ್ರಮವಲ್ಲಿಯ ದೋಷ, ವಿಜ್ಞಾನ, ಇವೇ ಮುಖ್ಯ ಕಾರಣಗಳಾಗಿವೆ.

ಬರಿಯ ಮಕ್ಕಳನ್ನು ಹಡೆಯುವದಷ್ಟೇ ನಮ್ಮ ಕೆಲಸವಲ್ಲ. ಅವರು ನಿಜವಾದ ಆರೋಗ್ಯವಂತರೂ, ಜನಾಂಗಕ್ಕೆ ಉಪಯುಕ್ತರೂ ಆಗುವಂತೆ ಮಾಡುವದೇ ನಮ್ಮ ಗುರಿಯಾಗಿರಬೇಕು. ಕೇವಲ ರಾಷ್ಟ್ರದ ಜನಸಂಖ್ಯೆಯನ್ನು ಹೆಚ್ಚಿಸಿದರೆ ನಾವು ಮೇಲುಗೈಯನ್ನು ಪಡೆದಂತಾಯಿತೋ ?

ಮಕ್ಕಳ ವಿಷಯದಲ್ಲಿ ಹಿಂದವಾಸಿಗಳಾದ ನಾವು ತೀರ ಅಲಕ್ಷ್ಯವೃತ್ತಿಯವರಾಗಿದ್ದೇವೆ. ಜಗತ್ತಿನಲ್ಲಿ ನಮ್ಮಂಥ ರೋಗಿಗಳೂ, ನಮ್ಮಷ್ಟು ಮಕ್ಕಳನ್ನು ಹಡೆಯುವವರೂ ಎಲ್ಲಿಯೂ ದೊರೆಯುವಿಲ್ಲ. ಇದೊಳ್ಳೆ ವಿಚಿತ್ರದ ಸಂಗತಿ ! ಇದರಿಂದ ನಾವು ಪಶುವೃತ್ತಿಗಿಳಿಯುತ್ತಿದ್ದೇವೆಂದು ಒಡೆದು ಕಾಣುತ್ತದೆ. ಕುರಿಯ ತಂಡಗಳಂತೆ ನಮ್ಮ ಪೀಳಿಗೆಯೂ ಬೆಳೆಯುತ್ತಲಿದೆ. ಆದರೇನು ? ತೋಳಿನ ಹಾವಳಿಯನ್ನು ತಡೆಯುವಷ್ಟು ಸ್ವಶಕ್ತಿಯು ನಮ್ಮಲ್ಲಿಲ್ಲದ ಮೇಲೆ ಕುರುಬನ ದಿಡ್ಡಿಯನ್ನು ತುಂಬುವಂಥ ಬರಿಯ ಸಂಖ್ಯೆಯಿಂದೇನು ಫಲ ? ನಮ್ಮಲ್ಲಿ ಧೈರ್ಯ ವಿರಬೇಕು, ಧೃಢತೆಯಿರಬೇಕು, ಶಕ್ತಿಯಿರಬೇಕು. ಇವೆಲ್ಲ ಆರೋಗ್ಯದಿಂದಲೇ ಸಾಧ್ಯ. ಇಲ್ಲವಾದರೆ ನಮಗೆ ಸುಖ-ಶಾಂತಿಗಳೆಲ್ಲಿಯವು ? ನಮ್ಮ ಗೋಳು ಹೀಗೆಯೇ ಸಾಗತಕ್ಕದ್ದೇ. ಮನೆಯ ತಳಹದಿಯನ್ನು ಭದ್ರಗೊಳಿಸುವದರಲ್ಲಿಯೇ ನಾವು ತಪ್ಪಿದ್ದೇವೆ. ಮಕ್ಕಳ ಸಂರಕ್ಷಣೆಯ ದಾರಿಯಲ್ಲಿ ನಾವು ಅಡ್ಡ ದಾರಿಯನ್ನು ಹಿಡಿದಿದ್ದೇವೆ.

ಚಿಕ್ಕಮಕ್ಕಳ ದೇಹರಚನೆಯನ್ನು ಸರಿಯಾಗಿ ತಿದ್ದದಿದ್ದಲ್ಲಿ ಅವರು ಮುಂದೆ ಬಲಿಷ್ಠರಾಗುವದು ಶಕ್ಯವೇ ಇಲ್ಲ. ಅಂತೆಯೇ ಅವರ ಬುದ್ಧಿಯ ಬೆಳವಣಿಗೆಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸದಿದ್ದರೆ ಅವರು ಜ್ಞಾನಿಗಳಾಗುವ ಬಗೆಯಾದರೂ ಹೇಗೆ? ಅವರ ಬುದ್ಧಿಯನ್ನು ಬೆಳಿಸುವಂತೆ ಶರೀರವನ್ನು ಬೆಳಿಸುವದೂ ಅಷ್ಟೇ ಮಹತ್ವವುಳ್ಳದ್ದಾಗಿದೆ.

ಕೆಲವು ವರ್ಷಗಳ ಹಿಂದೆ ಅಮೇರಿಕೆಯಲ್ಲಿ ಒಂದು ವಿಚಿತ್ರ ಸಂಗತಿಯು ನಡೆಯಿತು. ಅಲ್ಲಿ ವರ್ಷಕ್ಕೊಮ್ಮೆ ತರುಣ ಸ್ತ್ರೀಯರ ಶಾರೀರಿಕ ಸೌಂದರ್ಯದ ಬಗ್ಗೆ ಮೇಲಾಟನನ್ನೇರ್ಪಡಿಸುತ್ತಾರೆ. ಉತ್ತಮ ಮೈಕಟ್ಟಿನ, ಸುಂದರವಾದ ಕಳೆಯುಳ್ಳವಳಿಗೆ ಆ ಬಹುಮಾನವು ದೊರೆಯುತ್ತದೆ. ಆ ಪಂದ್ಯಾಟಕ್ಕಾಗಿ ಓರ್ವ ಸ್ತ್ರೀ ಪೂರ್ವ ಸಿದ್ಧತೆಯಲ್ಲಿದ್ದಳು. ಅವಳೊಂದು ದಿನ ತಂದೆಯು ಮೋಟಾರಿನಲ್ಲಿ ಕೂತುಹೋಗುವಾಗ ಮೋಟಾರಿಗೆ ಧಕ್ಕೆ ತಗಲಿ, ಅವಳಿಗೂ ಘಾಯವಾಗಿ, ರಕ್ತಸುರಿದು, ಆ ವರ್ಷದ ಪಂದ್ಯಾಟದಲ್ಲಿ ಅವರಿಗೆ ಬಹುಮಾನವು ದೊರೆಯದೆ ಹೋಯಿತು. ಅದಕ್ಕಾಗಿ ಅವಳು ರಕ್ತನಾಶದ ಬಗ್ಗೆ ತಂದೆಯ ಮೇಲೆ ರೇಗಿ ಗೆದ್ದಳು. ತಂದೆಯನ್ನು ಹಳಿಯುವದು ಅವಳ ಕರ್ತವ್ಯವಲ್ಲದಿದ್ದರೂ, ಈ ಮಾತು ಅಮೇರಿಕೆಯ ಸ್ತ್ರೀಯರು ದೇಹಾರೋಗ್ಯತೆಯ ವಿಷಯದಲ್ಲಿ ಒಳ್ಳೇ ದಕ್ಷರಾಗಿದ್ದಾರೆಂದು ತೋರಿಸುತ್ತದೆ. ಅವರು ದೇಹಾರೋಗ್ಯತೆಯ ಬಗ್ಗೆ ತಳೆದಿರುವ ಈ ಧೋರಣವು ಅವರ ಮುಂದಿನ ಪೀಳಿಗೆಯ ಆರೋಗ್ಯಕ್ಕೆ ಕಾರಣ ವಾಗುತ್ತದೆ.

ಆರೋಗ್ಯದ ಕಡೆಗೆ ನಮ್ಮ ಲಕ್ಷ್ಯ ಕಡಿಮೆ. ದೈವದ ಮೇಲೆ ಭಾರಹಾಕುವ ದುರಭ್ಯಾಸವೊಂದು ನಮಗೆ ಗಂಟುಬಿದ್ದಿದೆ. ನಾರಹುಣ್ಣಿಗೂ ತಲೆಸೂಲೆ ಮುಂತಾದ ಬೇನೆಬೇಸರಿಕೆಗಳಿಗೂ ದೈವವೇ ಕಾರಣವೆ? ಇದರಲ್ಲಿ ನಮ್ಮ ತಪ್ಪಿಲ್ಲವೆ? ನಮ್ಮ ಮೂಢಭಕ್ತಿಯ ಪರಮಾವಧಿ ಇದು!

ಮಕ್ಕಳ ರಕ್ಷಣೆಯ ಬಗ್ಗೆ ಸೆನ್ಸರ್ ಸಾಹೇಬರು ಈ ರೀತಿ ಹೇಳುತ್ತಾರೆ:— (೧) ಶಿಶುಸಂರಕ್ಷಣೆಯ ದೋಷಗಳೇ ಅಯಾ ಮಕ್ಕಳ ಹಾಗು ಜನಾಂಗದ ಅವನತಿಗೆ ವಿಶೇಷ ಕಾರಣವಾಗಿರುತ್ತವೆ. (೨) ಮಕ್ಕಳು ಹುಟ್ಟುತ್ತಲೇ ರೋಗಿಗಳೂ, ದುರ್ಬಲರೂ ಆದರೆ ಆ ದೋಷಕ್ಕೆ ತಂದೆತಾಯಿಗಳೇ ಕಾರಣರು. (೩) ಬರಿಯ ದೇಹಾರೋಗ್ಯತೆಯಷ್ಟೇ ಅಲ್ಲ, ಮಕ್ಕಳ ಬುದ್ಧಿಯ ಬೆಳವಣಿಗೆಯ ಕಡಿಗೂ ನಾವು ಲಕ್ಷ್ಯಕೊಡಬೇಕು. (೪) ಮಕ್ಕಳ ಜೀವಿತವು ವಿಶೇಷವಾಗಿ ಅವರ ಬಾಲ್ಯಾವಸ್ಥೆಯನ್ನೇ ಅವಲಂಬಿಸಿರುವದರಿಂದ ಅವರು ಸುಸ್ವಭಾವದವರೂ, ಸಭ್ಯರೂ ಆಗುವಂತೆ ಚಿಕ್ಕಂದಿನಲ್ಲಿಯೆ ಪ್ರಯತ್ನಿಸಬೇಕು.

ಈ ವಿಷಯದಲ್ಲಿ ಬಹುಭಾರವು ಶಾಲಾಶಿಕ್ಷಕ ಶಿಕ್ಷಕಿಯರ ಮೇಲಿರುತ್ತದೆ, ಮಕ್ಕಳ ಆಯುಷ್ಯದ ಬಹು ಮಹತ್ವದ ಭಾಗವು ಶಾಲೆಗಳಲ್ಲಿಯೇ ಹೋಗುವದ ರಿಂದ ಶಾಲಾ ಶಿಕ್ಷಕ ಶಿಕ್ಷಕಿಯರು ರಾಷ್ಟ್ರೋನ್ನತಿಗೆ ಬಹುಮಟ್ಟಿಗೆ ಕಾರಣ ರಾದ ಈ ಆರೋಗ್ಯವಿಭಾಗದ ಕರ್ತವ್ಯವನ್ನು ದಕ್ಷತೆಯಿಂದ ಕೊನೆಗಾಣಿಸಿ, ನಾಡಿನ ಉನ್ನತಿಗೆ ಕಾರಣರಾಗಬೇಕೆಂದು ಪ್ರಾರ್ಥನೆ.

ಬೇರೀಜು ವಜಾಬಾಕಿಯ ಕೋಷ್ಟಕಗಳು

ಪ್ರಾಥಮಿಕ ಶಾಲೆಗಳಲ್ಲಿ—ಮೇಲಿನ ಇಯತ್ತೆಗಳಲ್ಲಿ ಸಹ—ಹುಡುಗರು ಕೈಬೆರಳುಗಳ ಮೇಲೆ ಎಣಿಸಿಕೊಂಡು ಬೇರೀಜು ವಜಾಬಾಕಿಗಳನ್ನು ಮಾಡುತ್ತಿರುವುದನ್ನು ನೋಡುವುದು ಅಪರೂಪವಲ್ಲ. ಇದಕ್ಕೆ ಕಾರಣವು ಮಕ್ಕಳು ಮಗ್ಗಿಗಳನ್ನು ಕಲಿಯುವ ಮೆಟ್ಟಿಗೆ ಬರುವದರೊಳಗಾಗಿ ಒಂಟಿ ಅಂಕಿಗಳ—ಕೈಲಿ ಬರುವ ಹಾಗು ಬಾರದ—ಬೇರೀಜಿನ ಸಂಗತಿಗಳನ್ನು ಮನದಟ್ಟುಮಾಡಿಕೊಳ್ಳದಿರುವುದೇ ಎಂದು ಹೇಳಬಹುದು. 'ಏಳು ಎಂಟಲೆ ಐವತ್ತಾರು' ಎಂದು ತಟ್ಟನೆ ಹೇಳುವ ಹುಡುಗರು 'ಏಳೂ ಎಂಟೂ ಎಷ್ಟು' ಎಂದು ಕೇಳಿದರೆ ಗುಣಿಗುಣಿ ಮಾಡಹತ್ತುವರು. ಹೀಗಿರುವದು ಹುಡುಗನ ಸ್ವಾಭಾವಿಕ ಮಾನಸಿಕ ಪ್ರಗತಿಯ ಕ್ರಮಕ್ಕೆ ವಿರುದ್ಧವಾದದ್ದು; ಏಕೆಂದರೆ ೭ × ೮ = ೫೬ ಎಂಬ ಮಾತಿನ ಅರ್ಥವನ್ನು ಗ್ರಹಿಸುವದು ೭ + ೮ = ೧೫ ಎಂಬ ಮಾತನ್ನು ತಿಳುಕೊಳ್ಳುವದಕ್ಕಿಂತ ಹೆಚ್ಚು ಕಠಿಣವಾಗಿದೆ ಎಂಬದು ನಿರ್ವಿವಾದವಾದದ್ದು.

ಇದಕ್ಕಾಗಿ ಮಗ್ಗಿಗಳನ್ನು ಕಲಿಸುವುದಕ್ಕೆ ಕೆಳಗೆ ಸೂಚಿಸಿದಂತೆ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಉದಾ:— ೩ ರ ಮಗ್ಗಿಯನ್ನು ಕಲಿಸುವುದಿದೆ ಎಂದು ತಿಳಿಯೋಣ.

೧ನೆಯ ಮೆಟ್ಟು— ೩ ರ ಬೇರೀಜಿನ ರೂಢಿಯನ್ನು ಹೀಗೆ ಮಾಡಿಸಬೇಕು.

೦	೦೦	೦೦ ೦೦	೧ + ೩ = ೪
೦೦	೦೦	೦೦ ೦೦	೨ + ೩ = ೫
೦೦	೦೦	೦೦೦ ೦೦೦	೩ + ೩ = ೬
೦೦	೦೦	೦೦೦ ೦೦೦	೪ + ೩ = ೭

ಇತ್ಯಾದಿ.

ಪ್ರತಿಸಲ ಒಂದೊಂದು ಕಾಳನ್ನು ಇದ್ದ ಕಾಳುಗಳಿಗೆ ಸೇರಿಸುತ್ತ ಹೋದಂತೆ ಉತ್ತರವು ಒಂದೊಂದು ಹೆಚ್ಚು ಬರುವದು ಎಂಬ ಮಾತನ್ನು ಹುಡುಗರು ಬೀಜ, ಹುಣಸೇಕಾಳು, ಕಡ್ಡಿ ಮುಂತಾದವುಗಳನ್ನು ಮೇಲೆ ತೋರಿಸಿದಂತೆ ಇಟ್ಟು ಮನಗಾಣಬೇಕು.

೨ನೆಯ ಮೆಟ್ಟಿ— ಮೂರು ಮೂರರಂತೆ ಕೂಡಿಸುವ ರೂಢಿ.

ಮೇಲಿನ ಅಭ್ಯಾಸಗಳನ್ನು ಸಾಕಷ್ಟು ಮಾಡಿಸುವದರಿಂದ ಹುಡುಗರಿಗೆ ಕೆಳಗಿನ ಸಂಗತಿಗಳ ರೂಢಿಯು ಚೆನ್ನಾಗಿ ಆಗುವದು.

೧ + ೩ = ೪, ೨ + ೩ = ೫, ೩ + ೩ = ೬, ೪ + ೩ = ೭, ೫ + ೩ = ೮

೬ + ೩ = ೯, ೭ + ೩ = ೧೦, ೮ + ೩ = ೧೧, ೯ + ೩ = ೧೨

ಇದು ರೂಢಿಯಾದ ಮೇಲೆ ೩ + ೩ = ? ೩ + ೩ + ೩ = ? ೩ + ೩ + ೩ + ೩ = ?

ಇಂತಹ ಲೆಕ್ಕಗಳನ್ನು ಮಾಡಹೇಳಬೇಕು.

೩ನೆಯ ಮೆಟ್ಟಿ— ಈಗಿನಂತೆ ಕಾಳುಗಳನ್ನು — ಒಂದು, ಎರಡು, ಮೂರು.....ಗುಂಪಿಗಳಲ್ಲಿ ಇಟ್ಟು—ಮಗ್ಗಿಗಳನ್ನು ಕಲಿತುಕೊಳ್ಳುವದು. ಹೀಗೆ ಮಾಡುವಾಗ ಹುಡುಗರು ಬಿಡಿಬಿಡಿಯಾಗಿ ಕಾಳುಗಳನ್ನು — ಅಥವಾ ಬೆರಳುಗಳನ್ನು — ಎಣಿಸಿಕೊಳ್ಳದಂತೆ ಶಿಕ್ಷಕರು ನೋಡಿಕೊಳ್ಳಬೇಕು.

ಶಾ. ರಾ. ತಟ್ಟಿ,
ಮು. ಅ. ವ. ರಾ. ಅ. ಕೇ. ಧಾರವಾಡ.

ಕೋಟೂರ ಶಾಲೆಯ ಹೊಸ ಕಟ್ಟಡದ ಉದ್ಘಾಟನ ಸಮಾರಂಭವು.

ಲೇಖಕರು :— ಶ್ರೀಮಾನ್ ಎನ್. ಬಿ. ನಾಡಗೀರ, ಅ. ಡಿ. ಎ. ಇನ್‌ಸ್ಪೆಕ್ಟರ ಧಾರವಾಡ.

ಕಳೆದ ಜುಲೈ ತಿಂಗಳ ಹದಿನಾಲ್ಕನೆಯ ತಾರೀಖಿನ ದಿವಸ ಮುಂಜಾನೆ ಶ್ರೀಮತಿ ನಾಗಮ್ಮ ಪಾಟೀಲ ಎಮ್. ಎಲ್. ಎ. ಇವರ ಹಸ್ತದಿಂದ ಕೋಟೂರಲ್ಲಿ (ಧಾರವಾಡ ತಾಲೂಕು) ಕಟ್ಟಿದ ಕನ್ನಡ ಶಾಲೆಯ ಹೊಸ ಕಟ್ಟಡದ ಉದ್ಘಾಟನ ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರಿತು.

ಊರಜನರು ಶಾಲೆಯ ಮುಂಭಾಗದಲ್ಲಿ ಹಂದರವನ್ನು ಹಾಕಿ ತಳಿರು ತೋರಣಗಳಿಂದ ಸಿಂಗರಿಸಿದ್ದರು. ಒಂದೇಸವನೆ ಮಳೆಯು ಸುರಿಯುತ್ತಿದ್ದ ಮೂಲಕ ಹವೆಯು ಬಹಳೇ ಪ್ರತಿಕೂಲವಾಗಿದ್ದರೂ ಕೂಡ ಮೆ। ಎಜ್ಯೂಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ತಾವಡೆಯವರು, ಶ್ರೀಮತಿ ತಾವಡೆಯವರು, ಡಿ. ಎಲ್. ಬಿ. ಪ್ರೆಸಿಡೆಂಟರಾದ ಶ್ರೀಮಾನ್ ವೀರನಗೌಡರು, ಶ್ರೀ. ಜೀ. ಪೀ. ನಾಯಿಕರವರು, ಡಿ. ಎಲ್. ಬಿ. ಎಂಜಿನೀಯರರಾದ ಶ್ರೀ. ಅಡಿಕಿಯವರು, ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಆರ್. ಕೇ. ನಾಯಿಕರವರು, ಮೊದಲಾದ ಮಹನೀಯರು ಈ ಸಮಾರಂಭಕ್ಕೆ ಆಗಮಿಸಿದ್ದರು.

ಊರಜನರೆಲ್ಲರು ತುಂಬ ಉತ್ಸಾಹದಿಂದ ಶಾಲೆಯ ಆಂಗಳದಲ್ಲಿಯೂ ಹೊರಗೂ ನೆರದಿದ್ದರು. ಗರಗ, ನರೇಂದ್ರ ಶಾಲೆಗಳ ಹುಡುಗರು ಈಶಸ್ತವನ ಮತ್ತು ಸ್ವಾಗತ ಪದ್ಯಗಳನ್ನು ಇಂಪಾಗಿ ಹಾಡಿದರು. ಆ ಕಾಲಕ್ಕೆ ಶ್ರೀಮಾನ್ ತಾವಡೆ ಸಾಹೇಬರು ಹಳ್ಳಿಯ ಜನರನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಅಮೋಘವಾದ ಭಾಷಣವನ್ನು ಮಾಡಿದರು. ಮೆ। ಡಿ। ಎ। ಇನ್‌ಸ್ಪೆಕ್ಟರರಾದ ಶ್ರೀಮಾನ್ ಕೊಪ್ಪಳರಾಯರು ಅವರ ಭಾಷಣವನ್ನು ತಿಳಿಗನ್ನಡದಲ್ಲಿ ಅನುವಾದಿಸಿದರು. ಈ ಭಾಷಣದ ಸಾರಾಂಶವು ಕೆಳಗೆಬರೆದಂತೆ ಇರುವದು :—

" ಕೋಟೂರ ಗ್ರಾಮದ ನಿವಾಸಿಗಳೇ, ನಿಮ್ಮ ಊರ ಶಾಲೆಯು ಹುಟ್ಟಿ ೬೨ ವರ್ಷಗಳಾದವೆಂದು ತಿಳಿಯುತ್ತದೆ. ಇಷ್ಟಾದರೂ ನಿಮ್ಮ ಶಾಲೆಗೆ ಒಂದು ಸ್ವತಂತ್ರ ಕಟ್ಟಡವಿದ್ದಿಲ್ಲ. ಈಗ ನಿಮಗೆ ದೊರೆತ ಇಂಥ ಸುಂದರವಾದ ಕಟ್ಟಡವನ್ನೂ ಇದರ ವಿಶಾಲವಾದ ಆಂಗಳವನ್ನೂ ನೋಡಿ ನನಗೆ ಬಹಳ ಆನಂದವಾಗುತ್ತದೆ. ಇದರ ಯೋಗ್ಯ ಉಪಯೋಗಮಾಡಿಕೊಳ್ಳುವದು ಮಾತ್ರ ನಿಮ್ಮನ್ನೇ ಕೂಡಿದೆ. ಶಾಲೆಯಂದರೆ ದೇವರಗುಡಿಯು. ನಿಮ್ಮ ಊರಲ್ಲಿ ಅನೇಕ ದೇವರ ಗುಡಿಗಳಿರಬಹುದು. ಆದರೆ ಅವುಗಳಿಗಿಂತ ಹೆಚ್ಚು ಆಸ್ಥೆಯಿಂದ ಈ ಗುಡಿಯನ್ನು ನೀವು ಕಾಯ್ದುಕೊಳ್ಳಬೇಕು. ಎಲ್ಲ ದೇವರಗುಡಿಗಳಿಗಿಂತಲೂ ಈ ದೇವರ ಗುಡಿಯನ್ನು ಹೆಚ್ಚು ನಿರ್ಮಲವಾಗಿಯೂ ಸರ್ವಾಂಗಸುಂದರವಾಗಿಯೂ ಇಟ್ಟುಕೊಳ್ಳಬೇಕು. ಈ ಗುಡಿಯಲ್ಲಿಯ ದೇವರೆಂದರೆ ಚಿಕ್ಕಮಕ್ಕಳು. ಪ್ರತಿಯೊಬ್ಬ ಮನುಷ್ಯನ ಅಂತಃಕರಣದಲ್ಲಿ ದೇವರ ವಾಸ್ತವ್ಯವಿದೆ. ತಂದೆತಾಯಿಗಳ ಗುಣಗಳೂ ಶಕ್ತಿಗಳೂ ಅವರ ಮಕ್ಕಳಲ್ಲಿ ಬರುವಂತೆ ಈ ಜಗತ್ತಿನ ತಂದೆಯಾದ ದೇವರು ಆತನ ಮಕ್ಕಳಾದ ನಮ್ಮಲ್ಲಿ ತನ್ನಂತೆ ಆಗುವ ಶಕ್ತಿಯನ್ನು ಇಟ್ಟಿದ್ದಾನೆ. ನಮ್ಮ ಹೊಟ್ಟೆಯಿಂದ ಹುಟ್ಟಿದ ಮಕ್ಕಳು ನಮ್ಮಂತೆಯೆ ಆಗುವದನ್ನು ನೀವೆಲ್ಲರೂ

ನೋಡಿದ್ದೀರಿ. ಇದು ಸಹಜವಾಗಿದೆ. ಇದರಂತೆಯೆ ದೇವರ ಹೊಟ್ಟೆಯಿಂದ ಹುಟ್ಟಿದ ನಾವೂ ದೇವರಂತೆ ಏಕೆ ಆಗಬಾರದು? ಯೋಗ್ಯದಿಶೆಯಿಂದ ಪ್ರಯತ್ನ ಮಾಡುತ್ತಹೋದರೆ ಮನುಷ್ಯನು ತನ್ನ ತಂದೆಯಾದ ದೇವರಂತೆಯೆ ಆಗಬಹುದು. ನರನು ನಾರಾಯಣನಾಗಬಹುದು. ಆದುದರಿಂದ ಈ ಚಿಕ್ಕಮಕ್ಕಳ ಶಿಕ್ಷಣದ ಬಗ್ಗೆ ನೀವು ಜಾಗರೂಕರಾಗಿರಬೇಕು. ಪ್ರತಿಯೊಬ್ಬ ತಂದೆಯೂ ತನ್ನ ಮಕ್ಕಳನ್ನು ಈ ಸಾಲೆಯ ಗುಡಿಗೆ ಕಳಿಸಬೇಕು. ನಿಮ್ಮ ಊರ ಜನಸಂಖ್ಯೆಯು ೧೨೦೦ ಇದೆಯಂದು ನಾನು ಕೇಳುತ್ತೇನೆ. ಈ ಸಂಖ್ಯೆಯ ಮಾನದಿಂದ ನಿಮ್ಮ ಶಾಲೆಯ ಹುಡುಗರ ಸಂಖ್ಯೆಯು ಬಹಳೇ ಕಡಿಮೆಯಾಗಿದೆ. ನೀವು ನಿಮ್ಮ ಮಕ್ಕಳನ್ನೆಲ್ಲ ಸಾಲೆಗೆ ತಪ್ಪದೆ ಕಳುಹಿಸಿರಿ. ಸ್ವಲ್ಪ ದಿವಸಗಳಲ್ಲಿಯೇ ಈ ಶಾಲೆಯು ಕಟ್ಟಡವನ್ನು ಬೆಳೆಯಿಸಲೇಬೇಕೆಂಬ ಪರಿಸ್ಥಿತಿಯನ್ನುಂಟುಮಾಡಿರಿ. ನಿಮ್ಮೂರ ಶಾಲೆಯು ನಿಮ್ಮೂರಿಗೆ ತಕ್ಕಂತೆ ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದಲೆಂದು ನಾನು ಹಾರೈಸುತ್ತೇನೆ. ”

ಈ ಪ್ರಕಾರ ಭಾಷಣವಾದ ಮೇಲೆ ಶ್ರೀಮಾನ್ ಜೀ. ಪೀ. ನಾಯಿಕರವರು ಶ್ರೀಮತಿ ನಾಗಮ್ಮನವರ ಹಾಗೂ ಸಮಾರಂಭಕ್ಕೆ ಆಗಮಿಸಿದ ಎಲ್ಲ ಜನರ ಆಭಾರವನ್ನಿಸಿದರು. ಗರಗ, ನರೇಂದ್ರ ಶಾಲೆಗಳ ಶಿಕ್ಷಕ ಶಿಕ್ಷಿಕೆಯರು ತಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಆಗಮಿಸಿ ತಮ್ಮ ಗೀತಗಳಿಂದಲೂ, ಸಾಂಘಿಕ ವ್ಯಾಯಾಮ ಪ್ರದರ್ಶನದಿಂದಲೂ ಕಾರ್ಯಕ್ರಮವನ್ನು ಚಿತ್ತಾಕರ್ಷಕವಾಗುವಂತೆ ಮಾಡಿದುದಕ್ಕಾಗಿ ಅವರ ಆಭಾರವನ್ನೂ ಮನ್ನಿಸಿದರು. ಆನಂತರ ಶ್ರೀಮಾನ್ ನೀರನಗೌಡರು ಹಳ್ಳಿಯ ಜನರನ್ನು ಉದ್ದೇಶಿಸಿ ಉದ್ಬೋಧಕವಾದ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಕೊನೆಗೆ, ಬಂದ ಅತಿಥಿಗಳಿಗೆಲ್ಲ ಅಲ್ಪೋಪಹಾರವಾದ ನಂತರ ಅತ್ಯಂತ ಉತ್ಸಾಹದಲ್ಲಿ ಈ ಸಮಾರಂಭವು ಕೊನೆಗಂಡಿತು.

ಸುಏಝ್ ಕಾಲುವೆಯು

ಲೇಖಕ :— ಶ್ರೀ. ರಾ. ಆ. ಶಿಂದೆ ಹೆಡ್‌ಮಾಸ್ತರ, ಹುಬ್ಬಳ್ಳಿ

ಭೂಮಧ್ಯ ಸಮುದ್ರ ಮತ್ತು ಕೆಂಪು ಸಮುದ್ರ ಇವೆರಡೂ ಸಮುದ್ರಗಳನ್ನು ಜೋಡಿಸುವ ಸುಏಝ್ ಕಾಲುವೆಯು ೧೬೯ನೇ ನೊವೆಂಬರ ೧೭೬೯ನೇ ಇಸ್ವಿ ದಿವಸ ಹಡಗಗಳು ಹೋಗಿಬರಲಿಕ್ಕೆ ತೆರೆಯಲ್ಪಟ್ಟಿತೆಂದು ದೊಡ್ಡ ಸಮಾರಂಭ

ದೊಡನೆ ಜಾಹೀರ ಮಾಡಲ್ಪಟ್ಟಿತು. ಆದೇ ದಿವಸ ಒಂದರ ಹಿಂದೆ ಒಂದರಂತೆ ೬೭ ಹಡಗಗಳು ಪೋರ್ಟಸಯ್ಯದ ಬಂದರಿಂದ ಹೊರಟು ಬಹು ಸಮಾರಂಭದೊಡನೆ ಇದರಲ್ಲಿ ಪ್ರವೇಶ ಮಾಡಿದವು. ಮತ್ತು ತಿಮಾಶ ಹಾಗು ಬಿಟರ ಎಂಬ ಎರಡು ಸರೋವರಗಳಲ್ಲಿ ಎರಡು ದಿವಸ ಮುಕ್ಕಾಮು ಮಾಡಿ, ಮೂರನೆಯ ದಿವಸ (೨೦ನೇ ನೊವೆಂಬರ ೧೮೬೯ನೇ ಇಸ್ವಿ ಮುಂಜಾನೆ) ಅವು ಕಾಲುವೆಯನ್ನು ದಾಟಿ ಸುಏಝುಕ್ಕೆ ಬಂದು ಮುಟ್ಟಿದವು.

ಪ್ರಸ್ತುತ ಕಾಲದಲ್ಲಿ ಈ ಸುಏಝು ಕಾಲುವೆಯು ಒಂದು ಪ್ರಚಂಡವಾದ ಶಿಲ್ಪಶಾಸ್ತ್ರ ನಿರ್ಮಿತಿ ಇದ್ದು, ಇದರಿಂದ ಯುರೋಪ ಮತ್ತು ಏಶಿಯಾ ಖಂಡಗಳ ನಡುವಿನ ವ್ಯಾಪಾರದ ಮತ್ತು ಪ್ರವಾಸದಮೇಲೆ ಕ್ರಾಂತಿಕರವಾದ ಪರಿಣಾಮ ವುಂಟಾಗಿದೆ.

ಈ ಕಾಲುವೆಯು ೧೦೧ ಮೈಲು ಉದ್ದ ಇರುವದು. ಇದರಲ್ಲಿ ಸುಮಾರು ೧೪ ಮೈಲಿನ ದಾರಿಯು ಅಂಕಡೊಂಕಾಗಿದ್ದು, ಉಳಿದ ೮೭ ಮೈಲಿನ ಭಾಗವು ವಾಡಿಕೆಯಾದ ಸರಳ ಮಾರ್ಗದಲ್ಲಿರುವದು. ಮೊದಲು ಈ ಕಾಲುವೆಯನ್ನು ತಯಾರಮಾಡಿದಾಗ ಇದು ೨೬ ಮೂಟು ಆಳವಾಗಿತ್ತು; ಮತ್ತು ತಳದಲ್ಲಿ ೭೨ ಘೂಟು ಅಗಲವಾಗಿತ್ತು. ಆ ಮೇಲೆ ಇದರಲ್ಲಿ ಅನೇಕ ಸುಧಾರಣೆಗಳು ಮಾಡಲ್ಪ ಟ್ಟಿವೆ. ಈ ಪ್ರಕಾರ ಕೈಕೊಂಡ ಸುಧಾರಣೆಯ ಕಾರ್ಯಕ್ರಮದಂತೆ ೧೯೨೧ರಲ್ಲಿ ಎಲ್ಲಾ ಕಾಲುವೆಯನ್ನು ೪೨ ಘೂಟು ಆಳವಾಗಿ ಮಾಡಿರುವರು. ಅಂಕಡೊಂಕಾಗಿದ್ದ ಹೊರಳುವ ಸ್ಥಳಗಳಲ್ಲಿಯೂ ಸಹ ಸುಧಾರಣೆಗಳನ್ನು ಮಾಡಿ, ಅವು ದೊಡ್ಡವೂ ಮತ್ತು ಸುಲಭವಾದಂಥವೂ ಮಾಡಲ್ಪಟ್ಟಿವೆ. ೧೯೩೩ ಇಸವಿಯ ಈಚೆಗಿನ ೭-೮ ವರ್ಷಗಳಲ್ಲಿ ಈ ಕಾಲುವೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡಿ ಪೃಷ್ಠ ಭಾಗವು ಎಲ್ಲಿಯೂ ೪೦೦ ಘೂಟಿಗಿಂತ ಕಡಿಮೆ ಅಗಲವಿಲ್ಲದಂತೆ ಮಾಡಿದ್ದಾರೆ. ಕೆಲಕೆಲವು ಕಡೆಗಳಲ್ಲಿ ಅದು ೫೦೦ ಘೂಟು ಅಗಲವಾಗಿದೆ.

ಈ ಕಾಲುವೆಯ ಭೂಮಧ್ಯ ಸಮುದ್ರದ ಮೇಲಿನ ತುದಿಯ ಬಂದರವು ಪೋರ್ಟಸಯ್ಯದ ಇದರಲ್ಲಿಯೂ ತಕ್ಕಷ್ಟು ಸುಧಾರಣೆ ಮಾಡಿದ್ದಾರೆ. ಈ ಕಾಲುವೆಯ ಕೆಲಸವನ್ನು ಪ್ರಾರಂಭ ಮಾಡಿದಾಗ ಮೊದಲು ಕೆಲಸಕ್ಕೆ ಹಚ್ಚಿದ ಸುಮಾರು ೭೫೦೦೦ ಜನರ ದೆಸೆಯಿಂದ ಕುಡಿಯುವ ನೀರಿನ ವ್ಯವಸ್ಥೆಯ ಸಲುವಾಗಿ ನಾಇಲ ನದಿಗೆ ಕಾಲವೆಯನ್ನು ತೆಗೆದು ಅದನ್ನು ಮೊದಲು ತಿಮಾಶ ಬಂದರದ ತನಕ ಒಯ್ದು ಮುಂದೆ ಪೋರ್ಟಸಯ್ಯದದ ತನಕ ನಾಗಿಸಿದರು. ಈ ಕಾಲವೆಯನ್ನು

ನೋಡಿದ್ದೀರಿ. ಇದು ಸಹಜವಾಗಿದೆ. ಇದರಂತೆಯೆ ದೇವರ ಹೊಟ್ಟೆಯಿಂದ ಹುಟ್ಟಿದ ನಾವೂ ದೇವರಂತೆ ಏಕೆ ಆಗಬಾರದು? ಯೋಗ್ಯದಿಶೆಯಿಂದ ಪ್ರಯತ್ನ ಮಾಡುತ್ತಹೋದರೆ ಮನುಷ್ಯನು ತನ್ನ ತಂದೆಯಾದ ದೇವರಂತೆಯೆ ಆಗಬಹುದು. ನರನು ನಾರಾಯಣನಾಗಬಹುದು. ಆದುದರಿಂದ ಈ ಚಿಕ್ಕಮಕ್ಕಳ ಶಿಕ್ಷಣದ ಬಗ್ಗೆ ನೀವು ಜಾಗರೂಕರಾಗಿರಬೇಕು. ಪ್ರತಿಯೊಬ್ಬ ತಂದೆಯೂ ತನ್ನ ಮಕ್ಕಳನ್ನು ಈ ಸಾಲೆಯ ಗುಡಿಗೆ ಕಳಿಸಬೇಕು. ನಿಮ್ಮ ಊರ ಜನಸಂಖ್ಯೆಯು ೧೨೦೦ ಇದೆಯೆಂದು ನಾನು ಕೇಳುತ್ತೇನೆ. ಈ ಸಂಖ್ಯೆಯ ಮಾನದಿಂದ ನಿಮ್ಮ ಶಾಲೆಯ ಹುಡುಗರ ಸಂಖ್ಯೆಯು ಬಹಳೇ ಕಡಿಮೆಯಾಗಿದೆ. ನೀವು ನಿಮ್ಮ ಮಕ್ಕಳನ್ನೆಲ್ಲ ಸಾಲೆಗೆ ತಪ್ಪದೆ ಕಳುಹಿಸಿರಿ. ಸ್ವಲ್ಪ ದಿವಸಗಳಲ್ಲಿಯೇ ಈ ಶಾಲೆಯ ಕಟ್ಟಡವನ್ನು ಬೆಳೆಯಿಸಲೇಬೇಕೆಂಬ ಪರಿಸ್ಥಿತಿಯನ್ನುಂಟುಮಾಡಿರಿ. ನಿಮ್ಮೂರ ಶಾಲೆಯು ನಿಮ್ಮೂರಿಗೆ ತಕ್ಕಂತೆ ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದಲೆಂದು ನಾನು ಹಾರೈಸುತ್ತೇನೆ."

ಈ ಪ್ರಕಾರ ಭಾಷಣವಾದ ಮೇಲೆ ಶ್ರೀಮಾನ್ ಜೀ. ಪೀ. ನಾಯಿಕರವರು ಶ್ರೀಮತಿ ನಾಗಮ್ಮನವರ ಹಾಗೂ ಸಮಾರಂಭಕ್ಕೆ ಆಗಮಿಸಿದ ಎಲ್ಲ ಜನರ ಆಭಾರವನ್ನಿಸಿದರು. ಗರಗ, ನರೇಂದ್ರ ಶಾಲೆಗಳ ಶಿಕ್ಷಕ ಶಿಕ್ಷಿಕೆಯರು ತಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಆಗಮಿಸಿ ತಮ್ಮ ಗೀತಗಳಿಂದಲೂ, ಸಾಂಘಿಕ ವ್ಯಾಯಾಮ ಪ್ರದರ್ಶನದಿಂದಲೂ ಕಾರ್ಯಕ್ರಮವನ್ನು ಚಿತ್ತಾಕರ್ಷಕವಾಗುವಂತೆ ಮಾಡಿದುದಕ್ಕಾಗಿ ಅವರ ಆಭಾರವನ್ನೂ ಮನ್ನಿಸಿದರು. ಆನಂತರ ಶ್ರೀಮಾನ್ ವೀರನಗೌಡರು ಹಳ್ಳಿಯ ಜನರನ್ನು ಉದ್ದೇಶಿಸಿ ಉದ್ಬೋಧಕವಾದ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಕೊನೆಗೆ, ಬಂದ ಅತಿಥಿಗಳಿಗೆಲ್ಲ ಅಲ್ಪೋಪಹಾರವಾದ ನಂತರ ಅತ್ಯಂತ ಉತ್ಸಾಹದಲ್ಲಿ ಈ ಸಮಾರಂಭವು ಕೊನೆಗಂಡಿತು.

ಸುವಿಧ್ಯ ಕಾಲುವೆಯು

ಲೇಖಕ :— ಶ್ರೀ. ರಾ. ಅ. ಶಿಂದೆ ಹೆಡ್‌ಮಾಸ್ತರ, ಹುಬ್ಬಳ್ಳಿ

ಭೂಮಧ್ಯ ಸಮುದ್ರ ಮತ್ತು ಕೆಂಪು ಸಮುದ್ರ ಇವೆರಡೂ ಸಮುದ್ರಗಳನ್ನು ಜೋಡಿಸುವ ಸುವಿಧ್ಯ ಕಾಲುವೆಯು ೧೭೯೯ ನೆ ನೊವೆಂಬರ ೧೭ನೇ ಇಸ್ವಿ ದಿವಸ ಹಡಗಗಳು ಹೋಗಿಬರಲಿಕ್ಕೆ ತೆರೆಯಲ್ಪಟ್ಟಿತೆಂದು ದೊಡ್ಡ ಸಮಾರಂಭ

ದೊಡನೆ ಜಾಹೀರ ಮಾಡಲ್ಪಟ್ಟಿತು. ಅದೇ ದಿವಸ ಒಂದರ ಹಿಂದೆ ಒಂದರಂತೆ ೬೭ ಹಡಗಗಳು ಪೋರ್ಟಸಯ್ಯದ ಬಂದರಿಂದ ಹೊರಟು ಬಹು ಸಮಾರಂಭದೊಡನೆ ಇದರಲ್ಲಿ ಪ್ರವೇಶ ಮಾಡಿದವು. ಮತ್ತು ತಿಮಾಶ ಹಾಗು ಬಿಟರ ಎಂಬ ಎರಡು ಸರೋವರಗಳಲ್ಲಿ ಎರಡು ದಿವಸ ಮುಕ್ಕಾಮು ಮಾಡಿ, ಮೂರನೆಯ ದಿವಸ (೨೦ನೇ ನೊವೆಂಬರ ೧೮೬೯ನೇ ಇಸ್ವಿ ಮುಂಜಾನೆ) ಅವು ಕಾಲುವೆಯನ್ನು ದಾಟಿ ಸುಏಝುಕ್ಕೆ ಬಂದು ಮುಟ್ಟಿದವು.

ಪ್ರಸ್ತುತ ಕಾಲದಲ್ಲಿ ಈ ಸುಏಝು ಕಾಲುವೆಯು ಒಂದು ಪ್ರಚಂಡವಾದ ಶಿಲ್ಪಶಾಸ್ತ್ರ ನಿರ್ಮಿತಿ ಇದ್ದು, ಇದರಿಂದ ಯುರೋಪ ಮತ್ತು ಏಶಿಯಾ ಖಂಡಗಳ ನಡುವಿನ ವ್ಯಾಪಾರದ ಮತ್ತು ಪ್ರವಾಸದಮೇಲೆ ಕ್ರಾಂತಿಕರವಾದ ಪರಿಣಾಮ ವುಂಟಾಗಿದೆ.

ಈ ಕಾಲುವೆಯು ೧೦೧ ಮೈಲು ಉದ್ದ ಇರುವದು. ಇದರಲ್ಲಿ ಸುಮಾರು ೧೪ ಮೈಲಿನ ದಾರಿಯು ಅಂಕಡೊಂಕಾಗಿದ್ದು, ಉಳಿದ ೮೭ ಮೈಲಿನ ಭಾಗವು ವಾಡಿಕೆಯಾದ ಸರಳ ಮಾರ್ಗದಲ್ಲಿರುವದು. ಮೊದಲು ಈ ಕಾಲುವೆಯನ್ನು ತಯಾರಮಾಡಿದಾಗ ಇದು ೨೬ ಮೊಟು ಆಳವಾಗಿತ್ತು; ಮತ್ತು ತಳದಲ್ಲಿ ೭೨ ಫೂಟು ಅಗಲವಾಗಿತ್ತು. ಆ ಮೇಲೆ ಇದರಲ್ಲಿ ಅನೇಕ ಸುಧಾರಣೆಗಳು ಮಾಡಲ್ಪಟ್ಟಿವೆ. ಈ ಪ್ರಕಾರ ಕೈಕೊಂಡ ಸುಧಾರಣೆಯ ಕಾರ್ಯಕ್ರಮದಂತೆ ೧೯೨೧ರಲ್ಲಿ ಎಲ್ಲಾ ಕಾಲುವೆಯನ್ನು ೪೨ ಫೂಟು ಆಳವಾಗಿ ಮಾಡಿರುವರು. ಅಂಕಡೊಂಕಾಗಿದ್ದ ಹೊರಳುವ ಸ್ಥಳಗಳಲ್ಲಿಯೂ ಸಹ ಸುಧಾರಣೆಗಳನ್ನು ಮಾಡಿ, ಅವು ದೊಡ್ಡವೂ ಮತ್ತು ಸುಲಭವಾದಂಥವೂ ಮಾಡಲ್ಪಟ್ಟಿವೆ. ೧೯೩೩ ಇಸವಿಯ ಈಚಿಗಿನ ೭-೮ ವರ್ಷಗಳಲ್ಲಿ ಈ ಕಾಲುವೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡಿ ಪೃಷ್ಠ ಭಾಗವು ಎಲ್ಲಿಯೂ ೪೦೦ ಫೂಟಿಗಿಂತ ಕಡಿಮೆ ಆಗಲವಿಲ್ಲದಂತೆ ಮಾಡಿದ್ದಾರೆ. ಕೆಲಕೆಲವು ಕಡೆಗಳಲ್ಲಿ ಅದು ೫೦೦ ಫೂಟು ಅಗಲವಾಗಿದೆ.

ಈ ಕಾಲುವೆಯ ಭೂಮಧ್ಯ ಸಮುದ್ರದ ಮೇಲಿನ ತುದಿಯ ಬಂದರವು ಪೋರ್ಟಸಯ್ಯದ ಇದರಲ್ಲಿಯೂ ತಕ್ಕಷ್ಟು ಸುಧಾರಣೆ ಮಾಡಿದ್ದಾರೆ. ಈ ಕಾಲುವೆಯ ಕೆಲಸವನ್ನು ಪ್ರಾರಂಭ ಮಾಡಿದಾಗ ಮೊದಲು ಕೆಲಸಕ್ಕೆ ಹಚ್ಚಿದ ಸುಮಾರು ೭೫೦೦೦ ಜನರ ದೆಸೆಯಿಂದ ಕುಡಿಯುವ ನೀರಿನ ವ್ಯವಸ್ಥೆಯ ಸಲುವಾಗಿ ನಾಇಲ ನದಿಗೆ ಕಾಲವೆಯನ್ನು ತೆಗೆದು ಅದನ್ನು ಮೊದಲು ತಿಮಾಶ ಬಂದರದ ತನಕ ಒಯ್ದು ಮುಂದೆ ಪೋರ್ಟಸಯ್ಯದದ ತನಕ ಸಾಗಿಸಿದರು. ಈ ಕಾಲವೆಯನ್ನು

ಆಗೆಯುವ ಕೆಲಸವು ೧೮೫೯ ಎಪ್ರಿಲ್ ತಿಂಗಳಲ್ಲಿ ಸುರುವಾಗಿ ೧೦ ವರ್ಷದ ಮೇಲೆ ಅಂದರೆ ೧೮೬೯ರಲ್ಲಿ ಪೂರ್ಣಮಾಡಲ್ಪಟ್ಟಿತು. ಮತ್ತು ಆ ವರ್ಷ ಅದರಲ್ಲಿ ಹಡಗಗಳು ಹಾದಾಡಹತ್ತಿದವು. ೧೮೬೯ರಲ್ಲಿ ಭೂಮಧ್ಯ ಸಮುದ್ರದ ನೀರು ತಿಮಾಶ ಸರೋವರಕ್ಕೆ ಕೂಡಿ ಅಲ್ಲಿಂದ ಸುವಯ್ಸುದ ಕಡೆಯ ಭಾಗವು ಮುಂದಿನ ೭ ವರ್ಷ ಗಳಲ್ಲಿ ಪೂರ್ಣ ಮಾಡಲ್ಪಟ್ಟಿತು.

೫೦೦ ಟನ್ನಿಗಿಂತ ಹೆಚ್ಚು ಭಾರವಾದ ಹಡಗಗಳು ಈ ಕಾಲುವೆಯೊಳಗಿಂದ ಹೋಗುವಾಗ ಸುವಯ್ಸು ಕ್ಯಾನಲ್ ಕಂಪನಿಯಿಂದ ನಿಯಮಿಸಲ್ಪಟ್ಟ ಹಡಗುಗಳಿಗೆ ಹಾದಿಯನ್ನು ತೋರಿಸುವ ಅಧಿಕಾರಿಯ ಸೂಚನೆಯ ಪ್ರಕಾರ ಪ್ರವಾಸ ಮಾಡ ಬೇಕಾಗುತ್ತದೆ. ಈ ಖಾತೆಯ ಮುಖ್ಯ ಕಚೇರಿಯು ಇಸ್ಮೈಲಿಯಾದಲ್ಲಿ ಇರುವದು ಸಣ್ಣದಾಗಿದ್ದರೂ ತುಂಬ ಸುಂದರವಾಗಿದ್ದ ಇಸ್ಮೈಲಿಯಾ ಶಹರವು ಯುರೋಪಕ್ಕೆ ಹೋಗುವಾಗ ಕಾಲುವೆಯ ಎಡಭಾಗದಲ್ಲಿ ಸುಮಾರು ಅರ್ಧಕಾಲುವೆಯನ್ನು ದಾಟಿದಬಳಿಕ ಹತ್ತುತ್ತದೆ. ಆದಾದರೂ ಪೋರ್ಟ ಸಯ್ಯದದಂತೆ ಹೊಸದಾಗಿ ಕಟ್ಟಿದ ಶಹರವು. ಈ ಕಾಲುವೆಯ ಪ್ರವೇಶದ್ವಾರದ ಬಳಿಯಲ್ಲಿ ಈ ಕಾಲವೆಯ ಕಲ್ಪನೆಯನ್ನು ಹುಡುಕಿ ತೆಗೆದು, ನಿದರ್ಶನಕ್ಕೆ ತಂದು, ಪ್ರತ್ಯಕ್ಷ ಕೃತಿಯಲ್ಲಿ ತಂದು, ಜನರಿಗೆ ಲಾಭವನ್ನು ಮಾಡಿಕೊಟ್ಟ ಪ್ರಖ್ಯಾತ ಫ್ರೆಂಚ ಶಿಲ್ಪಕಾರನಾದ ಫರ್ಡಿನಂದ ದಿ. ಲೆಸೆಪ್ಸನ ೨೨೪ ಫೂಟು ಎತ್ತರವಾದ ಭವ್ಯ ಮೂರ್ತಿಯನ್ನು ೩೨೪ ಫೂಟು ಎತ್ತರವಾದ ಕಲ್ಲಿನ ಕಟ್ಟೆಯಮೇಲೆ ನಿಲ್ಲಿಸಿದ್ದಾರೆ. ಇದರ ಬಲಭಾಗಕ್ಕೆ ಕಾಲುವೆಯ ಪ್ರವೇಶದ್ವಾರವಿರುವದು. ಈ ಕಂಪನಿಯಲ್ಲಿ ಒಟ್ಟಿಗೆ ೧೨೦ ಜನ ಹಾದಿ ತೋರಿಸುವ ಅಧಿಕಾರಿಗಳಿದ್ದಾರೆ. ಅವರ ಪೈಕಿ ೪೫ ಜನರು ಪೋರ್ಟಸಯ್ಯದದಲ್ಲಿ, ೪೫ ಜನರು ಇಸ್ಮೇಲಿಯಾದಲ್ಲಿ ಮತ್ತು ೩೦ ಜನರು ಸುವಯ್ಸುದಲ್ಲಿ ಇದ್ದಾರೆ. ಯಾವದಾದರೊಂದು ಹಡಗವು ದಾರಿಯಲ್ಲಿ ಎಲ್ಲಾದರೂ ಹುಗಿದುನಿಂತರೆ ಅದನ್ನು ಎಳೆದು ಹಾದಿಗೆ ತರುವದರ ಸಲುವಾಗಿ ೩೦೦೦ ಟನ್ನಿನ ೩ ದೊಡ್ಡ ಹಡಗುಗಳನ್ನು ಟಗ್ಗ ಕಂಪನಿಯವರು ಇಲ್ಲಿ ಇಟ್ಟಿದ್ದಾರೆ. ಕಾಲುವೆಯು ಇಜಿಪ್ತದ ಹದ್ದಿನೊಳ ಗಿದ್ದು ಕ್ಯಾನಾಲ ಕಂಪನಿಯನ್ನೂ ಇಜಿಪ್ತದಲ್ಲಿಯೇ ರಜಿಸ್ಟರ ಮಾಡಲಾಗಿದೆ. ಕಂಪನಿಯ ಬೋರ್ಡಿನಲ್ಲಿ ಇಬ್ಬರು ಇಜಿಪ್ಶಿಯನ್ ಡಾಯರೇಕ್ಟರರಿದ್ದಾರೆ. ಮತ್ತು ಇಜಿಪ್ಶಿಯನ್ ಸರಕಾರದ ಒಬ್ಬ ಕಮಿಶನರನು ಈ ಕೆಲಸದ ಮೇಲ್ವಿಚಾರಣೆ ನೋಡುತ್ತಾನೆ. ಇಜಿಪ್ತದ ಸರಕಾರವು ಕೊಟ್ಟ ಕಾಲುವೆಯ ಸಂಬಂಧದ ಕನ್ಸೆಶನದ ಅವಧಿಯು ೧೯೬೮ರಲ್ಲಿ ಮುಗಿಯುತ್ತಿದ್ದು, ಎರಡನೇ ವ್ಯವಸ್ಥೆ ಯಾವದೂ ಆಗದಿದ್ದರೆ ಆಗ ಕಾಲುವೆಯ ಸರ್ವಾಧಿಕಾರವು ಇಜಿಪ್ತದವರ ಕಡಿಗೇ ಹೋಗುವದು.

ವ್ಯಾಪಾರ ಉದ್ಯೋಗಗಳು

೧೮೭೦ ನೆಯ ಇಸ್ವಿಯಲ್ಲಿ ಈ ಕಾಲವೆಯೊಳಗಿಂದ ಒಟ್ಟಿಗೆ ೪೩೬೮೦೯ ಟನ್ ಸಾಮಾನುಗಳೂ ೬೬೩೫ ಜನರೂ ಹೋದರು. ಹೋಗಿಬರುವ ಹಡಗಗಳ ಸಂಖ್ಯೆ ೪೮೬ ಇತ್ತು. ೧೯೨೦ರಲ್ಲಿ ಈ ಅಂಕಿಗಳು ಅನುಕ್ರಮವಾಗಿ ೧೭೫೭೪೪೬೬೭ ಟನ್ ಸರಕು ೫೦೦೧೪೭ ಪ್ರವಾಸಮಾಡುವವರು, ಮತ್ತು ೪೦೦೯ ಹಡಗಗಳು ಇದ್ದವು; ಮತ್ತು ೧೯೩೮ ರಲ್ಲಿ ಇವೇ ಅಂಕಿಗಳು ೩೪೪೧೧೮೮೭ ಟನ್ ಸರಕು ೪೭೯೦೦೨ ಪ್ರಯಾಣಿಕರು, ಮತ್ತು ೭೧೭೧ ಹಡಗಗಳಿದ್ದವು. ಈ ಕಾಲುವೆಯೊಳಗಿಂದ ದೊಡ್ಡದರಲ್ಲಿ ದೊಡ್ಡದು ಅಂದರೆ ೪೫೦೦೦ ಟನ್ನಿನ ಹಡಗವು "ಎಂಪ್ರೆಸ್ ಆಫ್ ಬ್ರಿಟನ್" ಇದೂ ಹೋಗಿದೆ. ನಾರ್ಮಂಡಿ, ಕ್ವೀನಮೇರಿ, ಕ್ವೀನ ಎಲಿಜಾಬೇಥ ಮುಂತಾದ ದೊಡ್ಡ ದೊಡ್ಡ ೮೦,೦೦೦ ಟನ್ನಿನ ಹಡಗಗಳು ಮಾತ್ರ ಈ ಕಾಲುವೆಯೊಳಗಿಂದ ಹೋಗಲಾರವು. ಕಾಲುವೆಯನ್ನು ದಾಟಲಿಕ್ಕೆ ಹಡಗಗಳಿಗೆ ೧೮೭೭ರಲ್ಲಿ ೧೭ ತಾಸು ಹಿಡಿಯುತ್ತಿತ್ತು ಈಗ ೧೧, ೧೧½ ತಾಸು ಹಿಡಿಯುತ್ತವೆ. ೧೮೭೭ರ ವರೆಗೆ ಹಡಗಗಳನ್ನು ಹಗಲು ವೇಳೆಯಲ್ಲಿ ಮಾತ್ರ ಹೋಗಗೊಡುತ್ತಿದ್ದರು. ೧೯೩೫ ರಲ್ಲಿ ಪೆಟ್ರೊಲಿಯಮುದಂಥ ಜ್ವಾಲಾಗ್ರಾಹಿ ಪದಾರ್ಥಗಳನ್ನು ಒಯ್ಯುವ ಹಡಗುಗಳಿಗೆಮಾತ್ರ ಕಾಲುವೆಯು ರಾತ್ರಿಯ ವೇಳೆಯಲ್ಲಿ ಬಂದ ಇರುತ್ತದೆ. ಈಗ ಎಲ್ಲಾ ಹಡಗಗಳು ಹಗಲಿರಳು ನಡೆಯುತ್ತವೆ. ಆದರೆ ರಾತ್ರಿಯಹೊತ್ತಿನಲ್ಲಿ ಪ್ರವಾಸ ಮಾಡುವಾಗ ಹಡಗದೊಳಗೆ ಸರ್ಚಲಾಯಿಟ ಹಚ್ಚಬೇಕಾಗುವದು. ಉತ್ತರಕ್ಕೆ ಭೂಮಧ್ಯಸಮುದ್ರದ ತುದಿಗೆ ಪೋರ್ಟಸಯ್ಯದ ಮತ್ತು ಪೊರ್ಟಫೊರ ಇವೆರಡು ಮತ್ತು ದಕ್ಷಿಣಕ್ಕೆ ಕೆಂಪುಸಮುದ್ರದ ತುದಿಗೆ ಪೋರ್ಟಸುಏಝ್ ಮತ್ತು ಪೋರ್ಟ-ತೆನ್ಫಿಕ್ ಇವೆರಡು ಕೂಡಿ ನಾಲ್ಕು ಮತ್ತು ಕಾಲವೆಯಲ್ಲಿ ಅರ್ಧಾಹಾದಿಯಮೇಲೆ ಇಸ್ಮಾಲಿಯಾ ಹೀಗೆ ೫ ಶಹರಗಳು ಅಸ್ತಿತ್ವದಲ್ಲಿದ್ದು ಅವು ಈಗ ಒಳ್ಳೇ ಭರಭರಾಟಿಯಲ್ಲಿ ಇದ್ದದ್ದು ಕಂಡುಬರುತ್ತದೆ. ಇವಲ್ಲದೆ ಪೋರ್ಟಸಯ್ಯದ ಮತ್ತು ಸುಏಝ್ ಇವೆರಡರಲ್ಲಿ ಹಡಗಗಳಿಗೆ ಮಾರ್ಗವನ್ನು ತೋರಿಸುವ ೧೧ ಸ್ಟೇಶನಗಳಿದ್ದು ಅಲ್ಲಿಯ ಜನಸಂಖ್ಯೆಯು ದಿನದಿನಕ್ಕೆ ಬೆಳೆಯುತ್ತ ನಡಿದದೆ.

ಸುಏಝ್ ಕೆನಾಲ ಮಾರ್ಗದಿಂದ ಮುಂಬಯಿಯಿಂದ ಲಂಡನದ ಅಂತರವು ಕೇಪಆಫ್ ಗುಡ್‌ಹೋಪದ ಮಾರ್ಗಕ್ಕಿಂತ ೪೦೦೦ ಮೈಲು ಕಡಿಮೆ ಯಾಗುವದು ಈ ಕಾಲುವೆಯಿಂದ ಹಿಂದುಸ್ತಾನ, ಯುರೋಪ ಮತ್ತು ಆಸ್ಟ್ರೇಲಿಯಾ ಈ ದೇಶಗಳ ವ್ಯಾಪಾರಕ್ಕೆ ಹೆಚ್ಚಿನ ಚಾಲನೆಯುಂಟಾಗಿದೆ. ಸುಏಝ್ ಕಾಲುವೆಯ ಮಾರ್ಗದಿಂದ ಆಗುವ ವ್ಯಾಪಾರದಲ್ಲಿ ಈಗಿನ ತನಕ ಬ್ರಿಟನ್ನಿನ ಅನುಕ್ರಮವು ಮೊದಲನೆಯದಾಗಿದೆ.

(ಮಹಾರಾಷ್ಟ್ರ ಚೇಂಬರ ಆಫ್ ಕಾಮರ್ಸಿನವರು ಪ್ರಕಟಿಸಿದ ಮಾಸಿಕದ ಆಧಾರದಿಂದ)

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು

೧೯೪೦

(ಜುಲೈ ೧೯೪೦ ರ ಸಂಚಿಕೆಯಿಂದ ಮುಂದೆ ಸಾಗಿದ್ದು.)

೨೪. ಒಂದು ನಡಿಸಿದ ಕಂಬದ ನೆರಳು ವರ್ಷದ ಯಾವ ತಿಂಗಳಲ್ಲಿ ಹಗಲು ೧೨ ಗಂಟೆಗೆ ತೀರ ಚಿಕ್ಕದು ಆಗುವದು ? .....

೨೫. ಯಾವದಾದರೊಂದು ಆಧಾರಕ್ಕೆ ಸುತ್ತಿಕೊಂಡು ಮೇಲಕ್ಕೆ ಹಬ್ಬುವ ಬಳ್ಳಿಯ ಹೆಸರನ್ನೂ ಮತ್ತು ಸುತ್ತುಗಳ (ಹಗ್ಗಗಳ) ಸಹಾಯದಿಂದ ಏರುವ ಬಳ್ಳಿಯ ಹೆಸರನ್ನೂ ಕೊಡಿರಿ. .....

೨೬. ಹೂವಿನ ಬೇರೆ ಬೇರೆ ಭಾಗಗಳ ಹೆಸರುಗಳನ್ನು ಹೇಳಿರಿ:—

೨೭. ಹೂವಿನ ಯಾವ ಭಾಗವು ಮುಂದೆ ಹಣ್ಣಾಗಿ ಪರಿಣಮಿಸುವದು ?

೨೮. ಹೂವುಗಳ ಹತ್ತರ ಹಾರಿಬರುವ ಮೂರು ಜಾತಿಯ ಕೀಟಕಗಳನ್ನು ಬರೆಯಿರಿ. .....

೨೯. ಸಸಿಗೆ ಬೇರಿನ ಉಪಯೋಗವೇನು ? .....

೩೦. ಮಳೆಗಾಲದಲ್ಲಿ ಪ್ರತಿವರ್ಷ ಹೊಸದಾಗಿ ಹಚ್ಚಬೇಕಾಗುವ ಮೂರು ಹೂವಿನ ಗಿಡಗಳ ಹೆಸರುಗಳನ್ನು ಹೇಳಿರಿ. .....

೩೧. ಗುಲಾಬಿ ಗಿಡಗಳು ಬೀಜದಿಂದ ಹುಟ್ಟುವದಿಲ್ಲ. ಆದರೆ ಹೊಸ ಗುಲಾಬಿ ಗಿಡಗಳನ್ನು ಹೇಗೆ ಹಚ್ಚುವರು ? .....

೩೨. ಸಂಯುಕ್ತ ಎಲೆಗಳುಳ್ಳ ಮೂರು ಸಸಿಗಳ ಹೆಸರುಗಳನ್ನು ಕೊಡಿರಿ.

೩೩. ಹಳದಿ ಹೂವುಗಳನ್ನು ಬಿಡುವ ನಿಮಗೆ ಗೊತ್ತಿದ್ದ ಮೂರು ಗಿಡಗಳ ಹೆಸರುಗಳನ್ನು ಹೇಳಿರಿ. .....

೩೪. ರಾತ್ರಿಯಲ್ಲಿ ಉತ್ತರ ದಿಕ್ಕನ್ನು ಗೊತ್ತುಪಡಿಸುವ ನಕ್ಷತ್ರ ಅಥವಾ ನಕ್ಷತ್ರಗಳ ಗುಂಪು ಯಾವದು ? .....

೩೫. ಕಬ್ಬಿಣ ಸಾಮಾನುಗಳಿಗೆ ಜಂಗುಹತ್ತದಂತೆ ನೀವು ಯಾವ ಉಪಾಯವನ್ನು ಮಾಡುವಿರಿ ? .....

೩೬. ಬೆಳ್ಳು ನಡಿಯುವಾಗ ಅಥವಾ ಓಡುವಾಗ ಸಪ್ಪಳವಾಗುವದೋ ?

೩೭. ಆಕಳದ ಮೇಲ್ದವಡೆಯಲ್ಲಿ ಹಲ್ಲುಗಳಿರುವವೋ ? .....

೩೮. ಆಕಳಿಗೆ ಬಾಲದ ಉಪಯೋಗವೇನು ? .....

೩೯. ಏನೂ ಕಾಣದಷ್ಟು ಕತ್ತಲಿದ್ದಾಗ ಬೆಕ್ಕುಗಳು ತಮ್ಮ ಹಾದಿಯನ್ನು ಹೇಗೆ ಕಂಡುಕೊಳ್ಳುವವು? .....

೪೦. ನಾಯಿಯು ಸಿಟ್ಟಾಗಿದೆಯೆಂದು ಹೇಗೆ ತೋರಿಸುವದು ?.....

೪೧. ನಾಯಿಯು ಬೇಟೆಯನ್ನು ಹೇಗೆ ಹಿಡಿಯುವದು ? .....

೪೨. ಬೆಕ್ಕು ಬೇಟೆಯನ್ನು ಹೇಗೆ ಹಿಡಿಯುವದು ? .....

೪೩. ಕೋಳಿಗಳು ಯಾವಾಗಲೂ ತಮ್ಮ ಕಾಲುಬೆರಳುಗಳಿಂದ ಕೆದರುವದರಲ್ಲಿಯೇ ಮೇಳೆ ಕಳೆಯುವವು ಏಕೆ ? .....

೪೪. ಮೂರು ಹಿಂಸ್ರ (ಪ್ರಾಣಿಗಳನ್ನು ಹಿಡಿದು ಕೊಲ್ಲುವ) ಪಕ್ಷಿಗಳ ಹೆಸರುಗಳನ್ನು ಹೇಳಿರಿ. .....

೪೫. ನೆಲದ ಮೇಲೆ ಮಳೆಹುಳಗಳು ಹರಿದಾಡುವ ಕಾಲವು ಯಾವುದು ?

೪೬. ಒಂದು ದಿನ ನಸುಕಿನಲ್ಲಿ ಕಾಮನಬಿಲ್ಲು ಕಂಡಿತು. ಆಕಾಶದ ಯಾವ ಭಾಗದಲ್ಲಿ ಅದು ಕಂಡಿತು ? .....

೪೭. ಮೆಲಕಾಡಿಸುವ ಮೂರು ಪ್ರಾಣಿಗಳ ಹೆಸರುಗಳನ್ನು ಹೇಳಿರಿ...

೪೮. ನಿಮ್ಮ ಜಿಲ್ಲೆಯಲ್ಲಿ ಬೆಳೆಯುವ ಮುಖ್ಯ ಬೆಳೆಯ ಸುಗ್ಗಿಯ ಕಾಲವು ಯಾವದು ? .....

೪೯. ಅಂಕುರಿಸುವಾಗ ಬೀಜಪತ್ರಗಳು ನೆಲದಲ್ಲಿಯೇ ಉಳಿಯುವ ಬೀಜವು ಯಾವದು ? ಮತ್ತು ಬೀಜಪತ್ರಗಳು ನೆಲದಲ್ಲಿ ಉಳಿಯದೆ ಮೇಲೆ ಕಾಣುವಂತೆ ಅಂಕುರಿಸುವ ಬೀಜವು ಯಾವದು ? .....

೫೦. ಈಸುವ ಎರಡು ಪಕ್ಷಿಗಳ ಹೆಸರುಗಳನ್ನು ಬರೆಯಿರಿ. .....

Department of Public instruction, Bombay

Middle School Scholarship Examination.

1940

ದಕ್ಷಿಣ ಭಾಗ

ಮೌನ ವಾಚನ

KANNADA—PAPER I (Passage)

ಶುಕ್ರವಾರ, ತಾರೀಖು ೯ನೆಯ ಫೆಬ್ರುವರಿ ಸನ್ ೧೯೪೦ನೆಯ ಇಸವಿ.

ಕನ್ನಡ—೧ನೆಯ ಕಾಗದದ ೧ನೆಯ ಪ್ರಶ್ನೆಯ ಭಾ।

ಸೂಚನೆ:— (ಈ ಕಾಗದವನ್ನು ೪ ನಿಮಿಟು ಓದಿ ತಿರುಗಿ ಕೊಡಿರಿ.)

ಕೆಳಗಿನ ಕಥೆಯನ್ನು ಎಂಟು ನಿಮಿಟು ಓದಿ ಈ ಕಾಗದವನ್ನು ನೀವು ತಿರು ಕೊಡತಕ್ಕದ್ದು:—

ಕನಕದಾಸರ ಬಗ್ಗೆ ಹಲವು ಸೋಜಿಗದ ಸಂಗತಿಗಳಿವೆ. ವ್ಯಾಸರಾಯ ಉಳಿದ ಶಿಷ್ಯರಿಗೆ ಕನಕದಾಸರ ಮೇಲೆ ಹೊಟ್ಟೆಯಕಿಚ್ಚು ಇತ್ತು. ಒಂದು ದಿ ವ್ಯಾಸರಾಯರು ಶ್ರೀಕೃಷ್ಣನನ್ನು ಮನಸ್ಸಿನೊಳಗೇ ಪೂಜೆ ಮಾಡುತ್ತಿರುವಾ ಆ ಮೂರ್ತಿಗೆ ಮುತ್ತಿನ ಹಾರವನ್ನು ಹಾಕುವದು ಬಹಳ ಕಷ್ಟವಾಯಿತಂ ಆಗ ಕನಕದಾಸರು:— "ಪ್ರಭು! ಕಿರೀಟವನ್ನು ತೆಗೆದರೆ ಹಾರವನ್ನು ಹಾಕ ವದು ಸುಲಭ" ಎಂದರಂತೆ. ವ್ಯಾಸರಾಯರು ಅದನ್ನು ಕೇಳಿ ಬಹಳ ಸಂತೋ ಗೊಂಡರು. ಕನಕದಾಸರ ಮೇಲೆ ಅವರ ಪ್ರೀತಿ ಹೆಚ್ಚಾಯಿತು.

ಇದನ್ನು ಕಂಡು ನಿಕ್ಕ ಶಿಷ್ಯರಿಗೆ ಅಸಮಾಧಾನವಾಯಿತು. "ಕೀ ಜಾತಿಯವನಿಗೆ ಇಷ್ಟು ಮಾನವನ್ನು ಕೊಡುವರಲ್ಲ ನಮ್ಮ ಗುರುಗಳು" ಎಂ ಅವರೆಗೆ ಕೋಪ. ಆ ಸುದ್ದಿ ವ್ಯಾಸರಾಯರಿಗೆ ಮುಟ್ಟಿತು. ಅವರೂ ಶಿಷ್ಯರ ಬುದ್ಧಿಯನ್ನು ಕಲಿಸಲಿಕ್ಕೆ ಒಳ್ಳೆಯ ಅವಕಾಶ ಸಿಕ್ಕಿತೆಂದುಕೊಂಡರು. ಒಂದ ದಿನ ಒಂದು ಬಾಳೆಯ ಗೊನೆಯನ್ನು ತರಿಸಿದರು. ಅದನ್ನು ದೇವರಿಗೆ ನೈವೇ ಮಾಡಿ ಎಲ್ಲರನ್ನೂ ಕರೆದು ಒಂದೊಂದು ಹಣ್ಣು ಕೊಟ್ಟು ಇದನ್ನು ಯಾರ ಇಲ್ಲದ ಕಡೆ ತಿಂದು ಬನ್ನಿರೆಂದರು.

ಶಿಷ್ಯರು ಓಡಿದರು. ಬಾಗಿಲಹಿಂದೊಬ್ಬರು, ಚಿಕ್ಕ ಮನೆಯಲ್ಲಿ ಒಬ್ಬರ ಒಂದು ಮೂಲೆಯಲ್ಲಿ ಮತ್ತೊಬ್ಬರು ಹೀಗೆ ಎಲ್ಲರೂ ಗುಳಗುಳಕ್ಕನೆ ನು ಬಂದರು. ಕನಕದಾಸರು ಮಾತ್ರ ಹಣ್ಣನ್ನು ತಿಂದಿರಲಿಲ್ಲ.

ಸಂಜೆಗೆ ಗುರುಗಳು ಮತ್ತೆ ಶಿಷ್ಯರನ್ನೆಲ್ಲ ಬರಮಾಡಿಕೊಂಡು "ಹಣ್ಣನ್ನು ಯಾರೂ ಇಲ್ಲದೆಡೆಯಲ್ಲಿ ತಿಂದಿರಾ?" ಎಂದು ಕೇಳಿದರು. ಎಲ್ಲರೂ ಒಂದೊಂದು ಉತ್ತರವನ್ನು ಹೇಳಿದರು. ಗುರುಗಳೂ ನಗುತ್ತಾ ಕನಕದಾಸರನ್ನೂ ಕೇಳಿದರು. ಅವರು "ಬುದ್ಧೀ ಎಲ್ಲಿ ಹೋದರೂ ದೇವರು ಇದ್ದೇ ಇದ್ದ! ಹಣ್ಣು ತಿನ್ನುವದಕ್ಕೆ ನನಗೆ ಯಾರೂ ಇಲ್ಲದ ಸ್ಥಳವೇ ಸಿಕ್ಕಲಿಲ್ಲ" ಎಂದರು.

ಕನ್ನಡ—ಬರೆಯಲು ಕಾಗದ.

(ಶುಕ್ರವಾರ ತಾ. ೯-೨-೪೦ ವೇಳೆ: ೨ರಿಂದ ೨-೪೫ರ ವರೆಗೆ)

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು)

೧. ನೀವು ಈಗ ಓದಿದ ಕಥೆಯ ಬಗ್ಗೆ ಕೆಳಗಿನ ಪ್ರಶ್ನೆಗಳಿಗೆ ಉತ್ತರ ೨೦ ಬರೆಯಿರಿ:—

(ಅ) ವ್ಯಾಸರಾಯರ ಉಳಿದ ಶಿಷ್ಯರಿಗೆ ಕನಕದಾಸರ ಮೇಲೆ ಹೊಟ್ಟೆಯ ಕಿಚ್ಚು ಏಕೆ?

(ಆ) ವ್ಯಾಸರಾಯರ ಪ್ರೀತಿಯು ಕನಕದಾಸನಲ್ಲಿ ಹೆಚ್ಚಾಗಲಿಕ್ಕೆ ಕಾರಣವೇನಾಯಿತು?

(ಇ) ಕನಕದಾಸರು ಉಳಿದ ಶಿಷ್ಯರಿಗಿಂತ ಹೆಚ್ಚಿನವರೆಂದು ತೋರಿಸಿ ಕೊಡಲಿಕ್ಕೆ ಮಾಡಿದ ಉಪಾಯವು ಯಾವುದು?

(ಈ) ಕನಕದಾಸರು ತಮಗೆ ಕೊಟ್ಟ ಹಣ್ಣುಗಳನ್ನು ಏಕೆ ತಿನ್ನಲಿಲ್ಲ ವೆಂದು ಹೇಳಿದರು?

(ಉ) ಕನಕದಾಸರು ಕೊಟ್ಟ ಉತ್ತರದಿಂದ ನೀವು ಏನನ್ನು ಕಲಿಯುವಿರಿ?

೨. ಕೆಳಗೆ ಕೊಟ್ಟ ವಿಷಯಗಳಲ್ಲಿ ಬೇಕಾದ ಒಂದು ವಿಷಯದ ಬಗ್ಗೆ ೩೦ ೧೦ ಸಾಲುಗಳಷ್ಟು ಬರೆಯಿರಿ:—

(ಅ) ನನ್ನ ಹಬ್ಬದ ಉಡುಪು.

(ಆ) ನನ್ನ ಹುಟ್ಟಿದ ದಿನ.

(ಇ) ಬೆಳದಿಂಗಳ ಊಟ.

(ಈ) ಶಾಲೆ ಇಲ್ಲದಾಗ ನೀವು ಹೊತ್ತನ್ನು ಹೇಗೆ ಕಳೆಯುತ್ತಿರುವಿರಿ?

ಕನ್ನಡ—೨ನೆಯ ಕಾಗದ.

(ತಾ. ೯–೨–೧೯೪೦ ವೇಳೆ : ೪ರಿಂದ ೪-೪೫ರ ವರೆಗೆ)

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು)

೧. ಸೊಬಗಿನ ಹಕ್ಕಿಯೆ ! ಸೊಗಸಿನ ಚುಕ್ಕಿಯೆ ! ೧೪

ಹಾರುವ ಹಕ್ಕಿಯೆ ! ಬಾರೆಲೆ ಹಕ್ಕಿಯೆ !
ಪುಚ್ಚದ ಹಕ್ಕಿಯೆ ! ಬಣ್ಣದ ಹಕ್ಕಿಯೆ !
ಆಡಲು ಬಾರೈ ಹಾಡಲು ಬಾರೈ
ಚಿಂ ಚೀ ಚಿಂ ಚೀ ಚಿಂ ಚೀ ಚಿಂ ಚೀ.
ಸೊಬಗಿನ ಹಕ್ಕಿಯೆ ! ಸೊಗಸಿನ ಚುಕ್ಕಿಯೆ !
ಆಡುವರಿಲ್ಲವು. ಹಾಡುವರಿಲ್ಲವು.
ಆಡುವ ಬಾರೈ ! ಹಾಡುವ ಬಾರೈ !
ಆಡುತ ಹಾಡುತ ನಲಿಯುವ ಬಾರೈ !
ತೈತಕ ತೈತಕ ತೈತಕ ತೈತಕ.
ಸೊಬಗಿನ ಹಕ್ಕಿಯೆ ! ಸೊಗಸಿನ ಚುಕ್ಕಿಯೆ !
ಅಮ್ಮನು ಕೊಟ್ಟಿಹ ಚಕ್ಕುಲಿ ಉಂಟು.
ಅಕ್ಕನು ಕೊಟ್ಟಿಹ ಸಕ್ಕರಿ ಉಂಟು.
ಇಬ್ಬರು ಸೇರುತ ಸವಿಯುವ ಬಾರೈ.
ಚಕ್ಕುಲಿ ಕುಟುಕುಟು ಸಕ್ಕರೆ ಸವಿ ಸವಿ.
ಸೊಬಗಿನ ಹಕ್ಕಿಯೆ ! ಸೊಗಸಿನ ಚುಕ್ಕಿಯೆ !
ಮೇಲಕೆ ಹಾರಲು ಕಲಿಸೆಯ ನನಗೆ ?
ಹಾಲನು ಕೊಡುವೆನು ಈಗಲೆ ನಿನಗೆ.
ಹಾರುವ ಹಕ್ಕಿಯೆ ! ಬಾರೆಲೆ ಹಕ್ಕಿಯೆ !
ಹಾ ಬಾ ಹಾ ಬಾ ಹಾ ಬಾ ಹಾ ಬಾ.

ಮೇಲಿನ ಕವಿತೆಯನ್ನು ಲಕ್ಷ್ಯಗೊಟ್ಟು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(ಅ) ಹಾರುವ ಹಕ್ಕಿಯನ್ನು ಕರೆಯುವದು ಏತಕ್ಕೆ ?

(ಆ) ಆ ಹಕ್ಕಿಗೆ ತೋರಿಸಿದ ಆಸೆಗಳು ಯಾವವು ?

(ಇ) ಮೊದಲನೆಯ ಮತ್ತು ಎರಡನೆಯ ಪದ್ಯಗಳ ಕೊನೆಯ ಸಾಲುಗಳು ಏನನ್ನು ಸೂಚಿಸುವವು ?

(ಈ) ಹಾರುವ ಹಕ್ಕಿಯು ತನ್ನ ಬಳಿಗೆ ಬರಬೇಕೆಂದು ಯಾವ ಯಾವ ನುಡಿಗಳಿಂದ ಕರೆಯುವನು ?

(ಊ) ಈ ಹಾಡಿನಲ್ಲಿ ನಿಮಗೆ ಬಲು ಮುದ್ದಾಗಿ ಕಾಣುವ ಸಾಲು ಯಾವುದೆಂಬುದನ್ನು ಬರೆಯಿರಿ.

೨. ಕೆಳಗಿನ ಸೂಚನೆಗಳ ಸಹಾಯದಿಂದ ಒಂದು ಕಥೆಯನ್ನು ರಚಿಸಿರಿ :— ೧

ಉರಿವ ಬಿಸಿಲು—ತೋಳವೂ ಕುರಿಮರಿಯೂ ಹಳ್ಳಕ್ಕೆ ಬಂದವು—ತೋಳವು ಹಳ್ಳದ ಮೇಲ್ಬದಿಗೆ—ಕುರಿಮರಿಯು ಕೆಳಬದಿಗೆ—ನಾನು ಕುಡಿಯುವ ನೀರನ್ನು ರಾಡಿ ಮಾಡಬೇಡ ಎಂದಿತು ತೋಳವು.—ಹಾಗೆ ಮಾಡುತ್ತಿರುವದು ನೀನೇ—ಎಂದಿತು ಕುರಿಮರಿಯು—ಮಾತಿನಲ್ಲಿ ಸೋತರೂ ತುಂಟನೆವ ಹೇಳಿ ತೋಳವು ಕುರಿಮರಿಯನ್ನು ನುಂಗಿತು.

೩. ಕೆಳಗಿನ ವಾಕ್ಯಗಳಲ್ಲಿ ಗೆರೆಹಾಕಿದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಉಪಯೋಗಿಸಿ ಮತ್ತೊಮ್ಮೆ ಬರೆಯಿರಿ :—

(ಅ) ಊಟಕ್ಕೆ ಮೊದಲು.....

(ಆ) .....ಗಿಂತ ಬಂಧುವಿಲ್ಲ; ಉಪ್ಪಿಗಿಂತ.....ಇಲ್ಲ.

(ಇ) ಮೊಸರನ್ನು.....ರೆ.....ಬರುವದು.

(ಈ) ಚಂದ್ರನ ಬೆಳಕಿಗೆ.....ಎನ್ನುವರು.

(ಉ) ಪಂಡೆಯ.....ದೊಡ್ಡಪ್ಪ ತಮ್ಮನು.....

೪. ಕೆಳಗೆ ಕೊಟ್ಟ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ :—

(ಅ) ಕಣ್ಣಿಲ್ಲದವ ಕುಂಟ; ಕಿವಿಯಿಲ್ಲದವ ಮೂಕ.

(ಆ) ರಾಮನೂ, ಲಕ್ಷ್ಮಣನೂ, ಸೀತೆಯೂ ಬಂದಳು.

(ಇ) ಗೋವಿಂದನು ನಿನ್ನೆ ಈ ಊರಿಗೆ ಬರುವನು.

(ಈ) ಅವನೂ ನಾನೂ ಸುಮ್ಮನೆ ಹೋದೆನು.

೫. (ಅ) ನನಗೆ ಹಾಲು ಸೇರುತ್ತದೆ (ಈ ವಾಕ್ಯದಲ್ಲಿ ಕರ್ತೃವು ಯಾವುದು ?) ೧

(ಆ) ಗಿಡದಿಂದ ಹಣ್ಣು ಬಿದ್ದಿತು (ಗೆರೆಹಾಕಿದ ಶಬ್ದದ ವಿಭಕ್ತಿ ಯಾವುದು ?)

(ಇ) ಕಾಶಿಯಲ್ಲಿ ಒಬ್ಬ ಪಂಡಿತನು ಇರುವನು (ಗೆರೆಹಾಕಿದ ಕ್ರಿಯಾಪದದ ಕಾಲವು ಯಾವುದು ?)

(ಈ) ಗೆಳೆಯನು ಬಂದನು (ಗೆರೆಹಾಕಿದ ಶಬ್ದಗಳ ಬಹುವಚನ ರೂಪಗಳನ್ನು ಬರೆಯಿರಿ.)

ಧಾರವಾಡದ ಕನ್ನಡ ಟಕ್ಸ್ಟ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

(ಜುಲೈ ತಿಂಗಳದ ಸಂಚಿಕೆಯಿಂದ ಮುಂದೆಸಾಗಿದ್ದು.)

ಅ. ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರ
೭೬	ಕನ್ನಡ ನೂತನ ಪಾಠಮಾಲೆ ೧ ಆ. ೧೯೩೯	ಮೆಸರ್ಸ ಪ್ಯಾಕ್ಟಿಲನ್ ಆ್ಯಂಡ ಕಂ. ಲಿ. ಮುಂಬಯಿ	೦– ೨–೦	ಪ್ರಾ. ಶಾ. ಗಳಲ್ಲಿ ಪಠ್ಯಪುಸ್ತಕ
೭೭	ಕನ್ನಡ ನೂತನ ಪಾಠಮಾಲೆ ೪ ಆ. ೧೯೩೯		೦– ೪–೦	ಸದರ
೭೮	ಕನ್ನಡ ನೂತನ ಪಾಠಮಾಲೆ ೩ ಆ. ೧೯೩೯	ಬುಕ್ ಕಮಿಟಿಯವರು ತಿಳಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	೦– ೩–೦	ಸದರ
೭೯	ಕನ್ನಡ ನೂತನ ಪಾಠಮಾಲೆ ೨ ಆ. ೧೯೩೯		೦– ೨–೦	ಸದರ
೮೦	ಶಿಶುಗೀತ ಮಾಲೆ	ಸ್ಕೂಲ ಬುಕ್ ಕಂಪನಿ ಮಂಗಳೂರ	೦– ೨–೬	ಪ್ರಾ. ಶಾ. ಶಿಕ್ಷಕರ ವಾ.
೮೧	ಮಣಿಮಾಲಾ (ಹರಿಣಿ ಭಾಗ ೨) ೧ ನೆ ಆ. ೧೯೩೯	ಕರ್ನಾಟಕ ಸತಿಹಿತೈಷಿಣಿ ಮಾತೃಮಂದಿರ ನಂಜನಗೂಡ C/o. ಶ್ರೀಕೃಷ್ಣ ಪ್ರೆಸ್. ಧಾರವಾಡ	೧– ೦–೦	ಪ್ರಾ. ಟ್ರೇ. ವಿ. ವಾ.
೮೨	ಸಂಗೀತ ಕಲಾಪ್ರವೇಶ ೧ ನೆ ಆ. ೧೯೪೦	ಭಾಸ್ಕರರಾವ ಬಂಕರ ಗಣೇಶಪೇಟೆಹುಬ್ಬಳ್ಳಿ	೦–೧೦–೦	ಪ್ರಾ. ಮಾ. ಟ್ರೇ. ಶಿ. ವಾ.
೮೩	ಅಂಕಗಣೇತ ದರ್ಶನ ಭಾ. ೨ ಆ. ೫ ೧೯೩೫	'ಬೆಂಗಳೂರ ಪ್ರೆಸ್' ಬೆಂಗಳೂರ ಸಿಟಿ.	೦–೧೪–೦	ಮಾ. ಟ್ರೇ. ಗಳಲ್ಲಿ. ಶಿ. ವಿ. ವಾ.

೮೪ ಉಪನಿಷತ್ ಕಥಾವಳಿ ೧ ನೆ ಆ. ೧೯೩೫	ಮ್ಯಾನೇಜರ ಅಧ್ಯಾತ್ಮ ಕಾರ್ಯಾಲಯ ಧಾರವಾಡ	೦– ೮–೦	ಪ್ರಾ. ಮಾ. ಟ್ರೇ. ವಿ. ವಾ.
೮೫ ಕರ್ನಾಟಕ ಪರಿಚಯ ೧ ನೆ ಆ. ೧೯೩೯	ಮ್ಯಾನೇಜರ ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ	೦– ೩–೦	ಪ್ರಾ. ಮಾ. ಟ್ರೇ. ವಿ. ವಾ.
೮೬ ಕನ್ನಡ ಅರಸರು ಆ. ೧೯೩೯	ವಿಶ್ವಸಾಹಿತ್ಯ ಪ್ರಕಟನಾಮಂದಿರ ಧಾರವಾಡ	೦– ೨–೦	ಪ್ರಾ. ಮಾ. ಟ್ರೇ. ವಿ. ವಾ.
೮೭ ಅಂಕಗಣಿತ ದರ್ಶನ ಭಾಗ ೧ ಆ. ೭ ೧೯೩೭	'ಬೆಂಗಳೂರ ಪ್ರೆಸ್' ಬೆಂಗಳೂರ ಸಿಟಿ	೦–೧೨–೦	ಮಾ. ಟ್ರೇ. ವಿ. ಶಿ. ವಾ.
೮೮ ನೂತನ ಸಾಮಾನ್ಯವಿಜ್ಞಾನ ಆ. ೧೯೩೮	ಬಾಸೆಲ್ ಮಿಶನ್ ಬುಕ್‌ಡಿಪೊ ಮಂಗಳೂರ	೧– ೪–೦	ಪ್ರಾ. ಮಾ. ಟ್ರೇ. ವಿ. ವಾ.
೮೯ ನೂತನ ಲಘುವಿಜ್ಞಾನ ಭಾಗ ೩ ಆ. ೧೯೩೯	ಸದರ	೦–೧೦–೦	ಪ್ರಾ. ಮಾ. ಟ್ರೇ. ವಿ. ವಾ.
೯೦ ನೂತನ ಲಘುವಿಜ್ಞಾನ ಭಾಗ ೨ ಆ. ೧೯೩೯	ಸದರ	೦–೧೦–೦	ಪ್ರಾ. ಮಾ. ಟ್ರೇ. ವಿ. ವಾ.
೯೧ ಮುಳ್ಳುಬೇಲಿ ಆ. ೧೯೪೦	ಶ್ರೀಕೃಷ್ಣ ಶರ್ಮ ಹೈದ್ರಾಬಾದ (ಡೆಕ್ಕನ್)	೧– ೦–೦	ಪ್ರಾ. ಮಾ. ಟ್ರೇ. ವಿ. ವಾ.
೯೨ ಕಲಿತರೆ ಹೀಗೆ ಕಲಿಯಬೇಕು ಆ. ೧೯೪೦	ವಾಗ್ವಿಲಾಸ ಬುಕ್‌ಡಿಪೊ ಹುಬ್ಬಳ್ಳಿ	೦– ೫–೦	ಪ್ರಾ. ಮಾ. ಟ್ರೇ. ವಿ. ವಾ.
೯೩ ನೂತನ ಲಘುವಿಜ್ಞಾನ ಪು. ೧ ಆ. ೧೯೪೯	ಬಾಸೆಲ್ ಮಿಸೆನ್ ಬುಕ್‌ಡಿಪೊ ಮಂಗಳೂರ	೦–೧೦–೦	ಪ್ರಾ. ಮಾ. ಟ್ರೇ. ವಿ. ವಾ.
೯೪ ನಮ್ಮ ಬದುಕು ೧ ನೆ ಆ. ೧೯೪೯	ಕೃಷ್ಣಶರ್ಮ ಬಿಟಗೇರಿ ಜಯಂತಿ ಆಫೀಸ, ಧಾರವಾಡ	ಕ್ಯಾಲಿಕೊ ೦–೧೨–೦ ಸಾದಾ ೦– ೮–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

ಅ.ನ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರ
೯೫	ಗ್ರಾಮಸುಧಾರಣೆ ೧ನೆ ಆ. ೧೯೩೬	ಶಿವಲಿಂಗಪ್ಪ ಮಲ್ಲಪ್ಪ ಜಾಡರ ಬೈಲಹೊಂಗಲ	೦– ೬–೦	ಪ್ರಾ. ಮಾ. ಟ್ರೇ. ವಿ. ಶಿ. ವಾ. ಟ್ರೇ. ವಿ. ವಾ.
೯೬	ಕನ್ನಡ ನೈಷಧೀಯ ಸಾರ ಆ. ೧೯೩೯	ಪಂಡಿತ ಬಸವರಾಜಶಾಸ್ತ್ರಿ ಕೋಡಿಕೊಪ್ಪ ಮಠ ಶ್ರೀ ಶಿದ್ಧೇಶ್ವರ ಹಾಯಸ್ಕೂಲ ವಿಜಾಪೂರ	೧– ೪–೦	ಪ್ರಾ. ಮಾ. ಟ್ರೇ. ವಿ. ವಾ.
೯೭	ರಾಮಾಯಣ ಸಂಗ್ರಹ ಆ. ೧೯೩೩	ಬೆಂಗಳೂರ ಪ್ರಿಂಟಿಂಗ ಆ್ಯಂಡ ಪಬ್ಲಿಶಿಂಗ ಕಂಪನಿ ಬೆಂಗಳೂರ ಸಿಟಿ	೦– ೮–೦	ಪ್ರಾ. ಪಾ. ಟ್ರೇ. ವಿ. ವಾ.
೯೮	ನುಡಿಗಟ್ಟು	ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ ಧಾರವಾಡ	೦–೧೦–೦	ಪ್ರಾ. ಮಾ. ಶಾ. ಗಳಲ್ಲಿ ಪಠ್ಯಪುಸ್ತಕ

ಪತ್ರಗಳ ಸಾರಾಂಶ

ಬಾಡ; ಕಾಶವಾರ:— " ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ತಾ. ೩೦–೭–೧೯೪೦ ನೆಯ ದಿವಸ, ಸ್ಕೂಲ ಕಮೀಟಿಯ ಜೇಅರಮನ್ನರಾದ ಶ್ರೀಮಾನ್ **ಮಂಜುನಾಥ** ಹರಿಜೋಶಿಯವರು ಶಾಲೆಗೆ ಬಂದು ಬಡ ಹುಡುಗರಿಗೆ ೧೧ ರೂ. ೪ ಆ. ಬೆಲೆಯ ಪುಸ್ತಕಗಳನ್ನು ಕೊಟ್ಟರು. ಇವರು ಈ ಮೊದಲು ಇದೇ ಶಾಲೆಯ ಕಟ್ಟಡದ ಸಲುವಾಗಿ **೨೦೫** ರೂಪಾಯಿಗಳನ್ನು ಕೊಟ್ಟಿರುವರು. ಇವರ ಉದಾರತನವು ಆದರ್ಶವಾದುದು ಎಂದು " ಹೆಡ್‌ಮಾಸ್ತರರಾದ ಶ್ರೀ. ಸು. ವಿ. ಸಾವಕಾರರು ತಿಳಿಸುತ್ತಾರೆ.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಬೆಲೆ ೮ ಆಣೆಗಳು.

ಲೇಖಕರು :

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ, ಟ್ರೇನಿಂಗ್ ಸ್ಕೂಲ್, ಧಾರವಾಡ.

ಶ್ರೀ. ಭಾ. ಮಾ. ಕುಲಕರ್ಣಿ, ಬೇಸಿಕ್ ಟ್ರೇನಿಂಗ್ ಸ್ಕೂಲ್, ಧಾರವಾಡ.

ಕನ್ನಡ ೫, ೬, ೭, ವತ್ತು ಇಂಗ್ಲಿಷ ೧, ೨, ೩, ಇಯತ್ತೆಗಳಿಗೂ, ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಖಾಸಗಿಯಿಂದ ಹಿಂದೀ ಕಲಿಯುವವರಿಗೂ ಹಿಂದೀ ಅಧ್ಯಾಪಕರಿಗೂ ಬಹಳ ಉಪಯೋಗವಾಗುವಂತೆ ಸರಳವಾದ ಶೈಲಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳೂ ಮುಂಬೈ ಸರಕಾರದ ಹಿಂದುಸ್ತಾನೀ ಬೋರ್ಡಿನ ಸದಸ್ಯರೂ ಆದ ಶ್ರೀ. ಸಿದ್ಧನಾಥ ಪಂತರು ಮುನ್ನುಡಿಯನ್ನು ಬರೆದಿದ್ದಾರೆ.

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ವಿ. ಸೂ.— ನಮ್ಮಲ್ಲಿ ಟೀಚರ್ಸ ಸೊಸಾಯಿಟಿಗಳಿಗೂ, ವಿವಿಧ ಉದ್ದೇಶಗಳ ಸಹಕಾರೀ ಸಂಘಗಳಿಗೂ ಬೇಕಾಗುವ ಬುಕ್ಕುಗಳೂ ಫಾರ್ಮುಗಳೂ ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಸಿಗುತ್ತವೆ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳೂ ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. **ಶ್ರೀ. ಕುರಡಿಯವರು ರಚಿಸಿರುವ,**

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ.

ಈ ಪುಸ್ತಕಗಳು ಪಾಠ ಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠ ಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ಜಾಹಿರಾತಿನ ಪುಟದಲ್ಲಿಯು ಸರಕಾರದ ಪ್ರಕಟನೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣದ ಸಮಿತಿಯು ಶಿಫಾರಿಸಿಗೆ ಅನುಸರಿಸಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟ. ಬಿ. ಪಿಎಚ್. ಸಿ. (ಅಮೇರಿಕಾ)

ಪ್ರತಿಯೊಬ್ಬ ಶಿಕ್ಷಕನಿಗೂ ಉಪಯುಕ್ತವಾದ ಈ ಪುಸ್ತಕದಲ್ಲಿ ಹಿಂದೀ ಕವಾಯತ; ಸರ್ವಾಂಗಸುಂದರ ವ್ಯಾಯಾಮ, ಆಸನ, ನಮಸ್ಕಾರ, ಲಾಠೀ. ಲೇಝೀಮ, ಜೋಡಿ, ಕೋಲಾಟ ಇತ್ಯಾದಿಗಳ ಮಾಹಿತಿಯನ್ನು ಕೊಟ್ಟಿದೆ. ಆಟ-ಬೈಲಾಟಗಳನಿಯಮಗಳನ್ನೂ ಕೊಟ್ಟಿದೆ. ಬೆಲೆ ೩ ರೂಪಾಯಿಗಳು.

ಈ ಪುಸ್ತಕದಲ್ಲಿ ಕೊಟ್ಟ ನಮಸ್ಕಾರಗಳ ಚಿತ್ರಪಟ ಬೆಲೆ ೪ ಆಣೆ.

ದೊರೆಯುವ ಸ್ಥಳ:—

ವಿಳಾಸ :— ಶ್ರೀ. ಜ. ಬಾಪಟೆ,
ಮುದಿಹಾಳ, ಧಾರವಾಡ.

ಸಪ್ಟಂಬರ್ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಸಂಪಾದಕರ ಬಿಡಿನುಡಿಗಳು	೧
೨.	ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಗೂ ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ	೪
೩.	ಪ್ರಾಥಮಿಕ ಶಿಕ್ಷಣದ ಪ್ರಸಾರವೂ 'ಶಿಸ್ಟ' ಪದ್ಧತಿಯೂ	೧೦
೪.	ಹೇರ ಹಿಟ್ಲರ	೧೭
೫.	ಹೇರಹಿಟ್ಲರನ ಮೇನ್‌ಕಾಂಫ್ ಪುಸ್ತಕದಲ್ಲಿ ಪ್ರಕಟವಾದ ಆತನ ವಿಚಾರಗಳು	೨೩
೬.	ಡೈರೆಕ್ಟರಸಾಹೇಬರ ಒಂದು ಪರಿಪತ್ರದ ಮುಖ್ಯಾಂಶಗಳು	೨೮
೭.	ಪ್ರಕಟನೆ	೩೦
೮.	ಮುಂಜೂರಾದ ಕನ್ನಡ ಪುಸ್ತಕಗಳು	೩೧

Printed by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School, Dharwar at his Office.

ಓದಿರಿ ! ಪ್ರೇರೆಮಾಡಿರಿ !

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತಿ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿ
ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ
ಎಡ್‌ವಿನಸ್ಟ್ರೇಟಿವ್ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ
ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋ
ಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರ
ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಿಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದ
ಹೆಸರುಪಡೆದದೆ. ಒರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳ
ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮಿಶ
ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗ
ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬಲ ೦-೫-೮

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮಡಿವುನ್, ಬಿ. ಎ.,

ಸಂಪುಟ ೭೯	ಸಪ್ಟಂಬರ ೧೯೪೦	ವರ್ಷ ೧೨. ಸಂ. ೬

ಸಂಪಾದಕೀಯ ಬಿಡಿನುಡಿಗಳು

೧. ಗ್ರಾಮಸುಧಾರಣೆ ಮತ್ತು ಪ್ರಾ. ಶಿಕ್ಷಕರ ಸಹಕಾರ

ಯಾವುದಾದರೂ ಗ್ರಾಮಸುಧಾರಣೆಯ ಯೋಜನೆಗಳಲ್ಲಿ ಅಕ್ಷರಜ್ಞಾನ ಜನಸಂಖ್ಯೆಯ ವೈಜ್ಞಾನಿಕ ವಿಮರ್ಶೆಯು ಅಭ್ಯಾಸವೇ ಉಳಿದ ಯೋಜನೆಗಳಿಗಿಂತ ಹೆಚ್ಚಿನ ವಿಚಾರವಿನಿಮಯಕ್ಕೆ ಗುರಿಯಾಗತಕ್ಕದ್ದು. ಆದರೂ ಈ ವಿಷಯಕ್ಕೆ ಸಂಪೂರ್ಣ ಮತ್ತು ಯೋಗ್ಯವಾದ ಲಕ್ಷವನ್ನು ಯಾರೂ ಕೊಟ್ಟಂತಿಲ್ಲ. ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಶಿಕ್ಷಕಿಯರೂ ಈ ವಿಷಯಕ್ಕೆ ತಕ್ಕ ಮಟ್ಟಿಗೆ ಲಕ್ಷವನ್ನು ಕೊಡಬಹುದು. ೧೯೪೧ನೆಯ ಇಸವಿಯಲ್ಲಿ ಆಗತಕ್ಕ ಜನಸಂಖ್ಯಾ ಗಣನೆ ಅಥವಾ ಖಾನೇಸುಮಾರಿಯು ಸವಿಾಪಿಸಿದೆ. ಇದರಿಂದ ಹಳ್ಳಿಗಳ ಜನಸಂಖ್ಯೆಯು ಎಲ್ಲೆಲ್ಲಿ ಎಷ್ಟೆಷ್ಟು ಇರುವದು ಎಂಬದು ಸದ್ಯದಲ್ಲಿಯೇ ತಿಳಿದು ಬರುವುದರಿಂದ ಈ ವಿಷಯದಲ್ಲಿ ವಿಚಾರವಿನಿಮಯಕ್ಕೆ ತುಂಬಾ ಅವಕಾಶವಿರುವುದು. ಆದರೆ ಅಷ್ಟರ ಪರೆಗೆ ಕೆಳಗೆ ಕೊಟ್ಟ ವಿಷಯಗಳನ್ನು ಕುರಿತು ಹಳ್ಳಿಯ ಶಾಲೆಗಳ ಶಿಕ್ಷಕ ಮತ್ತು ಶಿಕ್ಷಕಿಯರು ಸಾಧ್ಯವಿದ್ದಷ್ಟು ಸಂಗತಿಗಳನ್ನು ಒಟ್ಟುಗೂಡಿಸಲು ಅವಕಾಶವಿದೆ. ಅವು ಯಾವವೆಂದರೆ:—(೧) ಹಳ್ಳಿಗಳ ಜನಸಂಖ್ಯೆಯು ಕ್ರಮೇಣ ಕಡಿವೆಯಾಗುತ್ತ ಬಂದಲ್ಲಿ, ಇದು ಜಳಿಜ್ವರ ಮೊದಲಾದ ರೋಗಗಳಿಂದಾಗಿದೆಯೋ, ಅಥವಾ ಹಳ್ಳಿಗರು ತಮ್ಮ ಹಳ್ಳಿಯನ್ನು ಬಿಟ್ಟು ಪಟ್ಟಣಗಳಿಗೆ

ಓದಿರಿ ! ತ್ವರೆಮಾಡಿರಿ ! !

ವಾಗ್ವಿಲಾಸ ಬುಕ್‌ಡೀಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ಒನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ., ಎಡ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಿಕ ಇತಿಹಾಸ

ಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ. ಎ.,

ಸಂಪುಟ ೭೯	ಸಪ್ಟೆಂಬರ ೧೯೪೦	ವರ್ಷ ೧೨. ಸಂ. ೬

ಸಂಪಾದಕೀಯ ಬಿಡಿನುಡಿಗಳು

೧. ಗ್ರಾಮಸುಧಾರಣೆ ಮತ್ತು ಪ್ರಾ. ಶಿಕ್ಷಕರ ಸಹಕಾರ

ಸಂದುಸ್ಥಾನದ ಗ್ರಾಮಸುಧಾರಣೆಯ ಯೋಜನೆಗಳಲ್ಲಿ ಹಳ್ಳಿಗಳ ಜನಸಂಖ್ಯೆಯ ವೈಜ್ಞಾನಿಕ ವಿಮರ್ಶೆಯು ಅಭ್ಯಾಸವೇ ಉಳಿದ ಯೋಜನೆಗಳಿಗಿಂತ ಹೆಚ್ಚಿನ ವಿಚಾರವಿನಿಮಯಕ್ಕೆ ಗುರಿಯಾಗತಕ್ಕದ್ದು. ಆದರೂ ಈ ವಿಷಯಕ್ಕೆ ಸಂಪೂರ್ಣ ಮತ್ತು ಯೋಗ್ಯವಾದ ಲಕ್ಷ್ಯವನ್ನು ಯಾರೂ ಕೊಟ್ಟಂತಿಲ್ಲ. ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಶಿಕ್ಷಕಿಯರೂ ಈ ವಿಷಯಕ್ಕೆ ತಕ್ಕ ಮಟ್ಟಿಗೆ ಲಕ್ಷ್ಯವನ್ನು ಕೊಡಬಹುದು. ೧೯೪೧ನೆಯ ಇಸವಿಯಲ್ಲಿ ಆಗತಕ್ಕ ಜನಸಂಖ್ಯಾ ಗಣನೆ ಅಥವಾ ಖಾನೇಸುಮಾರಿಯು ಸವಿಸ್ತಾರವಿಸಿದೆ. ಇದರಿಂದ ಹಳ್ಳಿಗಳ ಜನಸಂಖ್ಯೆಯು ಎಲ್ಲೆಲ್ಲಿ ಎಷ್ಟೆಷ್ಟು ಇರುವದು ಎಂಬದು ಸದ್ಯದಲ್ಲಿಯೇ ತಿಳಿದು ಬರುವುದರಿಂದ ಈ ವಿಷಯದಲ್ಲಿ ವಿಚಾರವಿನಿಮಯಕ್ಕೆ ತುಂಬಾ ಅವಕಾಶವಿರುವುದು. ಆದರೆ ಅಷ್ಟರ ವರೆಗೆ ಕೆಳಗೆ ಕೊಟ್ಟ ವಿಷಯಗಳನ್ನು ಕುರಿತು ಹಳ್ಳಿಯ ಶಾಲೆಗಳ ಶಿಕ್ಷಕ ಮತ್ತು ಶಿಕ್ಷಕಿಯರು ಸಾಧ್ಯವಿದ್ದಷ್ಟು ಸಂಗತಿಗಳನ್ನು ಒಟ್ಟುಗೂಡಿಸಲು ಅವಕಾಶವಿದೆ. ಅವು ಯಾವವೆಂದರೆ:—(೧) ಹಳ್ಳಿಗಳ ಜನಸಂಖ್ಯೆಯು ಕ್ರಮೇಣ ಕಡಿಮೆಯಾಗುತ್ತ ಬಂದಲ್ಲಿ, ಇದು ಜಳಿಜ್ವರ ಮೊದಲಾದ ರೋಗಗಳಿಂದಾಗಿದೆಯೋ, ಅಥವಾ ಹಳ್ಳಿಗರು ತಮ್ಮ ಹಳ್ಳಿಯನ್ನು ಬಿಟ್ಟು ಪಟ್ಟಣಗಳಿಗೆ

ಹೋಗಿರುವುದರಿಂದ ಆಗಿದೆಯೋ ? (೨) ತಮ್ಮ ತಮ್ಮ ಹಳ್ಳಿಗಳ ಜನನಮರಣಗಳ ಸಂಖ್ಯೆಯ ಗಣನೆಯಿಂದ ಖಾನೇಸುಮಾರಿಯಲ್ಲಿ ಕೊಟ್ಟ ಅವುಗಳ ಜನಸಂಖ್ಯೆಯು ಸರಿಯಾಗಿರುವುದೋ, ಮತ್ತು ಖಾನೇಸುಮಾರಿಯ ಸಂಖ್ಯೆಯ ಮೇಲೆ ಎಷ್ಟರ ಮಟ್ಟಿಗೆ ಅವಲಂಬಿಸಬಹುದು. (೩) ಹರಿಜನೋದ್ಧಾರದ ಕೆಲಸವು ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ಹಬ್ಬಿದೆ ಮತ್ತು ಅದರ ಪರಿಣಾಮವಾಗಿ ಆ ಹಳ್ಳಿಗಳಲ್ಲಿ ಜನಸಂಖ್ಯೆಯು ಏರಿಕೆಯಾಗಿದೆಯೋ ಅಥವಾ ಜನಪ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳಲ್ಲಿ ಎಷ್ಟರ ಮಟ್ಟಿಗೆ ಸುಧಾರಣೆಯಾಗಿದೆ ? (೪) ವಿರಳ ಜನಸಂಖ್ಯೆಯುಳ್ಳ ಹಳ್ಳಿಗಳ ಈ ಕೊರತೆಯನ್ನು ಹೋಗಲಾಡಿಸಲಿಕ್ಕೆ ಎಷ್ಟರಮಟ್ಟಿಗೆ ವಲಸೆ ಹೋಗುವಿಕೆಯಾಗುತ್ತಿದೆ, ಅದರ ಪರಿಣಾಮವೇನಾಗಿದೆ, ಇದಕ್ಕೆ ಯಾವ ತೊಂದರೆಗಳು ತೊಡಕನ್ನು ತಂದೊಡ್ಡುತ್ತಿವೆ? (೫) ಮದ್ಯಪಾನ ನಿರೋಧದಿಂದ ಹಳ್ಳಿಗಳ ಆರ್ಥಿಕ, ಸಾಮಾಜಿಕ ಸ್ಥಿತಿಗಳಲ್ಲಿ ಯಾವ ತೆರದ ಬದಲಾವಣೆಯಾಗಿದೆ ಮತ್ತು ಇದರ ಪರಿಣಾಮವಾಗಿ ಜನಸಂಖ್ಯೆಯು ಹೆಚ್ಚು ಅಥವಾ ಕಡಿಮೆಯಾಗಹತ್ತಿದೆಯೋ ? (೬) ಪ್ರೌಢಶಿಕ್ಷಣವು ಬಾಲಶಿಕ್ಷಣದೊಂದಿಗೆ ಸಾಗಿದ ಹಳ್ಳಿಗಳೆಷ್ಟಿರುವವು ಮತ್ತು ಅವುಗಳಲ್ಲಿ ಯಾವ ಯಾವ ತೆರದ ಸುಧಾರಣೆಗಳು ಕಂಡುಬರುವವು? ಈ ಪ್ರಕಾರ ಪ್ರಗತಿಯಾಗದ ಹಳ್ಳಿಗಳೆಷ್ಟಿರುವವು. ಮತ್ತು ಈ ಪ್ರಕಾರ ಪ್ರಗತಿಯಾಗದಿರಲಿಕ್ಕೆ ಕಾರಣಗಳು ಯಾವವು ? (೭) ಶಾರದಾ ಕಾಯದೆ ಅಥವಾ ಮಕ್ಕಳ ವಿವಾಹದ ವಯಸ್ಸಿನ ನಿರ್ಬಂಧದ ಮಸೂದೆಯು ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ಪ್ರಸಾರವನ್ನು ಹೊಂದಿದೆ ಮತ್ತು ಅದರ ಪರಿಣಾಮವು ಹಳ್ಳಿಗರಲ್ಲಿ ಹೇಗೆ ಮತ್ತು ಎಷ್ಟರಮಟ್ಟಿಗೆ ಆಗಿದೆ ? (೮) ಹಳ್ಳಿಗಳ ಆರೋಗ್ಯ ಸುಧಾರಣೆಯಲ್ಲಿ ಯೋಜಿಸಿದ ಮತ್ತು ಕೈಕೊಂಡ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಮತ್ತು ಎಲ್ಲಿ ಹೆಚ್ಚಿನ ಪರಿಣಾಮವನ್ನು ಉಂಟು ಮಾಡಿವೆ ಮತ್ತು ಏಕೆ; ಯಾವ ಯಾವ ಹಳ್ಳಿಗಳಲ್ಲಿ ಅವುಗಳ ಪರಿಣಾಮವು ವ್ಯಕ್ತವಾಗುವುದಿಲ್ಲ ಮತ್ತು ಏಕೆ ? ಹಳ್ಳಿಗರಲ್ಲಿ ಸರ್ವಸಾಧಾರಣವಾಗಿ ಈ ಯೋಜನೆಯ ಕಾರ್ಯಕ್ರಮಗಳ ವಿಷಯ ಕಂಡುಬರುವ ಮಾನಸಿಕ ಸ್ಥಿತಿಯು ಹೇಗಿದೆ ಮತ್ತು ಇದಕ್ಕೆ ಕಾರಣಗಳು ಯಾವವು ? ಈ ಯೋಜನೆಯ ಕಾರ್ಯಕ್ರಮದ ಪರಿಣಾಮಗಳು ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ಚಿರಕಾಲ ಉಳಿಯುವಂತಿವೆ ?

೨. ಹಳ್ಳಿಗಳ ಸುಧಾರಣೆಯಲ್ಲಿ ಇನ್ನೊಂದು ಮಹತ್ವವಾದ ವಿಷಯವಾದರೂ ಲಕ್ಷದಲ್ಲಿಡಲು ತಕ್ಕದ್ದಾದೆ. ಇದರ ವಿಷಯದಲ್ಲಿಯೂ ಸಹ ಶಿಕ್ಷಕ ಶಿಕ್ಷಕಿಯರು ತಮ್ಮ ತಮ್ಮ ಹಳ್ಳಿಗಳ ಮಟ್ಟಿಗೆ ಸಾಕಷ್ಟು ಜಾಗರೂಕತೆಯನ್ನು ಹಳ್ಳಿಗರಲ್ಲಿ ಉಂಟು ಮಾಡಬಹುದು. ಕಲಕತ್ತೆಯ ಸಹ ಸುಧಾರಣಾ ಸಂಘದ ಅನುಭವ

ಗಳ ವರದಿಯಿಂದ ತಿಳಿದುಬರುವಂತೆ "ಜನಸಂಖ್ಯೆಯು ಮಿತಿಮೀರಿದ ಬೆಳವಣಿಗೆಯಿಂದ ಆಗುವಂತೆ ನಿರುಪಯೋಗಿ ಮತ್ತು ಬಲಹೀನವಾದ ಪಶುಸಂಖ್ಯೆಯು ಬೆಳವಣಿಗೆಯಿಂದಲೂ ಸಹ ಹಳ್ಳಿಗಳ ಆರ್ಥಿಕ ಸ್ಥಿತಿಯು ಅವನತಿಗೆ ಪುಟಕೊಟ್ಟಂತಾಗಿದೆ. ಈ ವಿಷಯದ ಸುಧಾರಣೆಯ ಯೋಜನೆಯಲ್ಲಿ ಹಿಂದುಗಳಲ್ಲಿ ಕಂಡುಬರುವ ಅಹಿಂಸಾ ತತ್ವ, ಆಕಳುಗಳಿಗೆ ಕೊಡುವ ಪೂಜ್ಯತೆಯ ಸಾಂಪ್ರದಾಯ ಇವೇ ಮೊದಲಾದವು ನಿವಾರಿಸಲಿಕ್ಕೆ ಅಸಾಧ್ಯವಾದ ತೊಡಕುಗಳನ್ನು ತಂದೊಡ್ಡಿವೆ. ಹೀಗಾಗಿ ಪ್ರತಿಯೊಂದು ಹಳ್ಳಿಯಲ್ಲಿ ನಿಸ್ಸಾರ ಮತ್ತು ಬಲಹೀನ ಜನದಟ್ಟಣೆಯೊಡನೆ, ಬಲಹೀನ ಮತ್ತು ನಿರುಪಯೋಗಿಯಾದ ಆಕಳುಗಳ ಸಂಖ್ಯೆಯೂ ಬೆಳೆಯುಹತ್ತಿದೆ. ಇದೂ ಒಂದು ಗ್ರಾಮಸುಧಾರಣೆಯ ಯೋಜನೆಯಲ್ಲಿ ಲಕ್ಷ್ಯಕೊಡತಕ್ಕ ವಿಷಯವಾಗಿದೆ. ಹಳ್ಳಿಗಳ ಆರ್ಥಿಕ ಅವನತಿಗೆ ಇವು ತಕ್ಕಮಟ್ಟಿಗೆ ಕಾರಣೀಭೂತವಾಗಿವೆ ಎಂಬುವದು ಎಲ್ಲರೂ ಮನಗಾಣತಕ್ಕ ವಿಷಯವೇ ಸರಿ. ಹೀಗಾದುದರಿಂದ ಇವುಗಳಿಂದುಂಟಾಗುವ ದುಷ್ಪರಿಣಾಮಗಳಾವವು ಅವುಗಳನ್ನು ದೂರಪಡಿಸಲಿಕ್ಕೆ ಯೋಚಿಸತಕ್ಕ ಉಪಾಯಗಳು ಯಾವವು ಎಂಬ ವಿಷಯದಲ್ಲಿ ಸುಶಿಕ್ಷಿತರಾದ ಹಳ್ಳಿಗಳ ಶಿಕ್ಷಕ ಶಿಕ್ಷಕಿಯರು ವಿಚಾರ ಮಾಡಿ, ಅವುಗಳನ್ನು ತಮ್ಮ ಹಳ್ಳಿಗಳ ಅಶಿಕ್ಷಿತರಿಗೆ ವಿವರಿಸಿ ಹೇಳಿ ಸುಧಾರಣೆಗಳನ್ನು ಮಾಡಲು ಯತ್ನಿಸುವದು ಅವರ ಹೊಣೆಗಾರಿಕೆಯೆಂದು ಹೇಳಿದರೆ ಅಸಮಂಜಸವಾಗಲಾರದು. ಗ್ರಾಮಸುಧಾರಣೆಯೇ ದೇಶದ ಮತ್ತು ರಾಷ್ಟ್ರೀಯ ಸುಧಾರಣೆಗಳ ನೆಲಗಟ್ಟಾಗಿರುವುದರಿಂದ ಹಳ್ಳಿಗಳಲ್ಲಿ ವಾಸಿಸುವ ಶಿಕ್ಷಕ ಶಿಕ್ಷಕಿಯರು ಈ ವಿಷಯದಲ್ಲಿ ಹೆಚ್ಚಾಗಿ ಲಕ್ಷ್ಯವನ್ನು ಕೊಡತಕ್ಕದ್ದು. ಮತ್ತು ಉಪಯುಕ್ತವಾದ ಯೋಜನೆಗಳನ್ನು ಕಂಡು ಹಿಡಿದು ಯೋಗ್ಯ ಕಾರ್ಯಕ್ರಮಗಳನ್ನು ಕೈಕೊಳ್ಳಲು ಪ್ರೋತ್ಸಾಹವನ್ನು ಕೊಟ್ಟು ಇತರರಿಗೆ ನೆರವಾಗತಕ್ಕದ್ದು.

ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಗೂ ಈಗ ನಡೆಯುವ ಯುದ್ಧದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ನೀಡಬಹುದಾದ ಸಹಾಯ

(ಕಳೆದ ಆಗಸ್ಟ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

೩. ಬ್ರಿಟಿಷರು ತಮ್ಮ ಅಪ್ರತಿಮ ನೌಕಾಬಲದಿಂದ ಜರ್ಮನಿಯ ಸಮುದ್ರದ ವ್ಯಾಪಾರವನ್ನು ಕಟ್ಟುಮಾಡಿದರು ಮತ್ತು ತಮ್ಮ ವಿಮಾನ ಬಲವನ್ನೂ ಸೈನ್ಯದ ಸಂಖ್ಯೆಯನ್ನೂ ಬೆಳೆಸುತ್ತ, ಇಂಗ್ಲಂಡದ ಮೇಲೆ ದಾಳಿ ಮಾಡಿದರೆ ಅಗತ್ಯವಿರುವ ಎಲ್ಲತರದ ಸಂರಕ್ಷಣೋಪಾಯಗಳ ಸಿದ್ಧತೆಯನ್ನೂ, ಯುದ್ಧೋಪಕರಣ ಸಾಮಗ್ರಿಗಳ ಸಂಗ್ರಹ, ಸೈನ್ಯ ಸಂಗ್ರಹ, ವಿಮಾನದಲವನ್ನು ಸಜ್ಜುಗೊಳಿಸುವುದು ಮುಂತಾದ ಯುದ್ಧಸಿದ್ಧತೆಯಲ್ಲಿ ತೊಡಗಿದರು. ಹಿಟ್ಲರನೂ ಪ್ರತೀಕಾರವಾಗಿ "ಮೆಗ್ನೆಟಿಕ್‌ಮೈನ" ಎಂಬ ಜಲಸುರಂಗ, ಸಬ್‌ಮೆರೀನ, ಪಾಕಿಟ ಯುದ್ಧದ ಹಡಗು, ವಿಮಾನ ಇವುಗಳ ಮುಖಾಂತರ ಬ್ರಿಟಿಷರ ವ್ಯಾಪಾರವನ್ನು ಹಾಳುಮಾಡಲು ಯತ್ನಿಸಿದನು. ಆದರೆ ಈ ಪ್ರಯತ್ನಗಳು ನಿರರ್ಥಕವಾದವು. ಬ್ರಿಟಿಷರ ಮತ್ತು ಇತರ ಜನಾಂಗದವರ ಕೆಲವು ಹಡಗುಗಳು ನಾಶವಾದುವು. ಅದರಂತೆ ಜರ್ಮನಿಯ ಅಸಂಖ್ಯ ಹಡಗುಗಳೂ ನಾಶವಾದುವು. ಬ್ರಿಟಿಷರ ಸಮುದ್ರದ ವ್ಯಾಪಾರ ಮುಂತಾದ ಚಟುವಟಿಕೆಗಳು ನಿರಂಕುಶವಾಗಿ ನಡೆದುವು. ಆದರೆ ಜರ್ಮನಿಯ ವ್ಯಾಪಾರವು ಅಟ್ಲಾಂಟಿಕ ಸಾಗರದಮಟ್ಟಿಗೆ ಕಟ್ಟಾಯಿತು. ಗ್ರಾಫಸ್ಪೀ ಎಂಬ ಉತ್ತಮ ತರದ ಜರ್ಮನ್ ಪಾಕಿಟ ಯುದ್ಧದ ಹಡಗವು ಬ್ರಿಟಿಷರ ಯುದ್ಧದ ಹಡಗಗಳೊಡನೆ ಹೋರಾಡಿ ಸೋತು, ಕೊನೆಗೆ ಜರ್ಮನರಿಂದಲೇ ನಾಶಮಾಡಲ್ಪಟ್ಟಿತು. ಇದರಂತೆಯೇ ಅನೇಕ ಹಡಗುಗಳು ಬ್ರಿಟಿಷರ ಕೈವಶವಾಗದಂತೆ ನಾಶಮಾಡಲ್ಪಟ್ಟವು.

ಯುದ್ಧವು ಮುಂದೆ ಜಳಿಗಾಲದ ಮೂಲಕ ಅಷ್ಟು ಪ್ರಖರ ರೂಪವನ್ನು ತಾಳದೆ, ಎರಡೂ ಪಕ್ಷದವರಿಂದ ಬರೇ ವಿಮಾನಗಳ ಮೂಲಕ ಸ್ಥಳ ಪರೀಕ್ಷೆಯು ನಡೆಯಿತು. ಬ್ರಿಟಿಷರು ತಮ್ಮ ಕೆಲವು ದಂಡುಗಳನ್ನೂ ಯುದ್ಧೋಪಕರಣಗಳನ್ನೂ ಫ್ರಾನ್ಸ ದೇಶಕ್ಕೆ ಅವರ ನೆರವಿಗಾಗಿ ಕಳುಹಿಸಿದರು. ಈ ಪ್ರಕಾರ ಯುದ್ಧದ ಪ್ರಾರಂಭದ ೩-೪ ತಿಂಗಳುಗಳು ಕಳೆದು ಹೋದವು.

೪. ಮುಂದೆ ಹಿಟ್ಲರನು ತನ್ನ "ಪಂಚಮದಳ"ದ ಸಹಾಯದಿಂದ ತಾನು ಇನ್ನು ಮುಂದೆ ಮಾಡತಕ್ಕ ಯುದ್ಧಕ್ಕೆ ಬೇಕಾದ ಉಪಾಯಗಳನ್ನು ಕಪಟದಿಂದ ಸಾಧಿಸಿಕೊಂಡನು. ಇದರಂತೆ ನಾರ್ವೆ, ಬೆಲ್ಜಿಯಮ್, ಹಾಲೆಂಡ, ರಾಷ್ಟ್ರಗಳಲ್ಲಿ ಈ 'ಪಂಚಮದಲ' ದವರನ್ನು ತುಂಬಾ ತುಂಬಿಸಿ ತನ್ನ ಕಾರ್ಯಸಾಧನೆಗೆ ಬೇಕಾದ ಎಲ್ಲ ಕುತಂತ್ರಗಳನ್ನು ನಡೆಯಿಸಿದನು. ಹೀಗಾಗಿ ಒಮ್ಮೆಲೇ ನಾರ್ವೆಯಲ್ಲಿ ತನ್ನ ಸೈನ್ಯವನ್ನು ನೌಕಾ ವಿಮಾನಗಳ ಸಹಾಯದಿಂದ ಇಳಿಸಿ, ಎಲ್ಲ ಮುಖ್ಯ ಪಟ್ಟಣಗಳನ್ನು ತನ್ನ ಕೈವಶವಾಡಿಕೊಂಡನು. ಇಲ್ಲಿ ಬ್ರಿಟಿಷರು ತಕ್ಕ ಮಟ್ಟಿಗೆ ತಮ್ಮ ಹಡಗುಪಡೆ ಮತ್ತು ವಿಮಾನಗಳ ಸಹಾಯಕೊಟ್ಟು, ಹಿಟ್ಲರನ ಸೈನ್ಯಕ್ಕೆ ಮುಂದುವರಿಯಲು ಅನುವು ಕೊಡಲಿಲ್ಲ. ಹೀಗೆ ಸ್ವಲ್ಪ ದಿವಸಗಳವರೆಗೆ ಕಾದಾಟ ನಡೆಯುವಷ್ಟರಲ್ಲಿ, ಹಿಟ್ಲರನು ತಾನು ಕೊಟ್ಟ ವಚನವನ್ನು ಮುರಿದು ಒಮ್ಮೆಲೇ ಬೆಲ್ಜಿಯಮ್ ಮತ್ತು ಹಾಲೆಂಡ ರಾಜ್ಯಗಳ ಮೇಲೆ ತನ್ನ ಪ್ರಬಲ ಸೈನ್ಯವನ್ನು ಕಳುಹಿಸಿದನು. ಮತ್ತು ಮ್ಯಾಗಿನೋ ವ್ಯೂಹದಲ್ಲಿ ದುರ್ಬಲವಾದ ಒಂದು ಭಾಗವನ್ನು ಒಡೆದು ಒಂದು ಪ್ರಚಂಡ ಸೈನ್ಯವನ್ನು ಫ್ರಾನ್ಸ್ ದೇಶದ ಒಳಗೆ ಕಳುಹಿಸಿದನು. ಹಾಲೆಂಡ ದೇಶದಲ್ಲಿ ಕಾದಾಟವು ಕೆಲವು ದಿವಸಗಳು ನಡೆದು ಕೊನೆಗೆ ಆ ರಾಷ್ಟ್ರವು ಶರಣಾಗತವಾಗಬೇಕಾಯಿತು. ಬೆಲ್ಜಿಯಮ್‌ದಲ್ಲಿ ಬ್ರಿಟಿಷ, ಫ್ರೆಂಚ ಸೈನ್ಯಗಳ ಸಹಾಯ ಮತ್ತು ವಿಮಾನ ಪಡೆಗಳ ಸಹಾಯದಿಂದ ಯುದ್ಧವು ತೀಕ್ಷ್ಣವಾಗಿ ನಡೆಯಿತು. ಆದರೆ ಒಮ್ಮೆಲೇ ಬೆಲ್ಜಿಯಮ್‌ದ ಅರಸನು ವಿಶ್ವಾಸಘಾತುಕತನದಿಂದ ಜರ್ಮನರೊಡನೆ ಒಪ್ಪಂದವಾಡಿ ತನ್ನ ಸೈನ್ಯವನ್ನು ಹಿಂದೆ ತೆಗೆದುಕೊಂಡುದರಿಂದ ಬ್ರಿಟಿಷ ಮತ್ತು ಫ್ರೆಂಚ ಸಹಾಯಕ ಸೈನ್ಯದಲಗಳು ತೀರ ಗಂಡಾಂತರದಲ್ಲಿ ಬಿದ್ದಂತಾಯಿತು. ಜರ್ಮನಿಯ ಸಶಸ್ತ್ರ ಸೈನ್ಯ, ವಿಮಾನಪಡೆಗಳ ಹೊಯಲಿಗೆ ಈ ಸೈನ್ಯಗಳು ಗುರಿಯಾದವು. ಸುತ್ತುಗಟ್ಟಿದ ಈ ಪ್ರಚಂಡ ಸೈನ್ಯದೊಡನೆ ಯುದ್ಧ ಬೆಳೆಸುವದು ಅಸಾಧ್ಯವಾಯಿತು. ಹೀಗಾಗಿ ಅತುಲ ಪರಾಕ್ರಮದಿಂದ ಕಾದಾಡಿ, ಆರ್. ಎ. ಎಫ್. ವಿಮಾನಗಳ ಸಹಾಯದಿಂದ, ಕ್ಯಾಲೆ, ಡನ್ಕರ್ಕ ಬಂದರುಗಳನ್ನು ಸೇರಿ ಬ್ರಿಟಿಷರ ಹಡಗುಗಳ ಸಹಾಯದಿಂದ ಈ ಸೈನ್ಯಗಳ ಹೆಚ್ಚಿನ ಭಾಗವು ಇಂಗ್ಲಂಡಕ್ಕೆ ವೈಯ್ಯಲ್ಪಟ್ಟಿತು.

೫. ಮುಂದೆ ಜರ್ಮನ್ನರದಂಡುಗಳು ಫ್ರಾನ್ಸ್‌ದಮೇಲೆ ಅತಿ ಭೀಕರವಾದ ಯುದ್ಧವನ್ನು ನಡೆಯಿಸಿದವು. ೯೪ಮೈಲು ವಿಸ್ತಾರಕ್ಕೆ ತನ್ನ ಸೈನ್ಯವನ್ನು ಹರವಿ, ಫ್ರೆಂಚ ಸೈನ್ಯ ಭಾಗಗಳು ಒಂದಕ್ಕೊಂದು ಯುದ್ಧಮಾಡಿ ಜರ್ಮನ್ ಸೈನ್ಯವು ಮುನ್ನುಗ್ಗಲಪತ್ತಿತು. ಎರಡೂ ಪಕ್ಷದ ಸೈನ್ಯಗಳಿಗೂ ಅಪಾರಹಾನಿಯಾಯಿತು.

ಕೊನೆಗೆ ಫ್ರಾನ್ಸ್‌ನ ಬಹುಭಾಗವು ಜರ್ಮನ್ ಬಾಂಬುಗಳಿಂದ ನಾಶವಾದುದರಿಂದಲೂ, ಸಾಕಷ್ಟು ಸೈನ್ಯಸಂಗ್ರಹವಿಲ್ಲದ್ದರಿಂದಲೂ, ಇದ್ದ ತಮ್ಮ ಸೈನ್ಯವು ಹೋರಾಡಿ, ಹೋರಾಡಿ, ದಣಿದು ಮುಂದುಗಾಣದಂತಾದ್ದರಿಂದಲೂ, ಹೊರಗಿನಿಂದ ಸಾಕಷ್ಟು ಸಹಾಯವು ದೊರೆಯದ್ದರಿಂದಲೂ ಫ್ರಾನ್ಸ್‌ನಲ್ಲಿ ಹೊಸ ಸರಕಾರದ ಸ್ಥಾಪನೆಯಾಗಿ ಹೊಸ ಸರಕಾರವು ಹಿಟ್ಲರ, ಮತ್ತು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಸೇರಿದ ಇಟಾಲಿಯ ಮುಸ್ಸಲೋನಿ ಇವರೊಡನೆ ಒಪ್ಪಂದವನ್ನು ಮಾಡಿಕೊಂಡು ಅವರಿಗೆ ಶರಣಾಗತವಾಯಿತು. ಆದರೆ ಈ ಒಪ್ಪಂದಕ್ಕೆ ಬಹುತರ ಎಲ್ಲಾ ವಸಾಹತುಗಳ ಫ್ರೆಂಚರೂ ಮತ್ತು ಇಂಗ್ಲೆಂಡದಲ್ಲಿರುವ ಫ್ರೆಂಚ ಜನರೂ ಒಪ್ಪಿಗೆಕೊಡದೆ, ತಾವು ಬ್ರಿಟಿಷರೊಡನೆ ಸೇರಿ ತಮ್ಮ ಸ್ವಾತಂತ್ರ್ಯದ ಯುದ್ಧವನ್ನು ಮುಂದರಿಸುವೆವೆಂದು ಘೋಷಿಸಿದರು. ಈ ಹೊಸದಾಗಿ ನಿರ್ಮಿತವಾದ ಪಿಟೈನ ಸರಕಾರವು ಬ್ರಿಟಿಷರ ಕೋರಿಕೆಯಂತೆ ಫ್ರೆಂಚರ ಯುದ್ಧದ ಹಡಗುಪಡೆ ಮತ್ತು ವಿಮಾನ ಪಡೆಗಳನ್ನು ತಮ್ಮ ಅಥವಾ ಯುದ್ಧದಲ್ಲಿ ಸೇರದ ಅಮೇರಿಕೆಯ ಸಂಯುಕ್ತ ಸರಕಾರಕ್ಕೆ ಒಪ್ಪಿಸಿ ಒಪ್ಪಂದಮಾಡಬೇಕೆಂಬ ಕರಾರಿಗೆ ಒಪ್ಪಲಿಲ್ಲ. ಹೀಗಾಗಿ ಬ್ರಿಟಿಷರು ಯುದ್ಧಮಾಡದೆ ತಮ್ಮ ಕೈವಶಕ್ಕೆ ಬಂದ ಫ್ರೆಂಚಹಡಗುಗಳನ್ನು ತಮ್ಮದಾಗಿ ಮಾಡಿ, ಮಧ್ಯಸಮುದ್ರದಲ್ಲಿ ಇದ್ದ ಅವರ ಹಡಗುಪಡೆಯು ಇದಕ್ಕೆ ಒಪ್ಪದ್ದರಿಂದ ತಮ್ಮ ನೌಕಾ ಮತ್ತು ವಿಮಾನಪಡೆಯನ್ನು ಕಳುಹಿಸಿ, ಅವರೊಡನೆ ಯುದ್ಧಮಾಡಿ, ಅವುಗಳಲ್ಲಿ ಕೆಲವನ್ನು ನಾಶಪಡಿಸಿದರು. ಹೀಗಾಗಿ ಬ್ರಿಟನ್ ದೇಶವೊಂದೇ ಎದುರು ನಿಂತು ಜರ್ಮನಿ ಮತ್ತು ಇಟಲಿಯೊಡನೆ ಯುದ್ಧಮಾಡುವ ಪ್ರಸಂಗವು ಒದಗಿ ಬಂತು.

ಬ್ರಿಟನ್ನವು ತನಗೆ ಬೇಕಾದ ವಿಮಾನ ಮತ್ತು ಇತರ ಯುದ್ಧಸಾಮಗ್ರಿಗಳನ್ನು ತಯಾರಿಸಿ, ಈಗ ಎಲ್ಲ ತೆರದಲ್ಲಿಯೂ ಹಿಟ್ಲರನ ಯುದ್ಧಪ್ರವೃತ್ತಿಗೆ ಪ್ರತಿಹಾಕಲು ಸಿದ್ಧವಾಗಿದೆ. ಬ್ರಿಟನ್ನವು ಕಳೆದ ಹತ್ತು, ಇಪ್ಪತ್ತು ದಿವಸಗಳಲ್ಲಿ, ಇಟಲಿಯೊಡನೆ ನಡೆಯಿಸಿದ ನೌಕಾಯುದ್ಧ ಮತ್ತು ವಿಮಾನಯುದ್ಧಗಳಲ್ಲಿ ಮಧ್ಯಸಮುದ್ರದಲ್ಲಿಯೂ, ಉತ್ತರ ಆಫ್ರಿಕದಲ್ಲಿಯೂ ಇಟಾಲಿಯನ್ನರನ್ನು ಸಂಪೂರ್ಣ ಸೋಲಿಸಿ, ಅವರ ಹಡಗು ಮತ್ತು ವಿಮಾನಗಳನ್ನು ನಾಶಪಡಿಸಿ, ಬ್ರಿಟಿಶರ ಹಡಗು ಮತ್ತು ವಿಮಾನಪಡೆಗಳು ಎಷ್ಟು ಉತ್ತಮ ತರಗತಿಯವುವೆಂಬುದನ್ನು ನಿದರ್ಶಿಸಿಯದೆ. ಇದಲ್ಲದೆ ಹಿಟ್ಲರನು ಇಂಗ್ಲೆಂಡದಮೇಲೆ ದಾಳಿಮಾಡಲಿಕ್ಕೂ, ಹಡಗುಗಳನ್ನು ನಾಶಮಾಡಲಿಕ್ಕೂ ಕಳುಹಿಸಿದ ಉತ್ತಮ ತರದ "ಬಾಂಬರ" ಮತ್ತು "ಫೈಟರ" ವಿಮಾನಗಳೊಡನೆ ಕಾದಾಡಿ ಅವುಗಳಲ್ಲಿ

ಹಲವನ್ನು ನಾಶಪಡಿಸಿ, ನೆಲಕ್ಕುರುಳಿಸಿ, ಇಂಗ್ಲಂಡ ದೇಶಕ್ಕೆ ಹೆಚ್ಚಿನ ಹಾನಿಯಾಗದಂತೆ ಮಾಡಿ, ತಮ್ಮ ವಿಮಾನಪಡೆಯಾದರೂ, ನೌಕಾಪಡೆಯಂತೆಯೇ ಅತಿ ಶ್ರೇಷ್ಠವಾದದ್ದು ಎಂಬದನ್ನು ಬ್ರಿಟಿಷ ವೈಮಾನಿಕರು ತೋರಿಸಿರುವರು. ಹಾಗೂ, ಜರ್ಮನಿ, ಹಾಲೆಂಡ್, ಬೆಲ್ಜಿಯಮ್, ಫ್ರಾನ್ಸ್, ನಾರ್ವೆ, ಡೆನ್‌ಮಾರ್ಕ ಮೊದಲಾದ ಹಿಟ್ಲರನ ವಶವರ್ತಿಯಾದ ದೇಶಗಳಲ್ಲೆಲ್ಲಾ, ಯುದ್ಧಸಾಮಗ್ರಿಗಳ ಕಾರಖಾನೆ, ಹಡಗು ಮತ್ತು ವಿಮಾನಗಳ ನಿರ್ಮಾಣ, ಕಲ್ಲೆಣ್ಣೆಯ ಸಂಗ್ರಹಾಲಯ, ರೇಲ್ವೆ ಮಾರ್ಗಗಳು, ಇತರ ಕಾರಖಾನೆಗಳು ಮೊದಲಾದವುಗಳವೇಲೆ ವಿಮಾನಗಳ ದಾಳಿಯನ್ನು ಮಾಡಿ, ಬಾಂಬುಗಳನ್ನು ಒಗೆದು ಜರ್ಮನಿಗೆ ಅಪಾರ ಹಾನಿಯನ್ನು ಮಾಡಿರುವರು. ಹೀಗೆಂದಮೇಲೆ ಜರ್ಮನಿಯು ಇನ್ನು ಮುಂದೆ ಮಾಡತಕ್ಕ ಯುದ್ಧದಲ್ಲಿ ಜರ್ಮನಿಗೆ ಸರಿಸಮಾನವಾಗಿ ಯುದ್ಧ ಮಾಡುವದಲ್ಲದೆ, ಅದನ್ನು ಸೋಲಿಸುವಷ್ಟು ಬ್ರಿಟನ್ನವು ಬಲಾಢ್ಯವಾಗಿದೆ ಎಂತ ತರ್ಕಿಸಬಹುದು. ಇದೂ ಅಲ್ಲದೆ ಇಂಗ್ಲಂಡದಲ್ಲಿಯ ಯುದ್ಧದ ಉಪಕರಣ, ಸಾಮಗ್ರಿಗಳ ಕಾರಖಾನೆಗಳಲ್ಲಿ ಹಗಲು ರಾತ್ರಿ ದುಡಿಯುವ ಜನಸಂಖ್ಯೆಯು ಬೆಳೆದು ಈಗ ಜರ್ಮನಿಯಲ್ಲಿ ಆಗುವಷ್ಟಕ್ಕಿಂತಲೂ ಸ್ವಲ್ಪುಹೆಚ್ಚಾಗಿಯೇ ಇವು ಸಿದ್ಧವಾಗುತ್ತಿವೆ. ವಿಮಾನಯುದ್ಧವನ್ನು ಮಾಡಲಿಕ್ಕೆಬೇಕಾದಸೈನ್ಯ, ಇತರಸೈನ್ಯ, ದೇಶಸಂರಕ್ಷಕ ದಲ, ಇವೇ ಮೊದಲಾದವುಗಳು ಸಜ್ಜುಗೊಂಡಿವೆ. ಕೆನಡಾ, ಆಸ್ಟ್ರೇಲಿಯಾ, ನ್ಯೂಝಿಲೆಂಡ ಮತ್ತು ಅಮೇರಿಕೆಯ ಸಂಯುಕ್ತಪ್ರಾಂತಗಳಿಂದ ಎಲ್ಲಾ ತರದ ಸಹಾಯವು ಬರುತ್ತಲಿದೆ. ಅಂದಮೇಲೆ ಇನ್ನು ಮುಂದಿನ ಯುದ್ಧದ ಪರಿಣಾಮವೇನಾಗಬಹುದೆಂದು ಸಂಶಯಪಡುವ ಕಾರಣವಿಲ್ಲ. ಬ್ರಿಟಿಷರಿಗೆ ಕೊನೆಯಲ್ಲಿ ಜಯವಾಗುವದರಲ್ಲಿ ಏನೂ ಸಂದೇಹವಿಲ್ಲ. ಆದರೆ ಹಿಟ್ಲರನೂ ಬಹುದೇಶಗಳ ಒಡೆಯನಾಗಿ ದೊಡ್ಡ ಸೈನ್ಯಸಂಗ್ರಹದಿಂದ ಕೂಡಿದವನಾದುದರಿಂದ ಅತಿ ಉಗ್ರರೀತಿಯಿಂದ ಯುದ್ಧವನ್ನು ಬೆಳೆಯಿಸುವನು ಎಂಬದರಲ್ಲಿಯೂ ಸಂಶಯವಿಲ್ಲ. ಆಗಸ್ಟ ೧೫ ರೊಳಗಾಗಿ ಬ್ರಿಟನ್ ದೇಶವನ್ನು ಪಾದಾಕ್ರಾಂತವಾಗಿಮಾಡಿ ತನ್ನ ಒಪ್ಪಂದದ ಕರಾರುಗಳನ್ನು ಜಗತ್ತಿನ ಮುಂದಿಡುತ್ತೇನೆಂದು ಹೇಳಿದ ಹಿಟ್ಲರನ ಹೇಳಿಕೆಯು ಬರ್ಲೇ ಬಾಯಿಬಡುಕತನದ್ದೆಂದು ಈಗ ಕಂಡುಬಂದಿರುವದು. ಬ್ರಿಟನ್ನಿನ ಸಿದ್ಧತೆಯನ್ನೂ, ಶ್ರೇಷ್ಠತೆಯನ್ನೂ ನೋಡಿ, ಬ್ರಿಟನ್ನಿನ ವಿರುದ್ಧ ಹೇಗೆ ಯುದ್ಧಮಾಡಬೇಕೆಂಬುದು ಅವನಿಗೆ ಸೂಚಿಸದಂತಾಗಿದೆ. ಅತ್ತ ಕಪಟನಾಟಕಿಯಾದ ರಶಿಯಾದೇಶದ ಸ್ಟಾಲಿನನು ಬಾಲ್ಟಿಕದಂಡೆಗುಂಟಹಬ್ಬಿದ ಪ್ರದೇಶಗಳನ್ನೂ, ರುಮಾನಿಯದ ಭಾಗವನ್ನೂ ವಶಪಡಿಸಿಕೊಂಡು ರಶಿಯನ್ ರಾಷ್ಟ್ರದ ಶಕ್ತಿ, ಭದ್ರತೆಗಳನ್ನು ಸ್ಥಿರಗೊಳಿಸುತ್ತಿದ್ದಾನೆ. ಹಿಟ್ಲರನು ತನ್ನ ಮಿತ್ರನೆಂದು ಈಗ ತೋರಿಸಿಕೊಂಡರೂ, ಮುಂದೆ ಹಾಗೆಯೇ ನಡೆಯಲಾರನೆಂಬ ಶಂಕೆ

ಯಿಂದ ರಶಿಯವು ಈರೀತಿ ಭದ್ರಪಡಿಸಿಕೊಂಡು ಪ್ರಸಂಗ ಒದಗಿದಲ್ಲಿ ಜರ್ಮನಿಯೊಡನೆ ಯುದ್ಧಮಾಡುವದಲ್ಲದೆ, ತನ್ನದೇಮೇಲ್ಗೈಯಾಗಬೇಕೆಂದು ಬಯಸುವದೆಂದರೆ ಅತಿಶಯೋಕ್ತಿಯಾಗದು. ಯುರೋಪಖಂಡದ ಬಾಲ್ಕನ್ ರಾಷ್ಟ್ರಗಳಲ್ಲಿಯ ಅಸಂತುಷ್ಟಿ, ಗಲಿಬಿಲಿಗಳು ಸಹ ಹಿಟ್ಲರನ ಮನಃಶಾಂತಿಯನ್ನು ಕೆಡಿಸಿವೆ. ಇಟೆಲಿಯು ಯುದ್ಧದಲ್ಲಿ ಸೇರಿದ್ದರಿಂದ ಬ್ರಿಟನ್ನಕ್ಕೆ, ಭೂಮಧ್ಯಸಮುದ್ರ, ಉತ್ತರ ಆಫ್ರಿಕಾ, ಸುಯೇಜ ಕಾಲುವೆ ಮುಂತಾದ ಪ್ರದೇಶಗಳಲ್ಲಿ ಹೆಚ್ಚಿನ ತೊಂದರೆ ಮತ್ತು ಹಾನಿಯಾಗಬಹುದೆಂದು ಎಣಿಸಿದ ಹಿಟ್ಲರನ ಯೋಚನೆಯು ಸಹ ನಿಷ್ಫಲವಾಗಿ ನಿರಾಶೆಗೆ ಅವನನ್ನು ಗುರಿಮಾಡಿದೆ. ಹೀಗಾಗಿ ಎತ್ತನೋಡಿದರೂ ಬ್ರಿಟಿಷರ ಕೊನೆಯ ವಿಜಯದ ಕುರುಹುಗಳೇ ಕಂಡುಬರುತ್ತಿವೆ.

ಹೀಗಾದರೂ ಯುದ್ಧವೆಂದರೆ ಅಪಾರ ಹಣಕಾಸಿನ ವೆಚ್ಚ, ಯುದ್ಧೋಪಕರಣಗಳ ಸಂಗ್ರಹ, ಆಹಾರ ಮುಂತಾದವುಗಳ ಸಂಗ್ರಹ ಇವು ಬೇಕೇಬೇಕಾಗುವದು. ಯುದ್ಧವು ಇನ್ನೆಷ್ಟು ದೀರ್ಘಕಾಲದವರೆಗೆ ನಡೆಯಬಹುದೆಂದು ಹೇಳಲು ಸಾಧ್ಯವಿಲ್ಲ. ಈಸಮಯದಲ್ಲಿ ಬ್ರಿಟಿಷರು ಬಲಾಢ್ಯರೂ, ದೊಡ್ಡ ಸಾಮ್ರಾಜ್ಯದ ನೆರವು ಉಳ್ಳವರೂ ಎಂತಲೂ, ನಮ್ಮ ಹಿಂದುಸ್ತಾನಕ್ಕೆ ಬ್ರಿಟಿಷರ ಸಹಾಯವಿರುವವರೆಗೆ ಯಾವತೆರದಿಂದಲೂ ಹೆದರಿಕೆ ಇಲ್ಲವೆಂತಲೂ ಸುಮ್ಮನೆ ಕೈಕಟ್ಟಿ ಕೂತರೆ ಸಲ್ಲದು. ಬ್ರಿಟಿಷರಿಗೆ ನಾವು ಮನಃಪೂರ್ವಕವಾಗಿ ಸಾಧ್ಯವಾದಷ್ಟರಮಟ್ಟಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅವರು ಇಷ್ಟು ವರ್ಷಗಳ ಆಡಳಿತೆಯಲ್ಲಿ ನಮ್ಮ ಹಿಂದುಸ್ತಾನಕ್ಕೆ ಒದಗಿಸಿರುವ ಲಾಭಗಳು, ಸುಧಾರಣೆಗಳು ಮತ್ತು ನಮ್ಮ ಹಿಂದುಸ್ತಾನಕ್ಕೆ ಕೊಟ್ಟ ಶಾಂತಿ, ಸುಖ, ನಾಗರಿಕತೆಗಳು. ಈಗ ನಮ್ಮ ಹಿಂದುಸ್ತಾನದ ರಕ್ಷಣೆ ಮತ್ತು ಹಿತ ಇವು ಬ್ರಿಟಿನ್ನಿನ ಶಕ್ತಿ, ಜಯಗಳಮೇಲೆಯೇ ಅವಲಂಬಿಸಿವೆ ಎಂಬಿವುಗಳನ್ನು ಎಲ್ಲರೂ ಲಕ್ಷದಲ್ಲಿಟ್ಟು, ಕೀಳುತರದ ಸ್ವಾರ್ಥ ಮತ್ತು ದ್ವೇಷಭಾವನೆಗಳನ್ನು ಬದಿಗಿಟ್ಟು, ಒಮ್ಮನಸ್ಸಿನಿಂದ ಎಲ್ಲರೂ ಕೂಡಿ ಬ್ರಿಟಿಷ ಸರಕಾರಕ್ಕೆ ಎಲ್ಲ ತರದ ಸಹಾಯವನ್ನೀವುದು ಅತಿ ಆಗತ್ಯವಾದದ್ದು.

•

ಇಂತಹ ಕೋಟಿಗಟ್ಲೆ ಪೌಂಡುಗಳ ವೆಚ್ಚವಾಗುವ ಮತ್ತು ನೂತನ ವೈಜ್ಞಾನಿಕ ಶಸ್ತ್ರಾಸ್ತ್ರಗಳ ಮೂಲಕ ನಡೆಯುವ ಯುದ್ಧದಲ್ಲಿ ಬಡಹಿಂದುಸ್ತಾನದಿಂದ ಏತರ ಸಹಾಯವಾಗಬಹುದು, ಆದರಲ್ಲಂತೂ ಹಳ್ಳಿಗಳಲ್ಲಿ ಕೂಪಮಂಡೂಕದಂತೆ ವಾಸವಾಗಿದ್ದ ಬಡ ಪ್ರಾಥಮಿಕ ಶಿಕ್ಷಕರಿಂದ ಸಹಾಯವೆಷ್ಟಾಗಬಹುದೆಂಬ ವಿಚಾರವು ಮನಸ್ಸಿನಲ್ಲಿ ಬರಬಹುದು. ಆದರೆ ಈ ಸಹಾಯವು ಎಷ್ಟು ಕಡಿಮೆ ತರದ್ದೆಂತ ಕಂಡುಬಂದರೂ,"ಹನಿ ಹನಿ ಕೂಡಿ ಹಳ್ಳ"ವೆಂಬ ಗಾದೆಯ ಮಾತಿನಂತೆ, ಅಲ್ಪಸ್ವಲ್ಪ

ಸಹಾಯಗಳ ಸೇರಿಕೆಯಿಂದ ಸಾಕಷ್ಟುಮಟ್ಟಿನ ಸಹಾಯವಾದಂತಾಗಬಹುದು. ಇದಲ್ಲದೆ ಬ್ರಿಟಿಷರ ಮೇಲೆ ತಮಗೆ ಇದ್ದ ವಿಶ್ವಾಸ, ಪ್ರೀತಿಗಳನ್ನು ತೋರ್ಪಡಿಸುವ ದಕ್ಕೆ ಈ ಸಂಕಟಕಾಲದಲ್ಲಿ ಬ್ರಿಟನ್ ದೇಶಕ್ಕೆ ತಾವು ಕೈಲಾದಮಟ್ಟಿಗೆ ಸಹಾಯ ಮಾಡಿದ್ದೇವೆ ಎಂಬ ಮನೋಭಾವನೆಯಿಂದ ಸುಖ ಶಾಂತಿಗಳನ್ನು ಪಡೆಯ ಬಹುದು; ಹಾಗೂ ನೀತಿ ನ್ಯಾಯಗಳಿಗೆ ಬೆಂಬಲಕೊಟ್ಟು ಅನ್ಯಾಯ. ದುಷ್ಟತನಗಳ ನಾಶಕ್ಕೆ ನೆರವಾಗಿ ನಮ್ಮ ಧರ್ಮ ನೀತಿಗಳನ್ನು ಪಾಲಿಸಿದ್ದೇವೆಂಬ ಸಮಾಧಾನ ವನ್ನು ಹೊಂದಬಹುದು.

ಪ್ರಾಥಮಿಕ ಶಾಲೆಗಳ ಶಿಕ್ಷಕರು ಈ ಯುದ್ಧಕ್ಕೆ ಸಹಾಯವನ್ನು ಹೇಗೆ ಮಾಡಬಹುದೆಂಬದು ಹೆಚ್ಚು ಮಾಡಿ, ಇಷ್ಟರೊಳಗೆ ಎಲ್ಲರಿಗೂ ತಕ್ಕಮಟ್ಟಿಗೆ ತಿಳಿದಿರುವ ಸಂಗತಿಯೇ. ಸಂಗ್ರಹವಾಗಿ ಹೇಳುವುದಾದರೆ, ಶಿಕ್ಷಕರು "ಯುದ್ಧದ ದೇಣಿಗೆ" ಫಂಡಿಗೆ ತಾವು ಹಣ ಕೊಡುವುದಲ್ಲದೆ, ಅದರ ಯೋಗ್ಯ ಉದ್ದೇಶ ಮತ್ತು ಹಿತಗಳನ್ನು ವಿವರಿಸಿ, ಇತರ ಹಳ್ಳಿಗರೂ ಸಹ ಸಾಕಷ್ಟು ಹಣವನ್ನು ಕೊಡುವಂತೆ ಮಾಡಬಹುದು. ಹಿಂದುಸ್ತಾನದ ಸಂರಕ್ಷಣೆಗಾಗಿ ತೆಗೆದ ಸಾಲದ ಬಾಂಡುಗಳನ್ನೂ ೧೦ ರೂಪಾಯಿಯ ಸರ್ಟಿಫಿಕೇಟುಗಳನ್ನೂ ವಿುತವ್ಯಯದಿಂದ ಹಣವನ್ನು ಕಾದಿಟ್ಟು ತಾವು ಕೊಂಡುಕೊಳ್ಳುವದಲ್ಲದೆ, ಇತರರಿಗೂ ಅದರಂತೆ ಮಾಡಲು ಬೋಧಿಸಬಹುದು. ಒಮ್ಮಲೇ ಇಷ್ಟು ಹಣಕೊಟ್ಟು ಈ ಬಾಂಡು ಅಥವಾ ಸರ್ಟಿಫಿಕೇಟುಗಳನ್ನು ಕೊಳ್ಳಲಿಕ್ಕೆ ಆಗದಿದ್ದರೆ ಪ್ರತಿ ತಿಂಗಳಲ್ಲಿ ಸ್ವಲ್ಪ ಹಣವನ್ನು ಕಾದಿಟ್ಟು, ಅದು ಕೂಡಿ, ಬೇಕಾದಷ್ಟು ಹಣ ಸಂಗ್ರಹವಾದಕೂಡಲೆ, ಬಾಂಡ, ಅಥವಾ ಸರ್ಟಿಫಿಕೇಟುಗಳನ್ನು ತಾವು ತೆಗೆದುಕೊಳ್ಳುವದೂ ಬೇರೆ ಯವರೂ ಸಹ ತೆಗೆದುಕೊಳ್ಳುವಂತೆ ಮಾಡುವದೂ ಒಂದು ತರದ ಸಹಾಯ ಮಾಡಿದಂತಾಗುದು. ಬಡ್ಡಿ ಇಲ್ಲದ ಸಾಲಕೊಡಲಿಕ್ಕೆ ಅನುಕೂಲವಿದ್ದವರಿಗೆ ಆ ರೀತಿ ಸಹಾಯ ಮಾಡಲು ಪ್ರೋತ್ಸಾಹಿಸಬಹುದು. ಇದಲ್ಲದೆ ನಾಟಕ, ತಮಾಷೆ, ಪ್ರದರ್ಶನ ಮುಂತಾದವುಗಳಿಂದ ಹಣವನ್ನು ಕೂಡಿಸಿ, ಯುದ್ಧದ ದೇಣಿಗೆಯಾಗಿ ಕೊಡಬಹುದು. ರೆಡ್‌ಕ್ರಾಸ್ ಮಗ್ಗೈರೆ ಫಂಡುಗಳಿಗೆ ಹಣವನ್ನು ಕೂಡಿಸಿ ಕೊಟ್ಟು, ಯುದ್ಧದಲ್ಲಿ ಗಾಯಪಡೆದ ಅಥವಾ ಅನಾಥರಾದವರಿಗೆ ಸಹಾಯವನ್ನು ಮಾಡ ಬಹುದು. ಯುದ್ಧದಲ್ಲಿ ತೊಡಗಿದ ಹಿಂದುಸ್ಥಾನದ ಸೈನಿಕರಿಗೆ ಬೇಕಾದ ಆಹಾರ, ವಸ್ತ್ರ ಮೊದಲಾದವುಗಳ ಪೂರೈಕೆಗಳ ಕೆಲಸದಲ್ಲಿ ಸಹಾಯಮಾಡಬಹುದು, ಮಾಡಿಸ ಬಹುದು. ಯುದ್ಧದಲ್ಲಿ ಯಾವದೇತರದ ಶಾರೀರಿಕ ಸಹಾಯ ಮಾಡಲು ಯೋಗ್ಯ ರಿದ್ದವರಿಗೆ ಪ್ರೋತ್ಸಾಹಿಸಿ, ಸೈನ್ಯಕ್ಕೆ ಸೇರುವಂತೆ ಮಾಡಬಹುದು. ನಗರ ಸಂರಕ್ಷ ಣೆಯ ಕೆಲಸದಲ್ಲಿ 'ಪೋಲೀಸರ" ಬದಲಾಗಿ ಕೆಲಸ ಮಾಡುವ "ಸಿವಿಕ್ ಗಾರ್ಡ್"

ಎಂಬ ಸ್ವಯಂಸೇವಕರ ದಲದಲ್ಲಿ ತಾವು ಸೇರುವದಲ್ಲದೆ, ಇತರರನ್ನೂ ಸೇರಲು ಪ್ರೋತ್ಸಾಹಿಸಬಹುದು.

ಹಳ್ಳಿಗರು ಅಜ್ಞರಿದ್ದು, ಯುದ್ಧದ ವಿಷಯಕ್ಕೆ ಏನೂ ಜ್ಞಾನವಿಲ್ಲದ್ದರಿಂದ ಅವರಿಗೆ ನಿಜವಾದ ಯುದ್ಧದ ಪರಿಸ್ಥಿತಿಯನ್ನು ತಿಳಿಯ ಹೇಳಿ, ಅವರಲ್ಲಿರುವ ಸುಳ್ಳು ಬೆದರಿಕೆಯನ್ನು ಹೋಗಲಾಡಿಸಬಹುದು. ಮತ್ತು ಅವರಲ್ಲಿದ್ದ ಧೈರ್ಯ ಮತ್ತು ಸರಕಾರದಲ್ಲಿಯ ವಿಶ್ವಾಸವನ್ನು ದೃಢಪಡಿಸಬಹುದು. ಬ್ರಿಟಿಷರ ಈಗಿನ ಯುದ್ಧದಲ್ಲಿಯ ಸಿದ್ಧತೆ ಮತ್ತು ಅವರಿಗೆ ನಿಸ್ಸಂದೇಹವಾಗಿ ಇದರಿಂದ ಪ್ರಾಪ್ತಿಯಾಗತಕ್ಕಂಥ ಜಯದ ವಿಷಯವನ್ನು ವಿವರಿಸಿ ಹೇಳಿ ಹಳ್ಳಿಗರಲ್ಲಿಯ ನಿರಾಶೆಯನ್ನು ಹೋಗಲಾಡಿಸಬಹುದು. ಸರಕಾರದ ಅಹಿತವನ್ನು ಬಗೆದು ಅಜ್ಞ ಹಳ್ಳಿಗರಲ್ಲಿ ನಾನಾತರದ ಸುಳ್ಳುಸುದ್ದಿಗಳನ್ನು ಹರಡಿ, ಬ್ಯಾಂಕುಗಳು ನೋಟುಗಳು ಬಾಂಡುಗಳು ಏನೂ ಉಪಯೋಗ ಬೀಳಲಾರವು ಎಂತ ಬೆದರಿಕೆಯನ್ನು ಹುಟ್ಟಿಸಿ ಅವರಲ್ಲಿ ವಿಕಲ್ಪಗಳನ್ನು ತಂದೊಡ್ಡಿ, ಗಲಿಬಿಲಿಯನ್ನು ಎಬ್ಬಿಸಲುದ್ಯುಕ್ತರಾದ ಹಲಕೆಲಸರ ದುಷ್ಪ್ರೇಧೆಗೆ ಬಲಿಬೀಳದಂತೆ ಮಾಡುವ ಉದ್ದೇಶದಿಂದ ಹಳ್ಳಿಗರ ಸಭೆಕೂಡಿಸಿ ವ್ಯಾಖ್ಯಾನ ಭಾಷಣಗಳ ಮುಖಾಂತರ ಅವರಲ್ಲಿರುವ ಈ ಮೂಢ ಕಲ್ಪನೆಗಳನ್ನು ಹೊರಗೆಡವಬಹುದು. ಒಟ್ಟಾರೆ ಎಲ್ಲಾ ರೀತಿಯಲ್ಲಿ ವಿತ್ತಸಹಾಯ, ಜನಸಹಾಯ, ವ್ಯಾಖ್ಯಾನಗಳ ಮುಖಾಂತರ ಮಾನಸಿಕ ಸಹಾಯ, ಉಪದೇಶಗಳ ಮುಖಾಂತರ ನೈತಿಕ ಸಹಾಯವನ್ನು ನಮ್ಮ ಶಿಕ್ಷಕ ಶಿಕ್ಷಿಕೆಯರು ಮಾಡಬಹುದು.

ಪ್ರಾಥಮಿಕ ಶಿಕ್ಷಣದ ಪ್ರಸಾರವೂ 'ಶಿಫ್ಟ್' ಪದ್ಧತಿಯೂ

ಶ್ರೀ. ಎಸ್. ಆರ್. ತಾವಡೆ, ಎಮ್. ಎ., ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದ. ಭಾ. ಅವರಿಂದ

ನಮ್ಮ ದಕ್ಷಿಣಭಾಗದ ಎಲ್ಲ ಜಿಲ್ಲಾ ಸ್ಕೂಲ್ ಬೋರ್ಡುಗಳು 'ಶಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರಲು ಹವಣಿಸಿರುವವು. ಧಾರವಾಡ ಜಿಲ್ಲಾ ಸ್ಕೂಲ್ ಬೋರ್ಡು ಈ ವಿಷಯದಲ್ಲಿ ಮುಂದಡಿಯಿಟ್ಟಿದೆ. ಮತ್ತು ಈ ಬೋರ್ಡಿನಲ್ಲಿ ಈಗಾಗಲೆ ೧೨ ಸಾವಿರ ವಿದ್ಯಾರ್ಥಿಗಳನ್ನು ಹೆಚ್ಚಿಗೆ ಹೆಸರು ಹಚ್ಚಿಕೊಳ್ಳಲಾಗಿದೆಯಂತೆ. ಈ ಜಿಲ್ಲೆಯಲ್ಲಿ ಪ್ರತಿವರ್ಷವೂ ೮–೧೦ ಸಾವಿರದಂತೆ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯುತ್ತ ಸಾಗಿರುವದು. ಆದರೆ ಈ ವರ್ಷ ಪ್ರತಿವರ್ಷದಂತೆ ಹೆಚ್ಚುವ ೮–೧೦ ಸಾವಿರ ಸಂಖ್ಯೆಯಲ್ಲದೆ ಈ ಶಿಫ್ಟ ಪದ್ಧತಿಯನ್ನು ಪ್ರಾರಂಭಿಸಿದ್ದರಿಂದಲೇ ಇನ್ನೂ

೧೨ ಸಾವಿರ ವಿದ್ಯಾರ್ಥಿಗಳನ್ನು ಹೆಚ್ಚಿಗೆ ಸೇರಿಸಿಕೊಳ್ಳಲು ಅನುಕೂಲವಾಯಿತಂತೆ. ಇದೇನು ಸಾಮಾನ್ಯ ಲಾಭವೋ? ಬೋರ್ಡಿಗೆ ಹೆಚ್ಚಿನ ವೆಚ್ಚವಿಲ್ಲದೆ ಇಷ್ಟು ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾದಾನಮಾಡಿದ ಶ್ರೇಯಸ್ಸನ್ನು ದೊರೆದಂತಾಯಿತಲ್ಲವೇ? ಶಿಫ್ಟ್ ಪದ್ಧತಿಯಿಂದ ಉಳಿಯುವ ಹೆಚ್ಚಿನ ಶಿಕ್ಷಕರನ್ನು ಕೆಲಸದಿಂದ ದೂರಮಾಡುವರೆಂದು ಯಾರೂ ತಪ್ಪುತಿಳುವಳಿಕೆ ಮಾಡಿಕೊಳ್ಳಲಾಗದು.

ಹೀಗೆ 'ಶಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರುವದರಿಂದ ಹಿಂದಿನ ಲೇಖನದಲ್ಲಿ ಹೇಳಿದಂತೆ (೧) ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವದು. (೨) ಸ್ಥಳ ಸಂಕೋಚದ ಅಡಚಣೆಯನ್ನು ದೂರಮಾಡುವದು. (೩) ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಶಿಕ್ಷಕರನ್ನು ಪೂರೈಸುವದು. (೪) ಶಿಕ್ಷಣದ ಕೆಲಸದಲ್ಲಿ ಅನುಕೂಲತೆ. (೫) ಪಾಲಕರಿಗೆ ಸಹಾಯ ಎಂಬ ಐದು ಮುಖ್ಯ ಸೌಕಾರ್ಯಗಳುಂಟಾಗುವವಾದರೂ ಅದರಲ್ಲಿ ಕೆಲವೊಂದು ತಾತ್ಪೂರ್ತಿಕ ಅಡಚಣೆಯು ಬಂದು ಶಿಕ್ಷಕರನ್ನು ಎದೆಗೆಡಿಸಲು ಕಾರಣವಾಗಬಹುದು. ಬಾಲಕರ ವರ್ಗ ಮತ್ತು ಮೊದಲನೆಯ ಇಯತ್ತೆಗಳಲ್ಲಿ ಶಿಫ್ಟ ಪದ್ಧತಿಯನ್ನು ಪ್ರಚಾರದಲ್ಲಿ ತಂದರೆ ಬಾಲಕರ ಹಾಜರಿಯು ಅವ್ಯವಸ್ಥಿತವಾಗುವದು. ಹಳ್ಳಿಗಳಲ್ಲಿ ಶಾಲೆಗೆ ಬರುವದಕ್ಕೆ ಈ ತರಗತಿಗಳ ವಿದ್ಯಾರ್ಥಿಗಳಿಗೆ ಹುರುಪು ಇರುವದಿಲ್ಲ, ಇಷ್ಟೇ ಅಲ್ಲ,ಶಾಲೆಗೆ ಬರುವಾಗ ಅವರೊಡನೆ ಇನ್ನೊಬ್ಬರು ಬರಬೇಕಾಗುವ ಸಂದರ್ಭಗಳೂ ಉಂಟು. ಯಾವ ಬಾಲಕರು ಮುಂಜಾನೆ ಬರಬೇಕು ಯಾವ ಬಾಲಕರು ಮಧ್ಯಾಹ್ನ ಬರಬೇಕು. ಎಂಬುದರ ನಿರ್ಣಯವೇ ಆಗದೆ ಕೆಲವರು ಎರಡೂ ತೊತ್ತು ಬಂದರೆ ಕೆಲವರು ಒಂದೂ ಹೊತ್ತು ಬರದೆ ಸಾಲೆಯನ್ನೇ ತಪ್ಪಿಸುವರು. 'ಶಿಫ್ಟ್' ಪದ್ಧತಿಯನ್ನು ಪ್ರಾರಂಭಿಸಿದ ಹಳ್ಳಿಗಳ ಶಿಕ್ಷಕರಲ್ಲಿ ಕೆಲವರು ಇಂಥ ಅನೇಕ ದೂರುಗಳನ್ನು ಅಡಿಕೊಳ್ಳುವದು ನಮ್ಮ ಕಿವಿತನಕ ಬಂದಿದೆ. ಸಂತೆಯ ದಿವಸ ಒಪ್ಪೊತ್ತು ಸಾಲೆ ನಡೆಯುವದರಿಂದ ಆ ದಿವಸ ಬಾಲಕರ ವರ್ಗದ ಕೆಲವರು ವಿದ್ಯಾರ್ಥಿಗಳು ೭ರಿಂದ ೮-೩೦ರ ವರೆಗೂ ವಿುಕ್ಕವರು ೮-೩೦ರಿಂದ ೧೦ರ ವರೆಗೂ ಸಾಲೆಗೆ ಬರಬೇಕೆಂದು ಹೇಳಿದೆವೆಂದು ತಿಳಿಯೋಣ. ಹಳ್ಳಿಯ ಹುಡುಗರು ಸಾಲೆಗೆ ಬರುವಾಗಲೇ ತಡಮಾಡುವರು; ಅದ್ದರಿಂದ ಮೊದಲಿನ ವಿಭಾಗದವರು ಸಾಲೆಗೆ ಬರುವಷ್ಟರಲ್ಲಿಯೇ ವೇಳೆಯು ೮-೩೦ಕ್ಕೆ ಸವಿೀಪಿಸುವದು. ಅವರನ್ನು ಬಿಟ್ಟು ಎರಡನೆಯ ಗುಂಪಿನವರ ಅಭ್ಯಾಸವನ್ನು ಪ್ರಾರಂಭಿಸುವಷ್ಟರಲ್ಲಿ ಈ ಎರಡನೆಯ ಗುಂಪಿನವರು ಬಂದಿರುವದೇ ಇಲ್ಲ. ಹಳ್ಳಿಯವರಿಗೆ ವೇಳೆಯ ನಿಯಮಿತತನದ ಅರಿವಿರುವದಿಲ್ಲ. ಇದೂ ಅಲ್ಲದೆ ಮುಂಜಾನೆ ಮಧ್ಯಾಹ್ನ ಹೀಗೆ 'ಶಿಫ್ಟ್' ಕ್ರಮವನ್ನು ಆರಂಭಿಸಿದಾಗ ಯಾವ ಹುಡುಗರ ಸರತಿ ಮುಂಜಾನೆ ಇರಬೇಕು? ಯಾವ ಬಾಲಕರ ಸರತಿ

ಮಧ್ಯಾಹ್ನ ಇರಬೇಕು ಎಂಬದನ್ನು ನಿರ್ಣಯಿಸುವಲ್ಲಿಯೇ ಮೊದಲನೆಯ ಅಡಚಣೆ ಬರುವದು. ಒಂದು ಓಣಿಯ ಬಾಲಕರನ್ನು ಮುಂಜಾನೆ ಕರೆದರೆ ಇನ್ನೊಂದ ಓಣಿಯವರನ್ನು ಮಧ್ಯಾಹ್ನ ಕರೆಯಬಹುದು. ಅದರಲ್ಲಿಯೂ ತೊಂದರೆಯುಂಟು

ಅದೂ ಅಲ್ಲದೆ ಈ ವರ್ಷದಿಂದ ಬಾಲಕರ ವರ್ಗ ಮತ್ತು ಮೊದಲನೆಯ ಇಯತ್ತೆಗಳಿಗೆ ಹೊಸ ಅಭ್ಯಾಸ ಕ್ರಮವು ಪ್ರಾರಂಭವಾಗಿದೆ. ಈ ಅಡಚಣೆಯಲ್ಲಿಯೇ 'ಶಿಫ್ಟ' ಪದ್ಧತಿಯೂ ಒಂದು ನಮ್ಮ ಕೈಕಾಲುಗೆಡಿಸಿದೆ. ಎಂಬ ಇನ್ನೊಂದು ಅಡಚಣೆಯು ಮಾತು ಶಿಕ್ಷಕರಿಂದ ನಮ್ಮ ಕಿವಿಗೆ ಮುಟ್ಟಿದೆ. ಈ ಮಾತಿನಲ್ಲಿ ವಿಶೇಷ ಅರ್ಥವಿಲ್ಲ. ಹೊಸ ಅಭ್ಯಾಸ ಪತ್ರಿಕೆಯು ಶಿಕ್ಷಕರು ತಿಳಿದ ಕೊಳ್ಳುವಂತೆ ತೀರ ಹೊಸದಲ್ಲ. ಓದು ಬರೆಹ ಗಣಿತ ಮುಂತಾದ ಈ ವಿಷಯಗಳ ಹಿಂದೆ ಇರುವಂತೆಯೇ ಈಗಲೂ ಇವೆ. ಬಾಲಕರಿಗೆ ಧೈರ್ಯದಿಂದ ಮಾತಾಡಲಿಕ್ಕೆ ಕಲಿಸಿರಿ; ಕೇವಲ ಯಾಂತ್ರಿಕವಾಗಿ ಪಾಠಸಾಗಿಸದೆ ಬಾಲಕರಿಗೆ ನಿಜವಾದ ಜ್ಞಾನ ವಾಗುವಂತೆ ಕಲಿಸಿರಿ, ಎಂದ ಮಾತ್ರಕ್ಕೆ ಅದು ಹೊಸ ಅಭ್ಯಾಸ ಪತ್ರಿಕೆಯಾಗಲಾರದು. ಉದಾ: **ವಾಚನ.** "ಶಿಕ್ಷಕನು ಕರಿಯ ಹಲಗೆಯ ಮೇಲೆ ಬರೆದಾಗಲಿ ಬಾಲಕರಿಗೆಲ್ಲ ವಾಚನ ಪಟಗಳನ್ನು ಕೊಟ್ಟಾಗಲಿ ಪ್ರಾಮುಖ್ಯವಾಗಿ ವಾಕ್ಯ ಪದ್ಧತಿಯಿಂದ ವಾಚನವನ್ನು ಕಲಿಸುವದು." ಇದು ಹೊಸ ಅಭ್ಯಾಸ ಪತ್ರಿಕೆಯೊಳಗಿನ ಬಾಲಕರ ವರ್ಗಕ್ಕೆ ವಾಚನವನ್ನು ಕಲಿಸುವ ವಿಚಾರದಲ್ಲಿ ಹೇಳಿದ ಮಾತು. "ಬಾಲಬೋಧಿನಿಯನ್ನು ಓದುವದು" ಎಂದು ಹಳೆಯ ಅಭ್ಯಾಸಪತ್ರಿಕೆಯಲ್ಲಿ ಇತ್ತು. ಹೀಗೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು

ಶಿಕ್ಷಕರು 'ಶಿಫ್ಟ' ಪದ್ಧತಿಯನ್ನು ಧೈರ್ಯದಿಂದಲೂ ಉತ್ಸಾಹದಿಂದಲೂ ಪ್ರಾರಂಭಿಸಬೇಕು. ಯಾವದೊಂದು ಹೊಸ ಪ್ರಯೋಗವನ್ನು ಪ್ರಾರಂಭಿಸುವಾಗ ಪ್ರಯೋಗ ಮಾಡುವವರು ತುಸು ಹೆಚ್ಚು ಶ್ರಮವಹಿಸಬೇಕಾಗುವದುಂಟು ತಮಗೆ ರೂಢಿಯಾಗದಿರುವ ಹೊಸದೊಂದು ಕ್ರಮದಿಂದ ಕೆಲಸವನ್ನು ಪ್ರಾರಂಭಿಸುವಾಗ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಎನೇನೋ ಎಡಚುಎಡಚಾಗಿ ತೋರುವದು ಸ್ವಾಭಾವಿಕವೇ ಸರಿ. ಆದರೆ ಕೆಲವು ದಿವಸಗಳವರೆಗೆ ರೂಢಿಯಾಯಿತೆಂದರೆ ಈ ಎಲ್ಲ ಅಪೆತಡೆಗಳು ತಾವಾಗಿ ದೂರಾಗುವವು. ಹಳ್ಳಿಗಳಲ್ಲಿ ಒಕ್ಕಲು ಮಕ್ಕಳಿಗೆ ವೇಳೆಯ ಜ್ಞಾನವಿರುವದಿಲ್ಲವೆಂಬ ನೆವವು ಸರಿಯಲ್ಲ. ಅವರ ಜೀವನದ ಎಲ್ಲ ಕೆಲಸಗಳು ನಿಯಮಿತವಾಗಿ ಸಾಗೇ ಸಾಗುತ್ತವೆ. ಒಕ್ಕಲಿಗರಷ್ಟೇ ಏಕೆ ಅವರ ದಸಕರುಗಳಿಗೂ ವೇಳೆಯ ತಿಳಿವಳಿಕೆಯಿರುತ್ತಿದೆ. ಹೊಲಕ್ಕೆ ಹೋದ ದನಗಳು ವೇಳೆಗೆ ಸರಿಯಾಗಿ ಮನೆಗೆ ಬರುವವು. ಮನೆಯಲ್ಲಿದ್ದ ಆಕಳ ಕರುವು ತಾಯಿಯನ್ನು

ಬರುವ ವೇಳೆಯಾದ ಕೂಡಲೆ ಅಥವಾ ಹಿಂಡಿಕೊಳ್ಳುವ ಹೊತ್ತಾದ ಕೂಡಲೆ ಕೂಗುವದು. ರೈತರ ದನಗಳಿಗೆ ಅವರವರ ಹೊಲದ ದಾರಿಗಳು ಗೊತ್ತಾಗಿರುವವು. ಮನೆಯಿಂದ ಬಿಟ್ಟಕೂಡಲೆ ಹೊಲಕ್ಕೂ ಹೊಲದಿಂದ ಕೆಲಸ ತೀರಿದ ಬಳಿಕ ತಿರುವಿ ಬಿಟ್ಟಕೂಡಲೆ ತಿರುಗಿ ಮನೆಗೂ ಅವು ತಾವಾಗಿಯೇ ಬರುವದುಂಟು. ನಾಯಿಯಂತೂ ಹೊಲಕ್ಕೆ ತಾನಾಗಿ ಹೋಗಿಬರುವದು. ಪ್ರಾಣಿಗಳಿಗೂ ಈ ಬಗೆಯ ಅರಿವಾಗಿರುವಾಗ ಹಳ್ಳಿಯ ಹುಡುಗರಿಗೆ ವೇಳೆಯ ಜ್ಞಾನವಾಗುವದಿಲ್ಲ; ಮುಂಜಾನೆ ಕರೆದವರು ಮಧಾಹ್ನ ಬರುವರು; ಮಧ್ಯಾಹ್ನ ಕರೆದವರು ಬೆಳಿಗ್ಗೆ ಬರುವರು ಎಂದರೆ ಅರ್ಥವೇನು ? ಶನಿವಾರ ಮೊದಲಾದ ಒಪ್ಪೊತ್ತೇ ಸಾಲೆಯು ಇರುವ ದಿವಸ ಒಂದು ವಿಭಾಗದವರಿಗೆ ಒಂದು ವಾರ ಪೂರಾ ರಜೆಯನ್ನು ಕೊಟ್ಟು ಇನ್ನೊಂದು ಭಾಗದವರಿಗೆ ಅದರ ಮುಂದಿನ ವಾರ ಪೂರಾ ರಜೆಯನ್ನು ಕೊಡಬಹುದು. ಯಾವ ಕೆಲಸಕ್ಕೂ ಕೆಲವು ದಿನಗಳ ಅಭ್ಯಾಸ ರೂಢಿಗಳು ಬೇಕೇ ಬೇಕು. ಅಲ್ಲಿಯವರೆಗೂ ಶಿಕ್ಷಕರು ಸ್ವಲ್ಪ ಶಾಂತಿ ಸಮಾಧಾನಗಳಿಂದಲೂ ಸಹಾನುಭೂತಿಯಿಂದಲೂ ನಡೆದುಕೊಳ್ಳಬೇಕು. ಮಧ್ಯಾಹ್ನ ಬರಬೇಕಾದ ಬಾಲಕನು ಮುಂಜಾನೆ ಬಂದರೆ ಕೂಡಲೆ ಹಚಾ ಹುಚಾ ಮಾಡಿ ಅವನನ್ನು ಮನೆಗೆ ಕಳಿಸಬಾರದು. ಹೀಗೆ ಮಾಡಿದರೆ ಬಾಲಕರ ಮತ್ತು ಅವರ ಪಾಲಕರ ಇವರಿಬ್ಬರ ಸಹಾನುಭೂತಿಯೆನ್ನೂ ಶಿಕ್ಷಕರು ಕಳೆದುಕೊಳ್ಳುವರು. ಹೀಗೆ ತಪ್ಪಿ ಬಂದ ಹುಡುಗರನ್ನೂ ವರ್ಗದಲ್ಲಿ ಕೂಡ್ರಿಸಿಕೊಳ್ಳಬೇಕು. ಅವರಿಗೆ ಸಾಲೆಗೆ ಬರಬೇಕಾದ ವೇಳೆಯನ್ನು ಪುನಃಪುನಃ ತಿಳಿಯಹೇಳಬೇಕು. ಒಮ್ಮೆ, ಎರಡು ಸಾರೆ, ಮೂರು ಸಾರೆ, ತಪ್ಪಾಗಬಹುದು. ನಾಲ್ಕನೆಯ ಸಾರೆಯೂ ಆ ತಪ್ಪು ತಿದ್ದಿಕೊಳ್ಳದಂಥ ಬಾಲಕರನ್ನು ಅಪರೂಪವಾಗಿ ಕಾಣಬಹುದು.

ಬಾಲಕರ ಅಭ್ಯಾಸದ ವಿಷಯದಲ್ಲಿಯೂ ತಕ್ಕ ಸಮಾಧಾನವನ್ನು ಹೇಳಬಹುದು. ಬಾಲಕರ ವರ್ಗ ಮತ್ತು ಮೊದಲನೆಯ ಇಯತ್ತೆಗಳ ಅಭ್ಯಾಸಗಳು ಒಂದು ಇಡಿಯ ವರ್ಷ ಸಾಗಿಸುವಷ್ಟು ಮೊದಲೂ ಇದ್ದಿಲ್ಲ, ಈಗಲೂ ಇಲ್ಲ. ಒಂದೇ ವರ್ಷದಲ್ಲಿ ಈ ಎರಡೂ ವರ್ಗಗಳ ಅಭ್ಯಾಸವನ್ನು ಯಾವ ತೊಂದರೆಯೂ ಇಲ್ಲದೆ ಕಲಿಸಿ ಮುಗಿಸಿದ ಅನುಭವವು ನಮಗಂತೂ ಇದ್ದೇ ಇದೆ. ನಮ್ಮಂತೆ ಹೆಚ್ಚು ಉತ್ಸಾಹಿಗಳಾದ ಶಿಕ್ಷಕರಿಗೂ ಇರುವದು. ಶಿಕ್ಷಕರು ತಮ್ಮ ಮಕ್ಕಳಿಗಂತೂ ಈ ಎರಡು ವರ್ಷಗಳ ಅಭ್ಯಾಸವನ್ನು ಅವರ ೫–೬ನೆಯ ವಯಸ್ಸಿನಲ್ಲಿಯೇ ಮುಗಿಸಿ ಬಿಟ್ಟಿರುವದನ್ನು ಬಹುದೊಡ್ಡ ಪ್ರಮಾಣದಿಂದ ಕಾಣಬಹುದು. ಲೋಕಲ್ ಬೋರ್ಡ ಶಾಲೆಗಳಿಗೆ ಬರುವ ಬಾಲಕರು ೬ ವರ್ಷ ತುಂಬಿದವರಿರುವದರಿಂದ ಇವರು ಸಾಕಾದಷ್ಟು ಪ್ರಬುದ್ಧರಾಗಿದ್ದು ಈ ಎರಡು ವರ್ಗಗಳ ಅಭ್ಯಾಸವನ್ನು

ಮುಗಿಸಿದಾಗ ಅವರು ೮ ವರ್ಷ ವಯಸ್ಸಿನವರಾಗುವರು. ಈ ಎಲ್ಲ ಸಂಗತಿಗಳನ್ನು ಅನುಲಕ್ಷಿಸಿದರೆ ಶಿಕ್ಷಕರು 'ಶಿಫ್ಟ್' ಪದ್ಧತಿಗೆ ಹೆದರಿ ಹಿಂಜರಿಯುವದಕ್ಕೆ ಯಾವ ಕಾರಣವೂ ಇಲ್ಲವೆಂಬದು ತೀರ ಸಹಜವಾಗಿ ಕಂಡುಬರಬಹುದು.

ಒಬ್ಬನೇ ಶಿಕ್ಷಕನಿರುವ ಶಾಲೆಗಳಲ್ಲಿ ಶಿಫ್ಟ ಪದ್ಧತಿಯನ್ನು ಪ್ರಾರಂಭಿಸಬಹುದೆಂದೂ ಬಾಲಕರವರ್ಗ ಮತ್ತು ಮೊದಲನೆಯ ಇಯತ್ತೆಗಳಲ್ಲಿ ಈ ಪದ್ಧತಿಯನ್ನು ಕೂಡಲೆ ಕೈಕೊಳ್ಳಬೇಕೆಂದೂ ಹಿಂದಿನ ಲೇಖನದಲ್ಲಿ ಹೇಳಲಾಗಿದೆ. ಆದರೆ ಇದೊಂದೇ ನಿಯಮವು ಸರ್ವತ್ರ ಅಬಾಧಿತವಾಗಿ ಪಾಲಿಸಲ್ಪಡಬೇಕೆಂಬ ನಿರ್ಬಂಧ ವಿಲ್ಲ. ಮತ್ತು ಬಾಲಕರವರ್ಗವನ್ನು ಮುಂಜಾನೆ, ಮೊದಲನೆಯ ಇಯತ್ತೆಯನ್ನು ಮಧ್ಯಾಹ್ನ, ಶಾಲೆಗೆ ಕರೆಯಬೇಕೆಂದೂ ಹಟವಿಲ್ಲ. ಶಿಫ್ಟ ಪದ್ಧತಿಯಲ್ಲಿ ಬಾಲಕರಿಂದ ಅವರ ಪಾಲಕರಿಗೆ ತಮ್ಮ ದಿನದ ಹೋರೆಯಲ್ಲಿ ನೆರವು ದೊರೆಯಬೇಕೆಂಬ ಧೋರಣೆಯಿದೆ. ಈ ಪದ್ಧತಿಯು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕೆ ಅನುಕೂಲವಾಗುವಂತೆಯೇ ಅದು ಪಾಲಕರಿಗೂ ಸಹಾಯಕಾರಿಯಾಗಬೇಕೆಂದೂ ನಮ್ಮ ಉದ್ದೇಶವಿರಬೇಕು. ಇತ್ತೀಚೆಗೆ ಒಕ್ಕಲುತನದ ಹೋರೆಯು ಹೆಚ್ಚು ವೆಚ್ಚದ ವ್ಯವಸಾಯವಾಗುತ್ತ ಸಾಗಿದೆ. ಇಂಥ ಕಠಿಣ ಕಾಲದಲ್ಲಿ ಬಾಲಕರು ತಮ್ಮ ತಾಯಿ-ತಂದೆಗಳಿಗೂ ಪಾಲಕರಿಗೂ ನೆರವಾಗಲು ಸಾಧ್ಯವಾದರೆ ಒಳಿತಲ್ಲವೇ? ಆದ್ದರಿಂದ ಸ್ಕೂಲ್‌ಬೋರ್ಡಿನವರೂ ಆಡಳಿತೆಯ ಅಧಿಕಾರಿಗಳೂ ಆಯಾ ಸ್ಥಾನಿಕ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿ ಮೇಲೆಹೇಳಿದ ಎರಡೂ ಉದ್ದೇಶಗಳಿಗೆ ಅನುಕೂಲವಾದ ಮಾರ್ಗದಿಂದ ಈ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಯತ್ನಿಸಬೇಕು.

'ಶಿಫ್ಟ' ಪದ್ಧತಿಯಿಂದ ಶಾಲೆಗೆ ಹೋಗುವ ಬಾಲಕರ ಸಂಖ್ಯೆಯು ಹೆಚ್ಚಾಗಬೇಕು. ಒಬ್ಬನೇ ಶಿಕ್ಷಕನಿರುವ ಶಾಲೆಯಲ್ಲಿ ೪೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೆಸರು ಹಚ್ಚಿಕೊಳ್ಳಲು ಅನುಕೂಲತೆ ಇರುವದಿಲ್ಲ. ಆ ಊರ ಜನಸಂಖ್ಯೆಯು ಮಾನದಿಂದ ೬೦-೭೦ ವಿದ್ಯಾರ್ಥಿಗಳು ಶಾಲೆಗೆ ಬರಲು ಸಾಧ್ಯವಿದ್ದರೂ ಶಿಕ್ಷಕನು ಉಳಿದ ೨೦-೩೦ ವಿದ್ಯಾರ್ಥಿಗಳನ್ನು ಬಿಟ್ಟುಬಿಡುವನು. ಅಂಥ ಸ್ಥಳದಲ್ಲಿ ಶಿಫ್ಟ ಪದ್ಧತಿಯನ್ನು ಕೈಕೊಂಡರೆ ಅಲ್ಲಿಯ ೬೦-೭೦ ವಿದ್ಯಾರ್ಥಿಗಳಿಗೂ ಶಿಕ್ಷಣ ದೊರೆಯಲು ಅನುಕೂಲವಾಗುವದು. ಇದೀಗ ಶಿಫ್ಟಪದ್ಧತಿಯಲ್ಲಿಯ ಒಂದು ಧ್ಯೇಯ.

ದೊಡ್ಡದೊಡ್ಡ ಊರುಗಳ ಶಾಲೆಗಳ ಬಾಲಕರವರ್ಗ ಮತ್ತು ಮೊದಲನೆಯ ಇಯತ್ತೆಗಳಲ್ಲಿ ಶಿಫ್ಟ ಪದ್ಧತಿಯನ್ನು ಕೈಕೊಳ್ಳುವದರಿಂದ ಇದಕ್ಕೂ ಹೆಚ್ಚಿನ ಪ್ರಯೋಜನವುಂಟು. ಇದರಿಂದ ಬಾಲಕರ ವರ್ಗಕ್ಕೆ ಒಬ್ಬ, ಮೊದಲನೆಯ ಇಯತ್ತೆಗೆ

ಒಬ್ಬ, ಈ ರೀತಿ ಇಬ್ಬರು ಶಿಕ್ಷಕರ ಬದಲು ಒಬ್ಬನೇ ಶಿಕ್ಷಕನು ಈ ಎರಡೂ ವರ್ಗಗಳನ್ನು ಕಲಿಸಲು ಅನುಕೂಲವಾಗುವದರಿಂದ ಈ ಹೆಚ್ಚಿನ ಶಿಕ್ಷಕನನ್ನು ಕಡಿಮೆ ಶಿಕ್ಷಕರಿರುವದರಿಂದ ಹೆಚ್ಚು ವಿದ್ಯಾರ್ಥಿಗಳನ್ನು ಸಾಲೆಗೆ ಸೇರಿಸಿಕೊಳ್ಳಲು ಅಡಚಣೆಯಾಗಿರುವ ಶಾಲೆಗೆ ವರ್ಗವಾಡಲು ಅನುಕೂಲವಾಗುವದು. ಶಿಕ್ಷಕರ ಕೊರತೆಯುಳ್ಳ ಶಾಲೆಗಳ ಬೇಡಿಕೆಯನ್ನು ಪೂರೈಸಿಕೊಡುವದಾದ ಬಳಿಕ ಇಂಥವ ರನ್ನು ಹೊಸ ಸಾಲೆಗಳನ್ನು ಆರಂಭಿಸುವದಕ್ಕೆ ಉಪಯೋಗಿಸಿಕೊಳ್ಳಬಹುದು.

ಸ್ಕೂಲ್‌ಬೋರ್ಡುಗಳ ಆಡಳಿತೆಯ ಅಧಿಕಾರಿಗಳು ಈ ಎಲ್ಲ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿ ಈಗಿರುವಷ್ಟೆ ವೆಚ್ಚದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸ ಲಿಕ್ಕೆ ಪ್ರಯತ್ನ ಮಾಡುವದು ಅಪರಿಹಾರ್ಯವಾಗಿದೆ. ಈಗಿನ ಈ ಆಡಚಣೆಯ ಕಾಲದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕೆ ಹೆಚ್ಚಿನ ಧನಸಹಾಯವನ್ನು ಒದಗಿಸುವದು ಅಸಾಧ್ಯವೇ ಸರಿ. ಆದ್ದರಿಂದ ನಾವು ನಮ್ಮ ದೇಶದ ಹಿತದ ದೃಷ್ಟಿಯನ್ನಿಟ್ಟುಕೊಂಡು ನಮಗೆ ಸಾಧ್ಯವಿದ್ದ ಎಲ್ಲ ಯುಕ್ತಿಪ್ರಯುಕ್ತಿಗಳನ್ನು ಪ್ರಯೋಗಿಸಿ ಪ್ರಾ. ಶಿ. ವನ್ನು ಪ್ರಸಾರಮಾಡಲು ಹವಣಿಸಬೇಕಾಗಿದೆ. 'ಶಿಫ್ಟ್' ಪದ್ಧತಿಯಂತೆ ಕೆಲಸ ಮಾಡುವಾಗ ಎರಡು ಮೂರು ವರ್ಷಗಳಲ್ಲಿ ಕೈಕೊಳ್ಳಲು ಸಾಧ್ಯವಿರುವ ಎಲ್ಲ ಕಾರ್ಯಕ್ರಮಗಳ ಯೋಜನೆಯನ್ನು ಮುಂದಿಟ್ಟುಕೊಂಡು ಚೆನ್ನಾಗಿ ಪರ್ಯಾಲೋಚಿಸಿ ಒಂದೊಂದೇ ಮೆಟ್ಟುಗಳನ್ನು ಏರಿ ಮುಂದೆಸಾಗ ಬೇಕು. ಮತ್ತು ಈ ಅವಧಿಯಲ್ಲಿ ಸಾಲೆಗೆ ಹೋಗುವ ಬಾಲಕರ ಸಂಖ್ಯೆಯನ್ನು ಎಷ್ಟುಪಟ್ಟಿಗೆ ಹೆಚ್ಚಿಸಬಹುದೆಂಬದನ್ನು ಅವರು ತಿಳಿದುಕೊಳ್ಳಬೇಕು.

'ಶಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರುವದರಿಂದ ಬಾಲಕರ ಶಿಕ್ಷಣದ ತದ್ಗತಿಯು ಎಷ್ಟು ಮಾತ್ರವೂ ಕಡಿಮೆಯಾಗಲಾರದೆಂಬದನ್ನು ಬಾಲಕರ ತಂದೆ ತಾಯಿಗಳೂ ಪಾಲಕರೂ ಶಿಕ್ಷಕರೂ ಮನವರಿಕೆಮಾಡಿಕೊಂಡಿರಲಿಕ್ಕೆಬೇಕು. ಈಗ ಬಾಲಕರು ಸಾಲೆಯಲ್ಲಿ ಕಳೆಯುವ ವೇಳೆಯ ಅರ್ಧದಷ್ಟೇ ವೇಳೆಯಲ್ಲಿ ಈಗಿನಷ್ಟೇ ತರಗತಿಯ ಶಿಕ್ಷಣವು ಬಾಲಕರಿಗೆ ದೊರೆಯಬೇಕೆಂಬದೂ ಮಿಕ್ಕುಳಿದ ಅರ್ಧ ವೇಳೆಯಲ್ಲಿ ಅವರು ತಮ್ಮ ಪಾಲಕರ ವ್ಯವಸಾಯದಲ್ಲಿ ನೆರವಾಗಬೇಕೆಂಬದೂ ಶಿಫ್ಟ ಪದ್ಧತಿಯ ಮುಖ್ಯ ತತ್ವಗಳು. ಅಭ್ಯಾಸದಲ್ಲಿ ಕೊರತೆಯನ್ನುಂಟುಮಾಡುವ ದಾಗಲಿ ಹಣವನ್ನು ಉಳಿಸಿಕೊಳ್ಳುವದಾಗಲಿ ಈ ಪ್ರಯೋಗದ ಗುರಿಗಳಲ್ಲ. ಯೋಗ್ಯಕ್ರಮದಿಂದ ಸರಿಯಾಗಿ ಅಭ್ಯಾಸ ಸಾಗಿಸಿದರೆ ಇಷ್ಟು ವೇಳೆಯಲ್ಲಿಯೇ ಮೊದಲು ಇಮ್ಮಡಿ ವೇಳೆಯಲ್ಲಿ ಸಾಗತಕ್ಕಷ್ಟು ಅಭ್ಯಾಸವನ್ನು ಮಾಡಿಸಲು ಶಿಕ್ಷಕರಿಗೆ ಸಾಧ್ಯವಿದೆಯೆಂಬುದು ನಿರ್ವಾದದ ಮಾತು.

೧೧ ರಿಂದ ೫ ಗಂಟೆಯ ವರೆಗೆ ನಡೆಯುವ ಸಾಲೆಗಳಲ್ಲಿಯೂ ಸಹ 'ಶಿಫ್ಟ್' ಪದ್ಧತಿಯನ್ನು ಪ್ರಚಾರದಲ್ಲಿ ತರಬಹುದು. ೧೧ ರಿಂದ ೧-೩೦ ರ ವರೆಗೆ ಮೊದಲನೆಯ ವಿಭಾಗದವರನ್ನೂ ೨-೩೦ ರಿಂದ ೫ ರ ವರೆಗೆ ಎರಡನೆಯ ವಿಭಾಗದವರನ್ನೂ ಸಾಲೆಗೆ ಕರೆಯಬಹುದು. ಶಿಫ್ಟ್ ಪದ್ಧತಿಯನ್ನು ಪ್ರಾರಂಭಿಸುವಲ್ಲಿ ಪ್ರಾತಃಕಾಲದಲ್ಲಿ ಒಂದು ವಿಭಾಗ ಮಧ್ಯಾಹ್ನದಲ್ಲಿ ಇನ್ನೊಂದು ವಿಭಾಗ ಈ ಕ್ರಮವನ್ನಿಟ್ಟುಕೊಳ್ಳುವದು ಹೆಚ್ಚು ಹಿತಕರವೂ ಅನುಕೂಲವೂ ಆಗುವದು. ಹೀಗೆ ಎರಡು ಹೊತ್ತು ಸಾಲೆಯನ್ನು ಹಾಕಲು ಅನುಕೂಲವಿಲ್ಲದಲ್ಲಿ ಮೇಲೆ ಹೇಳಿದಂತೆ ಕಾಲವಿಭಾಗ ಮಾಡಿಕೊಂಡರೂ ನಡೆಯಬಹುದು.

ಶಿಕ್ಷಕರು ವೇಳೆಗೆ ಸರಿಯಾಗಿ ಸಾಲೆಗೆ ಬರುವದು, ಗೊತ್ತಾದ ವೇಳೆಯಲ್ಲಿ ತಪ್ಪದೆ ಹಾಜರಿ ತೆಗೆದುಕೊಳ್ಳುವದು, ಕಾಲನಿಯಮದಂತೆ ಸಾಲೆಗೆ ಬರುವದಕ್ಕೆ ಬಾಲಕರಿಗೆ ಪುನಃಪುನಃ ತಿಳಿಯಹೇಳುವದು, ಅನಭ್ಯಾಸದ ಮೂಲಕ ಆಗುವ ಬಾಲಕರ ತಪ್ಪುಗಳನ್ನು ಸಹಾನುಭೂತಿಯಿಂದ ಕ್ಷಮಿಸಿ ಅವರಲ್ಲಿ ತಕ್ಕ ತಿಳಿವಳಿಕೆಯನ್ನುಂಟುಮಾಡುವದು, ಸಾಕಾದಷ್ಟು ರೂಢಿಯಾಗುವವರೆಗೂ ಒದಗಬಹುದಾದ ಚಿಕ್ಕಪುಟ್ಟ ಅಡಚಣೆಗಳನ್ನು ತಾಳಿಕೊಂಡು ಧೈರ್ಯದಿಂದಲೂ ಉತ್ಸಾಹದಿಂದಲೂ ಕೆಲಸಮಾಡುವದು, ಈ ಪದ್ಧತಿಯಿಂದ ಹಾನಿಯಿಲ್ಲ ಮೇಲಾಗಿ ಬಹು ವಿಧದ ಪ್ರಯೋಜನವೇ ಇದೆಯೆಂಬುದನ್ನು ಪಾಲಕರಿಗೆ ತಿಳಿಯಹೇಳಿ ಅವರ ಮನವೊಲಿಸಿಕೊಳ್ಳುವದು, ಇವೇ ಮೊದಲಾದ ಉಪಾಯಗಳಿಂದ ನೀಗಿಕೊಳ್ಳಲಾರದಂಥ ಕಠಿಣ ಅಡಚಣೆಗಳು ಈ ದಾರಿಯಲ್ಲಿ ಒಂದೂ ಇರುವದಿಲ್ಲ.

ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೂ ಎಡ್ಮಿನಿಸ್ಟ್ರೇಟಿವ್ ಆಫೀಸರರೂ ಮುನ್ಸಿಪಾಲಿಟಿಯವರೂ ಮುನ್ಸಿಪಲ್ ಸ್ಕೂಲ್‌ಬೋರ್ಡಿನ ಸದಸ್ಯರ ಮತ್ತು ಇನ್ನಿತರ ಶಿಕ್ಷಣಪ್ರೇಮವುಳ್ಳ ಸುಶಿಕ್ಷಿತ ಮುಂದಾಳುಗಳ ಸಹಾನುಭೂತಿಯನ್ನು ದೊರಕಿಸಿಕೊಂಡು ಕೆಲಸ ಪ್ರಾರಂಭಿಸಬೇಕು. ಈ ಕೆಲಸದಲ್ಲಿ ಏನಾದರೂ ಅಡಚಣೆಯು ತೋರಿಬಂದಾಗ ಅವರು ನನ್ನ ನೆರವನ್ನು ಕೋರಿದರೆ ನಾನು ಅವರಿಗೆ ಸರ್ವ ವಿಧದಿಂದಲೂ ಸಹಾಯಮಾಡಲು ಸಿದ್ಧರಿರುವೆನೆಂದು ಹಿಂದೆ ಅನೇಕ ಸಾರೆ ಹೇಳಿದಂತೆ ಈಗಲೂ ಪುನಃ ಹೇಳುವೆನು.

ದೇಶಹಿತದ ಇಂಥ ಮಹತ್ವದ ಕಾರ್ಯವನ್ನು ನಮ್ಮ ಶಿಕ್ಷಕ ಶಿಕ್ಷಕಿಯರೂ ವಿದ್ಯಾಖಾತೆಯ ಅಧಿಕಾರಿಗಳೂ ಇನ್ನಿತರ ಸದ್ಗೃಹಸ್ಥರೂ ಪುರಸ್ಕರಿಸಿ ವಿಶ್ವಪ್ರಯತ್ನದಿಂದ ಯಶಸ್ವಿಯಾಗುವಂತೆ ಮುಂದೆ ಸಾಗಿಸುವರೆಂದು ಆಶಿಸುವೆನು.

ಹೇರ್ ಹಿಟ್ಲರ್!

ಜರ್ಮನಿಯ ಸರ್ವಾಧಿಕಾರಿಯೂ ಪ್ರಕೃತ ಮಹಾಯುದ್ಧದ ಪ್ರವರ್ತಕನೂ ಆದ ಹಿಟ್ಲರನ ವಿಷಯದಲ್ಲಿ ಒಂದು ಕತೆ ಹುಟ್ಟಿದೆ. ನೀವು ಯಾವನಾದರೂ ಜರ್ಮನ್ನನನ್ನು ಕೇಳಿರಿ–ನಿಮ್ಮ ಅಧ್ಯಕ್ಷನಾರು? ಮುಖ್ಯಮಂತ್ರಿ ಯಾರು? ಪರರಾಷ್ಟ್ರ ಶಾಖೆಯ ಮಂತ್ರಿಯಾರು? ನಾಯ್ಝೀಪಂಗಡದ ನಾಯಕನಾರು? ಮುಖ್ಯ ಸೇನಾಪತಿ ಯಾರು? ವಿಮಾನ ಪಡೆಯ ಚಾಲಕನಾರು? ಇತ್ಯಾದಿ ಎಲ್ಲ ಪ್ರಶ್ನೆಗಳಿಗೆ ಅವನು ಒಂದೇ ಒಂದು ಉತ್ತರ ಕೊಡುವನು. "ಹಿಟ್ಲರ್!" ಆ ದೇಶದಲ್ಲಿ ಹಿಟ್ಲರನು ಅಷ್ಟು ಬಹುರೂಪಿಯಾಗಿದ್ದಾನೆ; ಅಷ್ಟು ಸರ್ವವ್ಯಾಪಿಯಾಗಿದ್ದಾನೆ. ತನ್ನ ದೇಶದಲ್ಲಿ ಸರ್ವವ್ಯಾಪಿಯಾಗಿದ್ದಷ್ಟೇ ನೆರೆಹೊರೆಯ ರಾಷ್ಟ್ರಗಳಿಗೆ ಭಯಂಕರನೂ ಆಗಿದ್ದಾನೆ. ೧೯೧೮ರಲ್ಲಿ ಜರ್ಮನಿಯ ಸ್ಥಿತಿಯು ಹೇಗಿದ್ದಿತು, ಇಂದು ಹೇಗಿದೆ, ಎಂಬದನ್ನು ತುಲನೆ ಮಾಡಿದರೆ ಹಿಟ್ಲರನ ಕಾರ್ಯದಕ್ಷತೆಯೂ ಅವನ ಮಹತ್ವಾಕಾಂಕ್ಷೆಯೂ ಎಷ್ಟೆಂಬ ಕಲ್ಪನೆಯಾಗಬಹುದು. ಮಹಾಯುದ್ಧದ ತರುವಾಯ ಕೈಸರನಂತೆಯೇ ಜರ್ಮನಿಯೂ ನಿರ್ಗತಿಕವಾಯಿತು: ದೇಶದೊಳಗಿನ ತರುಣಪೀಳಿಗೆಯೆಲ್ಲ ಕೊಲೆಯಾಗಿ ಶಕ್ತಿಹೀನವಾಯಿತು. ಬೊಕ್ಕಸವೆಲ್ಲ ಬರಿದಾಗಿ ಧನಹೀನವಾಯಿತು. ವಸಾಹತುಗಳನ್ನೆಲ್ಲ ವೈರಿಗಳು ಹರಿದು ಹಂಚಿಕೊಂಡರು: ಹ್ಯಾಯಿನ್‌ಲಾಂಡ್ ಸಾರ ಪ್ರಾಂತಗಳು ರಾಷ್ಟ್ರಸಂಘದ ಆಡಳಿತೆಗೆ ಒಳಪಟ್ಟು, ಜರ್ಮನಿಯ ಕೈಬಿಟ್ಟವು, ಕಿಲ್ಪಿಕ್ ಪ್ರಾಂತವು ಸ್ಲಾವಕಾ ಪ್ರಾಂತಕ್ಕೆ ಸೇರಿ ಸ್ವತಂತ್ರ ರಾಜ್ಯವಾಯಿತು. ಪೋಲಂಡಿನ ಸರಹದ್ದಿನಲ್ಲಿದ್ದ ಡಾಂಯ್ಸಿಂಗ ಬಂದರದ ಮೇಲೆ ಜರ್ಮನಿಯ ಸ್ವಾಮಿತ್ವವುಳಿಯಲಿಲ್ಲ. ಎಷ್ಟೋ ಯುದ್ಧ ನಾವೆಗಳೂ ವ್ಯಾಪಾರದ ಹಡಗಗಳೂ ಇಂದಿಗೂ ಬ್ರಿಟಿಷ ನಿಶಾನೆಯ ಕೆಳಗೆ ಓಡಾಡುತ್ತಿವೆ. ಯುದ್ಧದ ನಷ್ಟವನ್ನು ತುಂಬಿಕೊಡುವದಕ್ಕೆಂದು ಜರ್ಮನಿಯು ಗಳಿಸಿದ್ದನ್ನೆಲ್ಲ ಪ್ರತಿವರ್ಷ ಪರದೇಶಕ್ಕೆ ಒಪ್ಪಿಸಬೇಕಾಯಿತು. ಬ್ಯಾಂಕುಗಳೆಲ್ಲ ಬರಿದಾದವು, ನಿರುದ್ಯೋಗವು ಹೆಚ್ಚಿತು; ಆಯಿತು; ಆಯಿತು; ಇನ್ನೇನಾಗುವದುಳಿಯಿತು? ಒಂದೇ ಮಾತಿನಲ್ಲಿ ಹೇಳುವದಾದರೆ ಜರ್ಮನಿಯು ಇದ್ದರೂ ಇಲ್ಲದಂತಾಯಿತು. ಆದರೆ ಮುಂದೆ ೧೫–೨೦ ವರ್ಷಗಳಲ್ಲಿ ಈ ಸ್ಥಿತಿಯು ಸಂಪೂರ್ಣ ಬದಲಾಗಿ ಹೋಯಿತು. ಏನೂ ಇಲ್ಲದಲ್ಲಿ ಎಲ್ಲವನ್ನೂ ಮಾಡಿತೋರಿಸಿದ ಆ ಮಾಟಗಾರನಾರು? ಅವನೇ ಮೇಲಣ ಕಥೆಯಲ್ಲಿ ಹೇಳಿದ ಸರ್ವಾಧಿಕಾರೀ ಸರ್ವವ್ಯಾಪೀ ಹಿಟ್ಲರ್! ಇಂಥ ಮಾಟಗಾರನ ವಿಷಯದಲ್ಲಿ ನಾವು ಕೆಲವು ಸಂಗತಿಗಳನ್ನಾದರೂ ತಿಳಿದಿರುವದು ಒಳಿತು.

ಅಡಾಲ್ಫ್ ಹಿಟ್ಲರನು ಮೇಲೆ ವಿವರಿಸಿದಂತೆ ಜರ್ಮನಿಯ ಸರ್ವನಾಶಕ್ಕೆ ಕಾರಣವಾದ ಮಹಾಯುದ್ಧದಲ್ಲಿ ಮೈಯೊಳಗಿನ ರಕ್ತವೆಲ್ಲ ಬತ್ತಿಹೋಗುವಷ್ಟು ಶ್ರಮವಹಿಸಿ ಕಾದಿದ ಒಬ್ಬ ವೀರ ಸೈನಿಕನು. ಇವನು ೧೮೮೯ರಲ್ಲಿ ಒಬ್ಬ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದನು. ತಂದೆಯು ಸೆರೆಬಡಕನಾಗಿದ್ದು ಮಗನು ತನ್ನಂತೆ ಒಬ್ಬ ಸರಕಾರದ ನೌಕರನಾಗಬೇಕೆಂದು ಬಯಸುತ್ತಿದ್ದನು. ಮಗನು ಒಳ್ಳೇ ಚಿತ್ರಕಾರನಾಗಬೇಕೆಂದು ತಾಯಿಯ ಬಯಕೆಯಿತ್ತು. ಶಾಲೆಯಲ್ಲಿ ಕಲಿಯುತ್ತಿದ್ದಾಗ ಇವನಿಗೆ ಇತಿಹಾಸ, ಭೂಗೋಲ, ಚಿತ್ರಕಲೆ ಈ ಮೂರೇ ವಿಷಯಗಳು ಸೇರುತ್ತಿದ್ದವಂತೆ. ಒಂದು ದಿನ ಇವನು ಶಾಲೆಯ ಕೋಣೆಯ ಗೋಡೆಯಲ್ಲಿದ್ದ ಯುರೋಪದ ನಕಾಶವನ್ನು ಕೈಯಿಂದ ಒರಸುತ್ತಿರುವದನ್ನು ಕಂಡು ಯಿಕ್ಕ ವಿದ್ಯಾರ್ಥಿಗಳು ಇದೇನು ಮಾಡುತ್ತೀಯೆಂದು ಕೇಳಲು ನಾನು ಈ ನಕಾಶೆಯೊಳಗಿನ ಜರ್ಮನಿಯ ಗಡಿಯನ್ನು ಒರಸಿ ಅದನ್ನು ದೊಡ್ಡದು ಮಾಡುತ್ತಿದ್ದೇನೆ. ಎಂದಿನಂತೆ. ಆ ಕೆಲಸವನ್ನೆ ಅವನು ಈಗ ಪ್ರತ್ಯಕ್ಷ ನಡೆಯಿಸಿದ್ದಾನೆ.

ಹಿಟ್ಲರನು ೧೩ ವರ್ಷದವನಾದಾಗ ತಂದೆ ತಾಯಿಗಳಿಬ್ಬರೂ ತೀರಿಕೊಂಡ ದ್ದರಿಂದ ಪರದೇಶಿಯಾದನು; ಮನೆತನದ ಚಿಕ್ಕ ಹೊಲವೂ ಮಾರಿ ಹೋಗಲು ನಿರ್ಗತಿಕನಾದನು. ಆ ಮೇಲೆ, ಚಿತ್ರಕಲೆಯ ಅಭ್ಯಾಸಕ್ಕಾಗಿ ವಿಯೆನ್ನಾಕ್ಕೆ ಹೋದನು. ಪರದೇಶಿ; ಬಡಹುಡುಗ! ಇಂಥ ದೊಡ್ಡ ನಗರದಲ್ಲಿ ಯಾರು ಕೇಳಬೇಕು? ಕೊನೆಗೆ ಅಲ್ಲಿಯ ಮನೆಗೆ ಬಣ್ಣ ಬರೆಯುವ ಒಬ್ಬ ಚಿತ್ರಕಾರನ ಆಳಾಗಿ ನಿಲ್ಲಬೇಕಾಯಿತು.

೧೯೧೪ರಲ್ಲಿ ಯುದ್ಧದ ಮೊದಲನೆಯ ಕಹಳೆಯು ಮೊಳಗಿದೊಡನೆ ಹಿಟ್ಲರನು ಎಲ್ಲರಿಗಿಂತ ಮೊದಲು ಸೈನ್ಯದ ಕಚೇರಿಯ ಬಾಗಿಲಲ್ಲಿ ಹೋಗಿನಿಂತನು. ಜರ್ಮನ್ ಸೈನ್ಯದಲ್ಲಿ ಕೆಲಸಮಾಡುತ್ತಿರುವಾಗ ಇವನ ಶೌರ್ಯ ಸಾಹಸಗಳಿಗಾಗಿ ಒಂದು ಪದಕವು ದೊರೆಯಿತು, ೧೯೧೮ರಲ್ಲಿ ರಣಭೂಮಿಯಲ್ಲಿದ್ದಾಗ ವೈರಿಗಳು ಎಸೆದ ವಿಷವಾಯುವಿನಿಂದ ಮರಣೋನ್ಮುಖನಾದನು. ಕಣ್ಣುಗಳೆರಡೂ ಹೋಗುವಂತಾಯಿತು. ಆದರೆ ಜರ್ಮನ್ ರಾಷ್ಟ್ರಕ್ಕೆ ನೂತನ ಪ್ರಾಣವನ್ನೂ ದೃಷ್ಟಿಯನ್ನೂ ಕೊಡುವದಕ್ಕೆ ಹುಟ್ಟಿದವನೆಂದು ಹೇಳುವ ಈತನು ಸಾಯುವದೆಂತು? ಕುರುಡನಾಗುವ ಬಗೆ ಹೇಗೆ? ಮಹಾಯುದ್ಧವು ಮುಗಿಯಿತೆಂದೂ ಜರ್ಮನಿಯು ಸೋತಿತೆಂದೂ ಕೇಳಿದಾಗ ಹಿಟ್ಲರನಿಗೆ ಆಶ್ಚರ್ಯವಾಯಿತಂತೆ. ತನ್ನ ದೇಶಬಾಂಧವರ ಶೌರ್ಯವೀರ್ಯಗಳನ್ನೂ ರಣಕೌಶಲ್ಯವನ್ನೂ ಪ್ರತ್ಯಕ್ಷ ಕಂಡಿದ್ದ ಈತನು ತಮ್ಮ ಸೋಲಿನಲ್ಲಿ ಏನೋ ಕಪಟತಂತ್ರವಿರಬೇಕೆಂದು ಭಾವಿಸಿದನಂತೆ. ಜರ್ಮನಿಗೆ

ಸೋಲಿಲ್ಲವೆಂಬ ಭಾವನೆ ಇಂದಿಗೂ ಅವನಲ್ಲಿ ಮನೆಮಾಡಿದೆ. ವರ್ಸೆಲಿಸ್ ಒಪ್ಪಂದದ ಪರಿಣಾಮವಾಗಿ ಮೇಲೆ ಹೇಳಿದಂತೆ ಜರ್ಮನಿಯು ಅಧೋಗತಿಯಾದುದನ್ನು ಕಂಡ ಅತನು ಆ ಒಪ್ಪಂದದ ಶರ್ತುಗಳನ್ನೆಲ್ಲ ಹರಿದು ತೂರಿ ಹೊಸ ಜರ್ಮನ್ ರಾಷ್ಟ್ರವನ್ನು ಕಟ್ಟಬೇಕೆಂದು ಪಣತೊಟ್ಟನಂತೆ. ಆಗಿನ ಸರಕಾರವು ದೇಶದ ಅಪಮಾನಕ್ಕೂ ಅಧೋಗತಿಗೂ ಕಾರಣವಾದ ಮಿತ್ರರಾಷ್ಟ್ರಗಳ ಒಪ್ಪಂದದ ಕರಾರುಗಳನ್ನು ಒಪ್ಪಿಕೊಂಡರೂ ಜರ್ಮನ್ ರಾಷ್ಟ್ರವು ಅದನ್ನು ಎಂದೂ ಸ್ವೀಕರಿಸಿ ಬಾಳಲಾರದೆಂಬದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದ ಮಾತಾಗಿತ್ತು.

೧೯೧೯ರಲ್ಲಿ ಹಿಟ್ಲರನು ಬವೇರಿಯಾದೊಳಗಿನ ಸೈನಿಕರಿಗೆ ಸಮತಾವಾದದ ತತ್ತ್ವವನ್ನು ವಿರೋಧಿಸುವ ಉಪದೇಶಕನಾಗಿ ನಿಯಮಿಸಲ್ಪಟ್ಟನು. ಅವನು ನಾಝಿ ಪಂಗಡಕ್ಕೆ ಸೇರಿದ ರಾಷ್ಟ್ರಭಕ್ತನಾಗಿದ್ದನು. ಹಿಟ್ಲರನು ಮುಸೋಲಿನಿಯಂಥ ಸುಶಿಕ್ಷಿತ ಕಾರ್ಯಕಾರಣವಿವೇಚನೆಯೊಂದಿಗೆ ಮಾತಾಡಿ ಸಭಿಕರ ಮನವೊಲಿಸುವಷ್ಟು ಪ್ರಸಿದ್ಧ ವಕ್ತಾರನಾಗಿದಲಿಲ್ಲ. ಆದರೂ ಅವನ ಅಂತಃಕರಣದಿಂದ ಉಕ್ಕಿಬರುವ ದೇಶಾಭಿಮಾನ ಪಕ್ಷಾಭಿಮಾನಗಳು ಮಾತಿನಲ್ಲಿ ಪ್ರವಾಹಗೊಂಡು ಹರಿದು ಜನರನ್ನು ಮರುಳು ಮಾಡುತ್ತಿದ್ದವು. ವ್ಯಾಖ್ಯಾನದ ಆರಂಭದಲ್ಲಿ ತಪ್ಪುತ್ತ ತಡೆಯುತ್ತ ಸಾಗಿದರೂ ಕೊನೆ ಕೊನೆಗೆ ತಾಸು ತಾಸು ಶ್ರೋತೃಗಳನ್ನು ಮೈಮರೆಯಿಸುವಷ್ಟು ಉಗ್ರವಾಗಿ ಮಾತಾಡಿ ಎಲ್ಲರ ಮನಸ್ಸಿನಮೇಲೆ ತನ್ನ ಭಾವನೆಗಳನ್ನು ಬಿಂಬಿಸಿ ಬಿಡುತ್ತಿದ್ದನು. ಬಿರುಗಾಳಿಯಿಂದ ಆಲ್ಪೋಲ ಕಲ್ಪೋಲವಾದ ಸಮುದ್ರದ ಗಂಭೀರ ಘೋಷಣೆಯಂತೆ ಹಿಟ್ಲರನ ವ್ಯಾಖ್ಯಾನವು ಉದ್ಬೋಧಕವಾದುದು. ಅದರ ಮುಖ್ಯವಿಷಯವೆಂದರೆ " ಬಂಧುಗಳೇ ನಮ್ಮ ದೇಶದ ಇಂಥ ದುರ್ಗತಿಗೆ ಕಾರಣಗಳೇನು? ನಮ್ಮ ದೇಶದ ಒಳಸೇರಿ ಎಲ್ಲ ಉದ್ಯೋಗ ವ್ಯವಸಾಯಗಳನ್ನು ಆಕ್ರಮಿಸಿ ರಕ್ತವನ್ನು ಹೀರುವ ಉಣ್ಣೆಗಳಂತಿರುವ ಜನರು ನಮ್ಮ ಖಡ್ಗದ ಮೊದಲನೆಯ ಪ್ರಹಾರದಿಂದ ತುಂಡರಿಸಿ ಬೀಳಬೇಕು. ವರ್ಸೆಲೀಸ ಒಪ್ಪಂದದ ಕಾಗದಗಳು ನಮ್ಮ ಹುಡುಗರು ಜಡುವ ಗಾಳಿಪಟವಾಗಿ ಅದರ ಹಿಂದೆ ಹುದುಗಿಕೊಂಡ, ಮುಖ್ಯವಾಗಿ ಫ್ರಾನ್ಸ್ಸವೂ ಮಿತ್ರರಾಷ್ಟ್ರಗಳೂ ನಮ್ಮ ಶಕ್ತಿಯನ್ನು ಹೀರುವ ರಾಕ್ಷಸರಂತಿವೆ. ರಶಿಯದಿಂದ ನುಗ್ಗಿ ಬಂದ ಸೋಶಿಯಾಲಿಸ್ಟ ಮತ್ತು ಕಮ್ಯುನಿಸ್ಟ ಪಂಗಡಗಳು ದೇಶದಲ್ಲಿ ಒಡಕು ಹುಟ್ಟಿಸಿ ದುಡಿಯುವವರ ಶಕ್ತಿಯನ್ನು ಕುಂದಿಸಿ ಬಡತನವನ್ನು ಹೆಚ್ಚಿಸುತ್ತ ಸಾಗಿವೆ. ನಾಲ್ಕನೆಯದು ಪ್ರಜಾಸತ್ತಾತಂತ್ರ್ಯದ ವಿಚಾರ. ಇದರಿಂದ ದೇಶದಲ್ಲಿ ಅಸಂಖ್ಯ ಬಣಗಳಾಗಿ ಜನರು ಕೃತಿಯಿಲ್ಲದ ಮಾತಿನ ಮಲ್ಲರಾಗಿದ್ದಾರೆ. ಪ್ರಜಾಸತ್ತಾತ್ಮಕ ರಾಜ್ಯಕಾರ್ಯಭಾರದಿಂದ ದೇಶದ ಹಿತವು ಸಾಧಿಸುವದಿಲ್ಲ. ಬಹುಮತದ ಬಲದಿಂದ ಆರಿಸಿ ಬಂದವರು ನಿಜವಾದ

ದೇಶೋದ್ಧಾರದ ಧ್ಯೇಯವುಳ್ಳವರಿರುವ ಸಂಭವವಿಲ್ಲ. ಬುದ್ಧಿವಂತರೂ ಉತ್ಸಾಹ ಶಾಲಿಗಳೂ ಕರ್ತವ್ಯನಿಷ್ಠರೂ ದೇಶಭಕ್ತರೂ ಆದ ಜನರಿಂದಲೇ ದೇಶದ ಕಲ್ಯಾಣವಾಗುವದು. ಅಂಥವರಿಗೆ ದೇಶಕಾರ್ಯದಲ್ಲಿ ಸರ್ವಾಧಿಕಾರವಿರಬೇಕು.''

ಹಿಟ್ಲರನ ಈ ವಿಚಾರಗಳು ದೇಶದ ತುಂಬ ಹಬ್ಬಿದವು. ನಾಝಿ ಪಕ್ಷವು ದಿನ ದಿನಕ್ಕೆ ಬಲಿಯುತ್ತ ನಡೆಯಿತು. ಈ ಪಕ್ಷದ ಸೈನಿಕರು ಖಾಕೀ ಬಣ್ಣದ ಸಮವಸ್ತ್ರವನ್ನು ಧರಿಸುವರು. ಅವರ ಧ್ವಜದ ಕೆಂಪು ಭೂಮಿಕೆಯು ಸಮತಾವಾದದ ತತ್ವ ಸೂಚಕವು; ನಡುವಿನ ಬಿಳಿಯ ವರ್ತುಲವು ಮಾತೃಭೂಮಿಯ ನಿದರ್ಶಕವು ಸ್ವಸ್ತಿಕ ಚಿಹ್ನವು ಎತ್ತರವಾದ ನಿಲುವಿಕೆಯುಳ್ಳ ಉಚ್ಚ ಸುಂದರ ಆರ್ಯ ಜನಾಂಗದ ಕುರುಹು. ಒಮ್ಮೆ ಹಿಟ್ಲರನೂ ಸೇನಾಪತಿ ಲುಡೆಂಡಾರ್ಫನೂ ಬವೇರಿಯಾದ ಸರಕಾರವನ್ನು ಉರುಳಿಸಿ ಬರ್ಲಿನ್ನಿನ ಮೇಲೆ ಸಾಗಿಹೋಗುವದನ್ನು ನಿಶ್ಚಯಿಸಿದರು. ಮೊದಲನೆಯ ಸಾರೆ ಅದು ಯಶಸ್ವಿಯಾಗದೆ ಹಿಟ್ಲರನು ಸೆರೆಮನೆಗೆ ಹೋಗಬೇಕಾಯಿತು. ಆದರೆ ೧೯೩೩ರಲ್ಲಾದ ಚುನಾವಣೆಯಲ್ಲಿ ನಾಝಿ ಪಕ್ಷದ ಬಹುಮತವಾಗಿ ಹಿಟ್ಲರನು ನಾಲ್ಕು ವರ್ಷಗಳವರೆಗೆ ಸರ್ವಾಧಿಕಾರಿಯಾಗಿ ಆರಿಸಲ್ಪಟ್ಟನು.

ಜರ್ಮನಿಯ ಎಲ್ಲ ವಸಾಹತುಗಳನ್ನು ಒಂದುಗೂಡಿಸುವದು, ಜರ್ಮನ್ ಜನರು ವಾಸಿಸುವ ಎಲ್ಲ ಪ್ರದೇಶಗಳನ್ನು ಒಂದುಗೂಡಿಸಿ ಒಂದು ಪ್ರಬಲ ರಾಷ್ಟ್ರವನ್ನು ಕಟ್ಟುವದು, ಜ್ಯೂ ಜನರನ್ನು ಹೊಡೆದೋಡಿಸಿ ಶುದ್ಧ ಜರ್ಮನ್ ಆರ್ಯ ಜನಾಂಗವನ್ನು ನಿರ್ಮಿಸುವದು, ಇವೇ ಆತನ ಗುರಿಗಳು. ದೇಶದೊಳಗಿನ ಎಲ್ಲ ರಾಜಕೀಯ ಪಂಗಡಗಳನ್ನು ಮುರಿದೊಗೆದು 'ನಾಝಿ' ಪಕ್ಷವೊಂದನ್ನೇ ಉಳಿಸುವದು ಅವನ ಮೊದಲನೆಯ ಕೆಲಸವಾಗಿತ್ತು. ಜರ್ಮನಿಯಲ್ಲಿ ಜ್ಯೂ ಜನರ ವಸ್ತಿಯು ೧೦೦ಕ್ಕೆ ೫ರಷ್ಟು ಮಾತ್ರವೇ ಇದ್ದರೂ ಡಾಕ್ಟರರು ವಕೀಲರು ವಿಶ್ವವಿದ್ಯಾಲಯಗಳ ಅಧ್ಯಾಪಕರು ಮೊದಲಾದ ಬುದ್ಧಿಪ್ರಾಧಾನ್ಯವಾದ ಎಲ್ಲ ವ್ಯವಸಾಯಗಳೊಳಗಿನ ಅರ್ಧಕ್ಕಿಂತ ಹೆಚ್ಚು ಸ್ಥಳಗಳನ್ನು ಜ್ಯೂ ಜನರೇ ಆಕ್ರಮಿಸಿದ್ದರು. ವೃತ್ತಪತ್ರಗಳ ವ್ಯವಸಾಯ, ವ್ಯಾಪಾರ, ಬ್ಯಾಂಕುಗಳು, ಇವನ್ನಂತೂ ಬಹುಶಃ ಅವರೇ ನಡೆಯಿಸುತ್ತಿದ್ದರು. ನಾಝಿ ಪಕ್ಷವು ಪ್ರಬಲವಾದ ಕೂಡಲೆ ಈ ಎಲ್ಲ ಜ್ಯೂ ಜನರನ್ನು ಸುಲಿದು ಬರಿಮೈಯಿಂದ ದೇಶದಿಂದ ಹೊರದೂಡುವ ಕೆಲಸವು ಪ್ರಾರಂಭವಾಯಿತು. ೧೯೩೮ರಲ್ಲಿ ಒಬ್ಬ ಜ್ಯೂ ತರುಣನು ಪಾರೀಸಿನೊಳಗಿದ್ದ ಒಬ್ಬ ಜರ್ಮನ್ ಅಧಿಕಾರಿಯ ಕೊಲೆ ಮಾಡಿದ್ದರಿಂದಂತೂ ಜ್ಯೂ ಜನರ ಮೇಲೆ ನಡೆದ ಅತ್ಯಾಚಾರಕ್ಕೆ ಮಿತಿಯಿಲ್ಲದೆ ಹೋಯಿತು. ಹೀಗೆ

ಬೌದ್ಧಿಕ ಜೀವನದ ಜ್ಯೂ ಜನರನ್ನು ಜರ್ಮನಿಯಿಂದ ಹೊರದೂಡಿದ್ದು ಹಿಟ್ಲರ ಜಾಣತನದ ಕೆಲಸವಲ್ಲೆಂದು ಜಗತ್ತು ಸಾರಿ ಸಾರಿ ಹೇಳಿತು. ಜ್ಯೂ ಜಾತಿಯವನು ಸ್ಥಾಪಿಸಿದ ಕ್ರಿಸ್ತೀ ಧರ್ಮದ ಮೇಲೆಯೂ ನಾಯ್ಡುಗಳಿಗೆ ವಿಶ್ವಾಸವಿಲ್ಲ; ಹಿಟ್ಲರ್ ಜರ್ಮನಿ ಇವೆರಡರ ಹೊರತು ಅವರಿಗೆ ಇನ್ನಾವುದರ ಮೇಲೆಯೂ ಶ್ರದ್ಧೆಯಿಲ್ಲ; ವಿಶ್ವಾಸವಿಲ್ಲ.

ಜರ್ಮನ್ ರಾಷ್ಟ್ರದ ಉದ್ಧಾರವಾಗಬೇಕಾದರೆ ಶೀಲಸಂಪನ್ನವೂ ಸದೃಢವೂ ಸುಶಿಕ್ಷಿತವೂ ಆದ ನಾಯ್ಡು ಪಕ್ಷದ ತತ್ವಗಳು ಮೈಯುಂಡ ಹೊಸ ತರುಣ ಪೀಳಿಗೆಯು ಸಿದ್ಧವಾಗಬೇಕೆಂದು ಹಿಟ್ಲರನು ನಿರ್ಣಯಿಸಿಕೊಂಡನು. ತೊಟ್ಟಿಲ ಸೊಳಗಿನ ಶಿಶುಗಳನ್ನು ಮೊದಲುಗೊಂಡು ಯಾವತ್ತೂ ಶಿಕ್ಷಣ ಸಂಸ್ಥೆಗಳಲ್ಲಿದ್ದ ವಿದ್ಯಾರ್ಥಿಗಳಲ್ಲಿ ಹಿಟ್ಲರನ ಸರ್ವಾಧಿಕಾರವನ್ನೂ ಆತನ ಜರ್ಮನ್ ರಾಷ್ಟ್ರದ ಉನ್ನತಿಯ ವಿಚಾರಗಳನ್ನೂ ಮೈಯುಣಿಸುವ ಕಾರ್ಯವು ಮೊದಲು ನಡೆಯಿತು. ಶಾರೀರಿಕ ಶಿಕ್ಷಣವು ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಯಿತು. ಜರ್ಮನಿಯೊಳಗೆ ೧೩ ಸಾವಿರ ಶಿಕ್ಷಣ ಶಿಬಿರಗಳಿದ್ದು ಆ ಎಲ್ಲ ಶಿಬಿರಗಳಲ್ಲಿ ಒಂದು ಕಾಲಕ್ಕೆ ಒಂದೇ ಕೆಲಸವು ನಡೆಯುವ ವ್ಯವಸ್ಥೆಯಿದೆ. ಈ ಸಂಸ್ಥೆಗಳಿಂದ ಹೊರಟ ತರುಣರು ಸುತಕ್ಷಿತರೂ ಸುಂದರ ಸುದೃಢ ಮೈಕಟ್ಟಿನವರೂ ಆಗಿದ್ದು ಇಡಿಯ ದೇಶದೊಳಗಿನ ರೇಡಿಯೊ ಸಿನೇಮಾಗೃಹ ನಾಟಕಗೃಹಗಳು ಅವರ ಶಿಕ್ಷಣಕ್ಕಾಗಿ ಉಪಯೋಗಿಸಲ್ಪಡುತ್ತಿವೆ.

ಹಿಟ್ಲರನ ಸ್ತ್ರೀಯರ ವಿಷಯದ ವಿಚಾರವೇ ಬೇರೆ. ಸಾಮಾಜಿಕ ಜೀವನದಲ್ಲಿ ಅಥವಾ ರಾಜಕೀಯ ವಿಚಾರಗಳಲ್ಲಿ ಜರ್ಮನ್ ಸ್ತ್ರೀಯರ ಸಮಾವೇಶವಿಲ್ಲ. ಅವರು ಗೃಹಿಣಿಯರು; ಗೃಹವೇ ಅವರ ಕಾರ್ಯಕ್ಷೇತ್ರ; ಗೃಹವ್ಯವಸ್ಥೆ ಪತಿ ಶುಶ್ರೂಷೆ ಶಿಶುಸಂಗೋಪನ ಇವೇ ಅವರ ಧರ್ಮಕರ್ಮಗಳು. ಜರ್ಮನಿಯಲ್ಲಿ ಮದುವೆಯಾಗದಿರುವ ಹೆಂಗುಸಿಗೆ ಮನ್ನಣೆಯಿಲ್ಲ.

ಇಷ್ಟಾದರೂ ಹಿಟ್ಲರನಿಗೆ ಸಮಾಧಾನವಿಲ್ಲ. ಏಕೆಂದರೆ ಸ್ವತಂತ್ರವಾಗಿ ಜೀವಿಸಬೇಕೆನ್ನುವ ರಾಷ್ಟ್ರಕ್ಕೆ ತೀರ ಕಡಿಮೆಯೆಂದರೆ ೩೪ ಕಚ್ಚಾ ಸರಕುಗಳು ಬೇಕು. ಅವುಗಳಲ್ಲಿ ಎರಡೇ ಎರಡು-ಕಲ್ಲಿದ್ದಲಿ ಪೊಟಾಶಿಯಮ್-ಇವೆರಡೇ ಆ ದೇಶದಲ್ಲಿ ದೊರೆಯುವವು; ಮಿಕ್ಕವನ್ನೆಲ್ಲಾ ಪರದೇಶದಿಂದ ಕೊಂಡುಕೊಳ್ಳಬೇಕು. ಜರ್ಮನ್ ಶಾಸ್ತ್ರಜ್ಞರು ಎಷ್ಟೋ ಸರಕುಗಳನ್ನು ಕೃತ್ರಿಮವಾಗಿ ತಯಾರಿಸುವರು. ಸಕ್ಕರೆಯನ್ನು ಕಟ್ಟಿಗೆಯ ಪುಡಿಯಿಂದಲೂ ರಾಸಾಯನಿಕಕ್ರಿಯೆಯಿಂದ ತಯಾರಿಸಿದ ನೂಲಿನಿಂದ ಬಟ್ಟೆಗಳನ್ನೂ ಮಾಡುವರು. ಜರ್ಮನಿಗೆ ಕಚ್ಚಾ

ಮಾಲಿನ ಕೊರತೆಯಿದ್ದಂತೆಯೇ ಅವರು ತಯಾರಿಸಿದ ಕೈಗಾರಿಕೆಯ ಒಡವೆಗಳಿಗೆ ಗಿರಾಕಿಗಳೂ ಬೇಕು. ಅದಕ್ಕಾಗಿ ಹಿಟ್ಲರನು ಜರ್ಮನ್ ಸಾಮ್ರಾಜ್ಯದ ಬೆಳೆವಣಿಗೆಗೆ ನಿಂತಿದ್ದಾನೆ.

೧೯೩೩ರಲ್ಲಿ ಜರ್ಮನಿಯು ರಾಷ್ಟ್ರ ಸಂಘದಿಂದ ಹೊರಬಿದ್ದಿತು. ೧೯೩೬ರಲ್ಲಿ ಹ್ರಾಯಿನ್ ಪ್ರದೇಶವನ್ನೂ ಸಾರದ ಕಲ್ಲಿದ್ದಲಿಯ ಪ್ರದೇಶವನ್ನೂ ಆಕ್ರಮಿಸಿತು. ೧೯೩೮ ರಲ್ಲಿ ಆಸ್ಟ್ರಿಯಾವನ್ನೂ ೧೯೩೯ರಲ್ಲಿ ಸುಡೇಟಾನ್ ಝೆಕೋಸ್ಲಾವಾಕಿಯಾಗಳನ್ನೂ ನುಂಗಿತು. ಇವಕ್ಕೆಲ್ಲ ಕಾರಣವೊಂದೇ. ಮಹಾಯುದ್ಧದಲ್ಲಿ ಜರ್ಮನಿಯು ಸೋತ ಪ್ರದೇಶಗಳನ್ನು ಪುನಃ ಆಕ್ರಮಿಸುವದು ಅಥವಾ ಜರ್ಮನ್ ವಸತಿಗಳನ್ನೆಲ್ಲ ಒಂದುಗೂಡಿಸವದು. ಜರ್ಮನಿಯ ಅವನತಿಗೆ ಕಾರಣವಾದ ವರ್ಸೆಲಿಸ್ ಒಪ್ಪಂದವಂತೂ ಎಂದೋ ಹುಳತಿಂದು ಹೋಗಿತ್ತು. ಇಷ್ಟೆಲ್ಲ ಸಾಲದೆ ಈಗ ಪೋಲಂಡ ಪ್ರಾಂತವನ್ನು ಆಕ್ರಮಿಸಿದ್ದನ್ನು ಕಂಡು ಫ್ರಾನ್ಸ್ ಇಂಗ್ಲಂಡಗಳು ಹಿಟ್ಲರನ ವಿರುದ್ಧ ಯುದ್ಧವನ್ನು ಸಾರಿದವು. ಹಿಟ್ಲರನ ತಂತ್ರದಿಂದ ಹಿಂದೆ ಎಂದೂ ಜರ್ಮನಿಗೆ ಸೇರದೆ ಇದ್ದ ರಶಿಯವು ಈಗ ಅದರೊಡನೆ ಸೇರಿದೆ. ಈ ಎರಡನೆಯ ಮಹಾಯುದ್ಧದ ಪರಿಣಾಮದ ಮೇಲೆಯೇ ಜಗತ್ತಿನ ಶಾಂತಿಯ ಪ್ರಶ್ನೆಯು ಅವಲಂಬಿಸಿದೆ.

ರಾಷ್ಟ್ರೀಯ ಜೀವನದಲ್ಲಿ ಹಿಟ್ಲರನು ಉಗ್ರನಾಗಿರುವಂತೆಯೇ ಅವನ ವೈಯಕ್ತಿಕ ಜೀವನವೂ ಸರಳವಾಗಿಲ್ಲ. ಅವನು ದೇಶದೊಳಗಿನ ಹೆಣ್ಣುಮಕ್ಕಳೆಲ್ಲರೂ ಮದುವೆಯಾಗಬೇಕೆಂದು ನಿರ್ಣಯಿಸಿದ್ದರೂ ತಾನೇ ಮದುವೆಯಾಗಿಲ್ಲ. ಅವನಿಗೀಗ ೫೦ ವರ್ಷ. ಆಪ್ತೇಷ್ಟರೊಡನೆಯೂ ಕೂಡಿ ನಡೆಯುವದಿಲ್ಲ. ಹೆಚ್ಚಿನ ವಿದ್ಯಾವಿಷಯಕ ಸಂಸ್ಕೃತಿಯಲ್ಲಿಯೂ ಅವನ ನಂಬುಗೆಯಿಲ್ಲ. ಸೇದುವದಾಗಲೀ ಕುಡಿಯುವದಾಗಲಿ ಅವನಿಗೆ ಗೊತ್ತಿಲ್ಲ. ನಿವಾಸದಲ್ಲಿ ಅಥವಾ ತೀವ್ರಗತಿಯ ಮೋಟಾರಿನಲ್ಲಿ ಕುಳಿತು ಓಡುತ್ತಿರುವದು ಅವನ ಪ್ರೀತಿಯ ವಿಷಯ. ಸೇನಾಪತಿ ಗೋರಿಂಗ್ ಪ್ರಚಾರಕ ಮಂತ್ರಿ ಗೋಬೆಲ್ಲ ಗುಪ್ತ ಪೋಲಿಸ ದಳದ ಚಾಲಕ ಹಿಮ್ಮರ್ ಈ ಮೂವರೇ ಅವನ ಪರಮ ಸ್ನೇಹಿತರು.

ಹಿಟ್ಲರನು ಜರ್ಮನ್ ನಾಗರಿಕರಿಗಾಗಿ ಪ್ರಕಟಿಸಿದ ಆಜ್ಞಾಪತ್ರವು ಈ ರೀತಿಯಾಗಿದೆ :—" ನಮ್ಮದೇಶದ ಹಣದ ಉಪಯೋಗವು ನಮ್ಮ ದೇಶಕ್ಕೇ ಆಗಬೇಕು. ತಿಂಬುಂಬ ವ ಇಲ್ಲಪೆ ಬಳಸುವ ಒಡವೆಗಳೆಲ್ಲ ಸ್ವದೇಶದವೇ ಇರಬೇಕು. ಕಾಗದ ಲೇಖನಿ ಪುಸ್ತಿಗಳೂ ಸ್ವದೇಶದವೇ ಇರಲಿ. ಪರದೇಶದ ಬಟ್ಟೆಗಳನ್ನು ಮುಟ್ಟಬೇಡಿರಿ. ಪರದೇಶದ ಯಾವುದೇ ಒಡವೆಯನ್ನು ಕೊಂಡುಕೊಳ್ಳುವಾಗ ಅಷ್ಟು

ಹಣವು ಪರದೇಶಕ್ಕೆ ಹೋಗುವದೆಂಬದನ್ನೂ ನಮ್ಮ ದೇಶದ ಸಂಪತ್ತು ಅಷ್ಟು ಕಡಿಮೆಯಾಗುವದೆಂಬದನ್ನೂ ನೆನೆಸಿಕೊಳ್ಳಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸುವವರೇ ಮಾತೃಭೂಮಿಯ ನಿಜವಾದ ನಾಗರಿಕರೆನ್ನಿಸಿಕೊಳ್ಳಲು ಅರ್ಹರಾಗುವರು."

ಹಿಟ್ಲರನ ಇತರ ಗುಣಗಳು ಪ್ರಶಂಸನೀಯವಾಗಿದ್ದರೂ ಅತನ ರಾಕ್ಷಸೀಯ ಮಹತ್ವಾಕಾಂಕ್ಷೆಯೂ ಸ್ವಾರ್ಥದ ಅತಿರೇಕವೂ ಅಸಹ್ಯವಾಗಿವೆ. ವಿಶ್ವಪ್ರೇಮಿಗಳಾದ ರವೀಂದ್ರನಾಥ ಠಾಕೂರರವರು ಅವನು ಪೋಲಂಡವನ್ನು ಆಕ್ರಮಿಸಿದ್ದನ್ನು ಕೇಳಿ ಈ ರೀತಿ ಹಾಡಿಹರಿಸಿದರು.

"ಜರ್ಮನಿಯ ಸುಲ್ತಾನ್ ಹೇರ್ ಹಿಟ್ಲರನ ಉದ್ದಾಮ ವರ್ತನೆಯಿಂದ ಜಗತ್ತಿನ ಶಾಂತಿಭಂಗವಾಗಿದೆ. ಅತನು ನಡೆಯಿಸಿರುವ ಕೊಲೆ, ರಕ್ತಪಾತ, ಪರಾಕ್ರಮಗಳ ಪರಿಣಾಮವಾಗಿ ಜಗತ್ತಿನಲ್ಲಿ ನೂತನ ಸ್ವಾತಂತ್ರ್ಯ ರವಿಯ ಉದಯವಾಗಿ ಇಂದಿನವರೆಗೆ ಅಧಃಪತಿತವಾದ ಜನತೆಯ ಅಂತಃಕರಣದ ಆಶೆ-ಆಕಾಂಕ್ಷೆಗಳಿಗೆ ಹೊಸ ಮುಗುಳು ಒಡೆಯಲಿ!"

ಹೇರ್ ಹಿಟ್ಲರನ "ಮೇನ್ ಕಾಂಫ್" ಪುಸ್ತಕದಲ್ಲಿ ಪ್ರಕಟವಾದ ಅತನ ವಿಚಾರಗಳು

೧. ತಾನು ಯಾವ ಕಾರ್ಯವನ್ನು ಯಾಕೆ ಮಾಡುತ್ತೇನೆ ಮತ್ತು ಯಾವ ತತ್ತ್ವವನ್ನು ಅನುಸರಿಸಿ ಮಾಡುತ್ತೇನೆ ಎಂಬದನ್ನು ಆಡಾಲ್ಫ ಹಿಟ್ಲರನಷ್ಟು ಸ್ಪಷ್ಟವಾಗಿ ಆಡಿತೋರಿಸುವ ವ್ಯಕ್ತಿಗಳು ಲೋಕದಲ್ಲಿ ತೀರ ವಿರಳ. ಅವನು ಹುಟ್ಟಿ ಬೆಳೆದದ್ದು ಒಬ್ಬೊಂಟಿಗನಾಗಿ. ಆದುದರಿಂದ ಇಂಥ ಒಂಟಿಗನು ಮುಂದೆ ಬಂದು ದೊಡ್ಡದೊಂದು ಜನಸಮುದಾಯವನ್ನೇ ತನ್ನ ಅನುಯಾಯಿಯಾಗುವಂತೆ ಮಾಡಿಕೊಳ್ಳಲಿಕ್ಕೆ ಅವನು ಈ ರೀತಿ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿ ತೋರಿಸಿದ ಹೊರತು ಗತ್ಯಂತರವಿರಲಿಲ್ಲ. ಸಾಮೂಹಿಕ ಚಳವಳಿಯನ್ನು ಪ್ರಾರಂಭಿಸುವಾಗ ಅವನು ತನ್ನ ಧೋರಣೆಯನ್ನು ತನ್ನ ಶಿಷ್ಯವರ್ಗದಮುಂದೆ ಇಡಲೇಬೇಕಾಯಿತು.

ಜಗತ್ತನ್ನು ನಾವು ಯಾವ ದೃಷ್ಟಿಯಿಂದ ನೋಡಬೇಕೆಂಬುದನ್ನು ಅವನು ಈ ಮೇನ್ ಕಾಂಫ್ ಪುಸ್ತಕದಲ್ಲಿ ಹೇಳಿರುವನು. ಈ ಪುಸ್ತಕದ ಮೊದಲನೆಯ ಭಾಗವು ೧೯೨೪ ರಲ್ಲಿಯೂ ಎರಡನೆಯ ಭಾಗವು ೧೯೨೬ ರಲ್ಲಿಯೂ ಪ್ರಕಟವಾದುವು.

ಹಿಟ್ಲರನು ತಾರುಣ್ಯದಲ್ಲಿ ಚೆನ್ನಾಗಿ ಅಧ್ಯಯನಮಾಡಿದ್ದನೆಂಬುದೇನೋ ನಿಜ. ಅವನು ಅನೇಕ ಚರ್ಚೆ ವಾದವಿವಾದಗಳನ್ನು ನಡೆಯಿಸಿದನು. ಅನೇಕ ಉಪನ್ಯಾಸಗಳನ್ನು ಮಾಡಿದನು. ಆದರೆ ತನ್ನ ವಿಷಯ ಸಾಹಿತ್ಯಗಳನ್ನು ವ್ಯವಸ್ಥೆಗೊಳಿಸಿಕೊಳ್ಳುವ ಕಾರ್ಯವು ಕೂಡ ಅವನಿಂದ ಸರಿಯಾಗಿ ಆಗಿಲ್ಲ. ಒಂದು ವಿಷಯದಮೇಲೆ ಮಾತಾಡುತ್ತಿರುವಾಗಲೆ ವಿಷಯಾಂತರ ಮಾಡಿಕೊಂಡು ಸಾಗಿ ಬಿಡುತ್ತಿದ್ದನು. ತುಸು ಮುಂದೆ ಸಾಗಿದ ಬಳಿಕ ಮತ್ತೆ ಮೊದಲಿನ ಮನೆಗೆ ಬರುತ್ತಿದ್ದನು. ಹೇಳಿದ್ದನ್ನೇ ಹೇಳುವದು, ಒಂದು ಪ್ರಕರಣದ ವಿಚಾರವನ್ನು ಇನ್ನೊಂದು ಪ್ರಕರಣಕ್ಕೆ ಸಾಗಿಸುವದು, ಯಾವದೋ ವಿಷಯವನ್ನು ಯಾವದೋ ಸಂದರ್ಭದಲ್ಲಿ ಹೇಳಿಬಿಡುವದು, ಈ ರೀತಿಯಾದ ವಿಷಯ ಯೋಜನೆಯಲ್ಲಿಯು ಗದ್ದಲವು ಈತನ ಪುಸ್ತಕದಲ್ಲಿ ಹೇರಳವಾಗಿದೆ.

೨. ಹಿಟ್ಲರನ ಮಾನವ ವಂಶದ ಕಲ್ಪನೆ. (Hitler's Race Theory) ಈ ವಿಷಯದಲ್ಲಿ ಹಿಟ್ಲರನ ವಿಚಾರಗಳು ತೀರ ತಪ್ಪಿಹೋಗಿವೆ. ಇದರಲ್ಲಿ ಹುಚ್ಚು ಭಾವನೆಗಳೇ ಹೆಚ್ಚಾಗಿವೆ. ಅವನ ಹೇಳಿಕೆಯಂತೆ ಮಾನವ ಜಾತಿಯಲ್ಲಿ ಅನೇಕ ಭಿನ್ನ ಭಿನ್ನ ವಂಶಗಳಿರುವವು. ಅವೆಲ್ಲ ವಂಶಗಳಲ್ಲಿ ಆರ್ಯನ್ ಅಥವಾ ನಾರ್ಡಿಕ್ ವಂಶವೊಂದೇ ಇತರ ವಂಶಗಳಿಗಿಂತಲೂ ಶ್ರೇಷ್ಠವಾಗಿದ್ದು ಅದು ಅಖಿಲ ಮಾನವ ಜಾತಿಯ ಪ್ರಗತಿಗೂ ಉಚ್ಚ ಜೀವನಕ್ಕೂ ಕಾರಣವಾಗಿರುವದು. ಈ ಆರ್ಯನ್ ವಂಶವು ಅಸಂಖ್ಯ ಸಂದರ್ಭಗಳಲ್ಲಿ ನಾಟಕದಂತೆ ಕಾರ್ಯಮಾಡಿದ್ದು ಇತಿಹಾಸದಿಂದ ಕಂಡುಬರುವಂತಿದೆ. ಈ ವಂಶವು ತನ್ನ ಎಲ್ಲ ಉಚ್ಚ ಗುಣಗಳ ಮೂಲಕ ಅನೇಕ ಅನಾರ್ಯ ಜನಾಂಗಗಳನ್ನು ಜಯಿಸಿ ಬಹು ದೊಡ್ಡ ಭೂಭಾಗವನ್ನು ವಶಪಡಿಸಿಕೊಂಡಿತ್ತು.

ಮುಂದೆ ಆ ಅನಾರ್ಯ ಜನಾಂಗಗಳ ಪರಿಶ್ರಮದಿಂದ ಅನೇಕ ಸುಧಾರಣೆಯ ಕಟ್ಟಡಗಳು ಹುಟ್ಟಿದವು; ಆದರೆ ಅವೆಲ್ಲ ಕಾಲಕ್ರಮದಲ್ಲಿ ನಷ್ಟವಾಗಿ ಹೋದವು. ಹೀಗಾಗಲು ಕಾರಣವೇನು? ಹಿಟ್ಲರನ ಅಭಿಪ್ರಾಯದಂತೆ ಅನೇಕ ವಂಶಗಳ ಮಿಶ್ರಣವೇ ಈ ಬಗೆಯ ಅವನತಿಗೆ ಕಾರಣವಾಗುವದು. ಹೀಗೆ ವಂಶ ಮಿಶ್ರಣವಾಗದೆ ಒಂದೇ ಶುದ್ಧ ರಕ್ತದ ವಂಶವು ಉಳಿದಿದ್ದರೆ ಅದಕ್ಕೆ ಈ ತರದ ಅಧೋಗತಿ

ಯುಂಟಾಗುತ್ತಿರಲಿಲ್ಲ. ಆದ್ದರಿಂದ ಉಚ್ಚ ವಂಶವಾದ ನಾರ್ಡಿಕ್ ರಾಷ್ಟ್ರವು ತನ್ನ ರಕ್ತವನ್ನು ಶುದ್ಧವಾಗಿಟ್ಟುಕೊಂಡು ತಮ್ಮ ಸಂತತಿಯಲ್ಲಿ ಯಾವ ಬಗೆಯ ವಿಶ್ರಣವೂ ಆಗದಂತೆ ನೋಡಿಕೊಳ್ಳಬೇಕು. ಅದೊಂದೇ ವಂಶವು ಜಗತ್ತಿನಲ್ಲಿ ಬಲಶಾಲಿಯಾಗಿ ಬಾಳುವ ಯೋಜನೆಯನ್ನು ಕೈಕೊಳ್ಳಬೇಕು. ಅದೊಂದೇ ವಂಶದ ಪ್ರಸಾರವಾಗಿ ಅದರ ವರ್ಚಸ್ಸು ಬೆಳೆಯುವಂತೆ ನೋಡಿಕೊಳ್ಳಬೇಕು. ನಾರ್ಡಿಕ್ ವಂಶದವರ ಹಿತಕ್ಕಾಗಿ ಅಷ್ಟೇ ಅಲ್ಲ, ಅಖಿಲ ಮಾನವಜಾತಿಯ ಕಲ್ಯಾಣಕ್ಕಾಗಿಯೂ ಈ ಯೋಜನೆಯು ಅವಶ್ಯವಾಗಿದೆ.

ಇತ್ತೀಚಿನ ನೂತನ ರಾಷ್ಟ್ರಗಳಲ್ಲಿ ಯಾವ ರಾಷ್ಟ್ರಕ್ಕೆ ಇಂಥ ಅನುವಂಶಿಕ ಆಧಾರವುಂಟೆಂದು ನೀವು ಕೇಳಬಹುದು. ಈ ಪ್ರಶ್ನೆಗೆ ಜರ್ಮನ್ ರಾಷ್ಟ್ರವೇ ಎಲ್ಲಕ್ಕೂ ಶ್ರೇಷ್ಠವಾದದ್ದೆಂಬ ಒಂದೇ ಒಂದು ಉತ್ತರವಿರುವದು. ಜರ್ಮನಿಯು ನಾರ್ಡಿಕ್ ವಂಶೀಯರ ಸತ್ತೆಯ ಕೇಂದ್ರವು. ಬ್ರಿಟಿಷ ಸಾಮ್ರಾಜ್ಯವು ಅದಕ್ಕೆ ಸರಿಯಾದ ಎರಡನೆಯ ಯುರೋಪಿಯನ್ ರಾಷ್ಟ್ರವೆಂದು ಹೇಳಬಹುದು. ಸ್ಲಾವ್ ಜನಾಂಗವು ತೀರ ನಿಕೃಷ್ಟತರಗತಿಯದು. ಯಾವನೊಬ್ಬ ಜರ್ಮನ್‌ರಾಜ್ಯ ಕರ್ತನು ಸ್ಲಾವ್ ಜನರ ಪ್ರವೇಶವನ್ನು ಜಯಿಸಿ ಅಲ್ಲಿ ಜರ್ಮನ್ ಜನರಿಗೆ ವಾಸಿಸುವ ದಕ್ಕೆ ಸ್ಥಳವನ್ನು ಕೊಟ್ಟನೆಂದು ತಿಳಿಯೋಣ. ಆಗ ಅವನು ಒಂದು ದೇಶಾಭಿಮಾನದ ಕಾರ್ಯವನ್ನು ಮಾಡಿದನೆಂದು ಹೇಳಬೇಕಾಗುವದು. ಇಷ್ಟೇ ಅಲ್ಲ, ಅವನು ಒಂದು ಮಹತ್ವದ ನೈತಿಕ ಕಾರ್ಯವನ್ನು ಮಾಡಿದಂತಾಗುವದು. ಯಾಕಂದರೆ ಇದರಿಂದ ಅವನು ಅಖಿಲ ಮಾನವಜಾತಿಯ ಕಲ್ಯಾಣಕ್ಕಾಗಿ ಉಚ್ಚ ವಂಶದ ಜನರ ವಶದಲ್ಲಿರುವ ಭೂಪ್ರದೇಶ (Lebens raum) ವನ್ನು ಬೆಳೆಯಿಸಿದಂತಾಗುವದು.

ಒಟ್ಟಿನಮೇಲೆ ಮೇಲಿನ ವರ್ಣನೆಯನ್ನು ಈ ರೀತಿಯಾಗಿ ಸಂಕ್ಷೇಪಿಸಿ ಹೇಳಬಹುದು:— ಜಗತ್ತಿನಲ್ಲಿ ಒಂದು ಬಲಿಷ್ಠವೂ ಉತ್ಪಾದನ ಯೋಗ್ಯವೂ ಆದ ವಂಶವೂ ಇನ್ನನೇಕ ದುರ್ಬಲವೂ ಅನುತ್ಪಾದನ ಯೋಗ್ಯವೂ ಆದ ವಂಶಗಳೂ ಇರುವವು. ಅನುತ್ಪಾದನ ವಂಶವು ಮೇಣದಂತೆ ಮೃದುವಾಗಿದ್ದು ಬಲಿಷ್ಠ ವಂಶವು ಅದನ್ನು ತನಗೆ ತೋರಿದಂತೆ ಮಾರ್ಪಡಿಸಿಕೊಳ್ಳಬಹುದು. ಇದೂ ಅಲ್ಲದೆ ಜ್ಯೂ ಎಂಬ ಇನ್ನೂ ಒಂದು ವಂಶವಿರುವದು. ಜ್ಯೂ ಜನರಿಗೂ ಸ್ಲಾವ್ ಜನರಿಗೂ ಅಂತರವಿರುವದು. ಸ್ಲಾವ್ ಜನರು ಜರ್ಮನ್ ಸತ್ತೆಯ ಪ್ರದೇಶದಲ್ಲಿ ಇದ್ದರೆ ಅವರಿಂದ ಜರ್ಮನ್ನರಿಗೆ ಉಪಯೋಗವಾಗಬಹುದು. ಆದರೆ ಜ್ಯೂ ಜನರು ಯಾವ ಕೆಲಸಕ್ಕೂ ಉಪಯೋಗಬೀಳತಕ್ಕವರಲ್ಲ. ಅವರನ್ನು ದೇಶತ್ಯಾಗ ಮಾಡಿಸಲೇಬೇಕು.

ಈ ವಿಚಾರಗಳನ್ನು ಹಿಟ್ಲರನು ಶೋಧಿಸಿ ಕಂಡುಹಿಡಿದಿಲ್ಲ. ಅವನ್ನು ಅವನು ಇತರರಿಂದ ಕಲಿತುಕೊಂಡಿರುವನು. ಅವು ಅವನಿಗೆ ಹೇಗೆ ದೊರಕಿದವು ಎಂಬ ಮಾತು ಮಹತ್ವದ್ದಲ್ಲವಾದರೂ ಅವನು ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿರುವನೆಂಬುದು ಮಾತ್ರ ವಿಚಾರಣೀಯವಾಗಿದೆ.

ತಮ್ಮ ವಂಶವು ಇತರ ಮಾನವ ವಂಶಗಳಿಗಿಂತಲೂ ಶ್ರೇಷ್ಠವಾದದ್ದೆಂಬ ಒಂದು ಕಲ್ಪನೆಯು ಜರ್ಮನ್ ಜನರಲ್ಲಿ ಬಹುಕಾಲದಿಂದಲೂ ಇರುವದು. ಇತರ ಯಾವ ಜನಾಂಗದವರಲ್ಲಿಯೂ ಈ ಕಲ್ಪನೆಯಿದ್ದಂತೆ ಕಾಣುವದಿಲ್ಲ. ಫ್ರೆಂಚ್, ಬ್ರಿಟಿಷ್ ಅಥವಾ ಅಮೇರಿಕನ್ ಜನಾಂಗದವರಿಗೆ ತಮ್ಮ ರಾಷ್ಟ್ರವು ಜಗತ್ತಿನಲ್ಲಿ ಬಹು ವಿಸ್ತಾರವಾದದ್ದೆಂಬ ಮಾತನ್ನು ಇತಿಹಾಸದಿಂದ ಸಿದ್ಧಮಾಡಿ ತೋರಿಸಲಿಕ್ಕೆ ಸಾಕಾದಷ್ಟು ಆಧಾರಗಳು ದೊರೆಯಬಹುದು. ಆದರೆ ತಮ್ಮ ವಂಶವು ಒಂದು ಸ್ವತಂತ್ರವಾದ ಮಾನವ ಜಾತಿಯಿರುವದೆಂದೂ ಅದು ಇತರ ಜಾತಿಗಳಿಗಿಂತ ಶ್ರೇಷ್ಠವಾದದ್ದೆಂದೂ ಅವರು ಹೇಳುವುದಿಲ್ಲ. ಜರ್ಮನ್ ಜನಾಂಗದವರಷ್ಟೆ ತಮ್ಮ ವಂಶವು ಶ್ರೇಷ್ಠವಾದದ್ದೆಂದು ಹೇಳಿಕೊಳ್ಳುವರು. ಇದರ ಕಾರಣವೇನೊ ಸ್ಪಷ್ಟವಾಗಿಯೇ ಇದೆ. ಫ್ರೆಂಚ, ಬ್ರಿಟಿಷ್ ಮತ್ತು ಅಮೇರಿಕನ್ ಜನರಿಗೆ ರಾಜಕೀಯ ದೃಷ್ಟಿಯಿಂದ ತಾವೆಲ್ಲರೂ ಒಂದು ರಾಷ್ಟ್ರದವರೆಂಬ ಭಾವನೆಯಿರುವದು. ಬಿಸ್ಮಾರ್ಕನಿಗಿಂತ ಮೊದಲು ಒಂದು ಅಖಂಡ ಜರ್ಮನ್ ರಾಷ್ಟ್ರವೇ ಇರಲಿಲ್ಲ. ಬಿಸ್ಮಾರ್ಕನ ಪ್ರಯತ್ನದಿಂದ ಸುಮಾರು ೪ ಜರ್ಮನ್ ಜನರು ಒಂದೇ ರಾಷ್ಟ್ರಧ್ವಜದ ಕೆಳಗೆ ಬಂದರು. ಯುರೋಪದ ಮಧ್ಯ ಪ್ರದೇಶದಲ್ಲಿಯೂ ಪೂರ್ವ ಭಾಗದಲ್ಲಿಯೂ ಜರ್ಮನ್ ಜನರು ವಾಸಿಸುತ್ತಲಿದ್ದು ಅವೆಲ್ಲ ಸ್ಥಳಗಳಲ್ಲಿ ಅವರು ಕಷ್ಟವನ್ನು ಸಹಿಸಿ ದುಡಿದು ಕಾಟಕಸರಿನಿಂದ ಜೀವಿಸುವ ಪ್ರಾಮಾಣಿಕರೂ ಪ್ರಗತಿಪರವಿಚಾರದವರೂ ಆಗಿರುವರೆಂಬುದು ಕಂಡುಬರುವದು. ಅವರ ಶರೀರವು ಸ್ವಚ್ಛವಾಗಿರುವದು. ಅವರ ಮನೆಮಾರುಗಳು ನಿರ್ಮಲವಾಗಿರುವವು ಅವರ ಜೀವನ ಕ್ರಮವು ಸುವ್ಯವಸ್ಥಿತವಾದದ್ದು. ಅವರು ನಿರೋಗಿಗಳಾಗಿರುವರು ಅವರ ಶಿಕ್ಷಣಾಲಯಗಳು ಚೆನ್ನಾಗಿರುವವು. ಸ್ಲಾವ್ ಜನರು ಕಡಿಮೆ ತರಗತಿಯವರಾಗಿದ್ದು ಅವರು ಹಿಂದುಳಿದವರೂ ಅಶಿಕ್ಷಿತರೂ ಅಸ್ವಚ್ಛರೂ ಆಗಿರುವರು. ಹೀಗಿರುವದರಿಂದ ಜರ್ಮನ್ನರಿಗೆ ತಮ್ಮ ವಂಶದ ಅಭಿಮಾನವಿರುವದರಲ್ಲಿ ಆಶ್ಚರ್ಯವೇನಿದೆ ?

೪. ಇನ್ನು ನಾವು ಜರ್ಮನ್ನರ ಮೂಲ ವಸತಿಸ್ಥಾನ (Lebensraum) ಎಂಬ ಪ್ರಶ್ನೆಯ ಬಗ್ಗೆ ವಿಚಾರಿಸೋಣ. ಹೆರ್ ಹಿಟ್ಲರನ ಅಭಿಪ್ರಾಯದಂತೆ ಪ್ರತಿ ಮನುಷ್ಯನಿಗೂ ನಿರೋಗಿಯಾಗಿ ಬಾಳಲಿಕ್ಕೆ ಬೇಕಾಗುವಷ್ಟು ಸ್ಥಳವು ಬೇಕೇ

ಬೇಕು. ನಾರ್ಡಿಕ ವಂಶವು ದಿನದಿನಕ್ಕೆ ಬೆಳೆಯುತ್ತ ಸಾಗಿರುವದರಿಂದ ಅವರಿಗೆ ಹೆಚ್ಚು ಸ್ಥಳವು ಬೇಕು. ಜರ್ಮನಿಯಲ್ಲಿ ಈಗಾಗಲೇ ಅವರಿಗೆ ಸಾಕಾದಷ್ಟು ಸ್ಥಳವು ಉಳಿದಿರುವದಿಲ್ಲ. ಆಂದಮೇಲೆ ಬೆಳೆಯುತ್ತ ಸಾಗಿರುವ ಅವರ ಸಂತತಿಯವರ ಗತಿಯೇನು? ಈ ಸಂಕಟದ ನಿವಾರಣೆಗೆ ಮುಂದೆಹೇಳುವ ನಾಲ್ಕು ಉಪಾಯಗಳನ್ನು ಸೂಚಿಸಬಹುದು. (೧) ಸಂತತಿ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳುವದು. ನಾರ್ಡಿಕ್ ವಂಶದ ಬೆಳೆವಣಿಗೆಯ ದೃಷ್ಟಿಯಿಂದ ಇದು ಗ್ರಾಹ್ಯವಾಗಲಾರದು. (೨) ದೇಶದೊಳಗಿನ ಜನರ ವಸತಿ ಸ್ಥಾನಗಳನ್ನು ಬೆಳಿಸುವದು. ಈ ಮಾರ್ಗದಿಂದ ಅಲ್ಪ ಸ್ವಲ್ಪ ಅನುಕೂಲವಾಗುವಂತಿದ್ದರೂ ಅಷ್ಟರಿಂದಲೇ ನಮ್ಮ ಬೇಡಿಕೆಯು ಪೂರೈಸಲ್ಪಡಲಾರದು. (೩) ಹೊಸ ಭೂಪ್ರದೇಶವನ್ನು ದೊರಕಿಸಿಕೊಂಡು ಅಲ್ಲಿ ಜರ್ಮನ್ನರು ಹೋಗಿ ವಾಸಿಸುವದು. (೪) ಕಾರಖಾನೆಗಳನ್ನು ಹೆಚ್ಚಿಸಿ ಪರದೇಶಕ್ಕೆ ಕಳುಹಿಸುವ ಸರಕಿನ ಮಾನವನ್ನು ಬೆಳಿಸುವದು. ಮತ್ತು ಪರದೇಶದ ವ್ಯಾಪಾರವನ್ನು ಹೆಚ್ಚಿಸುವದು. ಈ ಕೊನೆಯವೆರಡು ಉಪಾಯಗಳಿಂದ ಜರ್ಮನ್ ಜನಾಂಗಕ್ಕೆ ಸಾಕಾದಷ್ಟು ಅನುಕೂಲತೆಯಾಗಬಹುದು. ಮಹಾ ಯುದ್ಧದ ಪೂರ್ವದಲ್ಲಿ ೧೮೭೦ ನೆಯ ಇಸ್ವಿಯಿಂದಲೂ ಜರ್ಮನ್ ರಾಜ್ಯಕರ್ತರು ತಮ್ಮ ದೇಶದ ಉದ್ಯೋಗ ವ್ಯವಸಾಯಗಳನ್ನು ಬೆಳಿಸಿದರು. ಮತ್ತು ಪರದೇಶಕ್ಕೆ ಕಳುಹಿಸುವ ಸರಕಿನ ಮಾನವನ್ನು ಹೆಚ್ಚಿಸಿದರು. ಈ ಉಪಾಯವು ಅವರಿಗೆ ಯೋಗ್ಯವೆನಿಸಿತು. ಆದರೆ ಹಿಟ್ಲರನ ಅಭಿಪ್ರಾಯದಂತೆ ಜರ್ಮನ್ನರ ಒಕ್ಕಲುತನದ ಉತ್ಪನ್ನವನ್ನು ಬೆಳಿಸಬೇಕಾಗಿರುವದು. ಅಂದರೆ ಹೆಚ್ಚು ಹೆಚ್ಚು ಭೂಪ್ರದೇಶವನ್ನು ಜರ್ಮನ್ ಸತ್ತೆಗೆ ಒಳಪಡಿಸಬೇಕಾಗಿದೆ.

೫. ಪರದೇಶಕ್ಕೆ ಸರಕನ್ನು ಕಳುಹಿಸುವದಕ್ಕೆ ಹಿಟ್ಲರನು ಯಾಕೆ ಒಪ್ಪುವದಿಲ್ಲ? ಇದಕ್ಕೆ ಮೊದಲನೆಯ ಕಾರಣವೇನೆಂದರೆ— ಜರ್ಮನ್ ಜನರು ಇದರಿಂದ ಶಹರವಾಸಿಗಳಾಗಿ ಅವರ ಬಡತನವು ಹೆಚ್ಚುವದು. ಅವನು ಹಳ್ಳಿಯಲ್ಲಿ ವಾಸಿಸುವ ಹಿಂದು ಬಡ ಕುಟುಂಬದಲ್ಲಿ ಹುಟ್ಟಿದವನು. ಜೀವನೋಪಾಯವನ್ನು ಹುಡುಕುತ್ತ ಅವನು ವಿಯೆನ್ನಾಕ್ಕೆ ಹೋಗಬೇಕಾಯಿತು. ಆದ್ದರಿಂದ ಹೀಗೆ ಜನರು ಜೀವನೋಪಾಯಗಳನ್ನು ಹುಡುಕುತ್ತ ಶಹರಗಳಿಗೆ ಹೋಗಿ ಸೇರುವದು ಅವನಿಗೆ ಸೇರುವದಿಲ್ಲ. ಎರಡನೆಯ ಕಾರಣವೆಂದರೆ ಹೀಗೆ ಪರದೇಶಕ್ಕೆ ಸರಕು ಕಳುಹಿಸಿ ಜೀವಿಸಲು ಯತ್ನಿಸಿದರೆ ಜರ್ಮನ್ನರು ಪರದೇಶಗಳಲ್ಲಿಯು ಸುಖಸಮಾಧಾನಗಳ ಆಥವಾ ಅಲ್ಲಿಯ ಬಡಲಾವಣೆಗಳ ಮೇಲೆ ಅವಲಂಬಿಸಿಕೊಂಡಿರಬೇಕಾಗುವದು. ಅವರ ಜೀವನವು ಸ್ವತಂತ್ರವಾಗಿ ಸಾಗಲಾರದು. ಯುದ್ಧದ ಸಮಯಲ್ಲಿ ಹೆಚ್ಚು ಜನದಟ್ಟಣೆಯಿರುವ ಪ್ರದೇಶಗಳ ಮೇಲೆ ವೈರಿಗಳು ಹಲ್ಲೆಮಾಡುವದರಿಂದ ಅಲ್ಲಿರುವ

ಜನರು ಆಪತ್ತಿಗೆ ಗುರಿಯಾಗುವರು. ರಶಿಯಾ ಮತ್ತು ಅಮೇರಿಕೆಯ ಸಂಯುಕ್ತ ರಾಷ್ಟ್ರಗಳಲ್ಲಿ ಜನವಸತಿಯು ವಿರಳವಾಗಿದ್ದು ಅಲ್ಲಿಯ ಜನರು ಸುರಕ್ಷಿತವಾಗಿರುವರು. ಜಗತ್ತಿನ ಎಲ್ಲ ಸತ್ತೆಗಳಲ್ಲಿ ಶ್ರೇಷ್ಠವೆನ್ನಿಸಿಕೊಳ್ಳುವ ರಾಜಸತ್ತೆಗೆ (World power) ಹೆಚ್ಚು ವಿಶಾಲವಾದ ಪ್ರದೇಶವು ಅವಶ್ಯಕವಾಗಿದೆ. ಸದ್ಯಕ್ಕೆ ನಮ್ಮ ರಾಜಸತ್ತೆಯು ಅಷ್ಟು ಪ್ರಬಲವಾಗಿಲ್ಲ. ಅದು ಮಿಕ್ಕ ಎಲ್ಲ ರಾಜಸತ್ತೆಗಳನ್ನು ಮೀರಿ ನಿಲ್ಲಬೇಕಾದರೆ ಅದರ ವಿಸ್ತಾರವಾಗಲೇಬೇಕು. ಇದು ಹಿಟ್ಲರನು ಹೇಳುವ ಮೂರನೆಯ ಕಾರಣವು. ಒಂದು ವೇಳೆ ಹಾಗೆ ಆಗಲು ಸಾಧ್ಯವಿಲ್ಲದಿದ್ದರೆ ಅದು ನಾಶವಾಗಿ ಹೋದರೂ ಅಡ್ಡಿಯಿಲ್ಲ. ಬಲಿಷ್ಟವಾದ ಸತ್ತೆಗೆ ವಿಶಾಲವಾದ ಭೂಪ್ರದೇಶವು ಅವಶ್ಯಕವೆಂಬ ಮಾತಿಗೆ ಬ್ರಿಟಿಷ ಸಾಮ್ರಾಜ್ಯ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಸೊವ್ಹಿಯಟ್ ಸತ್ತೆಗೆ ಒಳಗಾದ ರಶಿಯಾದ ರಾಜ್ಯ ಚೀನದ ರಾಜ್ಯ ಫ್ರೆಂಚ್ ಸಾಮ್ರಾಜ್ಯ ಮೊದಲಾದವು ಯೋಗ್ಯವಾದ ಉದಾಹರಣೆಗಳಾಗಿವೆ.

ಮೆ|| ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನರವರ ಒಂದು ಪರಿಪತ್ರದ ಮುಖ್ಯಾಂಶಗಳು

೧೯೩೯ ನೆಯ ಇಸ್ವಿಯ ಜುಲೈ ತಿಂಗಳ ೧೮ ನೆಯ ತಾರೀಖಿಗೆ ಮುಂಬಯಿ ಸರಕಾರದವರು ತಮ್ಮ ೭೩೭/೩೯ ನೆಯ ಸಂಬರಿನ ಪರಿಪತ್ರದ ಮೂಲಕ ಆಯಾ ಖಾತೆಯ ಮುಖ್ಯಾಧಿಕಾರಿಗಳಿಗೆ ಅವರ ಕೆಳಗಿನ ನೌಕರ ಜನರು ಸಹಕಾರೀ ಸಂಘಗಳಿಗೆ ಕೊಡಬೇಕಾಗಿರುವ ಸಾಲದ ಹಣವನ್ನು ಅವರ ಪಗಾರಿನಿಂದ ಮುರಿದು ಕೊಳ್ಳುವ ಸಂಬಂಧದಿಂದ ಕೆಲವು ನಿಯಮಗಳನ್ನು ಸೂಚಿಸಿರುವರು. ಅದರೆ ಕೆಲಕೆಲವು ಪ್ರಾಥಮಿಕ ಶಿಕ್ಷಕರು ತಾವು ಬೋರ್ಡಿನ ನೌಕರರಿರುವದರಿಂದಲೂ ಮೇಲೆ ಹೇಳಿದ ನಿಯಮಗಳು ಸರಕಾರೀ ನೌಕರರಿಗಷ್ಟೇ ಸಂಬಂಧಿಸುವವಾದ್ದರಿಂದಲೂ ಆ ನಿಯಮಗಳು ತಮಗೆ ಸಂಬಂಧಿಸುವದಿಲ್ಲವೆಂಬ ಕಾರಣ ತೋರಿಸಿ, ತಾವು ಸಹಕಾರೀ ಸಂಘಗಳಿಗೆ ಕೊಡಬೇಕಾದ ಸಾಲದ ಕಂತುಗಳ ಬಗ್ಗೆ, ತಮ್ಮ ಪಗಾರಿನಿಂದ ಹಣವನ್ನು ಮುರಿದುಕೊಳ್ಳಲಿಕ್ಕೆ ತಾಲೂಕ ಮಾಸ್ತರರಿಗೆ ಅಧಿಕಾರ

ವಿರುವದಿಲ್ಲವೆಂದು ತಕರಾರು ಮಾಡಿದ್ದು ನಮ್ಮ ತಿಳುವಳಿಕೆಗೆ ಬಂದಿರುವದು. ಈ ಸಂಬಂಧದಿಂದ ನಾವು ಪ್ರಾ. ಶಿ. ರಿಗೆ ತಿಳಿಸುವದೇನಂದರೆ:— "ಮೇಲೆ ಹೇಳಿದ ಜಿ. ಆರ್. ಆರ್. ಡಿ. ಸಂ. ೭೩೭/೩೯ / ೧೮೮೭ ನೆಯ ಸರಕಾರೀ ಠರಾವು ಈ ಇಲಾಖೆಯೊಳಗಿನ ಸ್ಥಾನಿಕ ಸಂಸ್ಥೆಗಳ ಆಡಳಿತಕ್ಕೊಳಗಾದ ಪ್ರಾಥಮಿಕ ಶಿಕ್ಷಕರಿಗೂ ಸಹ ಸಂಬಂಧಿಸುವದು" ಎಂದು ಸರಕಾರದವರು ಅಪ್ಪಣೆಕೊಡಿಸಿರುವರು. ಮತ್ತು ಪ್ರಾಥಮಿಕ ಶಿಕ್ಷಕರು ತಾವು ಸಹಕಾರೀ ಸಂಘಗಳಿಗೆ ಕೊಡಬೇಕಾದ ಸಾಲದ ಕಂತಿನಸಲುವಾಗಿ, ತಮ್ಮ ಪ್ರತಿತಿಂಗಳ ಪಗಾರಿನಿಂದ ಹಣವನ್ನು ಮುರಿದು ಕೊಳ್ಳುವ ಬಗ್ಗೆ ತಾಲೂಕ ಮಾಸ್ತರರಿಗೆ ಒಮ್ಮೆ ಅಧಿಕಾರ ಪತ್ರವನ್ನು ಬರೆದು ಕೊಟ್ಟ ತರುವಾಯ ಅದು ಸಾಲದ ಕರಾರುಪತ್ರದ ಒಂದು ಭಾಗವೇ ಆಗುವದು. ಹಾಗು ಈ ವಿಷಯದಲ್ಲಿ ತಾಲೂಕ ಮಾಸ್ತರನು ಆ ಸಂಘದ ಎಜಂಟನ ಸ್ಥಾನದಲ್ಲಿ ಬಂದು, ಆ ಸಾಲದ ರಕಮನ್ನು ವಸೂಲ ಮಾಡುವ ಅಧಿಕಾರವನ್ನು ಪಡೆಯುವನು ಅಲ್ಲದೆ ಅವನು ಆ. ಪ್ರಾ. ಶಿಕ್ಷಕರ ಪಗಾರದೊಳಗಿಂದ ಆ ಕಂತುಗಳ ರಕಮನ್ನು ಮುರಿದುಕೊಳ್ಳಲು ಪಾತ್ರನಾಗುವನು. ಆದ್ದರಿಂದ ಇದು ಸಂಪೂರ್ಣ ಕಾಯಿದೆಗೆ ಅನುಸಾರವಾದ ಹಾಗೂ ಯೋಗ್ಯವಾದ ಕೆಲಸವೇ ಎಂದು ತಿಳಿಯಬೇಕಾಗುವದು. ಮತ್ತು ಪ್ರಾ. ಶಿ. ರು ಹೀಗೆ ಹಣವನ್ನು ಮುರಿದುಕೊಳ್ಳುವ ಬಗ್ಗೆ ತಕರಾರು ಮಾಡಿದರೆ ಅದು ನಡೆಯಲಾರದು ಎಂಬುದನ್ನು ಸಹ ಸರಕಾರದವರು ನಮಗೆ ತಿಳಿಸಿರುವರು. ಈ ಸಂಗತಿಯನ್ನು ಪ್ರಾಥಮಿಕ ಶಿಕ್ಷಕರ ಲಕ್ಷ್ಯಕ್ಕೆ ತರಬೇಕೆಂದು ಈ ಪತ್ರದ ಮೂಲಕ ಬಿನ್ನವಿಸಿಕೊಳ್ಳಲಾಗಿದೆ.

ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್.

ಪತ್ರದ ಸಾರಾಂಶ

ಕೊಡಗಾನೂರ—(ಜಿಲ್ಲೆ-ವಿಜಾಪೂರ) "ಇಲ್ಲಿಯ ಶಾಲಾ ವಾಚನಾಲಯವು ಒಳ್ಳೆಯದೂ ವ್ಯವಸ್ಥಿತವಾದದ್ದೂ ಇರುವದೆಂದು ಮೆ. ಮೂಪುಲೇದಾರ ಮುದ್ದೇಬಿಹಾಳ ಮತ್ತು ಟಸೇ ಅ. ಡೆ. ಎ. ಇ. ವಿಜಾಪೂರ ಇವರು ಶರಾ ಬರೆದಿರುವರು. ಊರವರು ಸುಮಾರು ೧೦ ರೂಪಾಯಿಗಳಷ್ಟು ಸಹಾಯ ಮಾಡಿರುವರು" ಎಂದು ವಾಚನಾಲಯದ ವ್ಯವಸ್ಥಾಪಕರೂ ಶಾಲಾಶಿಕ್ಷಕರೂ ಆದ ಶ್ರೀ. ವಾಳವೇಕರ ಇವರು ತಿಳಿಸುತ್ತಾರೆ.

ಪ್ರ ಕ ಟ ನೆ

೧೯೪೦ ನೆಯ ಇಸ್ವಿಯ ಮಾರ್ಚ ತಿಂಗಳಲ್ಲಾದ ಹೆಣ್ಣುಮಕ್ಕಳ ಪಿ. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪಾಸಾದ ಈ ಕೆಳಗೆ ಹೇಳುವ ಉಮೇದವಾರರಿಗೆ 'ಜಾರ್ಡಾಯಿನ್' ಇನಾಮುಗಳು ದೊರೆದಿರುವವು.

ನಂ.	ಹೆಸರು.	ಪರೀಕ್ಷೆಯ ನಂಬರು		ಜಾತಿ.	ಕೇಂದ್ರ.	ರಕಮು.
	ಸಾಮಾನ್ಯ ಇನಾಮು					
೧	ಮೀರಾ ಸಖಾರಾಮ ನಾಡಕರ್ಣಿ	ಕನ್ನಡ	೪೭	ಬ್ರಾಹ್ಮಣ	ಹುಬ್ಬಳ್ಳಿ	೫ ರೂ.
೨	ಅನುಸೂಯಾ ದೇವೇಂದ್ರಪ್ಪ ಲೋಕರೆ	ಮರಾಠಿ	೧	ಕ್ರಿಸ್ತಿಯನ್	,,	೫ ರೂ.
೩	ರಮಾ ರವಳು ಕಾಮತ	ಮರಾಠಿ	೨೮	ಬ್ರಾಹ್ಮಣ	ಧಾರವಾಡ	೫ ರೂ.
	ಮುಖ್ಯವು ವರ್ಗದವರ ಇನಾಮು					
೧	ಅಕ್ಕವ್ವಾ ಫಕೀರಗೌಡಾ ಉಡಕೇರಿ	ಕನ್ನಡ	೧	ಲಿಂಗಾಯತ	ಧಾರವಾಡ	೫ ರೂ.
೨	ಗುಣವಂತಿ ಪ್ರಕಾಶಪ್ಪಾ ಕೊಟಬಾಗಿ	ಕನ್ನಡ	೧೦	ಕ್ರಿಸ್ತಿಯನ್	ಹುಬ್ಬಳ್ಳಿ	೫ ರೂ.
	ಹಿಂದುಳಿದ ವರ್ಗದ ಇನಾಮು					
೧	ದ್ಯಾಮವ್ವಾ ಮರೆಪ್ಪಾ ಕಾಂಬಳೆ	ಕನ್ನಡ	೬	ಚಲವಾದಿ	ಧಾರವಾಡ	೫ ರೂ.
	ಮುಸಲ್ಮಾನರ ಇನಾಮು					
೧	ಚಾಂಪಬಿ ಮೌಲಾಸಾಹೇಬ ಕಿರಟಗೇರಿ	ಉರ್ದು	೧	ಮುಸಲ್ಮಾನ	ಗದಗ	೫ ರೂ.

ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದ. ಭಾ. ಧಾರವಾಡ.

ಧಾರವಾಡದ ಕನ್ನಡ ಟೆಕ್ಸ್ಟ್‌ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು.

(ಕಳೆದ ಆಗಸ್ಟ ತಿಂಗಳದ ಸಂಚಿಕೆಯಿಂದ ಮುಂದೆ ಸಾಗಿದ್ದು)

ಅ. ನಂ.	ಪುಸ್ತಕಗಳ ಹೆಸರುಗಳು.	ಪ್ರಕಾಶಕರು.	ಬೆಲೆ.	ಯಾತಕ್ಕಾಗಿ ಮಂಜೂರ.
೯೯	ಕನ್ನಡ ನೂತನ ಪಾಠಮಾಲೆ ನಂ. ೫	ಮ್ಯಾಕ್ಮಿಲನ್ ಕಂಪನಿ, ಮುಂಬಯಿ	೦– ೫–೦	ಪ್ರಾ. ಶಾ. ಪಠ್ಯಪುಸ್ತಕ
೧೦೦	ಕನ್ನಡ ನೂತನ ಪಾಠಮಾಲೆ ನಂ. ೬	ಬುಕ್ ಕಮೀಟಿಯವರು ತಿಳಿಸಿದಂತೆ	೦– ೬–೦	ಸದರ
೧೦೧	ಕನ್ನಡ ನೂತನ ಪಾಠಮಾಲೆ ನಂ. ೭(ಆ. ೧೯೩೯)	ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು	೦– ೭–೦	ಸದರ
೧೦೨	ಕನ್ನಡ ನೂತನ ಪಾಠಮಾಲೆ ಬುಕ್ ನಂ. ೮		೦– ೮–೦	ಸದರ
೧೦೩	ಆನಂದ ಮಠ (೩ನೆಯ ಆ. ೧೯೩೦)	ಬೆಂಗಳೂರ ಪ್ರಿಂಟಿಂಗ ಅ್ಯಂಡ ಪಬ್ಲಿಶಿಂಗ ಕಂಪನಿ ಬೆಂಗಳೂರ ಸಿಟಿ	೧– ೦–೦	ಮಾ. ವಿ. ವಾ.
೧೦೪	ಭಾರತ ಮಹಿಲಾ (೨ನೆಯ ಆ. ೧೯೩೩)		೦–೧೨–೦	ಸದರ
೧೦೫	ವಂಗ ವಿಜೇತಾ (೪ನೆಯ ಆ. ೧೯೩೦)		೧– ೪–೦	ಸದರ
೧೦೬	ಕೋಹಿನೂರ ಆ. (೪ ಸನ್. ೧೯೩೦)		೧– ೦–೦	ಪ್ರಾ. ಮಾ. ಟ್ರೇ. ವಿ. ವಿವಾ.
೧೦೭	ದುರ್ಗೇಶನಂದಿನಿ (೪ನೆಯ ಆ. ೧೯೩೦)		೨– ೦–೦	ಸದರ
೧೦೮	ಪ್ರಕಾಶ ಲೇಖನಕಲೆ (೧ನೆಯ ಆ. ೧೯೩೬) ಬೆಲೆ ಯುತ್ತ ೫ ಆ. ಮಾಡಿದರೆ ಮಾತ್ರ ಮಂಜೂರ	ಬಿ. ಎನ್. ಪ್ಯಾಟಿ ಸವಣೂರ	೧– ೮–೦	ಮಾ. ವಿ. ವಾ.

೧೦೯	ಪ್ರಬಂಧ ಪ್ರಕಾಶ	ಮ್. ಎಸ್. ದೇಶಪಾಂಡೆ, ಎಮ್. ಎ. ಶಿಕ್ಷಕ ಜೆ. ಏ. ಹಾಯಸ್ಕೂಲ್, ಅಥಣಿ	೧– ೦–೦	ಮೂ. ಶಾ. ಪತ್ಯಪುಸ್ತಕ
೧೧೦	ಬಾಲಪ್ರಪಂಚ್ ಭಾಗ ೧, ೨, ೩	ಸತ್ಯಶೋಧನ ಪ್ರಕಾಶ ಮಂದಿರ ಬೆಂಗಳೂರ	೪೫– ೦–೦	ಪ್ರಾ. ಮೂ. ಟ್ರೇ. ವಿ. ವಾ.
೧೧೧	ಹಿಂದೂ ದೇಶದ ಚರಿತ್ರೆ ಭಾಗ ೧ (ಆ. ೧೯೩೭) ಬುಕ್ ಕಮೀಟಿಯವರ ಸೂಚನೆಯಂತೆ ಮುಂದಿನ ಆವೃತ್ತಿ ಯಲ್ಲಿ ತಿದ್ದಬೇಕು	ಲಾಂಗಮನ್ಸ್ ಗ್ರೀನ ಆ್ಯಂಡ ಕಂಪನಿ ಮುಂಬಯಿ	೧–೧೨–೦	ಮೂ. ಶಾ. ಪತ್ಯಪುಸ್ತಕ
೧೧೨	ರವಿವರ್ಮ (ಆ. ೧೯೩೬)	ಸತಿ ಹಿತೈಷಿಣಿ ಕಾರ್ಯಾಲಯ ಕೊಳ್ಳೆಗಾಲ (ಕೋಯಿಮತ್ತೂರ)	೦– ೬–೦	ಪ್ರಾ. ಮೂ. ಟ್ರೇ. ವಿ. ವಾ.
೧೧೩	ನಿಬಂಧ ಶಿಕ್ಷಕ ಅಥವಾ ಕನ್ನಡ ವಾಚನ ಕ್ರಮ	ಎಸ್. ಬಿ. ಉದಗಟ್ಟಿ ಹೆ. ಮೂ. ಕ. ಶಾ. ಮೂಡಕನೂರ	೦–೧೦–೦	ಪ್ರಾ. ಮೂ. ಟ್ರೇ. ಶಿ. ವಾ.
೧೧೪	ಕನ್ನಡನಾಡಿನ ಕಥೆಗಳು (ಆ. ೧೯೪೦)	ಎಸ್. ಎಸ್. ಕಮಲಾಪುರ ಸೆ. ಕ. ಹಿ. ರೀ. ಸೋ. ಧಾರವಾಡ	ಕ್ಯಾ. ೧– ೦–೦ ಸಾದಾ ೦.೧೨-೦	ಪ್ರಾ. ಮೂ. ಟ್ರೇ. ವಿ. ವಾ.
೧೧೫	ಹನುಮನ ಕವಿತೆ (ಆ. ೧೯೪೮)	ಡಿ. ಎಚ್. ಹನಮಯ್ಯ ಬೀ. ಬೀ. ಡಿ. ಪಾಪರ ಪ್ರೆಸ್ ಬೆಂಗಳೂರ	೮–೧೪–೦	ಪ್ರಾ. ಮೂ. ಟ್ರೇ. ಶಿ. ವಾ.
೧೧೬	ಕಿತ್ತೂರ ಗತ ವೈಭವ ೧ (ಆ. ೧೯೩೪)	ದುರದುಂಡೇಶ್ವರಮಠ, ಅರಭಾವಿ ಸಂಸ್ಥಾನ ಜಿ. ಬೆಳಗಾಂವಿ	೮–೧೨–೦	ಪ್ರಾ. ಮೂ. ಟ್ರೇ. ಶಿ. ವಾ.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಬೆಲೆ ೮ ಆಣೆಗಳು.

●

ಲೇಖಕರು :

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ, ಟ್ರೇನಿಂಗ್ ಸ್ಕೂಲ್, ಧಾರವಾಡ.

ಶ್ರೀ. ಭಾ. ವಾ. ಕುಲಕರ್ಣಿ, ಬೇಸಿಕ್ ಟ್ರೇನಿಂಗ್ ಸ್ಕೂಲ್, ಧಾರವಾಡ.

●

ಕನ್ನಡ ೫, ೬, ೭, ಮತ್ತು ಇಂಗ್ಲಿಷ ೧, ೨, ೩, ಇಯತ್ತೆಗಳಿಗೂ, ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಖಾಸಗಿಯಿಂದ ಹಿಂದೀ ಕಲಿಯುವವರಿಗೂ ಹಿಂದೀ ಅಧ್ಯಾಪಕರಿಗೂ ಬಹಳ ಉಪಯೋಗವಾಗುವಂತೆ ಸರಳವಾದ ಶೈಲಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳೂ ಮುಂಬೈ ಸರಕಾರದ ಹಿಂದುಸ್ತಾನೀ ಬೋರ್ಡಿನ ಸದಸ್ಯರೂ ಆದ ಶ್ರೀ. ಸಿದ್ಧನಾಥ ಪಂತರು ಮುನ್ನುಡಿಯನ್ನು ಬರೆದಿದ್ದಾರೆ.

●

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ವಿ. ಸೂ.— ನಮ್ಮಲ್ಲಿ ಟೀಚರ್ಸ ಸೊಸಾಯಿಟಿಗಳಿಗೂ, ವಿವಿಧ ಉದ್ದೇಶಗಳ ಸಹಕಾರೀ ಸಂಘಗಳಿಗೂ ಬೇಕಾಗುವ ಬುಕ್ಕುಗಳೂ ಫಾರ್ಮುಗಳೂ ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಸಿಗುತ್ತವೆ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. **ಶ್ರೀ. ಕುರಡಿಯವರು ರಚಿಸಿರುವ,**

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ.

ಈ ಪುಸ್ತಕಗಳು ಪಾಠ ಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠ ಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ತಳಸೆಯ ಪುಟದ ಲ್ಲಿಯ ಸರಕಾರದ ಪ್ರಕಟಣೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣದ ಸಮಿತಿಯು ಶಿಫಾರಸಿಗೆ ಅನುಸರಿಸಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟ. ಬಿ. ಪಿಎಚ್. ಸಿ. (ಅಮೇರಿಕಾ)

ಪ್ರತಿಯೊಬ್ಬ ಶಿಕ್ಷಕನಿಗೂ ಉಪಯುಕ್ತವಾದ ಈ ಪುಸ್ತಕದಲ್ಲಿ ಹಿಂದೀ ಕವಾಯತ; ಸರ್ವಾಂಗಸುಂದರ ವ್ಯಾಯಾಮ, ಆಸನ, ನಮಸ್ಕಾರ, ಲಾಠೀ, ಲೇಝೀಮ, ಜೋಡಿ, ಕೋಲಾಟ ಇತ್ಯಾದಿಗಳ ಮಾಹಿತಿಯನ್ನು ಕೊಟ್ಟಿದೆ. ಆಟ-ಬೈಲಾಟಗಳನಿಯಮಗಳನ್ನೂ ಕೊಟ್ಟಿದೆ. ಬೆಲೆ ೩ ರೂಪಾಯಿಗಳು.

ಈ ಪುಸ್ತಕದಲ್ಲಿ ಕೊಟ್ಟ ನಮಸ್ಕಾರಗಳ ಚಿತ್ರಪಟ ಬೆಲೆ ೪ ಆಣೆ.

ದೊರೆಯುವ ಸ್ಥಳ:—

ವಿಳಾಸ :— ಶ್ರೀ. ಜ. ಬಾಪಟ,
ಮದಿಹಾಳ, ಧಾರವಾಡ.

ಅಕ್ಟೋಬರ್ ೧೯೪೦ Reg. No B. 3691

(ಇದರಲ್ಲಿ ಕನ್ನಡ ಬಾಲಪತ್ರಿಕೆಯೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ವಿವಿಧ ವಿಷಯಗಳು	೦
೨.	ಕವಿತಾ ಶಿಕ್ಷಣ	ಜ
೩	ಹೇರ್ ಹಿಟ್ಲರನ ವಿಚಾರಗಳು	೧೫
೪.	"ಸಿನಾರ ಮುಸೋಲಿನಿ"	೧೬
೫.	ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳ ಸಮಿತಿ	೨೧
೬.	ಧಾರವಾಡ ಡಿ ಸ್ಟ್ರಿ. ಜೊ. ಸಿರ್ಕಿಯವರಿಗೆ ನಾರಾಂಶ	೨೨
೭.	ಪ್ರಕಟನೆ	೪೪
೮.	ಏಂಮುಸ್ತಾನೀ ಕನ್ನಡ ವ್ಯಾಕರಣ	೨೫
೯.	ಪತ್ರಗಳ ಸಾರಾಂಶ	೫೦

Printed by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School, Dharwar at his Office.

ಓದಿರಿ ! ತ್ವರಮಾಡಿರಿ !

ವಾಗ್ವಿಲಾಸ ಬುಕ್‌ಡಿಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ. ಎಡ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ : ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರ ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ಸಮ್ಮಿಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು ಪಂಚಾಂಗಗಳು ವಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕವಿತಾಶನ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮಡಿವಾನ್, ಬಿ. ಎ.

ಸಂಪುಟ ೭೯	ಅಕ್ಟೋಬರ ೧೯೪೦	ವರ್ಷ ೧೨. ಸಂ. ೭

ವಿವಿಧ ವಿಷಯಗಳು

೧. **ಶಾಲೆಯ ಅಭ್ಯಾಸಕ್ರಮದಲ್ಲಿ ವೈವಿಧ್ಯತೆಯು ಅತ್ಯವಶ್ಯವಾಗಿ ಬೇಕು** :—ಕಳೆದ ಸಪ್ಟಂಬರ ತಿಂಗಳಲ್ಲಿ ಬೆಂಗಳೂರಿನ ದಂಡಿನ ವಿಭಾಗದಲ್ಲಿ ಶಿಕ್ಷಕರ ಸಭೆಯಲ್ಲಿ ಹಿಂದೀ ಶಿಕ್ಷಣ ಕಮಿಶನರ ನಾಹೇಬರಾದ ಜಾನ್ ಸಾರ್ಜಂಟರವರು ಹೇಳಿದುದೇನಂದರೆ :—

"ಹಿಂದುಸ್ತಾನ ಹಾಗೂ ಇಂಗ್ಲಂಡ ದೇಶಗಳೆಡುರಿಗಿರುವ ಶೈಕ್ಷಣಿಕ ಸಮಸ್ಯೆಗಳಲ್ಲಿ ವಿಶೇಷ ಭೇದವೇನೂ ಇಲ್ಲ. ಇಂಗ್ಲಂಡದ ಹಾಗೂ ಹಿಂದುಸ್ತಾನದ ಚಿಕ್ಕಮಕ್ಕಳಲ್ಲಿ ವಿಶೇಷ ಭಿನ್ನತೆಯುದೆಯಂದು ನನಗೆ ಎನಿಸುವದಿಲ್ಲ. ಇಂಗ್ಲಂಡದಲ್ಲಿಯ ಹುಡುಗರಿಗಿಂತ ಇಲ್ಲಿಯ ಹುಡುಗರು ಹೆಚ್ಚು ಜಾಣರೂ ಹೆಚ್ಚು ಕಾರ್ಯಾಸಕ್ತರೂ ಆಗಿರುವರೆಂದು ನನ್ನ ಅನುಭವವಾಗಿದೆ. ವಿವಿಧ ಮನೋವೃತ್ತಿಯು ಬಾಲಕರಿಗೆ ಸರಿಹೋಗುವಂತೆ ಅಭ್ಯಾಸಕ್ರಮಗಳಿಲ್ಲದಿರುವದರಿಂದ ಅವರಿಗೆ ಅದೊಂದು ಬಗೆಹರಿಯದ ಸಮಸ್ಯೆಯಾಗಿದೆ. ರಾಷ್ಟ್ರವು ಕೈಕೊಳ್ಳುವ ವಿವಿಧ ಚಟುವಟಿಕೆಗಳಲ್ಲೆಲ್ಲ ಬುದ್ಧಿವಂತರು ಯೋಗ್ಯ ಪ್ರಮಾಣದಿಂದ ಹಂಚಿ ಹೋಗುವಂತೆ ಹೇಗೆ ವ್ಯವಸ್ಥೆ ಮಾಡಬೇಕೆಂಬುದೂ ಒಂದು ದೊಡ್ಡ ಸಮಸ್ಯೆಯಾಗಿದೆ. ಇದು ಬರಿಯ ಆರ್ಥಿಕ ಪರಿಸ್ಥಿತಿಯ ಮೇಲೆಯೇ ಅವಲಂಬಿಸಿದೆಯೆಂದು ನನಗೆನಿಸುವದಿಲ್ಲ. ಕೈಕೆಲಸ ಮಾಡಲು ಬುದ್ಧಿಯಿಲ್ಲದ ಹುಂಬರೇ ಯೋಗ್ಯರೆಂಬ ವಿಚಿತ್ರ ಕಲ್ಪನೆಯು ಕಳೆದ ಹತ್ತು ವರ್ಷಗಳಲ್ಲಿ ಅಳಿದುಹೋಗಿದೆ.

ತಮ್ಮ ಕಡೆಗೆ ಬರುವ ವಿದ್ಯಾರ್ಥಿಗಳಿಗೆ ವಿವಿಧವಿಷಯಗಳಲ್ಲಿ ಗತಿ ದೊರೆಯುವಂತೆ ಮಾಡುವ ಅಭ್ಯಾಸಕ್ರಮವನ್ನು ಹುಡುಕುವದು ಇಂದಿನ ಶಿಕ್ಷಕರ ಆದ್ಯ ಕರ್ತವ್ಯವೇ ಆಗಿದೆ. ಅದು ಆಗುವವರೆಗೆ ಶಿಕ್ಷಣದಲ್ಲಿ ಕ್ರಾಂತಿಯಾಗಿ ಹೊಸ ಯುಗವು ಪ್ರಾರಂಭವಾಗಲಾರದು. ಅಭ್ಯಾಸಕ್ರಮದಲ್ಲಿ ವಿವಿಧತೆಯು ಇಲ್ಲದಿದ್ದರೆ ನಮ್ಮ ತೊಂದರೆಗಳು ನೀಗವು.''

೨. **ಶಿಕ್ಷಣದ ಒಲವು**:—ಅಲಹಾಬಾದ ಯುನಿವ್ಹರ್ಸಿಟಿಯ ಮುಂಚಿನ ವ್ಹಾಯಿಸ್ ಚಾನ್ಸಲ್‌ರಾದ ಶ್ರೀಮಾನ್ ಪಂಡಿತ ಇಕಬಾಲ ನಾರಾಯಣ ಗುರ್ಟು ಇವರು ಮಧ್ಯಪ್ರಾಂತದ ೯ನೆಯ ಶಿಕ್ಷಣ ಸಮ್ಮೇಲನದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದುದೇನೆಂದರೆ—

ಮನುಷ್ಯನ ಸ್ವಾಭಾವಿಕವಾದ ವ್ಯಕ್ತಸ್ವರೂಪವು ಆತನ ಚಟುವಟಿಕೆ, ಭಾವನಾಪರವಶತೆ, ಬುದ್ಧಿ ಇವುಗಳಿಂದ ವ್ಯಕ್ತವಾಗುತ್ತದೆ. ಮನುಷ್ಯನು ಆಧ್ಯಾತ್ಮಿಕನಿರುವದರಿಂದ ಇವೆಲ್ಲವುಗಳನ್ನು ಮನಗಾಣುವದರ ಮೇಲೆ ಶಿಕ್ಷಣದ ತತ್ವಗಳು ಅವಲಂಬಿಸಿವೆ. ಭಾವನೆ, ಚಟುವಟಿಕೆ, ಬುದ್ಧಿ ಇವುಗಳನ್ನು ಸರಿಯಾಗಿ ವಿಕಾಸಗೊಳಿಸಬೇಕು. ಶಾಂತನೂ ಸುಸ್ವಭಾವಿಯೂ, ಸುಖಿಯೂ ಆಗುವದು ಮಾನವನ ಜೀವಿತ-ಧ್ಯೇಯವಿರಬೇಕು. ಇದೇ ಶಿಕ್ಷಣದ ಮುಖ್ಯೋದ್ದೇಶವು.

ಬಾಲಕರು ಹುಟ್ಟಿದಾಗಲೆ ಪರಿಪೂರ್ಣರಾಗಿರುವದಿಲ್ಲ. ಪೂರ್ಣತ್ವವನ್ನು ಹೊಂದಲು ಶಿಕ್ಷಣವು ಒಂದು ಸಾಧನವಾಗಿರುವದು. ವಿದ್ಯಾರ್ಥಿಗಳ ಗುಣಗಳನ್ನೇ ಕೇವಲ ಅವಲಂಬಿಸಿ ಶಿಕ್ಷಣಕೊಡದೆ ಆತನ ವ್ಯಕ್ತಿತ್ವ, ಪರಿಸ್ಥಿತಿ, ಸಾಮಾಜಿಕ ಸಂಬಂಧ ಇವುಗಳನ್ನು ಅರಿತುಕೊಂಡು ಶಿಕ್ಷಣಕೊಡಬೇಕಾಗುವದು.

ವರ್ಧಾ ಯೋಜನೆಯ ಮೇರೆಗೆ ಪ್ರಕೃತಕ್ಕೆ ದೇಶದಲ್ಲಿ ನಡೆದಿರುವ ಶಿಕ್ಷಣದ ಕಾರ್ಯಕ್ರಮಕ್ಕೂ ಪ್ರಕೃತದ ರಾಜಕೀಯ ಧೋರಣಕ್ಕೂ ಪ್ರತ್ಯಕ್ಷ ಸಂಬಂಧವಿಲ್ಲದಿದ್ದರೂ ದೇಶದ ರಾಜಕೀಯ ಮುಂದಾಳುಗಳಾದ ಮಹಾತ್ಮಾ ಗಾಂಧಿಯವರೇ ಮೊದಲಾದವರು ಈ ಯೋಜನೆಯ ಪ್ರವರ್ತಕರಾಗಿರುವಷ್ಟರಿಂದಲೇ ಇದಕ್ಕೆ ಜನರು ರಾಜಕೀಯ ಸ್ವರೂಪವನ್ನು ಕೊಡುತ್ತಲಿರುವದು ದುರ್ದೈವದ ಮಾತಾಗಿದೆ.

೩. **ಮುಂಬಯಿ ಸರಕಾರದಿಂದ ಜರುಗಿಸಲ್ಪಟ್ಟ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪ್ರತಿನಿಧಿಕೂಟದ ನಿರ್ಣಯಗಳು**:—(೧) ಕಾನಡಾ, ಪಂಚಮಹಾಲ, ರತ್ನಾಗಿರಿ ಈ ಬಡ ಜಿಲ್ಲೆಗಳ ಹೊರತಾಗಿ ಉಳಿದ ಜಿಲ್ಲೆಗಳ ಲೋಕಲ್ ಫಂಡ ಸೆಸ್ಸನ್ನು ರೂಪಾಯಿಗೆ ೧॥ ಆಣೆಯಿಂದ ೨॥ ಆಣೆಯ ತನಕ ಏರಿಸುವದು. (೨) ಪ್ರತಿ

ಜಿಲ್ಲೆಯ ಭೂತೆರಿಗೆಯ ೧೦% ಹಣವನ್ನು ಆ ಜಿಲ್ಲೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗೆ ಗ್ಯಾರಂಟಿಯನ್ನಾಗಿ ಕೊಡುವದು. (೩) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗಾಗಿ ಜಂಗಲ ಖಾತೆಯಿಂದ ಮಾರಲ್ಪಡುವ ಕಟ್ಟಿಗೆಯ ಉತ್ಪನ್ನದ ಮೇಲೆ ಸೆಸ್ಸನ್ನು ಕೂಡ್ರಿಸುವದು. (೪) ಬಿನ್-ಶೇತಕಿ ತೆರಿಗೆ, ಮನೋರಂಜನಾ ಪ್ರಯೋಗ-ಕರ, ವಿದ್ಯುತ್ ಶಕ್ತಿಯ ಮೇಲಿನ ಸರ್‌ಚಾರ್ಜು, ಪೆಟ್ರೋಲ ಮತ್ತು ಮೋಟಾರ ಬಂಡಿಗಳ ಮೇಲಿನ ಕರ, ಇವುಗಳನ್ನು ಸಂಪೂರ್ಣವಾಗಿ ಅಥವಾ ಇವುಗಳ ಅಂಶವನ್ನಾದರೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಕೊಡತಕ್ಕದ್ದು. (೫) ಉದ್ಯೋಗಗಳ ಮೇಲಿನ ಕರಗಳನ್ನು ಆಕರಣೆಮಾಡುವದು, ಆದರೆ ಲೋಕಲ್‌ಬೋರ್ಡುಗಳಿಗೆ ಒಳಪಟ್ಟ ಭಾಗಗಳಲ್ಲಿ ಸರಕಾರದವರೇ ಇದನ್ನು ವಸೂಲ ಮಾಡತಕ್ಕದ್ದು. (೬) ಸಾಧ್ಯ ವಿದ್ದಲ್ಲಿ ಗೃಹತೆರಿಗೆಯನ್ನು ಏರಿಸತಕ್ಕದ್ದು. (೭) ಸ್ಥಿರ ಜರಾಸ್ತಿಗಳ ಮೇಲಿನ ಕರಕ್ಕೆ ಶಿಕ್ಷಣ ಸೆಸ್ಸನ್ನು ಕೂಡಿಸಿ ಆಕರಣೆ ಮಾಡಿ ಕಡ್ಡಾಯದ ಶಿಕ್ಷಣವನ್ನು ಕೆಲವೊಂದೆಡೆಯಲ್ಲಿ ಪ್ರಯೋಗಕ್ಕೆ ತರುವದು. ಆದರೆ ೧೯೩೮ ನೇ ಇಸವಿಯಲ್ಲಿ ಜಾರಿಗೆ ತಂದ ಎಜ್ಯುಕೇಶನಲ್ ಆಕ್ಟಿನ ನೂತನ ಕ್ರಮದಂತೆ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಹಿಂದೆ ತೆಗೆದುಕೊಂಡ ಅಧಿಕಾರಗಳನ್ನು ತಿರುಗಿ ಕೊಟ್ಟಲ್ಲಿ ಮಾತ್ರ ಈ ನಿರ್ಣಯದ ಪ್ರಯೋಗವಾಗಬೇಕೆಂತ ಬಹುಮತದ ಅಭಿಪ್ರಾಯವಾಯಿತು. (೭) ಸ್ಥಾನಿಕಸ್ವರಾಜ್ಯ ಸಂಸ್ಥೆಗಳಿಗೆ ಕಡ್ಡಾಯದ ಮತ್ತು ಇತರ ಶಿಕ್ಷಣಕ್ಕೆ ತಗಲುವ ಖರ್ಚಿನ ಒಂದು ನಿರ್ದಿಷ್ಟ ಅಂಶವನ್ನು ಸರಕಾರವು ಕೊಡಲು ಬದ್ಧವಾಗಿರುವದೆಂಬ ಒಂದು ಕಾಯಿದೆಯನ್ನು ಬಳಕೆಯಲ್ಲಿ ತರುವದು. (೮) ಕಡ್ಡಾಯದ ಶಿಕ್ಷಣಕ್ಕೆ ತಗಲಬಹುದಾದ ವೆಚ್ಚವನ್ನು ವಿವೇಚಿಸಿ ಇದರ ವಿಷಯ ಸರಕಾರದ ಧೋರಣವನ್ನು ವಿವರಿಸಿ ಸ್ಪಷ್ಟೀಕರಿಸುವದು. (೯) ಲೋಕೋಪಯುಕ್ತ ಟ್ರಾಮು, ಬಸ್ ಮುಂತಾದವುಗಳನ್ನು ಸ್ಥಾಪಿಸಿ ತಮ್ಮ ಉತ್ಪನ್ನವನ್ನು ಬೆಳಿಸುವ ಕಾರ್ಯದಲ್ಲಿ ಸ್ಥಾನಿಕಸ್ವರಾಜ್ಯ ಸಂಸ್ಥೆಗಳಿಗೆ ಸರಕಾರವು ಬೆಂಬಲ ಮತ್ತು ಸಹಾಯವನ್ನು ಕೊಡುವದು. (೧೦) ಮ್ಯುನಿಸಿಪಾಲಿಟಿಗಳಲ್ಲಿ ಮತದಾನದ ಅಧಿಕಾರವನ್ನು ಎಲ್ಲ ಪ್ರೌಢ ವಯಸ್ಕರಿಗೆ ಕೊಡುವದು. (೧೧) ಸ್ಥಾನಿಕಸ್ವರಾಜ್ಯ ಸಂಸ್ಥೆಗಳ ಸದಸ್ಯರಾಗಲಿಕ್ಕೆ ದೇಶಭಾಷೆಯ ಳನೆಯ ಇಯತ್ತೆಗೆ ಬೇಕಾಪಷ್ಟು ಶಿಕ್ಷಣವನ್ನಾದರೂ ಪಡೆಯಬೇಕಾಗುವದು; ಮತ್ತು ಆಫೀಸ ಅಧಿಕಾರಿಗಳು ಮೆಟ್ರಿಕ್ಯುಲೇಶನ್ ಪರೀಕ್ಷೆಯ ಶಿಕ್ಷಣ ಹೊಂದಿದವರಾದರೂ ಇರಬೇಕು. (೧೨) ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸದಸ್ಯರ ಆಯ್ಕೆಯಲ್ಲಿ ಪ್ರತಿಯೊಂದು ವಿಭಾಗಕ್ಕೆ ಒಬ್ಬ ಸದಸ್ಯ ಪ್ರತಿನಿಧಿಯಾಗುವ ಪದ್ಧತಿಯನ್ನನುಸರಿಸಬೇಕು. ಆದರೆ ಅಲ್ಪಸಂಖ್ಯಾವರ್ಗಗಳ ಪ್ರತಿನಿಧಿಗಳಿಗೋಸ್ಕರ ಹೆಚ್ಚಿನ ಸದಸ್ಯರ ಆಯ್ಕೆಯಾಗಬಹುದು. (೧೩) ಒಂದೇ ವೇತನದ

ಸ್ಕೀಲನ್ನು ಎಲ್ಲ ಸ್ಥಾನಿಕ ಸ್ವರಾಜ್ಯ ಸಂಸ್ಥಾಧಿಕಾರಿಗಳಿಗೆ ಕೊಡಬೇಕೆಂಬ ವಿಚಾರವು ಸರ್ವಾನುಮತದಿಂದ ಬದ್ದುಹೋಯಿತು. ಹೊಸ ಅಧಿಕಾರಿಗಳನ್ನು ನೇಮಿಸಿದಲ್ಲಿ ಅದನ್ನು ನಿಷೇಧಿಸುವ ಅಧಿಕಾರವು ಸರಕಾರಕ್ಕಿರಬಾರದು. ಈ ಅಧಿಕಾರಿಗಳಿಗೆ ಅವರು ಮಾಡಿದ ತಪ್ಪಿಗಾಗಿ ಶಿಕ್ಷೆಯನ್ನು ವಿಧಿಸುವ ಅಧಿಕಾರವು ಸಂಸ್ಥೆಯ ಬಹುಮತ ನಿರ್ಣಯದಿಂದ ಆಗತಕ್ಕದ್ದು. ಸರಕಾರಿ ಗ್ರಾಂಟಿನ ಮುಖಾಂತರ ಈ ಅಧಿಕಾರಿಯ ವೇತನ ಅಥವಾ ಅದರ ಭಾಗದ ಪೂರೈಕೆಯಾಗದಿದ್ದಲ್ಲಿ ಈ ಅಧಿಕಾರಿಗೆ ಬಹುಮತದಿಂದ ವಿಧಿಸಿದ ಶಿಕ್ಷೆಯಲ್ಲಿ ಕೈಹಾಕಲಿಕ್ಕೆ ಸರಕಾರಕ್ಕೆ ಯಾವ ತರದ ಹಕ್ಕೂ ಇರಬಾರದು. (೧೪) ಮುಂಜಾಗರೂಕತಾ ಪತ್ರಗಳನ್ನು ಸಾಕಷ್ಟು ಕೊಟ್ಟಿದ್ದರೂ ಸ್ಥಾನಿಕ ಸ್ವರಾಜ್ಯಸಂಸ್ಥೆಯು ಕರಗಳನ್ನು ಕೊಡದೆ ಇದ್ದ ಮತದಾರನ ಮತದಾನಾಧಿಕಾರವು ತನ್ನಷ್ಟಕ್ಕೆ ರದ್ದಾಗತಕ್ಕದ್ದು. (೧೫) ಗ್ರಾಮೋದ್ಧಾರ ಖಾತೆಯ ಕಾರ್ಯಕಲಾಪಾಧಿಕಾರಗಳಲ್ಲಿ ಸ್ಥಾನಿಕ ಬೋರ್ಡುಗಳಿಗೆ ಕಾಯಿದೆಯಂತೆ ಬರುವ ಅಧಿಕಾರಗಳನ್ನು ಈ ಬೋರ್ಡುಗಳಿಗೆ ಕೊಡತಕ್ಕದ್ದು ಮತ್ತು ಇವುಗಳಿಗಾಗಿ ಕಾದಿಟ್ಟ ಹಣವನ್ನು ಬೋರ್ಡುಗಳ ವಶಮಾಡತಕ್ಕದು. (೧೬) ಪ್ರತಿಯೊಂದು ಪ್ರಾಥಮಿಕ (ಬರೊ) ಮ್ಯುನಿಸಿಪಾಲಿಟಿ ಮತ್ತು ಲೋಕಲ್‌ಬೋರ್ಡುಗಳು ತಮ್ಮ ಸಂಸ್ಥೆಯ ಜನತೆಯ ಆರೋಗ್ಯ ಸಂರಕ್ಷಣೆಗಾಗಿ ಒಬ್ಬ "ಹೆಲ್ತ್ ಆಫೀಸರ" ನನ್ನು ನಿಯಮಿಸಲೇಬೇಕು ಮತ್ತು ಈ ಅಧಿಕಾರಿಯ ಪಗಾರಿನ ಕೆಲವೊಂದು ಭಾಗವನ್ನು ಸರಕಾರದವರು ಕೊಡತಕ್ಕದ್ದು. (೧೭) ನೀರಾವರಿ ಮತ್ತು ಪಿ. ಡಬ್ಲ್ಯು. ಡಿ. ಮೂರನೇ ತರಗತಿಯ ರಸ್ತೆಗಳನ್ನು ಸ್ಥಾನಿಕ ಸಂಸ್ಥೆಗಳಿಗೆ ವರ್ಗಾಯಿಸತಕ್ಕದ್ದು. ಮತ್ತು ಆಯಾ ಸಂಸ್ಥೆಗಳಿಗೆ ಒಳಪಟ್ಟ ಪ್ರದೇಶದಲ್ಲಿಯ ಒಂದನೆ ಮತ್ತು ಎರಡನೆ ತರಗತಿಯ ಹೊಸ ರಸ್ತೆಗಳನ್ನು ಮಾಡಿಸುವ ಮತ್ತು ಇದ್ದವುಗಳನ್ನು ದುರುಸ್ತಿ ಮಾಡುವ ಅಧಿಕಾರವನ್ನು ಆಯಾ ಸಂಸ್ಥೆಗಳಿಗೆ ಕೊಡತಕ್ಕದ್ದು. (೧೮) ಹೊಲಸಾದ ಮನೆ, ಕೇರಿಗಳನ್ನು ತೆಗೆಯಿಸಿ ಯೋಗ್ಯ ಕಟ್ಟಡಗಳನ್ನು ಕಟ್ಟಲಿಕ್ಕೆ ಬೇಕಾದ ಸ್ಥಳವನ್ನು ಸ್ವರಾಜ್ಯ ಸಂಸ್ಥೆಯು ಪಡೆದುಕೊಳ್ಳುವಲ್ಲಿ ಪ್ರಚಾರದಲ್ಲಿದ್ದ ಕ್ರಯಕ್ಕಿಂತ ನೂರಕ್ಕೆ ೧೫ ರ ಮಟ್ಟಿಗೆ ಹೆಚ್ಚಿನ ಹಣ ಕೊಡಬೇಕೆಂತ ಲ್ಯಾಂಡ್ ಎಕ್ವಿಸಿಶನ "ಆಕ್ಟಿನಲ್ಲಿ" ಇದ್ದ ನಿಯಮ ಭಾಗವನ್ನು ತೆಗೆಸುಹಾಕಬೇಕು. ಈ ಸಂಸ್ಥೆಗಳ ಕಡಿಮೆ ಪಗಾರಿನ ನೌಕರರಿಗೂ, ಹರಿಜನರಿಗೂ ವಾಸಿಸಲಿಕ್ಕೆ ಕಟ್ಟಡಗಳ ಅನುಕೂಲತೆಯನ್ನು ಈ ಸಂಸ್ಥೆಗಳು ಮಾಡಿಕೊಡತಕ್ಕದ್ದು. ಇಷ್ಟಲ್ಲದೆ ಈ ಸಂಸ್ಥೆಯ ಅಧಿಕಾರಕ್ಕೊಳಪಟ್ಟ ನೌಕರರ ಮನೆ, ಕಟ್ಟಡ ಮೊದಲಾದವುಗಳ ಸುಧಾರಣೆಗೆ ತಗಲುತಕ್ಕ ಖರ್ಚನ್ನು ಅವರನ್ನು ನಿಯಮಿಸುವ ಅಧಿಕಾರಿಗಳೇ ವಹಿಸತಕ್ಕದ್ದು.

೪. **ವಿಕ್ಟೋರಿಯಾ ಮಹಾರಾಣಿಯವರ ಛಾಪಿನ ರೂಪಾಯಿಗಳು:—** ಇತ್ತೀಚೆಗೆ ವಿಕ್ಟೋರಿಯಾ ಮಹಾರಾಣಿಯವರ ಛಾಪಿನ ರೂಪಾಯಿಗಳನ್ನು ಹಾಗೂ ಅರ್ಧ ರೂಪಾಯಿಗಳಲ್ಲಿ ಖೊಟ್ಟಿ ನಾಣ್ಯಗಳು ಬಹಳವಾಗಿ ಹೊರಟಿದ್ದರಿಂ ಜನರು ಇವುಗಳನ್ನು ಹಿಡಿಯುತ್ತಲಿರಲಿಲ್ಲ. ಆದುದರಿಂದ ಸರಕಾರದವರು ಈ ವಿಷಯದಲ್ಲಿ ಕೆಲವು ದಿವಸಗಳಿಂದ ವಿಚಾರ ನಡಿಸಿದ್ದರು. ಈಗ ಅವರು ಒಂದ ಆಜ್ಞಾಪತ್ರಿಕೆಯನ್ನು ಹೊರಡಿಸಿ ನಾಣ್ಯಗಳ ಕಾಯಿದೆಯಲ್ಲಿ ತಿದ್ದುಪಡೆಯನ್ನು ಮಾಡಿದ್ದಾರೆ. ಅದರ ಸಾರಾಂಶವು ಹೀಗಿದೆ.

(೧) ಈ ನಾಣ್ಯಗಳು ೧೯೪೧ನೆಯ ಇಸ್ವಿಯ ಮಾರ್ಚ ತಿಂಗಳ ಕೊನೆಯ ನಂತರ ಕಾಯಿದೆಗೆ ಅನುಸರಿಸಿದವುಗಳೆಂದು ತಿಳಿಯಲ್ಪಡುವದಿಲ್ಲ.

(೨) ಈ ನಾಣ್ಯಗಳು ಸರಕಾರದ ತಿಜೋರಿ ಹಾಗೂ ಪೋಷ್ಟ ಆಫೀಸ ಗಳಲ್ಲಿ ೧೯೪೧ನೆಯ ಇಸ್ವಿಯ ಸಪ್ಟಂಬರ ೩೦ನೆಯ ತಾರೀಖಿನ ವರೆಗೆ ಸ್ವೀಕರಿಸಲ್ಪಡುವವು.

(೩) ಆನಂತರ ಈ ನಾಣ್ಯಗಳು ಇನ್ನೊಂದು ಸೂಚನೆ ಕೊಡುವವರೆಗೆ ಕಲಕತ್ತೆ ಹಾಗೂ ಮುಂಬಯಿಗಳ ರಿಝರ್ವ ಬ್ಯಾಂಕುಗಳಲ್ಲಿ ಮಾತ್ರ ಸ್ವೀಕರಿಸಲ್ಪಡುವವು.

ಕವಿತಾ ಶಿಕ್ಷಣ

(ಗೋಕರ್ಣದ ಶಿಕ್ಷಕರ ಸಮ್ಮೇಲನದಲ್ಲಿ ಓದಿದುದು.)

ಕವಿತೆ ಎಂಬುದು ಒಂದು ಮುಖ್ಯವಾದ ಆನಂದ ಸಾಮಗ್ರಿಯು. ಕವಿತ್ವವು ಚಿತ್ರ, ಮೂರ್ತಿಶಿಲ್ಪ, ಗಾಯನ ಮೊದಲಾದ ಲಲಿತಕಲೆಗಳಲ್ಲಿ ಎಲ್ಲಕ್ಕೂ ಹೆಚ್ಚಿನದೆಂದು ಪರಿಗಣಿಸಲ್ಪಡುತ್ತದೆ. ಮನುಷ್ಯನಿಗೆ ಆನಂದವನ್ನುಂಟುಮಾಡುವದಕ್ಕಾಗಿ ಹೊರಟಿರುವ ಈ ಲಲಿತಕಲೆಗಳಲ್ಲಿ ಕವಿತ್ವಕ್ಕೆ ಮುಖ್ಯ ಸ್ಥಾನವು ದೊರೆತಿರುವುದಕ್ಕೆ ಅದು ಬಹು ನಿರ್ದುಷ್ಟವಾದ, ಸಮೃದ್ಧವಾದ ಆನಂದವನ್ನೊದಗಿಸುವದೇ ಕಾರಣವಾಗಿರುತ್ತದೆ.

ಸ್ವಾಭಾವಿಕವಾಗಿ ಮನುಷ್ಯ ಪ್ರಾಣಿಯು ಆನಂದಾಭಿಮುಖವಾದುದು ಆನಂದವನ್ನು ದೊರಕಿಸುವದಕ್ಕಾಗಿಯೇ ಅವರ ಪ್ರಯತ್ನಗಳು ಕಂಡುಬರುವವು ಆದರೆ ಸಾಂಸಾರಿಕ ತಾಪಗಳು, ಉದ್ಯೋಗದ ಎಳೆತ, ಶಾರೀರಿಕ ಬೇನೆ ಬೇಸರಿಕೆ

ಗಳು, ಸುತ್ತಲಿನ ಅನಿಷ್ಟವಾದ ಪರಿಸ್ಥಿತಿ, ಅತಿಯಾದ ಉಷ್ಣಶೀತ ಮೊದಲಾದ ದೈವಿಕ ತಾಪಗಳು ಮೊದಲಾದುವು ಅತನ ಆನಂದಕ್ಕೆ ತಡೆಯಾಗುವವು. ಈ ಕಾರಣಗಳಿಂದಲೇ ಮನುಷ್ಯನು ತನ್ನ ಸ್ವಾಭಾವಿಕವಾದ ಆನಂದವೃತ್ತಿಯನ್ನು ಹೋಗಲಾಡಿಸಿಕೊಂಡು ದುಃಖಿಯಾಗುತ್ತಾನೆ, ಉಲ್ಲಾಸರಹಿತನಾಗುತ್ತಾನೆ; ಈ ಆನಂದಮಯವಾದ ಸೃಷ್ಟಿಯು ಅತನ ಮನಸ್ಸಿಗೆ ಸೊಗಸನ್ನುಂಟುಮಾಡಲಾರದಂತಾಗುತ್ತದೆ. ಪ್ರಿಯ ಜೀವನಗಳ ಪ್ರೀತಿ, ಸೃಷ್ಟಿಯ ಸೊಬಗು, ದೇವ ಭಕ್ತಿ, ದಯೆ ಮುಂತಾದ ದೈವಿಕ ಭಾವನೆಗಳು ಇವುಗಳಿಂದೊದಗುವ ಆನಂದಕ್ಕೆ ಅತನು ಎರವಾಗುತ್ತಾನೆ.

ಮನುಷ್ಯನು, ಆನಂದದಿಂದ ಹೊರಟು ಕೊನೆಗೆ ಆನಂದದಲ್ಲಿ ಲೀನನಾಗುವಂಥವನು; ಆದುದರಿಂದ ಮನುಷ್ಯ ಜೀವನವು ಆನಂದಾಭಿಮುಖವಾಗಬೇಕು. ಮನುಷ್ಯನು ಆನಂದವೃತ್ತಿಯವನಾಗಬೇಕು; ಅವನು ಪ್ರಪಂಚದಲ್ಲಿ ಒದಗುವ ಶೋಕತಾಪಗಳಿಗೆ ವಶನಾಗದೆ ಅವನ್ನು ಬದಿಗೊತ್ತಿ ಮತ್ತೆ ಆನಂದವನ್ನು ಅನುಭವಿಸುವದಕ್ಕೆ ಸಿದ್ಧನಾಗಬೇಕು.

ಗಾಯನ ಮೊದಲಾದ ಲಲಿತಕಲೆಗಳು ಈ ಆನಂದವೃತ್ತಿಗಾಗಿಯೇ ಹೊರಟಂಥವು. ಕವಿತ್ವ ಕಲೆಯು ಆನಂದವೃತ್ತಿಯನ್ನುಂಟುಮಾಡುವಲ್ಲಿ ಗಾಯನಾದಿಗಳಿಗಿಂತ ಹೆಚ್ಚಿನದೆಂಬುದನ್ನು ಹೇಳಬೇಕಾದದ್ದಿಲ್ಲ; ಕಾವ್ಯಾನಂದವು ಬ್ರಹ್ಮಾನಂದ ಸಮಾನವಾದುದೆಂದು ಎಲ್ಲ ಹಿರಿಯರೂ ಹೇಳುತ್ತ ಬಂದಿದ್ದಾರೆ. ಈ ಕಾರಣದಿಂದಲೇ ನಾಗರಿಕ ಸಮಾಜಗಳಲ್ಲಿ ಕಾವ್ಯಕಲೆಯು ಹೆಚ್ಚಿನ ಮನ್ನಣೆಯನ್ನು ಪಡೆದಿರುತ್ತದೆ.

ಶಿಕ್ಷಣವು ಬಾಲಕರಲ್ಲಿ ಮನುಷ್ಯತ್ವದ ವಿಕಾಸವನ್ನುಂಟುಮಾಡುವುದಕ್ಕಾಗಿ; ಅತನಲ್ಲಿ ಆನಂದವೃತ್ತಿಯನ್ನು ಉಂಟುಮಾಡುವುದಕ್ಕಾಗಿ ಎಂದ ಬಳಿಕ ಶಿಕ್ಷಣದಲ್ಲಿ ಕಾವ್ಯಕ್ಕೆ ಒಂದು ಶ್ರೇಷ್ಠಸ್ಥಾನವಿರುವದು ಸಹಜವು; ಆವಶ್ಯಕವು. ಬಾಲಕರು ಕಾವ್ಯವನ್ನೋದಿ ಆನಂದಬಡಲು ಅವರನ್ನು ತಕ್ಕವರನ್ನಾಗಿ ಮಾಡುವದೇ ಕವಿತಾ ಶಿಕ್ಷಣದ ಉದ್ದೇಶವು.

ಕವಿತೆಗಳನ್ನು ಬಾಲಕರಿಗೆ ಕಲಿಸುವದೆಂದರೆ ಅವರನ್ನು ಆನಂದವೃತ್ತಿಯವರನ್ನಾಗಿ ಮಾಡುವದು, ಅವರ ಬೇಸರಿಕೆಯನ್ನು ಕಳೆದು ಅವರಲ್ಲಿ ಉಲ್ಲಾಸವನ್ನುಂಟುಮಾಡುವದು, ಕವಿತೆಗಳನ್ನು ಹಾಡಿ, ಓದಿ ಆನಂದಿತರಾಗುವಂತೆ ಅವರಲ್ಲಿ ಕಾವ್ಯಾಭಿರುಚಿಯನ್ನು ಉಂಟುಮಾಡುವದು, ಆಗಿರುತ್ತದೆ. ಮನೋ

ರಂಜನೆಯನ್ನುಂಟುಮಾಡುವುದು ಕವಿತೆಯ ಮುಖ್ಯ ಪ್ರಯೋಜನಗಳಲ್ಲೊಂದಾಗಿದೆ.

ಕವಿತೆಯನ್ನು ಕಲಿಸುವುದೆಂದರೆ ಕವಿತೆಯ ಭಾವವನ್ನು ಬಾಲಕರಲ್ಲಿ ಮೂಡಿಸುವದು; ಭಾಷೆಯನ್ನು ಕಲಿಸುವದು ಅಲ್ಲ; ಕವಿತೆಯಲ್ಲಿ ರಸಭಾವಗಳೇ ಮುಖ್ಯವಾದವುಗಳು, ಭಾಷೆಯು ಗೌಣ ಇಲ್ಲವೆ ಅಮುಖ್ಯ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಮೇಲೆ ಹೇಳಿದ ಮಾತುಗಳನ್ನು ಲಕ್ಷ್ಯದಲ್ಲಿ ತಂದುಕೊಂಡರೆ ಕವಿತೆಯನ್ನು ಹೇಗೆ ಕಲಿಸಬೇಕೆಂಬದನ್ನು ನಾವು ತಿಳಿದುಕೊಳ್ಳಬಹುದು. ಬಾಲಕರು ತಾವು ಕಲಿಯುವ ಕವಿತೆಗಳ ಭಾವಗಳನ್ನು ಅರಿತುಕೊಂಡು ಆನಂದಿತರಾಗಬೇಕು, ಆ ಕವಿತೆಗಳಲ್ಲಿ ಅವರಿಗೆ ಅಭಿರುಚಿಯುಂಟಾಗಬೇಕು; ಬೇರೆ ಕವಿತೆಗಳನ್ನು ಓದುವ ಕುತೂಹಲವುಳ್ಳವರಾಗಬೇಕು. ಅವರ ಜೀವನದಲ್ಲಿ ಕವಿತೆಯು ಒಂದು ಆನಂದ ಸಾಮಗ್ರಿಯಾಗಬೇಕು. ಮನುಷ್ಯನು ನಾಟಕ ಮೊದಲಾದುವು ಹೇಗೆ ಒಂದು ಆನಂದಸಾಧನವೆಂದು ಮಾಡಿಕೊಂಡಿರುವನೋ ಹಾಗೆ ಕವಿತಾ ಪಠನವು ಆತನಿಗೆ ಒಂದು ನಿತ್ಯದ ಆನಂದಸಾಧನವಾಗಬೇಕು.

ಶಾಲೆಗಳಲ್ಲಿ ಶಿಕ್ಷಕರು ಬಾಲಕರಿಗೆ ಕವಿತಗಳನ್ನು ಕಲಿಸುವುದಕ್ಕಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಅನುಸರಿಸುತ್ತ ಬಂದ ಪದ್ಧತಿಯ ದಿಗ್ದರ್ಶನವನ್ನು ಯಥಾಲ್ಪಮತಿ ಇಲ್ಲಿ ಮಾಡಲಪೇಕ್ಷಿಸುತ್ತೇನೆ.

ಕವಿತಾಧ್ಯಾಪನದಲ್ಲಿ ಸಾಮಾನ್ಯವಾಗಿ ೧. **ಉಪೋದ್ಘಾತ**, ೨. **ಶಿಕ್ಷಕನ ಕವಿತಾಪಠನ**, ೩. **ಶಿಕ್ಷಕನ ಭಾವಬೋಧಕ ಕವಿತಾ ಪಠನ**, ೪. **ಬಾಲಕರ ಮೌನ ಕವಿತಾಪಠನ**, ೫. **ಶಿಕ್ಷಕನು ಬಾಲಕರಿಗೆ ತಿಳಿದದ್ದನ್ನು ಸ್ಥೂಲವಾಗಿ ಕೇಳಿಕೊಳ್ಳುವದು**, ೬. **ಶಿಕ್ಷಕನ ವಿವರಣೆ**, ಎಂಬೀ ಮೆಟ್ಟುಗಳನ್ನು ಮಾಡಿಕೊಂಡು ಕವಿತೆಯ ಭಾವವನ್ನು ಮೂಡಿಸುವದುಂಟು; ೭. **ಬಾಲಕರಿಂದ ಕವಿತೆಯಲ್ಲಿ ಬಂದ ವಾಕ್ಯಗಳ ಅರ್ಥವನ್ನು ಕೇಳಿಕೊಳ್ಳುವದು**, ೮. **ಕವಿತೆಯ ಒಟ್ಟು ಭಾವಾರ್ಥವನ್ನು ಬಾಲಕರಿಂದ ಹೇಳಿಸಿಕೊಳ್ಳುವದು**, ಶಬ್ದಗಳ ಅರ್ಥವನ್ನು ಸರಿಯಾಗಿ ಗ್ರಹಿಸಿರುವರೇ ಎಂಬುದನ್ನು ನೋಡುವದು ಇವು ಭಾಷೆಯನ್ನು ಕಲಿಸುವ ದೃಷ್ಟಿಯಿಂದ ಮಾಡಿಕೊಳ್ಳಬೇಕಾದ ಮೆಟ್ಟುಗಳು. ೯. **ಕವಿತೆಯನ್ನು ಸ್ವರಮೇಲನದಿಂದ ಸಾಮೂಹಿಕವಾಗಿ, ಕೆಲವೆಡೆ ಗುಂಪು ಗುಂಪು ಮಾಡಿ ಬಾಲಕರು ಅನ್ನುವದು**, ಇಲ್ಲವೆ ಅವರಿಂದ ಅನಿಸುವದು ಕವಿತಾಪಾಠದ ಕೊನೆಯ ಮೆಟ್ಟು ಆಗಿರುವದು.

೧. ಉಪೋದ್ಘಾತ:— ಎಲ್ಲ ಪಾಠಗಳಿಗೂ ಉಪೋದ್ಘಾತವಿರುವದಷ್ಟೇ? ಕವಿತಾ ಪಾಠಗಳಿಗೂ ಉಪೋದ್ಘಾತವು ಬೇಕು. ಕಥಾತ್ಮಕ ಕವಿತೆಗಳಿದ್ದರೆ ಪೂರ್ವಕಥೆಯನ್ನು ಸಂಕ್ಷೇಪವಾಗಿ ಪ್ರಸ್ತಾಪಿಸುವದು ಉಪೋದ್ಘಾತವಾಗುವದು. ವರ್ಣನಾತ್ಮಕ ಕವಿತೆಗಳಿಗೆ ಆ ವರ್ಣನೆಯ ನಸ್ಸಿವೇಶವನ್ನು ಬಾಲಕರಿದಿರಿಗೆ ತಂದು ನಿಲ್ಲಿಸುವದು ಉಪೋದ್ಘಾತವಾಗಬಹುದು. ಭಾವಪ್ರಧಾನ ಕವಿತೆಗಳಲ್ಲಿ ಆ ಭಾವವನ್ನು ಆಸ್ವಾದಿಸಲು ತಕ್ಕುದಾದ್ದಾಗುವಂತೆ ಬಾಲಕರ ಮನಸ್ಸನ್ನು ಸಿದ್ಧಪಡಿಸಿ ಕೊಳ್ಳುವದು ಉಪೋದ್ಘಾತವಾಗುವದು. ಆಯಾ ಕವಿತೆಗೆ ಸಂಕ್ಷಿಪ್ತವಾದ ತಕ್ಕ ಉಪೋದ್ಘಾತವನ್ನು ಶಿಕ್ಷಕರು ಅನುಭವದಿಂದ ರಚಿಸಿಕೊಳ್ಳಲಾಪರು. ಮುಖ್ಯವಾಗಿ ಉಪೋದ್ಘಾತದಿಂದ ಕಲಿಸಬೇಕಾದ ಕವಿತೆಗೆ ಬಾಲಕರ ಮನಸ್ಸನ್ನು ಅಭಿಮುಖವಾಗಬೇಕಾದುದೇ ಅದರ ಉದ್ದೇಶವಾಗಿರುವದು. ಉಪೋದ್ಘಾತದಿಂದ ಕವಿತೆಯಲ್ಲಿ ಯಾವ ವಿಷಯವು, ಬಂದಿರುವದೆಂಬದರ ಸೂಚನೆಯು ಬಾಲಕರಿಗೆ ದೊರೆಯಬೇಕು.

೨. ಶಿಕ್ಷಕನ ಕವಿತಾ ಪಠನ:— ಉಪೋದ್ಘಾತದ ತರುವಾಯ ಶಿಕ್ಷಕನು ಕಲಿಸಬೇಕಾದ ಇಡಿ ಕವಿತೆಯನ್ನು ಸುಸ್ವರದಿಂದ ಬಾಲಕರ ಮನಸ್ಸು ಆಕರ್ಷಿತವಾಗುವಂತೆ ಸಾವಕಾಶವಾಗಿ ಹಾಡಬೇಕು, ಒಂದೊಂದು ಕವಿತೆಯಲ್ಲಿ ೨-೩-೪ ನುಡಿಗಳು ಇರಬಹುದು. ಸಾಧಾರಣವಾಗಿ ಒಂದು ವಿಷಯವು ಪೂರ್ಣವಾಗುವಂತೆ ಕವಿತೆಗಳ ನುಡಿಗಳನ್ನು ಒಂದು ಪಾಠದಲ್ಲಿ ಕಲಿಸುವದು ಒಳಿತು. ಸೃಷ್ಟಿವರ್ಣನೆಯ ಒಂದು ಕವಿತೆಯಿದ್ದರೆ ಒಂದುಪಾಠವು ಆ ವರ್ಣನೆಯನ್ನು ಮುಗಿಸುವಂತೆ ೪-೫ ನುಡಿಗಳುಳ್ಳದ್ದಾಗಿರಬಹುದು. ಯಾವ ವಿಷಯವಿದ್ದರೂ ಅದು ಅರ್ಧಕ್ಕೇ ನಿಲ್ಲುವಂತೆ ಆಗಬಾರದೆಂಬುದೇ ಇಲ್ಲಿ ಗಮನಿಸಬೇಕಾದ ವಿಷಯ. ಹಾಗೆ ಒಂದು ವಿಷಯವು ಮುಗಿಯುವಂತೆ (ಕಲಿಸುವ ವೇಳೆಯನ್ನೂ, ಬಾಲಕರ ತರಗತಿಯನ್ನು ಅನುಲಕ್ಷಿಸಿ) ೨-೩-೪ ನುಡಿಗಳನ್ನು ಶಿಕ್ಷಕನು ಇಟ್ಟುಕೊಳ್ಳಬಹುದು. ಆನನ್ನು ಸಾಧ್ಯವಾದಮಟ್ಟಿಗೂ ಇಂಪಾಗಿ ಶಿಕ್ಷಕನು ಹಾಡಿ ತೋರಿಸಬೇಕು. ಈ ಕಾಲದಲ್ಲಿ ಬಾಲಕರು ಶಿಕ್ಷಕನು ಹಾಡುವದನ್ನು ಕೇಳುತ್ತಿರಬೇಕು; ಆವರು ಈ ಪಠನಕಾಲದಲ್ಲಿ ಏಕಾಗ್ರತೆಯುಳ್ಳವರಾಗಬೇಕು. ಈ ಆಕರ್ಷಣವೇ ಶಿಕ್ಷಕನ ಕವಿತಾಪಠನದ ಗುಣಾವಗುಣದ ಒರೆಗಲ್ಲಾಗಿರುವದು. ಕವಿತೆಯಲ್ಲಿ ಬಂದ ಭಾವದ ಕಡೆಗೆ ಕವಿತೆಯ ಭಾವವನ್ನು ತಿಳಿದುಕೊಳ್ಳುವದರ ಕಡೆಗೆ ಅಭಿಮುಖರಾಗುವಂತೆ, ಶಿಕ್ಷಕನ ಕವಿತಾಪಠನವು ಬಾಲಕರನ್ನು ಎಳೆದುಕೊಳ್ಳದಿದ್ದರೆ ಆ ಪಠನವು ತಕ್ಕುದ್ದಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಸಾಧಾರಣವಾಗಿ ಬಾಲಕರ ಮುಖಮುದ್ರೆಯಿಂದ ಶಿಕ್ಷಕನು ತನ್ನ ಕವಿತಾಪಠನವು ಪ್ರಯೋಜನಕಾರಿಯಾಯಿತೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬಹುದು. ಶಿಕ್ಷಕನು

ಕವಿತೆಯಲ್ಲಿ ತಲ್ಲೀನನಾಗಿ ಭಾವಬೋಧಕವಾಗಿ ಹಾಡತೊಡಗಿದರೆ ಬಾಲಕರು ಕವಿತೆಯ ಕಡೆಗೆ ಮನಸ್ಸನ್ನು ಕೊಟ್ಟೇ ಕೊಡುವರು. ಹೀಗೆ ಹಾಡುವದಕ್ಕೆ ಅನುಕೂಲವಾಗಬೇಕಾದರೆ ಶಿಕ್ಷಕರಿಗೆ ತಾವು ಕಲಿಸಬೇಕಾದ ಕವಿತೆಯು ಮುಖ ಪಾಠವಾಗಿರಬೇಕೆಂಬದು ಸಹಜವು. ಕರಿಯ ಹಲಗೆಯನ್ನಾಗಲಿ, ಪುಸ್ತಕವನ್ನಾ ಗಲಿ ನೋಡುತ್ತ ಮಾಡಿದ ಕವಿತಾಪಠನವು ಅಷ್ಟೊಂದು ಒಳ್ಳೆಯದಲ್ಲ. ಕವಿತೆ ಯನ್ನು ಹಾಡುತ್ತ ಬಾಲಕರನ್ನು ಭಾವಕ್ಕೆ ಅಭಿಮುಖರನ್ನಾಗಿ ಮಾಡಿಕೊಳ್ಳು ವದು ನಮ್ಮ ಉದ್ದೇಶವಾಗಿರುವದರಿಂದ ಬಹಳ ಸಾವಕಾಶವಾಗಿ, ಸ್ಪಷ್ಟವಾಗಿ, ಭಾವಬೋಧಕವಾಗಿ ಕವಿತಾಪಠನ ಮಾಡಬೇಕಾದುದು ಅವಶ್ಯವು. ಒಂದು ಬಾರಿ ಹಾಡಿದುದು ಸಾಲದೆನಿಸಿದರೆ ಮತ್ತೆ ಒಂದೆರಡು ಬಾರಿ ಹಾಡುವದೂ ಅನುಚಿತವಾದುದೆಂದು ತಿಳಿಯಬಾರದು. ಮುಖ್ಯವಾಗಿ ಸುಸ್ವರದಿಂದ ಹಾಡುತ್ತಲೇ ಭಾವವನ್ನು ಬಾಲಕರಲ್ಲಿ ಮೂಡಿಸುವದು ಸಾಧ್ಯವಾದರೆ, ಅಂತಹ ತಕ್ಕ ಭಾಷೆಯ ಕವಿತೆಗಳು ನಮಗೆ ಒದಗುವಂತಿದ್ದರೆ ಶಿಕ್ಷಕರ, ಇಲ್ಲವೆ ಬಾಲಕರ ಸುದೈವವೆಂದೇ ತಿಳಿಯಬೇಕು. ಆದರೆ ನಮ್ಮ ಕವಿತೆಗಳು ಬಹಳ ಮಟ್ಟಿಗೆ ಭಾವದಲ್ಲಿ ಉಚ್ಚ ತರಗತಿಯವಾಗಿರಲಿ, ಇಲ್ಲವೆ ಆಗದಿರಲಿ ಭಾಷೆಯ ಏಗುವಿನಲ್ಲಿ ಎಂದೂ ಕಡಿಮೆ ಯಾಗಿರುವದಿಲ್ಲ. ಭಾವಕ್ಕಿಂತ ಭಾಷೆಗೇ ಹಲವು ಕವಿತೆಗಳಲ್ಲಿ ಮುಖ್ಯತೆ ಕಾಣ ಬರುವದು ನಮ್ಮ ದುರ್ದೈವವೇ ಸರಿ. ಸಾಹೇಬನಿಗಿಂತ ಸಿಪಾಯಿಯೇ ಮೇಲು ಕಂಡಂತೆ ಆದು ಹಾಸ್ಯಾಸ್ಪದ.

೩. ಶಿಕ್ಷಕನ ಭಾವಬೋಧಕ ಕವಿತಾಪಠನ :— ಒಮ್ಮೆ ಅಥವಾ ಎರಡು ಬಾರಿ ಶಿಕ್ಷಕನು ಕವಿತಾಪಠನ ಮಾಡಿದ ಬಳಿಕ ಕವಿತೆಯು ಯಾವ ಭಾವವನ್ನು ಇಲ್ಲವೆ ಯಾವ ವಿಷಯ ವರ್ಣನೆಯನ್ನು, ಇಲ್ಲವೆ ಯಾವ ಕಥೆಯನ್ನು ಉದ್ದೇಶಪಟ್ಟುಕೊಂಡಿದೆಯೆಂಬದನ್ನು ಬಾಲಕರಿಗೆ ತಿಳಿದಿದ್ದರೆ ಕೇಳಿಕೊಂಡು, ಇಲ್ಲವೆ ಶಿಕ್ಷಕನು ಸೂಚಿಸಿ, ಬಳಿಕ ಮತ್ತೆ ಕವಿತಾಪಠನ ಮಾಡಬೇಕು. ಈಗ ಭಾವವನ್ನು ಬಾಲಕರು ಇನ್ನಿಷ್ಟು ಬಳಸೇರಿ ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ ಈ ಕವಿತಾಪಠನವಿರುವದರಿಂದ ಇನ್ನೂ ಸಾವಕಾಶವಾಗಿ, ಕೆಲವೆಡೆ ಪದಗಳನ್ನು ವಿಂಗಡಿಸಿ (ಅವಶ್ಯವಿದ್ದಲ್ಲಿ) ಪಠನ ಮಾಡಬೇಕು. ಈಗಲೂ ಸಾಧ್ಯವಾದ ಮಟ್ಟಿಗೆ ಧಾಟಿಗನುಸರಿಸಿ ಸುಸ್ವರದಿಂದಲೇ ಪಠನಮಾಡಬೇಕಾದುದು ಅವಶ್ಯ. ಪದ್ಯ ಗಳನ್ನು ಹೇಳುವದು ಯಾವಾಗಲೂ ಧಾಟಿಯಿಂದಲೇ ಎಂಬುದನ್ನು ಶಿಕ್ಷಕರು ಗಮನಿಸಬೇಕು. ಗದ್ಯದಂತೆ ಓದಿ ಈ ಭಾಗವನ್ನು ಹಲವು ಜನ ಶಿಕ್ಷಕರು ಅಸ್ವರಸವಾಗಿ ಮಾಡುವರು. ಪದ್ಯದ ಭಾವಗಳು ಹಾಡುವಾಗಲೇ ಮೂಡಬೇಕು ಎಂಬುದನ್ನು ಅವರು ಮರೆಯುವರು. ಪದ್ಯದ ಭಾವಗಳು ಭಾವನಾಪ್ರಧಾನ

ವಾದುವು. ವಿಚಾರಪ್ರಧಾನವಾದುವಲ್ಲ; ಆದುದರಿಂದ ಆ ಭಾವಗಳಿಗೆ ಸ್ವರಧಾಟಿಗಳ ಅನುಸರಣವು ಉಚಿತವೆಂಬುದನ್ನು ಲಕ್ಷಿಸಬೇಕು. ಈಗ ಭಾವಕ್ಕೆ ಅನುಗುಣವಾಗಿ ಧ್ವನಿಯು ಏರು, ಇಳುವು, ಆಘಾತ ಮುಂತಾದವನ್ನು ಶಿಕ್ಷಕನು ಗಮನಿಸಬೇಕು; ಒಟ್ಟಿಗೆ ಮೊದಲನೆಯ ಮೆಟ್ಟಿನ ಪಠನಕ್ಕಿಂತ ಈ ಪಠನದಿಂದ ಬಾಲಕರು ಕವಿತೆಯ ಭಾವವನ್ನು ಹೆಚ್ಚು ಆಕಲನ ಮಾಡಬೇಕು.

ಬಾಲಕರ ಮೌನ ಕವಿತಾ ಪಠನ:— ಎರಡನೆಯ ಮೆಟ್ಟಿನ ಕೊನೆಯಲ್ಲಿ ಬಾಲಕರು ಕವಿತೆಯ ಭಾವವನ್ನು ಸ್ಥೂಲವಾಗಿ ಅನುಲಕ್ಷಿಸಿದರೇ ಎಂಬುದನ್ನು ಶಿಕ್ಷಕನು ಪ್ರಶ್ನದಿಂದ ತಿಳಿದುಕೊಂಡು ಬಾಲಕರಿಗೆ ಉತ್ತೇಜನ ಕೊಟ್ಟು ನೀವೇ ಇನ್ನು ಈ ಕವಿತೆಯನ್ನು ಓದಿ ಇದರ ಭಾವವನ್ನು ಪೂರ್ಣವಾಗಿ ತಿಳಿದುಕೊಳ್ಳಿರೆಂದು ಹೇಳಿ ಬಾಲಕರೇ ತಮ್ಮ ಮನಸ್ಸಿನಲ್ಲಿ ಓದುತ್ತ ಕವಿತೆಯ ಭಾವವನ್ನು ತಿಳಿದುಕೊಳ್ಳಲು ಅವರನ್ನು ತೊಡಗಿಸಬೇಕು. ಈ ಮೌನ ಪಠನವು ಬಹಳ ಉಪಯುಕ್ತವಾದುದು. ವಾಚನ ಪಾಠಗಳಲ್ಲಿ ಹೇಗೋ ಹಾಗೆ ಕವಿತಾ ಪಾಠಗಳಲ್ಲಿಯೂ ಮೌನ ಪಠನವು ಅವಶ್ಯವು. ಇದರಿಂದ ಬಾಲಕರಿಗೆ ಸ್ವಯಂ ಶಿಕ್ಷಣಕ್ಕೆ ಉತ್ತೇಜನಕೊಟ್ಟಂತಾಗುವದು; ಅವರ ವಿಚಾರಶಕ್ತಿಗೆ ಚಾಲನೆ ಕೊಟ್ಟಂತಾಗುವದು; ಅವರಲ್ಲಿ ಸ್ವಾವಲಂಬನದ ಚಟವನ್ನು ಉಂಟುಮಾಡಿದಂತಾಗುವುದು; ಸ್ವಯಂ ಜ್ಞಾನ ಸಂಪಾದನೆಯಿಂದ ಒದಗುವ ಆನಂದವನ್ನು ಅವರು ಅನುಭವಿಸುವಂತೆ ಮಾಡಿದಂತಾಗುವದು; ಶಿಕ್ಷಕನು ತನ್ನ ಕೆಲಸವನ್ನು ಕಡಿಮೆ ಮಾಡಿಕೊಂಡಂತಾಗುವುದು; ಆಗ ಬೇರೆ ವರ್ಗದ ಕಡೆಗೆ ಗಮನ ಕೊಡಲು ಅವಕಾಶವನ್ನು ಮಾಡಿಕೊಂಡಂತೆಯೂ ಆಗುವದು. ಬಾಲಕರ ಮೌನ-ಪಠನ ಕಾಲದಲ್ಲಿ ಶಿಕ್ಷಕನು ವರ್ಗಕ್ಕೆ ಗಡಚಿನಿಸುವಂತಹ ಕವಿತೆಯಲ್ಲಿ ಬಂದ ಶಬ್ದಗಳಿಗೆ ಸುಲಭ ಪ್ರತಿಶಬ್ದಗಳನ್ನು ಬರೆದ ಕರಿಯ ಹಲಗೆಯನ್ನು ಅವರ ಮುಂದೆ ಇಟ್ಟು ಕೋಶದಂತೆ ಅದರ ಉಪಯೋಗ ಮಾಡಿಕೊಳ್ಳಲು ಬಾಲಕರಿಗೆ ಹೇಳಬೇಕು. ಬಾಲಕರೇ ಅರ್ಥ ಮಾಡಿಕೊಳ್ಳುವಾಗ ತಮಗೆ ತಿಳಿಯದ ಶಬ್ದಗಳ ಅರ್ಥವನ್ನು ಅವರೇ ನೋಡಿ ತಿಳಿದುಕೊಂಡರೆ ಶಿಕ್ಷಕನ ಕೆಲಸವು ಕೆಲಮಟ್ಟಿಗೆ ಹಗುರಾಗುವದು. ಈ ಕಾಲದಲ್ಲಿ ವರ್ಗವು ನಿಶ್ಶಬ್ದವಾಗಿರಬೇಕೆಂಬದನ್ನು ಶಿಕ್ಷಕನು ಗಮನಿಸಬೇಕು. ಶಿಕ್ಷಕನು ವರ್ಗದಲ್ಲಿ ತಿರುಗಾಡಿ ಬಾಲಕರಿಗೆ ಬಂದ ಸಂಶಯಗಳನ್ನು ಮೆಲ್ಲನೆ ನಿವಾರಿಸಬೇಕು. ಕೆಳಗಿನ ತರಗತಿಗಳಲ್ಲಿ ಕರಿಯ ಹಲಗೆಯ ಮೇಲೆ ಬರೆದ ಕವಿತೆಯನ್ನು, ಮೇಲಿನ ತರಗತಿಗಳಲ್ಲಿ ಪುಸ್ತಕಗಳಲ್ಲಿದ್ದ ಕವಿತೆಯನ್ನು, ಬಾಲಕರು ಓದಿ ಭಾವವನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

೫. **ಶಿಕ್ಷಕನು ಸ್ಥೂಲವಾಗಿ ಕೇಳಿಕೊಳ್ಳುವದು :—** ಈ ಮೆಟ್ಟು ಪರೀಕ್ಷೆಯದು. ಬಾಲಕರು ಈವರೆಗೆ ಎಷ್ಟುಮಟ್ಟಿಗೆ ಕವಿತೆಯನ್ನು ಗ್ರಹಿಸಿದರೆಂಬದನ್ನು ಶಿಕ್ಷಕನು ಪ್ರಶ್ನೆಗಳಿಂದ ಪರೀಕ್ಷಿಸಬೇಕು. ಪೂರ್ಣವಾಗಿ ಕವಿತೆಯ ಭಾವವನ್ನು ಬಾಲಕರು ಗ್ರಹಿಸುವರೆಂಬದು ಸಾಮಾನ್ಯವಾಗಿ ಕಂಡುಬರುವದಿಲ್ಲ. ಆದರೂ ಅವರು ಎಷ್ಟುಮಟ್ಟಿಗೆ ಗ್ರಹಿಸಿದರೆಂಬದು ತಿಳಿದರೆ ಶಿಕ್ಷಕನಿಗೆ ತಾನು ಮಾಡಬೇಕಾದ ವಿವರಣೆಯು ಎಷ್ಟುಮಟ್ಟಿಗೆ ಇರಬೇಕೆಂಬದು ತಿಳಿಯುವದು. ಕೆಲವು ಪರೀಕ್ಷಾ ಪ್ರಶ್ನೆಗಳಿಂದ ಬಾಲಕರು ಎಷ್ಟುಮಟ್ಟಿಗೆ ತಿಳಿದುಕೊಂಡರೆಂಬದನ್ನು ಈ ಮೆಟ್ಟಿನಲ್ಲಿ ಶಿಕ್ಷಕನು ತಿಳಿದುಕೊಳ್ಳಬೇಕು.

೬. **ಶಿಕ್ಷಕನ ವಿವರಣೆ :—** ಸುಲಭ ಕವಿತೆಯಿದ್ದರೆ ಈ ಮೆಟ್ಟಿನಲ್ಲಿ ಶಿಕ್ಷಕನ ಕೆಲಸವು ಹೆಚ್ಚಾಗಿರುವದಿಲ್ಲ. ಪ್ರಶ್ನೆಗಳನ್ನು ಮಾಡುತ್ತ ಇಡಿ ಕವಿತೆಯ ಭಾವವು ಬಾಲಕರ ಮನಸ್ಸಿನಲ್ಲಿ ಮೂಡಿದೆಯೇ ಎಂಬದನ್ನು ನೋಡಿದರೆ ಸಾಕಾಗುವದು. ಆದರೆ ಹಲವು ಕವಿತೆಗಳ ಭಾವವನ್ನು ಬಾಲಕರು ತಾವೇ ಓದಿ ತಿಳಿದುಕೊಳ್ಳುವರೆಂದು ಹೇಳಲಾಗುವದಿಲ್ಲ. ಆದುದರಿಂದ ಶಿಕ್ಷಕನ ವಿವರಣೆ ಬೇಕಾಗುವದು. ಈ ಮೆಟ್ಟಿನಲ್ಲಿ ಬೋರ್ಡಿನ ಮೇಲೆ ಬರೆದ ಕವಿತೆಯನ್ನು ಇಲ್ಲವೆ ಪುಸ್ತಕದಲ್ಲಿದ್ದ ಕವಿತೆಯನ್ನು ನೋಡಿ ಉತ್ತರಗಳನ್ನು ಹೇಳಿರೆಂದು ಬಾಲಕರಿಗೆ ಸೂಚಿಸಿ ಕವಿತೆಯಲ್ಲಿ ಮೊದಲಿನಿಂದ ಕೊನೆಯವರೆಗೆ "ಕಲಿಸುವ ಪ್ರಶ್ನ" ಗಳನ್ನು ಮಾಡುತ್ತ ಹೋಗಬೇಕು. ಸುಲಭ ಭಾಗಗಳಲ್ಲಿ "ಪರೀಕ್ಷಾ ಪ್ರಶ್ನ"ಗಳಿಂದ ಕೆಲಸವಾಗುವದು. ಈ ಮೆಟ್ಟಿನಲ್ಲಿ ಮಾಡಬೇಕಾದ ಕೆಲಸವೇ ಶಿಕ್ಷಕನ ಮುಖ್ಯವಾದ ಕೆಲಸವಾಗಿರುವುದು. ಈ ಭಾಗದಲ್ಲಿ ಬಾಲಕರಿಗೆ ಕವಿತೆಯ ಭಾವವನ್ನು ಮೂಡಿಸುವದಕ್ಕೆ ಎಂತಹ ಪ್ರಶ್ನೆಗಳನ್ನು ಮಾಡಬೇಕೆಂಬದನ್ನು ಆರಂಭದ ಶಿಕ್ಷಕರಂತೂ ಅರಿಯರೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಹಲವು ವರ್ಷಗಳವರೆಗೆ ಶಿಕ್ಷಣ ಕಾರ್ಯವನ್ನು ಸಾಗಿಸಿದವರು ಕೂಡ ಬರಿಯ ಪರೀಕ್ಷಾ ಪ್ರಶ್ನೆಗಳನ್ನು ಮಾಡುವದು, ಇಲ್ಲವೆ ತಾವಾಗಿ ಹೇಳುವದು ಈ ದಾರಿಗಳನ್ನನುಸರಿಸುವದೇ ಕಂಡು ಬರುತ್ತಿದೆ. ಅರ್ಥ ವಿವರಣೆಯು ಮೆಟ್ಟಿನಲ್ಲಿಯೇ ಶಿಕ್ಷಕನ ಚಾತುರ್ಯವು ಕಂಡುಬರುವದು. ತಕ್ಕ ಪ್ರಶ್ನೆಗಳನ್ನು ಮೊದಲೇ ರಚಿಸಿಕೊಂಡಿರುವದು ಅವಶ್ಯ. ಹಲವರು ಈ ಭಾಗದಲ್ಲಿ ಭಾಷೆಯನ್ನು ಕಲಿಸುವಂತಹ ಪ್ರಶ್ನೆಗಳನ್ನು ಮಾಡುತ್ತಾರೆ. ಯಾರು ನುಡಿದರು? ಏನೆಂದು ನುಡಿದರು? ಯಾರ ಎದುರಿಗೆ ನುಡಿದರು? ಮೊದಲಾಗಿ ಕರ್ತೃ, ಕರ್ಮ ಕ್ರಿಯಾಪದ, ವಿಶೇಷಣ ಮುಂತಾದವನ್ನು ಹೊರಡಿಸುತ್ತ ಹೋಗುವರು; ಅವರು ಬಳ್ಳೆಯ ಶಿಕ್ಷಕರ ಕವಿತಾ ಪಾಠಗಳನ್ನು ನೋಡಿ ತಮ್ಮ ಪದ್ಧತಿಯನ್ನು ತಿದ್ದಿಕೊಳ್ಳುವದು ದೇಶ ಹಿತದ ದೃಷ್ಟಿಯಿಂದ ಅವಶ್ಯಕವಾಗಿದೆ.

ಈ ಮೆಟ್ಟಿನ ಕೆಲಸವನ್ನು ಸರಿಯಾಗಿ ಮಾಡಲಿಕ್ಕೆ ಬಾರದಿರುವದೇ ಕವಿತಾಪಾಠದ ಅಸ್ವಾರಸ್ಯಕ್ಕೆ ಕಾರಣವಾಗಿದೆಯೆಂದು ಹೇಳಬಹುದು. ಬಾಲಕರಲ್ಲಿ ಕವಿತಾಸು ರಾಗವನ್ನು ಉಂಟುಮಾಡದಿರುವದಕ್ಕೆ ನಮ್ಮ ಈ ಮೆಟ್ಟಿನ ಅಸಮರ್ಪಕವಾದ ಕೆಲಸವೇ ಕಾರಣವಾಗಿದೆಯೆಂದು ತೋರುತ್ತದೆ. ನೀತಿಯನ್ನು ಗಿಂಜುವುದು, ಶಬ್ದದ ವ್ಯುತ್ಪತ್ತಿ, ಸಂಧಿ ಸಮಾಸಗಳು, ವ್ಯಾಕರಣ ವಿಚಾರ ಮುಂತಾದವನ್ನು ಈ ಮೆಟ್ಟಿನಲ್ಲಿ ಸೇರಿಸಿ ಕವಿತಾ ಪಾಠವನ್ನು ಹಾಳುಮಾಡಿ ಬಿಡುವ ಶಿಕ್ಷಕರು ಹಲವರಿರುವರೆಂದು ಬಹಳ ಕಷ್ಟದಿಂದ ಹೇಳಬೇಕಾಗಿದೆ. ಕವಿತಾ ಪಾಠಗಳಲ್ಲಿ ಭಾಷಾವಿಚಾರಗಳನ್ನು ಕಲಿಸಬಾರದೆಂದು ನಮ್ಮ ಮತವೆಂದು ತಿಳಿಯಬಾರದು; ಭಾವಗಳು ಬಾಲಕರ ಮನಸ್ಸಿನಲ್ಲಿ ಸಂಪೂರ್ಣವಾಗಿ ಮೂಡಿ ಆ ಭಾವಗಳಿಂದ ಅವರು ಆನಂದಿತರಾಗಿ ನಲಿದಾಡಿದ ಬಳಿಕ ಅದೇ ಕವಿತೆಯಲ್ಲಿ ಭಾಷಾವಿಚಾರಗಳನ್ನು ಕಲಿಸುವದಕ್ಕಾಗಿ ಮತ್ತೊಂದು ಪಾಠವನ್ನು ಕೊಡಬೇಕೆಂಬುದೇ ನಮ್ಮ ಮತವು. ಕವಿತೆಯಲ್ಲಿ ಬಂಡ ಸನ್ನಿವೇಶದಲ್ಲಿ ಬಾಲಕರ ಮನಸ್ಸನ್ನು ಒಯ್ದು, ಕವಿಯು ಯಾವ ಮಾತನ್ನಾಡುವಾಗ ಯಾವ ಭಾವದಲ್ಲಿ ಮುಳುಗಿರುವನೋ ಆ ಭಾವದಲ್ಲಿ ಬಾಲಕರನ್ನು ತಲ್ಲೀನರಾಗುವಂತೆ ಮಾಡಿ ಇಡಿ ಕವಿತೆಯಲ್ಲಿ ಕವಿಯು ಯಾವ ಆನಂದವನ್ನುಂಟುಮಾಡಿರುವನೋ ಆ ಆನಂದವನ್ನು ಬಾಲಕರು ಅನುಭವಿಸುವಂತೆ ಮಾಡುವದು ಶಿಕ್ಷಕನ ಈ ಮೆಟ್ಟಿನ ಕೆಲಸವೆಂಬುದನ್ನೂ ಈ ಕೆಲಸವನ್ನು ಶಿಕ್ಷಕನು ವ್ಯಾಖ್ಯಾನ ಪದ್ಧತಿಯಿಂದ ಸಾಗಿಸದೆ ಪ್ರಶ್ನ ಪದ್ಧತಿ, ನಡುನಡುವೆ ಅವಶ್ಯವಿದ್ದಲ್ಲಿ ಸ್ವಲ್ಪ ಕಥನ, ಈ ಪದ್ಧತಿಯಿಂದ ಸಾಗಿಸಿ ಕವಿತೆಯಲ್ಲಿ ಬಾಲಕರ ಅನುರಾಗವುಂಟಾಗುವಂತೆ ಮಾಡುವದು ಶಿಕ್ಷಕರಾದ ನಮ್ಮ ಕೆಲಸವೆಂದರಿತು ಅದನ್ನು ಸಾಧಿಸುವದರ ಕಡೆಗೆ ನಮ್ಮ ಒಲವು ಇರಬೇಕೆಂಬುದನ್ನೂ ನಾವು ಮರೆಯ ಕೂಡದು.

೭. ಬಾಲಕರಿಂದ ಕವಿತೆಯ ವಾಕ್ಯಗಳ ಅರ್ಥವನ್ನು ಕೇಳಿಕೊಳ್ಳುವದು :— ಇದೂ ಇದರ ಮುಂದಿನ ಒಂದೆರಡು ಮೆಟ್ಟುಗಳೂ ಭಾಷಾಭ್ಯಾಸದ ದೃಷ್ಟಿಯಿಂದ ಇಟ್ಟುಕೊಂಡಂಥವು. ಕೆಳಗಿನ ತರಗತಿಗಳಲ್ಲಿ ಈ ಮೆಟ್ಟುಗಳು ಬೇಡ; ಸಾಮೂಹಿಕ ಪಠನವೇ ಕೆಳಗಿನ ತರಗತಿಗಳ ಕವಿತಾಪಠನದ ಕೊನೆಯ ಮೆಟ್ಟು. ೪ನೆಯ ಇಯತ್ತೆಯಿಂದ ಮೇಲಿನ ತರಗತಿಗಳಲ್ಲಿ ಈ ೭ನೆಯ ಮೆಟ್ಟು ಅವಶ್ಯ; ಯಾವ ವಾಕ್ಯದಿಂದ ಯಾವ ಭಾವವೆಂಬದನ್ನು ಮೇಲಿನ ತರಗತಿಗಳ ಬಾಲಕರು ವಿಂಗಡಿಸಿ ತಿಳಿದುಕೊಳ್ಳಲು ಸಮರ್ಥರಾಗಿರುತ್ತಾರೆ. ಕವಿಯ ವಾಕ್ಯಗಳು ಬಾಲಕರಾಡುವ ಭಾಷೆಯವಾಗಿರದೆ ಹಳೆಯವು ಇಲ್ಲವೆ ಗ್ರಾಂಥಿಕವು ಆಗಿರುತ್ತವೆ. ಆದದರಿಂದ ಒಂದೊಂದು ನುಡಿಯೊಳಗಿನ ಕಠಿಣವೆನಿಸಿದ ೨-೩

ವಾಕ್ಯಗಳ ಅರ್ಥವನ್ನು ತಮ್ಮ ಭಾಷೆಯಲ್ಲಿ ಹೇಳುವದಕ್ಕೆ ಬಾಲಕರನ್ನು ತೊಡ ಗಿಸುವದು ಈ ಮೆಟ್ಟಿನಲ್ಲಿಯ ಕೆಲಸವು.

೬. **ಒಟ್ಟು ಭಾವವನ್ನು ಹೇಳುವದು :—** ಒಂದೊಂದು ನುಡಿಯ ಭಾವವನ್ನು ಕೂಡಿಸಿ ಬಾಲಕರು ಹೇಳಬೇಕು. ಕವಿವ್ಯಾಕಗಳ ಅರ್ಥವನ್ನು ಒಟ್ಟುಗೂಡಿಸಿ ತನ್ನ ಮಾತಿನಲ್ಲಿ ಬಾಲಕನು ಕವಿಯಂತೆ ಸವಿಯಾಗಿ ಹೇಳಲು ಸಮರ್ಥನಾಗಬೇಕೆಂಬುದೇ ಈ ಮೆಟ್ಟಿನ ಉದ್ದೇಶವು. ಇದು ಕೆಲಮಟ್ಟಿಗೆ ಭಾಷಾಭ್ಯಾಸದ, ಕೆಲಮಟ್ಟಿಗೆ ನಿಬಂಧ ರಚನೆಯ ದೃಷ್ಟಿಯಿಂದ ಉಪಯುಕ್ತ ವಾದದ್ದು. ಇದನ್ನು ಹಲವರಿಂದ ಒಬ್ಬನಿಗಿಂತ ಇನ್ನೊಬ್ಬನು ವಿಂಗಿಲಾಗು ವುದರ ಕಡೆಗೆ ಗಮನಕೊಡುತ್ತ ಹೇಳಿಸಿಕೊಳ್ಳಬೇಕು.

೯. **ಬಾಲಕರ ಕವಿತಾಪಠನ :—**ಇದು ಕವಿತಾಪಾಠದಲ್ಲಿ ಬಹು ಮುಖ್ಯ ವಾದ ಅಂಗವು. ಇದು ಕೆಳಗಿನ ತರಗತಿಗಳಲ್ಲಿ ಮುಖ್ಯವಾಗಿ ಸಾಮೂಹಿಕವಾಗಿ ನಡೆಯಬೇಕು ; ಸರಿಯಾಗಿ ಅನ್ನಲು ಬಾರದಿರುವ ಬಾಲಕರನ್ನು ಕಂಡು ಹಿಡಿದು ವೈಯಕ್ತಿಕವಾಗಿ ಇಲ್ಲವೆ ೪।೬ ಜನ ಬಾಲಕರ ಒಂದೊಂದು ಗುಂಪುಮಾಡಿ ಕವಿತೆ ಯನ್ನು ಶಿಕ್ಷಕನು ತಾನು ಹೇಳಿ ಬಾಲಕರಿಂದ ಹೇಳಿಸುವದು ಕವಿತೆಯ ಧಾಟಿ ಯನ್ನು ಇಲ್ಲವೆ ಉಚ್ಚಾರವನ್ನು ಕಲಿಸುವ ದೃಷ್ಟಿಯಿಂದ ಉಪಯುಕ್ತವಾದರೂ ಕವಿತೆಯನ್ನು ಸ್ವರಮೇಲನದಿಂದ ಸಾಧ್ಯವಿದ್ದಲ್ಲಿ ತಾಳದೊಡನೆ ಸಾಮೂಹಿಕವಾಗಿ ಬಾಲಕರು ಅನ್ನುವದರಿಂದ ಅವರಲ್ಲಿ ಆನಂದ-ಉಲ್ಲಾಸಗಳು ಹೆಚ್ಚುತ್ತವೆಯೆಂಬು ದನ್ನು ಶಿಕ್ಷಕನು ಮರೆಯಬಾರದು. ಬಾಲಕರಿಗೆ ಧಾಟಿಯು ಬಾರದಿದ್ದಲ್ಲಿ ಶಿಕ್ಷಕನು ಭಾಗಭಾಗವಾಗಿ ಹೇಳುತ್ತ ಬಾಲಕರಿಂದ ಅನ್ನಿಸಬಹುದು ; ಧಾಟಿ ಬರುತ್ತಿದ್ದರೆ ಮೇಲಿನ ತರಗತಿಗಳಲ್ಲಿಯಂತೂ ಬಾಲಕರೇ ಕವಿತೆಯನ್ನು ಅನ್ನುವಂತೆ ಹೇಳಬೇಕು; ಈ ವರೆಗೆ ಕಲಿಸಿದ್ದರಿಂದ ಅವರಿಗೆ ಆ ಕವಿತೆಯು ಪರಿಚಯವು ಆಗಿರುವದರಿಂದ ಅವರು ಸರಿಯಾಗಿ ಕವಿತೆಯನ್ನು ಅನ್ನಲಾಪರು. ಕವಿತೆಯ ಧಾಟಿಯನ್ನು ಅರಿಸಿ ಕೊಳ್ಳುವಲ್ಲಿ ಆ ಧಾಟಿಯು ಇಡಿ ವರ್ಗಕ್ಕೆ ಸಾಧ್ಯವಾಗುವದೇ ಎಂಬುದನ್ನು ಶಿಕ್ಷಕನು ನೋಡಬೇಕು. ಸಾಮೂಹಿಕ ಕವಿತಾಪಠನವು ಒಳ್ಳೆಯದಾಗ ಬೇಕಾ ಗಿದ್ದರೆ ವೈಯಕ್ತಿಕವಾಗಿ ಬಾಲಕರಿಗೆ ಕವಿತೆಯನ್ನನ್ನಲು ಬರುತ್ತಿರಬೇಕೆಂಬದು ಅವಶ್ಯವು.

ಈ ವರೆಗೆ ಕವಿತಾಪಾಠಗಳ ಮೆಟ್ಟುಗಳ ಸ್ಥೂಲ ವಿವರಣೆಯನ್ನು ಹೇಳಿದೆವು. ಇವೇ ಮೆಟ್ಟುಗಳನ್ನೆ ಎಲ್ಲರೂ ಇಟ್ಟುಕೊಳ್ಳಬೇಕೆಂದು ನಮ್ಮ ಅಭಿಪ್ರಾಯವಲ್ಲ; ಆದರೆ ಕವಿತಾಪಾಠದಲ್ಲಿ ಕಲಿಸಬೇಕಾದ ಮುಖ್ಯ ವಿಷಯವೇನು, ಅದನ್ನು ಕಲಿಸು

ವದಕ್ಕಾಗಿ ಅನುಲಕ್ಷಿಸಬೇಕಾದ ವಿಚಾರವೇನು ಎಂಬುದನ್ನು ನಿರ್ದೇಶಿಸುವುದ ಕ್ಕಾಗಿ ಇಲ್ಲಿ ಕೆಲವು ಮೆಟ್ಟುಗಳು ದಿಗ್ದರ್ಶನಕ್ಕಾಗಿ ಹೇಳುವೆಯೆಂಬದನ್ನು ತಾವು ಮರೆಯಬಾರದು. ಈ ಕಾರಣದಿಂದಲೇ ಕವಿತಾಪಾಠದ ಗೌಣ-ಅಂಗವಾದ ಭಾಷಾಭ್ಯಾಸವನ್ನು ಕುರಿತು ಮಾಡಬೇಕಾದ ಅಧ್ಯಾಪನದ ಮೆಟ್ಟುಗಳನ್ನು ಇಲ್ಲಿ ಹೇಳಲು ಪ್ರಯತ್ನಿಸಿಲ್ಲ.

ಕವಿತಾಪಾಠಗಳಲ್ಲಿ ಬಾಲಕರು ಆ ಕವಿತೆಯನ್ನು ಮೆಚ್ಚಲು ಅದರಲ್ಲಿ ಯಾವ ಯಾವ ಸಾಮಗ್ರಿ ಇದೆ ಎಂಬುದನ್ನು ವಿಶೇಷವಾಗಿ ಮೇಲಿನ ತರಗತಿಗಳ ಬಾಲಕರ ಗಮನಕ್ಕೆ ತಂದುಕೊಡುವದು ಅವಶ್ಯವು. ಈ ಕವಿತೆಯಲ್ಲಿ ಏನು ಚೆಂದವದೆ ಎಂಬುದು ಅವರಿಗೆ ತಿಳಿಯಬೇಕು; ಎಂದರೆ ಕವಿತೆಯಲ್ಲಿಯ ವಿಷಯದ ಸೌಂದರ್ಯ, ಭಾವದ ಸೊಬಗು, ರಸ ಮುಂತಾದ ಕವಿತ್ವಕ್ಕೆ ಸಂಬಂಧಿಸಿದ ವಿಷಯಗಳನ್ನೂ, ರಸಭಾವಗಳಿಗೆ ಅನುಗುಣವಾದ ಭಾಷೆ, ಭಾಷೆಯ ಶೈಲಿ, ಅಲಂಕಾರಗಳು. ಪರಿ ಣಾಮವನ್ನುಂಟುಮಾಡುವ ಬೇರೆ ವಿಷಯಗಳು ಇವುಗಳನ್ನು ಕವಿತಾಪಾಠದ ಕೊನೆಯಲ್ಲಿ ಇಟ್ಟುಕೊಳ್ಳುವದು ಅವಶ್ಯವು. ಈ ಅಭ್ಯಸನದಿಂದ ಹೊಸ ಕವಿತೆ ಗಳೊಳಗಿನ ಆನಂದ ಸಾಮಗ್ರಿಯನ್ನು ಬಾಲಕರು ಗ್ರಹಿಸುವದಕ್ಕೆ ಸಮರ್ಥರಾಗು ತ್ತಾರೆ. ಇದು ಕವಿತಾಭಿರುಚಿಯನ್ನುಂಟುಮಾಡಬೇಕೆಂಬ ಕವಿತಾ ಶಿಕ್ಷಣದ ಧ್ಯೇಯವನ್ನು ಸಾಧಿಸುವುದಕ್ಕೆ ಸಹಾಯಕವಾಗಿರುತ್ತದೆ.

ಮುಖ್ಯವಾಗಿ ಕವಿತಾಪಾಠದಿಂದ ನಾವು ಕಲಿಸಿದ ಕವಿತೆಯನ್ನು ಬಾಲಕರು ಮೆಚ್ಚಬೇಕು. ಅದರಲ್ಲಿರುವ ಆನಂದವನ್ನು ಅವರು ಅನುಭೋಗಿಸಬೇಕು; ಆ ಕವಿತೆಯಲ್ಲಿರುವ ಆನಂದ ಸಾಮಗ್ರಿಗಳನ್ನು ಅವರು ಕಂಡು ಹಿಡಿಯಬೇಕು; ಕವಿತಾಭಿರುಚಿ ಅವರಲ್ಲಿ ಉಂಟಾಗಬೇಕು.

ನಾವು ಕಲಿಸಿದ ಕವಿತೆ ಬಾಲಕರ ಪುಸ್ತಕದಲ್ಲಿಲ್ಲದ್ದಾಗಿದ್ದರೆ ಆ ಕವಿತೆಯನ್ನು ಅವರು ಬರೆದುಕೊಂಡು ಪಾಠ ಮಾಡಲು ಉತ್ಸುಕರಾದರೆ, ಕವಿತಾ ಪಾಠದ ತರುವಾಯ ಬಾಲಕರು ಆ ಕವಿತೆಯಲ್ಲಿ ತಮಗೆ ಬಂದಷ್ಟು ಭಾಗವನ್ನು ಇಲ್ಲವೆ ಆದರೊಳಗಿನ ಸ್ವಾರಸ್ಯದ ಭಾಗವನ್ನು ಹಾಡುತ್ತಿರುವದು ಕಂಡುಬಂದರೆ ಶಿಕ್ಷಕನು ತಾನು ಒಳ್ಳೆಯ ಕವಿತೆಯನ್ನು ತಕ್ಕಮಟ್ಟಿಗೆ ಒಳ್ಳೆಯದಾಗಿ ಕಲಿಸಿದೆನೆಂದು ಸ್ವಲ್ಪ ಹೆಮ್ಮೆಪಡಬಹುದು.

ಧಾರವಾಡ,
ತಾ|| ೨೨-೮-೧೯೪೦

ಪೂಜಾರ.

ಹೆರ್ ಹಿಟ್ಲರನ ವಿಚಾರಗಳು

(ಮುಂದೆ ಸಾಗಿದುದು)

ಜರ್ಮನ್ ರಾಷ್ಟ್ರವು ಸುಖ ಸಮಾಧಾನಗಳಿಂದ ಬಾಳಬೇಕಾದರೆ ವಿಸ್ತಾರವಾದ ಭೂಪ್ರದೇಶವು ಅದರ ಆಡಳಿತೆಗೆ ಒಳಗಾಗಬೇಕು. ಹಾಗೆ ರಾಜ್ಯವಿಸ್ತಾರಕ್ಕೆ ಅವಕಾಶವೆಲ್ಲಿದೆ? ಅದಕ್ಕಾಗಿ ಜರ್ಮನಿಯು ಯುರೋಪದಲ್ಲಿ ರಣದುಂದುಭಿಯನ್ನು ಮೊಳಗಿಸಿದ ಹೊರತು ಗತ್ಯಂತರವಿರಲಿಲ್ಲ. ಅದಕ್ಕಾಗಿ ಮೊತ್ತಮೊದಲು ಜರ್ಮನಿಯು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಬೇಕು; ಹ್ಯಾಯಿನ್ ಪ್ರದೇಶದಲ್ಲಿ ಸೈನ್ಯವನ್ನು ಹೆಚ್ಚಿಸಬೇಕು; ಆಸ್ಟ್ರಿಯವನ್ನು ವಶಪಡಿಸಿಕೊಳ್ಳಬೇಕು; ಝೆಕೊಸ್ಲೊವ್ಹಾಕಿಯಾವನ್ನು ಗೆದ್ದುಕೊಳ್ಳಬೇಕು; ತರುವಾಯ ಪೋಲಂಡ ರೊಮಾನಿಯಾಗಳ ಮೇಲೆ ಸಾಗಿಹೋಗಬೇಕು. ಈ ಕ್ರಮದಿಂದ ಕಾರ್ಯ ನಡೆಯಿಸಬೇಕೆಂದು ಹೆರ್ ಹಿಟ್ಲರನ ಮತವಿದ್ದು ಅದರಂತೆ ೧೯೩೮ನೆಯ ಇಸ್ವಿಯ ಆಗಸ್ಟ ತಿಂಗಳಲ್ಲಿ ಕಾರ್ಯಾರಂಭ ಮಾಡಿರುವನು.

ಜರ್ಮನಿಯ ಪೂರ್ವಕ್ಕಿರುವ ವಿಸ್ತಾರವಾದ ದೇಶವನ್ನು ವಶಪಡಿಸಿಕೊಳ್ಳಬೇಕೆಂಬ ಉದ್ದೇಶವು ಹೆಚ್ಚು ಜನದಟ್ಟಣೆಯುಳ್ಳ ಬೊಹೋಮಿಯಾ ಮತ್ತು ಮೊರೇವ್ಹಿಯಾ ಎಂಬ ಚಿಕ್ಕ ಪ್ರದೇಶಗಳನ್ನು ಗೆದ್ದುಕೊಳ್ಳುವದರಿಂದ ಸಫಲವಾಗಲಾರದು. ಆದರೆ ಯುದ್ಧದ ಪೂರ್ವಸಿದ್ಧತೆಗಾಗಿ ಈ ಪ್ರದೇಶಗಳನ್ನು ವಶಮಾಡಿಕೊಳ್ಳಲೇಬೇಕಾಗುವದು.

ಯುದ್ಧಕ್ಕಿಂತ ಮೊದಲು ಜರ್ಮನ್ನರ ವಸತಿಸ್ಥಾನವನ್ನು ವಿಸ್ತಾರಗೊಳಿಸುವದಿಷ್ಟೇ ನಮ್ಮ ನಿಜವಾದ ಉದ್ದೇಶವಾಗಿತ್ತೆಂದು ಹಿಟ್ಲರನ ಅಭಿಪ್ರಾಯವಿದ್ದಿತು. ಅದಕ್ಕಾಗಿ ಅವನು ಬ್ರಿಟಿಶರೊಡನೆ ಸ್ನೇಹ ಬೆಳಿಸಿ ರಶಿಯಾವನ್ನು ಹಣಿದು ಹಾಕಿ ಪೂರ್ವದಿಕ್ಕಿಗೆ ತನ್ನ ರಾಜ್ಯವನ್ನು ಬೆಳಿಸಬೇಕೆಂಬ ಯೋಚನೆಯಲ್ಲಿದ್ದನು. ಆದರೆ ಪರಿಣಾಮವು ವಿಪರೀತವಾಯಿತು. ಬ್ರಿಟಿಷರು ಹಿಟ್ಲರನ ಶತ್ರುಗಳಾದರು. ರಶಿಯವು ಜರ್ಮನಿಯ ಅಳುಕಿನಲ್ಲಿ ಸಿಕ್ಕು ಅದರೊಡನೆ ಸ್ನೇಹ ಸಂಬಂಧವನ್ನು ಪ್ರಕಟಿಸಿತು.

ಹಿಟ್ಲರನ ಪರದೇಶಗಳ ಸಂಬಂಧದ ಧೋರಣೆಯು ಈ ರೀತಿಯಾಗಿ ವಿಚಿತ್ರ ಸ್ವರೂಪದ್ದಾಗಿರುವಂತೆ ಸ್ವದೇಶಕ್ಕೆ ಸಂಬಂಧಿಸಿದ ಧೋರಣೆಯೂ ಕೂಡ ಅಷ್ಟು ಸರಳವಾಗಿಲ್ಲ. ಅವನು ಹುಟ್ಟಿದ್ದು ಚಿಕ್ಕದೊಂದು ಹಳ್ಳಿಯಲ್ಲಿ. ವಿಯೆನ್ನಾದಲ್ಲಿ ತನ್ನ ದೈನಂದಿನ ಜೀವನವನ್ನು ಸಾಗಿಸುವಾಗ ಅವನು ಅನುಭವಿಸಬೇಕಾದ ಕಷ್ಟಗಳನ್ನು ಕಂಡು ಅವನಿಗೆ ನಗರವಾಸದ ವಿಷಯದಲ್ಲಿ ತುಂಬ ಅನಾದರವುಂಟಾಗಿರುವದು. ದೊಡ್ಡ ದೊಡ್ಡ ನಗರಗಳೂ ಅಲ್ಲಿಯ ವಿಶಾಲವಾದ ಕಾರಖಾನೆಗಳೂ ಮನುಷ್ಯ ತ್ವದ ನಾಶಕ್ಕೆ ಕಾರಣವಾಗುವವೆಂದು ಅವನ ಅಭಿಪ್ರಾಯವಿದೆ. ಹಳ್ಳಿಗಳು, ಹಳ್ಳಿಗಳಲ್ಲಿಯ ಒಕ್ಕಲುತನ ಮೊದಲಾದ ಚಿಕ್ಕ ಪುಟ್ಟ ಗ್ರಾಮೋದ್ಯೋಗಳು ಇವುಗಳ ಬಗ್ಗೆ ಹಿಟ್ಲರನ ಪ್ರೀತಿ ಬಹಳ. ಭವಿಷ್ಯತ್ಕಾಲದ ಮಹಾಜರ್ಮನ್ ರಾಷ್ಟ್ರವನ್ನೆಲ್ಲ ಹಿಟ್ಲರನು ಹಳ್ಳಿಗಳಲ್ಲಿ ಹಂಚಿಬಿಡಬೇಕೆಂಬ ಧೋರಣೆಯುಳ್ಳವನಾಗಿದ್ದಾನೆ.

ಹಿಟ್ಲರನ ಮೇನ್‌ಕಾಂಫ್ ಪುಸ್ತಕದೊಳಗಿನ ಅಭಿಪ್ರಾಯದಂತೆ ಅವನು ಇಟಲಿ ಮತ್ತು ಗ್ರೇಟಬ್ರಿಟನ್ನುಗಳನ್ನು ತನ್ನ ಸ್ನೇಹಿತ ರಾಷ್ಟ್ರಗಳಲ್ಲಿ ಸೇರಿಸಿಕೊಳ್ಳ ಬೇಕೆಂಬ ಧೋರಣೆಯುಳ್ಳವನಾಗಿದ್ದನೆಂಬುದು ಪ್ರಕಟವಾಗುವದು. ಆದರೆ ಇಂದಿನ ಪರಿಸ್ಥಿತಿಯು ತೀರ ಬದಲಾಗಿ ಹೋಗಿದೆ.

"ಸಿನಾರ ಮುಸೋಲಿನಿ"

ಮೊದಲನೆಯ ಮಹಾಯುದ್ಧಕ್ಕೆ ಮೊದಲು ಇಟಲಿಯು ಯುರೋಪದ ಒಂದು ಕಾಲುಮಾತ್ರ. ಅದರ ಆಕಾರವೂ ಅಂಥದೇ. ಹಾಲಂಡವು ಹಾಲು ಒದಗಿಸಿಕೊಡು ವಂತೆ ಇದು ಯುರೋಪದ ರಾಷ್ಟ್ರಗಳಿಗೆ ಒಳ್ಳೆಯ ಅಡುಗೆಯವರನ್ನು ಒದಗಿಸಿ ಕೊಡುವದರಲ್ಲಿ ಹೆಸರಾಗಿದ್ದಿತು. ಈ ನವಯುಗದ ಆರಂಭದಲ್ಲಿ; ಪ್ರಾಚೀನ ರೋಮದ ಸಾಮ್ರಾಜ್ಯ ಸಂಸ್ಕೃತಿ ಇವೆಲ್ಲಾ ಕೊಳೆದು ಕಳೆಗುಂದಿರುವಾಗ, ಒಬ್ಬ ಸರ್ವಾಧಿಕಾರಿಯು ಉದಯವಾದನು. ಸಿನಾರ ಮುಸೋಲಿನಿಯು ಇಟಲಿಗೆ ಜಗತ್ತಿನಲ್ಲಿ ಅತಿಶಯ ಗೌರವವನ್ನು ತಂದುಕೊಟ್ಟಿದ್ದಾನೆ. ಭೂಮಧ್ಯ ಸಮುದ್ರದ ಸ್ವಾಮಿತ್ವವು ತನ್ನದೆಂದೂ ಜಗತ್ತಿನ ಶಾಂತಿ ಸ್ಥಾಪನೆಗೆ ತಾನೂ ಒಬ್ಬ ಕಾರಣ ಪುರುಷನೆಂದೂ ಹೇಳಿಕೊಳ್ಳುತ್ತ ಜಗತ್ತಿನ ದೃಷ್ಟಿಯನ್ನು ಆಕರ್ಷಿಸಿಕೊಂಡಿದ್ದಾನೆ. ರಶಿಯದ ಸರ್ವಾಧಿಕಾರಿ ಸ್ಟಾಲಿನ್ನನು ಹೆಸರಾದ ತಂತ್ರಗಾರನಾಗಿದ್ದರೆ ಕೆಮಾಲ ಅತಾತುರ್ಕನು ಶೂರ ವೀರ ಖಡ್ಗಧಾರಿಯಾದ ರಣಪಟುವಾಗಿದ್ದಾನೆ. ಆದರೆ

ಮುಸೊಲಿನಿಯು ಲೆಕ್ಕಣಿಕೆಯ ಬಲದಿಂದ ಸರ್ವಾಧಿಕಾರಿಯಾದನಂತೆ. ಈತನ ಸರ್ವಾಧಿಕಾರಿತ್ವಕ್ಕೆ ಇನ್ನೂ ಒಂದು ದೃಷ್ಟಿಯಿಂದ ಮಹತ್ವವಿದೆ. ಇಟಲಿಯಲ್ಲಿ ಇಂದಿಗೂ ಅರಸೊತ್ತಿಗೆಯಿದೆ; ಹೆಸರಿಗೆ ಮಾತ್ರವೇ ಆದರೂ ಅರಸನಿದ್ದಾನೆ. ಮುಸೋಲಿನಿಯು ಆ ಅರಸನ ಸೇವಕರಲ್ಲೊಬ್ಬನು. ರಾಜ್ಯಭಾರದಲ್ಲಿ ಆತನಿಗೆ ಮೂರು ಸ್ಥಾನಗಳಿವೆ. ಅವನು ಡ್ಯೂಸ್—ಎಂದರೆ ಫಾಸಿಸ್ಟ ಪಂಗಡದ ನಾಯಕ; ಇತಾಲಿಯನ್ ಕಾಯದೆಮಂಡಲದ ಅಧ್ಯಕ್ಷ ಮತ್ತು ಮುಖ್ಯ ಮಂತ್ರಿ ಈ ಮೂರು ಮಹತ್ವದ ಸ್ಥಾನಗಳನ್ನು ಆಕ್ರಮಿಸಿಕೊಂಡ ಮುಸೋಲಿನಿಯು ಇಂದು ಇಟಲಿಯ ಸರ್ವಾಧಿಕಾರಿಯಾಗಿದ್ದಾನೆ.

ಮುಸೋಲಿನಿಯು ಒಬ್ಬ ಬಡ ಕುಂಬಾರನ ಮಗ. ತಾಯಿಯು ಒಂದು ಶಾಲೆಯಲ್ಲಿ ಶಿಕ್ಷಕಿ. ಅವನು ಬಾಲ್ಯದಲ್ಲಿ ಹಾಸುಗೆ ಇಲ್ಲದೆ ಹುಲ್ಲಿನ ಪೆಂಡಿಗಳಮೇಲೆ ಮಲಗಿ ಬೆಳೆದನು. ಇತರ ಸರ್ವಾಧಿಕಾರಿಗಳಂತೆಯೇ ಮುಸೋಲಿನಿಗೂ ತನ್ನ ತಾಯಿಯಲ್ಲಿ ಅತ್ಯಂತ ಭಕ್ತಿ ವಿಶ್ವಾಸಗಳಿದ್ದುವು. ಆಕೆಯ ಶಿಕ್ಷಣದ ಬಲದದಿಂದ ತಾನು ಇಂಥ ಪದವಿಗೆ ಬಂದೆನೆಂದು ಅವನು ನಂಬುವನು. ಚಿಕ್ಕವನಿರುವಾಗ ಎರಡು ಮೈಲು ದೂರದಲ್ಲಿರುವ ಹಳ್ಳಿಯ ಶಾಲೆಗೆ ಪಾಟಿ-ಪುಸ್ತಕಗಳನ್ನು ಹಿಡಿದು ಕೊಂಡು ಹಳೆಯ ಅಂಗಿ ಚಲ್ಲಣಗಳನ್ನು ಹಾಕಿ ಕಾಲುನಡಿಗೆಯಿಂದ ಶಾಲೆಗೆ ಹೋಗುತ್ತಿದ್ದನು. ಮನೆಗೆ ಬಂದಾಗ ತಿದಿಯೂದಿ ತಂದೆಯ ಕೆಲಸಕ್ಕೆ ನೆರವಾಗುತ್ತಿದ್ದನು. ತಾಯಿ ರೋಜಾಳು ಮಾತ್ರ ತನ್ನ ಮಗನು "ಘನವಂತನಾಗುವನು" ಎಂದು ಭವಿಷ್ಯ ನುಡಿಯುತ್ತಿದ್ದಳು. ಮತ್ತು ಅವನ ಶಿಕ್ಷಣಕ್ಕೆ ತುಂಬ ಲಕ್ಷ್ಯ ಗೊಡುತ್ತಿದ್ದಳು. ಶಿಕ್ಷಕಿಯ ಮಗನಾದುದರಿಂದ ತನ್ನ ಶಿಕ್ಷಣವನ್ನು ಮುಗಿಸಿದ ಕೂಡಲೇ ತಿಂಗಳಿಗೆ ೪೫ ಶಿಲಿಂಗು ಪಗಾರಿನಮೇಲೆ ಶಿಕ್ಷಕನಾದನು.

ಶಿಕ್ಷಕನಂಥ ಸೌಮ್ಯವೃತ್ತಿಯ ವ್ಯವಸಾಯವು ಅವನಿಗೆ ಹೆಚ್ಚುಕಾಲ ಮೆಚ್ಚುಗೆಯಾಗಲಿಲ್ಲ. ಆದ್ದರಿಂದ ಆ ಕೆಲಸವನ್ನು ಬಿಟ್ಟು ಸ್ವಿತ್ಸರ್ಲಂಡಕ್ಕೆ ನಡೆದನು; ಅಲ್ಲಿಯ ಒಂದು ಗಿರಣಿಯಲ್ಲಿ ಕೂಲಿಯ ಕೆಲಸಮಾಡುತ್ತಿದ್ದಾಗ ಅವನು ಒಂದೊಂದು ದಿನ ಉಪವಾಸವಿರಬೇಕಾಗುತ್ತಿತ್ತು. ಕೂಲಿಕಾರರ ಬಡತನದ ಕಿಚ್ಚಿನಿಂದ ರೊಚ್ಚಿಗೆದ್ದ ಈತನು ಒಬ್ಬ ರಶಿಯನ್ ಸೊಶಾಲಿಸ್ಟ ಕ್ರಾಂತಿಕಾರಕ ಹೆಣ್ಣುಮಗಳ ನೆರವಿನಿಂದ ಆ ಪಂಥದ ಪರವಾಗಿ ಕೆಲಸಮಾಡಲು ಮುಂದೆ ಬಂದನು. ಜಿನಿವಾ, ಲ್ಯೂಸೇನ್ ನಗರಗಳಲ್ಲಿ ಅನೇಕ ಉಗ್ರ ಭಾಷಣ ಮಾಡಲು ಆ ಸರಕಾರದವರು ಇವನ ಬೆನ್ನಟ್ಟಿದರು. ಇವನು ಒಟ್ಟಿಗೆ ಹನ್ನೊಂದು ಸಾರಿ ಸೆರೆಹಿಡಿಯಲ್ಪಟ್ಟು ಶಿಕ್ಷೆಗೆ ಗುರಿಯಾಗಿದ್ದಾನೆ.

೧೯೦೪ರಲ್ಲಿ ಮರಳಿ ಇಟಲಿಗೆ ಬಂದು ಸೈನ್ಯದಲ್ಲಿ ಸೇರಿ ಒಳ್ಳೆಯ ಸೈನಿಕನೆನ್ನಿಸಿಕೊಂಡನು. ಆ ವ್ಯವಸಾಯವೂ ಅವನಿಗೆ ಒಪ್ಪಲಿಲ್ಲ. ಉದರಂಭರಣಕ್ಕಾಗಿ ಮತ್ತೆ ಶಿಕ್ಷಕನಾದನು. ಬಹುಜನ ಶಿಕ್ಷಕರು ಮಾತುಗಾರರು. ಅವರಲ್ಲಿ ಹಲವರು ಒಳ್ಳೆಯ ಬರೆಹಗಾರರಾದುದೂ ಉಂಟು. ಮುಸೋಲಿನಿಯು ಈ ಪಂಗಡಕ್ಕೆ ಸೇರಿದವನು. ಅವನು ವೃತ್ತಪತ್ರಗಳಿಗೆ ಬರೆಯುವ ರೂಢಿಮಾಡಿಕೊಂಡು ಕೊನೆಗೆ ತನ್ನ ಪಂಥದ ಪ್ರಕಟನೆಗಾಗಿ ಒಂದು ವರ್ತಮಾನಪತ್ರದ ಸಂಪಾದಕನಾದನು. ಈ ವ್ಯವಸಾಯವೇ ಇವನಿಗೆ ಸರ್ವಾಧಿಕಾರಿಯ ಪದವನ್ನು ದೊರಕಿಸಿಕೊಟ್ಟಿತು.

"ನಾನು ನನ್ನ ದೇಶವನ್ನು ಉದ್ಧಾರ ಮಾಡುವೆನು." ಇದೇ ಮುಸೋಲಿನಿಯ ಪ್ರತಿಜ್ಞೆ. "ರಾಷ್ಟ್ರವು ನನ್ನದು; ರಾಷ್ಟ್ರದೊಳಗಿನ ಸಂಪತ್ತೆಲ್ಲ ಅದರ ಉದ್ಧಾರಕ್ಕಾಗಿಯೇ; ನಾನು ಬದುಕುವದೂ ರಾಷ್ಟ್ರಕ್ಕಾಗಿಯೇ; ಸಾಯುವದೂ ರಾಷ್ಟ್ರಕ್ಕಾಗಿಯೇ" ಎಂಬವು ಈತನ ಫಾಸಿಸ್ಟಪಂಥದ ದೀಕ್ಷಾವಾಕ್ಯಗಳು. ಇವನು ಶಾಲೆ-ಕಾಲೇಜಗಳೊಳಗಿನ ತರುಣರನ್ನು ಕೂಡಿಸಿ ಅವರಿಗೆ ಈ ಫಾಸಿಸ್ಟ ದೀಕ್ಷೆಯನ್ನು ಕೊಡುವ ಕಾರ್ಯವನ್ನು ವರ್ತಮಾನಪತ್ರದ ಮುಖ್ಯ ವ್ಯವಸಾಯದೊಂದಿಗೆ ಉಪವ್ಯವಸಾಯವಾಗಿ ನಡೆಯಿಸಿದನು.

ಸನ್ ೧೯೧೫ರಲ್ಲಿ ಇಟಲಿಯು ಮಿತ್ರರಾಷ್ಟ್ರಗಳೊಡನೆ ಸೇರಿ ರಣರಂಗಕ್ಕೆ ಇಳಿಯಿತು. ಮುಸೋಲಿನಿಯು ಸೈನಿಕ ಶಿಕ್ಷಣವನ್ನು ಪಡೆದವನಾದುದರಿಂದ ರಣಭೂಮಿಗೆ ಹೋಗಬೇಕಾಯಿತು. ಅಲ್ಲಿ ಒಂದು ಬಾಂಬಿನ ಆಘಾತಕ್ಕೆ ಗುರಿಯಾಗಿ ಮರಣೋನ್ಮುಖನಾದನು. ಮಹಾಪುರುಷರಿಗೆ ಮರಣವಿಲ್ಲವೆಂಬಂತೆ ಈತನ ಶರೀರವು ಆ ಬಾಂಬಿನ ಹೊಡೆತದಿಂದ ನುಚ್ಚುನೂರಾಗುವಂತಿದ್ದರೂ ಬದುಕಿಕೊಂಡನು. ಒಂದು ತಿಂಗಳಲ್ಲಿ ೨೭ ಸಾರೆ ಶಸ್ತ್ರಕ್ರಿಯೆ ನಡೆಯಿಸಿ ಅವನ ಶರೀರದಿಂದ ಳಳ ಬಾಂಬಿನ ತುಂಡುಗಳನ್ನು ಹೊರಗೆ ತೆಗೆದರು. ಅಂದಿಗೆ ಅವನ ಪುನರ್ಜನ್ಮವಾದಂತಾಯಿತು. ಮತ್ತೊಮ್ಮೆ ವಿಮಾನದ ಶಿಕ್ಷಣಪಡೆಯುತ್ತಿದ್ದಾಗ ಭಯಂಕರ ಅಪಘಾತವಾದರೂ ಹೆಚ್ಚಿನ ಅಪಾಯವಿಲ್ಲದೆ ಬದುಕಿ ಉಳಿದನು.

ಮಹಾಯುದ್ಧದ ತರುವಾಯ ಆದ ಒಪ್ಪಂದದಲ್ಲಿ ಇಟಲಿಗೆ ಸಾಕಷ್ಟು ಸ್ಥಾನಮಾನಗಳು ದೊರೆಯಲಿಲ್ಲವೆಂದು ಈತನು ಮಿತ್ರರಾಷ್ಟ್ರಗಳನ್ನು ಪ್ರತಿಭಟಿಸಿದನು. ಆರು ಲಕ್ಷ ಜನರು ರಣಭೂಮಿಯಲ್ಲಿ ಮಲಗಿದರು. ಎಷ್ಟೋ ಲಕ್ಷ ಜನರು ಗಾಯಹೊಂದಿದರು. ದೇಶದ ವೀರರಕ್ತವೆಲ್ಲ ಬತ್ತಿಹೋಯಿತು. ಆದರೆ ಅದರ ಪ್ರತಿಫಲವಾಗಿ ಇವರಿಗೆ ಏನು ದೊರೆಯಿತು? ಎಂಬುದನ್ನು ಆತನು ತನ್ನ ವರ್ತಮಾನಪತ್ರದಲ್ಲಿ ಟೀಕೆಮಾಡಿ ತನ್ನವರನ್ನು ಎಚ್ಚರಗೊಳಿಸಿದನು. ಮಹಾಯುದ್ಧದ

ತರುವಾಯವೂ ಇಟಲಿಯಲ್ಲಿ ಶಾಂತಿಯಿರಲಿಲ್ಲ. ಒಳಜಗಳಗಳು ನಡೆದೇ ಇದ್ದುವು. ಮುಸೋಲಿನಿಯ ಫಾಸಿಸ್ಟ ಪಕ್ಷವು ಬೆಳೆಯುತ್ತ ನಡೆದಿದ್ದರೂ ಅದಕ್ಕೆ ಇನ್ನೂ ಯಶಸ್ಸು ಬಂದಿರಲಿಲ್ಲ. ೧೯೧೯ ರಲ್ಲಾದ ಚುನಾವಣೆಯಲ್ಲಿ ಮುಸೋಲಿನಿಯು ಸೋತಿದ್ದರಿಂದ ವಿರುದ್ಧಪಕ್ಷದವರು 'ಅವಂತಿ' ಎಂಬ ವರ್ತಮಾನಪತ್ರದಲ್ಲಿ 'ಮುಸೋಲಿನಿಯ ಹೆಣವನ್ನು ಊರ ಹೊರಗಣ ಕಂದಕಕ್ಕೆ ಎತ್ತಿ ಒಗೆದೆವು. ಎಂದು ಬರೆದು ಅಪಹಾಸ್ಯಮಾಡಿದರು. ಮುಸೋಲಿನಿಯು ಅಪಜಯದಿಂದ ಕಗ್ಗುವವನಲ್ಲ. ಅತನ ದೀಘೋರ್ದ್ಯೋಗದಿಂದ ಕಪ್ಪಂಗಿಯವರ ತಂಡವು ದಿನ ದಿನಕ್ಕೆ ಬಲಿಯುತ್ತ ಬಂದಿತು. ಕಪ್ಪು ಅಂಗಿಯು ಫಾಸಿಸ್ಟ ಪಂಗಡದ ಸಮವಸ್ತ್ರ. ಸಮಾಜ, ಜಾತಿ, ಧರ್ಮ, ಶ್ರೀಮಂತಿಕೆ, ಇವುಗಳಲ್ಲಿ ಯಾವುದಕ್ಕೂ ಈ ಪಂಥದವರು ಮನ್ನಣೆ ಕೊಡುವದಿಲ್ಲ. ದೇಶಭಕ್ತಿಯುಳ್ಳ ಬುದ್ಧಿಶಾಲಿಯೇ ದೇಶದ ಉದ್ಧಾರ ಕರ್ತನೆಂದೂ ಅವನೊಬ್ಬನ ಕೈಯಲ್ಲಿಯೇ ಸರ್ವಾಧಿಕಾರವಿರಬೇಕೆಂದೂ ಅವರ ಹೇಳಿಕೆಯಿದೆ. ಅರಸೊತ್ತಿಗೆಯು ಪರಂಪರೆಯಿಂದ ಬರುವದು. ಪ್ರಜಾಸತಾತ್ಮಕ ರಾಜ್ಯದ ಅಧ್ಯಕ್ಷನು ಪಕ್ಷಪಂಗಡಗಳ ಬಲುಮೆಯಿಂದ ಚುನಾಯಿತನಾಗಿ ಬರುವದರಿಂದ ಅವನಲ್ಲಿ ದೇಶಭಕ್ತಿಯಾಗಲಿ ಸರ್ವಾಧಿಕಾರಿಯಾಗಲು ಅವಶ್ಯವಿದ್ದ ಇನ್ನಾವುದೇ ಗುಣಗಳಾಗಲಿ ಇರುವವೆಂಬ ಭರವಸೆಯಿಲ್ಲ. ಆದ್ದರಿಂದ ಇವರಿಂದ ದೇಶೋದ್ಧಾರದ ಕಾರ್ಯಗಳು ನಿರರ್ಗಳವಾಗಿ ನಡೆಯಲಾರವು. ಎಂದು ಈ ಪಂಥದವರು ಪ್ರತಿಪಾದಿಸುವರು. ಕೆಲವೊಂದು ಕಾಯದೆಯನ್ನು ಮಾಡುವದರಿಂದ ಅಥವಾ ಸಂಘಸಂಸ್ಥೆಗಳನ್ನು ಸ್ಥಾಪಿಸುವದರಿಂದ ನಮ್ಮ ಕಾರ್ಯವಾಗುವದಿಲ್ಲ. ಶಿಕ್ಷಣದಿಂದ ದೇಶದ ಭಾವನೆಯನ್ನೇ ಬದಲಿಸಬೇಕು. ಮನುಷ್ಯನ ವ್ಯಕ್ತಿತ್ವ, ಶೀಲ, ಶ್ರದ್ಧೆ ಇವನ್ನು ವಿಕಾಸಗೊಳಿಸಬೇಕು, ಈ ದೇಶೋದ್ಧಾರದ ಕಾರ್ಯಕ್ಕಾಗಿಯೇ ಫಾಸಿಸ್ಟ ಪಂಥದವರು ರಾಜ್ಯಸೂತ್ರಗಳನ್ನು ಅಕ್ರಮಿಸಿಕೊಂಡಿರುವರು, ಎಂದವರು ತಮ್ಮ ಪಂಥದ ಧ್ಯೇಯವನ್ನು ವಿವರಿಸುವರು.

ಹಲಕೆಲವು ಪರಾಕ್ರಮ ಪರಾಜಯಗಳ ತರುವಾಯ ೧೯೨೨ರಲ್ಲಿ ಫಾಸಿಸ್ಟ ಪಕ್ಷವು ಜಯಶಾಲಿಯಾಯಿತು. ಮುಸೋಲಿನಿಯು ತನ್ನ ಅಪ್ಪಣೆಯಾದ ಕೂಡಲೆ ದೇಶದ ಪ್ರಾಣನಾಡಿಗಳಾದ ಪೋಷ್ಟ ಆಫೀಸು, ಪೋಲೀಸ ಕಚೇರಿ, ಸೈನ್ಯದ ಚಾವಣಿ, ಇವನ್ನು ಆಕ್ರಮಿಸಿಕೊಂಡು ಬಿಡಬೇಕೆಂದು ಮೊದಲೇ ನಿರ್ಣಯಿಸಿ ಅಲ್ಲಲ್ಲಿ ತನ್ನ ಅನುಯಾಯಿಗಳನ್ನು ನಿಯಮಿಸಿಕೊಂಡಿದ್ದನು. ಮುಸೋಲಿನಿಯು ದೇಶದ ತುಂಬ ಸಂಚರಿಸಿ ಈ ಎಲ್ಲ ವ್ಯವಸ್ಥೆ ಮಾಡಿಕೊಂಡು ತಿರುಗಿ ತನ್ನ ವರ್ತಮಾನ ಪತ್ರದ ಕಚೇರಿಗೆ ಬಂದು ಸಂಪಾದಕನ ಆಸನದಲ್ಲಿ ಕುಳಿತು ಲೆಕ್ಕಣಿಕೆ ಕಾಗದಗಳನ್ನು ತೆಗೆದುಕೊಂಡು "ನನ್ನ ದೇಶಬಾಂಧವರೇ,

ಫಾಸಿಸ್ಟ ವೀರರೇ, ಸಂಗ್ರಾಮಕ್ಕೆ ಗೊತ್ತಾದ ಸಮಯವು ಬಂದಿತು." ಎಂದು ಮುಂತಾಗಿ ಬರೆದು ಸಮಯವನ್ನು ಸೂಚಿಸಿ ಹಂಚಿದನು. ೫೦ ಸಾವಿರ ಫಾಸಿಸ್ಟ ಪಡೆಯೊಡನೆ ರೋಮಿನ ಮೇಲೆ ಸಾಗಿ ನಡೆದನು. ೧೯೨೨ನೆಯ ಇಸ್ವಿಯ ಅಕ್ಟೋಬರ ೩೧ನೆಯ ತಾರೀಖಿನ ದಿನ ಮಧ್ಯರಾತ್ರಿಗೆ ಮುಸೋಲಿನಿಯು ಜಯಶಾಲಿಯಾದನು. ರೋಮಿನ ಅರಸನು ಮುಸೋಲಿನಿಯ ಬೇಡಿಕೆಯನ್ನು ಪೂರೈಸಿದನು. ನವ್ಹಂಬರ ತಿಂಗಳಲ್ಲಾದ ಚುನಾವಣೆಯಲ್ಲಿ ದೇಶದ ಸರ್ವಾಧಿಕಾರಿಯಾಗಿ ಚುನಾಯಿತನಾದನು. ಅಂದಿನಿಂದ ಇಟಲಿಯು ಅತನ ತೋರ್ಬೆರಳಿನ ಕೆಳಗೆ ಕೆಲಸಮಾಡುತ್ತಿದೆ. ಅಂದಿನಿಂದ ೧೫ ವರ್ಷಗಳ ಅವಧಿಯಲ್ಲಿ ಈತನು ಇಟಲಿಗಾಗಿ ಮಾಡಿದ ಮಹತ್ಕಾರ್ಯಗಳೇನು ನೋಡೋಣ.

ಇಟಲಿಯಲ್ಲಿ ಈಗ 'ಫಾಸಿಸ್ಟ ಗ್ರ್ಯಾಂಡ್ ಕೌನ್ಸಿಲ್' ಎಂಬ ಒಂದು ಕಾಯದೆ ಮಂಡಲವು ಸ್ಥಾಪಿತವಾಗಿದೆ. ರಾಜ್ಯಕಾರ್ಯಭಾರದ ಯಾವತ್ತು ಸೂತ್ರಗಳು ಅದರ ಕೈಯಲ್ಲಿವೆ. ಮುಸೋಲಿನಿಯು ಅದರ ಅಧ್ಯಕ್ಷನು. ಇದರ ಸಹಾಯದಿಂದ ಈತನು ಇಟಲಿಯ ಅಂತಸ್ಥ ವ್ಯವಸ್ಥೆಯಲ್ಲಿ ಹಲವು ಸುಧಾರಣೆಗಳನ್ನು ನೆರವೇರಿಸಿರುವನು. ಇಟಲಿಗೆ ಕಲ್ಲಿದ್ದಲಿ ಕಲ್ಲೆಣ್ಣೆಗಳಿಲ್ಲ. ಅದೊಂದು ಒಕ್ಕಲುತನದ ದೇಶ. ಭೂಮಿಯೂ ಅಷ್ಟು ಫಲದ್ರೂಪವಾಗಿಲ್ಲ. ಆದಕ್ಕಾಗಿ ಅವನು ಸಾಮ್ರಾಜ್ಯದ ಬೆಳವಣಿಗೆಯಲ್ಲಿ ದೃಷ್ಟಿಯನ್ನಿಟ್ಟಿದ್ದಾನೆ. ಈ ಧ್ಯೇಯ ಸಾಧನೆಗಾಗಿಯೇ ೧೯೩೫ರಲ್ಲಿ ಅಬಿಸೀನಿಯಾದ ಯುದ್ಧವು ಪ್ರಾರಂಭವಾಯಿತು. ರಾಷ್ಟ್ರಸಂಘದ ಆಜ್ಞೆಯನ್ನು ಉಲ್ಲಂಘಿಸಿ ಕೊನೆಗೆ ಗ್ರೇಟ ಬ್ರಿಟನ್ ಫ್ರಾನ್ಸಗಳ ಹೇಳಿಕೆಯನ್ನೂ ಕಡೆಗಣಿಸಿ ಆ ದೇಶವನ್ನು ನುಂಗಿದನು.

ಒಟ್ಟಿಗೆ ಮುಸೋಲಿನಿಯು ಜಗತ್ತಿನಲ್ಲಿ ಹೆಸರಾದ ಮುತ್ಸದ್ದಿಗಳಲ್ಲಿ ಒಬ್ಬ ನೆನಿಸಿಕೊಂಡಿದ್ದಾನೆ. ಅವನು ಒಬ್ಬ ಬಡ ಶಿಕ್ಷಿಕೆಯ ಮಗ; ಸ್ವತಃ ಶಿಕ್ಷಕನೂ ಆಗಿದ್ದನು. ಸ್ವಿತ್ಸರ್ಲಂಡದಲ್ಲಿ ಅರೆಹೊಟ್ಟೆ ಉಂಡು ಬಾಳಿದ ಕೂಲಿಕಾರ. ಹನ್ನೊಂದು ಸಾರೆ ಶಿಕ್ಷೆಹೊಂದಿದ ದೇಶಭಕ್ತ. ಮಹಾಯುದ್ಧದ ಕಾಲದಲ್ಲಿ ತುಬಾಕೆಯನ್ನು ಹೊತ್ತು ಸಿಪಾಯಿಯಾಗಿದ್ದನು. ಒಂದು ಕಾಲದಲ್ಲಿ ಸಮಾಜ ಪತ್ರವಾದಿಯಾಗಿದ್ದನು. ವರ್ತಮಾನ ಪತ್ರಗಳಿಗೆ ಲೇಖಗಳನ್ನು ಬರೆದು ಜೀವನ ಸಾಗಿಸುವದೂ ಇವನಿಗೆ ಗೊತ್ತುಂಟು. ವರ್ತಮಾನಪತ್ರದ ವ್ಯವಸಾಯದಿಂದಲೇ ದೇಶದ ಮುಂದಾಳಾಗಿ ಚುನಾಯಿತನಾದವನು. ರಾಜನೀತಿ ನೈಪುಣ್ಯ, ವಕ್ತೃತ್ವ, ಸ್ವಾರ್ಥತ್ಯಾಗಗಳು ಈತನ ಮೈಯುಂಡ ಗುಣಗಳು. ಮಾತೃಭಕ್ತಿಯೇ ಈತನಲ್ಲಿದ್ದ ಧಾರ್ಮಿಕ ಕುರುಹು. ಕುಡಿಯುವದೂ ಸೇದುವದೂ ಈತನಿಗೆ

ಗೊತ್ತೇ ಇಲ್ಲ. ಈಸುವದೂ ಕುದುರೆ ಸವಾರಿ ಮಾಡುವದೂ ಈತನ ಪ್ರೀತಿಯ ಮನೋರಂಜನೆಯ ಕಾರ್ಯಗಳು. ಮಾಂಸಾಹಾರವನ್ನು ಬಿಟ್ಟು ಹಣ್ಣು-ಹಂಪಲಗಳ ಮೇಲೆಯೇ ಜೀವಿಸುವಂಥ ಪವಿತ್ರ ಋಷಿಜೀವನವೀತನದು. ನಾಟಕ ಸಿನೇಮಾಗಳಿಗೆ ಹೋಗಲಿಕ್ಕೆ ಜನರಿಗೆ ಹೇಗೆ ವೇಳೆ ಸಿಗುವದೆಂದು ಕೇಳುತ್ತಾನಂತೆ. ಅಷ್ಟು ಕಾರ್ಯತತ್ಪರನಾಗಿ ಕಾಲಕಳೆಯುತ್ತಿದ್ದಾನೆ. ಒಂದು ರಾಷ್ಟ್ರದ ಸರ್ವಾಧಿಕಾರಿಯಾದರೂ ಇಂದಿಗೂ ವರ್ತಮಾನಪತ್ರದ ವ್ಯವಸಾಯ ವನ್ನು ಈತನು ಮರೆತಿಲ್ಲ. ಜರ್ಮನ್, ಫ್ರೆಂಚ್, ಇಂಗ್ಲಿಷ ಭಾಷೆಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಜಗತ್ತಿನ ಎಲ್ಲ ಪ್ರಚಲಿತ ವಿಷಯಗಳನ್ನು ದಿನದಿನಕ್ಕೆ ಅರಿತುಕೊಳ್ಳುತ್ತಾನೆ. ಈತನ ನ್ಯಾಯನಿರ್ಣಯ ಶಕ್ತಿಯು ಮೇಲ್ತರದ್ದು. ಎಲ್ಲ ಕಾರ್ಯಕಲಾಪಗಳನ್ನು ವೇಳೆಗೆ ಸರಿಯಾಗಿ ಸುವ್ಯವಸ್ಥಿತವಾಗಿ ನಡೆಯಿಸು ತ್ತಾನೆ. ಈತನ ಆಳಿಕೆಯಲ್ಲಿ ಇಟಲಿಯು ಇನ್ನಾವ ದಿಕ್ಕಿನಲ್ಲಿ ಮುಂದೆ ಸಾಗುವದೋ ಎಂದು ಪರಾಕ್ರಮಣಶೀಲರಾದ ಪಾಶ್ಚಿಮಾತ್ಯರು ನೋಡುತ್ತಲಿದ್ದಾರೆ. ಪ್ರಕೃತ ಮಹಾಯುದ್ಧದಲ್ಲಿ ಸೇರಿದ ಈತನು ಅದನ್ನು ಯಾವ ಮಡುವಿಗೆ ನೂಕುವನೋ ನೋಡಬೇಕು.

ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳ ಸಮಿತಿ

ಪಠ್ಯಪುಸ್ತಕಗಳನ್ನು ಆರಿಸುವ ಮತ್ತು ತಯಾರಿಸುವ ಕೆಲಸಕ್ಕಾಗಿ ಮುಂಬಯಿ ಸರಕಾರದವರು ನಿಯಮಿಸಿದ ಪಠ್ಯಪುಸ್ತಕಗಳ ಸಮಿತಿಯವರು ಅಂಕಗಣಿತ, ಭೂಮಿತಿ, ಸಾಮಾನ್ಯ ವಿಜ್ಞಾನ, ಇತಿಹಾಸ ಮತ್ತು ಭೂಗೋಲ ಈ ವಿಷಯಗಳ ಮೇಲಿನ ಪಠ್ಯಪುಸ್ತಕೆಗಳನ್ನು ವಿಮರ್ಶಿಸುವದಕ್ಕಾಗಿ ಉಪಸಮಿತಿ ಗಳನ್ನು ನಿಯಮಿಸಿರುವರು.

ಈ ಉಪಸಮಿತಿಗಳ ಕಾರ್ಯನಿರ್ವಹಣಕ್ಕಾಗಿ ಮೇಲೆ ಹೇಳಿದ ವಿಷಯಗಳ ಗ್ರಂಥಕರ್ತರೂ ಪ್ರಕಾಶಕರೂ ತಾವು ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಗುಜರಾಥಿ, ಮರಾಠಿ, ಕನ್ನಡ ಮತ್ತು ಉರ್ದು ಭಾಷೆಗಳಲ್ಲಿ ಬರೆದು ಪ್ರಕಟಿಸಿರುವ ಪುಸ್ತಕಗಳಲ್ಲಿ ಪ್ರತಿಯೊಂದು ಪುಸ್ತಕದ ೧೦ ಪ್ರತಿಗಳನ್ನು ಕೆಳಗೆ ಹೇಳಿದ ಟ್ರೇನಿಂಗ ಕಾಲೇಜುಗಳ ಮುಖ್ಯಾಧಿಕಾರಿಗಳಿಗೆ ಇದೇ ಸವ್ಹಂಬರ ತಿಂಗಳ ೧೦ನೆಯ ತಾರೀಖಿನೊಳಗಾಗಿ ಮುಟ್ಟುವಂತೆ ಕಳುಹಿಸಿ ಕೊಡತಕ್ಕದ್ದು.

ಗುಜರಾಥಿ:— ಪಿ. ಆರ್. ಟ್ರೇನಿಂಗಸ್ಕೂಲಿನ (ಗಂಡುಮಕ್ಕಳ) ಹೆಡ್ ಮಾಸ್ತರರು — ಅಹಮ್ಮದಾಬಾದ.

ಕನ್ನಡ:— ಗಂಡುಮಕ್ಕಳ ಟ್ರೇನಿಂಗಸ್ಕೂಲಿನ ಹೆಡ್‌ಮಾಸ್ತರರು. ಧಾರವಾಡ.

ಮರಾಠಿ:— ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು—ಪುಣೆ.

ಉರ್ದು:— ಉರ್ದು ಟ್ರೇನಿಂಗ ಸ್ಕೂಲಿನ ಹೆಡ್‌ಮಾಸ್ತರರು—ಪುಣೆ.

ವಿದ್ಯಾಖಾತೆಯಿಂದ ಮಂಜೂರಾದ ಪಾಠ ಪುಸ್ತಕಗಳ ಯಾದಿಯಲ್ಲಿರುವ ಪುಸ್ತಕಗಳನ್ನಷ್ಟೇ ಅಲ್ಲದೆ ಅಂಥ ಮಿಕ್ಕ ಪುಸ್ತಕಗಳನ್ನು ಸಹ ಈ ಸಮಿತಿಯವರು ವಿಮರ್ಶಿಸುವರೆಂಬುದನ್ನು ಗ್ರಂಥಕರ್ತರೂ ಪ್ರಕಾಶಕರೂ ಲಕ್ಷ್ಯದಲ್ಲಿಟ್ಟಿರಬೇಕು. ಆದ್ದರಿಂದ ಗ್ರಂಥಕರ್ತರೂ ಪ್ರಕಾಶಕರೂ ಈ ಮೊದಲೇ ಸರಕಾರದಿಂದ ಮಂಜೂರಾದ ಪುಸ್ತಕಗಳನ್ನು ಕಳುಹಿಸುವದಲ್ಲದೆ ಈ ಸಮಿತಿಯವರ ಮುಂದೆ ಇಡಲಿಚ್ಛಿಸುವ ಇತರ ಪುಸ್ತಕಗಳನ್ನು ಸಹ ಕಳಿಸುವದಕ್ಕೆ ತಪ್ಪಬಾರದು.

ತಾ॥ ೧೦-೧೧-೧೯೪೦ ರ ತರುವಾಯ ಬಂದ ಪುಸ್ತಕಗಳನ್ನು ಸ್ವೀಕರಿಸಲಿಕ್ಕಿಲ್ಲ. ಕಳುಹಿಸಿದ ಪುಸ್ತಕಗಳ ಬೆಲೆಯು ದೊರೆಯಲಾರದು; ಅಥವಾ ಆ ಪುಸ್ತಕಗಳು ತಿರುಗಿ ದೊರೆಯಲಾರವು. ಸಾಕಾದಷ್ಟು ಅಂಚೆಯ ಟಿಕೀಟುಗಳನ್ನು ಹಚ್ಚದಿರುವ ಪೋಷ್ಟಿನ ಪಾರ್ಸಲುಗಳನ್ನೂ ಮುಂಗಡ ಹಣವನ್ನು ತುಂಬದಿರುವ ರೇಲ್ವೆ ಪಾರ್ಸಲುಗಳನ್ನೂ ಸ್ವೀಕರಿಸಲಿಕ್ಕಿಲ್ಲ.

ಧಾರವಾಡ ಡಿ. ಸ್ಕೂ. ಬೋರ್ಡಿನ ನಿರ್ಣಯಗಳ ಸಾರಾಂಶ

ನಂಬರು ೭೦:— ಶಿಗ್ಗಾವಿ ತಾಲೂಕಿನಲ್ಲಿಯ ನೀರಲಗಿಯ ಕ. ಗ. ಮು. ಶಾಲೆಯನ್ನು ಹೀರೇಕೆರೂರ ತಾಲೂಕದಲ್ಲಿಯ ಹೆರೇಕಬ್ಬೂರಿಗೆ ವರ್ಗಮಾಡಿದೆ.

ನಂ. ೯೧:— ಮೇಲಧಿಕಾರಿಗಳ ಸಲಹೆಯ ಪ್ರಕಾರ ಶಿಫ್ಟ ಪದ್ಧತಿಯನ್ನು ಮಾನ್ಯಮಾಡಿ, ತಾ॥ ೧-೭-೧೯೪೦ ರಿಂದ ರೂಢಿಯಲ್ಲಿ ತರಬೇಕು. ಒಬ್ಬನೇ ಶಿಕ್ಷಕನಿರುವ ಶಾಲೆಗಳಲ್ಲಿ; ಬಾಲಕರವರ್ಗ ೧-೨-೩-ಳನೆಯ ಇಯತ್ತೆಗಳಿಗೂ ಇಬ್ಬರು ಶಿಕ್ಷಕರು ಇರುವಲ್ಲಿ ಬಾಲಕರವರ್ಗ ೧-೨-೩ ಇಯತ್ತೆಗಳಿಗೂ ಉಳಿದ

ಾಲೆಗಳಲ್ಲಿ ಬಾಲಕರವರ್ಗ ೧ನೆಯ ಇಯತ್ತೆಗಳಿಗೂ ಮಾತ್ರ ಈ ಪದ್ಧತಿಯು ಜಾರಿಯಿಸುವದು. ಇದರಿಂದ ಶಿಕ್ಷಕನು ಎರಡು ವಿಭಾಗದ ವಿದ್ಯಾರ್ಥಿಗಳಿಗೆ ೀರೆ ಬೇರೆ ವೇಳೆಗಳಲ್ಲಿ ಕಲಿಸಬೇಕಾದರೂ ಒಂದು ಸರತಿಗೆ ಮೂರಕ್ಕಿಂತ ಹೆಚ್ಚು ್ಲಾಸುಗಳನ್ನು ಕಲಿಸಬೇಕಾಗುವದಿಲ್ಲ. ಪ್ರತಿಯೊಂದು ವಿಭಾಗದ ವಿದ್ಯಾರ್ಥಿಗಳಿಗೆ ಪ್ರತಿದಿವಸ ಮೂರು ಮೂರು ತಾಸುಗಳಂತೆ ಕಲಿಸಬೇಕು. ನಡುವೆ ಅರ್ಧ ತಾಸು ಿಶ್ರಾಂತಿ ಕೊಡತಕ್ಕದ್ದು. ಒಪ್ಪೊತ್ತು ಶಾಲೆಯಿದ್ದಾಗ ಪ್ರತಿಯೊಂದು ಭಾಗಕ್ಕೆ ೧½ ತಾಸು ಕಲಿಸತಕ್ಕದ್ದು. ಅಭ್ಯಾಸಪತ್ರಿಕೆಯಲ್ಲಿ ಏನೂ ಬದಲಾವಣೆ ಮಾಡಬೇಕಾಗಿಲ್ಲ. ಶಾಲೆಯು ಕಟ್ಟಡದಲ್ಲಿಯೂ ಬದಲಾವಣೆಮಾಡುವ ಕಾರಣವಿಲ್ಲ. ೀ ದರದಲ್ಲಿ ಏನೂ ಹೆಚ್ಚು ಕಡಿಮೆ ಇಲ್ಲ. ಒಬ್ಬ ಶಿಕ್ಷಕನು ಒಂದು ಸರತಿಗೆ ೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಕಲಿಸಬೇಕಾಗುವದಿಲ್ಲ.

ನಂ. ೯೮:— ಪ್ರೊ. ಕಾಮತರವರು ಬರೆದ 'ಹಿಂದೂ ಹುಡುಗರ ಬುದ್ಧಿ-ಮಾಪನ' ಎಂಬ ಪುಸ್ತಕವನ್ನು ಉಪಯೋಗಿಸಲಿಕ್ಕೆ ಶಿಕ್ಷಕರಿಗೆ ಅನುಮತಿ ಕೊಟ್ಟಿದೆ.

ನಂ. ೧೦೦:— ಮೆ॥ ಎ. ಇ. ಧಾರವಾಡ ಇವರ ಪತ್ರದ ಪ್ರಕಾರ ಈ ಾರೆ ೨೫ ಶಿಕ್ಷಕರನ್ನು ಶಾರೀರಿಕ ಶಿಕ್ಷಣ ಪಡೆಯಲು ಆರಿಸಿ ಕಳಿಸಬೇಕು.

ನಂ. ೧೩೨:— ಸನ್ ೧೯೪೦-೧೯೪೧ನೆಯ ವರುಷದಲ್ಲಿ ಟ್ರೇನಿಂಗ ಸಂಸ್ಥೆ ಳಲ್ಲಿ ಕಲಿಯಲಿಕ್ಕೆ ಹೋದ ಶಿಕ್ಷಕರಿಗೆ, ಅವರು ಕೆಲಸದ ಮೇಲೆ ಇದ್ದಂತೆಯೇ ಂದು ತಿಳಿದು ಪೂರ್ಣ ಪಗಾರ ಕೊಡತಕ್ಕದ್ದು.

ನಂ. ೧೩೩:— 'ನುಡಿಗನ್ನಡಿ' ಎಂಬ ಪಂ. ಪೂಜಾರರವರ ಪುಸ್ತಕವನ್ನು ಾಲ್ಕನೆಯ ಇಯತ್ತೆಗೆ ಟಿಕ್ಸ್ಟ ಎಂದು ಉಪಯೋಗಿಸಬೇಕು.

ನಂ. ೧೩೪:— ದಾತಾರ ಮತ್ತು ಕಂಪನಿಯವರಿಂದ ಪ್ರಕಟವಾಗುವ ಜಾಹೀರಾತೆಯ ಪುಸ್ತಕಗಳ ಬಗ್ಗೆ ಮೆ. ಜೇಅರಮನ್ನರು ಮತ್ತು ಏ. ಓ. ಾಹೇಬರು ಕೂಡಿ ಅವಶ್ಯವಿದ್ದ ವ್ಯವಸ್ಥೆಯನ್ನು ಮಾಡಬೇಕು.

ನಂ. ೧೪೧:— ಖಾಸಗೀ ಸಂಸ್ಥೆಗಳು ರಜಿಸ್ಟರ ಆಗಬೇಕಾದರೆ– ಆ ಸಂಸ್ಥೆಯ ಮೆಂಬರರು ೨೧ ವರ್ಷ ವಯಸ್ಸಿಗಿಂತ ಚಿಕ್ಕವರಿರಬಾರದು. ದಿವಾಳಿ ಖೋರರಿರಕೂಡದು. ನೈತಿಕ ಅಪರಾಧಗಳಿಗಾಗಿ ಶಿಕ್ಷೆಹೊಂದಿರಬಾರದು. ಸಂಸ್ಥೆಯಲ್ಲಿ ವ್ಯಕ್ತಿಶಃ ಆರ್ಥಿಕ ಲಾಭಪಡೆಯುವಂತೆ ಸಂಬಂಧವಿರಬಾರದು. ಅವರು ಬೌದ್ಧಿಕ ದೋಷಿಗಳಾಗಿರಕೂಡದು. ಸಂಸ್ಥೆಯ ಮುಖ್ಯ ಚಾಲಕರು ಕನಿಷ್ಟ ಪಕ್ಷ ಳ ಇಯತ್ತೆಯನ್ನಾದರೂ ಕಲಿತವರಿರಬೇಕು. ಸಂಸ್ಥೆಯನ್ನು ನಡಿಸಲು ಬೇಕಾಗು

ವಷ್ಟು ಹಣದ ಸಂಗ್ರಹವಿರಬೇಕು. ನೌಕರ ಜನರ ಸಲುವಾಗಿ ಪಗಾರ ಸ್ಕೇಲನ್ನು ಗೊತ್ತುಪಡಿಸಿ, ಪ್ರತಿತಿಂಗಳವೂ ಸರಿಯಾಗಿ ಮುಟ್ಟಿಸುವಂತೆ ವ್ಯವಸ್ಥೆಯು ಇರಬೇಕು. ಶಿಲಕು ಇದ್ದ ಹಣವನ್ನೂ ಬರುತ್ತಿರುವ ಗ್ರ್ಯಾಂಟಿನ ಹಣವನ್ನೂ ಸಂಸ್ಥೆಯ ಹಿತಕ್ಕಾಗಿಯೇ ವೆಚ್ಚಮಾಡಬೇಕು. ಲೆಕ್ಕಪತ್ರವೆಲ್ಲ ಜೊಕ್ಕಾಟವಾಗಿರ ಬೇಕು.

ನಂ. ೧೪೮:— ಈ ಬೋರ್ಡಿನ ಯಾವ ಶಿಕ್ಷಕರೂ ಯಾವದೇತರದ ಸೊಸಾಯಿಟಿಯ ಸೆಕ್ರೆಟರಿಯಾಗಿ ಕೆಲಸಮಾಡಬಾರದು. ಇದರಿಂದ ಶಾಲೆಯ ಪ್ರಗತಿಗೆ ಕುಂದು ಉಂಟಾಗಬಹುದು. ಶಿಕ್ಷಕರ ಸೊಸಾಯಿಟಿಗೆ ಮಾತ್ರ ಸೆಕ್ರೆಟರಿಯಾಗಬಹುದು, ಆದರೆ ಅದರ ಬಗ್ಗೆ ಮುಂಚಿತವಾಗಿ ಬೋರ್ಡಿನ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು.

ನಂ. ೧೬೦:— ಮೆಹರ್ಬಾನ ಡಾಯರೆಕ್ಟರ ಸಾಹೇಬರ ಪತ್ರದ ಪ್ರಕಾರ ಈ ಬೋರ್ಡಿನ ಆಡಳತೆಯಲ್ಲಿರುವ ಹೆಣ್ಣುಮಕ್ಕಳ ಶಾಲೆಗಳಲ್ಲಿ ಏಳನೆಯ ಇಯತ್ತೆಗೆ ಪ್ರತ್ಯೇಕವಾಗಿ ಎಂಟಾಣೆ ಸಾದಿಲವಾರವನ್ನು ಗ್ರಹವಿಜ್ಞಾನದ ಸಲುವಾಗಿ ಕೊಡತಕ್ಕದ್ದು.

ನಂ. ೧೬೩:— ಅನ್‌ಏಸ್ ಶಿಕ್ಷಕರು ಈ ಮೊದಲು ಶಾಲೆಗಳನ್ನು ನಡಿಸಿದ್ದು ಅವು ಮಂಜೂರಾಗಿದ್ದರೆ ಹಾಗೂ ಅವು ಯೋಗ್ಯವಿದ್ದರೆ ಅವಕ್ಕೆ ಸನ್ ೧೯೪೦–೧೯೪೧ನೆಯ ವರುಷಕ್ಕಾಗಿ ಗ್ರ್ಯಾಂಟ್ ಮಂಜೂರ ಮಾಡಲು ಅಡ್ಡಿ ಇಲ್ಲ.

ನಂ. ೧೬೭:— ಬೋರ್ಡಿನ ಶಾಲೆಗಳನ್ನು ನಡೆಯಿಸುವ ಪ್ರತಿನಿತ್ಯದ ವೇಳೆಯನ್ನು ನಿರ್ಧರಿಸುವ ಬಗ್ಗೆ ಒಂದು ಸಬ್ ಕಮೀಟಿಯನ್ನು ನಿಯಮಿಸಲಾಯಿತು.

ನಂ. ೧೬೮:— ಆರ್ಥಿಕ ತೊಂದರೆಗಳ ಮೂಲಕ ಈ ಬೋರ್ಡಿನ ಆಳಿಕೆಗೆ ಒಳಪಟ್ಟ ಬೇಸಿಕ್ ಶಿಕ್ಷಣದ ಶಾಲೆಗಳ ಖರ್ಚಿನ ೫ ಭಾಗವನ್ನು ಕೊಡಲು ಸಾಧ್ಯವಿಲ್ಲೆಂದು ಬೇಸಿಕ್ ಶಿಕ್ಷಣದ ಆಫೀಸರರಿಗೆ ತಿಳಿಸಬೇಕು.

ಪ್ರಕಟನೆ

ಸನ್ ೧೯೪೦ನೆಯ ಇಸವಿಯ ಜುಲೈತಿಂಗಳ ಕೊನೆಗೆ ಧಾರವಾಡ ಟ್ರೇನಿಂಗ ಸ್ಕೂಲದಲ್ಲಿ ಆದ ಕನ್ನಡ ವರ್ಥಪ್ಯಾಯಿಜ ಪರೀಕ್ಷೆಗೆ ಕುಳಿತ ಉಮೇದವಾರರಲ್ಲಿ ಶ್ರೀ. ಎಸ್. ಆರ್. ಕುಲಕರ್ಣಿ ಸೀನಿಯರ ಬೀ. ಏ. ಕ್ಲಾಸ ಇವರಿಗೆ ಮೂವತ್ತು ರೂಪಾಯಿಗಳ ಎರಡನೆಯ ಇನಾಮು ದೊರಕಿತು.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಮಹನೀಯರ ಅಭಿಪ್ರಾಯಗಳು

ಈಚೆಗೆ ವ್ಯಾಕರಣವನ್ನು ಸ್ವತಂತ್ರವಾಗಿ ಕಲಿಯದೆ ಭಾಷೆಗೆ ಹೊಂದಿಸಿ, ಎಂದರೆ ಭಾಷೆಯಮೇಲಿಂದ ಕಲಿಯಬೇಕೆಂದು ಶಿಕ್ಷಣ ತಜ್ಞರು ಒತ್ತಿ ಹೇಳುತ್ತಿರುವರು. ವ್ಯಾಕರಣದ ಒಂದು ವಿಷಯವನ್ನು ಕಲಿತು ಅಭ್ಯಸನಗಳ ಮೂಲಕ ಅದನ್ನು ದೃಢಪಡಿಸಿಕೊಂಡು ಭಾಷೆಯನ್ನು ತಿಳಿದುಕೊಳ್ಳುವದರಲ್ಲಿಯೂ ಭಾಷೆಯನ್ನು ಉಪಯೋಗಿಸುವುದರಲ್ಲಿಯೂ ಪರಿಣಮಿಸುವಂತೆ ಮಾಡಿಕೊಂಡಾಗಲೇ ವ್ಯಾಕರಣದ ಅಧ್ಯಯನವು ಸಾರ್ಥಕವಾಯಿತೆಂದು ತಿಳಿಯಬೇಕು.

ಹಿಂದುಸ್ತಾನಿಯಲ್ಲಿ ಪಾರಂಗತರಾದ ಶ್ರೀಮಾನ್ **ಗುರುನಾಥ ಜೋಶಿ**, ಬಿ. ಎ. ಅವರು ನಮ್ಮ ನಾಡಿನಲ್ಲಿ ಹಿಂದುಸ್ತಾನಿಯ ಪ್ರಚಾರವು ಭರದಿಂದ ಆಗಬೇಕಾದ ಸಮಯದಲ್ಲಿ ವ್ಯಾಕರಣಾಧ್ಯಯನದ ತತ್ತ್ವವನ್ನು ಪೂರ್ಣವಾಗಿ ಅನುಲಕ್ಷಿಸಿ ಪ್ರಾಥಮಿಕ ಹಿಂದುಸ್ತಾನಿ ವಿದ್ಯಾರ್ಥಿಗಳಿಗೆ ಆ ಭಾಷೆಯ ಪರಿಚಯಕ್ಕೆ ಸಹಾಯಕವಾದ "ಹಿಂದುಸ್ತಾನೀ ಕನ್ನಡ ವ್ಯಾಕರಣ" ಎಂಬ ಪರಿಶುದ್ಧ ಪುಸ್ತಕವನ್ನು ಬರೆದು, ಧಾರವಾಡದ ರಾಮಾಶ್ರಯ ಪುಸ್ತಕಾಲಯದ ಒಡೆಯರಾದ ಶ್ರೀಮಾನ್ **ಆಕಳವಾಡಿ**ಯವರು ಇಂತಹ ಉಪಯುಕ್ತವಾದ ಪುಸ್ತಕವನ್ನು ಸಕಾಲದಲ್ಲಿ ಪ್ರಕಾಶಪಡಿಸಿ ದೇಶಕಾರ್ಯಕ್ಕೆ ನೆರವಾದರೆಂದು ಆ ಇರ್ವರನ್ನೂ ಅಭಿನಂದಿಸುತ್ತೇವೆ.

ಧಾರವಾಡ.
ತಾ. ೧೬-೯-೧೯೪೦.

ಮು. ಪ್ರ. ಪೂಜಾರ.

ಆಧುನಿಕ ರಣರಂಗದಲ್ಲಿ ಹಡಗುಪಡೆಯ ಸ್ಥಾನ

['The Naval Role in Modern Warefare' ಎಂಬ ಪುಸ್ತಕದ ಆಧಾರದಿಂದ]

ಯಾವದೊಂದು ಯುದ್ಧವು ನಡೆದಿರುವಾಗ ಸಮುದ್ರದ ಮಾರ್ಗಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದೇ ಹಡಗುಪಡೆಯು ಮಾಡತಕ್ಕ ಮಹತ್ವದ ಕಾರ್ಯವು. ಇದರಿಂದ ತಮ್ಮ ವ್ಯಾಪಾರವನ್ನು ಸುರಕ್ಷಿತವಾಗಿ ಸಾಗಿಸಿಕೊಂಡು

ಸೈನ್ಯದ ಚಲನವಲನಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಅನುಕೂಲವಾಗುವದು.

ಹಗೆಗಳ ಮೇಲೆ ಏರಿಹೋಗುವದಕ್ಕೂ ಏರಿಬರುವ ವೈರಿದಳಗಳನ್ನು ಚದರಿಸಿ ಆತ್ಮರಕ್ಷಣೆಮಾಡಿಕೊಳ್ಳುವದಕ್ಕೂ ಅವಶ್ಯವಿದ್ದ ಎಲ್ಲ ಬಗೆಯ ಯುದ್ಧದ ಹಡಗುಗಳು ಸಾಕಾದಷ್ಟು ಇದ್ದರೆ ಮಾತ್ರ ಸಮುದ್ರ ಮಾರ್ಗಗಳನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗುವದು. ವ್ಯಾಪಾರದ ಸರಕುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವದಕ್ಕೆ ಬೇಕಾಗುವ ಮತ್ತು ಹಡಗುಪಡೆಯ ಸಂರಕ್ಷಣೆಗೆ ಅವಶ್ಯವಿರುವ ಯೋಗ್ಯ ಬಂದರಗಳೂ ಅವರ ಅಧೀನದಲ್ಲಿರ ಬೇಕಾಗುವದು. ಇದೂ ಅಲ್ಲದೆ ಯುದ್ಧದ ಹಡಗುಗಳಿಗೆ ಬೇಕಾಗುವ ಆಹಾರ ಸಾಮಗ್ರಿ, ಯುದ್ಧಸಾಮಗ್ರಿ ಕಲ್ಲಿದ್ದಲಿ, ಕಲ್ಲೆಣ್ಣೆ, ಮುಂತಾದ ಇತರ ಸಾಮಗ್ರಿಗಳು ಇವನ್ನು ಕಾಲಕಾಲಕ್ಕೆ ಒದಗಿಸಿಕೊಡುವ ಹಡಗುಗಳ ಸಂಖ್ಯೆಯು ಸಾಕಾದಷ್ಟು ಇರಬೇಕಾಗುವದು. ಈ ಎಲ್ಲ ಬಗೆಯ ಹಡಗುಗಳನ್ನು ಆಧುನಿಕ ಶಾಸ್ತ್ರೀಯ ಶೋಧಗಳಿಗೆ ಅನುಗುಣವಾದ ರೀತಿಯಲ್ಲಿ ಕಟ್ಟುವ ಕೆಲಸವೂ ಕೂಡ ದೇಶದಲ್ಲಿ ಸಂತತವಾಗಿಯೂ ಸಶಾಸ್ತ್ರವಾಗಿಯೂ ನಡೆದಿರಬೇಕಾಗುವದು.

ಶತ್ರುಗಳ ಸಮುದ್ರ ಸಂಚಾರವನ್ನು ನಿಲ್ಲಿಸಿಬಿಡುವದು ಹಡಗುಪಡೆಗೆ ಸಾಧ್ಯವಿರುವದು. ಸೈನಿಕರ ನೆರವಿನಿಂದ ಹಡಗುಪಡೆಯು ಹಗೆಗಳ ರಾಜ್ಯದಲ್ಲಿ ನುಗ್ಗಿಹೋಗುವದಕ್ಕೆ ಸಾಧ್ಯವಾಗಬಹುದಾದರೂ ಹಡಗುಪಡೆಯು ಹಗೆಗಳ ನಾಡನ್ನು ಮುತ್ತಿ ಹಗೆಗಳ ಹಡಗುಗಳನ್ನು ಸೆರೆಹಿಡಿದು ಸುಲಿದು ಮುಳುಗಿಸಿ ಅವರ ಸಮುದ್ರಸಂಚಾರವನ್ನು ನಿಲ್ಲಿಸಿಬಿಡುವದೇ ಅದು ಮಾಡತಕ್ಕ ಮಹತ್ವದ ಕೆಲಸವು. ತಮ್ಮ ನಾಡಿನ ಮೇಲೆ ಏರಿಬರುವ ಶತ್ರು ಸೈನ್ಯವನ್ನು ತಡೆಯುವದೂ ವಿಶ್ವರಾಷ್ಟ್ರಗಳ ರಕ್ಷಣೆಯೂ ಅವರ ವ್ಯಾಪಾರಗಳು ಸುರಕ್ಷಿತವಾಗಿ ಸಾಗುವಂತೆ ಮಾಡುವದೂ ಹಡಗುಪಡೆಯ ಕಾರ್ಯಗಳು.

ಹಡಗುಪಡೆಯ ಬೇರೆ ಬೇರೆ ಭಾಗಗಳ ಕಾರ್ಯಗಳು ಮೊದಲೇ ಗೊತ್ತಾದವಿರುವವು. ಸಂದರ್ಭಾನುಗುಣವಾಗಿ ಅದರಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡುವದುಂಟು. ಇಂಥದೊಂದು ಸ್ಥಳದಲ್ಲಿ ಹಗೆಗಳು ಹಡಗುಪಡೆಯನ್ನು ಸಂಗ್ರಹಿಸತೊಡಗಿದುದು ಗೊತ್ತಾದ ಕೂಡಲೆ ಅವರ ವಿರುದ್ಧಪಕ್ಷದವರೂ ಅದಕ್ಕೆ ತಕ್ಕಂತೆ ತಮ್ಮ ಹಡಗುಪಡೆಯನ್ನು ಅದಕ್ಕನುಗುಣವಾದ ಸ್ಥಳದಲ್ಲಿ ಸಂಗ್ರಹಿಸಬೇಕಾಗುವದು. ಹಡಗುಪಡೆಯನ್ನು ಒಂದು ಕಡೆಗೆ ಹೆಚ್ಚು ಕಾಲದ ವರೆಗೆ ಸಂಗ್ರಹಿಸಲಿಕ್ಕೆ ಆಹಾರ ಸಾಮಗ್ರಿ, ಸೀನೀರು, ಇವುಗಳ ಸಂಗ್ರಹದ

ಪ್ರಶ್ನೆಯು ಮೊದಲು ಉದ್ಭವಿಸುವದು. ಹಡಗುಗಳು ಉಗಿಯ ಶಕ್ತಿಯಿಂದ ನಡೆಯುವಂಥವಿದ್ದರೆ ಅವಕ್ಕೆ ಬೇಕಾಗುವ ಕಲ್ಲಿದ್ದಲಿ ಕಲ್ಲೆಣ್ಣೆಗಳ ಸಂಗ್ರಹವು ಬೇಕು. ನೀರೊಳಗೆ ಮುಳುಗಿ ಸಂಚರಿಸಿ ಹಗೆಗಳ ಹಡಗುಗಳ ನಾಶಕ್ಕೆ ಯತ್ನಿಸುವ ಸಬ್‌ಮರೀನ ಹಡಗುಗಳ ಅಂಬಿಕೆಯು ಇವಕ್ಕುಂಟು. ಆದ್ದರಿಂದ ಸುರಕ್ಷಿತವಾದ ಬಂದರದಲ್ಲಿದ್ದುಕೊಂಡು ಹಗೆಗಳ ಚಲನವಲನಗಳನ್ನು ನಿರೀಕ್ಷಿಸುತ್ತಿರುವದು ಹಡಗುಪಡೆಯು ಮಾಡುವ ಹೆಚ್ಚು ಮಹತ್ವದ ಮಾತು.

ಸಮುದ್ರದಲ್ಲಿ ಬಲೆಗಳನ್ನು ಒಡ್ಡಿ ಸುರಂಗಗಳನ್ನು ಹರಡಿ ದೊಡ್ಡ ದೊಡ್ಡ ಯುದ್ಧದ ಹಡಗುಗಳನ್ನು ಸಂರಕ್ಷಣೆಗೆ ನಿಯಮಿಸಿ ಹಗೆಗಳ ಹಡಗುಪಡೆಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗುವದು. ಹಡಗುಪಡೆಗೆ ಜೋಡಾಗಿ ವಿಮಾನಪಡೆಯೊಂದನ್ನೂ ನಿಯಮಿಸಿ ವೈರಿಗಳ ಆಕ್ರಮಣದ ಚಲನವಲನೆಗಳನ್ನು ತೋಡಿಕೊಳ್ಳುತ್ತಿರುವರು.

ಜರ್ಮನಿಯ ಹಡಗುಪಡೆ:— ಸದ್ಯಕ್ಕೆ ಜರ್ಮನಿಯ ವಶದಲ್ಲಿ ೨೬ ಸಾವಿರ ಟನ್ನಿನ ಎರಡು ಯುದ್ಧದ ಹಡಗುಗಳೂ ಹತ್ತು ಸಾವಿರ ಟನ್ನಿನ ೨ ಕ್ರೂಝುರಗಳೂ ಹತ್ತು ಸಾವಿರ, ಆರು ಸಾವಿರ ಟನ್ನುಗಳ ಮತ್ತೆ ಕೆಲವು ಯುದ್ಧದ ಹಡಗಗಳೂ ಇರುವವು. ವಿನಾಶಿಕೆಗಳೂ ಸಬ್‌ಮರಿನುಗಳೂ ಇಷ್ಟೇ ಇರುವವೆಂದು ನಿಶ್ಚಿತವಾಗಿ ಗೊತ್ತಾಗಿಲ್ಲ.

ಮಹತ್ವದ ಬಂದರಗಳು, ಕಿರಿಯಗಲದ ಸಾಮುದ್ರಧುನಿಗಳು, ಮೊದಲಾದ ಜಾಡಿಗಳಲ್ಲಿ ತಕ್ಕಷ್ಟು ಹಡಗುಪಡೆಯನ್ನಿಟ್ಟು ವೈರಿಗಳ ಆಕ್ರಮಣವನ್ನು ತಡೆಯ ಬೇಕಾಗುವದು. ಇಂದಿನ ವರೆಗೆ ನಡೆದ ಎಲ್ಲ ಯುದ್ಧಗಳಲ್ಲಿ ಇದೇ ರೀತಿಯಾಗಿ ಹಗೆಗಳು ಆಕ್ರಮಣ ನಡಿಸುತ್ತ ಬಂದಿರುವರು. ಪ್ರಕೃತದ ಮಹಾಯುದ್ಧ ದಲ್ಲಿಯೂ ಕೂಡ ಇಂಥ ಇಕ್ಕಟ್ಟಿನ ಸ್ಥಳಗಳಲ್ಲಿಯೇ ಏರಾಟ ಹೋರಾಟಗಳು ನಡೆದಿರುವವು. ಇಂಥ ಆಕ್ರಮಣಗಳನ್ನು ತಡೆಯುವದಕ್ಕಾಗಿ ಹಡಗುಪಡೆಯ ವರು ಪಹರೆ ಮಾಡುತ್ತಿರಬೇಕಾಗುವದು. ಹಿಂದಿನ ದಿನಗಳಲ್ಲಿ ಸಬ್‌ಮರೀನುಗಳು ಇರುವ ಸ್ಥಳಗಳು ನಿಶ್ಚಿತವಾಗಿ ಗೊತ್ತಾಗುತ್ತಿದ್ದಿಲ್ಲ. ಆದ್ದರಿಂದ ಹಡಗಗಳು ಅಕಸ್ಮಾತ್ ಆಪತ್ತಿಗೆ ಗುರಿಯಾಗುತ್ತಿದ್ದವು. ಆದರೆ ಸದ್ಯದ ಹೊಸ ಶೋಧಗಳ ಸಹಾಯದಿಂದಲೂ ವಿಮಾನಗಳು, ಚಿಕ್ಕ ಆಕಾರದ ಶೋಧಕ ಹಡಗುಗಳು, ಇವುಗಳ ಸಹಾಯದಿಂದಲೂ ವೈರಿಗಳ ಸಬ್‌ಮರೀನುಗಳ ಸ್ಥಳಗಳನ್ನು ಸುಲಭ ವಾಗಿ ಗೊತ್ತುಹಚ್ಚಲಿಕ್ಕೆ ಬರುವದು. ಆದರೂ ಅನೇಕ ಸಾರೆ ಹಡಗುಗಳು ವೈರಿಗಳ ಸಬ್‌ಮರೀನುಗಳ ಹೊಡೆತಕ್ಕೆ ಸಿಕ್ಕು ಮುಳುಗಿ ಹೋಗುವದುಂಟು.

ಸದ್ಯಕ್ಕೆ ವ್ಯಾಪಾರಕ್ಕಾಗಿ ಸಂಚರಿಸುತ್ತಿರುವ ಹಡಗುಗಳ ಸಂರಕ್ಷಣೆಗಾಗಿ ಅನೇಕ ಯುದ್ಧದ ಹಡಗುಗಳು ಅವನ್ನು ಅನುಸರಿಸಿ ಹೋಗುವ ಪದ್ಧತಿಯಿರುವದು ಈ ಹಡಗುಗಳು (ಕ್ರೂಝುರು)ಗಳು ಬಹು ತೀವ್ರಗಾಮಿಗಳಾಗಿರುವವು. ಮತ್ತು ಅವುಗಳ ಹೊರಮ್ಮೈಗೆ ಬಲವಾದ ಉಕ್ಕಿನ ತಗಡುಗಳನ್ನು ಹೊದಿಸಿರುವರು. ಜರ್ಮನಿಯು ಇಂಥ ಹಡಗುಗಳ ಸಹಾಯದಿಂದಲೇ ತನ್ನ ಏರಾಟಿಕೆ ನಡಿಸಿರುವರು. 'ಡೂಶ್‌ಲಂಡ್' ಮೊದಲಾದ ಜರ್ಮನ್ ಹಡಗಿನ ಮೇಲೆ ೧೧ ಇಂಚಿನ ತೋಪ್ಪುಗಳಿದ್ದು ಅವು ಪ್ರಬಲವಾಗಿರುವವು. ಹತ್ತು ಸಾವಿರ ಟನ್ನಿನ ಬ್ರಿಟಿಷ ಹಡಗು 'ವಾಶಿಂಗ್‌ಟನ್ನ'ದಂಥ ಹಡಗುಗಳ ಮೇಲೆ ೮ ಇಂಚಿನ ತೋಪ್ಪುಗಳಿದ್ದುದರಿಂದ ಅವು ಜರ್ಮನ್ ಹಡಗುಗಳ ಹೊಡೆತವನ್ನು ತಾಳಲಾರವೆಂದು ಕೆಲವರು ಜರ್ಮನ್ ಶಾಸ್ತ್ರಜ್ಞರು ಹೇಳುವರು. ಇದು ನಿಜವಲ್ಲ. ಬ್ರಿಟಿಷ ಹಡಗುಪಡೆಯ ಶಕ್ತಿಯ ಜರ್ಮನ್ ಹಡಗುಪಡೆಯ ಶಕ್ತಿಗಿಂತ ಎಷ್ಟೋ ಮಡಿಯಿಗಿಲಾಗಿರುವದು. ತೀವ್ರಗಾಮಿಯಾದ ವೈಮಾನಿಕ ದಳವು ಸಾವಕಾಶವಾಗಿ ಹೋಗುವ ಹಡಗುಪಡೆಯನ್ನು ಅನುಸರಿಸಿ ಹೋಗಲಾರದೆಂಬದು ನಿಜವಾಗಿದ್ದರೂ ಯುದ್ಧದ ಪ್ರಸಂಗವು ಒದಗಿದ ಕೂಡಲೆ ವೈಮಾನಿಕ ದಳವು ಆ ಸ್ಥಳಕ್ಕೆ ಕ್ಷಣ ಮಾತ್ರದಲ್ಲಿ ಸಾಗಿಬಂದು ಹಡಗುಪಡೆಗೆ ನೆರವಾಗುವದು.

ವ್ಯಾಪಾರದ ಹಡಗುಗಳ ಮೇಲಾಗುವ ಹಡಗುಪಡೆಯ ದಾಳಿಯನ್ನು ನಿವಾರಿಸುವ ಉಪಾಯಗಳಲ್ಲಿ ಯುದ್ಧದ ಹಡುಗುಗಳಿಗೆ ಬೇಕಾಗುವ ಆಹಾರ ಸಾಮಗ್ರಿ ಯುದ್ಧ ಸಾಮಗ್ರಿಗಳ ಪೂರೈಕೆಯಾಗದಂತೆ ಮಾಡುವದು ಒಂದು ಮುಖ್ಯವಾದ ಸಾಧನವು. ಶತ್ರುಗಳ ವಸಾಹತುಗಳಲ್ಲಿರುವ ಬಂದರಗಳಿಂದ ಈ ಅನ್ನ ಸಾಮಗ್ರಿ ಕಲ್ಲಿದ್ದಲಿ ಕಲ್ಲೆಣ್ಣೆ ಮುಂತಾದವುಗಳ ಪೂರೈಕೆಯಾಗುತ್ತಿರುವದು. ಇಂಥ ವಸಾಹತುಗಳೊಳಗಿನ ಸುರಕ್ಷಿತವಾದ ಬಂದರಗಳನ್ನು ವಶಪಡಿಸಿಕೊಳ್ಳುವದಕ್ಕಾಗಿಯೇ ಜರ್ಮನಿಯು ವಸಾಹತುಗಳ ಮೇಲೆ ದಾಳಿಮಾಡುತ್ತಿರುವದು. ಇಂಥ ಬಂದರಗಳಲ್ಲಿದ್ದುಕೊಂಡು ನಾಡುರಕ್ಷಾಣ ಹಡಗುಗಳ ರಿಪೇರಿ ಮಾಡುವದು ಅವಕ್ಕೆ ಬೇಕಾಗುವ ಸಾಧನ ಸಾಮಗ್ರಿಗಳನ್ನು ದೊರಕಿಸಿಕೊಳ್ಳುವದು ಮುಂತಾದ ಕೆಲಸಗಳನ್ನು ಸುಕರವಾಗಿ ಸಾಗಿಸಿಕೊಳ್ಳಲು ಅನುಕೂಲವಾಗುವದು. ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವದು, ಬೆಳೆಯುತ್ತಿರುವ ಜನಸಂಖ್ಯೆಗೆ ಸಾಕಾದಷ್ಟು ವಸತಿಸ್ಥಾನಗಳನ್ನು ದೊರಕಿಸಿಕೊಡುವದು, ಇವುಗಳ ಜೊತೆಗೆ ಯುದ್ಧ ಕಾಲದಲ್ಲಿ ಉಪಯೋಗವಾಗುವಂಥ ಸುರಕ್ಷಿತವಾದ ಬಂದರಗಳನ್ನು ಆಕ್ರಮಿಸಿಕೊಳ್ಳುವದೂ ಕೂಡ ಜರ್ಮನಿಯು ಈಗ ನಡೆಯಿಸಿರುವ ಪರಾಕ್ರಮಣ ಧೋರಣೆಯ ಉದ್ದೇಶವಾಗಿರುವದು.

ತಟಸ್ಥ ರಾಷ್ಟ್ರಗಳೂ ಸಾಮಾನುಗಳನ್ನು ಪೂರೈಸುವ ಹಡಗುಗಳೂ :— ಉತ್ತರಸಮುದ್ರದೊಳಗಿನ ವೈರಿರಾಷ್ಟ್ರಗಳಿಗೆ ಸಾಮಾನುಗಳ ಪೂರೈಕೆಯಾಗದಂತೆ ನೋಡಿಕೊಳ್ಳುವದು ಬ್ರಿಟಿಷ ಹಡಗುಪಡೆಯ ಕಾರ್ಯಗಳಲ್ಲಿ ಒಂದಾಗಿರುವದು. ಈ ರೀತಿಯಾಗಿ ಬ್ರಿಟಿಷ ಹಡಗುಗಳು ಕಾವಲು ಮಾಡುತ್ತಿದ್ದರೂ ತೀರ ಉತ್ತರದ ಪ್ರದೇಶಗಳಲ್ಲಿ ಹಾದು ಬಂದು ಹಲಕೆಲವು ಹಡಗುಗಳು ಶತ್ರುರಾಷ್ಟ್ರಗಳಿಗೆ ಸಾಮಗ್ರಿಗಳನ್ನು ಒದಗಿಸಿಕೊಡುತ್ತಿರುವವು. ಸದ್ಯಕ್ಕೆ ತಟಸ್ಥವಾಗಿರುವ ರಾಷ್ಟ್ರಗಳೊಳಗಿರುವ ಬಂದರಗಳ ಮೂರ್ಗವಾಗಿ ಈ ಸಾಮಗ್ರಿಗಳ ಪೂರೈಕೆಯಾಗುತ್ತಿರುವದು. ಕಳೆದ ಮಹಾಯುದ್ಧದಲ್ಲಿ ನಮ್ಮ ದೇಶದ ದಂಡೆಗುಂಟ ಸುತ್ತಾಡಿ ಗದ್ದಲ ನಡೆಯಿಸಿದ ಎಮಡೆನ್ ಮೊದಲಾದವುಗಳಿಗೆ ಇಂಥ ಬಂದರಗಳಿಂದಲೇ ಸಾಮಗ್ರಿಗಳ ಪೂರೈಕೆಯಾಯಿತು. ಸದ್ಯಕ್ಕೆ ತಟಸ್ಥ ರಾಷ್ಟ್ರಗಳೊಳಗಿನ ಬಂದರಗಳಲ್ಲಿ ಸೇರಿಕೊಂಡು ಆಹಾರ ಸಾಮಗ್ರಿಗಳನ್ನೂ ಯುದ್ಧ ಸಾಮಗ್ರಿಗಳನ್ನೂ ತುಂಬಿಕೊಂಡಿರುವ ಹಡಗುಗಳು ತಿರುಗಿ ಜರ್ಮನಿಗೆ ಅವನ್ನು ಒಯ್ದು ಮುಟ್ಟಿಸುವ ಉದ್ದೇಶದಿಂದ ಅಲ್ಲಿ ನಿಂತಿಲ್ಲ. ಆ ಸಾಮಗ್ರಿಗಳನ್ನು ಮಹಾಸಾಗರಗಳಲ್ಲಿ ಸಂಚರಿಸುತ್ತಿರುವ ತಮ್ಮ ಯುದ್ಧನಾವೆಗಳಿಗೆ ಒದಗಿಸಿಕೊಡುವ ಧೋರಣೆಯಿಂದ ಅಲ್ಲಿ ಸಿದ್ಧವಾಗಿ ನಿಂತಿರುವವು. ಅಂತರಾಷ್ಟ್ರೀಯ ಕಾಯದೆಯ ಮೇರೆಗೆ ತಟಸ್ಥ ರಾಷ್ಟ್ರಗಳು ಇಂಥ ಹಡಗುಗಳಿಗೆ ಆಶ್ರಯ ಕೊಡಲು ಬರುವದು. ಆದರೆ ಯುದ್ಧದಲ್ಲಿ ತೊಡಗಿದ ರಾಷ್ಟ್ರಗಳಿಗೆ ಈ ರೀತಿ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಲು ಬರುವಂತಿಲ್ಲ. ಆದರೂ ಕೆಲಕೆಲವು ರಾಷ್ಟ್ರಗಳು ಈ ನಿಯಮದ ವಿರುದ್ಧವಾಗಿ ಜರ್ಮನಿಗೆ ಸಹಾಯ ಮಾಡುತ್ತಿರುವದು ಕಂಡುಬಂದಿದೆ.

ವ್ಯಾಪಾರದ ಹಡಗುಗಳ ಮೇಲೆ ಯುದ್ಧಸಾಧನಗಳನ್ನೂ ಇಟ್ಟಿರುವದು ಆತ್ಮಸಂರಕ್ಷಣೆಯ ಉಪಾಯಗಳಲ್ಲಿ ಒಂದಾಗಿರುವದು. ಬಹುಕಾಲದ ಹಿಂದಿನಿಂದಲೂ ಈ ಪರಿಪಾಠವು ನಡೆದುಬಂದಿರುವದು. ಜರ್ಮನಿಯು ಈ ಪದ್ಧತಿಯನ್ನು ವಿರೋಧಿಸುವದು. ಜರ್ಮನಿಯು ಬ್ರಿಟಿಷರ ಮತ್ತು ಫ್ರೆಂಚರ ವಶದಲ್ಲಿರುವ ಇಂಥ ಎಲ್ಲ ಹಡಗುಗಳ ಯಾದಿಯನ್ನು ಸಿದ್ಧಪಡಿಸಿ ತನ್ನ ಹಡಗುಪಡೆಯ ಕಪ್ತಾನರ ಕಡೆಗೆ ಕೊಟ್ಟಿರುವದು. ಇಂಥ ಎಲ್ಲ ಹಡಗುಗಳನ್ನು ಮುಳುಗಿಸಿ ಬಿಡಬೇಕೆಂದು ಜರ್ಮನ್ ಹಡಗುಪಡೆಯು ಹವಣಿಸುವದು. ಅಂತರಾಷ್ಟ್ರೀಯ ಕಾಯದೆಯನ್ನು ಮನ್ನಿಸದಿರುವದು ಜರ್ಮನಿಯ ಮುಖ್ಯ ಧೋರಣೆಯಾಗಿರುವದೆಂದು ಹೇಳುವರು.

ಬ್ರಿಟಿಷ ಹಡಗುಪಡೆಯ ಶಕ್ತಿಯ ಮಾನದಿಂದ ನೋಡಿದರೆ ಜರ್ಮನ್ ಸಬ್‌ಮರೀನುಗಳು ತೀರ ದುರ್ಬಲವಾಗಿರುವವು. ಅವು ಸಮುದ್ರ ತಳದಲ್ಲಿ ಅಡಗಿ ಕುಳಿತಿರದಿದ್ದರೆ ಈಗಾಗಲೇ ಅವುಗಳು ಹೇಳಹೆಸರಿಲ್ಲದಂತಾಗಿ ಹೋಗುತ್ತಿತ್ತು. ಯಾವ ಕಾಯದೆಯನ್ನು ಪಾಲಿಸುವದು ಅಸಾಧ್ಯವಾಗುವದೋ ಆ ಕಾಯದೆಯೇ ಸರಿಯಲ್ಲವೆಂದು ಜರ್ಮನಿಯ ಅಭಿಪ್ರಾಯವಿದೆ.

(ಮುಂದೆ ಸಾಗುವದು.)

ಪತ್ರಗಳ ಸಾರಾಂಶ

ಗೋಕಾಕ (ಜಿಲ್ಹೆ ಬೆಳಗಾವಿ) — ಕನ್ನಡ ಹೆಣ್ಣುಮಕ್ಕಳ ಶಾಲೆ :—

ತಾರೀಖು ೭-೭-೧೯೪೦ ನೆಯ ದಿವಸ ಮೆ॥. ಅಸಿ॥. ಇನ್‌ಸ್ಪೆಕ್ಟ್ರಸ್ ಸಾ॥ ದಕ್ಷಿಣಭಾಗ ಇವರು. ಮೆ॥. ಅ. ಡೆ. ಎ. ಇ. ಶ್ರೀ. ಥಿಟೆ ಸಾಹೇಬರೊಂದಿಗೆ ಬಂದು ಶಾಲೆಗೆ ದರ್ಶನವಿತ್ತರು. ವಿದ್ಯಾರ್ಥಿನಿಯರ ವಿದ್ಯೆ, ವಿನೋದ, ಆಟಗಳನ್ನು ಕಂಡು ಆನಂದಭರಿತರಾದರು. ಪಟ್ಟಣದ ಮಹಿಳೆಯರ ಸಭೆಗೂಡಿಸಿ— "ಈ ಶಾಲೆಯಷ್ಟು ತಿದ್ದುಪಡಿ ಹೊಂದಿದ ಶಾಲೆಗಳು ವಿರಳ. ಮುಂದೆಯೂ ಇದೇ ರೀತಿಯಾಗಿ ಊರ್ಜಿತಸ್ಥಿತಿಯನ್ನು ಹೊಂದಲಿ. ನೀವು ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸಿದಷ್ಟಕ್ಕೆ ನಿಮ್ಮ ಕರ್ತವ್ಯ ಮುಗಿಯಲಿಲ್ಲ. ಶಿಕ್ಷಿಕೆಯರ ಹಾಗೂ ಶಿಕ್ಷಣದ ತೊಂದರೆಗಳ ನಿವಾರಣೆಯ ಕೆಲವು ಭಾಗವನ್ನಾದರೂ ತಾವು ಹೊರಬೇಕಾಗುವದು. ಗೋಕಾವಿಯ ಸ್ತ್ರೀಯರು ಮಾಡುತ್ತಿರುವ ಸಹಕಾರವೂ ಹೆ. ವಿ. ಅಡಿಗಿಯವರ ಪ್ರಯತ್ನಗಳೂ ಯೋಗ್ಯವಾಗಿವೆ." ಮುಂತಾದ ಉಪದೇಶ ಮಾಡಿದರು ಎಂದು ಅಲ್ಲಿಯ ೧ನೆ. ಅ. ವಿ. ಶ್ರೀ. ಹಿರೇಮಠರವರು ತಿಳಿಸುತ್ತಾರೆ.

ಸದಲಗಿ. (ಜಿಲ್ಹೆ ಬೆಳಗಾವಿ) — "ಈ ಊರ ೧೦ ನೆಯ ಸಂಬರ ಶಾಲೆಯಲ್ಲಿ ತಾ॥. ೧೯-೮-೧೯೪೦ ನೆಯ ದಿವಸ ಹರಿಜನ ಪದವೀಧರರಾದ ಮೆ॥. ಎನ್. ಎನ್. ಪಕಾಲೆ ಬಿ. ಎ., ಬಿ. ಟಿ. ಇವರು ಧಾರವಾಡ ಜಿಲ್ಹೆಯಲ್ಲಿ ಅ. ಡೆ. ಎ. ಇ. ಆದುದರಿಂದ ಅವರನ್ನು ಅಭಿನಂದಿಸುವ ಸಲುವಾಗಿ ಸಮಾರಂಭವಾಯಿತು." ಎಂದು ಹೆ। ಮಾ। ಶ್ರೀ. ದಾ. ಸು. ಕಾಂಬಳೆಯವರು ತಿಳಿಸುತ್ತಾರೆ.

ಬೆಟಸೂರ (ಜಿಲ್ಹೆ ಬೆಳಗಾವಿ) — ಇಲ್ಲಿ ಹೆ। ಮಾ। ಹ. ಜೀ. ಕುಲಕರ್ಣಿ 'ಪ್ರತಿಭಾಂಕುರ' ಇವರು ತಾ. ೯-೮-೧೯೪೦ ನೆಯ ದಿವಸ ಪೆನ್‌ಶನ್ ಹೊಂದಿದರು. ಆಗ ಇವರಿಗೆ ಸ್ಕೂಲ ಪಂಚರೂ ಊರ ಸಭ್ಯಗೃಹಸ್ಥರೂ ಕೂಡಿ ಸತ್ಕಾರ ಸಮಾರಂಭವಮಾಡಿದರು. "ಒಬ್ಬ ಶಿಕ್ಷಕರಿಗೆ ಸಹ ಸಾಲದಷ್ಟೇ ವಿದ್ಯಾರ್ಥಿ

ಗಳಿದ್ದ ಈ ಶಾಲೆಯು ಈ ಮಾಸ್ತರರ ಪ್ರಯತ್ನದಿಂದ ಮೂವರು ಮಾಸ್ತರರುಳ್ಳ ಐರನೆಯ ಇಯತ್ತೆಯ ವರೆಗಿನ ಸರ್ವಾಂಗಸುಂದರ ಶಾಲೆಯಾಗಿ ಮಾರ್ಪಟ್ಟಿತು. ಇವರು ಕಾರ್ಯಕ್ಷಮತೆಯು ಪ್ರಶಂಸಾರ್ಹವಾದದ್ದು" ಎಂದು ಸಭಿಕರು ಶಿಕ್ಷಕರನ್ನು ಯಥಾರ್ಥವಾಗಿ ವರ್ಣಿಸಿದರು. ಇತ್ಯಾದಿ.

ಹಂದಿಗನೂರ (ಜಿಲ್ಲೆ ಧಾರವಾಡ) — ಈ ಶಾಲೆಯ ಉತ್ತೇಜನಕ್ಕಾಗಿ ಮೆ। ಕೋ. ಆ. ಕ್ರೆ. ಸೊ. ಯ ಜೇಅರಮನ್ನರು ಕೊಟ್ಟ ೨೪ ಪಾಟಿಗಳು, ೨೪ ಬಾಲಬೋಧಿನಿ ಪುಸ್ತಕಗಳು, ೧ ಪೆನ್ಸಿಲಪೆಟ್ಟಿಗೆ. ಇವುಗಳನ್ನು ಇಲ್ಲಿಯ ಸ್ಕೂಲ ಪಂಚರು ಮೆ॥ ವಾಯಿಸ್ ಜೇಅರಮನ್ ಸಾ॥ ರಿಂದ ಬಡವಿದ್ಯಾರ್ಥಿಗಳಿಗೂ ಹರಿಜನ ವಿದ್ಯಾರ್ಥಿಗಳಿಗೂ ತಾ॥ ೧೫-೮-೧೯೪೦ನೆಯ ದಿವಸ ಹಂಚಿಸಿದರೆಂದು ಹೆಡ್‌ಮಾಸ್ತರರಾದ ಶ್ರೀ. ಸಿ. ದೊ. ಹುಂಬಿಯವರು ತಿಳಿಸುತ್ತಾರೆ.

ಕಿತ್ತೂರ :— (ಜಿಲ್ಲೆ-ಬೆಳಗಾವಿ)-- "ಕಿತ್ತೂರ ಗ್ರೂಫ್ ಶಿಕ್ಷಕ-ಶಿಕ್ಷಕೆಯರ ಸಮ್ಮೇಲನವು ತಾ॥ ೨೪-೮-೧೯೪೦ನೆಯ ದಿವಸ ಬೆಳಗಾಂವ ಜಿಲ್ಲೆ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಪುರೋಹಿತ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಆಗ ಶ್ರೀ. ಡೆ. ಇನ್‌ಸ್ಪೆಕ್ಟರ ಬೀಡಿ ಶಾಮರಾಯ ಅಸಿ॥ ಡೆ. ಇ॥ ರಾದ ಶ್ರೀ. ಹುಯಿಲಗೋಳರವರು, ಶ್ರೀ. ಮೆಣಸಗಿಯವರು ಆಗಮಿಸಿದ್ದರು. ನಿಬಂಧ ವಾಚನ, ಮಾದರಿಯ ಪಾಠಗಳು, ಆಟ ವಿನೋದಗಳು, 'ಶಿಫ್ಟ' ಪದ್ಧತಿಯ ಉಪಯುಕ್ತತೆಯ ಚರ್ಚೆ, ಮೊದಲಾದವುಗಳೆಲ್ಲ ಈ ಭಾಗದ ಅ. ಡೆ. ಯವರಾದ ಶ್ರೀ. ವೀ. ಗ. ಪಾಟೀಲರವರ ಯೋಜನೆಗಳ ಪ್ರಕಾರ ಉತ್ತಮ ರೀತಿಯಲ್ಲಿ ಜರುಗಿದವು" ಎಂದು ಸಮ್ಮೇಲನದ ಕಾರ್ಯದರ್ಶಿಗಳಾದ : ಶ್ರೀಮಾನ್ ನಾಗಸೆಟ್ಟಿಯವರು ತಿಳಿಸುತ್ತಾರೆ.

ಸೂರಣಗಿ :— (ತಾಲೂಕ ಕರ್ಜಗಿ)— "ಇಲ್ಲಿಯ ಶಾಲೆಯಲ್ಲಿ ಈ ವರುಷ ಗಣೇಶೋತ್ಸವವಾಯಿತು. ಆಗ ಎಲ್ಲ ಶಿಕ್ಷಕರೂ ಊರ ಹಿರಿಯರೂ ಸಹಕರಿಸಿದರು" ಎಂದು ಅಲ್ಲಿಯ ಮ. ಬ. ಅರಳಿಯವರು ತಿಳಿಸುತ್ತಾರೆ.

ಭೋಜ :— (ಜಿಲ್ಲೆ-ಬೆಳಗಾವಿ) — "ಇಲ್ಲಿಯ ಕನ್ನಡ ಗ. ಹು. ಶಾಲೆಯಲ್ಲಿ ತಾರೀಖು ೨-೧೦-೧೯೪೦ನೆಯ ದಿವಸ ಮ. ಗಾಂಧಿಯವರ ಜಯಂತಿ ನಿಮಿತ್ತ ಆದ ಸಮಾರಂಭದಲ್ಲಿ ಶ್ರೀಮಾನ್. ಗೇಬಿಸೆ ದರೆಪ್ಪನವರು ೩ ರೂ. ೨ ಆ. ಬೆಲೆಯ ಇಪ್ಪತ್ತುನಾಲ್ಕು ಪಾಟಿಗಳನ್ನೂ ಶ್ರೀಮಾನ್ ಪಾಟೀಲ ಭಾವ್ಯೂರಾಯರು ೧ ರೂ. ೪ ಆ. ಬೆಲೆಯ ಪೆಪ್ಪರಮೆಂಟುಗಳನ್ನೂ ವಿದ್ಯಾರ್ಥಿಗಳಿಗೆ ದಾನವೆಂದು

ಕೊಟ್ಟರು. ಇದು ಸ್ತುತ್ಯವಾದುದು " ಹೀಗೆ ಅಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ಕು. ಪಾ. ಪಾಟೀಲರು ತಿಳಿಸುತ್ತಾರೆ.

ಹೊನ್ನಹಳ್ಳಿ :— (ಜಿಲ್ಲೆ–ವಿಜಾಪುರ)—ಇಲ್ಲಿಯ ರಜಿಸ್ಟರಾದ ಗಾವಠೀ ಶಾಲೆಗೆ " ತಾರೀಖು ೧೩–೯–೧೯೪೦ನೆಯ ದಿವಸ ಮೆ। ಪಿ. ಆರ್. ಮುರ್ಡೇಶ್ವರ ಅ. ಡೆ. ಎ. ಇ. ವಿಜಾಪುರ ಇವರು ಬಂದು ಇನ್‌ಸ್ಪೆಕ್ಶನ್ ಮಾಡಿದರು. ವಿದ್ಯಾರ್ಥಿಗಳ ಡ್ರಿಲ್ ಲೇಝಿಮುಗಳನ್ನು ನೋಡಿ ಸಂತೋಷ ಬಟ್ಟರು. " ಎಂದು ಶ್ರೀ. ಬ. ಭಿ. ವಿಜಾಪುರ ಹೆಡ್‌ಮಾಸ್ತರರು, ತಿಳಿಸುತ್ತಾರೆ.

ಕುಡಚಿ :— (ತಾಲೂಕ ಬೆಳಗಾವಿ)— " ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ತಾರೀಖು ೧೬–೯–೧೯೪೦ನೆಯ ದಿವಸ ಮೆಹರ್ಬಾನ ಶ್ರೀನಿವಾಸರಾವ ಹುಯಿಲಗೋಳಕರ ಬೀ. ಎ. ಅ. ಡೆ. ಎ. ಇ. ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ; ಮೆ. ವ್ಹಿ. ಜಿ. ಪಾಟೀಲ ಅ. ಡೆ. ಎ. ಇ. ಇವರಿಗೆ ವಿಜಾಪುರ ಜಿಲ್ಲೆಗೆ ವರ್ಗವಾದ ನಿಮಿತ್ತ, ಬೀಳ್ಕೊಡುವ ಸಮಾರಂಭವು ನೆರವೇರಿತು. ಆಗ ಊರಲ್ಲಿಯ ಸಭ್ಯ ಗೃಹಸ್ಥರೂ ಶಾಲಾಪಂಡರೂ ಕೂಡಿ ೫೫ ರೂ. ಬೆಲೆಬಾಳುವ, ಬಾಲಕರು ಕೂಡ್ರುವ ಮಣೆಗಳನ್ನೂ ಹಾರ್ಮೋನಿಯಂ ಸ್ಯಾಂಡನ್ನೂ ಶಾಲೆಗೆ ಉಚಿತವಾಗಿ ಕೊಟ್ಟರು. ಇಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ಹಳೇಜೋಳ ಇವರ ಪ್ರಯತ್ನವು ಪ್ರಶಂಸಾರ್ಹವಾದದ್ದು " ಎಂದು ಅಲ್ಲಿಯ ಅ. ಮಾ. ಕೇದನೂರ ಇವರು ತಿಳಿಸುತ್ತಾರೆ.

ಹಿರೇಕುಂಬಿ :— (ಜಿಲ್ಲೆ–ಬೆಳಗಾವಿ)— " ಈ ವರುಷ ಇಲ್ಲಿಯ ಶಾಲೆಯಲ್ಲಿ ಸಾರ್ವಜನಿಕ ಗಣೇಶೋತ್ಸವವಾಯಿತು. ಆಗ ಎಲ್ಲ ಶಿಕ್ಷಕರೂ ಪೋಲೀಸ ಪಾಟೀಲರೂ ಹೂಲಿಯ ಮಹಾಸ್ವಾಮಿಗಳಾದ ಶಿವಾಚಾರ್ಯರೂ ಡಿ. ಎಲ್. ಬಿ. ಮೆಂಬರರಾದ ಶ್ರೀಮಾನ್ ವೆಂಕರಡ್ಡಿ ಹೂಲಿಯವರೂ, ಡಿ. ಎಸ್. ಬಿ. ಮೆಂಬರರಾದ ಶ್ರೀಮಾನ್ ಬೆಳವಡಿಯವರೂ ತುಂಬ ಸಹಕರಿಸಿದರು.

ಈ ಶಾಲೆಯು ಮೊದಲು ಒಬ್ಬ ಶಿಕ್ಷಕರಿಂದ ಸಾಗಿತ್ತು. ಅದೇ ಈಗ ೧೨೩ ವಿದ್ಯಾರ್ಥಿಗಳೂ ೩ ಶಿಕ್ಷಕರೂ ಆಗಿದ್ದಾರೆ. ಇದೆಲ್ಲಕ್ಕೂ ಇಲ್ಲಿಯ ಪೋಲೀಸ ಪಾಟೀಲರಾದ ಶ್ರೀಮಾನ್ ತೀರ್ಥಗೌಡರೇ ಕಾರಣರು. ಅವರು ಈಗ ಶಾಲೆಗಾಗಿ ತಮ್ಮ ಭವ್ಯಮನೆಯನ್ನು ಕೊಟ್ಟಿದ್ದಾರೆ. ಹೊಸ ಕಟ್ಟಡಕ್ಕೆ ಬೇಕಾದ ವಿಶಾಲ ಸ್ಥಳವನ್ನು ಉಚಿತವಾಗಿ ಕೊಡಲೊಪ್ಪಿದ್ದಾರೆ. ಈ ಊರಲ್ಲಿ ಒತ್ತಾಯದ ಶಿಕ್ಷಣವು ಸ್ವಯಂಸ್ಫೂರ್ತಿಯಿಂದಲೇ ನಡೆದಂತಾಗಿದೆ. " ಎಂದು ಅಲ್ಲಿಯ ಸ್ಕೂಲ ಪಂಚರಾದ ಶ್ರೀಮಾನ್ ಹೂಲಿ ಪಾವಾಡೆಪ್ಪನವರು ತಿಳಿಸುತ್ತಾರೆ.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಬೆಲೆ ೮ ಆಣೆಗಳು.

●

ಲೇಖಕರು :

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ, ಟ್ರೇನಿಂಗ್ ಸ್ಕೂಲ್, ಧಾರವಾಡ.

ಶ್ರೀ. ಭಾ. ಮಾ. ಕುಲಕರ್ಣಿ, ಬೇಸಿಕ್ ಟ್ರೇನಿಂಗ್ ಸ್ಕೂಲ್, ಧಾರವಾಡ.

●

ಕನ್ನಡ ೫, ೬, ೭, ಮತ್ತು ಇಂಗ್ಲಿಷ ೧, ೨, ೩, ಇಯತ್ತೆಗಳಿಗೂ, ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಖಾಸಗಿಯಿಂದ ಹಿಂದೀ ಕಲಿಯುವವರಿಗೂ ಹಿಂದೀ ಅಧ್ಯಾಪಕರಿಗೂ ಬಹಳ ಉಪಯೋಗವಾಗುವಂತೆ ಸರಳವಾದ ಶೈಲಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳೂ ಮುಂಬೈ ಸರಕಾರದ ಹಿಂದುಸ್ತಾನೀ ಬೋರ್ಡಿನ ಸದಸ್ಯರೂ ಆದ ಶ್ರೀ. ಸಿದ್ಧನಾಥ ಪಂತರು ಮುನ್ನುಡಿಯನ್ನು ಬರೆದಿದ್ದಾರೆ.

●

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ವಿ. ಸೂ.— ನಮ್ಮಲ್ಲಿ ಟೀಚರ್ಸ ಸೊಸಾಯಿಟಿಗಳಿಗೂ, ವಿವಿಧ ಉದ್ದೇಶಗಳ ಸಹಕಾರೀ ಸಂಘಗಳಿಗೂ ಬೇಕಾಗುವ ಬುಕ್ಕುಗಳೂ ಫಾರ್ಮುಗಳೂ ಮುದ್ರಣಿಯಲ್ಲಿಯೂ ಸಿಗುತ್ತವೆ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ.

ಈ ಪುಸ್ತಕಗಳು ಪಾಠ ಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠ ಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ತಿಳಸೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣದ ಸಮಿತಿಯ ಶಿಫಾರಸಿಗೆ ಅನುಸರಿಸಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟ. ಬಿ. ಪಿಎಚ್. ಸಿ. (ಅಮೇರಿಕಾ)

ಪ್ರತಿಯೊಬ್ಬ ಶಿಕ್ಷಕನಿಗೂ ಉಪಯುಕ್ತವಾದ ಈ ಪುಸ್ತಕದಲ್ಲಿ ಹಿಂದಿ ಕವಾಯತ; ಸರ್ವಾಂಗಸುಂದರ ವ್ಯಾಯಾಮ, ಆಸನ, ನಮಸ್ಕಾರ, ಲಾಠೀ ಲೇಝೀಮ, ಜೋಡಿ, ಕೋಲಾಟ ಇತ್ಯಾದಿಗಳ ಮಾಹಿತಿಯನ್ನು ಕೊಟ್ಟಿದೆ. ಆಟ-ಪೈಲಾಟಗಳನಿಯಮಗಳನ್ನೂ ಕೊಟ್ಟಿದೆ. ಬೆಲೆ ೩ ರೂಪಾಯಿಗಳು

ಈ ಪುಸ್ತಕದಲ್ಲಿ ಕೊಟ್ಟ ನಮಸ್ಕಾರಗಳ ಚಿತ್ರಪಟ ಬೆಲೆ ೪ ಆಣೆ.

ದೊರೆಯುವ ಸ್ಥಳ:—

ವಿಳಾಸ :— ಶ್ರೀ. ಜ. ಬಾಪಟ,
ಮದಿಹಾಳ, ಧಾರವಾಡ.

ನವೆಂಬರ್ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸನ್ನಿವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:
ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಬೆಳಗಾವಿ ತಾ. ಪ್ರಾ. ಶಿ. ಸಮ್ಮೇಲನ	೧
೨.	ಬೆಳಗಾವಿಯ ಶಿಕ್ಷಕಿಯರ ಸಮ್ಮೇಲನದಲ್ಲಿ ಓದಿದ ಒಂದು ಚಿಕ್ಕ ಪ್ರಬಂಧ	೩
೩.	ಬೆಳಗಾವಿಯ ಶಿಕ್ಷಕಿಯರ ಸಮ್ಮೇಲನದಲ್ಲಿ ಕಲಿಸಿದ ಕವಿತೆ	೭
೪.	ಹೆಣ್ಣುಮಕ್ಕಳ ಮತ್ತು ಮಿಶ್ರಶಾಲೆಗಳ ಶಿಕ್ಷಕಿಯರಿಗೆ ಸೂಚನೆಗಳು	೮
೫.	ಪ್ರಾಥಮಿಕ ಶಾಲೆಗಳೊಳಗಿನ ಪಾಠ ಪದ್ಧತಿಗಳು	೧೦
೬.	ಮಹಾಯುದ್ಧದ ಭೂಗೋಲ	೧೨
೭.	ಆಧುನಿಕ ರಣರಂಗದಲ್ಲಿ ಹಡಗುಪಡೆಯ ಸ್ಥಾನ	೧೮
೮.	ಪ್ರಕಟನೆ	೨೦
೯.	ಮುಸ್ತಾಫಾ ಕಮಾಲ ಅತಾತುರ್ಕ	೨೧
೧೦.	ಪತ್ರಗಳ ಸಾರಾಂಶ	೩೧

Printed by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School, Dharwar at his Office.

ಓದಿರಿ ! ತ್ವರೆಮಾಡಿರಿ !

ವಾಗ್ವಿಲಾಸ ಬುಕ್‌ಡಿಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ಒನೇ ಇಯತ್ತಿ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ ಎಜ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ : ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರ ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದ ಹೆಸರುಪಡೆದದೆ. ಒರೆದವರು ಕ. ರಾ.' ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕವಿಾಶನ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ

ಬೆಳಗಾವಿ ತಾಲೂಕಿನ ಪ್ರಾಥಮಿಕ ಶಿಕ್ಷಕಿಯರ ಸಮ್ಮೇಲನ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮಡಿವಾಳ್, ಬಿ. ಎ.,

ಸಂಪುಟ ೭೯ | ನವೆಂಬರ ೧೯೪೦ | ವರ್ಷ ೧೨. ಸಂ. ೮

ಬೆಳಗಾವಿ ತಾಲೂಕಿನ ಪ್ರಾಥಮಿಕ ಶಿಕ್ಷಕಿಯರ ಸಮ್ಮೇಲನ

ನಮ್ಮ ದಕ್ಷಿಣ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸರಾದ ಶ್ರೀಮತಿ **ಕಮಲಾಬಾಯಿ ಜಮಖಂಡಿ** ಬಿ.ಎ.,ಬಿ.ಟಿ.,ಟಿ.ಡಿ. ಇವರ ಅಧ್ಯಕ್ಷತೆಯಲ್ಲಿ ತಾ. ೨೦-೧೦-೧೯೪೦ ನೆಯ ದಿವಸ ಬೆಳಗಾವಿಯ ಸೆಂಟ್ರಲ್ ಪ್ರಾಯ್ಮರಿ ಸ್ಕೂಲೆಲ್ ಸ್ಕೂಲಿನಲ್ಲಿ ಬೆಳಗಾವಿ ಊರಿನ ಮತ್ತು ತಾಲೂಕಿನ ಶಿಕ್ಷಕಿಯರ ಸಮ್ಮೇಲನವು ನಡೆಯಿತು. ಸುಮಾರು ೭೦ ಜನ ಶಿಕ್ಷಕಿಯರು ಇದರಲ್ಲಿ ಭಾಗ ನಹಿಸಿದ್ದರು. ಮತ್ತು ೩೦-೪೦ ಜನ ಆಮಂತ್ರಿತ ಗೃಹಿಣಿಯರು ಸಭೆಗೆ ಬಂದಿದ್ದರು. ಬೆಳಗಾವಿಯ ಅಸಿ॥ ಡೆಪ್ಯುಟಿ ಇನ್‌ಸ್ಪೆಕ್ಟ್ರಸರಾದ ಶ್ರೀ. **ಥಿಟೆಬಾಯಿ** ಯವರು ಪ್ರಾರಂಭಕ್ಕೆ ಪ್ರಾಸ್ತಾವಿಕಭಾಷಣಮಾಡಿದ ತರುವಾಯ ಕಾರ್ಯಕ್ರಮಗಳು ಪ್ರಾರಂಭವಾದವು. ಎರಡು ಕನ್ನಡ, ನಾಲ್ಕು ಮರಾಠಿ, ಒಂದು ಉರ್ದು ಈ ರೀತಿ ಏಳು ಪಾಠಗಳು ನಡೆದವು. ಈ ಎಲ್ಲ ಪಾಠಗಳು ಶಿಕ್ಷಕಿಯರಿಗೆ ತುಂಬ ಉಪಯುಕ್ತವೂ ಮಾರ್ಗದರ್ಶಿಯೂ ಆಗಿದ್ದವು. ಶ್ರೀ. ಗಜೇಂದ್ರಗಡಕರ ಇವರು ಬಾಲಕರ ವರ್ಗಕ್ಕೆ ಕಲಿಸಿದ ಕಥೆ (ಮರಾಠಿ), ಶ್ರೀ. ಗರಗ ಇವರು ೭ ನೆಯ ಇಯತ್ತೆಗೆ ಕಲಿಸಿದ ಕವಿತಾ ಪಾಠ (ಕನ್ನಡ), ಶ್ರೀ. ಸೈಯ್ಯದ ಇವರು

ಮೊದಲನೆಯ ಇಯತ್ತೆಗೆ ಕಲಿಸಿದ ಹಾಡು (ಉರ್ದು), ಈ ಮೂರು ಪಾಠಗಳಂತೂ ಅತ್ಯುತ್ತಮವೆನಿಸಿದವೆಂದು ಅಧ್ಯಕ್ಷರೂ ಇತರರೂ ಅಭಿಪ್ರಾಯಪಟ್ಟರು.

ಬಾಲಿಕೆಯರ ಹಾಡು, ಸಂಭಾಷಣೆ, ಚಿಕ್ಕ ಅಭಿನಯ, ನರ್ತನ ಮೊದಲಾದ ಮನೋರಂಜಕ ಕಾರ್ಯಕ್ರಮಗಳು ತುಂಬ ಕುಶಲತೆಯಿಂದ ನೆರವೇರಿಸಲ್ಪಟ್ಟವು. ಎಲ್ಲರೂ ಅವನ್ನು ನೋಡಿ ಸೈ ಸೈ ಎಂದು ತಲೆದೂಗುವಂತಾಯಿತು. ಮತ್ತು ಶಿಕ್ಷಕಿಯರು ಬಾಲಿಕೆಯರಿಗೆ ಈ ವಿಷಯಗಳಲ್ಲಿ ಸರಿಯಾಗಿ ಶಿಕ್ಷಣ ಕೊಟ್ಟರೆ ಅವರು ಎಷ್ಟರ ಮಟ್ಟಿಗೆ ತಯಾರಾಗುವರೆಂಬುದನ್ನು ತೋರಿಸಿಕೊಡುವಂತಾಯಿತು.

ಈ ಸಮ್ಮೇಲನವು ಕೇವಲ ಹೆಣ್ಣುಮಕ್ಕಳಿಂದಲೇ ಪ್ರಾರಂಭಿಸಲ್ಪಟ್ಟು, ಕೊನೆಯ ವರೆಗಿನ ಎಲ್ಲ ಕಾರ್ಯಕ್ರಮಗಳಲ್ಲಿ ಯಾವ ಸಂದರ್ಭದಲ್ಲಿಯೂ ಗಂಡು ಸರ ನೆರವನ್ನು ಅಪೇಕ್ಷಿಸದೆ, ಅವರಿಂದಲೇ ನಡೆಯಿಸಲ್ಪಟ್ಟಿತು. ಆದುದರಿಂದ ಇಂಥ ಸಮ್ಮೇಲನಗಳಲ್ಲಿ—ಸಾರ್ವಜನಿಕ ಕಾರ್ಯಕಲಾಪಗಳಲ್ಲಿ—ಇದೇ ಮೊದಲನೆಯದೆಂದು ಹೇಳುವಂತಾಯಿತು. ಇಷ್ಟೇ ಅಲ್ಲ, ಸರ್ವ ರೀತಿಯಿಂದಲೂ ಸುವ್ಯವಸ್ಥಿತವಾಗಿ ನಡೆದು ಇತರರಿಗೆ ಮಾದರಿಯಾಗುವಂತಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಿಕ್ಷಕಿಯರಿಗೆ ಮಾರ್ಗದರ್ಶಿಯೂ ಮನೋರಂಜಕವೂ ಆದ ಈ ಸಮ್ಮೇಲನವು ನಮ್ಮ ಭಗಿನೀ ಸಮಾಜದಲ್ಲಿ ಶಿಕ್ಷಣ ವಿಷಯಕ್ಕೆ ತುಂಬ ಆಸ್ಥೆ ಉತ್ಸಾಹಗಳನ್ನು ಹುಟ್ಟಿಸಿ ಅವರನ್ನು ಹುರಿದುಂಬಿಸುವಂತಾಯಿತು.

ಈ ಸಮ್ಮೇಲನದಿಂದ ಮತ್ತೆ ಕೆಲವು ಸಂಗತಿಗಳು ಜನತೆಯ ನಿದರ್ಶನಕ್ಕೆ ಬಂದುವು.

(೧) ಈ ಸಮ್ಮೇಲನದಲ್ಲಿ ಭಿನ್ನ ಭಿನ್ನ ಜಾತಿಗಳ ಭಿನ್ನ ಭಾಷೆಗಳ ಶಿಕ್ಷಕಿಯರು ಭಾಗವಹಿಸಿದ್ದರು. ಉಚ್ಚ ಭಾವನೆಯಿಂದ ಪ್ರೇರಿತರಾಗಿ ಕೆಲಸ ಮಾಡುವಾಗ ಅವರೆಲ್ಲರೂ ತಮ್ಮ ತಮ್ಮ ಭಾಷಾಭೇದ ಜಾತಿಭೇದಗಳನ್ನು ಮರೆತುಬಿಟ್ಟಿದ್ದರು. ಯಾವ ಸಂದರ್ಭದಲ್ಲಿಯೂ ಈ ಭೇದಭಾವನೆಯ ತೊಡಕು ಎಳ್ಳಷ್ಟಾದರೂ ಕಂಡು ಬರಲಿಲ್ಲ.

(೨) ಈ ಸಮ್ಮೇಲನದ ಸಮಯದಲ್ಲಿ ಶ್ರೀಮತಿ ಕಮಲಾಬಾಯಿ ಜಮಖಂಡಿಯವರು ಪ್ರಾಥಮಿಕ ಶಾಲೆಗಳೊಳಗಿನ ಬಾಲಿಕೆಯರಿಗೆ ಕಲಿಸಬಹುದಾದ ಹಲಕೆಲವು ಆಟಪಾಟಗಳನ್ನು ಶಿಕ್ಷಕಿಯರಿಗೆ ತೋರಿಸಿಕೊಟ್ಟರು. ಆಗ ಎಲ್ಲ ಶಿಕ್ಷಕಿಯರು ಆ ಆಟ್ಟಗಳನ್ನು ತಾವು ವಯಸ್ಸಾದವರೆಂಬ ಭಾವನೆಯನ್ನು ಸಂಪೂರ್ಣವಾಗಿ ಮರೆತು ಚಿಕ್ಕ ಬಾಲಿಕೆಯರಂತೆಯೇ ಮೈಮರೆತು ಬಿಟ್ಟು ತುಂಬ ಉತ್ಸಾಹದಿಂದ ಆಡಿದರು. ಆಗ ಅವರಿಗೆ ಹೆಚ್ಚು ಶಾರೀರಿಕ ಪರಿಶ್ರಮದ ತೊಂದರೆ

ಯಾಗಲಿ ಹಿಗ್ಗು ನಾಚಿಕೆ ಮುಂತಾದ ಮಾನಸಿಕ ಅಡಚಣಿಗಳಾಗಲಿ ಬರಲಿಲ್ಲ. ಕೆಲಕೆಲವು ಶಿಕ್ಷಕಿಯರು ಹಳ್ಳಿಯ ಹಾಡುಗಳು ಪವಾಡಗಳು ಮೊದಲಾದವು ಗಳನ್ನು ಒಳ್ಳೇ ಉತ್ಸಾಹಕರವಾಗಿ ಅಂದು ತೋರಿಸಿದರು.

(೩) ಈ ಸಮ್ಮೇಲನದ ಸರ್ವಾಂಗಸುಂದರವಾದ ಕಾರ್ಯಕ್ರಮಗಳನ್ನು ಕಂಡು ಉತ್ಸಾಹಭರಿತರಾದ ಶಿಕ್ಷಕಿಯರು ಈ ಸಾರೆ ಬೆಳಗಾವಿ ತಾಲೂಕಿನ ಶಿಕ್ಷಕಿಯರ ಮಟ್ಟಿಗೆ ನಡೆದ ಈ ಸಮ್ಮೇಲನವನ್ನು ಬೆಳೆಯಿಸಿ ಮುಂದಿನ ಸಾರೆ ಇಡಿಯ ಜಿಲ್ಲೆಯ ವರೆಗೂ ಇದರ ಕಾರ್ಯಕ್ಷೇತ್ರವನ್ನು ಹಬ್ಬಿಸಬೇಕೆಂದು ಬಯಸಿದರು.

(೪) ಶಿಕ್ಷಕಿಯರ ಸಾಮಾಜಿಕ ಸಂಘವೊಂದನ್ನು ಏರ್ಪಡಿಸಿಕೊಂಡು ಎಲ್ಲ ಶಿಕ್ಷಕಿಯರಲ್ಲಿ ಪರಸ್ಪರ ಸಹಾಯ ಸಹಾನುಭೂತಿಗಳನ್ನು ಹುಟ್ಟಿಸಿ ಬೆಳಿಸಿ ನಮ್ಮ ಸ್ತ್ರೀಸಮಾಜಕ್ಕೆ ಅನುಕರಣೀಯವಾದ ಕೆಲಸ ಮಾಡಬೇಕೆಂಬ ಅಭಿ-ಪ್ರಾಯವೂ ಈ ಸಮ್ಮೇಲನದ ಫಲವಾಗಿ ಶಿಕ್ಷಕೆಯರಲ್ಲಿ ಹುಟ್ಟಿರುವದಂತೆ. ತುಂಬ ಅನುಕರಣೀಯವಾದ ಮಾತು.

ಈ ಸಮ್ಮೇಲನದ ಅಧ್ಯಕ್ಷರಾದ ಶ್ರೀ. ಕಮಲಾಬಾಯಿ ಜಮಖಂಡಿಯವರ, ಮಾರ್ಗದರ್ಶಿಗಳಾದ ಶ್ರೀ. ಥಿಟೆಬಾಯಿಯವರ, ಮತ್ತು ದಕ್ಷತೆಯಿಂದ ಕೆಲಸ ಮಾಡಿದ ಎಲ್ಲ ಶಿಕ್ಷಕಿಯರ ಪರಿಶ್ರಮವು ಸಾರ್ಥಕವಾದಂತಾಯಿತು.

ಬೆಳಗಾವಿಯ ಶಿಕ್ಷಕಿಯರ ಸಮ್ಮೇಲನದಲ್ಲಿ ಓದಿದ ಒಂದು ಚಿಕ್ಕ ಪ್ರಬಂಧ

ಸಮ್ಮೇಲನಗಳ ಆವಶ್ಯಕತೆಯು

ಅಧ್ಯಕ್ಷ ಮಹಾಶಯರೇ, ಮತ್ತು ಸಹೋದರಿಯರೇ,

ನಾನು ನನ್ನ ವಿಷಯವನ್ನು ಓದುವ ಪೂರ್ವದಲ್ಲಿ ತಮಗೊಂದು ವಿನ್ನಹ ಮಾಡಿಕೊಳ್ಳುವೆನು. ನನ್ನ ವಿಷಯದಲ್ಲಿ ತಪ್ಪುಗಳೇನಾದರೂ ಅದಲ್ಲಿ ಅವುಗಳನ್ನು ಕ್ಷಮಿಸಿ ನನಗೆ ತಿದ್ದಿಕೊಳ್ಳಲು ಅವಸರವನ್ನಿತ್ತು ಉತ್ಸಾಹ ಕೊಡಬೇಕಾಗಿ ಬೇಡಿಕೊಳ್ಳುವೆನು.

ಮಾನಿನಿಯರೇ,

ಸಮ್ಮೇಲನಗಳ ಹುಟ್ಟನ್ನು ವಿಚಾರ ನೂಡಿದರೆ ಅದು ಬಹು ಪ್ರಾಚೀನತಮ ವೆಂದು ನಿದರ್ಶನಕ್ಕೆ ಬರುವುದು. ವೇದಕಾಲದಲ್ಲಿ ಸಹ ನಮ್ಮ ಪೂಜ್ಯ ಆರ್ಯರು ಸ್ವನಿರ್ಮಿತವಾದ ಮಂತ್ರಗಳ ಬಗ್ಗೆ ಚರ್ಚೆ ವಿಚರ್ಚೆ ಮಾಡಲು ಸಮ್ಮಿಲಿತರಾಗು ತ್ತಿದ್ದರು. ಉಪನಿಷತ್ಕಾಲಗಳಲ್ಲಿ ಇಂಥ ಸಮ್ಮೇಲನಗಳು ನಡೆದುವೆಬುಂದಕ್ಕೆ ಆಧಾರಗಳಿವೆ. ರಾಜಯೋಗಿ, ಜನಕ ಮಹಾರಾಜನು ತನಗುಂಟಾದ ಸಂಶಯು ಗಳನ್ನು ದೂರಮಾಡಿಕೊಳ್ಳಲು ಮಹರ್ಷಿ ಯಾಜ್ಞವಲ್ಕ್ಯನಲ್ಲಿ ಬೇಡಿಕೊಂಡಿ ದ್ದನು. ಇದು ಪೂರ್ವಕಾಲದ ವಿಚಾರ. ತೀರ ಇತ್ತೀಚಿನ ವಚನಕಾಲದಲ್ಲಿಯೂ ಇಂಥ ಸಮ್ಮೇಲನಗಳು ಮೈದೋರಿವೆ. ಭಕ್ತಿಭಾಂಡಾರಿ ಬಸವಣ್ಣನವರು ಮಂಟಪ ಪೂಜೆಗಳನ್ನು ಮಾಡಿಸಿದ ಉದ್ದೇಶವು ಈ ಸಮ್ಮೇಲನಗಳ ಉದ್ದೇಶ ದಲ್ಲಿಯೇ ಬರುತ್ತಿದೆ. ಅಲ್ಲಮಪ್ರಭು ದೇವರು ಶೂನ್ಯ ಪೀಠದಲ್ಲಿ ವಿರಾಜಮಾನ ರಾಗಿ ನಡೆಯಿಸಿದ ಸಮ್ಮೇಲನವು ಚಿತ್ತಾಕರ್ಷಕವಾಗಿದೆ. ಈ ಸಮ್ಮೇಲನದಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ವಿಚಾರಗಳನ್ನು ಮಂಡಿಸಿ ಅವುಗಳ ಸತ್ಯತೆಯನ್ನು ಲೋಕನಿದರ್ಶಕ್ಕೆ ತಂದುಕೊಡಲು ಹೆಣಗಾಡುತ್ತಿದ್ದರು. ಮಹಿಳೆಯರಿಗೂ ಇಲ್ಲಿ ಸ್ಥಾನ ದೊರೆಯುತ್ತಿತ್ತು. ಈ ಎಲ್ಲ ಸಮ್ಮೇಲನಗಳ ವಿಚಾರಗಳು ಕೇವಲ ಧಾರ್ಮಿಕವಾಗಿದ್ದವು. ರಾಜಕೀಯ ಸಮ್ಮೇಲನ ಸಾಹಿತ್ಯ ಸಮ್ಮೇಲನಗಳೂ ಪೂರ್ವಕಾಲದಿಂದಲೂ ನಮ್ಮಲ್ಲಿ ರೂಢಿಯಲ್ಲಿವೆ. ಭಾರತೀಯರ ಉದ್ಧಾರಕ್ಕಾಗಿ ನಡಕಟ್ಟಿದ ಕಾಂಗ್ರೆಸಿನ ಸಭೆಗಳು ರಾಜಕೀಯ ಸಮ್ಮೇಲನಕ್ಕಾಗಿ ಒಳ್ಳೆಯ ದೃಷ್ಟಾಂತವಾಗಿದೆ. ಆ ಪೂರ್ವದಲ್ಲಿಯೂ ಇಂಥ ಸಮ್ಮೇಲನಗಳು ಜರುಗುತ್ತಿದ್ದವು.

ಭಗಿನಿಯರೇ, ಮುಂದುವರಿದಿರುವ ಯಾವದೇ ರಾಷ್ಟ್ರದ ಇತಿಹಾಸವನ್ನವ ಲೋಕಿಸಿದಲ್ಲಿ ಅದರ ಅಭಿವೃದ್ಧಿಗೆ ಸಮ್ಮೇಲನಗಳೇ ಮೂಲವೆಂಬದನ್ನು ಮನಗಾಣ ಬಹುದು. ಒಬ್ಬನಿಗೆ ಸೇರಿದುದು ಸರ್ವರಿಗೆ ಸೇರದು. ಆದ್ದರಿಂದ ಒಬ್ಬನ ವಿಚಾರ ವನ್ನು ಸಮಾಲೋಚಿಸಿ ವಿಮರ್ಶಿಸಿ ಅದಕ್ಕೆ ಅಬಾಧಿತವಾದ ರೂಪಗೊಳಿಸಿ ರೂಢಿಮಯ ಮಾಡುವುದೇ ಸಮ್ಮೇಲನಗಳ ಧ್ಯೇಯ. ವಿಚಾರಜನಕನು ಒಬ್ಬ. ವಿಮರ್ಶಕರು ಹಲವರು. ಆಗಲೇ ಜಾಗ್ರತಿ. ಜಾಗ್ರತೆಯೇ ಪ್ರಗತಿಯ ಅಡಿಗಲ್ಲು. ಎಚ್ಚರಗೊಳ್ಳದ ಮುನ್ನ ಉಚ್ಚಸ್ಥಾನವೆಲ್ಲಿ ?

ಪ್ರಾಚೀನ ಸಮ್ಮೇಲನಗಳು ಧಾರ್ಮಿಕ ವಿಷಯಗಳಿಗೆ ಬಹುತರವಾಗಿ ಮನ್ನಣೆಯನ್ನೀಯುತ್ತಿದ್ದವು. ಬರಬರುತ್ತ ರಾಜಕೀಯ ಸಮ್ಮೇಲನಗಳ ಆವಶ್ಯ ಕತೆ ಹೆಚ್ಚಿನಿಸಹತ್ತಿತು. ಆದರೆ ಶೈಕ್ಷಣಿಕ ಸಮ್ಮೇಲನಗಳ ಆವಶ್ಯವು ಜನರ

ಮನಸದಲ್ಲಿ ಆಷ್ಟೊಂದು ಬೇಗನೆ ಒಡಮೂಡಲಿಲ್ಲ. ಆದರೂ ಅವುಗಳ ಅಗತ್ಯ ವೆನಿಸಿದೊಡನೆಯೇ ಕಾರ್ಯವು ಒತ್ತರದಿಂದ ನಡೆಯಿತು.

ಪಾಶ್ಚಾತ್ಯರಾಷ್ಟ್ರಗಳಲ್ಲಿ ಹುಟ್ಟಿದ ಶಿಕ್ಷಣದ ಹೊಸಪದ್ಧತಿಯ ಪ್ರಸಾರವನ್ನು ಭರದಿಂದ ಸಾಗಿಸಲು ಸಮ್ಮೇಲನಗಳ ಅವಶ್ಯವು ವಿಶೇಷವೆನಿಸಹತ್ತಿತು. ಹೊಸ ಹೊಸವಿಚಾರಗಳು ಮಂಡಿಸಲ್ಪಡಹತ್ತಿದವು. ಶಿಕ್ಷಣಾಚಾರ್ಯ ಫ್ರೊಬೆಲ್ಲನು ತನ್ನ ಶೈಕ್ಷಣಿಕ ವಿಚಾರಗಳನ್ನು ಮಂಡಿಸಲಿಕ್ಕೂ ತತ್ಪೂರ್ವದ ಪದ್ಧತಿಗಳನ್ನು ಬದಲಿಸ ಲಿಕ್ಕೂ ತನ್ನ ಆಯುಷ್ಯವನ್ನೇ ಮುಡುಪಿಡಬೇಕಾಯಿತು. ಇಂದಿನ ಹೊಸತನಕ್ಕೆ ಅತನ ಹಸನ ವಿಚಾರಗಳೇ ಮೂಲವಾಗಿವೆ. ಡಾ. ಮೊಂಟಿ ಸೋರಿಯವರ ಶೈಕ್ಷಣಿಕ ತತ್ವ ಪ್ರಸಾರಕ್ಕೆ ಸಮ್ಮೇಲನಗಳೇ ಕಾರಣಗಳಾಗಿವೆ.

ಹಳೆಯ ಸಮ್ಮೇಲನಗಳಲ್ಲಿ ಬಹು ಜನರು ಭಾಗ ವಹಿಸುತ್ತಿರಲಿಲ್ಲ. ಆದರೂ ಅನೇಕಾನೇಕ ಮಹತ್ವದ ವಿಷಯಕ್ಕೆ ವಾದವಿವಾದ ನಡೆಯುತ್ತಿತ್ತು. ಮಹತ್ವವು ವಿಚಾರಕರ ಸಂಖ್ಯೆಗಲ್ಲದೆ ಬಹುಜನಕ್ಕೆ ಮಹತ್ವವಿರಲಿಲ್ಲ.

ತಕ್ಕುದಲ್ಲದರ ಬೇರನಗೆದು, ಚಿಕ್ಕದಾದರೂ ಚೊಕ್ಕಟವಾದುದನ್ನೇ ನೆಡಿಸಿ ಬೆಳೆಯಿಸುವದು ಸಮ್ಮೇಲನಗಳ ಕರ್ತವ್ಯ.

ಅಕ್ಕತಂಗಿಯರೇ; ಎಲ್ಲ ಬಲ್ಲವರಿಲ್ಲ. ಬಲ್ಲವರು ಬಹಳಿಲ್ಲ. ಆದ್ದರಿಂದ ಬಲ್ಲವರ ವಿಚಾರಗಳನ್ನೇ ಬಲಿಸಿ ಬೆಳೆಯಿಸುವದು ಉಳಿದವರ ಕಾರ್ಯ. ಒಂದು ತಲೆ, ಎರಡು ಕೈಗಳು. ವಿಚಾರಕ್ಕೆ ಒಬ್ಬ; ಕಾರ್ಯಕ್ಕೆ ಹಲವರು. ಕಾರ್ಯ ದೇಹಕ್ಕೆ ವಿಚಾರವೇ ಆತ್ಮ. ಬಲ್ಲವರ ಒಡನಾಟ ಬೆಲ್ಲವನ್ನು ಮೆದ್ದಂತೆ. ಆದ್ದರಿಂದ ಬಲ್ಲವರನ್ನು ಬರಮಾಡಿಸಿಕೊಂಡು ದೇಹ ಸಾಧನೆಯ ಸುಲಭ ಮಾರ್ಗಗಳನ್ನರಿತು ಕೊಳ್ಳುವದು ಈ ಸಮ್ಮೇಲನಗಳ ಕರ್ತವ್ಯ.

ಈಗಿನ ಕಾಲದಲ್ಲಿಯಂತೂ ಶಿಕ್ಷಣವು ವಾಯುವೇಗಕ್ಕೂ ಮಿಂಚಿ ಭರದಿಂದ ಸಾಗಿದೆ. ನಿನ್ನಿನದು ಇಂದಿಗೆ ಹಳೆಯದು; ಇಂದಿನದು ನಾಳೆಗೆ ಹಳೆಯದು. ಆದ್ದರಿಂದ ಇಂಥ ಶಿಕ್ಷಣಾಭಿವೃದ್ಧಿಯ ಕಾಲದಲ್ಲಿ ಹಳೆಯದೇ ಹೊಸ್ಸು ಎಂದು ನಂಬಿ ಕೊಳೆಯುವವರ ಗತಿಯು ಕೀಳಾಗದಿರದು. ಹೊಸದರೊಳಗಿನ ಕಸಕಿತ್ತು ಹಳೆಯದರೊಳಗಿನ ಕಳೆ ಕಳೆದು ಹಳೆಯದಕ್ಕೆ ಹೊಸದರ ತಳಕುಹಾಕಿ ಬೆಳೆಸಲು ಇಂಥ ಸಮ್ಮೇಲನಗಳು ಅತ್ಯವಶ್ಯಕವಾಗಿವೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಈ ವಿಷಯದ ಅಭಿರುಚಿ ಆತುರತೆಗಳು ನಮ್ಮನ್ನು ದಿಗಿಲುಬಡಿಸದಿರವು. ಸಮ್ಮೇಲನಗಳ ಉದ್ದೇಶವು ಬಳ್ಳಿಗುರುಡರು ಕೂಡಿ

ಹಳ್ಳದಲಿ ಬೀಳುವುದಕ್ಕಲ್ಲ. ಬಿದ್ದ ಬಳ್ಳಿಗಳನ್ನು ಎದ್ದು ನಿಲ್ಲಿಸಿ; ಆಧಾರವಿತ್ತು ಏರಿಸಿ, ಕಂಪುವಾಸನೆಗೊಳ್ಳುವುದಕ್ಕಾಗಿ; ಸೊಂಪುಳ್ಳ ಫಲದ ರುಚಿಗಾಗಿ; ನಮ್ಮ ಭಾಗ್ಯದ ಬೆಳವಣಿಗಾಗಿ;

ಶೈಕ್ಷಣಿಕ ಸುಧಾರಣೆಯಲ್ಲಿ ಪ್ರಾಥಮಿಕ ಶಿಕ್ಷಣ ಸುಧಾರಣೆಯೇ ಮುಖ್ಯವಾಗಿದೆ. ಗೊಬ್ಬರ, ಬೇರಿಗಾಗಿ; ಎಲೆಗಾಗಿ ಅಲ್ಲ. ಆದುದರಿಂದ ಉಚ್ಚ ಶಿಕ್ಷಣದ ಧ್ಯೇಯ ಸಾಧನೆಯು ಪ್ರಾಥಮಿಕ ಶಿಕ್ಷಣದ ಮೂಲ ಸುಧಾರಣೆಯಲ್ಲಡಗಿದೆ. ಪ್ರಾಥಮಿಕ ಶಿಕ್ಷಣ ಬೀಜದಲ್ಲಿಯೇ ಉಚ್ಚ ಶಿಕ್ಷಣದ ಫಲಗಳಿಲ್ಲ ಹುದುಗಿವೆ. ಈ ವಿಚಾರವನ್ನರಿತ ಸುಧಾರಿಸಿದ ರಾಷ್ಟ್ರಗಳು ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿ ಹಣವಿಲ್ಲದೆ ದುಡಿಯುತ್ತಿವೆ. ಇಂದಿನ ಬಾಲಕ ಬಾಲಿಕೆಯರೇ ನಾಳಿನ ನಾಗರಿಕರು. ನಾಗರಿಕತನವು ಮೈಯುಣ್ಣಬೇಕಾದರೆ ಸರಿಯಾದ ಶಿಕ್ಷಣವು ಬೇಕು. ಮತ್ತು ಅದು ಮೂಲದಿಂದಲೇ ಸರಿಯಾಗಿ ಸಾಗಬೇಕು. ಈ ಗುರಿಯನ್ನು ಮುಟ್ಟಬೇಕಾದರೆ ವಿಚಾರ ವಿನಿಮಯವು ಆಗತ್ಯ. ಈ ವಿಚಾರ ವಿನಿಮಯಕ್ಕೆ ಇಂಥ ಸಮ್ಮೇಲನಗಳು ಆಗತ್ಯ. ಇತ್ತಿತ್ತಲಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಉಂಟಾದ ಕ್ರಾಂತಿಯು ಜನರ ಚಿತ್ತವನ್ನು ಆಕರ್ಷಿಸುತ್ತಿದೆ. ಬಾಲಕ ಬಾಲಿಕೆಯರಲ್ಲಿ ಹುದುಗಿದ ಈಶ್ವರಾಂಶವನ್ನು ಅಂದರೆ ಪ್ರಬಲವಾದ ಶಕ್ತಿಯನ್ನು ಪ್ರಕಟಪಡಿಸಬೇಕಾದರೆ ಪ್ರಾಥಮಿಕ ಶಿಕ್ಷಣವು ತನ್ನ ರೂಪವನ್ನು ಮಾರ್ಪಡಿಸಲೇ ಬೇಕು. ಇದನ್ನರಿತೇ ನಮ್ಮಲ್ಲಿಯೂ ಅದರ ಬಗ್ಗೆ ಭರದಿಂದ ಚಟುವಟಿಕೆಗಳು ನಡೆದಿವೆ. ಸಮ್ಮೇಲನಗಳ ಮುಖಾಂತರ ತತ್ವಪ್ರಸಾರ ಮಾರ್ಗದರ್ಶಿತ್ವಗಳು ಸಾಗಿವೆ.

ಬಾಲಕ ಬಾಲಕಿಯರು ಎಳೆ ಮನಸ್ಸಿನವರು. ಅವರಿಗೆ ಬಿರುಸು ಸೇರದು. ಎಳೆ ಮನಸ್ಸಿಗೆ ಸಲುವಳಿಯಾಗುವ ವಿಚಾರಗಳಿಂದಲೇ ಅವರಿಗೆ ಶಿಕ್ಷಣವನ್ನೀಯ ಬೇಕು. ಈ ದೇಹ ಸಾಧನೆಯಲ್ಲಿ ಹಳೆತನದ ಮಡಿಯ ಹಟವೂ, ಹೊಸತನದ ಮೈಲಿಗೆಯ ಸ್ವೇಚ್ಛಾಚಾರವೂ ಘಾತುಕವಾಗಿವೆ. ಆದ್ದರಿಂದ ಈ ಹಟದ ಹೇರು ಕೀಳುವುದಕ್ಕೂ ಸ್ವೇಚ್ಛಾಚಾರಕ್ಕೆ ತಡೆಗಟ್ಟಲಿಕ್ಕೂ ಸಮ್ಮೇಲನವು ಬಲವತ್ತಾದ ಸಾಧನವಾಗಿದೆ.

ಅಕ್ಕರತೆಯ ಅಕ್ಕತಂಗಿಯರೇ, ಶಿಕ್ಷಣವು ಪ್ರೇಮಮಯವಾಗಿದೆ. ಪ್ರೇಮವು ಪ್ರೇಮದಿಂದಲೇ ಬೆಳೆಯುತ್ತಿದೆ. ಆದ್ದರಿಂದ ಅಕ್ಕಂದಿರೇ ಇಂಥ ಪ್ರೇಮದ ಸಂವರ್ಧನೆಗಾಗಿ ನಾವೆಲ್ಲರೂ ಒತ್ತಟ್ಟಿಗೆ ಕಲೆಯುವದು, ಬಲಿಯುವದು, ಬಲಿಸುವುದು, ಒಳ್ಳೇ ಸಹಾಯಕಾರಿಯಾಗಿದೆ.

ಆದ್ದರಿಂದ ಇಂಥ ಸಮ್ಮೇಲನಗಳ ಯೋಗವು ಪ್ರತಿ ವರ್ಷ ಬಂದು ಸಮ್ಮಲ್ಲಿಸುವ ಕಲುಷಿತವೆಂಬ ಮಲವನ್ನು ಹೊಡೆದೋಡಿಸಿ ಸ್ವಚ್ಛಮನವುಳ್ಳವರಾಗುವಂತೆ ಸಮ್ಮ ಮೇ. ಅಧ್ಯಕ್ಷರ ಹಾಗೂ ಮೇ. ಥಿಟಿಬಾಯಿಯವರನ್ನು ಅಪ್ಪಣೆ ಕೇಳಿಕೊಂಡು ನನ್ನ ಚಿಕ್ಕ ಪ್ರಬಂಧವನ್ನು (ವಿಷಯವನ್ನು) ಮುಗಿಸುತ್ತೇನೆ.

ಅಂಬಾಬಾಯಿ ಗುರ್ಲಹೊಸೂರ,
ಹೆಡ್ ಮಿಸ್ಟ್ರೆಸ್, ಕನ್ನಡ ಹೆಣ್ಣುಮಕ್ಕಳ ೧ನೇ ನಂ. ಶಾಲೆ,
ಬೆಳಗಾವಿ.

ಬೆಳಗಾವಿಯ ಶಿಕ್ಷಕಿಯರ ಸಮ್ಮೇಲನದಲ್ಲಿ

೭ನೆಯ ಇಯತ್ತೆಗೆ ಕಲಿಸಿದ ಒಂದು ಕವಿತೆ

ಬಗೆಬಗೆಯ ಲೀಲೆಯಲಿ ಬ್ರಹ್ಮಾಂಡ ತುಂಬಿರುವ |
ಜಗದೀಶ ನಿನ್ನನು ನೋಡಲೆಂದು;
ಹಗಲಿರುಳು ಹುಡುಕುತ್ತ ಮುಗಿಲಲ್ಲಿ ನೋಡುತ್ತ |
ಹಂಬಲಿಸಿ ಅಲ್ಲಲ್ಲಿ ಅಲೆಯುತಿರುವೆ,

ಕಾನನದಿ ನೋಡಿದೆನು ಕಾಂತಾರ ತಿರುಗಿದೆನು |
ಆತುರದಿ ನಿನ್ನನ್ನು ಕಾಣಲೆಂದು,
ಜಲದೊಳಗೆ ಮುಣುಗಿದೆನು. ಎಲರಲ್ಲಿ ಹುಡುಕಿದೆನು |
ಅಲರಲ್ಲಿ ನಿನ್ನನ್ನು ಶೋಧಿಸಿದೆನು,

ಬನದಲ್ಲಿ ಸುತ್ತಿದೆನು ಬಾನಿನಲಿ ತಿರುಗಿದೆನು |
ಘನ-ಮಹಿಮ ನೀನೆಲ್ಲಿ ಅಡಗಿರುವೆಯೋ !
ಅಲ್ಲಲ್ಲಿ ಹುಡುಕಿದೆನು ಬಲ್ಲವರ ಕೇಳಿದೆನು
ಎಲ್ಲರೂ ನಿನ್ನನ್ನು ಅರಿಯೆವೆನಲು,

ಏಕಾಂತದೊಳು ಕುಳಿತು ಲೋಕೇಶ ಕಂಡೆನ್ನೆ !
ಎನ್ನೊಳಗೆ ದೇವ ನೀನಿರುವೆಯಲ್ತೆ ?
ಇಂತಿರಲು ಕಾಣದಿಹ ಪರಮಾತ್ಮ ನಿನ್ನಿಂಹ
ಸೋಜಿಗವು ಜಗದಿ ಬೇರೊಂದು ಇಹುದೆ ?

ಹೆಣ್ಣುಮಕ್ಕಳ ಮತ್ತು ಮಿಶ್ರಶಾಲೆಗಳ ಶಿಕ್ಷಕಿಯರಿಗೆ ಸೂಚನೆಗಳು

ಶ್ರೀಮತಿ ಕಮಲಾಬಾಯಿ ಜವುಳಿಂಡಿ, ಬಿ. ಎ., ಬಿ. ಟಿ. ಟಿ. ಡಿ. ಅವರಿಂದ

೧. ಶಾಲೆಯ ಆವರಣದ, ಶಾಲಾಗೃಹದ, ವರ್ಗದ ಕೋಣೆಗಳ ಮತ್ತು ವಿದ್ಯಾರ್ಥಿನಿಯರ ಸ್ವಚ್ಛತೆಯ ಬಗ್ಗೆ ಚೆನ್ನಾಗಿ ಲಕ್ಷ ಪೂರೈಸತಕ್ಕದ್ದು. ಶಾಲೆಯಲ್ಲಿ ವಿದ್ಯಾರ್ಥಿನಿಯರ ಉಪಯೋಗಕ್ಕಾಗಿ ಕನ್ನಡಿ, ಹಣಿಗೆ, ನೀರು, ಸಾಬಾಣ, ಕೈ ಒರಸುವ ಅರಿವೆ ಇವುಗಳ ಪೂರೈಕೆಯಿರಬೇಕು.

೨. ಶಾಲೆಯಲ್ಲಿ ಗಡಿಯಾಳವಿದ್ದು ಎಲ್ಲ ಕೆಲಸಗಳು ವೇಳೆಗೆ ಸರಿಯಾಗಿ ನಡೆಯಬೇಕು.

೩. ಅಭ್ಯಾಸದ ಪತ್ರಿಕೆಯನ್ನು ಅನುಸರಿಸಿ ತಯಾರಿಸಿದ ವರ್ಷದ ಕೆಲಸದ ಯೋಜನೆಯನ್ನು ಮುಂದಿಟ್ಟುಕೊಂಡು ಅದರಂತೆ ಕೆಲಸ ನಡೆಯಿಸಬೇಕು.

೪. ಮುಖ್ಯಾಧ್ಯಾಪಕಿಯೂ ಟ್ರೇಂಡ್ ಶಿಕ್ಷಕಿಯರೂ ತಮ್ಮ ಶಾಲೆಯೊಳಗಿನ ಅಟ್ರೇಂಡ್ ಶಿಕ್ಷಕಿಯರಿಗೆ ತಮ್ಮ ವರ್ಗದ ಅಭ್ಯಾಸದ ಪತ್ರಿಕೆಯನ್ನೂ ಶಿಕ್ಷಣೋಪಕರಣಗಳನ್ನೂ ತಯಾರಿಸಿಕೊಳ್ಳಲಿಕ್ಕೆ ಸಹಾಯಮಾಡಬೇಕು; ಪದ್ಧತಿಯಂತೆ ಪಾಠಸಾಗಿಸಲು ನೆರವಾಗಬೇಕು.

೫. ಹೊಲಿಗೆಯ ಕೆಲಸದ ಉಪಕರಣಗಳನ್ನು ವರ್ಷಾರಂಭದಲ್ಲಿಯೇ ದೊರಕಿಸಿಕೊಂಡು ಕೆಲಸವನ್ನು ಪ್ರಾರಂಭಿಸಬೇಕು.

೬. ವರ್ಗದಲ್ಲಿ ಬಾಲಕಿಯರನ್ನು ಕೂಡ್ರಿಸುವಾಗ ಕಿಡಿಕಿ ಬಾಗಿಲುಗಳನ್ನೂ ಕರಿಯ ಹಲಿಗೆಯನ್ನೂ ಮರೆತರೆ ಸಾಗದು. ಬೆಳಕು ಬಾಲಕಿಯರ ಹಿಂಭಾಗದಿಂದ ಅಥವಾ ಎಡಗಡೆಯಿಂದ ಒರಬೇಕು. ಶಿಕ್ಷಕಿಯೂ ಕರಿಯ ಹಲಗೆಯೂ ಎಲ್ಲರಿಗೂ ಕಾಣಿಸುವಂತಿರಬೇಕು.

೭. ಎಷ್ಟೋ ಶಾಲೆಗಳಲ್ಲಿ ಸರಿಯಾಗಿ ಪಾಠ ಕಲಿಸಲಿಕ್ಕೆ ಅವಶ್ಯಕವೆನಿಸುವ ಉಪಕರಣಗಳು ಇರುವದಿಲ್ಲ. ಇನ್ನು ಕೆಲವು ಶಾಲೆಗಳಲ್ಲಿ ಇದ್ದಷ್ಟು ಉಪಕರಣಗಳೂ ಪೆಟ್ಟಿಗೆಯಿಂದ ಅಥವಾ ಕಪಾಟುಗಳಿಂದ ದಿನಾಲು ಹೊರಗೆ ಬರುತ್ತಿರುವದಿಲ್ಲ.

೮. ಹೊಲಿಗೆಯ ಕೆಲಸದ ಒಡವೆಗಳನ್ನು ತೀರ ಕಡಿಮೆ ಬೆಲೆಗೆ ಲಿಲಾವು ಮಾಡುವದಕ್ಕಿಂತ ಆಯಾ ವಿದ್ಯಾರ್ಥಿನಿಯರಿಗೆ ಯೋಗ್ಯ ಬೆಲೆಗೆ ಮಾರುವದು ಒಳಿತು. ಹೊಲಿಗೆಯ ಕೆಲಸಕ್ಕೆ ಬೇಕಾಗುವ ಉಪಕರಣಗಳ ಬೆಲೆಯನ್ನು ಕೊಡಲಾರದ ಬಡ ವಿದ್ಯಾರ್ಥಿನಿಯರಿಗೆ ಅವನ್ನು ಪುಕ್ಕಟೆ ಪೂರೈಸುವ ಯೋಜನೆಯಿರಬೇಕು. ಹೀಗೆ ಮಾಡುವದರಿಂದ ೨ ವಿದ್ಯಾರ್ಥಿನಿಯರು ಹೆಜ್ಜೆ ಆಸ್ಥೆಯಿಂದ ಕೆಲಸ ಮಾಡಲು ಅನುಕೂಲವಾಗುವದು.

೯. ಸಾಧ್ಯವಿದ್ದ ಮಟ್ಟಿಗೆ 'ಶಿಫ್ಟ' ಪದ್ಧತಿಯನ್ನು ಪ್ರಚಾರದಲ್ಲಿ ತರಬೇಕು.

೧೦. ವಾಚನ, ಕವಿತೆ ಅನ್ನುವದು, ಇವು ಭಾವಬೋಧಕವಾಗುವಂತಿರಬೇಕು. ಶಿಕ್ಷಕಿಯರು ಈ ವಿಷಯಗಳ ಕಡೆಗೂ ಹಳ್ಳಿಯ ಹಾಡುಗಳು ಕೌಟಂಬಿಕ ಹಾಡುಗಳು ಇವನ್ನು ಕಲಿಸುವದರ ಕಡೆಗೂ ಸಾಕಾದಷ್ಟು ಲಕ್ಷ್ಯ ಪೂರೈಸಬೇಕು.

೧೧. ಮಿಶ್ರಶಾಲೆಗಳ ಶಿಕ್ಷಕರು ತಮ್ಮ ವಿದ್ಯಾರ್ಥಿನಿಯರಿಗೆ ಹಾಡು ಹೊಲಿಗೆಯ ಕೆಲಸ ಬಾಲಕಿಯರಿಗೆ ಗೊತ್ತಾಗಿರುವ ಆಟಗಳು ಮುಂತಾದ ವಿಷಯಗಳನ್ನು ಕಲಿಸುವದನ್ನು ದುರ್ಲಕ್ಷಿಸಬಾರದು.

೧೨. ಬಾಲಕಿಯರ ಶಾರೀರಿಕ ಶಿಕ್ಷಣವನ್ನು ದುರ್ಲಕ್ಷಿಸಲಾಗದು. ಇದ್ದಷ್ಟೇ ದೊಡ್ಡ ಆಟದ ಬಯಲನ್ನು ಸರಿಯಾಗಿ ಉಪಯೋಗಿಸಿಕೊಂಡು ಮನೆಯೊಳಗೆ ಇಲ್ಲನೆ ಹೊರಗೆ ಆಡುವ ನಾನಾ ಬಗೆಯ ಆಟಗಳನ್ನು ಪ್ರತಿದಿನ ಕಲಿಸಬೇಕು.

೧೩. ಎಲ್ಲ ಶಾಲೆಗಳಲ್ಲಿ 'ಗರ್ಲ್ ಗಾಯಿಡ್'ದ ಕಾರ್ಯಲಾಪಗಳನ್ನು ಪ್ರಾರಂಭಿಸಬೇಕು.

೧೪. ಭೂಗೋಲ, ಇತಿಹಾಸ, ಪ್ರಕೃತಿವಿಮರ್ಶೆ ಮುಂತಾದ ವಿಷಯಗಳ ಶಿಕ್ಷಣದೊಡನೆ ಮಾನಸಿಕ ಸಂಸ್ಕಾರಕ್ಕೆ ಅನುಕೂಲತೆಯಿರುವ ಪ್ರವಾಸಗಳ ಯೋಜನೆಯನ್ನಿಟ್ಟುಕೊಂಡು ಒಂದು ವರ್ಷದಲ್ಲಿ ೫-೬ ಸಾರೆಯಾದರೂ ಹೊರಗೆ ಹೋಗಿಬರುವ ಕಾರ್ಯಕ್ರಮವನ್ನು ನಡೆಯಿಸಬೇಕು.

೧೫. ಬಾಲಕಿಯರ ವಿದ್ಯಾಭ್ಯಾಸದಲ್ಲಿ ತಕ್ಕ ಪ್ರಗತಿಯಾಗಿ ಶಿಕ್ಷಕಿಯರಲ್ಲಿ ಪರಸ್ಪರ ಬಳಕೆಯು ಹೆಚ್ಚಿ ವಿಚಾರ ವಿನಿಮಯಕ್ಕೆ ತಕ್ಕಷ್ಟು ಅವಕಾಶ ದೊರೆಯುವದಕ್ಕಾಗಿ ಒಂದು ತಾಲೂಕಿನ ಅಥವಾ ಜಿಲ್ಲೆಯ ಎಲ್ಲ ಶಿಕ್ಷಕಿಯರು ಆಗಾಗ ಸೇರಿ ಸಮ್ಮೇಲನವನ್ನು ನೆರೆಯಿಸುವ ಯೋಜನೆಯಿರಬೇಕು. ಇಂಥ ಸಮ್ಮೇಲನವನ್ನು ನೆರೆಯಿಸುವದಕ್ಕೆ ಜಿಲ್ಲೆಯ ಡಿ. ಎ. ಇನ್‌ಸ್ಪೆಕ್ಟರರ ಮತ್ತು ಅಸಿ. ಡಿ. ಎ. ಇನ್‌ಸ್ಪೆಕ್ಟ್ರಸರ ಅನುಮತಿಯನ್ನು ಪಡೆದುಕೊಂಡಿರಬೇಕು.

೧೬. ದಕ್ಷಿಣ ಭಾಗದೊಳಗಿನ ಎಲ್ಲ ಶಿಕ್ಷಕಿಯರು ಸೇರಿ ಒಂದು ಮಧ್ಯವರ್ತಿ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಪರಸ್ಪರ ಸಹಕಾರ ಸಹಾನುಭೂತಿಗಳನ್ನು ಪಡೆದುಕೊಂಡು ಬಾಲಕಿಯರ ಶಿಕ್ಷಣದ ಪ್ರಗತಿಗೂ ಶಿಕ್ಷಕಿಯರ ಸುಸ್ಥಿತಿಗೂ ತಕ್ಕ ಪರಿಸ್ಥಿತಿಯನ್ನು ಉಂಟುಮಾಡಿಕೊಳ್ಳಲು ಹವಣಿಸಬೇಕು.

ಪ್ರಾಥಮಿಕ ಶಾಲೆಗಳೊಳಗಿನ ಪಾಠಪದ್ಧತಿಗಳು

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಏ. ಅವರಿಂದ

೧. **ಪಾಠಪದ್ಧತಿಯ ಪ್ರಾಸ್ತಾವಿಕ ವಿಚಾರಗಳು**—ಬೇರೆಬೇರೆ ವಿಷಯಗಳ ಪಾಠಗಳನ್ನು ಕಲಿಸುವಾಗ ಪಾಠವು ಒಳ್ಳೆಯದೆನಿಸಿ ತಕ್ಕಂತೆ ಪರಿಣಾಮಕಾರಿಯಾಗಬೇಕಾದರೆ ಶಿಕ್ಷಕರು ಅನೇಕ ಸಂಗತಿಗಳನ್ನು ಅನುಲಕ್ಷಿಸಬೇಕಾಗುವದು. ವರ್ಗದಲ್ಲಿ ಶಿಸ್ತು ಉಳಿವಿರಬೇಕು; ಬಾಲಕರ ಲಕ್ಷವು ಪಾಠದಲ್ಲಿ ಸಂಪೂರ್ಣವಾಗಿ ತೊಡಗಿರಬೇಕು; ಅದು ಹೆಚ್ಚು ಆಕರ್ಷಕವಾಗಬೇಕು, ಬಾಲಕರ ಅದಷ್ಟು ಹೆಚ್ಚು ಇಂದ್ರಿಯಗಳಿಗೆ ಶಿಕ್ಷಣ ದೊರೆಯಬೇಕು; ಅವರ ವಿಚಾರಶಕ್ತಿ ಕಲ್ಪನಾಶಕ್ತಿಗಳು ವಿಕಾಸಹೊಂದಬೇಕು; ಕಲಿಸತಕ್ಕ ವಿಷಯವು ಬಾಲಕರ ಆಕಲನಕ್ಕೆ ತಕ್ಕದ್ದಾಗುವಂತೆ ಪರಿಣಾಮಕರವಾದ ರೀತಿಯಿಂದ ಪ್ರತಿಪಾದನೆ ನಡೆಯಬೇಕು; ಅವಶ್ಯಕವೆನಿಸಿದಲ್ಲಿ ಬಾಲಕರನ್ನು ಕೆಲಸದಲ್ಲಿ ತೊಡಗಿಸಿ ಅವರ ಸಹಕಾರವನ್ನು ಪಡೆಯಬೇಕು; ಇವೇ ಮೊದಲಾದ ಹಲವು ಸಂಗತಿಗಳನ್ನು ಅನುಲಕ್ಷಿಸಿ ಶಿಕ್ಷಕನು ತನ್ನ ಪಾಠ ಸಾಗಿಸಬೇಕಾಗುವದು. ಆದ್ದರಿಂದ ಬೇರೆ ಬೇರೆ ವಿಷಯಗಳ ಪಾಠಗಳನ್ನು ಕಲಿಸುವಾಗ ಯಾವ ಸರ್ವಸಾಮಾನ್ಯ ಧೋರಣೆಯಿಂದ ಸಾಗಬೇಕೆಂಬದನ್ನು ಶಿಕ್ಷಕನು ತಿಳಿದಿರುವದು ಅವಶ್ಯಕವೆನಿಸುವದು.

ಪಾಠವು ಸುಪರಿಣಾಮಕಾರಿಯಾಗಬೇಕಾದರೆ ಅದನ್ನು ಯೋಗ್ಯ ಪದ್ಧತಿಯಿಂದ ಕಲಿಸಬೇಕಾಗುವಂತೆಯೇ ಶಿಕ್ಷಕನ ವೈಯಕ್ತಿಕ ವೈಶಿಷ್ಟ್ಯವೂ ಅದಕ್ಕೆ ಬಹುಮಟ್ಟಿಗೆ ಕಾರಣವಾಗುವದು. ಆದರೆ ಮೊದಮೊದಲು ಪಾಠ ಕಲಿಸಲು ಹೊರಡುವ ಹೊಸ ಅನನುಭವಿಕ ಶಿಕ್ಷಕರಿಗೆ ಅವರ ವೈಯಕ್ತಿಕ ಗುಣದೋಷಗಳಿಗಿಂತಲೂ ಈ ಸಾಮಾನ್ಯ ಪದ್ಧತಿಯ ಜ್ಞಾನವೇ ಹೆಚ್ಚು ಮಹತ್ವದ್ದೆನಿಸುವದು. ಆದ್ದರಿಂದ ಟ್ರೇನಿಂಗ್ ಕಾಲೇಜುಗಳಲ್ಲಿಯೂ ಸಭೆ ಸಮ್ಮೇಲನಗಳಲ್ಲಿಯೂ ಮಾದರಿಗಾಗಿ ಪಾಠಕಲಿಸುವಾಗ ಬಹುಜನ ಶಿಕ್ಷಕ ಸಮುದಾಯಕ್ಕೆ ಅನುಕರಣೀಯ

ವಾದ ಒಂದು ಸಾಮಾನ್ಯಮಾರ್ಗದ ರೂಪರೇಷೆಯನ್ನು ಮುಂದಿಟ್ಟುಕೊಂಡು ಕಲಿಸಬೇಕಾಗುವದು. ಮತ್ತು ಹೀಗೆ ಸಾಮಾನ್ಯ ಶಿಕ್ಷಕವರ್ಗಕ್ಕೆಂದು ಬರೆಯಲ್ಪಟ್ಟಿರುವ ಈ ಲೇಖನದಲ್ಲಿಯೂ ಕೂಡ ಇದೇ ತರದ ಸರ್ವಸಾಮಾನ್ಯ ವಿಚಾರಗಳನ್ನಷ್ಟೇ ಹೇಳಲು ಬಯಸುವೆವು.

ಭಾಷಾಪಾಠಗಳು, ಗಣಿತ, ಇತಿಹಾಸ, ಭೂಗೋಲ, ಇತ್ಯಾದಿ ವಿಷಯಗಳನ್ನು ಕಲಿಸುವಾಗ ಶಿಕ್ಷಕರು ಅನುಸರಿಸಬಹುದಾದ ಸರ್ವಸಾಮಾನ್ಯ ಪದ್ಧತಿಗಳ ರೂಪರೇಷೆಗಳನ್ನೂ ಆವಶ್ಯಕವೆನಿಸಿದಲ್ಲಿ ಶಿಕ್ಷಕರಿಗೆ ತಕ್ಕ ಸೂಚನೆಗಳನ್ನೂ ಹೇಳುತ್ತ ಹೋಗುವೆವು. ಶಿಕ್ಷಕರು ಸಾರಾಸಾರ ವಿಚಾರಮಾಡಿ ಇಲ್ಲಿ ಹೇಳಿರುವ ಕ್ರಮದಲ್ಲಿ ಪರಿಸ್ಥಿತಿಗನುಗುಣವಾಗಿ ತಕ್ಕ ಬದಲಾವಣೆ ಮಾಡಿಕೊಳ್ಳಲು ಅಡ್ಡಿಯಿಲ್ಲ. ಉದಾಹರಣೆಗಾಗಿ; ಯಾವದಾದರೊಂದು ಪಾಠದ ಪ್ರಸ್ತಾವನೆಯನ್ನು ಶಿಕ್ಷಕನು ತನ್ನ ವರ್ಗದ ವಿದ್ಯಾರ್ಥಿಗಳ ಪೂರ್ವಜ್ಞಾನ ಸಾಧನಿಕ ಪರಿಸ್ಥಿತಿ ಮೊದಲಾದವುಗಳನ್ನು ಅನುಲಕ್ಷಿಸಿ ತನಗೆ ಅನುಕೂಲವಾದ ರೀತಿಯಲ್ಲಿ ಬದಲಿಸಿಕೊಳ್ಳಲು ಯಾವ ಪ್ರತಿಬಂಧವೂ ಇರದು. ಕವಿತಾಪಾಠದ ಪ್ರಸ್ತಾವನೆಯಲ್ಲಿ ರಾಗತಾಳಗಳಿಗೆ ಅನುಗುಣವಾಗಿ ಯೋಗ್ಯರೀತಿಯಿಂದ ಹಾಡಲು ಅಸಮರ್ಥನಾದ ಶಿಕ್ಷಕನು ಕಥಾಸಂದರ್ಭವನ್ನು ತನ್ನ ವರ್ಗದ ಮುಂದಿಟ್ಟು ಪಾಠವನ್ನು ಪ್ರಾರಂಭಿಸಬೇಕಾಗುವದು. ಮತ್ತು ಕವಿತೆಯನ್ನು ಭಾವಬೋಧಕವಾಗುವಂತೆ ಓದಿ ವಿಷಯವಿವೇಚನೆಗೆ ಹೊರಡಲು ಅಡ್ಡಿಯಿಲ್ಲ. ಇತ್ಯಾದಿ.

ಪಾಠದೊಳಗಿನ ಮಹತ್ವದ ಭಾಗಗಳನ್ನು ಸ್ಪಷ್ಟೀಕರಿಸಿದ ತರುವಾಯ ಅದರೊಳಗಿನ ಹಲಕೆಲವು ಸಂಗತಿಗಳ ಟಿಪ್ಪಣಿಯನ್ನು ಶಿಕ್ಷಕನು ಕರಿಯ ಹಲಗೆಯ ಮೇಲೆ ಬರೆಯುವನು; ವಿದ್ಯಾರ್ಥಿಗಳು ಅವನ್ನು ತಮ್ಮ ಟಿಪ್ಪಣಿ ಪುಸ್ತಕಗಳಲ್ಲಿ ನಕಲು ಮಾಡಿಕೊಳ್ಳುವರು. ಈ ನಕಲು ಮಾಡಿಕೊಳ್ಳುವ ಕೆಲಸವನ್ನು ವಿದ್ಯಾರ್ಥಿಗಳು ಪಾಠವು ಸಾಗಿರುವಾಗಲೇ ಮಾಡಿಕೊಳ್ಳಲು ಯತ್ನಿಸಿದರೆ ಅವರ ಲಕ್ಷ್ಯವು ವಿಷಯಾಂತರಕ್ಕೆ ಹೋಗಿ ಪಾಠಕ್ಕೆ ತೊಂದರೆಯುಂಟಾಗುವ ಸಂಭವವುಂಟು. ಹೆಚ್ಚು ಕುಶಲನಾದ ಶಿಕ್ಷಕನ ಕ. ಹ. ಯ ಮೇಲಿನ ಟಿಪ್ಪಣಿಗಳನ್ನು ಬರೆದುಕೊಳ್ಳಲಿಕ್ಕೆ ಸ್ವತಂತ್ರ ಅವಕಾಶದ ಆವಶ್ಯಕತೆಯುಳಿಯುವದಿಲ್ಲ. ಮತ್ತು ಪ್ರಬುದ್ಧ ವಿದ್ಯಾರ್ಥಿಗಳು ಇಂಥ ಟಿಪ್ಪಣಿಯನ್ನು ತಡೆಯಿಲ್ಲದೆ ಬರೆದುಕೊಂಡು ಬಿಡುವರು. ಹೀಗಿರುವದರಿಂದ ಶಿಕ್ಷಕನ ಕ. ಹ. ಯ ಮೇಲಿನ ಟಿಪ್ಪಣಿಯನ್ನು ವಿದ್ಯಾರ್ಥಿಗಳು ಯಾವಾಗ ಬರೆದುಕೊಳ್ಳಬೇಕೆಂಬ ಪ್ರಶ್ನೆಯನ್ನು ಶಿಕ್ಷಕರು ಪರಿಸ್ಥಿತಿಗೆ ತಕ್ಕಂತೆ ವಿಚಾರಮಾಡಿ ಬದಲಿಸಿಕೊಳ್ಳಬೇಕು.

(ಮುಂದೆಸಾಗುವುದು.)

ಮಹಾಯುದ್ಧದ ಭೂಗೋಲ

'An Atlas of the war' ಎಂಬ ಪುಸ್ತಕದ ಆಧಾರದಿಂದ

ಸದ್ಯದ ಮಹಾಯುದ್ಧದ ವರ್ತಮಾನಗಳನ್ನು ವೃತ್ತಪತ್ರಿಕೆಗಳಲ್ಲಿ ಓದುತ್ತಿರುವಾಗ ಅನೇಕ ದೇಶಗಳ ಮತ್ತು ಸ್ಥಳಗಳ ಹೆಸರುಗಳೂ ಅವುಗಳ ಭೌಗೋಲಿಕ ವಿಚಾರಗಳೂ ಬರುತ್ತಿವೆ. ಅವುಗಳ ಸರಿಯಾದ ತಿಳಿವಳಿಕೆಯಿಲ್ಲದಿದ್ದರೆ ಆ ಸಂಗತಿಗಳು ಚೆನ್ನಾಗಿ ಮನವರಿಕೆಯಾಗಲಾರವು. ಆದ್ದರಿಂದ ನಮ್ಮ ವಾಚಕರ ತಿಳಿವಳಿಕೆಗಾಗಿ ಇಲ್ಲಿ ಕೆಲವು ಸಂಗತಿಗಳನ್ನು ಕೊಟ್ಟಿರುವೆವು. ಅವನ್ನು 'An Atlas of the war' ಎಂಬ ಪುಸ್ತಕದಿಂದ ಆರಿಸಿಕೊಂಡಿವೆ.

೧. **ಮಧ್ಯ ಯುರೋಪ:**— ೧೯೧೪-೧೮. ಕಳೆದ ಮಹಾಯುದ್ಧದ ಪರಿಣಾಮದಿಂದ ಮೊದಲು ಒಂದೇ ರಾಜ್ಯವೆನಿಸಿಕೊಳ್ಳುತ್ತಿದ್ದ ಆಸ್ಟ್ರಿಯಾ ಮತ್ತು ಹಂಗರಿ ದೇಶಗಳು ಒಡೆದು ಎರಡು ಹೋಳಾದವು. ಝೆಕೋಸ್ಲೊವಾಕಿಯಾ ಎಂಬ ಹೊಸದೊಂದು ರಾಜ್ಯವುಂಟಾಯಿತು. ಪೋಲಂಡವು ಮೊದಲಿನಂತೆಯೇ ಉಳಿಯಿತು. ರೋಮಾನಿಯಾ ಸರ್ವಿಯಾಗಳಿಗೆ ಕೆಲವು ಭೂಪ್ರದೇಶಗಳು ಹೆಚ್ಚಿಗೆ ದೊರೆದವು.

ಮಧ್ಯ ಯುರೋಪವನ್ನೆಲ್ಲ ಆಕ್ರಮಿಸಲು ಹವಣಿಸಿದ ಜರ್ಮನಿಯು ತಾನು ೧೭೭೨ರಲ್ಲಿ ಆಕ್ರಮಿಸಿಕೊಂಡ ಕೊರಿಡಾರ ಪ್ರಾಂತವನ್ನು ಪೋಲಂಡಕ್ಕೆ ತಿರುಗಿ ಒಪ್ಪಿಸಬೇಕಾಯಿತು. ಖನಿಜ ದ್ರವ್ಯಗಳು ಹೇರಳವಾಗಿ ದೊರೆಯುವ ಸಿಲಿಸಿಯಾ ಪ್ರಾಂತದ ಮೇಲ್ಭಾಗವೂ ಕೂಡ ಪೋಲಂಡಕ್ಕೆ ಸೇರಿತು. ಡೆನ್ಮಾರ್ಕ್‌ಕ್ಕೂ ಕೆಲವೊಂದು ಭೂಭಾಗವು ದೊರೆಯಿತು. ಮೊದಲು ಜರ್ಮನಿಯ ವಶದಲ್ಲಿದ್ದ ಮೆಮೆಲ್ ಬಂದರವು ೧೯೨೩ರಲ್ಲಿ ಲಿಥುವೆನಿಯಾ ಪ್ರಾಂತಕ್ಕೆ ಸೇರಿತು. ಕಲ್ಲಿದ್ದಲಿಯ ಕಣಿಗಳ ಪ್ರದೇಶವಾದ ಸಾರಪ್ರಾಂತವು ೧೫ ವರ್ಷಗಳವರೆಗೆ ಫ್ರಾನ್ಸ್‌ಕ್ಕೆ ಕೊಡಲ್ಪಟ್ಟಿತು. ಅದರಂತೆಯೇ ಕಬ್ಬಿಣದ ಕಣಿಗಳಿರುವ ಲಾರೆನ್ಸ್ ಪ್ರಾಂತದ ಬಹುಭಾಗವೂ ಪೋಟಾಶ ಮತ್ತು ಕಲ್ಲೆಣ್ಣೆಗಳ ಕಣಿಗಳಿರುವ ಅಲ್ಸೆಸ್ ಪ್ರಾಂತವೂ ಫ್ರಾನ್ಸ್‌ಕ್ಕೆ ಕಾಯಂ ಆಗಿ ದೊರೆತವು. ೧೮೭೦ ರಲ್ಲಾದ ಫ್ರಾಂಕೋ ಜರ್ಮನ್ ಯುದ್ಧದಲ್ಲಿ ಜರ್ಮನಿಯು ಈ ಪ್ರದೇಶಗಳನ್ನು ಫ್ರಾನ್ಸ್‌ದಿಂದ ಸೆಳೆದುಕೊಂಡಿದ್ದಿತು.

೨. **ಮಧ್ಯಯುರೋಪ:**— ೧೯೧೪-೨೫. ೧೯೨೫ ರಲ್ಲಿ ಜರ್ಮನಿ, ಬೆಲ್ಜಿಯಮ್, ಫ್ರಾನ್ಸ್, ಬ್ರಿಟನ್, ಇಟಲಿ, ಪೋಲಂಡ ಮತ್ತು ಝೆಕೋಸ್ಲೊವಾ

ಕಯಾ ದೇಶಗಳು ಲೋಕಾರ್ನೊವಿನಲ್ಲಿ ಸೇರಿ ಮಧ್ಯ ಯುರೋಪದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವ ಒಂದು ಒಪ್ಪಂದವನ್ನು ಮಾಡಿಕೊಂಡವು. ಜರ್ಮನಿಯಲ್ಲಿ ನಾಝೀ ರಾಜ್ಯವು ಪ್ರಾರಂಭವಾದ ತರುವಾಯವೂ (೧೯೩೩) ಈ ಒಪ್ಪಂದವು ಅಸ್ತಿತ್ವದಲ್ಲಿದ್ದಿತು. ಈ ಒಪ್ಪಂದದ ಕರಾರಿಗೆ ಅನುಸಾರವಾಗಿ ೧೯೩೩ ನೆಯ ಇಸ್ವಿಯ ಮಾರ್ಚ ತಿಂಗಳ ೧೧ನೆಯ ತಾರೀಖಿಗೆ ಸಾರಪ್ರಾಂತವು ಜರ್ಮನಿಗೆ ತಿರುಗಿ ದೊರೆಯಿತು. ೧೯೩೬ರಲ್ಲಿ ಜರ್ಮನಿಯು ಲೋಕಾರ್ನೊ ಒಪ್ಪಂದದ ಕರಾರುಗಳನ್ನು ಮುರಿಯಿತು; ಇಷ್ಟೇ ಅಲ್ಲ; ವರ್ಸೆಲಿಸ್ ಒಪ್ಪಂದವನ್ನು ಕೂಡ ಅದು ಮನ್ನಿಸದಂತಾಯಿತು. ೧೯೩೯ರಲ್ಲಿ ಬೊಹೆಮಿಯಾ ಪ್ರಾಂತವು ಸಂರಕ್ಷಿತ ರಾಜ್ಯವೆಂದು ಗಣಿಸಲ್ಪಟ್ಟಿತು. ಸ್ಲೋವ್ಹಾಕಿಯಾವು ಸ್ವತಂತ್ರವಾಗಿಯೇ ಉಳಿಯಿತು. ಲುಥೇನಿಯಾವು ಹಂಗರಿಗೆ ಜೋಡಿಸಲ್ಪಟ್ಟಿತು. ಲಿಥುವೇನಿಯಾವು ತನ್ನ ವಶದಲ್ಲಿದ್ದ ಮೆಮೊಲ ಬಂದರವನ್ನು ಜರ್ಮನಿಗೆ ತಿರುಗಿ ಕೊಟ್ಟಿತು. ಡಾಂಝಿಂಗ ಮತ್ತು ಪೋಲಂಡಗಳು ಮಾತ್ರ ಜರ್ಮನಿಯು ತನ್ನ ರಾಜ್ಯವನ್ನು ಪೂರ್ವದ ಕಡೆಗೆ ಬೆಳಿಸುವದಕ್ಕೆ ಅಡ್ಡಿಯಾಗುವಂತೆ ಪೂರ್ವದಿಕ್ಕಿಗೆ ಅಡ್ಡಗಟ್ಟಿ ಉಳಿದುಕೊಂಡವು.

೩. **ಜರ್ಮನಿ**:— ಜರ್ಮನಿಯು ಮಧ್ಯ ಯುರೋಪದಲ್ಲಿ ಒಳ್ಳೇ ಔದ್ಯೋಗಿಕ ಜೀವನದ ರಾಷ್ಟ್ರವೆನಿಸಿಕೊಂಡಿದೆ. ದೇಶದ ತುಂಬ ಪ್ರವಾಸಕ್ಕೆ ಅನುಕೂಲವಾದ ಮಾರ್ಗಗಳಿವೆ. ಕೂಲಿಕಾರರು ಸುಶಿಕ್ಷಿತರು. ಆದರೆ ಈ ದೇಶಕ್ಕೆ ಪ್ರಾಕೃತಿಕ ಅನುಕೂಲತೆ ಕಡಿಮೆ; ಕಲ್ಲಿದ್ದಲಿಯ ಹೊರತು ಎಣಿಕ್ಕುಳಿದ ಜನಿಜಗಳು ಈ ದೇಶದಲ್ಲಿಲ್ಲ. ಕಬ್ಬಿಣವು ತೀರ ಸ್ವಲ್ಪ ಪ್ರಮಾಣದಿಂದ ದೊರೆಯುವದು. ಕಲ್ಲೆಣ್ಣೆಯ ಕಣಿಗಳೇ ಇಲ್ಲ. ಒಕ್ಕಲುತನದ ಕಾಳುಕಡಿಗಳೂ ಮಾಂಸವೂ ಈ ದೇಶದಲ್ಲಿ ಸಾಕಷ್ಟು ದೊರೆಯುವವು. ನಾರು ಅಲ್ಪಸ್ವಲ್ಪ ದೊರೆಯುವದು. ಆದರೆ ಹತ್ತಿಯು ಹುಟ್ಟುವದೇ ಇಲ್ಲ. ಆದ್ದರಿಂದ ಜರ್ಮನಿಯು ತನ್ನ ಔದ್ಯೋಗಿಕ ಕೇಂದ್ರಗಳಿಗೂ ಜೀವನಕ್ಕೂ ಬೇಕಾಗುವ ಇವೆಲ್ಲ ಕಚ್ಚಾ ಸರಕುಗಳನ್ನು ಪರದೇಶದಿಂದ ಕೊಂಡುಕೊಳ್ಳಬೇಕಾಗುವದು.

೪. **ಜರ್ಮನಿಯ ವಸಾಹತುಗಳು**:— ಹಿಂದಿನ ಮಹಾಯುದ್ಧದಿಂದ (೧೯೧೪ರಲ್ಲಿ) ಕಳೆದುಕೊಂಡ ವಸಾಹತುಗಳನ್ನು ತಿರುಗಿ ದೊರಕಿಸಿಕೊಳ್ಳುವದು ಈಗಿನ ಮಹಾಯುದ್ಧದ ಮಹತ್ವದ ಕಾರಣಗಳಲ್ಲಿ ಒಂದೆಂದು ನಾಝಿ ಸರಕಾರದ ಹೇಳಿಕೆಯಿರುವದಷ್ಟೇ? ಇವುಗಳಲ್ಲಿ ಆಫ್ರಿಕಾಖಂಡದಲ್ಲಿ ಬ್ರಿಟಿಷರ ಮೇಲ್ವಿಚಾರಣೆಗೆ ಒಳಗಾದ ಜರ್ಮನ್ ವಸಾಹತುಗಳೇ ಮುಖ್ಯವಾದವು. ಅವು ಯುರೋಪಿಯನ್ನರ ನಿವಾಸಕ್ಕೆ ಅನುಕೂಲವಾದುವಲ್ಲ, ಇಷ್ಟೇ ಅಲ್ಲ, ಆರ್ಥಿಕ

ದೃಷ್ಟಿಯಿಂದಲೂ ಅವಕ್ಕೆ ಅಷ್ಟೊಂದು ಮಹತ್ವವಿಲ್ಲ. ೧೯೩೬ರಲ್ಲಿ ಪರದೇಶಗಳಿಂದ ಜರ್ಮನಿಗೆ ಬಂದ ಸರಕುಗಳಲ್ಲಿ ೧೦೦ರಲ್ಲಿ ಒಂದು ಪಾಲಿನಷ್ಟು ಸಹ ಈ ವಸಾಹತು ಗಳಿಂದ ಬಂದಿಲ್ಲ. ಆಧುನಿಕ ಔದ್ಯೋಗಿಕ ಜೀವನಕ್ಕೆ ಅವಶ್ಯಕವೆನಿಸುವ, ಕಲ್ಲಿದ್ದಲು ಕಬ್ಬಿಣ, ಕಲ್ಲೆಣ್ಣೆ, ಹತ್ತಿ, ರಬ್ಬರು, ತಾಮ್ರ ಇವುಗಳಲ್ಲಿ ಯಾವದೂ ಜರ್ಮನಿಯ ವಸಾಹತುಗಳಲ್ಲಿ ಉಪಲಬ್ಧವಾಗಿಲ್ಲ. ಹೀಗಿದ್ದರೂ ನಾಝಿಗಳು ತಮ್ಮ ವಸಾಹತುಗಳು ವಸಾಹತುಗಳು ಎಂದು ಹಂಬಲಿಸಿ ಹಲುಬಲು ಕಾರಣವೇನು? ಯುದ್ಧೋಪಯೋಗಿಯಾದ ಭದ್ರಸ್ಥಳಗಳು ಮತ್ತು ಜನರ ಪೂರೈಕೆ ಇವನ್ನಷ್ಟೇ ಆಧುನಿಕ ಜರ್ಮನಿಯು ಈ ವಸಾಹತುಗಳಿಂದ ಬಯಸುವದು. ಈ ಸ್ಥಳಗಳಲ್ಲಿ ಹಡಗುಪಡೆಯ ಮತ್ತು ವೈಮಾನಿಕದಳಗಳ ಕೇಂದ್ರಗಳನ್ನು ರಚಿಸಿಕೊಂಡು ಅಲ್ಲಿಯ ಜನರಿಗೆ ಯುದ್ಧ ಶಿಕ್ಷಣ ಕೊಟ್ಟು ತನ್ನ ಸೈನಿಕ ಬಲವನ್ನು ಹೆಚ್ಚಿಸಿಕೊಳ್ಳುವ ಹಂಬಲ ದಿಂದ ಜರ್ಮನಿಯು ಈ ವಸಾಹತುಗಳಿಗಾಗಿ ಹೆಣಗಾಡುತ್ತಿದೆ. ಜರ್ಮನಿಯು ಈ ಕೇಂದ್ರಗಳಲ್ಲಿ ಭದ್ರವಾದ ಕಾವಲಿಟ್ಟು ಬ್ರಿಟಿಷರ ವಾಯುಮಾರ್ಗ ಜಲಮಾರ್ಗ ಗಳನ್ನು ಪ್ರತಿಬಂಧಿಸಲು ಬಯಸುವದು. ಭೂಮಧ್ಯ ಸಮುದ್ರದ ದಾರಿಯು ಕಟ್ಟಾದಾಗ ಕೇಪ ಆಫ್‌ಗುಡ್ ಹೋಪದ ಮಾರ್ಗವಾಗಿ ಸಂಚರಿಸುವ ಹಡಗು ಗಳಿಗೆ ಜರ್ಮನಿಯ ಈ ವಸಾಹತುಗಳೊಳಗಿನ ನೌಕಾಕೇಂದ್ರಗಳು ಪ್ರತಿಬಂಧಕ ವಾಗುವ ಸಂಭವವುಂಟು.

೫. **ಪೋಲಂಡ**:— ಪೋಲಂಡದ ರಾಜ್ಯವು ೧೦-೧೩ನೆಯ ಶತಮಾನ ಗಳಲ್ಲಿ ಸ್ಥಾಪಿತವಾಯಿತು. ಮುಂದೆ ಅದು ವಿಸ್ತಾರ ಹೊಂದಿದರೂ ಆಗಾಗ ರಶಿಯಾ ಆಸ್ಟ್ರಿಯಾ ದೇಶಗಳು ಅದನ್ನು ಹರಿದು ಹಂಚಿಕೊಳ್ಳುತ್ತಲೇ ಇದ್ದವು. ೧೯೧೯ರಲ್ಲಿ ಮೊದಲನೆಯ ಮಹಾಯುದ್ಧದ ತರುವಾಯ ಜರ್ಮನಿ, ಆಸ್ಟ್ರಿಯಾ ಹಂಗರಿ ಮತ್ತು ರಶಿಯಾ ದೇಶಗಳಿಂದ ಕೆಲಕೆಲವು ಭೂಭಾಗಗಳು ಸೇರಿ ಪೋಲಂಡದ ರಾಜ್ಯವು ಪುನಃ ಉದಯವಾಯಿತು. ಆಗ ಪೋಲ ಭಾಷೆಯನ್ನಾ ಡುವ ಜನರು ವಾಸಿಸುವ ಎಲ್ಲ ಪ್ರದೇಶವೂ ಸಮುದ್ರ ದಂಡೆಯ ಕೆಲವೊಂದು ಭಾಗವೂ ಈ ರಾಜ್ಯಕ್ಕೆ ಸೇರಿದವು. ೧೯೩೧ನೆಯ ಇಸ್ವಿಯಲ್ಲಾದ ಜನಗಣನೆಯ ಮೇರೆಗೆ ಅಲ್ಲಿ ೧೦೦ರಲ್ಲಿ ೬೯ರಷ್ಟು ಪೋಲ ಜನರೂ ಉಳಿದವರಲ್ಲಿ ಯುಕ್ರೇನಿಯನ್ನರು ಜ್ಯೂಗಳು ಜರ್ಮನ್ನರು ರಶಿಯನ್ನರು ಝುಕ್ಕರು ಮೊದಲಾದವರೂ ಇದ್ದರೆಂದು ಗೊತ್ತಾಗುವದು.

ಪೋಲಂಡವು ಯುರೋಪದ ಬಯಲು ಪ್ರದೇಶದಲ್ಲಿರುವದು. ಆದರ ಪ್ರಾಕೃತಿಕ ಮೇರೆಗಳು ಸ್ವಸಂರಕ್ಷಣೆಯ ದೃಷ್ಟಿಯಿಂದ ಅನುಕೂಲವಾಗಿಲ್ಲ.

ಪೂರ್ವದ ಕಡೆಯ ಪ್ರಿಪೆಟ ಜವುಳು ಪ್ರದೇಶ, ದಕ್ಷಿಣ ದಿಕ್ಕಿಗಿರುವ ಕಾರ್ಪಾಥಿಯನ್ ಪರ್ವತ ಇವು ಮಾತ್ರ ತಕ್ಕಮಟ್ಟಿಗೆ ನೈಸರ್ಗಿಕ ಭದ್ರವಾದ ಮೇರೆಗಳಾಗಿವೆ. ಈ ಭಾಗದಲ್ಲಿ ಆ ದೇಶದಮೇಲೆ ಶತ್ರುಗಳ ದಾಳಿಗಳು ಕಡಿಮೆ.

ಪೋಲಂಡವು ಒಕ್ಕಲುತನದ ದೇಶವು. ಅಲ್ಲಿ ಸುಮಾರು ಮೂರುವರೆ ಕೋಟಿ ಜನವಸತಿಯಿದೆ. ಮತ್ತು ಇಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನ ವಸತಿಯಿರುವ ೧೨ ನಗರಗಳಿರುವವು. ೧೦೦ರಲ್ಲಿ ೬೦ರಷ್ಟು ಜನರು ಒಕ್ಕಲುತನ ಮೀನು ಹಿಡಿಯುವ ಮತ್ತು ವನಗಾವಲಿನ ಉದ್ಯೋಗಗಳಿಂದ ಜೀವಿಸುವರು.

ರಾಯ್ ಧಾನ್ಯ ಮತ್ತು ಬಟಾಟೆ ಇವು ಅಲ್ಲಿಯ ಒಕ್ಕಲುತನದ ಮುಖ್ಯ ಹುಟ್ಟುವಳಿಗಳು. ಪೋಲಂಡದಲ್ಲಿ ಒಂದು ಒಳ್ಳೆಯ ಕಲ್ಲಿದ್ದಲಿಯ ಕಣಿಯಿರುವದು. ಕಾರ್ಪಾಥಿಯನ್ ಪರ್ವತದ ಸೆರೆಯಲ್ಲಿ ಕಲ್ಲೆಣ್ಣೆಯ ಕಣಿಗಳಿರುವವು. ಲೀಡ ನಗರದ ಬಳಿಯಲ್ಲಿ ಹತ್ತಿಯ ಗಿರಣಿಗಳಿವೆ. ಸೀಸು, ತವರು ಕಬ್ಬಿಣ ಮೊದಲಾದ ಧಾತುಗಳ ಕಣಿಗಳು ಸಾಯ್‌ಲೇಶಿಯಾದಲ್ಲಿ ಇರುವವು. ಪೋಲಂಡದಿಂದ ಹರಿದು ಬಂದ ವಿಸ್ತುಲಾನದಿಯು ಡಾಂಯ್ಸಿಂಗದ ಬಳಿಯಲ್ಲಿ ಸಮುದ್ರಕ್ಕೆ ಕೂಡುವದು. ೧೯೨೦ ರಲ್ಲಿ ಡಾಂಯ್ಸಿಂಗವು ಸ್ವತಂತ್ರವಾದ ಬಳಿಕ ಪೋಲಂಡವು ಗಾಡ್ನಿಯಾ ಎಂಬ ಬೇರೊಂದು ಬಂದರವನ್ನು ಕಟ್ಟಿಕೊಂಡಿತು.

೬. **ಬಾಲ್ಟಿಕ್ ರಾಷ್ಟ್ರಗಳು :—** ೧೯೧೪ರ ಮಹಾಯುದ್ಧದ ತರುವಾಯ ಯುರೋಪ ಖಂಡದ ಪೂರ್ವಭಾಗದಲ್ಲಿ ರಶಿಯದ ವರ್ಚಸ್ಸು ಬೆಳೆಯಿತು. ಬಾಲ್ಟಿಕ್ ಸಮುದ್ರದ ದಂಡೆಯಲ್ಲಿ ಫಿನ್‌ಲಂಡ್, ಎಸ್ತೋನಿಯಾ, ಲಾಟವಿಯಾ, ಲಿಥುವೆನಿಯಾ ಎಂಬ ಚಿಕ್ಕ ಸಂಸ್ಥಾನಗಳು ಉದಯಹೊಂದಿದವು. ಪ್ರಾಕೃತಿಕ ಪರಿಸ್ಥಿತಿಯಮೇಲಿಂದ ನೋಡಿದರೆ ಅಲ್ಲಿ ಜನವಸತಿಯು ಬೆಳೆಯುವ ಸಂಭವವಿಲ್ಲ. ಜನವಸತಿಗಳೆಲ್ಲ ಬಹುತರವಾಗಿ ಸಮುದ್ರ ದಂಡೆಯಲ್ಲಿರುವವು. ಈ ಸಂಸ್ಥಾನಗಳೂ ನಾರ್ವೆ, ಸ್ವೀಡನ್, ಡೆನ್ಮಾರ್ಕ ದೇಶಗಳೂ ಸೇರಿ ಸುಮಾರು ೨ ಕೋಟಿ ೨೦ ಲಕ್ಷ ಜನಸಂಖ್ಯೆಯಿರುವದು. ಈ ದೇಶಗಳಿಂದ ಪರದೇಶಗಳಿಗೆ—ಜರ್ಮನಿಗೂ, ಪ್ರಾಮುಖ್ಯವಾಗಿ ಗ್ರೇಬ್ರಿಟನ್ನಕ್ಕೂ ಆಹಾರದ ಪದಾರ್ಥಗಳು ಕಳುಹಿಸಲ್ಪಡುವವು. ಉತ್ತರದ ಕಡೆಯ ಸಂಸ್ಥಾನಗಳಲ್ಲಿ ದಟ್ಟಾದ ಅಡವಿಯು ಹಬ್ಬಿರುವದು. ಈ ಪ್ರದೇಶಗಳಿಂದ ಕಟ್ಟಿಗೆ ಅಥವಾ ಕಟ್ಟಿಗೆಯ ಕೈಗಾರಿಕೆಯ ಒಡವೆಗಳು ಪರದೇಶಕ್ಕೆ ಹೋಗುವವು. ಇವಲ್ಲದೆ ಸ್ವೀಡನ್ನಿಂದ ಜರ್ಮನಿಗೆ ಕಬ್ಬಿಣದ ಅದುರು ವಿಶೇಷವಾಗಿ ಹೋಗುವದು. ಮತ್ತು ನಾರ್ವೆ ದೇಶದಿಂದ ತವರು, ಗಂಧಕ, ಪಾಯರಾಟ್ಸ್ ಎಂಬ ಗಂಧಕ ಮಿಶ್ರಿತ ಧಾತು ಇವು ಪರಸ್ಥಳಗಳಿಗೆ ಕಳುಹಿಸಲ್ಪಡುವವು.

ಬ್ರಿಟನ್ನಕ್ಕೆ ಪರದೇಶಗಳಿಂದ ಬರುವ ಸರುಕುಗಳಲ್ಲಿ ೧೦೦ಕ್ಕೆ ೧೦ರಷ್ಟು ಮಾತ್ರ ಈ ಬಾಲ್ಟಿಕ್ ರಾಷ್ಟ್ರಗಳಿಂದ ಬರುವವು. ಪ್ರಕೃತದ ಮಹಾಯುದ್ಧದ ಮೂಲಕ ಈ ವ್ಯಾಪಾರವು ಕಟ್ಟಾಗಿದೆ; ಆದರೂ ಈ ಎಲ್ಲ ಸಾಮಗ್ರಿಗಳನ್ನು ಬ್ರಿಟನ್ನವು ಇತರ ದೇಶಗಳಿಂದ ದೊರಕಿಸಿಕೊಳ್ಳಲಿಕ್ಕೆ ಸಾಧ್ಯವಿರುವದು.

೭. **ರಶಿಯದ ರಾಜ್ಯ** :— ವಿಸ್ತಾರವಾನದಿಂದ ನೋಡಿದರೆ ಬ್ರಿಟಿಷ ಸಾಮ್ರಾಜ್ಯದ ತರುವಾಯವೇ ಇದರ ಸ್ಥಾನವು ಬರುವದು. ಇದರಲ್ಲಿ ಒಟ್ಟು ೧೭ ಕೋಟಿ ಜನವಸತಿಯಿದ್ದು ಜನದಟ್ಟಣೆಯ ಮಾನವು ಪ್ರತಿ ಚೌರಸ ಮೈಲಿಗೆ ೨೫ ರಂತೆ ಹೊರಡುವದು. ರಶಿಯದ ಸೈನ್ಯದ ಮಾನವು ಜಗತ್ತಿನ ಎಲ್ಲ ರಾಷ್ಟ್ರಗಳಿಗಿಂತ ಮಿಗಿಲಾಗಿದೆ. ರಶಿಯದ ಉತ್ಪನ್ನದ ಮಾನವೂ ದೊಡ್ಡದು. ಬಾರ್ಲಿ, ರಾಯ್, ಓಟ ಧಾನ್ಯ, ಬಟಾಟೆ, ಸಕ್ಕರೆ, ಬೀಟಗಡ್ಡೆ, ನಾರು, ನಾರಿನ ಚೀಲಗಳು ಇವು ರಶಿಯಾದಿಂದ ಪರದೇಶಕ್ಕೆ ಹೋಗುವವು. ಕಟ್ಟಿಗೆ, ಕಲ್ಲೆಣ್ಣೆ, ಉಣ್ಣೆ, ಕಬ್ಬಿಣ, ಕಲ್ಲಿದ್ದಲಿ, ಬಂಗಾರ ಇವೂ ಈ ದೇಶದಲ್ಲಿ ವಿಪುಲವಾಗಿ ದೊರೆಯುವವು. ಹತ್ತಿ, ಉಷ್ಣವಲಯದಲ್ಲಿ ಬೆಳೆಯುವ ಇತರ ಸಾಮಗ್ರಿ ಇವೂ ರಶಿಯದಲ್ಲಿ ತಕ್ಕ ಪ್ರಮಾಣದಿಂದ ಹುಟ್ಟುವವು. ಈ ಎಲ್ಲ ಸಾಮಗ್ರಿಗಳು ರಶಿಯದ ಆಧುನಿಕ ಔದ್ಯೋಗಿಕ ಪ್ರಗತಿಗೆ ಅನುಕೂಲವಾಗಿವೆ, ಇಷ್ಟೇ. ಆದರೆ ಈ ಸಾಮಗ್ರಿಗಳ ಉತ್ಪನ್ನದ ಮಾನದಿಂದ ನೋಡಿದರೆ ಅವು ಹೊರಗೆ ಹೋಗುವ ಪ್ರಮಾಣವು ತೀರ ಚಿಕ್ಕದೆನಿಸುವದು.

೮. **ಭೂಮಧ್ಯ ಸಮುದ್ರ** :— ಯುರೋಪಖಂಡದ ವ್ಯಾಪಾರದ ಬಹು ದೊಡ್ಡ ಭಾಗವು ಭೂಮಧ್ಯ ಸಮುದ್ರದ ಮಾರ್ಗವಾಗಿ ನಡೆಯುವದು. ಇರಾಣದ ಪೆಟ್ರೋಲು, ಬಂಗಾಲದ ಜೂಟನಾರು, ಮಲಾಯಾ ಈಸ್ಟ ಇಂಡಿಯನ್ ದ್ವೀಪಗಳಿಂದ ಬರುವ ರಬ್ಬರು, ತವರು ಇವು ಭೂಮಧ್ಯ ಸಮುದ್ರದ ಮಾರ್ಗವಾಗಿಯೇ ಇಂಗ್ಲಂಡಕ್ಕೆ ಹೋಗುವವು. ಆವಶ್ಯಕವೆನಿಸಿದಾಗ ಇಂಗ್ಲಂಡವು ತನ್ನ ವ್ಯಾಪಾರವನ್ನು ಕೇಪ ಆಫ್ ಗುಡ್‌ಹೋಪದ ಮಾರ್ಗವಾಗಿಯೂ ಪಾನಾಮಾ ಕಾಲುವೆಯ ದಾರಿಯಿಂದಲೂ ಸಾಗಿಸಿಕೊಳ್ಳಲು ಅನುಕೂಲವಿದೆ. ಇಜಿಪ್ತದ ಹತ್ತಿ, ಫ್ರೆಂಚ ಆಫ್ರಿಕಾದ ಕಬ್ಬಿಣ ಮತ್ತು ಫಾಸ್ಫೇಟುಗಳ ಅದುರುಗಳು, ಹೈಫಾದ ಮಾರ್ಗವಾಗಿ ಬರುವ ಇರಾಕದ ಕಲ್ಲೆಣ್ಣೆ, ಇವು ಭೂಮಧ್ಯ ಸಮುದ್ರದ ಮಾರ್ಗವಾಗಿಯೇ ಇಂಗ್ಲಂಡಕ್ಕೆ ಬರಬೇಕು. ಭೂಮಧ್ಯ ಸಮುದ್ರದ ದಾರಿಯಲ್ಲಿರುವ ಜಿಬ್ರಾಲ್ಟರ್, ಮಾಲ್ಟಾ, ಸೈಪ್ರೆಸ್, ಪಾಲಿಸ್ತಾಯಿನದ ಪ್ರದೇಶಗಳು ಇವು ಬ್ರಿಟಿಷರ ಆಧೀನದಲ್ಲಿರುವಲ್ಲದೆ ಈ ದಾರಿಯಲ್ಲಿರುವ ಇತರ ದೇಶಗಳ ಸಂಗಡವೂ ಬ್ರಿಟನ್ನವು ತಕ್ಕಂತೆ

ಒಪ್ಪಂದಮಾಡಿಕೊಂಡಿದೆ. ೧೯೩೬ ರಲ್ಲಿ ಇಜಿಪ್ತವು ಜರ್ಮನಿಯ ಸಂಬಂಧವನ್ನು ಕಡಿದುಕೊಂಡು ಬ್ರಿಟಿಷರ ನೆರವಿಗೆ ಬಂದಿದೆ. ೧೯೩೯ ರಲ್ಲಿ ಗ್ರೀಸ ತುರ್ಕಸ್ತಾನಗಳ ಸಂಗಡವೂ ಬ್ರಿಟನ್ನವು ತಕ್ಕ ಒಪ್ಪಂದವನ್ನು ಮಾಡಿಕೊಂಡಿರುವದು.

ಇಟಲಿಯ ಮುಖ್ಯಾಧಿಕಾರಿಯಾದ ಡ್ಯೂಸನ ಅಭಿಪ್ರಾಯದಂತೆ ಭೂಮಧ್ಯ ಸಮುದ್ರವೇ ಇಟಲಿಯ ಜೀವಸ್ಥಾನವೆನಿಸುವದು. ಇಟಲಿಗೆ ಬರುವ ಸರಕಿನಲ್ಲಿ ನೂರರಲ್ಲಿ ೬೫ ರಷ್ಟು ಭಾಗವು ಭೂಮಧ್ಯಸಮುದ್ರದ ಮಾರ್ಗವಾಗಿ ಬರುವದು. ಇಟಲಿಗೆ ಬರುವ ಎಣ್ಣೆಯ ಅರ್ಧದಷ್ಟು ಜಿಬ್ರಾಲ್ಟರದಿಂದ ಬರುವದು. ಫ್ರಾನ್ಸಸ್ಕೂ ಕೂಡ ಭೂಮಧ್ಯಸಮುದ್ರವು ತುಂಬ ಮಹತ್ವವುಳ್ಳ ದಾರಿಯಾಗಿದೆ. ಫ್ರಾನ್ಸಸ್ದ ವಶದಲ್ಲಿರುವ ಮಾರ್ಸೆಲಿಸ್, ಟ್ಯೂನಿಸ್ ಮತ್ತು ಅಲ್ಜೀರಿಯಾಗಳಿಗೆ ಭೂಮಧ್ಯ ಸಮುದ್ರದಲ್ಲಿಯೇ ಹಾಯ್ದು ಹೋಗಬೇಕಾಗುವದು.

೯. **ಬಾಲ್ಕನ್ ರಾಷ್ಟ್ರಗಳು:—** ಮಧ್ಯ ಯುರೋಪಕ್ಕೂ ಭೂಮಧ್ಯ ಸಮುದ್ರಕ್ಕೂ ನಡುವೆ ಬಲಗಡೆಗೆ ಬಾಲ್ಕನ್ ರಾಷ್ಟ್ರಗಳಿವೆ. ಏಶಿಯಾ ಖಂಡಕ್ಕೂ ಯುರೋಪದ ಮಧ್ಯಭಾಗಕ್ಕೂ ಸಂಬಂಧವನ್ನುಂಟುಮಾಡುವ ಈ ದ್ವೀಪಕಲ್ಪ ದಲ್ಲಿ ಐತಿಹಾಸಿಕಕಾಲದಲ್ಲಿ ಅನೇಕ ಘಟನೆಗಳು ನಡೆದಿರುವದನ್ನು ನಾವು ಮರೆಯು ವಂತಿಲ್ಲ. ಆಹಾರದ ಪದಾರ್ಥಗಳು, ತಂಬಾಕು, ಇಮಾರತಿಯ ಕಟ್ಟಿಗೆ, ಖನಿಜ ಗಳು, ಎಣ್ಣೆ, ಇವು ಈ ಭಾಗದಿಂದ ಮಧ್ಯ ಯುರೋಪಕ್ಕೆ-ಮುಖ್ಯವಾಗಿ ಜರ್ಮನಿಗೆ ಹೋಗುವವು. ಜರ್ಮನಿಗೆ ಹೋಗುವ ತಂಬಾಕು, ನಾರು, ಬಣ್ಣದ ಅದುರು ಇವುಗಳ ಅರ್ಧಭಾಗವೂ ನಿಕೆಲ್ ಧಾತುವಿನ ಮೂರರಲ್ಲೊಂದು ಭಾಗವೂ ಪೆಟ್ರೋ ಲಿನ ಐದರಲ್ಲೊಂದು ಭಾಗವೂ ಈ ಬಾಲ್ಕನ್ ರಾಷ್ಟ್ರಗಳಿಂದಲೇ ಹೋಗುವವು. ಇಟಲಿಗೂ ತುರ್ಕಸ್ತಾನಕ್ಕೂ ಈ ಬಾಲ್ಕನ್ ರಾಷ್ಟ್ರಗಳ ಸುರಕ್ಷಿತತೆಯು ತುಂಬ ಆವಶ್ಯಕವಾಗಿದೆ.

ಜರ್ಮನಿಯು ಬಾಲ್ಕನ್ ರಾಷ್ಟ್ರಗಳಿಂದ ತನಗೆ ಬೇಕಾಗುವ ಕಚ್ಚಾ ಸರಕು ಗಳನ್ನು ದೊರಕಿಸಿಕೊಳ್ಳುವದಿಷ್ಟೇ ಅಲ್ಲದೆ ತಾನು ತಯಾರಿಸುವ ಕೈಗಾರಿಕೆಯ ಒಡವೆಗಳನ್ನು ಮಾರುವದಕ್ಕೆ ಸಹ ಈ ರಾಷ್ಟ್ರಗಳ ಮೇಲೆ ಅವಲಂಬಿಸಬೇಕಾಗು ವದು. ಇಟಲಿಯು ಅಲ್ಬೆನಿಯಾವನ್ನು ಆಕ್ರಮಿಸಿಕೊಂಡಂದಿನಿಂದ ಅಡ್ರಿಯಾತಿಕ್ ಸಮುದ್ರದಲ್ಲಿ ಇಟಲಿಗೂ ಯುಗೊಸ್ಲಾವಿಯಾಕ್ಕೂ ಇದ್ದ ಪರಸ್ಪರ ವಿರೋಧ ಭಾವವು ದಿನ ದಿನಕ್ಕೆ ಬೆಳೆಯುತ್ತ ಸಾಗಿತು.

(ಮುಂದೆ ಸಾಗುವದು.)

ಆಧುನಿಕ ರಣರಂಗದಲ್ಲಿ ಹಡಗುಪಡೆಯ ಸ್ಥಾನ

(ಮುಂದೆ ಸಾಗಿದ್ದು)

ಸನ್ ೧೯೩೬ನೆಯ ಇಸವಿಯಲ್ಲಿ ಸಬ್‌ಮರೀನ ಸಭೆಯವರು "ಸಬ್‌ಮರೀನು ಗಳ ಮತ್ತು ನೀರಮೇಲೆ ಓಡಾಡುವ ಹಡಗುಗಳ ನಿಯಮಗಳು ಒಂದೇ ಇರಬೇಕು" ಎಂದು ನಿರ್ಣಯಿಸಿದರು. ಅಂತರ್‌ರಾಷ್ಟ್ರೀಯ ಕಾಯಿದೆಯ ಮೇರೆಗೆ ಹಡಗುಗಳ ಮೇಲಿನ ನಾವಿಕರನ್ನೂ ಪ್ರವಾಸಿಕರನ್ನೂ ಸಂರಕ್ಷಿಸುವದು ಪ್ರತಿಯೊಂದು ರಾಷ್ಟ್ರದ ಕರ್ತವ್ಯವು. ಆ ನಿಯಮಾನುಸಾರವಾಗಿ ನೋಡಿದರೆ ನಾವಿಕರಿಗೂ ಪ್ರವಾಸಿಕರಿಗೂ ಪೂರ್ವ ಸೂಚನೆ ಕೊಡದೆ ಹಡಗುಗಳನ್ನು ಮುಳುಗಿಸುವದು ನೀತಿಬಾಹ್ಯ ನಿಯಮಬಾಹ್ಯವೆನಿಸುವದಲ್ಲದೆ ಕಾಯಿದೆಗೆ ವಿರುದ್ಧವಾದ ಕೆಲಸವೆನಿಸುವುದು. ಹೀಗಿರುವಾಗ ಪ್ರಕೃತದ ಮಹಾಯುದ್ಧದಲ್ಲಿ ಜರ್ಮನ್ ಕಪ್ತಾನರೂ ಸಬ್‌ಮರೀನುಗಳ ಚಾಲಕರೂ ಯಾವ ತರದ ಪೂರ್ವ ಸೂಚನೆಗಳನ್ನೂ ಕೊಡದೆ ಮಿತ್ರರಾಷ್ಟ್ರಗಳ ಮತ್ತು ತಟಸ್ಥ ರಾಷ್ಟ್ರಗಳ ಅನೇಕಾನೇಕ ಹಡಗುಗಳನ್ನು ಮುಳುಗಿಸಿರುವರು. 'ಅರ್ಲಿಂಗ್‌ಟನ್' ಎಂಬ ಹಡಗವು ಇದಕ್ಕೊಂದು ಪ್ರತ್ಯಕ್ಷ ಉದಾಹರಣೆಯಾಗುವದು. ಇದರೊಳಗಿನ ಪ್ರವಾಸಿಕರು ನಾಲ್ಕು ದಿವಸಗಳ ವರೆಗೆ ನಿರಾಶ್ರಿತ ಸ್ಥಿತಿಯಲ್ಲಿ ಕಾಲಕಳೆಯಬೇಕಾಯಿತು; ಎಷ್ಟೋ ಜನರು ಸಮುದ್ರದಲ್ಲಿ ಮುಳುಗಿ ಸತ್ತರು; ಎಷ್ಟೋ ಜನರ ಪತ್ತೆಯೇ ಹತ್ತಲಿಲ್ಲ. ಕಳೆದ ಮಹಾಯುದ್ಧದಲ್ಲಿಯೂ ಜರ್ಮನಿಯು ಇಂಥ ಅನೇಕ ಕ್ರೂರಕೃತ್ಯಗಳನ್ನು ನಡೆಯಿಸಿತು. ಔಷಧಾಲಯವಿರುವ ಮತ್ತು ಶುಶ್ರೂಷಾ ಪಥಕವಿರುವ ಎಷ್ಟೋ ಹಡಗುಗಳನ್ನು ಅವು ಯುದ್ಧಕಾರ್ಯಕ್ಕೆ ಸಹಾಯಮಾಡುತ್ತವೆಂಬ ನೆವನದಿಂದ ಜರ್ಮನ್ನರು ಮುಳುಗಿಸಿಬಿಟ್ಟರು.

ಕಳೆದ ಮಹಾಯುದ್ಧದಲ್ಲಿ ಜರ್ಮನಿಯು ಅಂತರ್‌ರಾಷ್ಟ್ರೀಯ ಕಾಯಿದೆಯನ್ನು ಭಂಗಮಾಡಿ ಜಲಸುರಂಗಗಳನ್ನು ಉಪಯೋಗಿಸಿತು. ಪ್ರಕೃತದ ಮಹಾಯುದ್ಧದಲ್ಲಿಯೂ ಅದೇ ಕ್ರಮವನ್ನು ಇನ್ನಷ್ಟು ದೊಡ್ಡ ಪ್ರಮಾಣದಿಂದ ನಡೆಯಿಸಿರುವದು. ತಟಸ್ಥ ರಾಷ್ಟ್ರಗಳ ಹಕ್ಕು ಬಾಧ್ಯತೆಗಳ ಅರಿವೇ ಇಲ್ಲದಂಥ ವರ್ತನೆಯಿಂದ ಜರ್ಮನಿಯು ಜಗತ್ತಿನ ವಿರುದ್ಧ ದಿಕ್ಕಿಗೆ ಸಾಗಿರುವದು. ೧೯೦೭ನೆಯ ಇಸವಿಯಲ್ಲಿ ಹೇಗ ಪಟ್ಟಣದಲ್ಲಿ ಕೂಡಿದ ಪರಿಷತ್ತಿನಲ್ಲಿ ಯಾವದೊಂದು ದೇಶದ ದಂಡೆಗೆ ಹೊಂದಿದ ಪ್ರದೇಶದಲ್ಲಿಯಷ್ಟೇ ಜಲಸುರಂಗಗಳನ್ನು ಹಾಕಬಹುದೆಂದು ನಿರ್ಣಯವಾಗಿತ್ತು. ಜರ್ಮನಿಯು ಈ ಮಾತಿಗೂ ಸಮ್ಮತಿಸಲಿಲ್ಲ.

ಜಲಸುರಂಗಗಳಲ್ಲಿ ನೀರ ಮೇಲೆ ತೇಲಾಡುವವ್ವ, ನೀರೊಳಗೆ ಮುಳುಗಿ ನಿಲ್ಲುವವ್ವ, ಎಂಬ ಎರಡು ಪ್ರಕಾರಗಳಿರುವವ್ವ. ಜರ್ಮನಿಯು ಈ ಎರಡೂ

ಪ್ರಕಾರದ ಜಲಸುರಂಗಗಳನ್ನು ವಿಸ್ತಾರವಾದ ಮಹಾಸಾಗರ ಪ್ರದೇಶದಲ್ಲಿ ಬೇಕಾದಲ್ಲಿ ಯಾವ ನಿಯಮವನ್ನೂ ಪಾಲಿಸದೆ ಪಸರಿಸುವದು. ಇದರಿಂದ ನಾರ್ವೆ, ಸ್ವೀಡನ್, ಡೆನ್ಮಾರ್ಕ, ಹಾಲಂಡ, ಇಟಲಿ, ಜಪಾನ ಮುಂತಾದ ಅನೇಕ ರಾಷ್ಟ್ರಗಳ ಅಸಂಖ್ಯ ಪ್ರವಾಸಿಕರೂ ನಾವಿಕರೂ ಜಲಸಮಾಧಿ ಹೊಂದ ಬೇಕಾಯಿತು.

ಪ್ರಕೃತದ ಮಹಾಯುದ್ಧದಲ್ಲಿ ಜರ್ಮನಿಯು ಇಂಗ್ಲಂಡದ ಸುತ್ತಲೂ ಜಲ-ಸುರಂಗಗಳನ್ನು ಪಸರಿಸಿ ಅದರ ಹೊರಭಾಗದಿಂದ ಇಂಗ್ಲಂಡವನ್ನು ಮುತ್ತಲು ಹವಣಿಸುತ್ತಿದೆ. ಯುದ್ಧಕಾಲದಲ್ಲಿ ಪ್ರತ್ಯಕ್ಷ ಯುದ್ಧದಲ್ಲಿ ತೊಡಗದೆ ಇದ್ದ ತಟಸ್ಥ ರಾಷ್ಟ್ರಗಳ ಹಡಗುಗಳಿಗೆ ತೊಂದರೆಯಾಗದಂತೆ ನಡೆದುಕೊಳ್ಳಬೇಕಾಗು ವದು. ಮತ್ತು ಪೂರ್ವಸೂಚನೆಯಿಲ್ಲದೆ ಆಕ್ರಮಣಮಾಡಿ ಹಡಗುಗಳನ್ನು ಮುಳುಗಿಸುವದು ಮಾನವಧರ್ಮಕ್ಕೆ ವಿರೋಧವಾದ ಕ್ರೂರಕೃತ್ಯವೆನಿಸುವದು. ಯಾವದೊಂದು ಹಡಗದ ಕಪ್ತಾನನು ನಿಯಮಭಂಗಮಾಡಿ ಅಯೋಗ್ಯ ರೀತಿ ಯಿಂದ ನಡೆದರೆ ಆ ಹಡಗವನ್ನು ಸೆರೆಹಿಡಿಯುವದು, ಅದರ ವಿರುದ್ಧ ನ್ಯಾಯ-ಕೋರ್ಟಿನಲ್ಲಿ 'ಫಿರ್ಯಾದಿ' ಮಾಡುವದು, ಮೊದಲಾದ ಸರಳ ಮಾರ್ಗಗಳಿರುವವು. ಜರ್ಮನಿಯು ಈ ಮಾತನ್ನೆಲ್ಲ ದುರ್ಲಕ್ಷಿಸಿ ಟಾರ್ಪೆಡೊ ಜಲಸುರಂಗ ಮುಂತಾದ ಸಾಧನಗಳಿಂದ ಕಣ್ಣಲ್ಲಿ ಕಂಡ ಹಡಗನ್ನೆಲ್ಲ ಮುಳುಗಿಸುತ್ತ ಸಾಗಿರುವದು.

ಜಲಸುರಂಗಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಎರಡು ಉಪಾಯಗಳಿರು ವವು. ಕೆಲವು ಹಡಗುಗಳು ಸಂತತವಾಗಿ ಕಾವಲುಮಾಡುತ್ತ ಸಂಚರಿಸಿ ಇಂಥ ಜಲಸುರಂಗಗಳನ್ನು ತೆಗೆದುಹಾಕುವದು. ಇದರಿಂದ ಚಿಕ್ಕ ಪುಟ್ಟ ಅಖಾತ ಉಪ-ಸಾಗರಗಳ ದಾರಿಯನ್ನು ಸುರಕ್ಷಿತವಾಗಿಡಬಹುದು. ಮತ್ತು ಚಿಕ್ಕ ಯುದ್ಧದ ಹಡಗುಗಳ ಮತ್ತು ವಿಮಾನಗಳ ನೆರವಿನಿಂದ ಇಂಥ ಜಲಸುರಂಗಗಳನ್ನು ಹರಡುವ ಹಡಗುಗಳನ್ನು ನಾಶಮಾಡುವದು. ಸಮುದ್ರದ ತಳಕ್ಕೆ ಕಟ್ಟಿದ ಜಲಸುರಂಗ ಗಳನ್ನು ಹಡಗುಗಳಿಂದ ಸಂಗ್ರಹಿಸಬಹುದು. ಜರ್ಮನಿಯು ಇತ್ತೀಚೆಗೆ ಉಪ-ಯೋಗಿಸುತ್ತಿರುವ ಲೋಹಚುಂಬಕ ಜಲಸುರಂಗಗಳನ್ನು ಹೀಗೆ ಸಂಗ್ರಹಿಸಲು ಬರುವದಿಲ್ಲ. ಯಾಕೆಂದರೆ ಹೀಗೆ ಅವನ್ನು ಸಂಗ್ರಹಿಸಲು ಯತ್ನಿಸುತ್ತಿರುವಾಗಲೆ ಅದು ಹಡಗಕ್ಕೆ ಅಪ್ಪಳಿಸಿ ಹಾರಿಬಿಡುವದು. ನೀರ ಮೇಲೆ ತೇಲಾಡುವ ಸುರಂಗ ಗಳನ್ನು ಸಂಗ್ರಹಿಸುವದು ಸುಲಭವಲ್ಲ. ಅವನ್ನು ಸಮುದ್ರ ದಂಡೆಯಲ್ಲಿಯೂ ನಡುಸಮುದ್ರದಲ್ಲಿಯೂ ಹಾಕುವರು. ಇವು ನೀರ ಮೇಲೆಯೆ ಇರುತ್ತಿದ್ದರೂ ರಾತ್ರಿಯಲ್ಲಿ ಕಾಣಿಸುತ್ತಿರುವದಿಲ್ಲ. ಹಗಲು ಹೊತ್ತಿನಲ್ಲಿಯೂ ಸಹ ನೀರಿನ ಚಲನೆಯಲ್ಲಿ ಇವನ್ನು ಕಂಡುಹಿಡಿಯುವದು ಕಠಿಣವಾಗುವದು. ಮತ್ತು ಇವು

ಸಮುದ್ರದ ಏರಿಳಿತಗಳ ಮೂಲಕ ಹುಟ್ಟುವ ಪ್ರವಾಹದೊಡನೆ ಕಂಡ ಕಡೆಗೆ ಹರಿದು ಹೋಗಿಬಿಡುವವು. ಆದ್ದರಿಂದ ಇವನ್ನು ಹಾಕಿದವರಿಗೂ ಸಹ ಇವು ಇರುವ ಸ್ಥಾನವು ಗೊತ್ತಾಗದೆ ಹೋಗಿ ತಮ್ಮ ಸುರಂಗದಿಂದ ತಾವೇ ಅಪಾಯ ಹೊಂದಿದ ಉದಾಹರಣೆಗಳೂ ಅನೇಕವಿರುವವು. ಕೆಲವೊಂದು ಕಾಲಾವಧಿಯ ತರುವಾಯ ಇವುಗಳ ಶಕ್ತಿಯು ನಷ್ಟವಾಗಿ, ಹಾರದಂತಾಗಿ ಬಿಡುವವೆಂದು ಹೇಳುವದುಂಟು.

ಜರ್ಮನಿಯು ಈ ರೀತಿ ಕಾಯದೆಯನ್ನು ಮನ್ನಿಸದೆ ನೀತಿ-ರೀತಿಗಳನ್ನು ಗಣಿಸದೆ ಅಮಾನುಷ ರೀತಿಯಿಂದ ನಡೆಯುತ್ತಿರುವದು ಜಗತ್ತಿನ ನಿದರ್ಶನಕ್ಕೆ ಬಂದಿದೆ. ಜರ್ಮನ್ನರ ಯುದ್ಧನೀತಿಯಲ್ಲಿ ನಾವಿಕರ ಜೀವಕ್ಕೆ ಬೆಲೆಯೇ ಇಲ್ಲ. ಮೀನು ಹಿಡಿಯುವದಕ್ಕಾಗಿ ಹೋಗುವ ಹಡಗುಗಳನ್ನು ಸಹ ಮುಳುಗಿಸಲು ಜರ್ಮನ್ನರು ಹಿಂದೆಗೆಯುವದಿಲ್ಲ. ಉತ್ತರ ಸಮುದ್ರದಲ್ಲಿ ಇಂಥ ಅನೇಕ ಹಡಗು ಗಳನ್ನು ಮುಳುಗಿಸಿ ತಾವು ಶತಕೃತ್ಯ ಮಾಡಿದೆವೆಂದು ಹೊಗಳಿಕೊಳ್ಳುವ ಜರ್ಮನ್ ಕಪ್ತಾನರ ಕಾರ್ಯಸಾಹಸಗಳನ್ನು ಏನೆಂದು ವರ್ಣಿಸಬೇಕು ? ನೀತಿ-ರೀತಿಗಳನ್ನೂ ಅಂತರ್ರಾಷ್ಟ್ರೀಯ ಕಾಯದೆಗಳನ್ನೂ ಮನ್ನಿಸದೆ ಕೊನೆಗೆ ಮಾನವ ಧರ್ಮವನ್ನು ಕೂಡ ಮರೆತು ನಡೆಯುವ ಜರ್ಮನಿಯು ಜಗತ್ತಿನ ದ್ರೋಹವನ್ನು ಬಗೆದು ಅಖಿಲ ಪ್ರಪಂಚದ ಹಗೆತನವನ್ನು ಗಳಿಸಿಕೊಳ್ಳಲು ಹೊರಟಿದೆಯೆಂದು ಬಹು ವಿಷಾದದಿಂದ ಹೇಳಬೇಕಾಗಿದೆ.

ಪ್ರ ಕ ಟ ನೆ

ಕಳೆದ ತಿಂಗಳ ಪ್ರಾಥಮಿಕ ಶಿಕ್ಷಣ (ಅಕ್ಟೋಬರ ಸಂಚಿಕೆಯ ೨೧ನೆಯ ಪುಟ) ದಲ್ಲಿ ಪ್ರಕಟಿಸಿದಂತೆ ಗ್ರಂಥಕರ್ತರೂ ಪ್ರಕಾಶಕರೂ ತಮ್ಮ ಪುಸ್ತಕಗಳನ್ನು ಪಾಠ ಪುಸ್ತಕಗಳನ್ನು ರಚಿಸುವ ಮತ್ತು ಪರೀಕ್ಷಿಸುವ ಸಮಿತಿಯ ಮುಂದಿಡುವ ದಕ್ಕಾಗಿ ನೊವ್ಹೆಂಬರ (೧೯೪೦) ತಿಂಗಳ ೧೦ ನೆಯ ತಾರೀಖಿನೊಳಗಾಗಿ ಕಳುಹಿಸ ಬೇಕಾಗಿದ್ದಿತು. ಆದರೆ ಈಗ ಆ ಕಾಲಾವಧಿಯನ್ನು ಇನ್ನೊಂದು ತಿಂಗಳ ಹೆಚ್ಚಿಗೆ ಬೆಳೆಯಿಸಿದ್ದಾರೆ. ಪುಸ್ತಕಗಳನ್ನು ಕಳುಹಿಸಲಿಚ್ಛಿಸುವ ಗ್ರಂಥಕರ್ತರೂ ಪ್ರಕಾಶ ಕರೂ ತಾ. ೧೧-೧೨-೧೯೪೦ ರವರೆಗೂ ನಮ್ಮ ಕಡೆಗೆ ಕಳುಹಿಸಲಿಕ್ಕೆ ಅಡ್ಡಿಯಿಲ್ಲ.

Training School,
DHARWAR.

R. S. Madiman,
Head Master.

ಮುಸ್ತಾಫಾ ಕಮಾಲ ಅತಾತುರ್ಕ

ಹದಿನಾರನೆಯ ಶತಮಾನದಲ್ಲಿ ತುರ್ಕೀಸಾಮ್ರಾಜ್ಯವು ಅತ್ಯಂತ ಘನತೆಗೇರಿತ್ತು. ಕಾನಸ್ತಾಂತಿನೋಪಲ್ಲದ ರಾಜಧಾನಿಯಲ್ಲಿ ಆಳುತ್ತಿದ್ದ ಸುಲ್ತಾನ ಸುಲೇಮಾನನ ಸಾಮ್ರಾಜ್ಯವು ಏಶಿಯಾ ಆಫ್ರಿಕಾ ಯುರೋಪಗಳೆಂಬ ಮೂರೂ ಭೂಖಂಡಗಳಲ್ಲಿ ಹಬ್ಬಿದ್ದಿತು. ಆಫ್ರಿಕಾಖಂಡದ ಉತ್ತರಭಾಗವನ್ನೆಲ್ಲ ಆಳುತ್ತಿದ್ದ ಆ ಸುಲ್ತಾನನ ಹಡಗುಪಡೆಯು ಭೂಮಧ್ಯಸಮುದ್ರದಲ್ಲಿಯೂ ಕಪ್ಪುಸಮುದ್ರದಲ್ಲಿಯೂ ತನ್ನ ಅವಿಚ್ಛಿನ್ನ ಅಧಿಕಾರವನ್ನು ನಡೆಯಿಸುತ್ತಿದ್ದಿತು. ೧೫೨೦ನೆಯ ಇಸವಿಯಲ್ಲಿ ಮಹಾಸೈನ್ಯವು 'ವಿಯೆನ್ನಾ' ನಗರದ ಬಾಗಿಲಿಗೆ ಬಂದು ನಿಂತಾಗ ಪಶ್ಚಿಮ ಯುರೋಪಖಂಡವೂ ಕೂಡ ತುರ್ಕಿ ಸುಲ್ತಾನನ ಕೈವಶವಾಗುವ ದೆಲ್ಲಿಯೋ ಎಂಬ ಭಯವುಂಟಾಯಿತು.

ಕಾಲಗತಿಯು ಬದಲಾಯಿತು. ಸುಲ್ತಾನನು ಈ ಕದನದಲ್ಲಿ ಸೋತನು. ಅಂದಿನಿಂದ ತುರ್ಕೀಸಾಮ್ರಾಜ್ಯದ ಅವನತಿಗೆ ಮೊದಲಾಯಿತು. ತುರ್ಕೀ ಸಾಮ್ರಾಜ್ಯದ ಮುಂದಿನ ಮುನ್ನೂರು ವರ್ಷಗಳ ಇತಿಹಾಸವೆಂದರೆ ಹದ್ದು ಮುತ್ತಿದ ಹೆಣದ ವರ್ಣನೆಯೆಂದು ಹೇಳುವದುಂಟು. ಗ್ರೀಸ, ಸೈಬೇರಿಯಾ, ಬಲ್ಗೇರಿಯಾಗಳು ಸ್ವತಂತ್ರವಾದವು. ರಶಿಯಾ, ಫ್ರಾನ್ಸ, ಇಂಗ್ಲಂಡಗಳು ತಮು ತಮಗೆ ಶಕ್ಯವಿದ್ದ ಭಾಗಗಳನ್ನು ಹರಿದುಹಂಚಿಕೊಂಡವು. ೧೯೧೪ರ ಸುಮಾರಕ್ಕೆ ತುರ್ಕಸಾಮ್ರಾಜ್ಯವು ಯುರೋಪಖಂಡವೆಂಬ ಮನೆಯೊಳಗಿನ "ಮಹಾರೋಗಿ" ಯೆಂದೆನ್ನಿಸಿಕೊಳ್ಳುವಷ್ಟು ಅವನತಸ್ಥಿತಿಗೆ ಬಂದಿತ್ತು. ಸುಲ್ತಾನನ ಅವಿವೇಕದ ರಾಜನೀತಿಯೂ ಜನತೆಯ ಅಂಧಶ್ರದ್ಧೆಯೂ ಮಹಮ್ಮದೀಯ ಧರ್ಮಗುರುಗಳ ಕುರುಡು ವಿಚಾರಗಳೂ ರಾಷ್ಟ್ರಪುರುಷನ ರಕ್ತನಾಳಗಳನ್ನೆಲ್ಲ ಕೆಡಿಸಿ ರಕ್ತಹೀನ, ಶಕ್ತಿಹೀನಮಾಡಿದ್ದವು. ಅಲ್ಲಿಯ ಗಂಡುಸರು ಗಾಣದೆತ್ತಿನಂತೆ ಇಲ್ಲವೆ ಅಗಸನ ಕತ್ತೆಯಂತೆ ಮಾಡಿದ್ದನ್ನು ಮಾಡಿಸಿಕೊಳ್ಳುವ ಸ್ಥಿತಿಯಲ್ಲಿದ್ದರು. ಹೆಂಗುಸರೆಂದರೆ ಮನೆಯ ಮೂಲೆಯಲ್ಲಿ ಮುಸುಕಿನಲ್ಲಿ ಮುಚ್ಚಿಟ್ಟು ಮಕ್ಕಳನ್ನು ಹೆರುವ ಯಂತ್ರಗಳಂತಾಗಿದ್ದರು. ಕಳೆದ ಮಹಾಯುದ್ಧದ ಪರಿಣಾಮದಿಂದ ಸುಲ್ತಾನನು ಮಿತ್ರರಾಷ್ಟ್ರಗಳ ಕೈಗೊಂಬೆಯಂತಾಗಲು ದೇಶದ ಅಧೋಗತಿಯು ಕೊನೆಗೆ ಮುಟ್ಟಿದಂತಾಯಿತು. ಕಾಲಚಕ್ರದ ಗತಿಯಲ್ಲಿ ಏರಿಳಿತಗಳು ಸ್ವಾಭಾವಿಕವಾಗಿ

ಬಂದೇಬರುವವು. ಈ ನಿಯಮಾನುಸಾರವಾಗಿ ತುರ್ಕಸ್ತಾನಕ್ಕೂ ಅಕಸ್ಮಾತ್ ಉದಯಕಾಲವು ಬರುವ ಸೂಚನೆಯಾಯಿತು. ಕಾಲುಶತಮಾನಕ್ಕಿಂತ ಕಡಿಮೆ ಅವಧಿಯಲ್ಲಿ ಅದು ತನ್ನ ಪೂರ್ವದ ಸಾಮ್ರಾಜ್ಯವನ್ನಲ್ಲದೆ ಇದ್ದರೂ ವೈಭವವನ್ನೆಲ್ಲ ಮತ್ತೆ ಪಡೆಯಿತು. ಅದೊಂದು ಸ್ವತಂತ್ರ ರಾಷ್ಟ್ರವೆನ್ನಿಸಿಕೊಂಡಿತು. ಅದಕ್ಕೊಬ್ಬ ಮಹಾವ್ಯಕ್ತಿಯು ಕಾರಣನಾದನು. ಅವನ ಹೆಸರು **ಮುಸ್ತಾಫಾ ಕಮಾಲ ಅತಾತುರ್ಕ.**

ತುರ್ಕಸ್ತಾನದ ಹಳೆಯ ನಗರಗಳಲ್ಲೊಂದಾದ ಸಾಲೋನಿಕಾದ ಒಂದು ಓಣಿಯಲ್ಲಿದ್ದ ಮುರುಕುಮನೆಯೊಂದರಲ್ಲಿ ಅಲಿರಿಝಾ ಎಂಬ ಗ್ರಹಸ್ಥನು ಝುಬೇದಾ ಎಂಬ ಹೆಂಡತಿಯೊಡನೆ ವಾಸವಾಗಿದ್ದನು. ಗಲಭೆಯ ಇಸ್ವಿಯಲ್ಲಿ ಇವರಿಗೆ ಒಂದು ಗಂಡುಮಗು ಹುಟ್ಟಲು ಅದಕ್ಕೆ 'ಮುಸ್ತಾಫಾ' ಎಂದು ಹೆಸರಿಟ್ಟರು. ಮುಸ್ತಾಫಾನು ಚಿಕ್ಕವನಿರುವಾಗಲೇ ತಂದೆ ತೀರಿಕೊಳ್ಳಲು ಮೊದಲೇ ಬಡತನವಲ್ಲಿ ಬಳಲುತ್ತಿದ್ದ ಮನೆತನವು ಇನ್ನಷ್ಟು ದಾರಿದ್ರ್ಯಕ್ಕೆ ಎಡೆಯಾಯಿತು. ಕೈಯಲ್ಲಿ ಕಾಸಿಲ್ಲ. ದಿನದ ಅಡುಗೆಯ ಸಾಮಗ್ರಿಗಳನ್ನಷ್ಟೇ ಅದರೂ ಮೈಮುರಿ ದುಡಿದುತರುವ ಗಂಡನೂ ಕೈಬಿಟ್ಟನು. ಸಾಲದುದಕ್ಕೆ ಗೋಷೆಯ ಹೆಣ್ಣುತನ ಬೇರೆ. ಇಂತಹ ಸ್ಥಿತಿಯಲ್ಲಿಯೂ ಝುಬೇದಾಳಿಗೆ ತನ್ನ ಮಗನು ಕಲಿತು ದೊಡ್ಡವನಾಗಬೇಕೆಂಬ ಹಂಬಲವಿದ್ದೇಯಿದ್ದಿತು; ಆದರೆ ಮಗನಿಗೆ ಮಾತ್ರ ತಾಯಿಯ ಈ ಒಲವಿನ ವಿಷಯದಲ್ಲಿ ಎಷ್ಟೂ ಪ್ರೀತಿಯಿರಲಿಲ್ಲ. ಪತಿಯ ಮರಣದಿಂದ ಬಡತನದ ಬಾಧೆಯು ಹೆಚ್ಚಿ ನಿರ್ಗತಿಕಳಾದ ಝುಬೇದಾಳು ತಮ್ಮನ ಮನೆಯನ್ನು ಆಶ್ರಯಿಸಲು ಮುಸ್ತಾಫಾನು ಶಾಲೆಯನ್ನು ಬಿಟ್ಟು ಮಾವನ ದನಕಾಯುವ ಕೆಲಸಕ್ಕೆ ಹೋಗಬೇಕಾಯಿತು. "ಸಾಲೆ ತಪ್ಪಿತಲ್ಲಾ" ಎಂದು ಅವನಿಗೆ ಅದೊಂದು ಸಂತೋಷದ ಕೆಲಸವೆನಿಸಿತಂತೆ. ಝುಬೇದಾಳು ತನ್ನ ತಂಗಿಯ ನೆರವಿನಿಂದ ಮಗನನ್ನು ಮತ್ತೆ ಸಾಲೆಗೆ ಕಳುಹಿಸಿದಳು. ಮುಸ್ತಾಫಾನು ಹಟಮಾರಿ; ಜಗಳಗಂಟನಲ್ಲದೆ ಇದ್ದರೂ ಜಗಳದಲ್ಲಿ ಹೆದರದಿರುವ ಬಂಟ; ಎಲ್ಲರಿಗಿಂತ ತಾನೇ ಹೆಚ್ಚಿನವನೆನ್ನುವ ಹೆಮ್ಮೆಯ ಹುಡುಗ. ಮಿಕ್ಕವರೊಡನೆ ಕೂಡಿನಡೆಯದಿರುವ ಸ್ವಭಾವಕ್ಕಾಗಿ ಒಮ್ಮೆ ಸಾಲೆಯಲ್ಲಿ ಶಿಕ್ಷಕನಿಲ್ಲದಿರುವ ಸಮಯ ನೋಡಿ ನಾಲ್ಕಾರು ಹುಡುಗರು ಮುಸ್ತಾಫಾನೊಡನೆ ಜಗಳ ತೆಗೆದರು. ಬಲವಾದ ಮೈಕಟ್ಟಿನ ಈ ಒಂಟಿಗನು ಒಬ್ಬೊಬ್ಬರಿಗೆ ಒಂದೊಂದು ಕಡಬುಕೊಟ್ಟು ಎದುರಾಳಿಗಳ ಹಿಂಡನ್ನೆಲ್ಲ ಚದರಿಸಿದನು. ಈ ಮುಷ್ಟಿಯುದ್ಧವು ನಡೆದಿರುವಾಗಲೇ ಶಿಕ್ಷಕನು ಒಳಗೆ ಬಂದನು! ಎಲ್ಲರೂ ದಿಕ್ಕುದಿಕ್ಕಿಗೆ ಓಡಿ, ಯಾರು ಹಿತ್ತಲಬಾಗಿಲಿಂದ, ಯಾರು ಕಿಡಿಕಿಗಳಿಂದ ಹಾರಿ, ಮರೆಯಾದರು.

ಮುಸ್ತಾಫಾನು ಮಾತ್ರ ಕಟ್ಟಿದ್ದ ಮುಷ್ಟಿಯನ್ನು ಬಿಚ್ಚದೆ ಮೋರೆಯ ಗಂಟನ್ನು ಸಡಿಲಿಸದೆ ಬಿಗುವಿನಿಂದಲೇ ನಿಂತಿದ್ದನು. ಈ ಬಗೆಯ ಉದ್ಧತತನವು ಸಾಲೆಯ ಬಾಲಕರ ಮೇಲಿನ "ಸರ್ವಾಧಿಕಾರಿ"ಗೆ ಸಹನವಾಗಲಿಲ್ಲ. ಅವನು ತುರ್ಕೀ ಸಾಮ್ರಾಜ್ಯದ ಭವಿಷ್ಯದ ಸರ್ವಾಧಿಕಾರಿಯಾಗಲುಳ್ಳ ಬಾಲಕನನ್ನು ಮನದಣಿಯೆ ದಂಡಿಸಿದನು. ಬಾಲಕನು ತುಟಿಬಿಡಿಸಿ ಮಾತಾಡಲಿಲ್ಲ. ಆ ತನ್ನ ದರ್ಪೋದ್ಧತವಾದ ನಡಿಗೆಯಿಂದಲೇ ಸಾಲೆಯಿಂದ ಹೊರಟು ನಡೆದನು. ತಿರುಗಿ ಆ ಸಾಲೆಯೆಲ್ಲಿ ಕಾಲಿಡಲಿಲ್ಲ. ಹೆರವರ ನೆರವಿನಿಂದ ಹೇಗೋ ಸಾಗಿಸಿದ ಮಗನ ಶಿಕ್ಷಣವು ಈ ರೀತಿ ನಿಂತುಹೋಗಲು ಝುಬೇದಾಳು ಮುಮ್ಮಲ ಮರುಗಿ ಪರಿಪರಿಯಿಂದ ಹೇಳಿಕೊಂಡರೂ ಆ ಹಟಮಾರಿ ಹುಡುಗನು ಕೇಳಲಿಲ್ಲ. 'ಶಿಕ್ಷಕನಾದರೇನು, ಯಾರಾದರೇನು, ನಾನು ಅನ್ಯಾಯದ ಅಪಮಾನವನ್ನು ಎಂದಿಗೂ ಸಹಿಸಲಾರೆನು' ಎಂದು ಆ ಹನ್ನೆರಡು ವರುಷದ ಹಸುಳನು ಖಂಡಿತವಾಗಿ ನುಡಿದುಬಿಟ್ಟನು.

ತಾಯಿಮಕ್ಕಳ ಮನೋವೃತ್ತಿಯು ಹೊಯಿದಾಟವನ್ನೂ ಮುಸ್ತಾಫಾನ ಧೀರೋದಾತ್ತಭಾವವನ್ನೂ ಕಂಡ ಅತನ ಸೋದರಮಾವನು "ನಿನಗೆ ಈ ಹಲಗೆ ಬಳಪಗಳ ಸಾಲೆ ಸರಿಹೋಗದಿದ್ದರೆ ಕತ್ತಿ ಕುದುರೆಗಳ ಸಾಲೆಗೆ ಹೋಗಿ ಸೈನಿಕನಾಗು" ಎಂದು ಮೂದಲಿಸಿ ಮಾತಾಡಿದನು. ಇದರಿಂದ ಮುಸ್ತಾಫಾನ ಅಂತಃಕರಣದ ಸುಪ್ತಪ್ರವೃತ್ತಿಯು ಜಾಗೃತವಾದಂತಾಗಿ ಮರುದಿನವೇ ತನ್ನ ತಂದೆಯ ಮಿತ್ರನಾದ ಸೇನಾಧಿಕಾರಿಯೊಬ್ಬನ ಬಳಿಗೆ ಹೋಗಿ ಅವನ ಸಹಾಯದಿಂದ ಸೈನಿಕರ ಶಿಕ್ಷಣದ ಸಂಸ್ಥೆಯನ್ನು ಸೇರಿದನು. ದಾರಿತಪ್ಪಿ ಕುರಿಯು ಮಂದೆಗೆ ಹೊರಟ ಸಿಂಹದ ಮರಿಯು ತಿರುಗಿ ಗವಿಗೆ ಬಂದಂತಾಯಿತು.

ಮುಸ್ತಾಫಾನು ಅಭಿಮಾನದ ಉದ್ಧತ ನಡತೆಯ ಮೂಲಕ ಮಿಕ್ಕ ವಿದ್ಯಾರ್ಥಿಗಳೊಡನೆ ಕೂಡಿನಡೆಯದೆ ಇದ್ದರೂ ತೀಕ್ಷ್ಣಬುದ್ಧಿಯ ಮೂಲಕ ತನ್ನ ಗುರುಗಳ ಪ್ರೀತಿಯ ಶಿಷ್ಯನಾಗಿ ಮಿಕ್ಕವರನ್ನು ಮೀರಿನಿಂತನು. 'ಮುಸ್ತಾಫಾ' ಎಂಬದೇ ಹೆಸರಿನ ಅಲ್ಲಿಯ ಒಬ್ಬ ಶಿಕ್ಷಕನು ತನ್ನ ಹೆಸರನ್ನು ವಿಂಗಡಿಸಿಕೊಳ್ಳಲು ಅವನನ್ನು ಮುಸ್ತಾಫಾ ಕೆಮಾಲ (ಕೆಮಾಲ ಎಂದರೆ ಅತ್ಯುತ್ತಮ, ಘನವಂತ, ಎಂದು ಅರ್ಥ.) ಎಂದು ಪ್ರೀತಿಯಿಂದ ಕರೆದನು. ಈ ಸಾಲೆಯಲ್ಲಿ ಮುಸ್ತಾಫಾನ ಶಿಕ್ಷಣವು ಚೆನ್ನಾಗಿ ಸಾಗಿ ಅವನು ತನ್ನ ಗುರುಗಳ ಮುದ್ದಿನ ಹೆಸರನ್ನು ಸಾರ್ಥಕಗೊಳಿಸಿ ಕೆಮಾಲನೇ ಆದನು. ಅವನು ಇಪ್ಪತ್ತು ವರ್ಷದವನಾದಾಗ ಕಾನ್‌ಸ್ಟಂಟಿನೋಪಲ್‌ದಲ್ಲಿ ಸೈನ್ಯದ ಅಧಿಕಾರಿಗಳಿಗೆ ತಕ್ಕ ಹೆಚ್ಚಿನ ಶಿಕ್ಷಣ ಕೊಡುವ ವಿದ್ಯಾಲಯಕ್ಕೆ ಕಳುಹಿಸಲ್ಪಟ್ಟನು.

ಬಡತನದ ಬಳಲಿಕೆಯಿಂದ ಬೆಂದ ಕೆಮಾಲನ ತಾಯಿ ಝುಬೇದಾಳು ಮಗನ ಶಿಕ್ಷಣಕ್ಕೆ ತಕ್ಕ ಸೌಕರ್ಯವನ್ನೂ ಧನಸಹಾಯವನ್ನೂ ದೊರಕಿಸುವ ಗುರಿಯಿಂದ ಒಬ್ಬ ಶ್ರೀಮಂತನೊಡನೆ ಪುನರ್ವಿವಾಹ ಮಾಡಿಕೊಂಡಳು. ಮಗನ ಶ್ರೇಯಸ್ಸನ್ನೂ ಸುಖಸಮಾಧಾನಗಳನ್ನೂ ತನ್ನ ಧ್ಯೇಯವಾಗಿಟ್ಟುಕೊಂಡ ತಾಯಿಯ ಹೃದಯದ ಗುಟ್ಟನ್ನರಿಯಲಾರದೆ ಮುಸ್ತಾಫಾನು ಅವಳ ಈ ಕೃತಿಯು ಧರ್ಮಸಮ್ಮತವಾಗಿದ್ದರೂ ಅದೊಂದು ಸುಖದ ಲಾಲಸೆಯೆಂದು ತಿಳಿದು ತಿರಸ್ಕರಿಸಿದನು. ತಾಯಿಯು ಮಗನ ತಿರಸ್ಕಾರವನ್ನು ತಾಳಿಕೊಂಡು ಇಂದಿಲ್ಲ ನಾಳೆ ಮಗನಿಗೆ ತನ್ನ ಮನೋಗತವು ತಿಳಿದರೆ ತಿಳಿಯಲಿ; ಇಲ್ಲದಿದ್ದರೂ ಚಿಂತೆಯಿಲ್ಲ; ಇದರಿಂದ ಮಗನ ಕಷ್ಟವೇನೋ ದೂರಾಯಿತು; ಇಷ್ಟೇ ತನಗೆ ಸಾಕು; ಎಂದು ಸಮಾಧಾನಮಾಡಿಕೊಂಡಳು. ಇದಕ್ಕೇ ತಾಯಿಯ ಕರುಳೆನ್ನುವುದು.

ಶಿಕ್ಷಣ ಪಡೆಯಲು ಕಾನ್‌ಸ್ತಂತಿನೋಪಲಕ್ಕೆ ಹೋದ ಕೆಮಾಲನು ದೇಶೋದ್ಧಾರವನ್ನು ಗುರಿಯಾಗಿಟ್ಟು ಕೆಲಸಮಾಡುವ "ಮಾತೃಭೂಮಿ" ಎಂಬ ಕ್ರಾಂತಿಕಾರಕ ತರುಣರ ಸಂಘವನ್ನು ಸೇರಿ ಸುಲ್ತಾನನ ಕೋಪಕ್ಕೆ ಗುರಿಯಾದನು. ಸುಲ್ತಾನನ ಅಧಿಕಾರಿಗಳು 'ಮಾತೃಭೂಮಿ' ಸಂಘದ ತರುಣರನ್ನೆಲ್ಲ ಸೆರೆಹಿಡಿದು ನರಕಸಮಾನವಾದ ಕತ್ತಲೆಯ ಕೋಣೆಯ ಸೆರೆಮನೆಯಲ್ಲಿ ತುಂಬಿದರು. ಝುಬೇದಾಳಿಗೆ ಮಗನ ಈ ಬಗೆಯ ಕಷ್ಟಮಯ ಕಾರಾಗೃಹ ವಾಸವನ್ನು ಕೇಳಿ ಇನ್ನಿಲ್ಲದಷ್ಟು ದುಃಖವಾಯಿತು. ಭಗವಂತನು ಅವಳ ಮೊರೆ ಕೇಳಿದನೋ ಎಂಬಂತೆ ಅಕಸ್ಮಾತ್ ಸುಲ್ತಾನನ ಅಪ್ಪಣೆಯ ಮೇರೆಗೆ ಈ ಎಲ್ಲ ತರುಣರ ಬಿಡುಗಡೆಯಾಯಿತು. ಆದರೆ ಈ ತರುಣರು ಒಬ್ಬರನ್ನೊಬ್ಬರು ಕಂಡು ಮಾತಾಡದಂತೆ ದೂರದೂರದ ಪ್ರಾಂತಗಳಿಗೆ ಕಳುಹಿಸಲ್ಪಟ್ಟರು. ಕೆಮಾಲನು ಸೀರಿಯಾ ದೇಶಕ್ಕೆ ಹೋಗಿ ದಮಸ್ಕಸದೊಳಗಿನ ಒಂದು ಸೈನ್ಯದ ದಳವನ್ನು ಸೇರಬೇಕಾಯಿತು. ಕೆಮಾಲನು ಅಲ್ಲಿಯೂ ತನ್ನ ಕಾರ್ಯವನ್ನು ಮರೆಯಲಿಲ್ಲ. ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿದ ಹೊರತು, ಅವನ ಮನಸ್ಸಿಗೆ ಹೇಗೂ ಸಮಾಧಾನವಾಗುವಂತಿರಲಿಲ್ಲ. ತನ್ನ ಸೈನ್ಯದ ದಳದೊಳಗಿನ ಸೈನಿಕರನ್ನೂ ಸೇನಾಧಿಕಾರಿಗಳನ್ನೂ ಕೂಡಿಕೊಂಡು ಪುನಃ ಕೆಲಸವನ್ನು ಪ್ರಾರಂಭಿಸಿದನು. ಕೆಮಾಲನ ವ್ಯಕ್ತಿತ್ವವೇ ಅಂಥದು. ಸಕ್ಕರೆಯ ಚೀಲಕ್ಕೆ ಇರುವೆ ಮುತ್ತುವಂತೆ ಕೆಮಾಲನಿರುವಲ್ಲಿ ಜನಸಮುದಾಯವಿರುವದು. ಎಲ್ಲರಿಗೂ ಅವನೇ ಮುಂದಾಳು. ಅವನ ಮಾತಿಗೆ ಎದುರಾಡುವ ಜನರೇ ಇಲ್ಲ.

ತುರ್ಕಸ್ತಾನದ ಸುಲ್ತಾನನು ಅರಸನಷ್ಟೇ ಅಲ್ಲದೆ ಮಹಮ್ಮದೀಯರ ಧರ್ಮಾಧಿಕಾರಿ (ಖಲೀಫ) ಯೂ ಆಗಿದ್ದನು. ಮಹಮ್ಮದೀಯ ಮತಾನುವರ್ತಿಗಳು, ಇಜಿಪ್ತ, ಅಬಿಸೀನಿಯಾ, ಹಿಂದುಸ್ತಾನ, ಅಫಗಾಣಿಸ್ತಾನ ಈ ಎಲ್ಲ ಕಡೆಗಳಲ್ಲಿ ವಾಸವಾಗಿರುವರು. ಅರಬಸ್ತಾನವಂತೂ ಮಹಮ್ಮದ ಪೈಗಂಬರರ ಜನ್ಮಭೂಮಿ. ಜಗತ್ತಿನೊಳಗಿನ ಈ ಎಲ್ಲ ಮಹಮ್ಮದೀಯರ ನಿವಾಸಸ್ಥಾನಗಳನ್ನು ಒಂದುಗೂಡಿಸಿ ಒಂದು ಮಹಾಸಾಮ್ರಾಜ್ಯವನ್ನು ಕಟ್ಟಬೇಕೆಂಬ ಹಂಬಲವುಳ್ಳ ಅತಿಮಹತ್ವಾಕಾಂಕ್ಷೆಯ ಧಾರ್ಮಿಕ ಮುಂದಾಳುಗಳೂ ಕೆಲವರಿದ್ದರು. ಮುಸ್ತಾಫಾ ಕೆಮಾಲನ ಧೋರಣೆ ಅಂತಹದಲ್ಲ. ಕೊಳೆತು ಹೋದ ಕಾಲು ಕೀಲುಗಳನ್ನೆಲ್ಲ ಕಳೆದು ಚೆಲ್ಲಿ ಸಣ್ಣದೇ ಆದರೂ ನಿರ್ದುಷ್ಟವಾದ, ಸುಖಕರವಾದ, ಸುವ್ಯವಸ್ಥೆಯುಳ್ಳ, ಒಂದು ರಾಜ್ಯವನ್ನು ನಿರ್ಮಿಸಿಕೊಳ್ಳಬೇಕೆಂದು ಅವನು ಹವಣಿಸುತ್ತಿದ್ದನು.

ಹಿಂದುಗಳು ಅರಸನು ದೇವರೇ ಎಂದೋ, ದೇವರ ಅವತಾರವೆಂದೋ ನಂಬುತ್ತಿದ್ದಂತೆ ತುರ್ಕರು ಧರ್ಮಪ್ರಭು (ಖಲೀಫ) ವಾದ ತಮ್ಮ ಸುಲ್ತಾನನ ವಿರುದ್ಧ ನಿಲುವದಕ್ಕೆ ಪಾಪದ ಕೆಲಸವೆಂದು ಹಿಂದೆಗೆಯುತ್ತಿದ್ದರು. ಕ್ರಾಂತಿಪುರುಷನಾದ ಮುಸ್ತಾಫಾ ಕೆಮಾಲನು ರಾಜನಿಂದ ರಾಜ್ಯದಲ್ಲಿ ಅರಾಜಕತೆಯಾಗುತ್ತಿದ್ದರೆ, ರಾಜನನ್ನೂ, ಧರ್ಮದ ಹೆಸರಿನಿಂದ ಅನ್ಯಾಯವಾಗುತ್ತಿದ್ದರೆ ಧರ್ಮ ಪ್ರಭುವನ್ನೂ, ಧರ್ಮವನ್ನೂ, ದೇವರ ಹೆಸರಿನ ಮರೆಯಲ್ಲಿ ಅತ್ಯಾಚಾರ ನಡೆಯುತ್ತಿದ್ದರೆ ಅವನನ್ನೂ ಸಹ ಕಿತ್ತೊಗೆಯಲು ಹಿಂದುಮುಂದು ನೋಡ ಕೂಡದೆಂಬಷ್ಟು ಉಗ್ರವಿಚಾರದವನಾಗಿದ್ದನು. ಈ ಧೋರಣೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಕೆಮಾಲನು ಸೀರಿಯಾದಲ್ಲಿ ಕ್ರಾಂತಿಯ ಚಳವಳಿಯನ್ನು ಹೂಡಿದನು. ಇಷ್ಟರಲ್ಲಿ ಇತ್ತ ಸಾಲೋನಿಕಾದಲ್ಲಿಯೂ ತರುಣ ತುರ್ಕರ ಕ್ರಾಂತಿಯ ಚಳವಳಿಯು ಉಗ್ರಸ್ವರೂಪಕ್ಕೆ ಬಂದಿದ್ದಿತು. **ತುರ್ಕರಿಗಾಗಿಯೇ ತುರ್ಕಸ್ತಾನವಿರಬೇಕೆಂಬದು** ಕೆಮಾಲನ ಚಳವಳಿಯ ಸೂತ್ರ. ಅಂತು ಸುಲ್ತಾನನ ವಿರುದ್ಧ ದೇಶದ ತುಂಬ ಬಂಡಾಯವನ್ನು ಹೂಡುವದು ನಿರ್ಣಯವಾದಂತಾಯಿತು. ಕೆಮಾಲನ ತಾಯಿ ಝುಬೇದಾಳಿಗೆ ಈ ಸುದ್ದಿ ತಿಳಿಯಲು ಅವಳು ರಾಜಭಯದಿಂದ ನಡುಗಿ, ಪಾಪ ಭೀತಿಯಿಂದ ಉಡುಗಿ, ಮಗನನ್ನು ಕರೆದು "ಮುಸ್ತಾಫಾ ನಿನ್ನ ಯಾವ ಮಾತಿಗೂ ನನಗೆ ಅರ್ಥವಾಗುವದಿಲ್ಲ. ನಿನ್ನ ಯಾವ ಕೃತಿಯೂ ಮೊದಲು ನನಗೆ ರುಚಿಸಲಿಲ್ಲ. ನೀನು ದೇಶೋದ್ಧಾರಕರೆನಿಸುವ ತರುಣ ಮಿತ್ರರಿಗೆ **ಕೊಟ್ಟ ವಚನವನ್ನು ಹೇಗೆ ಮುರಿಯಲಿ** ಎಂಬ ನಿನ್ನ ಒಂದು ಮಾತು ಮಾತ್ರ ನನಗೆ ಸ್ವಲ್ಪ ತಿಳಿಯುವದು. ಕೊಟ್ಟವಚನವನ್ನು

ಮುರಿಯಬೇಡ. 'ಮನಮುಟ್ಟಿ ಸಾಹಸಮಾಡಿ ಯಶಸ್ವಿಯಾಗು." ಎಂದು ಹರಸಿ ಕಳುಹಿಸಿದಳು.

೧೯೦೮ನೆಯ ಇಸ್ವಿಯಲ್ಲಿ ದೇಶದ ತುಂಬ ಬಂಡಾಯವೆದ್ದಿತು. ಸುಲ್ತಾನನು ಪದಚ್ಯುತನಾಗಿ ರಾಜ್ಯಕಾರ್ಯಭಾರದ ಸೂತ್ರಗಳೆಲ್ಲ ಪ್ರಗತಿ ಸಂಘದ ಕೈಗೆ ಬಂದುವು. ಆದರೂ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಬಂಡಾಯವು ಮುಗಿದೊಡನೆ ರುಮೇನಿಯಾ ಬಲ್ಗೇರಿಯಾ ಗ್ರೀಸ ಮೊದಲಾದ ಜನಾಂಗಗಳು ತಮ್ಮ ತಮ್ಮ ಕಾರ್ಯಸಾಧನೆಯಲ್ಲಿ ತೊಡಗಿ ತುರ್ಕಸ್ತಾನದ ವಿರುದ್ಧ ಬಂಡಾಯ ಎಬ್ಬಿಸಿದವು. ಸುಲ್ತಾನನೂ, ಕ್ರಾಂತಿಕಾರರ ವಿರುದ್ಧ ನಿಂತನು. ಅನುವರ, ಜಾವೀದ, ಮೊದಲಾದವರು ಮತ್ತೆ ಎಚ್ಚತ್ತು ಈ ಬಂಡಾಯವನ್ನು ಮುರಿಯಲು ಯತ್ನಿಸಿದರು. ಇವರು ಹೆಚ್ಚಾಗಿ ಜರ್ಮನ್ನರ ಸಹಾಯವನ್ನು ಅವಲಂಬಿಸಿದ್ದರು. ಈ ಬಂಡಾಯದಲ್ಲಿ ಕೆಮಾಲನು ಇವರೆಲ್ಲರಿಗಿಂತ ಹೆಚ್ಚಾಗಿ ಶಕ್ತಿ ಯುಕ್ತಿ ಪ್ರಯುಕ್ತಿಗಳಿಂದ ಕೆಲಸಮಾಡಿದ್ದರಿಂದಲೇ ಇವರು ಯಶಸ್ಸು ಪಡೆದರು. ಆದರೆ ಅನುವರನೂ ಅವನ ಅನುಯಾಯಿಗಳೂ ಕೆಮಾಲನ ವಿಷಯದಲ್ಲಿ ಮತ್ಸರಬುದ್ಧಿ ಯುಳ್ಳವರಾಗಿದ್ದರು. ೧೯೧೧ರಲ್ಲಾದ ತ್ರಿಪೋಲಿಯ ಕದನದಲ್ಲಿಯೂ ೧೯೧೨ರಲ್ಲಿ ಕ್ರೈಸ್ತ ಜನಾಂಗದವರು ಬಾಲ್ಕನ್ ಸಂಸ್ಥಾನಗಳಲ್ಲಿ ನಡೆಯಿಸಿದ ಯುದ್ಧ ಗಳಲ್ಲಿಯೂ ಕೆಮಾಲನು ಅತಿಶಯ ಶೌರ್ಯ ವೀರ್ಯಗಳಿಂದ ಕೆಲಸಮಾಡಿದ್ದರಿಂದ ಅವರಿಗೆ ಕೆಮಾಲನನ್ನು ಬಿಟ್ಟುಬಿಡುವದು ಸಾಧ್ಯವಾಗಲಿಲ್ಲ. ಅವರು ಅವನನ್ನು ಒಂದು ಸೇನಾಧಿಕಾರದಲ್ಲಿ ನಿಯುಮಿಸಿ ಸೋಫಿಯಾಕ್ಕೆ ಕಳುಹಿಸಿದರು. ಸುಲ್ತಾನ್ ಶಾಹಿಯು ಹೋಗಿ ಅನುವರಶಾಹಿಯು ಬಂದುದರಿಂದ ಕೆಮಾಲನ ಮನಸ್ಸಿಗೆ ತಳಮಳವಾಯಿತು. ಇಂತಿರುವಾಗ ೧೯೧೪ರಲ್ಲಿ ಯುರೋಪದ ಮಹಾಯುದ್ಧವು ಬಂದಿತು.

ಜರ್ಮನಿಯ ಕೈಸರನಿಗೆ ಯುರೋಪಖಂಡವನ್ನೆಲ್ಲ ತನ್ನ ತೋರ್ಬೆರಳಿನಜಲನೆಗೆ ಒಳಪಡಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ. ಸೇನಾಪತಿ ಅನುವರನಿಗೆ ಮೂರೂ ಖಂಡಗಳಲ್ಲಿ ವ್ಯಾಪಿಸಿದ ತುರ್ಕೀಸಾಮ್ರಾಜ್ಯದ ಜೀರ್ಣೋದ್ಧಾರ ಮಾಡಬೇಕೆಂಬ ಹುಚ್ಚು ಹಂಬಲ. ಅವರವರು ಕೂಡಿದರು. ತುರ್ಕಸ್ತಾನವು ಜರ್ಮನಿಯ ಬಗಲಗೂಸಾಗಿ ರಣರಂಗದಲ್ಲಿ ದುಮ್ಮಿಕ್ಕಿತು. ಬ್ರಿಟಿಷರ ರಾಜಕೀಯಧೋರಣೆಯೇ ಬೇರೆ. ಅವರಿಗೆ ಜರ್ಮನಿಯ ಭಯವಿಲ್ಲದೆ ಇದ್ದರೂ ಬ್ರಿಟಿಷ ಸಾಮ್ರಾಜ್ಯದ ಮುಖ್ಯಾಂಗ ಗಳಾದ ಹಿಂದುಸ್ತಾನ ಮೊದಲಾದ ಪೂರ್ವದ ಪ್ರದೇಶಗಳ ಮಾರ್ಗವನ್ನು ಅಡ್ಡ ಗಟ್ಟಿ ನಿಂತಿರುವ ತರ್ಕಸ್ತಾನವನ್ನು ಹಣಿದುಹಾಕುವದು ಅವರ ಗುರಿಯಾಗಿದ್ದಿತು. ಬ್ರಿಟಿಷರೂ ಫ್ರೆಂಚರೂ ಕಾನಸ್ತಾಂತಿನೋಪಲವನ್ನು ಮುತ್ತಿದರು. ಇನ್ನೊಂ

ದೆಡೆಗೆ ಬ್ರಿಟಿಷ ಸೈನ್ಯವು ಗಾಲಿಪೋಲಿ ಬಂದರದಲ್ಲಿ ಬಂದಿಳಿಯಿತು. ತನ್ನ ಸೈನ್ಯಕ್ಕೆ ಕವಾಯಿತು ಮಾಡಿಸುತ್ತಿದ್ದ ಕೆಮಾಲನು ಅಕಸ್ಮಾತ್ ಬ್ರಿಟಿಷ ಸೈನ್ಯವು ಬಂದು ದನ್ನು ತಿಳಿದು ಒಮ್ಮೆಲೆ ಯುದ್ಧವನ್ನು ಹೂಡಿದನು. ಇಲ್ಲಿ ತಮಗಾರೂ ವಿರೋಧಿಗಳಿಲ್ಲವೆಂಬ ಹೆಮ್ಮೆಯಿಂದ ಬಂದ ಬ್ರಿಟಿಷ ಸೈನ್ಯವು ಕೆಮಾಲನ ಹೊಡೆತಕ್ಕೆ ಸಿಕ್ಕು ನುಚ್ಚುನೂರಾಯಿತು. ಕೆಮಾಲನು ಶೂರನು; ಯುದ್ಧನೀತಿವಿಶಾರದನು; ಅವನೊಬ್ಬನ ಸೇನಾಚಾಲನೆಯಿಂದಲೇ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರೂ ಫ್ರೆಂಚರೂ ತುರ್ಕಸ್ತಾನದಲ್ಲಿ ಎಳುಕೆರೆಯ ನೀರು ಕುಡಿಯಬೇಕಾಯಿತು. ಆದರೆ ಪ್ರಯೋಜನವೇನು? ತುರ್ಕೀ ಸುಲ್ತಾನನೂ ಸೇನಾಪತಿ ಅನುವರನೂ ಜರ್ಮನಿಯ ಸಹಾಯವನ್ನು ನಂಬಿದ್ದರು. ಸೈನ್ಯವು ತುರ್ಕರದು; ಆದರೆ ಅದರ ಚಾಲಕರು ಜರ್ಮನ್ ಅಧಿಕಾರಿಗಳು. ೧೯೧೭ ರಲ್ಲಿ ಬ್ರಿಟಿಷರ ತಂತ್ರದಿಂದ ಅರಬಸ್ತಾನದಲ್ಲಿ ತುರ್ಕರ ವಿರುದ್ಧ ಬಂಡಾಯವೆದ್ದಿತು. ಸೈನ್ಯವಿಲ್ಲ, ಸೇನಾಚಾಲಕರಿಲ್ಲ; ಮದ್ದು ಗುಂಡುಗಳಿಲ್ಲ. ಬೊಕ್ಕಸದಲ್ಲಿ ರೊಕ್ಕವಿಲ್ಲ. ಇಲ್ಲ, ಇಲ್ಲ, ಜರ್ಮನಿಯ ಬೆನ್ನು ಕಟ್ಟಿದರೆ ಇನ್ನು ಯಾವುದೂ ಉಳಿಯುವುದಿಲ್ಲ, ಎಂಬುದನ್ನು ತಿಳಿದ ಸುಲ್ತಾನವಾಹಿದೆ ಉದ್ದೀನನು ಮಿತ್ರರಾಷ್ಟ್ರಗಳೊಡನೆ ಕಾನ್‌ಸ್ಟಾಂಟಿನೋಪಲ್‌ದಲ್ಲಿ ಒಪ್ಪಂದ ಮಾಡಿಕೊಂಡನು. (೧೯೧೮) ಸುಲ್ತಾನನು ಶರಣಾಗತನಾದನು. ಮಿತ್ರರಾಷ್ಟ್ರಗಳ ಸೇನಾದಳಗಳು ಸೊಕ್ಕಿದ ಕಾಡಾನೆಗಳ ಹಿಂಡಿನಂತೆ ತುರ್ಕಸ್ತಾನವನ್ನು ಆಕ್ರಮಿಸಿದವು. ತುರ್ಕಸ್ತಾನದಲ್ಲಿ ಮತ್ತೆ ಹೆಸರಿಗೆ ಮಾತ್ರ ಸುಲ್ತಾನಶಾಹಿಯು ಪ್ರಾರಂಭವಾಯಿತು.

ಹೊಸ ಸುಲ್ತಾನ್ ವಾಹಿದೆ ಉದ್ದೀನನಿಗೂ ಕೆಮಾಲನಿಗೂ ಸ್ನೇಹವಿದ್ದಿತು. ಕೆಮಾಲನು ಜರ್ಮನಿಯ ಬೆನ್ನುಕಟ್ಟಿ ಯುದ್ಧಮಾಡುವದರಿಂದ ತುರ್ಕಸ್ತಾನಕ್ಕೆ ಕವಡೆಯಷ್ಟೂ ಲಾಭವಿಲ್ಲೆಂಬ ಅಭಿಪ್ರಾಯದವನಾಗಿದ್ದನು. ಹೊಸ ಸುಲ್ತಾನ್ ಶಾಹಿಯಲ್ಲಿ ಕೆಮಾಲನು ಸೀರಿಯಾ ಪ್ರಾಂತದಲ್ಲಿ ಒಬ್ಬ ಮುಖ್ಯ ಸೇನಾಧಿಕಾರಿಯಾಗಿ ನಿಯಮಿಸಲ್ಪಟ್ಟು ಮುಸ್ತಫಾ ಕೆಮಾಲ ಪಾಶಾ (ಪಾಶಾ ಎಂದರೆ ಸೇನಾಧಿಕಾರಿ) ಆದನು. ೧೯೧೯ನೆಯ ಇಸ್ವಿಯ ಮೇ ತಿಂಗಳಲ್ಲಿ ಅವನು ತನ್ನ ಸೇನಾದಳದೊಂದಿಗೆ ಅನೋಟೋಲಿಯಾವ ದಂಗೆಯನ್ನು ಮುರಿಯಲು ಹೊರಟನು. ಇಂದಿನಿಂದ ಕೆಮಾಲಪಾಶಾನ ಕೈ ಮತ್ತೆ ಬಲಿಯತೊಡಗಿತು. ಪರಕೀಯರ ತಂತ್ರದಿಂದ ದೇಶವನ್ನು ಉದ್ಧಾರ ಮಾಡುವ ಹಂಬಲವನ್ನು ಆತನು ಎಂತಹ ಕಠಿಣ, ನಿರಾಶಾಜನಕವಾದ ಸ್ಥಿತಿಯಲ್ಲಿಯೂ ಕೂಡ ಮರೆಯಲಿಲ್ಲ. ಯುಕ್ತಿಪ್ರಯುಕ್ತಿಗಳಿಂದ ಎಝ್ಝರೂವಿನಲ್ಲಿ ಕೂಡಿದ ಸೇನಾಚಾಲಕರ ಸಹಾಯ ಸಹಾನುಭೂತಿಗಳನ್ನು ದೊರಕಿಸಿಕೊಂಡು, ಸೇವಾಸದಲ್ಲಿ ಕೂಡಿದ ತುರ್ಕರಾಷ್ಟ್ರೀಯ ಮಹಾ

ಸಭೆಯಲ್ಲಿ ಹೊಸದಾಗಿ ಸ್ಥಾಪಿತವಾದ ಸರಕಾರದ ಕಾರ್ಯಕಾರೀಸಮಿತಿಯ ಅಧ್ಯಕ್ಷನಾಗಿ ಆರಿಸಲ್ಪಟ್ಟನು. ಸುಲ್ತಾನನೂ ತನ್ನ ಅಸ್ತಿತ್ವವನ್ನು ಳಿಸಿಕೊಳ್ಳುವದಕ್ಕಾಗಿ ಪರಿಪರಿಯಿಂದ ಹೆಣಗಿದನು. ಆದರೆ ಕೆಮಾಲಪಾಶಾನ ಪ್ರಯತ್ನದಿಂದ ಅದು ಸಾಧಿಸಲಿಲ್ಲ. ಸುಲ್ತಾನ್‌ಪದವಿಯಿಂದ ಚ್ಯುತನಾದ ವಾಹಿದೆ ಉದ್ದೀನನು ಬ್ರಿಟಿಷರ ಮರೆಹೊಕ್ಕನು. ಅವನ ಅಣ್ಣನ ಮಗ ಅಬ್ದುಲ್‌ಮಜೀದನು ರಾಜ್ಯಾಧಿಕಾರವಿಲ್ಲದ ಧರ್ಮಾಧಿಕಾರಿಯಾಗಿ (ಖಲೀಫನಾಗಿ) ಉಳಿದನು.

ಅತ್ತ ಮಹಾಯುದ್ಧದ ವಿಜಯದ ತರುವಾಯ ಮಿತ್ರರಾಷ್ಟ್ರಗಳ ಮುತ್ಸದ್ದಿಗಳು ಪಾರಿಸ ನಗರದಲ್ಲಿ ಕುಳಿತು ತುರ್ಕಸಾಮ್ರಾಜ್ಯದ ಪರವಾಗಿ ಒಪ್ಪಂದದ ಕರಾರುಗಳನ್ನು ನಿರ್ಣಯಿಸಿದರು. ಅವನ್ನು ಪ್ರಚಾರದಲ್ಲಿ ತಂದರೆ ತುರ್ಕಸಾಮ್ರಾಜ್ಯವು ನಾಮಾವಶೇಷವಾಗುತ್ತಿತ್ತು. ಕೆಮಾಲಪಾಶಾನ ದೃಢನಿಶ್ಚಯದಿಂದ 'ತುರ್ಕಸಾಮ್ರಾಜ್ಯವನ್ನು ಉಳಿಸುವೆವು; ಇಲ್ಲವಾದರೆ ಅದರೊಡನೆಯೇ ನಾವೂ ಅಳಿದು ಹೋಗುವೆವು.'ಎಂದು ನಿರ್ಧರಿಸಿದ ತರುಣ ತುರ್ಕರು ಆ ಒಪ್ಪಂದದ ಕಾಗದವನ್ನು ಕಸದ ಬುಟ್ಟಿಗೆ ಎಸೆದುಬಿಟ್ಟರು. ತುರ್ಕಸಾಮ್ರಾಜ್ಯದ ರಾಜಧಾನಿ ಕಾನಸ್ತಾಂತಿನೋಪಲ್ಲಿನಲ್ಲಿ ಸುಲ್ತಾನನು ನಮ್ಮದೇಶದ ಒಡೆಯನಲ್ಲ; ನಮ್ಮ ರಾಷ್ಟ್ರಾಧಿಕಾರಿಯು (ಕೆಮಾಲಪಾಶಾ) ಅಂಗೋರಾದಲ್ಲಿದ್ದಾನೆ ಎಂದು ಅವರು ಸಾರಿದರು. ಮಿತ್ರರಾಷ್ಟ್ರಗಳು ಮತ್ತೆ ತೊಂದರೆಗೀಡಾದವು. ಅವರೀಗ ಮತ್ತೆ ಯುದ್ಧವನ್ನು ಹೂಡುವಂತಿರಲಿಲ್ಲ. ಕೊನೆಗೆ ಅವರಿಗೊಂದು ದಾರಿ ದೊರೆಯಿತು. ಗ್ರೀಸವು ತುರ್ಕರ ಪೂರ್ವದ ಹಗೆತನವನ್ನು ನೆನೆದು ಮಿತ್ರರಾಷ್ಟ್ರಗಳ ಸಹಾಯದಿಂದ ಅವರೊಡನೆ ಯುದ್ಧಕ್ಕೆ ಮುಂದಾಯಿತು. ಈ ಯುದ್ಧವು ಎರಡು ವರ್ಷಗಳ ವರೆಗೆ ನಡೆದು ಮುಸ್ತಾಫಾ ಕೆಮಾಲಪಾಶಾನು ಜಯಶಾಲಿಯಾದನು. ಅಂದಿನಿಂದ ಅವನು "ಗಾಝಿ" ಎಂದರೆ 'ವಿಜಯಶಾಲಿ' ಆದನು. ಗ್ರೀಕ್, ಬ್ರಿಟಿಷ್, ಫ್ರೆಂಚ್ ಮೊದಲಾದ ಹಗೆಗಳನ್ನೆಲ್ಲ ಸದೆಬಡಿದು ಸುಲ್ತಾನಶಾಹಿಯನ್ನೂ ಕೊನೆಗಾಣಿಸಿ ಅಖಂಡ ತುರ್ಕಸಾಮ್ರಾಜ್ಯದಲ್ಲೆಲ್ಲ ಸಂಚರಿಸಿ ಯಾವತ್ತೂ ಉಡಳಿತದ ಮತ್ತು ಅಧಿಕಾರದ ಸೂತ್ರಚಾಲನೆಯ ಒಂದು ಪ್ರಜಾಪಕ್ಷವೆಂಬ ಪ್ರಬಲಪಕ್ಷವನ್ನು ಸಂಘಟನೆಮಾಡಿ, ತಾನೇ ಅದರ ಅಧ್ಯಕ್ಷನೂ ಆದನು. ಮುಂದೆ ಹಲವು ತಂತ್ರಗಳು ನಡೆದು ತುರ್ಕಸಾಮ್ರಾಜ್ಯವು ಪ್ರಜಾಸತ್ತಾತ್ಮಕ ರಾಜ್ಯವಾಗಿ ಗಾಝಿ ಮುಸ್ತಾಫಾ ಕೆಮಾಲನು ಅದರ ಅಧ್ಯಕ್ಷನಾದನು. ಇನ್ನುಳಿದುದೆಂದರೆ 'ಖಿಲಾಫತ್' ಒಂದೇ. ಅದಿರುವವರೆಗೆ ತಾನು ಕಲ್ಪಿಸಿಕೊಂಡಿರುವಂತೆ ತುರ್ಕಸಾಮ್ರಾಜ್ಯದ ಬದಲಾವಣೆ ಸಾಧ್ಯವಿಲ್ಲವೆಂಬುದನ್ನು ನಿರ್ಧರಿಸಿಕೊಂಡ ಗಾಝಿಯು 'ಧರ್ಮವು ವ್ಯಕ್ತಿಗೆ ಸಂಬಂಧಿಸಿದ ಮಾತು.

ರಾಷ್ಟ್ರಕ್ಕೂ ಅದಕ್ಕೂ ಸಂಬಂಧವಿಲ್ಲ. ರಾಜತಂತ್ರಕ್ಕೂ ಧರ್ಮತಂತ್ರಕ್ಕೂ ಸಂಬಂಧವೇನು? ಪ್ರಜಾಪ್ರಭುತ್ವವುಳ್ಳ ತುರ್ಕಸ್ಥಾನದಮೇಲೆ ಖಲೀಫನ ಅಧಿಕಾರ ವಿಲ್ಲಿದೆ? ಎಂದು ಯುಕ್ತಿವಾದವನ್ನು ಹೂಡಿ ಅದನ್ನೂ ಕೊಣೆಗಾಣಿಸಿಬಿಟ್ಟನು.

ಈ ರೀತಿಯಾಗಿ ತನ್ನದಾರಿಯಲ್ಲಿ ಅಡ್ಡಬರುವ ವಿಘ್ನಗಳನ್ನೆಲ್ಲ ದೂರವಾಡಿ ಕೊಂಡ ಗಾಯಿ ಮುಸ್ತಾಫಾ ಕೆಮಾಲನು ದೇಶದ ಅಂತಸ್ಥ ಸುಧಾರಣೆಗೆ ಕೈ ಯಿಕ್ಕಿದನು. ಗಂಡುಸರ ತಲೆಯಮೇಲಿನ ತುರ್ಕಿ ಟೊಪ್ಪಿಗೆಯೆಂದು ಹೇಳುವ ಫೋಪುರದಂಥ ಕೆಂಪು ಟೊಪ್ಪಿಗೆ (ಫೆಜ್) ಒಂದೇ ದಿನದಲ್ಲಿ ಕಾಯಿದೆಯಿಂದ ಮಾಯವಾದಂತೆಯೇ ಹೆಂಗುಸರ ಮುಖಾವರಣ (ಗೋಷೆ)ವೂ ಸಾವಕಾಶವಾಗಿ ಕಣ್ಮರೆಯಾಯಿತು. ಪ್ರಜೆಗಳೆಲ್ಲರೂ ಅಕ್ಷರಸ್ಥರಾದರು. ತುರ್ಕಿ ಲಿಪಿಯೂ ಅದೃಶ್ಯವಾಗಿ ಅದರ ಸ್ಥಳದಲ್ಲಿ ರೋಮನ್ ಲಿಪಿಯು ಪ್ರಚಾರದಲ್ಲಿ ಬಂದಿತು. ರಾಜಧಾನಿ ಅಂಗೋರಾದ ರಣಗುಡುವ ಬರಿನೆಲವು ಹೂದೋಟದಿಂದ ಕಂಗೊಳಿ ಸುವ ಉಪವನವಾದಂತೆ ಅಖಿಲ ತುರ್ಕಸ್ಥಾನವೇ ಸಲಕ ವೈಭವಗಳಿಂದ ಮೆರೆಯ ತೊಡಗಿತು. ತುರ್ಕಸ್ಥಾನವು ಸ್ವತಂತ್ರ ಸ್ವಸಂಪೂರ್ಣ ರಾಷ್ಟ್ರವೆನಿಸಿಕೊಂಡಿತು. ಇಲಲಗಿರಿಂದ ೧೯೩೮ ರ ವರೆಗಿನ ೫೭ ವರ್ಷಗಳವರೆಗೆ ಬಾಳಿದ ಗಾಯಿ ಮುಸ್ತಾಫಾ ಕೆಮಾಲ ಅತಾತುರ್ಕ (ಅತಾತುರ್ಕ ಎಂದರೆ ತುರ್ಕರ ತಂದೆ) ನ ಚರಿತ್ರೆಯೆಂದರೆ ೨೪೫ ವರ್ಷಗಳ ತುರ್ಕಸ್ಥಾನದ ಇತಿಹಾಸವೆ ಆಗಿದೆಯೆಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಕೊನೆಗೆ ಈ ಅತಾತುರ್ಕನ ವ್ಯಕ್ತಿವಿಷಯಕವಾದ ಇನ್ನೊಂದು ಮಾತುಹೇಳಿ ಈ ಪಾಠವನ್ನು ಮುಗಿಸೋಣ.

ವರ್ಷಾನುವರ್ಷ ಗ್ರೀಕರೊಡನೆ ರಣರಂಗದಲ್ಲಿ ಹೋರಾಡಿ ವಿಜಯಿಯಾದ 'ಗಾಯಿ ಮುಸ್ತಾಫಾನು" ಗ್ರೀಕರ ಬೆನ್ನಟ್ಟಿ ನಡೆದಿದ್ದನು. ಓಡಿಹೋಗುತ್ತಿದ್ದ ಗ್ರೀಕರು ಊರುಗಳನ್ನು ಸುಡುತ್ತ ಸುಲಿಯುತ್ತ ಮುಂದೆ ಸಾಗಿದ್ದರು. ಒಂದು ದಿನ ಸಾಯಂಕಾಲವಾಗಲು ದಣಿದುಬಂದ ಗಾಯಿಯು ಸ್ಮರ್ನಾನಗರದಲ್ಲಿ ಬೀಡು ಬಿಡಬೇಕಾಯಿತು. ಗ್ರೀಕರ ಹಾವಳಿಯಿಂದ ಹಾಳಾದ ನಗರವು ಇನ್ನೂ ಉರಿ ಯುತ್ತಲೆ ಇದ್ದಿತು. ಅಲ್ಲಿಯ ಒಂದು ಮನೆಯಲ್ಲಿ ಕುಳಿತು ಮುಂದಿನ ಆಲೋಚನೆ ಯಲ್ಲಿ ತೊಡಗಿ ಕೆಲಸಮಾಡುತ್ತಿದ್ದಾಗ ಅಕಸ್ಮಾತ್ ಯುವತಿಯೊಬ್ಬಳು ಅವನ ಮುಂದೆ ಬಂದು ಕುಳಿತಳು. ವಯಸ್ಸು ಚಿಕ್ಕದು, ತಾರುಣ್ಯದಲ್ಲಿ ಅದೇ ಕಾಲಿಟ್ಟವಳು, ಸುಶಿಕ್ಷಿತೆ, ದಿಟ್ಟೆ, ಮೋಸದ ನಾಚಿಗೆಯ ನಟನೆಯಾಗಲಿ ನೀತಿಗೆಟ್ಟ ಹೆಣ್ಣಿನ ಇನ್ನಾ ವುದೇ ಬಗೆಯ ನಡತೆಯಾಗಲಿ ಅವಳಲ್ಲಿರಲಿಲ್ಲ. ಗಾಯಿಗೆ ಆಶ್ಚರ್ಯವಾಯಿತು. ರಾತ್ರಿಯಲ್ಲಿ ಒಂಟಿಗಳಾಗಿ ತನ್ನೆಡೆಗೆ ಬಂದ ಅಪರಿಚಿತ ತರುಣಿ ಯಾರಿವಳು! ಎಂದು

ಯೋಚಿಸುತ್ತ ಅವಳು ಅಲ್ಲಿಗೆ ಬಂದ ಕಾರಣವನ್ನು ಕೇಳಿದನು. ಅವಳು "ನಿನ್ನಂ ತಹ ರಾಷ್ಟ್ರಪುರುಷನಿಗೆ ನನಗೆ ಸಾಧ್ಯವಿದ್ದ ಸೇವೆಯನ್ನು ಸಲ್ಲಿಸಲು ಇಲ್ಲಿಗೆ ಬಂದಿರುವೆನು. ಇಲ್ಲಿ ಹಗೆಗಳ ಕೋಲಾಹಲ; ಊರೇ ಉರಿಯುತ್ತಿದೆ. ಇಂತಹ ಸ್ಥಿತಿಯಲ್ಲಿ ಶಾಂತಚಿತ್ತದಿಂದ ಕೆಲಸಮಾಡಲು ನಿನಗೆ ಸಾಧ್ಯವೆ? ನನ್ನ ಮನೆ ನಗರದ ಹೊರಗೆ ಶಾಂತವಾದ ಸ್ಥಳದಲ್ಲಿದೆ. ಅಲ್ಲಿಗೆ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸ ಬೇಕೆಂಬುದೇ ನನ್ನ ಪ್ರಾರ್ಥನೆ" ಎಂದಳು. ಗಾಯ್ಥಿಯು ತುಸು ವಿಚಾರಮಾಡಿ ಒಪ್ಪಿಕೊಂಡನು.

ಈ ತರುಣಿಯ ಹೆಸರು ಲತೀಫಾ. ಅವಳ ತಂದೆಯು ಒಂದು ಹಡಗದ ಕಂಪನಿಯ ಒಡೆಯನಾದ ಶ್ರೀಮಂತನಾಗಿದ್ದನು. ಪಾರಿಸ ನಗರದಲ್ಲಿ ಯುರೋಪಿ ಯನ್ ಪದ್ಧತಿಯಿಂದ ಶಿಕ್ಷಣ ಪಡೆದ ಹೊಸ ವಿಚಾರದ ತರುಣಿಯವಳು. ಗಾಯ್ಥಿಯು ತನ್ನ ಮಾತೃಭೂಮಿಯನ್ನು ಉದ್ಧಾರಮಾಡಿದ ರಾಷ್ಟ್ರಪುರುಷ. ತನಗೆ ಗುರುಸಮಾನನು. ವಯಸ್ಸಿನಲ್ಲಿಯೂ ಹೆಚ್ಚು ಹಿರಿಯನು. ಆದುದರಿಂದ ಅವನೆಡೆಗೆ ಹೋಗುವದರಲ್ಲಿಯೂ ಅವನ ಸೇವೆಗೆ ನಿಲ್ಲುವದರಲ್ಲಿಯೂ ತನ್ನ ಕರ್ತವ್ಯ ಪಾಲನೆಗೆ ಎಡ್ಡಿದ ಯಾವ ಘಟನೆಯೂ ನಡೆಯಲಾರದೆಂದು ಲತೀಫಾ ತಿಳಿದಿದ್ದಳು. ದೈವಸಂಕಲ್ಪವು ಬೇರೆಯೇ ಇದ್ದಿತು. ಗಾಯ್ಥಿಯು ಅವಳ ಮನೆಗೆ ಬಂದ ಬಳಿಕ ಅವಳ ನಡೆ ನುಡಿ, ಶಿಸ್ತು, ವ್ಯವಸ್ಥೆ, ಇವನ್ನೆಲ್ಲ ನೋಡಿ, ಅವಳ ಸುಶಿಕ್ಷಿತ ಸ್ವತಂತ್ರ ವಿಚಾರಕ್ರಮಗಳನ್ನು ತಿಳಿದು, ತನ್ನ ರಾಷ್ಟ್ರಕ್ಕೆ ಇಂತಹ ತರುಣಿಯರ ಅವಶ್ಯಕತೆಯು ಎಷ್ಟಿದೆಯೆಂಬದನ್ನು ಎಣಿಕೆ ಹಾಕಿದನು. ಒಡನೆಯೆ ತನ್ನ ಮನೆಯಲ್ಲಿಯೇ ಇಂಥ ಯುವತಿಯೊಬ್ಬಳಿದ್ದರೆ ಹೇಗೆ? ಎಂಬ ಮೋಹವು ಹುಟ್ಟಿತು. ಯಾರಿಗೂ ಎಂದೂ ಸೋಲದೆ ಗಾಯ್ಥಿಯಾದವನು 'ಲತೀಫಾ'ಳ ಮುಂದೆ ಹಾಜಿ ಆದನು. ಅವಳಲ್ಲಿ ಪ್ರಣಯ ಭಿಕ್ಷೆಗೆ ಕೈನೀಡಿದನು. ಲತೀಫಾ ನುಡುವೆಯಾಗನೆ ಪ್ರಣಯದ ಮಾತಿಲ್ಲೆಂದು ಖಂಡಿತವಾಗಿ ನುಡಿದಳು. ಸೋತವನು ಗೆದ್ದವರ ಸೊತ್ತಾಗುವಂತೆ ಗಾಯ್ಥಿಯು ಈಗಲೇ ಆಲ್ಲದೆ ಇದ್ದರೂ ಕೆಲಕಾಲದ ಮೇಲಾದರೂ ಲತೀಫಾಳ ಮಾತಿಗೆ ಒಪ್ಪಬೇಕಾಯಿತು. ಲತೀಫಾಳು ಗಾಯ್ಥಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತ ರಾಜಕಾರಣಗಳಲ್ಲಿಯೂ ಸಾರ್ವಜನಿಕ ಸಭೆಗಳಲ್ಲಿಯೂ ಮೈಚಳಿ ಬಿಟ್ಟು ನಡೆದು ಉದಯವಾಗುತ್ತಿರುವ ತರುಣ ತುರ್ಕಸಾಮ್ರಾನದ ತರುಣಿಯರಿಗೆ ಮಾದರಿಯಾಗಿ ನಡೆಯುವದನ್ನು ನೋಡಿ ಅವನು ಇನ್ನಷ್ಟು ಮನಸೋತು ನಾನು ನನ್ನ ಪ್ರಜೆಗಳಿಗೆ ಆದರ್ಶಪುರುಷನಾದರೆ ದೇಶದ ತರುಣಿಯರಿಗೆ ಇವಳು ಆದರ್ಶ ರಮಣಿಯಾಗಬಹುದಲ್ಲವೇ! ಎಂದು ಭಾವಿಸಿ ಅವಳನ್ನು ಮದುವೆಯಾದನು. ಆದರೆ ಯಾವ ದೈವಯೋಗದಿಂದ ಅವರವರ

ಕೂಡಿದರೋ ಅದೇ ದೈವಯೋಗದಿಂದಲೇ ಕೆಲಕಾಲದಮೇಲೆ ಅವರವರ ವಿವಾಹ ವಿಚ್ಛೇದವಾಗಿ ಹೋಯಿತು. ಉದಾರ ಧೋರಣೆಯ ಈ ಸುಶಿಕ್ಷಿತ ದಂಪತಿಗಳು ದಾಂಪತ್ಯವಿಚ್ಛೇದದ ಸಂದರ್ಭದಲ್ಲಿಯೂ ಒಬ್ಬರನ್ನೊಬ್ಬರು ದೂರಲಿಲ್ಲ; ಒಬ್ಬರಿಗೊಬ್ಬರು ಅನಾದರವನ್ನು ತೋರಿಸಲಿಲ್ಲ. ಇಬ್ಬರೂ ಸ್ವತಂತ್ರವಿಚಾರದವರಾಗಿದ್ದುದರಿಂದಲೂ ಇಬ್ಬರೂ ಅಷ್ಟೇ ಹಟವಾದಿಗಳಾಗಿದ್ದುದರಿಂದಲೂ ಎಷ್ಟು ಸರಳಭಾವದಿಂದ ಒಬ್ಬರನ್ನೊಬ್ಬರು ಕೂಡಿದ್ದರೋ ಅಷ್ಟೇ ಸರಳರೀತಿಯಿಂದಲೇ ಒಬ್ಬರನ್ನೊಬ್ಬರು ಅಗಲಿದರು! ಅಖಿಲ ತುರ್ಕೀ ಪ್ರಜೆಗಳೇ ತನ್ನ ಮಕ್ಕಳು ಅಖಂಡ ತುರ್ಕಸಾಮ್ರಾನವೇ ತನ್ನ ಕುಟುಂಬ. ಎನ್ನುವ ರಾಷ್ಟ್ರಪುರುಷನಿಗೆ ತನ್ನ ಚಿಕ್ಕ ಸಂಸಾರದ ಮೋಹವೆಲ್ಲಿರಬೇಕು?

ಗಾಝಿ ಕಮಾಲ ಅತಾತುರ್ಕನ ತರುವಾಯ, ಅವನ ಅನುಯಾಯಿ ಇಸ್ಮತ್ ಪಾಶಾನು ಹನ್ನೆರಡು ವರ್ಷಗಳಿಂದಲೂ ತರುಣ ತುರ್ಕಸಾಮ್ರಾನದ ಮಂತ್ರಿಯಾಗಿದ್ದವನು ಅದರ 'ಸರ್ವಾಧಿಕಾರಿ' ಯಾಗಿರುವನು (೧೯೩೮).

ಪತ್ರಗಳ ಸಾರಾಂಶ

ಸಂಪಗಾವಿ (ಜಿಲ್ಲೆ ಬೆಳಗಾವಿ) :— "ಮೆಹರ್ಬಾನ ವಿ. ಗ. ಪಾಟೀಲ ಅ. ಡೆ. ಎ. ಇನ್‌ಸ್ಪೆಕ್ಟರರವರಿಗೆ ಬೆಳಗಾವಿ ಜಿಲ್ಲೆಯಿಂದ ವರ್ಗವಾದ ನಿಮಿತ್ತ ಇಲ್ಲಿಯ ಶಾಲೆಯಲ್ಲಿ ತಾಂಬೂಲ ಸಮಾರಂಭವಾಗಿತ್ತು. ಆಗ ಅವರ ಗುಣವರ್ಣನಪರ ಪದ್ಯಗಳನ್ನು ಓದಿ ತೋರಿಸಲಾಯಿತು" ಎಂದು ಶ್ರೀ. ಚ. ಬ. ಧಾರವಾಡ ಹೆ| ಮಾ। ಪಾರಿಶವಾಡ ಇವರು ತಿಳಿಸುತ್ತಾರೆ.

ಗಜೇಂದ್ರಗಡ (ಜಿಲ್ಲೆ ಧಾರವಾಡ) :— "ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ, ತಾರೀಖು ೬–೧೦–೧೯೪೦ನೆಯ ದಿವಸ ಶ್ರೀಮಂತ ಮಾಲೋಜಿ ರಾವ ಘೋರ್ಪಡೆ ಇವರ ಅಧ್ಯಕ್ಷತೆಯಲ್ಲಿ, ಮೆ. ಬೂದಿಹಾಳಮಠ ಅ. ಡೆ. ಎ. ಇ. ರ ಇವರ ನೇತೃತ್ವದಲ್ಲಿ ಶಿಕ್ಷಕರ ಸಮ್ಮೇಲನವಾಯಿತು. ಊರ ಹಿರಿಯರೂ ಸುತ್ತಲಿನ ಸುಮಾರು ಐವತ್ತರಷ್ಟು ಶಿಕ್ಷಕ-ಶಿಕ್ಷಕಿಯರೂ ಬಂದಿದ್ದರು. ಸ್ವಾಗತ ಪದ್ಯವಾದ ನಂತರ ಮೆ. ಬೂದಿಹಾಳಮಠ ಸಾಹೇಬರು ಸಮ್ಮೇಲನದ ಆವಶ್ಯಕತೆಯನ್ನು ತಿಳಿಸಿ ಹೇಳಿದರು. ಶ್ರೀ. ಪುರದ, ಕರಜಗಿ, ಭಾವಿ, ನಿಡಗುಂದಿ ಮೊದಲಾದವರ ಮಾದರಿಯ ಪಾಠಗಳಾದವು. ಸಂಜೆಗೆ ವಿದ್ಯಾರ್ಥಿಗಳ ಸಾಮೂಹಿಕ ಡ್ರಿಲ್, ಆಸನ, ಏಸೋದ, ಮಲಖಂಬ, ಲೇಝೀಮ ಮೊದಲಾದವುಗಳಾದವು.

ಆಗ ಊರೊಳಗಿನ ಸುಮಾರು ಎರಡು ಎರಡೂವರೆ ಸಾವಿರ ಜನರು ಕೂಡಿದ್ದರು. ಅಧ್ಯಕ್ಷರು ಈ ಸಮ್ಮೇಲನಕ್ಕೆ ತುಂಬ ಪ್ರೋತ್ಸಾಹನೆ ಕೊಟ್ಟರು. ಮರುದಿವಸ ಸಿಡಗುಂದಿ ಶಾಲೆಯ ವಿದ್ಯಾರ್ಥಿಗಳು ಯಮನಸೋಲು, ಹೆಣ್ಣುಮಕ್ಕಳ ಶಾಲೆಯವರು, ನ್ಯಾಯ ತೀರಿಸುವ ಜಾಣತನ, ಎಂಬ ಚಿಕ್ಕ ದೃಶ್ಯಗಳನ್ನು ಅಭಿನಯಿಸಿದರು" ಎಂದು ಶ್ರೀ. ಯಾಲಕ್ಕಿ ಅ. ಮಾ. ಗಜೇಂದ್ರಗಡ ಇವರು ತಿಳಿಸುತ್ತಾರೆ.

ಸವದತ್ತಿ (ಜಿಲ್ಲೆ ಬೆಳಗಾವಿ): — "ತಾರೀಖು ೧೯-೧೦-೧೯೪೦ ನೆಯ ದಿವಸ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ಈ ಭಾಗದ ಶಿಕ್ಷಕರ ಸಮ್ಮೇಲನವು ಕೂಡಿತ್ತು. ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ದೊರೆಗಳಾದ ಶ್ರೀಮಾನ್ ಥಿಟೆ ರಾಯರು ಅಧ್ಯಕ್ಷರಾಗಿದ್ದರು. ಜಿಲ್ಲೆಯ ಶಿಕ್ಷಣಾಧಿಕಾರಿಗಳೂ ಊರ ಹಿರಿಯರೂ ಬಂದಿದ್ದರು. ಸುಮಾರು ಎಪ್ಪತ್ತರಷ್ಟು ಶಿಕ್ಷಕ-ಶಿಕ್ಷಿಕೆಯರು ಕೂಡಿದ್ದರು. ಶಿಕ್ಷಣೋಪಕರಣಗಳ ಪ್ರದರ್ಶನ, ಮಾದರಿಯ ಪಾಠಗಳು, ಸಾಭಿನಯ ಭಾಷಣಗಳು, ನಿಬಂಧ ವಾಚನ, ಕಾವ್ಯಗಾಯನ, ವ್ಯಾಯಾಮದ ರೀತಿಗಳು, ಏಕಾಂಕ ನಾಟಕ ಇವೆಲ್ಲವೂ ನಡೆದವು. ಶ್ರೀಮಾನ್ ದೇಸಾಯಿ ಪಾಂಡುರಂಗರಾಯರು, ಇತಿಹಾಸ-ಭೂಗೋಲ-ಸಂಶೋಧನ ವಿಷಯದ ಮೇಲೆ ಭಾಷಣ ಮಾಡಿದರು. ಸಮ್ಮೇಲನವು ಬಹು ಯಶಸ್ವಿಯಾಯಿತು" ಎಂದು ಗುರ್ಲಹೊಸೂರ ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ಬಾ. ಬೀ. ಜೋಶಿಯವರು ತಿಳಿಸುತ್ತಾರೆ.

ಹಾವೇರಿ (ಜಿಲ್ಲೆ ಧಾರವಾಡ): — "ಇಲ್ಲಿಯ ಸರಸ್ವತಿ ಪ್ರಾಥಮಿಕ ಶಾಲೆಯಲ್ಲಿ ತಾ. ೬-೧೦-೧೯೪೦ ನೆಯ ದಿವಸ ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಕೊಪ್ಪಳರಾಯರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸಮ್ಮೇಲನವಾಯಿತು. ಈ ಊರಲ್ಲಿಯ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಎಲ್ಲ ಶಿಕ್ಷಕರು ಬಂದಿದ್ದರು. ಮ್ಯಾನೇಜರರಾದ ಶ್ರೀ. ಗೋಕರ್ಣ ಡಾಕ್ಟರರು ಸಮ್ಮೇಲನದ ಉದ್ದೇಶವನ್ನು ತಿಳಿಸಿ ಹೇಳಿದರು. ನಂತರ ಮಾದರಿಯ ಪಾಠಗಳೂ ಚರ್ಚೆಗಳೂ ನಡೆದವು. ಈ ಸಭೆಗೆ ಸಮ್ಮ ಭಾಗದ ಅಸಿ॥ ಇನ್‌ಸ್ಪೆಕ್ಟ್ರಸರಾದ ಶ್ರೀಮತಿ ಕಮಲಾಬಾಯಿ ಜಮಖಂಡಿಯವರೂ, ಶ್ರೀ. ಅ. ಡೆ. ವಾಚ್ಛಾರವರೂ ಆಗಮಿಸಿದ್ದರು." ಎಂದು ಹಾವೇರಿಯ ಸರಸ್ವತಿ ಪ್ರಾಥಮಿಕ ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ರಾ. ಗ. ಲೇಲೆ ಇವರು ತಿಳಿಸುತ್ತಾರೆ.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಬೆಲೆ ೮ ಆಣೆಗಳು.

ಲೇಖಕರು :

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ, ಟ್ರೇನಿಂಗ್ ಸ್ಕೂಲ್, ಧಾರವಾಡ.

ಶ್ರೀ. ಬಾ. ಮಾ. ಕುಲಕರ್ಣಿ, ಬೇಸಿಕ್ ಟ್ರೇನಿಂಗ್ ಸ್ಕೂಲ್, ಧಾರವಾಡ.

ಕನ್ನಡ ೫, ೬, ೭, ಮತ್ತು ಇಂಗ್ಲಿಷ ೧, ೨, ೩, ಇಯತ್ತೆಗಳಿಗೂ, ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಖಾಸಗಿಯಿಂದ ಹಿಂದೀ ಕಲಿಯುವವರಿಗೂ ಹಿಂದೀ ಅಧ್ಯಾಪಕರಿಗೂ ಬಹಳ ಉಪಯೋಗವಾಗುವಂತೆ ಸರಳವಾದ ಶೈಲಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳೂ ಮುಂಬೈ ಸರಕಾರದ ಹಿಂದುಸ್ತಾನೀ ಬೋರ್ಡಿನ ಸದಸ್ಯರೂ ಆದ **ಶ್ರೀ. ಸಿದ್ಧನಾಥ ಪಂತರು** ಮುನ್ನುಡಿಯನ್ನು ಬರೆದಿದ್ದಾರೆ.

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ವಿ. ಸೂ.— ನಮ್ಮಲ್ಲಿ ಟೀಚರ್ಸ ಸೊಸಾಯಿಟಿಗಳಿಗೂ, ವಿವಿಧ ಉದ್ದೇಶಗಳ ಸಹಕಾರೀ ಸಂಘಗಳಿಗೂ ಬೇಕಾಗುವ ಬುಕ್ಕುಗಳೂ ಫಾರ್ಮುಗಳೂ ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಸಿಗುತ್ತವೆ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ವಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. **ಶ್ರೀ. ಕುರಡಿಯವರು ರಚಿಸಿರುವ,**

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ದಾದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ೨೪ ನೆಯ ಪುಟದ ಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣದ ಸಮಿತಿಯು ಶಿಫಾರಸಿಗೆ ಅನುಸರಿಸಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟ. ಬಿ. ಪಿಎಚ್. ಸಿ. (ಅಮೇರಿಕಾ)

ಪ್ರತಿಯೊಬ್ಬ ಶಿಕ್ಷಕನಿಗೂ ಉಪಯುಕ್ತವಾದ ಈ ಪುಸ್ತಕದಲ್ಲಿ ಹಿಂದೀ ಕವಾಯತ; ಸರ್ವಾಂಗಸುಂದರ ವ್ಯಾಯಾಮ, ಆಸನ, ನಮಸ್ಕಾರ, ಲಾಠೀ, ಲೇಝೀಮ, ಜೋಡಿ, ಕೋಲಾಟ ಇತ್ಯಾದಿಗಳ ಮಾಹಿತಿಯನ್ನು ಕೊಟ್ಟಿದೆ. ಆಟ-ಜ್ಯೆಲಾಟಗಳನಿಯಮಗಳನ್ನೂ ಕೊಟ್ಟಿದೆ. ಬೆಲೆ: ೩ ರೂಪಾಯಿಗಳು.

ಈ ಪುಸ್ತಕದಲ್ಲಿ ಕೊಟ್ಟ ನಮಸ್ಕಾರಗಳ ಚಿತ್ರಪಟ ಬೆಲೆ: ೪ ಆಣೆ.

ದೊರೆಯುವ ಸ್ಥಳ:—

ವಿಳಾಸ :— ಶ್ರೀ. ಜ. ಬಾಪಟ,

ಮುಡಿಹಾಳ, ಧಾರವಾಡ.

ಡಿಸೆಂಬರ್ ೧೯೪೦ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:
ರಾಘವೇಂದ್ರರಾವ ಶೇಷಗಿರಿರಾವ ಮಡಿಮನ್, ಬಿ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ	೧
೨.	ಪ್ರಕಟನೆ	೫
೩.	ಕರ್ನಾಟಕದ ಪುನರುಜ್ಜೀವನ	೬
೪.	ಈಮನ್ ಡಿ ಪ್ಯೆಲೆರಾ	೯
೫.	೨೫ನೆಯ ಕನ್ನಡ ಸಾಹಿತ್ಯಸಮ್ಮೇಲನ ಧಾರವಾಡ	೧೪
೬.	ಪಾಠಪದ್ಧತಿಗಳು	೧೫
೭.	ಪ್ರಾಥಮಿಕ ಶಾಲೆಗಳೊಳಗಿನ ಪಾಠಪದ್ಧತಿಗಳು	೧೬
೮.	ಮಹಾಯುದ್ಧದ ಭೂಗೋಲ	೧೮
೯.	ಚಳಿಗಾಲದ ವರ್ಣನೆ	೨೧
೧೦.	ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ ೧೯೪೧	೨೩
೧೧.	ಪ್ರಕಟನೆ	೨೪
೧೨.	ಪತ್ರಗಳ ಸಾರಾಂಶ	೩೨

Printed by V. Y. Jathar, B. Sc. at the Karnatak Printing Works, Dharwar
and Published by R. S. Madiman, B. A., Head Master
Training School, Dharwar at his Office

ಓದಿರಿ ! ತ್ವರೆಮಾಡಿರಿ !

ವಾಗ್ವಿಲಾಸ ಬುಕ್‌ಡೀಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾತಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ., ಎಡ್‌ವಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರವೂರ ಕವಿಾಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦–೬–೦

ವಿದ್ಯಾರ್ಥಿಗಳ ನಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ. ಎ.

ಸಂಪುಟ ೭೯	ಡಿಸಂಬರ ೧೯೪೦	ವರ್ಷ ೧೨. ಸಂ. ೯

ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ

೧೯೩೯-೪೦ನೆಯ ಸಾಲಿನಲ್ಲಿ ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ ಕಾರ್ಯವು ಯಾವ ರೀತಿಯಾಗಿ ಸಾಗಿತೆಂಬದನ್ನು ವಿವೇಚಿಸುವ ಸರಕಾರದ ಸವಿಸ್ತರ ವರದಿಯು ಈಗಾಗಲೆ ಪ್ರಕಟವಾಗಿರುವದು. ಈ ಒಂದು ವರ್ಷದ ಅವಧಿಯಲ್ಲಿ ಸಮ್ಮ ಶಿಕ್ಷಣದ ಪ್ರಗತಿಯು ಸಮಾಧಾನಕರವಾಗಿ ಸಾಗಿರುವದೆಂಬದು ಈ ವರದಿಯಿಂದ ವ್ಯಕ್ತವಾಗುವದು.

ಈ ಅವಧಿಯಲ್ಲಿ ೩,೫೯೩ ಶಿಕ್ಷಣ ಸಂಸ್ಥೆಗಳು ಹೊಸದಾಗಿ ಪ್ರಾರಂಭಿಸಲ್ಪಟ್ಟವು. ಅವುಗಳಲ್ಲಿ ಕಲಿಯುವವರ ಸಂಖ್ಯೆಯು ೨,೧೫,೬೩೧ ರಿಂದ ಹೆಚ್ಚಾಯಿತು. ಅಂತೂ ಈ ವರ್ಷದ ಕೊನೆಗೆ ಒಟ್ಟು ಶಿಕ್ಷಣ ಸಂಸ್ಥೆಗಳ ಸಂಖ್ಯೆ ಮತ್ತು ಅಲ್ಲಿ ಕಲಿಯುವವರ ಸಂಖ್ಯೆ ಇವು ಕ್ರಮವಾಗಿ ೨೨,೩೨೨ ಮತ್ತು ೧೭,೮೨,೦೭೨ ಆದವು. ಪ್ರಾಥಮಿಕ ಮಾಧ್ಯಮಿಕ ಉಚ್ಚ ಮೊದಲಾದ ಬೇರೆ ಬೇರೆ ತರಗತಿಗಳ ಶಿಕ್ಷಣದಲ್ಲಿಯೂ ತಕ್ಕಂತೆ ಬೆಳವಣಿಗೆಯಾಗಿರುವದಾದರೂ ಪ್ರಾಥಮಿಕ ಶಿಕ್ಷಣದಲ್ಲಿ ಮಿಕ್ಕ ತರಗತಿಗಳ ಶಿಕ್ಷಣಕ್ಕಿಂತಲೂ ಹೆಚ್ಚು ಪ್ರಮಾಣದಿಂದ ಪ್ರಗತಿಯಾದದ್ದು ಕಂಡುಬರುವದು. ಮುಂಬಯಿ ಇಲಾಖೆಯಲ್ಲಿ ಚಿಕ್ಕ ದೊಡ್ಡ ಹಳ್ಳಿಗಳೆಲ್ಲ ಸೇರಿ ಒಟ್ಟಿಗೆ ೨೧,೬೬೮ ಊರುಗಳಿರುವವು. ಇವುಗಳ ಪೈಕಿ ೧೩,೩೫೮ ಊರುಗಳಲ್ಲಿ

ಪ್ರಾಥಮಿಕ ಶಾಲೆಗಳಿರುವವು. ಸರಾಸರಿ ೫·೮ ಚೌರಸ ಮೈಲಿಗೆ ಒಂದರಂತೆ ಶಾಲೆಯಿರುವದೆಂದು ಲೆಕ್ಕವು ಹೊರಡುವದು. ಬೇರೆ ಬೇರೆ ತರಗತಿಗಳ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿದ್ದ ಗಂಡುಮಕ್ಕಳ ಶೇಕಡಾ ಪ್ರಮಾಣವು ಗಂಡುಸರ ಸಂಖ್ಯೆಗೆ ೧೪·೩ ರಂತೆಯೂ ವಿದ್ಯಾರ್ಥಿನಿಯರ ಈ ಪ್ರಮಾಣವು ೫·೫ ರಂತೆಯೂ ಇರುವದು. ಕಳೆದ ವರ್ಷ ಈ ಪ್ರಮಾಣವು ಅನುಕ್ರಮವಾಗಿ ೧೨·೭೦ ಮತ್ತು ೪·೪೮ ಇದ್ದವು.

ಸರಕಾರದಿಂದ ಮಾನ್ಯತೆಯನ್ನು ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು ೧೭,೫೩.೭೦೧ ಇದ್ದು ಅದರಲ್ಲಿ ಈ ವರ್ಷ ಹೆಚ್ಚಿದ ೨,೧೬,೯೩೮ ವಿದ್ಯಾರ್ಥಿಗಳ ಸಮಾವೇಶವಾಗಿದೆ. ಇವರಲ್ಲಿ –

ಹಿಂದುಗಳು	೧೪,೨೨,೪೪೭
ಮುಸಲ್ಮಾನರು	೨,೧೦,೭೪೧
ಹಿಂದೀ ಕ್ರಿಸ್ತಿಯನ್ನರು	೪೭,೨೩೪
ಪಾರ್ಸಿಗಳು	೧೪,೨೭೪
ಆಂಗ್ಲೊ ಇಂಡಿಯನ್ನರು ಮತ್ತು ಯುರೋಪಿಯನ್ನರು	೫,೨೪೪
ಜೈನರು	೪೪,೯೩೧
ಶೀಖರು	೭೧೫
ಜ್ಯೂ ಜನರು	೫೬೩೧

ಈ ರೀತಿಯಾಗಿ ಬೇರೆ ಬೇರೆ ಜಾತಿ ಮತಗಳಿಗೆ ಸೇರಿದ ವಿದ್ಯಾರ್ಥಿಗಳಿರುವರು.

ಈ ವರ್ಷದಲ್ಲಿ ಶಿಕ್ಷಣ ಕಾರ್ಯಕ್ಕಾಗಿ ೩೪೨೦೪೦ ಲಕ್ಷ ರೂ. ಪ್ರತ್ಯಕ್ಷ ವೆಚ್ಚವೂ ೫೬೩ ಲಕ್ಷ ರೂ. ಅಪ್ರತ್ಯಕ್ಷ ವೆಚ್ಚವೂ ತಗಲಿದವು. ಈ ವೆಚ್ಚವು—

	ಒಟ್ಟು ರಕಮು		ಶೇಕಡಾ ಪ್ರಮಾಣ
ಸರಕಾರದಿಂದ	೧,೯೭,೦೧,೨೦೦	ರೂ.	೪೪·೯
ಬೋರ್ಡುಗಳಿಂದ	೬೯,೭೫,೪೭೪	ರೂ.	೧೫·೯
ಫೀ.	೧,೨೦.೨೫,೪೩೪	ರೂ.	೨೭·೪
ಇತರ ಬಾಬುಗಳಿಂದ	೫,೧೭,೭೪೧	ರೂ.	೧೧·೪

ಈ ರೀತಿಯಾಗಿ ಬೇರೆ ಬೇರೆ ಬಾಬುಗಳಿಂದ ಪೂರೈಸಲ್ಪಟ್ಟಿತು.

ಈ ಒಟ್ಟು ರಕಮಿನಲ್ಲಿ ಕೇವಲ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ತಪಾಸಣೆಯ ಅಧಿಕಾರಿಗಳು, ಹೊಸ ಕಟ್ಟಡಗಳನ್ನು ಕಟ್ಟಿಸುವದು, ಈಗಿದ್ದ ಕಟ್ಟಡಗಳನ್ನು

ಸರಿಪಡಿಸುವದು ಮೊದಲಾದ ಇತರ ವೆಚ್ಚಗಳನ್ನು ಬಿಟ್ಟು ೨ ಕೋಟಿ ರೂಪಾಯಿಗಳು ಖರ್ಚಾಗಿವೆ. ಸರಕಾರದಿಂದ ಮಾನ್ಯತೆಹೊಂದಿದ ಶಿಕ್ಷಣ ಸಂಸ್ಥೆಗಳ ಕಟ್ಟಡಗಳಿಗಾಗಿ ೧,೫೯೦೦ ರೂ. ವೆಚ್ಚವಾಗಿದೆ.

ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳಾದ ಮೆಟ್ರಿಕ್ಯುಲೇಶನ್, ಇಂಟರ ಮಿಡಿಯೇಟ್, ಬಿ. ಎ. ಮೊದಲಾದ ಪರೀಕ್ಷೆಗಳಿಗೆ ಕುಳಿತ ಉಮೇದುವಾರರ ಸಂಖ್ಯೆಯೂ ಕೂಡ ಈ ವರ್ಷ ಬೆಳೆದಿದ್ದು, ಈ ಪರೀಕ್ಷೆಗಳ ಪರಿಣಾಮಗಳೂ ತುಂಬ ಸಮಾಧಾನಕಾರಕವಾಗಿವೆ. ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಈ ವರ್ಷ ೧೫,೫೦೪ ಉಮೇದುವಾರರು ಕುಳಿತಿದ್ದು ೮೦೦೨ ವಿದ್ಯಾರ್ಥಿಗಳು ಉತ್ತೀರ್ಣರಾದರು; ಕಳೆದ ವರ್ಷಕ್ಕಿಂತ ಈ ವರ್ಷ ೧೪೧೭ ಉಮೇದುವಾರರು ಹೆಚ್ಚಿಗೆ ಕುಳಿತಿದ್ದರು.

ಇದೇ ಮೇರೆಗೆ ಲಾ ಕಾಲೇಜ, ಮೆಡಿಕಲ್ ಕಾಲೇಜ, ಅಗ್ರಿಕಲ್ಚರಲ್ ಕಾಲೇಜ ಮೊದಲಾದ ಔದ್ಯೋಗಿಕ ಶಿಕ್ಷಣಸಂಸ್ಥೆಗಳಲ್ಲಿಯೂ ಸಾಕಾದಷ್ಟು ಪ್ರಗತಿಯಾಗಿರುವದು. ಮಾಧ್ಯಮಿಕ ಶಾಲೆಗಳ ಸಂಖ್ಯೆಯು ೬೦ ಹೆಚ್ಚಾಗಿ ಒಟ್ಟು ಶಾಲೆಗಳು ೭೯೦ ಆದವು. ಈ ವರ್ಷದಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೧೬೩೩ ರಿಂದ ಹೆಚ್ಚಾಗಿ ಒಟ್ಟು ೧೬೮೪೫ ಆಗಿರುವದು. ಮಾಧ್ಯಮಿಕ ಶಿಕ್ಷಣದ ಒಟ್ಟು ವೆಚ್ಚವು ಒಂದು ಕೋಟಿಗಿಂತ ತುಸು ಹೆಚ್ಚಾಗಿರುವದು.

ಈ ಇಲಾಖೆಯಲ್ಲಿ ಒಟ್ಟು ೧೭೪೭ ಗಂಡುಮಕ್ಕಳ ಪ್ರಾಥಮಿಕ ಶಾಲೆಗಳು ಇರುವವು. ಈ ಎಲ್ಲ ಶಾಲೆಗಳಲ್ಲಿ ಕೂಡಿ ೧೨೪೬೧೨ ವಿದ್ಯಾರ್ಥಿಗಳು ಕಲಿಯುತ್ತಿರುವರು. ಮತ್ತು ಹೆಣ್ಣುಮಕ್ಕಳ ಶಾಲೆಗಳು ೫೪ ಹೆಚ್ಚಾಗಿ ಒಟ್ಟು ೧೬೧೪ ಆಗಿರುವವು. ಒಟ್ಟು ವಿದ್ಯಾರ್ಥಿನಿಯರ ಸಂಖ್ಯೆಯು (ಗಂಡುಮಕ್ಕಳ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿನಿಯರನ್ನು ಕೂಡಿಸಿ) ೩೯೪೬೬ ಇರುವದು.

ಬೇರೆ ಬೇರೆ ಆಡಳಿತಗಳಿಗೆ ಒಳಗಾದ ಶಿಕ್ಷಣ ಸಂಸ್ಥೆಗಳಿಗೆ ಸೇರಿದ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ವಿವರವು ಈ ರೀತಿಯಾಗಿರುವದು:—

	ಶಾಲೆಗಳು	ವಿದ್ಯಾರ್ಥಿಗಳು
ಸರಕಾರೀ ಶಾಲೆಗಳು	೩೯	೫,೭೯೪
ಜಿಲ್ಲಾ ಲೋಕಲ್ ಬೋರ್ಡುಗಳು	೯,೯೦೩	೭,೪೮,೬೬೬
ಮ್ಯುನಿಸಿಪಾಲಿಟಿಗಳು	೧,೬೯೦	೪,೦೧,೧೨೬
ಸಹಾಯ ಹೊಂದುವ ಸಂಸ್ಥೆಗಳು	೭,೩೪೨	೩,೩೫,೭೫೯
ಸಹಾಯ ಹೊಂದದಿರುವ ಸಂಸ್ಥೆಗಳು	೧೪೧	೯,೧೬೧
ಒಟ್ಟು	೧೯,೧೧೫	೧೫,೦೦,೪೫೬

ಪ್ರಾಥಮಿಕ ಶಿಕ್ಷಣದ ಸಲುವಾಗಿ ೨ ಕೋಟಿ ರೂ. ವೆಚ್ಚವಾಗಿದ್ದು ಅವುಗಳ ಗೋಷವಾರೆಯು ಈ ಕೆಳಗಿನಂತಿರುವದು.

ಸರಕಾರದಿಂದ ೧೨,೨೨೦ ಸಾವಿರ; ಜಿಲ್ಲಾ ಲೋಕಲ್ ಬೋರ್ಡುಗಳಿಂದ ೯೪೦ ಸಾವಿರ; ಮುನಿಸಿಪಾಲಿಟಿಗಳಿಂದ ೪೫೬ ಸಾವಿರ; ಫೀ ಹಣದಿಂದ ೮ ಲಕ್ಷ; ಇತರ ಬಾಬುಗಳಿಂದ ೧೪೪೦ ಸಾವಿರ. ರಾತ್ರಿ ಶಾಲೆಗಳನ್ನೊಳಗೊಂಡು ೧೫೦೩ ಪ್ರಬುದ್ಧರ ಶಿಕ್ಷಣದ ಶಾಲೆಗಳಿದ್ದು ಅವುಗಳಲ್ಲಿ ೩೮೦೫೩ ಪ್ರಬುದ್ಧ ವಿದ್ಯಾರ್ಥಿಗಳಿದ್ದರು.

ಟ್ರೇನಿಂಗ್ ಸಂಸ್ಥೆಗಳು. ಈ ಇಲಾಖೆಯಲ್ಲಿ ಒಟ್ಟು ೩೧೧ ಗಂಡುಮಕ್ಕಳ ಮತ್ತು ೨೨ ಹೆಣ್ಣುಮಕ್ಕಳ ಟ್ರೇನಿಂಗ್ ಸಂಸ್ಥೆಗಳಿದ್ದು ಅವುಗಳಲ್ಲಿ ಕ್ರಮವಾಗಿ ೨೬೧೯ ಶಿಕ್ಷಕರೂ ೧೩೧೯ ಶಿಕ್ಷಕಿಯರೂ ಶಿಕ್ಷಣ ಹೊಂದಿದರು. ಇವುಗಳಲ್ಲಿ ೩೩ ಶಿಕ್ಷಣ ಸಂಸ್ಥೆಗಳೂ ೧೬೫೩ ವಿದ್ಯಾರ್ಥಿಗಳೂ ಖಾಸಗೀ ಆಡಳಿತಕ್ಕೆ ಒಳಪಟ್ಟಿರುವರು.

ಮುಸಲ್ಮಾನರ ಶಿಕ್ಷಣ. ಶಿಕ್ಷಣ ಹೊಂದುವವರ ಒಟ್ಟು ಸಂಖ್ಯೆಯು ೨,೧೦,೭೮೧ ಇದ್ದು ಅವರಲ್ಲಿ ೬೦,೧೯೭ ವಿದ್ಯಾರ್ಥಿನಿಯರಿರುವರು. ಅವರಲ್ಲಿ ಉಚ್ಚ ಶಿಕ್ಷಣ ಹೊಂದುವ ಮುಸಲ್ಮಾನ ವಿದ್ಯಾರ್ಥಿಗಳ ಸಂಖ್ಯೆಯು ೫೭೭ ಮತ್ತು ಔದ್ಯೋಗಿಕ ಕಾಲೇಜಗಳಲ್ಲಿ ಕಲಿಯುವವರ ಸಂಖ್ಯೆಯು ೨೯೯ ಮಾಧ್ಯಮಿಕ ಶಾಲೆಗಳಲ್ಲಿ ಓದುವವರ ಸಂಖ್ಯೆಯು ೧೩,೪೪೫ ಪ್ರಾಥಮಿಕ ಶಾಲೆಗಳಲ್ಲಿರುವವರ ಸಂಖ್ಯೆಯು ೧೪೬೨೦ ಮತ್ತು ಸ್ಪೆಶಲ್ ಸ್ಕೂಲುಗಳಲ್ಲಿರುವವರ ಸಂಖ್ಯೆಯು ೯೪೪೦ ಇರುವುದು.

ಮಧ್ಯಮ ವರ್ಗದ ಮತ್ತು ಹಿಂದುಳಿದವರ ಶಿಕ್ಷಣದ ವಿಚಾರ. ಈ ಕೆಳಗೆ ಹೇಳುವ ವಿವರಣೆಯಿಂದ ಸರಕಾರದಿಂದ ಮಾನ್ಯತೆ ಹೊಂದಿದ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವವರ ಸಂಖ್ಯೆಯು ಎಷ್ಟೆಂಬು ಗೊತ್ತಾಗುವದು.

ಮಧ್ಯಮ ವರ್ಗದ ಹೆಸರು.	೧೯೩೮–೩೯.	೧೯೩೯–೪೦.
ಮರಾಟೆರು	೨,೪೪,೫೫೮	೨,೯೩,೩೯೪
ಕುರುಬ ಕೋಳಿ ಮೊದಲಾದ ಒಕ್ಕಲತನದ ವರ್ಗದವರು	೨,೬೧,೦೬೭	೩,೦೨,೪೮೨
ಕಲೆಗಳಿಂದ ಜೀವಿಸುವವರು	೧,೧೬,೯೫೫	೧,೩೦,೩೬೧
ಲಿಂಗಾಯತರು	೯೩,೯೪೮	೧,೦೭,೮೬೦
ಅಂತೂ	೬,೧೬,೫೨೮	೮,೩೩,೬೯೭

ಹಿಂದುಳಿದ ವರ್ಗದವರು :—		
ಶೆಡ್ಯೂಲ್ಡ ವರ್ಗದವರು	೯೨,೦೨೬	೧,೧೧,೬೮೨
ಗುಡ್ಡಗಾಡು ನಿವಾಸಿಗಳು	೫೩,೦೮೪	೬೩,೮೮೯
ಇತರ ಹಿಂದುಳಿದ ವರ್ಗಗಳವರು	೫೦,೧೯೬	೬೪,೭೦೯
ಅಂತೂ	೧,೯೫,೩೦೬	೨,೪೦,೩೮೦

ಪ್ರಕಟನೆ

ದಕ್ಷಿಣಭಾಗದೊಳಗಿನ ಎಲ್ಲ ಮಾಧ್ಯಮಿಕ ಶಾಲೆಗಳ ಮುಖ್ಯ ಚಾಲಕರಿಗೆ

ತಮ್ಮ ಮಕ್ಕಳನ್ನು ಪರೀಕ್ಷಿಸಿ ಅವರು ಯಾವ ಇಯತ್ತೆಗೆ ಸೇರಲು ಯೋಗ್ಯರಿರುವರೋ ಆ ಇಯತ್ತೆಗೆ ಹೆಸರು ಹಚ್ಚಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡ ಬೇಕೆಂಬ ಪ್ರಾರ್ಥನೆಯ ಅರ್ಜಿಗಳು ಬಹುಜನ ಪಾಲಕರಿಂದ ಪ್ರತಿವರ್ಷ ಜೂನ್ ತಿಂಗಳಲ್ಲಿ ನಮ್ಮ ಕಚೇರಿಗೆ ಹೇರಳವಾಗಿ ಬರುತ್ತಿರುವದು ನಮ್ಮ ಹಿಂದಿನ ಅನುಭವದ ಮಾತು. ಮತ್ತು ಈ ತರದ ಪರೀಕ್ಷೆಯ ಕೆಲಸವು ಹೆಸರಿಗೆ ಮಾತ್ರ ನಡೆ ನಡೆಯುವದೇ ಹೆಚ್ಚೆಂಬುದು ಕೂಡ ಕಂಡುಬಂದಿದೆ. ಮೇಲಾಗಿ ಹೀಗೆ ಸುಮಾರು ಒಂದು ತಿಂಗಳವರೆಗೆ ದಿನ ದಿನಕ್ಕೆ ಬಂದ ಬಂದ ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನೇ ಪರೀಕ್ಷಿಸುವದುಕೂಡ ಆಯಾ ಶಾಲೆಗಳ ಮುಖ್ಯಚಾಲಕರಿಗೆ ತುಂಬ ತೊಂದರೆಯ ಕೆಲಸವಾಗುವದು.

೨. ಶಾಲೆಗಳ ಮುಖ್ಯ ಚಾಲಕರಿಗೆ ಬರುವ ಈ ತೊಂದರೆಯನ್ನು ದೂರ ಮಾಡುವ ಮತ್ತು ನಮ್ಮ ಕಚೇರಿಗೆ ಬರುವ ಈ ಸಂಬಂಧದ ಕಾಗದಪತ್ರಗಳ ವ್ಯವಹಾರವನ್ನು ಅದಷ್ಟು ಕಡಿಮೆಮಾಡುವ ಧೋರಣೆಯಿಂದ ಖಾಸಗಿ ರೀತಿ ಯಿಂದ ಇಲ್ಲವೆ ಸರಕಾರದಿಂದ ಮಾನ್ಯತೆ ಪಡೆಯದೆ ಇರುವ ಶಾಲೆಗಳಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ತಾವು ಮುಂದೆ ಜೂನ್ ತಿಂಗಳಲ್ಲಿ ಪರೀಕ್ಷೆಗೆ ಕೂಡ್ರ ಲಿಚ್ಚಿಸುವ ಶಾಲೆಗಳ ವಾರ್ಷಿಕ ಪರೀಕ್ಷೆಯು ನಡೆಯುವ ವೇಳೆಯಲ್ಲಿಯೇ ಪರೀಕ್ಷೆಗೆ ಕೂಡ್ರಬೇಕೆಂದು ನಿರ್ಣಯಿಸಲೇಬೇಕಾಯಿತು. ವಿದ್ಯಾರ್ಥಿಗಳು ಯಾವ ಶಾಲೆಯಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳುವರೋ ಆದೇ ಶಾಲೆಯಲ್ಲಿಯೇ ಅವರು ಮುಂದೆ ಹೆಸರು ಹಚ್ಚಿಸಿಕೊಳ್ಳಬೇಕಾಗುವದೆಂಬ ದನ್ನು ಲಕ್ಷ್ಯದಲ್ಲಿಟ್ಟಿರಬೇಕು. ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳದಿರುವ ವಿದ್ಯಾರ್ಥಿಗಳನ್ನು ಇಂಥ ಮಾನ್ಯತೆ

ಪಡೆದ ಯಾವ ಶಾಲೆಯಲ್ಲಿಯೂ ಹೆಸರು ಹಚ್ಚಿಕೊಳ್ಳಲಾಗದು. ಬೇನೆ ಬೇಸರಿಕೆ ಗಳಂಥ ಅನಿವಾರ್ಯ ಕಾರಣಗಳಿಂದ ಪರೀಕ್ಷೆಗೆ ಕೂಡ್ರಲು ಸಾಧ್ಯವಾಗದೆ ನಮ್ಮ ವಿಶೇಷ ಅಪ್ಪಣೆಯನ್ನು ಪಡೆದುಕೊಂಡ ವಿದ್ಯಾರ್ಥಿಗಳ ಮಾತು ಬೇರೆ.

೩. ಶಾಲೆಗಳ ಮುಖ್ಯ ಚಾಲಕರು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಯ ತಾರೀಖುಗಳನ್ನು ಸ್ಥಾನಿಕ ವೃತ್ತಪತ್ರಿಕೆಗಳು ಮೊದಲಾದ ಸಾಧನಗಳ ಮೂಲಕ ಎಲ್ಲ ಜನರಿಗೂ ತಿಳಿಯುವಂತೆ ಪ್ರಕಟಿಸಬೇಕೆಂದು ಕೇಳಿಕೊಳ್ಳಲಾಗಿದೆ.

೪. ಇಂಥ ವಿದ್ಯಾರ್ಥಿಗಳನ್ನು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಗೆ ಕೂಡ್ರಿಸಿಕೊಳ್ಳಲಿಕ್ಕೆ ಶಾಲೆಗಳ ಮುಖ್ಯ ಚಾಲಕರು ಹೆಚ್ಚಿಸ ಫೀಯನ್ನು ತೆಗೆದು ಕೊಳ್ಳಲಾಗದು. ಆದರೆ ಈ ಸಮಯದಲ್ಲಿ ಹೆಸರು ಹಚ್ಚುವ ಫೀ ಮೊದಲಾದವನ್ನು ಬಿಟ್ಟು ಕಾಗದ ಮಸಿ ಮೊದಲಾದ ಉಪಕರಣಗಳಿಗೆ ಹತ್ತುವಷ್ಟೇ ಯೋಗ್ಯ ಫೀ ಯನ್ನು ಮಾತ್ರ ಅವರಿಂದ ತೆಗೆದುಕೊಳ್ಳಲು ಅಡ್ಡಿಯಿಲ್ಲ. ಹೀಗೆ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳನ್ನು ಜೂನ್ ತಿಂಗಳಲ್ಲಿ ಪ್ರವೇಶ ಫೀ ಮತ್ತು ಆ ತಿಂಗಳ ಫೀ ಇವನ್ನು ತೆಗೆದುಕೊಂಡು ಹೆಸರು ಹಚ್ಚಿಕೊಳ್ಳತಕ್ಕದ್ದು.

೬-೧೨-೧೯೪೦ }

S. R. Tawde,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್.

ಕರ್ನಾಟಕದ ಪುನರುಜ್ಜೀವನ

ಶ್ರೀ. ಆಲೂರ ವೆಂಕಟರಾಯರು ಮುಂಬಯಿಯ ಆಕಾಶವಾಣಿಯಲ್ಲಿ ಮಾಡಿದ ಭಾಷಣದ ಸಾರಾಂಶವು

'ಕರ್ನಾಟಕದ ಪುನರುಜ್ಜೀವನ' ಎಂಬ ಶಬ್ದಸಮುಚ್ಚಾಯದಿಂದ ಮೂರು ಮಾತುಗಳು ಧ್ವನಿತವಾಗುತ್ತವೆ.

೧. ಕರ್ನಾಟಕವೆಂಬ ದೇಶವು ಹಿಂದಕ್ಕೆ ಒಮ್ಮೆ ಜೀವಂತವಾಗಿತ್ತು.

೨. ನಡುವೆ ಅದು ಮೃತಪ್ರಾಯವಾಯಿತು.

೩. ಇಂದು ಅದು ಮತ್ತೆ ಜೀವಂತವಾಗಿದೆ ಅಥವಾ ಜೀವಂತವಾಗಹತ್ತಿದೆ.

೧. **ಹಿಂದಕ್ಕೆ:—** ಕರ್ನಾಟಕವು ಜೀವಂತವಾಗಿತ್ತೆಂಬುದಕ್ಕೆ ಅದರ ಗತ ವೈಭವವೇ ಸಾಕ್ಷಿಯಾಗಿದೆ. ಸ್ಥೂಲಮನದಿಂದ ಒಂದು ಸಾವಿರ ವರುಷಗಳವರೆಗೆ

ಅದು ತನ್ನ ಅಖಂಡತ್ವವನ್ನು ಕಾಯ್ದುಕೊಂಡಿತ್ತು. ಕ್ರಿ. ಶ. ೬ರಿಂದ ೧೬ನೆಯ ಶತಮಾನದವರೆಗೆ, ಇದರಲ್ಲಿ ಬಾದಾಮಿಯ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರದ ರಾಜರು ಈಗೆ ನಾಲ್ಕು ರಾಜಮನೆತನಗಳ ಸಾಮ್ರಾಜ್ಯಗಳು ಕರ್ನಾಟಕದಲ್ಲಿ ಬಾಳಿದವು. ಈ ಅರಸರೆಲ್ಲರೂ ಅಚ್ಚ ಕನ್ನಡಿಗರು. ಈ ಕಾಲದಲ್ಲಿ ವಾಙ್ಮಯ, ಕಲೆ, ವ್ಯಾಪಾರ, ಸಂಸ್ಕೃತಿಗಳ ಅಭಿವೃದ್ಧಿಯಾಗಿ ಕನ್ನಡಿಗರು ತಮ್ಮ ಕರ್ತೃತ್ವ ಶಕ್ತಿಯನ್ನು ತೋರಿಸಿದರು. ಮಹಾರಾಷ್ಟ್ರ, ತೆಲಗು ತಮಿಳುನಾಡುಗಳ ಬಹಳ ಭಾಗವನ್ನು ಕೂಡ ಇವರು ಪಾದಾಕ್ರಾಂತ ಮಾಡಿದ್ದರು.

೨. **ನಡುವೆ:—** ವಿಜಯನಗರವು ಹಾಳಾದ ಕೂಡಲೆ ಕರ್ನಾಟಕವು ಒಡೆದು ಮೂರು ತುಂಡಾಯಿತು, ಒಂದು ತುಂಡನ್ನು ಮರಾಠರು ಎತ್ತಿದರು. ಮತ್ತೊಂದನ್ನು ನಿಜಾಮನು ನುಂಗಿದನು. ಮೂರನೆಯದು ಕನ್ನಡಿಗರ ಪಾಲಿಗೆ ಉಳಿಯಿತು. ಅದುಕೂಡ ಟೀಪುವಿನಂಥ ಅಚ್ಚ ಕನ್ನಡಿಗನಲ್ಲದವನ ಕೈಗೆ ಸಿಕ್ಕು ದುರ್ದೆಶೆಗೆ ಈಡಾಯಿತು. ಮುಂದೆ ಮುಂದೆ ಮರಾಠರ ಭಾಗವು ಇಂಗ್ಲೀಷರ ಪಾಲಿಗೆ ಹೋಯಿತು.

೩. **ಇಂದು:—** ಆ ಮೂರು ತುಂಡುಗಳು ಹಾಗೆಯೇ ಉಳಿದಿವೆ. ಟೀಪುವಿನ ಕೈಯಲ್ಲಿದ್ದ ತುಂಡಿಗೆ ಅಚ್ಚ ಕನ್ನಡಿಗರಾದ ಮೈಸೂರ ಅರಸರು ಒಡೆಯರಾಗಿದ್ದಾರೆ. ಇಲ್ಲಿ ಕನ್ನಡದ ಏಳ್ಗೆಯಾಗಲು ಅವಕಾಶವುಳಿದಿದೆ. ಬ್ರಿಟಿಶ ಕರ್ನಾಟಕದ ತುಂಡು ಟುಕು ಟುಕು ಜೀವ ಹಿಡಿದಿದೆ. ನಿಜಾಮ ಕರ್ನಾಟಕದಲ್ಲಿ ವಿಪರೀತ ಪರಿಸ್ಥಿತಿಯ ಮೂಲಕ ಕನ್ನಡ ಸಂಸ್ಕೃತಿಯು ಕುಗ್ಗಹತ್ತಿದೆ. ಬ್ರಿಟಿಶ ಕರ್ನಾಟಕದಲ್ಲಿ ನೊದಲು ಮೊದಲು ಮರಾಟಿಯ ಮೋಹವು ಬಹಳವಾಗಿದ್ದಿತು. ಮೈಸೂರಲ್ಲಿ ಭಾಷಾಭಿಮಾನವಿದ್ದರೂ ದೇಶಾಭಿಮಾನವು ಹುಟ್ಟಿರಲಿಲ್ಲ. ಅವರಲ್ಲಿ, ಮೈಸೂರಿನವರು, ಹೊರಗಿನವರು, ಎಂಬ ದುರಭಿಮಾನವು ಬೆಳೆಯಿತು. ಉತ್ತರ ಕರ್ನಾಟಕ, ನಿಜಾಮ ಕರ್ನಾಟಕಗಳು ರಾಜಧಾನಿಯಿಂದ ದೂರ ಸಿಡಿದುಬಿದ್ದಿವೆ. ಬ್ರಿಟಿಶ ಕರ್ನಾಟಕದಲ್ಲಿಯೂ ಮತ್ತೆ ಎರಡು ತುಂಡುಗಳಾಗಿವೆ. ಮುಂಬಯಿ ಕರ್ನಾಟಕದವರಿಗೆ, ಮುಂಬಯಿ ಪುಣೆಗಳು ದೂರವಾಗಿವೆ. ಮದ್ರಾಸ ಕರ್ನಾಟಕದವರಿಗೆ, ಮದ್ರಾಸವಂತೂ ತೀರ ಪೂರ್ವಕ್ಕೆ ಇರುವದು

ಸಾರಾಂಶ:— ಕನ್ನಡಿಗರಲ್ಲಿ ಭಾಷಾಭಿಮಾನವು ಹುಟ್ಟುವ ಪೂರ್ವದಲ್ಲಿಯೇ ಕರ್ನಾಟಕವು ತುಂಡಾಗಿಹೋಯಿತು. ಖಂಡ ಕರ್ನಾಟಕವನ್ನು ಅಖಂಡ ಮಾಡುವದೇ ಪುನರುಜ್ಜೀವನದ ಸಂಕ್ಷಿಪ್ತ ಅರ್ಥವು. ತುಂಡುತುಂಡಾಗಿ ಹೋಗಿರುವದೇ ನಮ್ಮ ಯಾವತ್ತೂ ದುಃಖಗಳ ಮೂಲವು. ೨೫-೩೦ ವರ್ಷಗಳ

ಪೂರ್ವದಲ್ಲಿ, 'ಕರ್ನಾಟಕತ್ವ'ದ ಕಲ್ಪನೆಯು ಕ್ವಚಿತ್ತಾಗಿ ಕಂಡುಬರುತ್ತಿತ್ತು. ವಂಗ ಭಂಗವು ನಮ್ಮ ಕಣ್ಣಿಗೆ ಅಂಜನವನ್ನು ಹಾಕಿತು. ಪುನರುಜ್ಜೀವನವು ಕನ್ನಡಿಗರಿಗೆ ತೀಕ್ಷ್ಣ ಪ್ರಶ್ನೆಯಾಗಿದೆ. ಇಷ್ಟು ವಿುಕ್ಕವರಿಗಿಲ್ಲ. ಅದುಕಾರಣ ನಮ್ಮ ಚಳವಳಿಯ ಅರ್ಥವು ಉಳಿದವರಿಗೆ ಚೆನ್ನಾಗಿ ತಿಳಿಯುವದಿಲ್ಲ. ನಮ್ಮ ಕರ್ನಾಟಕದಷ್ಟು ಇನ್ನಾವ ಪ್ರಾಂತವೂ ಹರಿದು ಹುರಪಡಿಯಾಗಿರುವದಿಲ್ಲ.

'ಕನ್ನಡ ನಾಡು ಎಲ್ಲ ಬಗೆಯಿಂದಲೂ ಒಂದಾಗಬೇಕು' ಎಂಬ ಚಿಕ್ಕ ವಾಕ್ಯದಲ್ಲಿ ಕರ್ನಾಟಕದಲ್ಲಿ ನಡೆಯುವ ಎಲ್ಲ ಚಳವಳಿಗಳ ಉದ್ದೇಶಗಳನ್ನು ಸಮಾವಿಷ್ಟವಾಡಬಹುದು. ಅಖಂಡ ಕರ್ನಾಟಕವು ಮುಂಚೆ ಹೃದಯದಲ್ಲಿ ಹುಟ್ಟಬೇಕು. ನಂತರ ವಾಣಿಯಲ್ಲಿ ಹೊರಬೀಳಬೇಕು. ತರುವಾಯ ಅದು ಕೃತಿಯಲ್ಲಿ ಇಳಿಯುತ್ತದೆ. ಅಖಿಲ ಕರ್ನಾಟಕದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದೇ ಸಾಂಸ್ಕೃತಿಕ ಏಕೀಕರಣದ ಮುಖ್ಯ ಲಕ್ಷಣ. ಕರ್ನಾಟಕದ ಯಾವತ್ತು ಭಾಗಗಳನ್ನು ಒಂದೇ ಆಡಳಿತಕ್ಕೆ ಸೇರಿಸುವದೇ ರಾಜಕೀಯ ಏಕೀಕರಣದ ಸ್ವರೂಪ. ಇವೆರಡೂ ಧ್ಯೇಯಗಳು ಒಮ್ಮೆಲೆ ಸಫಲವಾಗುವದು ಶಕ್ಯವಿಲ್ಲ. ಇವು ಇನ್ನೂ ಧ್ಯೇಯಗಳೇ. ರಾಜಕಾರಣವೊಂದನ್ನು ಹೊರ್ತುಪಡಿಸಿ ವಿುಕ್ಕ ಎಲ್ಲ ಪ್ರಶ್ನೆಗಳನ್ನು ಕನ್ನಡಿಗರು ಸ್ವತಂತ್ರವಾಗಿಯೇ ಬಿಡಿಸಬೇಕಾಗುತ್ತದೆ. ಪ್ರಾಂತೀಯ ಅಭಿಮಾನವು ಕೂಡ ಅಂಕುರಿಸದೆ ಇದ್ದ ಕರ್ನಾಟಕದಲ್ಲಿ ಪ್ರಾಂತೀಯ ಅಂಧತೆಗೆ ಅವಕಾಶವೇ ಇಲ್ಲ.

ಕನ್ನಡ ತರುಣರೇ, ನೀವು ಹೆಚ್ಚಿಗೆ ಬುದ್ಧಿವಂತರಿದ್ದುದರಿಂದಲೇ ದೇವರು ನಿಮಗೆ ಎಲ್ಲಕ್ಕಿಂತ ಬಿಕ್ಕಟ್ಟಾದ ಲೆಕ್ಕವನ್ನು ಬಿಡಿಸಲಿಕ್ಕೆ ಕೊಟ್ಟಿರುವನೆಂದು ನಾನು ಬಗೆಯುತ್ತೇನೆ. ನೀವು ಕರ್ನಾಟಕದ ಮುಖಂಡರಾಗಿರಿ. ನಾನು ಹೇಳಿದ ಎರಡು ಧ್ಯೇಯಗಳ ಭಾವನೆಯ ರೆಕ್ಕೆಗಳನ್ನು ಕಟ್ಟಿಕೊಂಡು ಅನಂತವಾದ ಭವಿಷ್ಯ ಕಾಲದ ಆಕಾಶದಲ್ಲಿ ಹಾರಾಡಿರಿ. ಆಂದರೆ ನಿಮಗೆ ಮುಂದಿನ ಕರ್ನಾಟಕದ ನವ್ಯವಾದ ವಿಶ್ವರೂಪದ ದರ್ಶನವಾಗುವದು. ಆಗ ನೀವು ವಿಲಕ್ಷಣವಾದ ಕ್ರಾಂತಿಯನ್ನು ಕಾಣುವಿರಿ. ನಾನು ನಿಮ್ಮ ಮುಂದಿಟ್ಟ ಈ ಧ್ಯೇಯಗಳು ಅಖಿಲ ಭರತಖಂಡಕ್ಕೂ ಅನ್ವಯಿಸುವವು. ಇವೆರಡೂ ಧ್ಯೇಯಗಳ ಮಹತ್ವದ ಜ್ಞಾನವೇ ಯುರೋಪದ ಇಂದಿನ ಘೋರ ಯುದ್ಧಕ್ಕೆ ಕಾರಣವಾಗಿದೆ. ಕನ್ನಡಿಗರೇ ಕರ್ನಾಟಕದ ಪುನರುಜ್ಜೀವನವು ನಿಮ್ಮನ್ನೇ ಕೂಡಿದೆ. ನೀವು ಮುನ್ನುಗ್ಗಿರಿ. ಇದರಲ್ಲಿಯೇ ಆನಂದವಿದೆ. ಗತವೈಭವವನ್ನು ಆಗತ ವೈಭವವನ್ನಾಗಿ ಮಾಡಿರಿ.

ಜಯ ಕರ್ನಾಟಕ ಮಾತೆ!

ಈಮನ್ ಡಿ ವ್ಹೆಲೆರಾ

ಅಯರ್ಲಂಡವು ಇಂಗ್ಲಂಡದ ಪಶ್ಚಿಮದಲ್ಲಿ ಚಿಕ್ಕದೊಂದು ದ್ವೀಪ. ಚಿಕ್ಕದಾದರೂ ಇಂಗ್ಲಂಡದಿಂದ ಬೇರಾಗಿದೆ. ಪ್ರಾಕೃತಿಕವಾಗಿ ಬೇರಾಗಿದ್ದರೂ ರಾಜಕೀಯವಾಗಿ ಬೇರಾಗಿ ಸ್ವತಂತ್ರವಾಗಲು ಅದಕ್ಕೆ ಅರೇಳುನೂರು ವರ್ಷಗಳು ಬೇಕಾದವು; ಸಾವಿರಾರು ಸತ್ಪುತ್ರರನ್ನು ಬಲಿಗೊಡಬೇಕಾಯಿತು; ಎಷ್ಟೋ ಮನೆಮಾರುಗಳು ಸುಟ್ಟು ಸೂರೆಯಾದವು; ಎಷ್ಟೋ ಕುಟುಂಬಗಳು ನಿರ್ಗತಿಕವಾದವು; ಸೆರೆಮನೆಗೆ ಹೋದ ಎಷ್ಟೋ ದೇಶಭಕ್ತರು ಹೊರಗೆ ಬರಲೇ ಇಲ್ಲ; ಸ್ವಾತಂತ್ರ್ಯಪ್ರಿಯರಾದ ಎಷ್ಟೋವೀರರು ನಡುನಗರದಲ್ಲಿ ಕೊಲೆಗಲ್ಲಿಗೆ ಏರಿಸಲ್ಪಟ್ಟರು. ಇಷ್ಟು ಉಗ್ರವಾಗಿದೆ. ಅಯರ್ಲಂಡದ ಸ್ವಾತಂತ್ರ್ಯದ ಇತಿಹಾಸ. ಈ ದೇಶದಲ್ಲಿ ಸರಕಾರದ ರೋಷಕ್ಕೆ ಗುರಿಯಾಗಿ ಶೂಲಕ್ಕೇರಿದ ಸ್ವಾತಂತ್ರ್ಯ ವೀರನೊಬ್ಬನು ಇಂದು ಅಂಬಾರಿಗೆ ಏರಿದ್ದಾನೆ. ಇದೇ ಅಯರ್ಲಂಡದಲ್ಲಿ ತಾನೇ ಸರಕಾರವಾಗಿದ್ದಾನೆ. ಇವನ ತೊಟ್ಟಿಲಲ್ಲಿಟ್ಟ ಹೆಸರು "ಈಮನ್ ಡಿ ವ್ಹೆಲೆರಾ".

ಈ ಮಹಾತ್ಮನು ೧೮೮೨ರಲ್ಲಿ ಅಮೇರಿಕೆಯೊಳಗಿನ ನ್ಯೂಯಾರ್ಕ ಶಹರದಲ್ಲಿ ಹುಟ್ಟಿದನು. ಈತನ ತಾಯಿ ಕರೇನ ಕ್ಯಾಥರಾಯಳು ಅಯರ್ಲಂಡದವಳು. ಇವಳು ಅಮೇರಿಕೆಗೆ ಹೊರಟು ತಮ್ಮೂರು ಬಿಡುವಾಗ ಊರವರೆಲ್ಲರೂ ನಮ್ಮೂರಿನ ಸೌಂದರ್ಯವೇ ಇಂದು ಊರು ಬಿಡುತ್ತಿದೆಯೆಂದು ಮರುಗಿದರಂತೆ. ಅವಳು ಇಷ್ಟು ಸುಂದರಿಯಾಗಿದ್ದಳು. ಅವಳ ಮನೆತನದಲ್ಲಿ ಎಷ್ಟೋ ಅಯರಿಷ ವೀರರು ಹುಟ್ಟಿ ಬೆಳೆದು ದೇಶಾಭಿಮಾನದಿಂದ ತೊಳಗಿ ಸ್ವಾರ್ಥತ್ಯಾಗಿಗಳೆನಿಸಿಕೊಂಡು ದೇಶೋದ್ಧಾರಕ್ಕೆ ನೆರವಾಗಿದ್ದರು. ಆದ್ದರಿಂದ ಇವಳು ದೇಶಾಭಿಮಾನದ ಕಣಿಯೆಂದೂ ಈ ಕಣಿಯಿಂದಲೇ "ಡಿ ವ್ಹೆಲೆರಾ"ನಂಥ ಉಜ್ವಲ ರತ್ನವು ಹೊರಟಿತೆಂದೂ ಹೇಳುವರು. ಇವನ ತಂದೆ ವ್ಹಿವ್ಹಿಅನ್ನನು ಬಹುಶ್ರುತನಾದ ವಿದ್ವಾಂಸನೂ ಅನೇಕ ಭಾಷಾಕೋವಿದನೂ ಚಿತ್ರಕಲಾ ನಿಪುಣನೂ ಸಂಗೀತಜ್ಞನೂ ಆಗಿದ್ದನು. ಮಗನು ಎರಡೇ ವರ್ಷದವನಾದಾಗ ತಂದೆ ತೀರಿಕೊಳ್ಳಲು ತಾಯಿಯು ನ್ಯೂಯಾರ್ಕಿನಂಥ ಮಹಾ ನಗರದಲ್ಲಿ ಮೈಮುರಿ ದುಡಿದ ಹೊರತು ಸಂಸಾರ ನಡೆಯದಂತಾಯಿತು. ಆದುದರಿಂದ ಅವಳು ಎರಡೇ ವರುಷದ ಎಳೆಗರುಳನ್ನು ತನ್ನ ತಾಯಿಯ ಬಳಿಗೆ ಕಳುಹಿಸಿಕೊಟ್ಟಳು. ಮನೆಯ ಮಗು ಮನೆಗೆ ಬಂದಂತಾಯಿತು. ಹೀಗೆ ಅಮೇರಿಕೆಯಲ್ಲಿ ಹುಟ್ಟಿದರೂ ಬೆಳೆದದ್ದು ಅಯರ್ಲಂಡದಲ್ಲಾದ್ದರಿಂದ ಅಯರ್ಲಂಡದ ಗಾಳಿ ನೀರುಗಳಿಂದಲೇ ಬೆಳೆದ ಈ ಮಹಾತ್ಮನ ಶರೀರವು ಅಯರ್ಲಂಡದ ಸೇವೆಯಲ್ಲಿಯೇ ಸವೆಯುತ್ತಿದೆ. ಧನ್ಯ!

ಡಿ ವ್ಹೆಲೆರಾನ ವಿದ್ಯಾಭ್ಯಾಸವು ಅಯರ್ಲಂಡದಲ್ಲಿ ಆರಂಭವಾಯಿತು. ಗಣಿತವು ಈತನ ಪ್ರೀತಿಯ ವಿಷಯ. ಕೆಳಗಿನ ತರಗತಿಯಲ್ಲಿ ಓದುತ್ತಿದ್ದಾಗ ಈತನ ಗುರುಗಳು ಇವನನ್ನು ಮೇಲಿನ ತರಗತಿಯ ವಿದ್ಯಾರ್ಥಿಗಳಿಗೆ ಗಣಿತ ಪಾಠವನ್ನು ಹೇಳುವದಕ್ಕೆ ನಿಯಮಿಸಿದ್ದೂ ಈತನು ಆ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿದುದೂ ಉಂಟಂತೆ. ಈ ವಿಷಯದಲ್ಲಿ ಈತನ ಬುದ್ಧಿ ಇಷ್ಟು ಚುರುಕಾಗಿತ್ತು, ಭಾಷಾವಿಷಯದಲ್ಲಿಯೂ ಈತನಿಗೆ ಪ್ರೀತಿ ಕಡಿಮೆಯಾಗಿರಲಿಲ್ಲ. ಒಳ್ಳೆಯ ಗ್ರಂಥಗಳೊಳಗಿನ ಒಳ್ಳೆಯ ಭಾಗಗಳನ್ನು ಕಂಠಪಾಠ ಮಾಡುವದು ಇವನಿಗೆ ಹೆಚ್ಚಾಗಿ ಸೇರುತ್ತಿತ್ತು. ಚುರುಕುಬುದ್ಧಿಯ ಹುಡುಗರಿಗೆ ಗಿಡವನ್ನು ಏರುವದೂ ಅಡ್ಡತಿಡ್ಡ ದಾರಿಗಳಿಂದ ಹತ್ತಿಳಿಯುತ್ತ ಓಡಾಡುವದೂ ಹೆಚ್ಚು ಸೇರುವದು. ಇದಕ್ಕೇನು ಕಾರಣವೋ ತಿಳಿಯದು. ವಿದ್ಯಾರ್ಥಿ ಡಿ ವ್ಹೆಲೆರಾನು ಗಿಡದ ಟೊಂಗೆಯ ಮೇಲೆ ಏರಿ ಕುಳಿತು ತಾನು ತಾನು ಏನೂ ತಿಳಿಂದರೆಯಿಲ್ಲದೆ ಅಭ್ಯಾಸಮಾಡುತ್ತಿದ್ದನಂತೆ. ಚುರುಕುಬುದ್ಧಿ, ಮನಮುಟ್ಟಿ ಪರಿಶ್ರಮ ಮಾಡುವಿಕೆ, ಇವುಗಳಿಂದ ಡಿ ವ್ಹೆಲೆರಾನು ಸಾಲೆ ಕಾಲೇಜಗಳಲ್ಲಿ ತನ್ನ ಸಹಪಾಠಿಗಳನ್ನು ಮೀರಿ, ವಿದ್ಯಾರ್ಥಿ ವೇತನ ಪಡೆದು ಹೆಸರುವಾಸಿಯಾದನು. ೧೯೦೪ ರಲ್ಲಿ ಗಣಿತ ಶಾಸ್ತ್ರೀಯ ವಿಷಯಗಳನ್ನು ಆರಿಸಿಕೊಂಡು 'ಬಿ. ಎ., ಬಿ. ಎಸ್‌ಸಿ.' ಆದನು. ಕಾಲೇಜದ ಪ್ರೊಫೆಸರನೂ ಆದನು. ಭಾಷಾಭ್ಯಾಸದಲ್ಲಿ ಪ್ರೀತಿಯುಳ್ಳ ಈತನು 'ಕುಮಾರಿ ಸಿನಿಡ' ಎಂಬಾಕೆಯೊಡನೆ ಭಾಷಾಭ್ಯಾಸದ ಅನುಕೂಲತೆಗಾಗಿ ಸ್ನೇಹಬೆಳಿಸಲು ಮುಂದೆ ಆ ಸ್ನೇಹವೇ ಪ್ರಣಯವಾಗಿ ಬೆಳೆದು ಅವಳನ್ನೇ ಮದುವೆಯಾದನು. (೧೯೧೦)

ಡಿ ವ್ಹೆಲೆರಾನು ಅಯರ್ಲಂಡದ ಇತಿಹಾಸವನ್ನು ಅಭ್ಯಾಸಮಾಡುವಾಗ ತನ್ನ ದೇಶವು ಇಂಗ್ಲಂಡದ ಕಾಲಕೆಳಗೆ ತುಳಿಯಲ್ಪಡುತ್ತಿರುವದನ್ನೂ ಆ ತುಳಿಯುವ ಕಾಲನ್ನು ಕಿತ್ತೊಗೆಯಲು ಯತ್ನಿಸಿದ ತನ್ನ ದೇಶಬಾಂಧವರ ವೀರಚರಿತ್ರೆ ಕಷ್ಟಪರಂಪರೆಗಳನ್ನೂ ಅಭ್ಯಾಸ ಮಾಡಿದನು. ಮನಸ್ಸಿನ ಮಾರ್ಗವು ಬದಲಾಯಿತು. ಕಾಲೇಜದಲ್ಲಿ ಶಿಕ್ಷಕನಾಗಿ ಬಹುಜನ ವಿದ್ಯಾರ್ಥಿಗಳ ಪ್ರೀತಿಯ ಶಿಕ್ಷಕನಾಗಿ ತರುಣ ಪೀಳಿಗೆಯ ಮಾರ್ಗದರ್ಶಕನಾಗಿದ್ದ ಈತನು ದೇಶಕಾರ್ಯಕ್ಕಾಗಿ ಸ್ವಯಂಸೇವಕರನ್ನು ಕೂಡಿಸುವ ಕೆಲಸಕ್ಕೆ ತೊಡಗಿದನು. ಕಾಲೇಜದ ವಿದ್ಯಾರ್ಥಿಗಳಲ್ಲಿ ಬಹುಜನರು ಒಂದಾದರು. ದೊಡ್ಡದೊಂದು ಪಡೆಯೇ ಸಿದ್ಧವಾಯಿತು (೧೯೧೩). ಇಲ್ಲಿಂದಲೇ ಡಿ ವ್ಹೆಲೆರಾನ ನಿಜವಾದ ಚರಿತ್ರೆಗೆ ಆರಂಭವಾಗುವದು.

ಎತ್ತರವಾದ ನಿಲುವಿಕೆ, ಬಡವಾದ ಮೈಕಟ್ಟು, ವಿಶಾಲವಾದ ಹಣೆ, ಎದುರಾಣಿಸುವ ಉದ್ದ ಮೂಗು, ತೀಕ್ಷ್ಣವಾದ ತೇಜಸ್ವಿಯಾದ ದೃಷ್ಟಿ, ಶಿಕ್ಷಕವೃತ್ತಿಗೆ ಒಪ್ಪುವಂಥ ಆಡಂಬರವಿಲ್ಲದ ಉಡುಗೆ ತೊಡುಗೆಗಳು ಇವು ವ್ಹೆಲೆರಾನ

ವ್ಯಕ್ತ ರೂಪಗಳು. ಬಡತನದಲ್ಲಿ ಬೆಳೆದವನಾದರೂ ಅಭಿಮಾನದ ಮೂರ್ತಿಯಾಗಿದ್ದಾನೆ.

ಇಂಗ್ಲಂಡವು ಅಯರ್ಲಂಡವನ್ನು ಪಶ್ಚಿಮ ಯುರೋಪದೊಳಗಿನ ರಾಷ್ಟ್ರಗಳ ದಾಳಿಗಳಿಂದ ರಕ್ಷಿಸುವ ಬೇಲಿಯಂತೆ ಇದ್ದರೂ ತಮ್ಮನ್ನು ಹೊರಗೆ ತಲೆಯಿಕ್ಕದಂತೆ ಬಂಧಿಸಿದೆಯೆಂದೂ ಇಂಗ್ಲಂಡವು ತಮ್ಮನ್ನು ಪರಕೀಯರಿಂದ ರಕ್ಷಿಸುತ್ತಿದ್ದರೂ ಇಲ್ಲಿ ತಾನೇ ಮೇಯುತ್ತಿದೆಯೆಂದೂ ಅಯರಿಷ್ ಜನರು ಹೇಳುವರು. ಅದಕ್ಕಾಗಿ ಅವರು ತಮ್ಮದು ಚಿಕ್ಕದೇ ಆದರೂ ಒಂದು ಸ್ವತಂತ್ರ ರಾಜ್ಯವಾಗಬೇಕೆಂದು ಹವಣಿಸಿದರು. ಈ ಹವಣಿಕೆ ಇಂದು ನಿನ್ನಿನದಲ್ಲ. ಆರು ನೂರು ವರ್ಷಗಳಿಂದಲೂ ಬಿಟ್ಟು ಬಿಡದೆ ಈ ಕಲಹ ನಡೆದಿದೆ.

ಯುರೋಪದಲ್ಲಿ ಕಳೆದ ಮಹಾಯುದ್ಧವು ನಡೆದಿರುವಾಗ ಸ್ವಾತಂತ್ರ್ಯಾಪೇಕ್ಷಿಗಳಾದ ಅಯರಿಷ ಮುಂದಾಳುಗಳು ದೊಡ್ಡ ಬಂಡಾಯವನ್ನು ಹೂಡಿದರು. ಕಾಲೇಜಿನಲ್ಲಿ ಗುರುವಾಗಿದ್ದು ತನ್ನ ಶಿಷ್ಯರ ಮತ್ತು ಅವರ ನೆರವಿಗರ ಸ್ವಯಂಸೇವಕರ ಪಡೆಯನ್ನು ಕೂಡಿಸಿಕೊಂಡ ಡಿ. ವ್ಹೆಲೆರನು ಮುಂದೆಬಂದನು. ಇಂಗ್ಲಂಡವು ಯುದ್ಧದ ಇರುಕಿನಲ್ಲಿ ಸಿಕ್ಕು ಅದರ ದೃಷ್ಟಿಯು ಕೈಸರನಂಥ ಪ್ರಬಲ ಶತ್ರುವಿನ ಗುಂಡಿನ ಗುರಿಯ ಕಡೆಗೆ ಹೊರಳಿರುವಾಗಲೇ ಅದರ ಹಿಡಿಯಿಂದ ನುಸುಳಿ ಪಾರಾಗಿಬಿಡಬೇಕೆಂದು ಅಯರ್ಲಂಡವು ಹವಣಿಸಿತು. 'ಡಿ ವ್ಹೆಲೆರಾ' ಮೊದಲಾದವರು ಇಂದಿನಿಂದ "ಅಯರ್ಲಂಡವು ಪ್ರಜಾಪ್ರಭುತ್ವವುಳ್ಳ ಸ್ವತಂತ್ರ ರಾಜ್ಯ" ಎಂದು ಸಾರಿದರು. ದೇಶದಲ್ಲೆಲ್ಲ ಮಹಾ ಕೋಲಾಹಲವುಂಟಾಯಿತು; ಬಂಡುಗಾರರಿಗೂ ಇಂಗ್ಲಿಷ ಸೈನ್ಯಕರಿಗೂ ಚಿಕ್ಕ ಪುಟ್ಟ ಕದನಗಳಾದವು. ರಕ್ತದ ಕಾಲುವೆ ಹರಿಯಿತು. ಬಹು ಜನ ಪ್ರಜಾಪ್ರಮುಖರು ಬಂಧಿಸಲ್ಪಟ್ಟರು. ಬಂಧಿಸಲ್ಪಟ್ಟವರಲ್ಲಿ ಬಹು ಜನರು ದೇಹಾಂತ ಶಿಕ್ಷೆಗೆ ಗುರಿಯಾದರು, ಹೀಗೆ ಮರಣದಂಡನೆಗೆ ಒಳಗಾದವರಲ್ಲಿ ವ್ಹೆಲೆರಾನೂ ಒಬ್ಬ ಪ್ರಮುಖ ವ್ಯಕ್ತಿ. ಪ್ರಬಲ ವಿರೋಧಿಯಾಗಿ ಪ್ರಬಲರಾದ ಶತ್ರುಗಳ ಕೈಯಲ್ಲಿ ಸೆರೆಸಿಕ್ಕಿದ್ದಾನೆ. ಇಂದು ನಾಳೆ ಡಿ ವ್ಹೆಲೆರಾನು ಶೂಲಕ್ಕೇರುವನೆಂದು ದೇಶವೆಲ್ಲಾ ಮರುಗಿತು. ಆ ಮೊರೆ ಅಮೇರಿಕೆಯ ವರೆಗೂ ಕೇಳಿಸಿತು. ಪ್ರತಿಧ್ವನಿಯಾಗಿ ಇಂಗ್ಲಂಡಕ್ಕೂ ಕೇಳಿಸಿರಬೇಕು. ವ್ಹೆಲೆರಾನು ಅಮೇರಿಕೆಯ ಪ್ರಜೆ. ಆತನು ಹುಟ್ಟಿದ್ದು ಅಮೇರಿಕೆಯಲ್ಲೆಂಬದು ನಮಗೆ ಗೊತ್ತಿದೆ. ಮಹಾಯುದ್ಧದಲ್ಲಿ ಇಂಗ್ಲಂಡವು ಅಮೇರಿಕೆಗೆ ಋಣಿ. ತನಗೆ ಉಪಕಾರಿಯಾದ ದೇಶದ ಪ್ರಜೆಯೆನಿಸುವ ವ್ಹೆಲೆರಾನನ್ನು ಕೊಲೆ ಮಾಡುವದು ಇಂಗ್ಲಿಷ ಸರಕಾರಕ್ಕೆ ಯಾಕೋ ಸರಿಯೆನಿಸಲಿಲ್ಲ. ಆದ್ದರಿಂದ ಅವನನ್ನು ಕೊಲ್ಲುವದರ ಬದಲು ಅನುಕರಣ ಸೆರೆಮನೆಗೆ ಕಳುಹಿದರು,

ಶಿಕ್ಷಕರು ಯುಕ್ತಿವಂತರೆಂದು ಹೇಳುವ ವಾಡಿಕೆ ಇದೆ. ೧೯೧೨ ರಲ್ಲಿ ಇಂಗ್ಲಂಡ ಅಯರ್ಲಂಡಗಳ ನಡುವೆ ಸಂಧಾನದ ಮಾತುಕಥೆಗಳ ಯುಕ್ತಿ ನಡೆದು ಡಿ. ವ್ಹೆಲೆರಾ ಮೊದಲಾದವರು ಬಿಡುಗಡೆ ಹೊಂದಿದರು. ಹಂಚಿಕೆಯನ್ನು ಹೂಡಿ ಪಾರಾಗುವಮಟ್ಟಿಗೆ ಸಂಧಾನ ನಡೆದರೂ ಡಿ. ವ್ಹೆಲೆರಾನಿಗೆ ಬೇಕಾದುದು ಇಂಗ್ಲಂಡ ದೊಡನೆ ಸಂಧಾನವಲ್ಲ; ಅಯರ್ಲಂಡದ ಸ್ವಾತಂತ್ರ್ಯವೇ ಅವನಗುರಿ. ತನ್ನಂತೆಯೇ ದೇಶಕಲ್ಯಾಣಕ್ಕಾಗಿ ಪ್ರಾಣವನ್ನು ತೃಣಕ್ಕೆ ಬಗೆದು ಹೋರಾಡುವ ತರುಣರ ತಂಡವನ್ನು ಕೂಡಿಕೊಂಡು ಮತ್ತೆ ಯುದ್ಧವನ್ನು ಹೂಡಿದನು; ಮತ್ತೆ ಸೆರೆ ಸಿಕ್ಕನು. ಇಡಿಯ ದೇಶವನ್ನೇ ಜಲವಿಪ್ಲವ ಮಾಡುವ ಸಾಹಸಿಗೆ ಲಿಂಕನ್ನನ ಸೆರೆಮನೆಯಲ್ಲಿ ಭದ್ರವಾದ ಕಾವಲಿನಲ್ಲಿ ಕೊಳೆಯುವ ಪ್ರಸಂಗವು ಮತ್ತೆ ಬಂದಿತು. ಕ್ರಾಂತಿಕಾರಕ ತರುಣರಿಗೆ ತಕ್ಕ ಕತ್ತಲೆಯ ಸೆರೆಮನೆಯ ಶಿಕ್ಷೆಗೆ ಗುರಿಯಾದ ಡಿ. ವ್ಹೆಲೆರಾನಿಗ ಬೆಳಕಿಗಾಗಿ ಒಂದು ಮೇಣಬತ್ತಿಯು ಕೊಡಲ್ಪಡುತ್ತಿತ್ತು. ಯುಕ್ತಿವಂತನಾದ ವ್ಹೆಲೆರಾನು ಈ ಬತ್ತಿಯ ಮೇಣವನ್ನು ಸಂಗ್ರಹಿಸಿ ಸೆರೆಮನೆಯ ಬಾಗಿಲಿನ ಕೀಲಿಗೆ ಒತ್ತಿ ಕೀಲಿಯ ಕೈಯ ಪಡಿಯಚ್ಚು ತಯಾರಿಸಿ ತನ್ನ ಸ್ನೇಹಿತರಿಗೆ ಮುಟ್ಟಿಸಿದನು. ಬಿ. ಎಸ್ಸಿ. ಪರೀಕ್ಷೆಗಾಗಿ ಓದಿದ ಸಾಯನ್ಸದ ಮತ್ತು ಗಣಿತದ ನಿಜವಾದ ಉಪಯೋಗವಾದಂತಾಯಿತು. ಈ ಪಡಿಯಚ್ಚಿಗೆ ಸರಿಯಾಗಿ ಕೀಲಿಕೈಯು ಸಿದ್ಧವಾಗಿ ಬಂದಿತು. ಮನೆಯ ಯಜಮಾನನು ಮನೆಯಿಂದ ಹೊರಗೆ ಹೋಗುವಂತೆ ವ್ಹೆಲೆರಾನು ನಿರಾಪದವಾಗಿ ಸೆರೆಮನೆಯಿಂದ ಪಾರಾಗಿ ನಡೆದನು.

ಕೈಗೆ ಸಿಕ್ಕ ಬೇಟೆಯು ಎರಡನೆಯ ಸಾರಿ ಸುಸುಳಿ ನಡೆದುದನ್ನು ನೋಡಿ ಹಗೆಗಳ ಹೌಹಾರಿತು. ವೈರಿಸೈನಿಕರು ಅಯರ್ಲಂಡದ ಹಳ್ಳಿ ಹಳ್ಳಿ ಮೂಲೆ ಮೂಲೆಗಳಲ್ಲಿ ಹುಡುಕಿದರು. ಯಾರಿಗೂ ಎಲ್ಲಿಯೂ ಸಿಗಲಿಲ್ಲ. ಹೀಗೆ ಹಗೆಗಳ ಕಣ್ಣು ತಪ್ಪಿಸಿ ಊರೂರು ಅಲೆಯುತ್ತಿದ್ದಾಗ ಡಿ. ವ್ಹೆಲೆರಾನು ಒಮ್ಮೆ ಗಿಡದ ಕೆಳಗೆ ಕುಳಿತು ತನ್ನ ಪ್ರೀತಿಯ ಚಿಲುಮೆಯನ್ನು ತೆಗೆದು ತಂಬಾಕು ತುಂಬಿ ಕಡ್ಡಿಯನ್ನು ಕೆರೆದು ಹೊತ್ತಿಸುತ್ತಿದ್ದಾಗ ಅವನ ತಲೆಯಲ್ಲೊಂದು ವಿಚಾರದ ಹೊಗೆ ಹೊರಟಿತು. ತನ್ನ ದೇಶಕ್ಕೆ ಸ್ವಾತಂತ್ರ್ಯವು ಸಿಗುವವರೆಗೂ ತನಗೆ ತುರಂಗವಾಸವು ತಪ್ಪಿದ್ದಲ್ಲೆಂದೂ ಹೊಳೆಯಿತು. ತಾನು ತುರಂಗವಾಸದಲ್ಲಿದ್ದಾಗ ಹಗೆಗಳು ತನಗೆ ಸೇದುವದಕ್ಕೆ ತಂಬಾಕನ್ನು ಕೊಡದೆ ತೊಂದರೆಕೊಡುತ್ತಿದ್ದುದನ್ನೂ ತನ್ನ ಈ ತೊಂದರೆಯು ವೈರಿಗಳ ಆನಂದಕ್ಕೆ ಕಾರಣವಾಗುವದೆಂಬುದನ್ನೂ ತಿಳಿದು ತನ್ನಿಂದ ಹಗೆಗಳಿಗೆ ಇಷ್ಟಾದರೂ ಆನಂದವೇಕಾಗಬೇಕೆಂದು ಆಲೋಚಿಸಿದನು. ಕೂಡಲೆ ಕೈಯೊಳಗಿನ ಚಿಲುಮೆಯನ್ನು ದೂರ ಎಸೆದುಬಿಟ್ಟನು. ಅಂದಿನಿಂದ

ಇಂದಿನ ವರೆಗೂ ಚಿಲುಮೆಯನ್ನು ಹಿಡಿದಿಲ್ಲ. ತಂಬಾಕಿನ ಹೊಗೆ ಅವನ ಬಾಯೊಳಗೆ ಹೋಗಿಲ್ಲ. ಈ ಮಾತಿನಿಂದ ವ್ಹೆಲೆರಾನು ಎಷ್ಟು ಹಟಗೇಡಿ ಎಂಬುದನ್ನೂ ತಿಳಿಯಬಹುದು.

ಈಗ ಅಯರ್ಲಂಡದಲ್ಲಿ ಡಿ ವ್ಹೆಲೆರಾ ಇಲ್ಲ. ಅಯರಿಷ ತರುಣರು ತಕ್ಕ ನಾಯಕನಿಲ್ಲದ ತಂಡವಾಗಿದ್ದಾರೆ. ಇಂಗ್ಲಿಷರು ಅವರೊಡನೆ ಸಂಧಾನದ ಮಾತು ಕಥೆ ನಡೆಸಿದ್ದಾರೆ.

ಅಯರ್ಲಂಡದಿಂದ ಅಮೇರಿಕೆಗೆ ಬಂದ ಒಂದು ಹಡಗದಿಂದ ಒಬ್ಬ ತರುಣ ಕೂಲಿಕಾರನು ಇಳಿದು ದಂಡೆಗೆ ಬಂದನು. ಹಡಗದ ಎಂಜಿನಕ್ಕೆ ಇದ್ದಲಿಯನ್ನು ಹಾಕುವ ಕೆಲಸಮಾಡುತ್ತಿದ್ದ ಇವನ ಬಟ್ಟೆಬರೆಗಳೂ ಮೈ ಕೈಗಳೂ ಮಸಿಯಿಂದ ಮಾಸಿಹೋಗಿದ್ದರೂ ಮುಖವು ಮಾತ್ರ ಆನಂದದಿಂದ ಉಲ್ಲಸಿತವಾಗಿತ್ತು. ಮುಂದೆ ಕೆಲವು ದಿನಗಳಲ್ಲಿಯೇ ಆಯರ್ಲಂಡದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ತರುಣಪೀಳಿಗೆಗೆ ಸಹಾಯ ಮಾಡುವದಕ್ಕಾಗಿ ಅಮೇರಿಕೆಯ ನಗರ ನಗರಗಳಲ್ಲಿ ಚಳುವಳಿ ಆರಂಭವಾಯಿತು. ಬಹುಜನರ ಸಹಾನುಭೂತಿಯಿಂದ ದೊಡ್ಡ ನಿಧಿಯು ಕೂಡಿತು, ಅಯರ್ಲಂಡದಿಂದ ವೇಷಬದಲಿಸಿಕೊಂಡು ಹಡಗದ ಕೂಲಿಕಾರನಾಗಿ ಹೋದವನು ಡಿ ವ್ಹೆಲಾರಾನೇ ಎಂಬದು ಇಂಗ್ಲಿಷರಿಗೆ ಗೊತ್ತಾಗಿ ಅವನ ಪಾರುಪತ್ಯದ ವಿಚಾರ ನಡೆಯಿಸುವಷ್ಟರೊಳಗೆ ಲಂಕೆಗೆ ಹಾರಿದ ಹನುಮನಂತೆ ಅವನು ಅಯರ್ಲಂಡಕ್ಕೆ ತಿರುಗಿ ಬಂದು ಇಂಗ್ಲಿಷರೊಡನೆ ಸಂಧಾನ ನಡೆಯಿಸಿದ ತನ್ನ ದೇಶಬಾಂಧವರಲ್ಲಿ ಹುರಿದುಂಬಿಸಬೇಕಾದವರನ್ನು ಹುರಿದುಂಬಿಸಿ ಹಿಂದೆ ಸರಿಸತಕ್ಕವರನ್ನು ಹಿಂದೆ ಸರಿಸಿ ಮತ್ತೆ ಸಂಗ್ರಾಮವನ್ನು ಸಾರಿದನು. ೧೯೨೧ ರಲ್ಲಿ ಮತ್ತೆ ಸಂಧಾನವಾಗಿ ಅಯರ್ಲಂಡಕ್ಕೆ ಸ್ವತಂತ್ರ ಪಾರ್ಲಮೆಂಟು ದೊರೆಯಿತು. ಡಿ ವ್ಹೆಲೆರಾನೂ ಅವನ ಪಕ್ಷದವರೂ ಈ ಸಂಧಾನವನ್ನು ಸಂಪೂರ್ಣ ಅನುಮೋದಿಸದೆ ಇದ್ದರೂ ಜನಾವಣಿಯಲ್ಲಿ ತಮ್ಮದೇ ಬಹುಮತವಾಗುವಷ್ಟು ಬಹು ಸಂಖ್ಯಾಕರಾಗಿ ಆರಿಸಿ ಬಂದರು. ಆರಿಸಿ ಬಂದರೂ ಅವರು ಆ ಪಾರ್ಲಮೆಂಟಿನ ತತ್ವವನ್ನು ವಿರೋಧಿಸುವವರಾಗಿದ್ದದರಿಂದ ಸುಸೂತ್ರವಾಗಿ ಅಧಿಕಾರ ನಡೆಯಿಸಲಿಲ್ಲ. "ಅಯರ್ಲಂಡವು ಪ್ರಜಾಸತ್ತಾತ್ಮಕವಾದ ರಾಜ್ಯ; ಡಿ ವ್ಹೆಲೆರಾನೇ ಅದರ ಅಧ್ಯಕ್ಷ ಎಂಬದು ಅವರ ಚಳವಳಿಯ ಗುಟ್ಟು. ೧೯೩೨ ನೆಯ ಇಸ್ವಿಯಲ್ಲಿ ಈ ಮಾತು ಸಿದ್ಧವಾಗುವಷ್ಟು ಡಿ ವ್ಹೆಲೆರಾನ ಪಕ್ಷವು ಬಲಿಯಿತು. ಅಧ್ಯಕ್ಷನಾದ ಡಿ ವ್ಹೆಲೆರಾನು ತನ್ನ ಪಾರ್ಲಮೆಂಟಿನ ಸದಸ್ಯರು ಇಂಗ್ಲಂಡದ ಅರಸನ ವಿಷಯದಲ್ಲಿ ಮಾಡಬೇಕಾದ ರಾಜನಿಷ್ಠೆಯ ಪ್ರತಿಜ್ಞೆಯ ಶರ್ತವನ್ನು ವಿರೋಧಿಸಿ ಅದಕ್ಕೆ

ಸಲ್ಲುವ ಭೂಕಂದಾಯದ ಭಾಗವನ್ನು ಕೊಡದೆ ಸಂಪೂರ್ಣ ಸ್ವಾತಂತ್ರ್ಯವನ್ನು ಸಾರಿದನು. ದೇಶತುಂಬ ಆತನ ಜಯಜಯಕಾರವಾಯಿತು.

ಅಯರ್ಲಂಡಿನ ಪ್ರತಿನಿಧಿಯಾಗಿ ರಾಷ್ಟ್ರಸಂಘಕ್ಕೆ ಹೋದ ಡಿ ವ್ಹೆಲೆರಾನು ಅನೇಕ ಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳ ಮಧ್ಯದಲ್ಲಿ ಅತ್ಯಂತ ಕುಶಲನಾದ ಮುತ್ಸದ್ದಿಯೆಂದು ವಿರಾಜಮಾನನಾದನು. ಅಲ್ಲಿ ಆತನು "ನಾವು, ಆಯರಿಷ ಜನರು ಬಂಡುಗಾರರೆಂದಾಗಲಿ ಕಲಹಪ್ರಿಯರೆಂದಾಗಲಿ ಯಾರೂ ಭಾವಿಸ ಕೂಡದು. ನಾವು ಶಾಂತಿಪ್ರಿಯರಾಗಿದ್ದೇವೆ. ನಮ್ಮ ದೇಶಕ್ಕೂ ಶಾಂತಿಬೇಕು. ನಮ್ಮ ದೇಶದ ಇತಿಹಾಸವೆಂದರೆ ಸ್ವಾತಂತ್ರ್ಯಪ್ರಿಯರಾದ ಪ್ರಜೆಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ನಡೆಯಿಸಿದ ಸಂಗ್ರಾಮದ ಇತಿಹಾಸವು. ನಾವು ನಮ್ಮ ನೆರೆಹೊರೆಯವರೊಡನೆಯೇ ಕಾದಾಡುವವರಲ್ಲ ಅಖಿಲ ಜಗತ್ತಿನೊಡನೆಯೇ ನಾವು ಕಾದಾಡಬೇಕಾಗಿದೆ." ಎಂದು ಎದೆತಟ್ಟಿ ಹೇಳಿದ ವೀರವಾಣಿಯು ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಮ್ಮ ದೇಶದ ತರುಣ ಪೀಳಿಗೆಗೆ ಉದ್ಬೋಧಕವಾಗಲಾರದೇನು?

೨೫ ನೆಯ ಕನ್ನಡ ಸಾಹಿತ್ಯಸಮ್ಮೇಲನ ಧಾರವಾಡ.

ಮೆಹರ್ಬಾನ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಮುಂಬೈ. ಅವರು ಎಲ್ಲ ಲೋಕಲಬೋರ್ಡ ಮುನಿಸಿಪಾಲಿಟಿಗಳ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರಿಗೆ ಸಮ್ಮೇಲನಕ್ಕೆ ಬಂದುಹೋಗುವದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದರ ವಿವರಣೆಯು ಹೀಗಿದೆ.

"ಧಾರವಾಡದಲ್ಲಿ ತಾರೀಖು ೨೭-೧೨-೧೯೪೦ ರಿಂದ ೨೯-೧೨-೪೦ ರ ವರೆಗೆ ಕನ್ನಡ ಸಾಹಿತ್ಯಸಮ್ಮೇಲನದ ೨೫ ನೆಯ ಅಧಿವೇಶನವು ಜರುಗುವುದು. ಈ ಸಮ್ಮೇಲಕ್ಕೆ ಹೋಗಲಿಚ್ಛಿಸುವ ಶಿಕ್ಷಕ-ಶಿಕ್ಷಕಿಯರಿಗೆ ತಮ್ಮ ಖರ್ಚಿನಿಂದ ಹೋಗಿ ಬರಲು ಒಪ್ಪಿಗೆಯನ್ನು ಕೊಟ್ಟಿದೆ. ಹಾಗೂ ಸಮ್ಮೇಲನಕ್ಕೆ ಹತ್ತುವ ಅವಧಿಯನ್ನು ಕೆಲಸದಮೇಲೆ ಇದ್ದಂತೆಯೇ ಎಂದು ತಿಳಿಯಲಾಗುವದು. ಶಾಲೆಯ ಕೆಲಸಕ್ಕೆ ಬಾಧೆ ಬಾರದಂತೆ ವ್ಯವಸ್ಥೆಮಾಡಿ ಹೋಗಬಹುದು. ಸಮ್ಮೇಲನಕ್ಕೆ ಹೋಗುವ ಶಿಕ್ಷಕ-ಶಿಕ್ಷಕಿಯರು ತಮ್ಮ ಮೇಲಧಿಕಾರಿಗಳ ಕಡೆಗೆ ರಿಪೋರ್ಟು ಮಾಡಿ ಹೋಗಬೇಕು. ಪುನಃ ಕೆಲಸದಮೇಲೆ ಹಾಜರಾದನಂತರ ಹಾಜರಾದ ಬಗ್ಗೆ ರಿಪೋರ್ಟು ಮಾಡಬೇಕು. ಈ ರಿಪೋರ್ಟಿನ ಸಂಗಡ, ಸಮ್ಮೇಲನಕ್ಕೆ ಹೋದ ಬಗ್ಗೆ ಸಮ್ಮೇಲನದ ಸೆಕ್ರೇಟರಿಯವರಿಂದ ತಂದ ಸರ್ಟಿಫಿಕೇಟನ್ನು ಕಳಿಸಬೇಕು."

ಪಾಠ ಪದ್ಧತಿಗಳು

(ಕಳಿದ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ. ಅವರಿಂದ.

ಕೆಲವೊಂದು ಪಾಠವನ್ನು ಕಲಿಸುವದಾದ ಬಳಿಕ ಅದನ್ನನುಸರಿಸುವ ಅಭ್ಯಸನಗಳ ಅಭ್ಯಾಸ ಮೊದಲಾದವುಗಳ ವಿಷಯಕ್ಕೆ ಸಂಬಂಧಿಸಿದ ಗೃಹಪಾಠಗಳನ್ನು ಸೂಚಿಸಬೇಕಾಗುವದು. ಇಷ್ಟರಿಂದಲೇ ಪ್ರತಿಪಾಠಕ್ಕೂ ಒಂದೊಂದು ಗೃಹಪಾಠವಿರಲೇಬೇಕೆಂದಾಗಲಿ, ಶಾಲೆಯಲ್ಲಿ ಕಲಿತ ಪಾಠವು ಗೃಹಪಾಠದಿಂದಲೇ ಪೂರ್ಣವಾಗುವದೆಂದಾಗಲಿ, ಭಾವಿಸುವ ಕಾರಣವಿಲ್ಲ. ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿತದ್ದನ್ನು ಅಲ್ಲಿಯೇ ಮರೆತುಬಿಡದೆ ಅವುಗಳ ಪುನರವಲೋಕನ ಮಾಡಬೇಕು; ಆ ವಿಷಯಗಳ ಪುನರಾವರ್ತನೆಯಾಗಬೇಕು, ಎಂಬದನ್ನು ಮಾತ್ರ ಶಿಕ್ಷಕರು ಲಕ್ಷ್ಯದಲ್ಲಿಟ್ಟರೆ ಸಾಕು. ಮತ್ತು ಶಿಕ್ಷಕರು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ವಯೋಮಾನವನ್ನೂ ಅವರಿಗೆ ಕೊಡಬಹುದಾದ ಗೃಹಪಾಠಗಳಿಗೆ ತಗಲುವ ವೇಳೆಯ ಮಾನವನ್ನೂ ಪರ್ಯಾಲೋಚಿಸಿ ನೋಡಿ ತಾವು ಕೊಡುವ ಗೃಹಪಾಠಗಳ ಮಾನವನ್ನು ನಿರ್ಣಯಿಸಿಕೊಳ್ಳಬೇಕು.

ಪ್ರತಿಪಾಠದಲ್ಲಿಯೂ ಪ್ರಸ್ತಾವನೆ ಪ್ರತಿಪಾದನೆ ಆವೃತ್ತಿ ಎಂಬ ಮೂರು ಮುಖ್ಯ ಭಾಗಗಳು ಇದ್ದೇ ಇರುವವು. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವಾಗ ತಡೆಯುವದು, ಆ ಭಾಗಗಳನ್ನು ಹರಿದು ಹಂಚಿ ಪಾಠದಲ್ಲಿ ಮೂರು ಬೇರೆ ಬೇರೆ ತುಂಡು ಮಾಡುವದು, ಮುಂತಾದ ರೀತಿಯಲ್ಲಿ ಪಾಠದ ಸಮರಸತೆಗೆ ತಡೆಯುಂಟಾಗದಂತೆ ಶಿಕ್ಷಕರು ನೋಡಿಕೊಳ್ಳಬೇಕಾಗುವದು. ಅನನುಭವಿಕರಾದ ಶಿಕ್ಷಕರಿಗೆ ಅವರ ಮಾರ್ಗವು ನಿಶ್ಚಿತಸ್ಥಾನದಿಂದ ಹೊರಟು ನಿಶ್ಚಿತಸ್ಥಾನಕ್ಕೆ ಹೋಗಿ ಮುಟ್ಟುವದೊ ಇಲ್ಲವೊ ಎಂಬುದನ್ನು ನೋಡಿಕೊಳ್ಳಲು ಅನುಕೂಲವಾಗಬೇಕೆಂದು ಹೀಗೆ ಪಾಠದಲ್ಲಿ ವಿಭಾಗಗಳನ್ನು ಕಲ್ಪಿಸಿಕೊಡಬೇಕಾಗುವದು. ಈ ಮೂರು ಭಾಗಗಳಲ್ಲಿ ಒಂದು ಭಾಗವು ಎಲ್ಲಿ ಮುಗಿಯಿತು ಮುಂದಿನ ಭಾಗವು ಎಲ್ಲಿ ಆರಂಭವಾಯಿತು ಎಂಬುದು ಕೂಡ ತಿಳಿಯದಂತೆ ಪಾಠವು ಸಮರಸವಾಗಿ ಏಕಸೂತ್ರತೆಯಿಂದ ಕೊನೆಯವರೆಗೂ ಸಾಗುವಂತೆ ನೋಡಿಕೊಳ್ಳುವದರಿಂದಲೇ ಶಿಕ್ಷಕನ ಕುಶಲತೆಯು ಪ್ರಕಟವಾಗುವದು.

ಪ್ರಾಥಮಿಕ ಶಾಲೆಗಳೊಳಗಿನ ಪಾಠಪದ್ಧತಿಗಳು

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಏ. ಅವರಿಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

೨. ಪಾಠ ಕಲಿಸುವಾಗ ಶಿಕ್ಷಕರು ಲಕ್ಷ್ಯದಲ್ಲಿಡಬೇಕಾದ ಕೆಲವು ಸಂಗತಿಗಳು

೧. ಪಾಠ ಪದ್ಧತಿಯೊಳಗಿನ ಹಲಕೆಲವು ತಾಂತ್ರಿಕ ಕಾರ್ಯಗಳು ಕೇವಲ ಮಾರ್ಗದರ್ಶನಕ್ಕಾಗಿ ಮಾತ್ರ. ಶಿಕ್ಷಕನು ಮನಸ್ಸು ಬಿಚ್ಚಿ ಮಾತಾಡಿ ವಿದ್ಯಾರ್ಥಿಗಳೊಡನೆ ಸಮರಸವಾಗಿ ನಡೆದು ಪಾಠ ಸಾಗಿಸುವ ರೂಢಿಯನ್ನಿಟ್ಟು ಕೊಂಡಿರಬೇಕು.

೨. ಪ್ರಶ್ನ ಪದ್ಧತಿಯು ಪಾಠದ ಆತ್ಮವೆನಿಸುವದು. ಶಿಕ್ಷಕನು ಕೇಳುವ ಪ್ರಶ್ನೆಗಳಿಂದ ಆ ಪಾಠವು ಯಾವ ದಿಕ್ಕಿಗೆ ಸಾಗುವದೆಂಬದು ಗೊತ್ತಾಗುವದು. ಪ್ರಶ್ನೆಗಳು ಸಾದಾ ಇದ್ದು ಸುಲಭವೂ ಸರಳವೂ ಆಗಿರಬೇಕು; ಮತ್ತು ವಿದ್ಯಾರ್ಥಿಗಳನ್ನು ವಿಚಾರಕ್ಕೆ ಹಚ್ಚುವಂಥವಿರಬೇಕು. ಹೌದು ಅಲ್ಲ ಎಂಬ ಉತ್ತರ ವಿರುವಂಥ ಪ್ರಶ್ನೆಗಳನ್ನು ಕೇಳಬಾರದು.

೩. ಶಿಕ್ಷಕನು ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಉತ್ತರವು ತಪ್ಪಿದ್ದರೆ ಪುನಃ ಪ್ರಶ್ನೆಮಾಡಿ ಆ ಉತ್ತರವನ್ನು ಅವರಿಂದಲೇ ತಿದ್ದಿ ಸರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಂದ ಸಮರ್ಪಕವಾದ ಉತ್ತರವನ್ನು ಹೊರಡಿಸಿಕೊಳ್ಳುವದು ಒಂದು ವಿಶಿಷ್ಟ ಕಲೆಯೆನಿಸಿಕೊಳ್ಳುವದು. ಅದು ಪ್ರಯತ್ನದಿಂದ ಸಾಧಿಸುವದು.

೪. ಬಾಲಕರನ್ನು ವಿಚಾರಮಾರ್ಗಕ್ಕೆ ಹಚ್ಚುವದು ಒಳ್ಳೆಯ ಪಾಠದ ಲಕ್ಷಣವು. ಶಿಕ್ಷಕನು ಬಾಲಕರ ವಿಚಾರಕ್ರಮಕ್ಕೆ ಅಡ್ಡಬರಕೂಡದು. ಆದರೆ ಅವರನ್ನು ಯೋಗ್ಯಮಾರ್ಗಕ್ಕೆ ಹಚ್ಚಲು ಯತ್ನಿಸಬಹುದು. ವಿದ್ಯಾರ್ಥಿಗಳ ವಿಚಾರಕ್ರಮವು ತಪ್ಪಿದ್ದರೆ ಅವರನ್ನು ಹಚಾಹುಚಾ ಮಾಡಿ ತಿರಸ್ಕರಿಸದೆ ಅವರ ತಪ್ಪನ್ನು ಸೌಮ್ಯರೀತಿಯಿಂದ ಅವರ ಲಕ್ಷ್ಯದಲ್ಲಿ ತಂದುಕೊಡಬೇಕು.

೫. ಪಾಠದ ಕೊನೆಯ ವರೆಗೂ ಬಾಲಕರ ಅವಧಾನವನ್ನು ಕಾದು ಕೊಳ್ಳಬೇಕು. ಅದಕ್ಕಾಗಿ ಶಿಕ್ಷಕನು ಬಾಲಕರೊಡನೆ ಸಹಕರಿಸಿ ನಡೆದುಕೊಳ್ಳ ಬೇಕು. ಶಿಕ ಕನು ವಾಖ್ಯಾನಪದ ತಿಯನು ಅನುಸರಿಸಿ ತಾನೇ ಹೇಳುತ್ತ ನಡೆದರೆ

ಆಗದು. ಬಾಲಕರೂ ಪಾಠದಲ್ಲಿ ಸರಿಯಾದ ಭಾಗವಹಿಸಿ ಕೆಲಸಮಾಡಬೇಕು. ಪಾಠವು ಬಾಲಕರ ಸಹಕಾರವಿದ್ದಷ್ಟು ಒಳ್ಳೆಯದಾಗುವ ಸಂಭವವುಂಟು.

೬. ಸಮಯಾನುಸಾರವಾಗಿ ತನ್ನ ಪಾಠದ ಧೋರಣೆಯನ್ನು ಅಥವಾ ವಿಷಯಭಾಗವನ್ನು ಬದಲಿಸಿಕೊಳ್ಳಲು ಶಿಕ್ಷಕನು ಸಮರ್ಥನಾಗಿರಬೇಕು. ತಾನು ಪೂರ್ವತಯಾರಿ ಮಾಡಿಕೊಂಡು ಟಿಪ್ಪಣಿ ಬರೆದುಕೊಂಡು ಬಂದಂತೆ ಪಾಠ ಸಾಗಿಸಲು ವರ್ಗದ ಪರಿಸ್ಥಿತಿಯು ಅನುಕೂಲವಿಲ್ಲವೆಂಬುದು ಕಂಡುಬಂದರೆ ಶಿಕ್ಷಕನು ಗಾಬರಿಯಾಗಕೂಡದು. ಆ ಪರಿಸ್ಥಿತಿಗೆ ಅನುಗುಣವಾಗಿ ತನ್ನ ಪಾಠ ಪದ್ಧತಿಯನ್ನು ಅಥವಾ ವಿಷಯವನ್ನು ಬದಲಿಸಿಕೊಂಡು ಮುಂದೆಸಾಗಲು ಶಿಕ್ಷಕನು ಸಮರ್ಥನಾಗಿರಬೇಕು.

೭. **ಪಾಠದ ಉಪಕರಣಗಳು:—** ಪಾಠಕ್ಕೆ ಬೇಕಾಗುವ ಉಪಕರಣಗಳನ್ನು ಮೊದಲೇ ತಯಾರಿಸಿಕೊಳ್ಳುವದು ಮತ್ತು ಅವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದು ಇವು ಪಾಠದ ಯೋಗ್ಯತೆಯನ್ನು ಹೆಚ್ಚಿಸುವುದಕ್ಕೆ ತುಂಬಾ ಮಹತ್ವವುಳ್ಳ ಸಂಗತಿಗಳು. ಚಿತ್ರಪಟಗಳು, ಆಕೃತಿಗಳು, ನಕಾಶೆ ಮುಂತಾದ ಸಾಹಿತ್ಯಗಳು ಸಾಕಷ್ಟು ಇದ್ದು ಚೆನ್ನಾಗಿ ತಯಾರಿಸಿಕೊಂಡಿರಬೇಕು. ಆದರೆ ಇಷ್ಟರಿಂದಲೆ ಪಾಠವು ಉತ್ತಮವಾಗುವದೆಂದು ಹೇಳಲಾಗುವದಿಲ್ಲ. ಅವನ್ನು ಯೋಗ್ಯಪ್ರಸಂಗದಲ್ಲಿ ಉಪಯೋಗಿಸಿಕೊಳ್ಳುವದು ಮತ್ತು ಅವಕ್ಕೆ ತಕ್ಕಷ್ಟಕ್ಕಿಂತ ಹೆಚ್ಚು ಮಹತ್ವ ಕೊಡದೆ ಸಾಕಷ್ಟೇ ವೇಳೆಯನ್ನು ಈ ಉಪಕರಣಗಳ ಉಪಯೋಗದಲ್ಲಿ ಕಳೆಯುವದು ಇವೂ ಕೂಡ ಪಾಠದ ಮಹತ್ವವನ್ನು ಹೆಚ್ಚಿಸಲಿಕ್ಕೆ ಕಾರಣವಾಗುವವು.

೮. **ಪಾಠದ ಟಿಪ್ಪಣಿ:—** ಯಾವದೊಂದು ಪಾಠವನ್ನು ಕಲಿಸಲು ಆರಂಭಿಸುವದಕ್ಕಿಂತ ಮೊದಲು ಅದರ ಟಿಪ್ಪಣಿಯನ್ನು ಬರೆದು ಇಟ್ಟುಕೊಳ್ಳುವದು ಅವಶ್ಯಕವೆನಿಸುವದು. ಹಾಗೆ ಮಾಡಿಕೊಳ್ಳದಿದ್ದರೆ ಶಿಕ್ಷಕನಿಗೆ ತನ್ನ ಪಾಠದ ತುದಿ ಮೊದಲು ನಿಶ್ಚಿತವಾಗದೆ ದಿಕ್ಕುತಪ್ಪುವ ಸಂಭವವುಂಟು. ಈ ಟಿಪ್ಪಣಿಯನ್ನು ಓದುವದರಿಂದ ಓದುವವರಿಗೆ ಶಿಕ್ಷಕನ ಪಾಠದ ಮಾರ್ಗವು ಗೊತ್ತಾಗುವಂತಿರಬೇಕು. ಕೆಲಕೆಲವು ಸಾರೆ ಪಾಠದ ಟಿಪ್ಪಣಿಯು ಚೆನ್ನಾಗಿದ್ದರೂ ಪಾಠವು ಮಾತ್ರ ಸರಿಯಾಗಿ ಸಾಗುತ್ತಿರುವದಿಲ್ಲ. ಅಥವಾ ಟಿಪ್ಪಣಿಯು ಸರಿಯಾಗದಿದ್ದರೂ ಪಾಠವು ಒಳ್ಳೆಯದಾಗಿಬಿಡುವದು. ಈ ಮಾತು ವಿಶೇಷ ಸಂದರ್ಭಗಳಿಗೆ ಮಾತ್ರ ಅನ್ವಯಿಸುವದು. ವಿದ್ಯಾರ್ಥಿಗಳ ಪೂರ್ವಜ್ಞಾನವೆಷ್ಟು ಈಗಿನ ಪಾಠದಲ್ಲಿ ಕಲಿಸತಕ್ಕ ಸಂಗತಿಗಳು ಯಾವವು ಅವನ್ನು ಕಲಿಸುವ ಕ್ರಮವು ಯಾವದು ಈ ಮೂರು ಮುಖ್ಯ ಸಂಗತಿಗಳು ಟಿಪ್ಪಣಿಯಿಂದ ಸ್ಪಷ್ಟವಾಗುತ್ತಿರಬೇಕು.

೯. **ಕರಿಯಹಲಗೆಯ ಮೇಲಿನ ಟಿಪ್ಪಣಿ:—** ಶಿಕ್ಷಕನು ಕ. ಹ. ಯ ಮೇಲೆ ಬರೆಯುವ ಟಿಪ್ಪಣಿಯು ಸಂಕ್ಷೇಪವಾಗಿರಬೇಕು; ಅದು ಮಹತ್ವದ ಎಲ್ಲ ಸಂಗತಿಗಳನ್ನು ಒಳಗೊಂಡಿರಬೇಕು. ಈ ಟಿಪ್ಪಣಿಯನ್ನು ಶಿಕ್ಷಕನು ತನ್ನಷ್ಟಕ್ಕೆ ತಾನೇ ಬರೆದು ಬಿಡದೆ ಅದು ವಿದ್ಯಾರ್ಥಿಗಳು ತಿಳಿದುಕೊಂಡ ವಿಷಯಕ್ಕೆ ಸಂಬಂಧಿಸಿದ, ಅವರ ಬಾಯಿಂದಲೇ ಹೊರಟ, ಮಾತುಗಳ ಸಂಗ್ರಹವಾಗಿರಬೇಕು. ಪಾಠದ ಬೇರೆ ಬೇರೆ ಮೆಟ್ಟಿಲುಗಳು ಸಾಗುತ್ತ ಹೋದಂತೆ ಕ. ಹ. ಯ ಮೇಲಿನ ಟಿಪ್ಪಣಿಯು ಮುಂದೆ ಸಾಗಬೇಕು.

೧೦. ಇಂಥದೊಂದು ಪಾಠವನ್ನು ಇಂಥದೇ ಪದ್ಧತಿಯಿಂದ ಕಲಿಸಬೇಕೆಂದು ಹೇಳುವದು ಸಾಧ್ಯವಿಲ್ಲ; ಇಷ್ಟವೂ ಅಲ್ಲ. ಯಾವ ಪದ್ಧತಿಯು ವಿದ್ಯಾರ್ಥಿಗಳನ್ನು ವಿಚಾರಕ್ಕೆ ಹಚ್ಚುವದೋ, ವಿದ್ಯಾರ್ಥಿಗಳನ್ನು ಕೆಲಸದಲ್ಲಿ ತೊಡಗಿಸುವದೋ, ಅವರ ಆ ವಿಷಯದ ವಿಚಾರಗಳನ್ನು ಸ್ಪಷ್ಟವಾಗಿ ಪರರ ಮುಂದಿಡಲು ಅವಶ್ಯಕವಾದ ಜ್ಞಾನವನ್ನು ಒದಗಿಸಿಕೊಡುವದೋ, ತಮ್ಮ ಮುಂದಿರುವ ಯಾವ ದಾದರೊಂದು ಸಂಗತಿಯನ್ನು ವಿಚಾರಪೂರ್ವಕವಾಗಿ ವಿಮರ್ಶಿಸಿ ನಿಶ್ಚಿತವಾದ ನಿರ್ಣಯಕ್ಕೆ ಮುಟ್ಟಲು ಕಲಿಸುವದೋ, ತಾವೇ ತಮ್ಮ ಜ್ಞಾನವನ್ನು ದೊರಕಿಸಿಕೊಳ್ಳುವಷ್ಟು ಸಾಮರ್ಥ್ಯವನ್ನು ಹುಟ್ಟಿಸುವದೋ, ಅದೇ ಉತ್ತಮವಾದ ಪದ್ಧತಿಯೆನಿಸುವದು.

೧೧. ಶಿಕ್ಷಕನು ತಾನು ತನ್ನ ವಿದ್ಯಾರ್ಥಿಗೆ ಯಾವದನ್ನು ಕಲಿಸಿದೆನು, ಎಷ್ಟು ಕಲಿಸಿದೆನು, ಹೇಗೆ ಕಲಿಸಿದೆನು, ಎನ್ನುವದಕ್ಕಿಂತಲೂ ಆ ತನ್ನ ಪಾಠದಿಂದ ವಿದ್ಯಾರ್ಥಿಯು ಏನು ಕಲಿತನು, ಎಷ್ಟು ಕಲಿತನು, ಹೇಗೆ ಕಲಿತನು ಎಂಬುದೇ [illegible]ದನ್ನು ಮರೆಯಲಾಗದು.

—— o ——

ಮಹಾಯುದ್ಧದ ಭೂಗೋಲ

(ಕಳೆದ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

೧೦. **ಬ್ರಿಟಿಷ ಸಾಮ್ರಾಜ್ಯವೂ ಫ್ರೆಂಚರ ವಸಾಹತುಗಳೂ:—** ಬ್ರಿಟಿಷ ಸಾಮ್ರಾಜ್ಯವು ಜನಸಂಖ್ಯೆಯ ಮಾನದಿಂದಲೂ ವಿಸ್ತಾರಮಾನದಿಂದಲೂ ಜಗತ್ತಿನಲ್ಲೆಲ್ಲ ದೊಡ್ಡದು. ಅದಾದ ತರುವಾಯವೇ ಫ್ರೆಂಚರ ಸಾಮ್ರಾಜ್ಯದ ಸ್ಥಾನವು ಬರುವದು. ಬ್ರಿಟಿಷಸಾಮ್ರಾಜ್ಯದ ಜನಸಂಖ್ಯೆ ಐವತ್ತುಕೋಟಿ. ವಿಸ್ತಾರ

ಒಂದು ಕೋಟಿ ೪೦ ಲಕ್ಷ ಚೌರಸಮೈಲು. ಅದರಂತೆಯೇ ಫ್ರೆಂಚ ಸಾಮ್ರಾಜ್ಯದ ಜನಸಂಖ್ಯೆ ೧೦ ಕೋಟಿ, ಏಸ್ತಾರ ೪೩ ಲಕ್ಷ ೩೬ ಸಾವಿರ ಚೌ. ಮೈಲು.

ಈ ಸಾಮ್ರಾಜ್ಯಗಳ ಆರ್ಥಿಕ ಪರಿಸ್ಥಿತಿಯೂ ಚೆನ್ನಾಗಿದೆ. ಜಗತ್ತಿನ ಒಟ್ಟು ಹುಟ್ಟುವಳಿಯಲ್ಲಿ ಮುಕ್ಕಾಲು ಪಾಲಿನಷ್ಟು ಜೂಟನಾರು, ನಿಕೆಲ್, ಕುರಿಯ ಮಾಂಸಗಳೂ, ಅರ್ಧಕ್ಕಿಂತ ಹೆಚ್ಚು ಬಂಗಾರ, ಆಸ್‌ಬೆಸ್ಟಸ್, ರಬ್ಬರು, ಉಣ್ಣೆಗಳೂ ಬ್ರಿಟಿಷ ಸಾಮ್ರಾಜ್ಯವೊಂದರಲ್ಲಿಯೇ ಹುಟ್ಟುವವು. ವನಸ್ಪತಿಜನ್ಯ ಎಣ್ಣೆಗಳು, ಹಾಲು, ಬೆಣ್ಣೆ ಮುಂತಾದ ದನಗಾವಲಿನ ಹುಟ್ಟುವಳಿ, ಸಕ್ಕರೆ ಮುಂತಾದ ಆಹಾರದ ಜೀನಸುಗಳೂ ಸೀಸ, ತವರು, ಸತುವು, ತಾಮ್ರ, ಕಲ್ಲಿದ್ದಲಿ ಮುಂತಾದ ಖನಿಜಗಳೂ ಬ್ರಿಟಿಷಸಾಮ್ರಾಜ್ಯದಲ್ಲಿ ವಿಪುಲವಾಗಿ ದೊರೆಯುವವು. ಗೋದಿ, ಹತ್ತಿ, ಕಬ್ಬಿಣದ ಅದುರು, ಪೆಟ್ರೋಲು ಮೊದಲಾದ ಇತರ ಅವಶ್ಯಕ ಸಾಮಗ್ರಿಗಳನ್ನು ತಟಸ್ಥರಾಷ್ಟ್ರಗಳಿಂದ ತರಿಸಿಕೊಳ್ಳಲು ಬ್ರಿಟನ್ನಿಕ್ಕೆ ತುಂಬ ಅನುಕೂಲತೆಯಿರುವದು.

ಫ್ರೆಂಚ್ ಸಾಮ್ರಾಜ್ಯವು ಬ್ರಿಟಿಷ ಸಾಮ್ರಾಜ್ಯದಷ್ಟು ಫಲವತ್ತಾಗಿಲ್ಲ. ಇಲ್ಲಿಯ ಖನಿಜಗಳ ಹುಟ್ಟುವಳಿಯೂ ಕಡಿಮೆ. ಜನವಸತಿಯೂ ವಿರಳವಾಗಿದೆ. ಫ್ರೆಂಚರ ವಸಾಹತುಗಳಲ್ಲಿ ಯುದ್ಧಕ್ಕೆ ಸಿದ್ಧವಾಗಿರುವ ದೇಶೀಯ ಸೈನಿಕರ ಸಂಖ್ಯೆಯು ಸಾಕಷ್ಟು ಇರುವದರಿಂದಲೂ ಆಹಾರಸಾಮಗ್ರಿಯ ದೃಷ್ಟಿಯಿಂದ ಫ್ರಾನ್ಸವು ಸ್ವತಂತ್ರವಾಗಿ ಜೀವಿಸಲು ಸಾಧ್ಯವಿರುವದರಿಂದಲೂ ಪ್ರಕೃತದ ಮಹಾಯುದ್ಧದಲ್ಲಿ ಅದಕ್ಕೊಂದು ಸ್ಥಾನವಿದೆ.

೧೧. **ಪಶ್ಚಿಮದ ಗಡಿನಾಡುಗಳು :—** ಉತ್ತರ ಕಡೆಯಲ್ಲಿ ಫ್ರಾನ್ಸಿಕ್ಕೂ ಜರ್ಮನಿಗೂ ನಡುವೆ ನೆದರ್ಲೆಂಡ್, ಬೆಲ್ಜಿಯಮ್ ಮತ್ತು ಲಕ್ಸಂಬರ್ಗ ಎಂಬ ಮೂರು ಚಿಕ್ಕ ರಾಜ್ಯಗಳು ನೆಲಿಸಿವೆ. ನೆದರ್ಲಂಡವೂ ಬೆಲ್ಜಿಯಮ್ಮದ ಉತ್ತರ ಭಾಗವೂ ಸಪಾಟಾದ ಬಯಲು ಪ್ರದೇಶವಾಗಿರುವದರಿಂದ ಈ ಭಾಗದಿಂದ ಜರ್ಮನಿಯು ಫ್ರಾನ್ಸಿನ ಮೇಲೆ ಏರಿಹೋಗಲು ಸಾಧ್ಯವಿದೆ. ಈ ಭಾಗದೊಳಗಿನ ನದಿಗಳೂ ಕಾಲುವೆಗಳೂ ಹಗೆಗಳ ಮಾರ್ಗವನ್ನು ಅಡ್ಡಗಟ್ಟುವ ಅಡಚಣಿಗಳಾಗಿದ್ದರೂ ಅವು ಅಷ್ಟು ಮಹತ್ವದವಾಗಿಲ್ಲ. ಮ್ಯೂಜ ಕೊಳ್ಳವನ್ನು ಬಿಟ್ಟುಳಿದ ಬೆಲ್ಜಿಯಮ್ಮದ ದಕ್ಷಿಣಭಾಗವೂ ಲಕ್ಸಂಬರ್ಗ ಪ್ರದೇಶವೂ ಅಡವಿ ಬೆಳೆದ ಜವುಳು ಪ್ರದೇಶವಾಗಿರುವದರಿಂದ ಹಗೆಗಳ ಪ್ರಯಾಣಕ್ಕೆ ಅನುಕೂಲವಾಗಿಲ್ಲ. ಇಲ್ಲಿಂದ ದಕ್ಷಿಣದಲ್ಲಿ ಸ್ವಿತ್ಸರ್ಲಂಡದವರೆಗೂ ಫ್ರಾನ್ಸ ಜರ್ಮನಿಗಳ ಗಡಿಗಳು ಒಂದಕ್ಕೊಂದು ಹೊಂದಿಕೊಂಡಿವೆ. ಲಕ್ಸಂಬರ್ಗದಿಂದ ರ್ಹಾಯಿನ್ ನದಿಯ

ಕೊಳ್ಳದವರೆಗಿನ ಫ್ರಾನ್ಸ್ ಜರ್ಮನಿಗಳ ನಡುವಿನ ಈ ಗಡಿನಾಡು ಗುಡ್ಡಗಾಡಾ
ಗಿದ್ದು ಅಡವಿಯಿಂದ ಮುಚ್ಚಿದೆ. ಸಾರ ಕಲ್ಲಿದ್ದಲಿಯ ಕಣಿಗಳ ಪ್ರದೇಶವೂ
ಈ ಭಾಗದಲ್ಲಿಯೇ ಇರುವದು. ಈ ಪ್ರದೇಶದಲ್ಲಿ ಫ್ರಾನ್ಸ್‌ದ ಮೇಲೆ ಏರಿಹೋ
ಲಿಕ್ಕೆ ಎರಡು ಘಟ್ಟದ ಮಾರ್ಗದ ಕಿಂಡಿಗಳಿರುವವು. ಈ ಪ್ರದೇಶದಲ್ಲಿ ಫ್ರೆಂಚರೂ
ಜರ್ಮನ್ನರೂ ಆತ್ಮಸಂರಕ್ಷಣೆಗಾಗಿ ತಮ್ಮ ತಮ್ಮ ಗಡಿನಾಡಿನಲ್ಲಿ ಭದ್ರವಾ
ದುರ್ಗಗಳ ಸಾಲುಗಳನ್ನು ಒಂದಕ್ಕೊಂದು ಎದುರಾಗಿ ರಚಿಸಿಕೊಂಡಿರುವರು
ದಕ್ಷಿಣದ ಸ್ವಿತ್ಸರ್ಲಂಡ್ ಆಲ್ಪ್ಸ್ ಪರ್ವತಗಳ ಪ್ರದೇಶವು ಹಗೆಗಳ ಆಕ್ರಮಣಕ್
ಅನುಕೂಲವಾಗಿಲ್ಲ.

೧೨. **ಫ್ರಾನ್ಸ್:—** ಫ್ರಾನ್ಸ್‌ವು ಜಗತ್ತಿನೊಳಗಿನ ವ್ಯಾಮುಖ್ಯವಾ
ಔದ್ಯೋಗಿಕಜೀವನದ ರಾಷ್ಟ್ರಗಳಲ್ಲಿ ಎಣಿಸಲ್ಪಡುತ್ತಿದ್ದರೂ ಇದರ ಕೈಗಾ
ಕೆಯು ಬ್ರಿಟನ್ ಜರ್ಮನಿಗಳಷ್ಟು ಮುಂದುವರಿದಿಲ್ಲ. ಫ್ರಾನ್ಸ್‌ದಲ್ಲಿ ಕಲ್ಲಿದ್ದಲಿಂ
ಹುಟ್ಟುವಳಿ ಕಡಿಮೆ. ಆದರೆ ಫ್ರಾನ್ಸಿನ ಗುಡ್ಡಗಾಡಿನಲ್ಲಿ ಹರಿಯುವ ನದಿಂ
ಪ್ರವಾಹಗಳಿಂದ ವಿದ್ಯುತ್ತನ್ನು ಹುಟ್ಟಿಸಿಕೊಂಡು ತಮ್ಮ ಔದ್ಯೋಗಿಕ ಕೇಂ
ಗಳಿಗೆ ಆ ವಿದ್ಯುತ್‌ಶಕ್ತಿಯ ಪೂರೈಕೆಮಾಡಿಕೊಂಡಿರುವರು. ಯುರೋಪ
ಎಲ್ಲ ರಾಷ್ಟ್ರಗಳಿಗಿಂತ ಫ್ರಾನ್ಸ್‌ದಲ್ಲಿ ಕಬ್ಬಿಣದ ಅದುರು ಹೆಚ್ಚಾಗಿ ದೊರೆಯುವುದ
ಈ ದೇಶದ ಉಲ್ಕ್ಯಾನಿನಮಿನ ಹುಟ್ಟುವಳಿಯೂ ಹೆಚ್ಚು. ಫ್ರಾನ್ಸ್‌ದಲ್ಲಿ ಹುಟ್ಟು
ಕೈಗಾರಿಕೆಯ ಒಡವೆಗಳು ಅವು ಹುಟ್ಟುವ ಪ್ರಮಾಣಕ್ಕಿಂತಲೂ ಅವು
ಯೋಗ್ಯತೆಯು ಹೆಚ್ಚಿನದೆಂಬ ಕಾರಣದಿಂದಲೇ ಜಗತ್ತಿನಲ್ಲಿ ಹೆಸರಾಗಿವೆ.

ಫ್ರಾನ್ಸ್‌ದಲ್ಲಿ ಒಕ್ಕಲುತನದ ಹುಟ್ಟುವಳಿಯು ಮೂನವು ಹೆಚ್ಚು. ಅವು
ವೈವಿಧ್ಯವೂ ಹೆಚ್ಚು. ಎಲ್ಲ ಬಗೆಯ ಹವಾಮಾನ ವ್ಯಾಕೃತಿಕ ಸ್ಥಿತಿಗಳಿರುವ
ದೇಶದಲ್ಲಿಯ ಒಕ್ಕಲತನವು ಯುರೋಪದ ಎಲ್ಲಿಕ್ಕ ರಾಷ್ಟ್ರಗಳಿಗಿಂತಲ
ಚೆನ್ನಾಗಿರುವದು. ಎಲ್ಲ ಬಗೆಯ ಆಹಾರದ ಜೀನಸುಗಳು ಇಲ್ಲಿ ಬೆಳೆಯುವಃ
ಪೆಟ್ರೋಲು, ಕಲ್ಲಿದ್ದಲಿ ಮತ್ತು ನೂಲು ಇವು ಪರದೇಶಗಳಿಂದ ಫ್ರಾನ್ಸ್
ಬರುವವು. ಕಬ್ಬಿಣ ಉಕ್ಕುಗಳ ಸಾಮಾನುಗಳು ಫ್ಯಾನ್ಸಿ ಸಾಮಾನುಗಳು ಇ
ಫ್ರಾನ್ಸ್‌ದಿಂದ ಪರದೇಶಕ್ಕೆ ಹೋಗುವವು. ಫ್ರಾನ್ಸ್‌ದ ಆರ್ಥಿಕ ಸ್ಥಿತಿಂ
ಯುರೋಪದ ಎಲ್ಲಿಕ್ಕ ರಾಷ್ಟ್ರಗಳಿಗಿಂತಲೂ ತುಂಬ ಸಮಾಧಾನಕರವಾಗಿರುವ

೧೩. **ಗ್ರೇಟಬ್ರಿಟನ್ :—** ಹದಿನೆಂಟನೆಯ ಶತಮಾನದಿಂದ ಈ
ಗ್ರೇಟಬ್ರಿಟನ್ನವು ಒಕ್ಕಲುತನವನ್ನು ದುರ್ಲಕ್ಷಿಸಿ ಕೈಗಾರಿಕೆಯ ಜೀವ
ರಾಷ್ಟ್ರವೆನಿಸಿಕೊಂಡಿರುವದು. ಆದ್ದರಿಂದ ಅದಕ್ಕೆ ಬೇಕಾಗುವ ಆಹ

ಸಾಮಗ್ರಿಯು ಬಹುಭಾಗವು ಪರದೇಶದಿಂದಲೇ ಬರಬೇಕು. ಸದ್ಯಕ್ಕೆ ಬ್ರಿಟನ್ನವು ಯುರೋಪದ ರಾಷ್ಟ್ರಗಳಿಂದ ಬರುವ ಸಾಮಗ್ರಿಗಳಿಗಿಂತಲೂ ಬ್ರಿಟಿಷ ಸಾಮ್ರಾಜ್ಯದ ಇತರ ಭಾಗಗಳು, ಅಮೇರಿಕಾ ಇವುಗಳಿಂದ ಬರುವ ಸಾಮಗ್ರಿಗಳ ಮೇಲೆಯೇ ಹೆಚ್ಚಾಗಿ ಅವಲಂಬಿಸಬೇಕಾಗಿರುವದು. ಮತ್ತು ಪ್ರಬಲವಾದ ಹಡಗುಪಡೆಯ ಸಂರಕ್ಷಣೆಯು ಮೂಲಕವಾಗಿ ಈ ಮಹಾಯುದ್ಧದ ಸಮಯದಲ್ಲಿಯೂ ಈ ಸಾಮಗ್ರಿಗಳ ಪೂರೈಕೆಯು ನಿರಾತಂಕವಾಗಿ ಸಾಗಿರುವದು.

೧೪. **ಅಮೇರಿಕಾ :—** ಕಾನಡಾ ನ್ಯೂಫೌಂಡ್‌ಲಂಡ್ ಮತ್ತು ಬ್ರಿಟಿಷರ ಮತ್ತು ಫ್ರೆಂಚರ ಚಿಕ್ಕ ಚಿಕ್ಕ ವಸಾಹತುಗಳು ಇವುಗಳನ್ನು ಬಿಟ್ಟರೆ ದಕ್ಷಿಣೋತ್ತರ ಅಮೇರಿಕಾ ಖಂಡವೆಲ್ಲ ಯುದ್ಧದಲ್ಲಿ ತೊಡಗದೆ ಇರುವ ಪ್ರಶಾಂತ ರಾಷ್ಟ್ರಗಳಾಗಿಯೇ ಉಳಿದಿದೆ. ಅಮೇರಿಕೆಯಿಂದ ಗ್ರೇಟಬ್ರಿಟನ್ನಕ್ಕೆ ಬರುವ ಸಾಮಗ್ರಿಗಳಲ್ಲಿ ಗೋದಿ, ಮಾಂಸ, ಕಾಫಿ, ಉಣ್ಣೆ, ಹತ್ತಿ, ಪೆಟ್ರೋಲು, ನಿಕೆಲ್ ಇವು ಮುಖ್ಯವಾದುವು. ಬ್ರಿಟನ್ನವು ತನ್ನ ಪ್ರಬಲವಾದ ಹಡಗುಪಡೆಯ ಸಹಾಯದಿಂದ ಈ ಎಲ್ಲ ಸಾಮಗ್ರಿಗಳನ್ನೂ ಯುದ್ಧೋಪಕರಣಗಳನ್ನೂ ಅಮೇರಿಕೆಯಿಂದ ನಿರಾತಂಕವಾಗಿ ದೊರಕಿಸಿಕೊಳ್ಳುತ್ತಲಿರುವದು.

ಜರ್ಮನಿಯು ಮಾತ್ರ ತನಗೆ ಬೇಕಾಗುವ ಸಾಮಗ್ರಿಗಳನ್ನು ಜಗತ್ತಿನ ಇತರ ರಾಷ್ಟ್ರಗಳಿಂದ ದೊರಕಿಸಿಕೊಳ್ಳುವದು ಅಸಾಧ್ಯವಾಗಿದೆ. ಅದರ ಉದ್ಯೋಗ ವ್ಯವಸಾಯಗಳೂ ವ್ಯಾಪಾರವೂ ಈ ಮಹಾಯುದ್ಧದಿಂದ ತೀರ ಕಟ್ಟಾಗಿ ಹೋಗಿವೆ.

—o—

ಚಳಿಗಾಲದ ವರ್ಣನೆ

ವಾ. ಷ ॥

ಹರನು ಚಳಿಬಾಧೆಯಿಂ ಶಿರದೊಳಗೆ ಧರಿಸಿರ್ದ ।
ಪರಮಪಾವನೆಯಾದ ಗಂಗೆಯಂ ಪಿತನಾದ ।
ಶರನಿಧಿಯ ಮನೆಗೆ ನೀ ಪೋಗೆಂದು ಕಳುಹಿ ಕುಮುದಾಪ್ತನಂ ನಭದೊಳಿರಿಸಿ ॥
ಮುರಗೂಳನಂ ನಿಟಿಲನೇತ್ರದಲಿ ಧರಿಸುತ್ತೆ ।
ದ್ವಿರದಾಜನವ ತಂದು ಪೊದೆಯುತಿರ್ಪಿಕೆಯಿಂ ।
ಗಿರಿರಾಜ ಸಂಭವಾಲಿಂಗನಸುಖವನ್ನು ಬಿಟ್ಟು ಸಂಚರಿಸಲಾರಂ ॥೧॥

ಧರೆಯೊಳಗೆ ನಿರ್ಭಯದೆ ದುಷ್ಕಾರ್ಯಮಂ ಮಾಡಿ।
ನರಕಯಾತನೆಗಂಜಿ ಸಂಕಟದೆ ಬಳಲುತ್ತ ।
ಥರಥರನೆ ನಡುಗುತಿಹ ದುಷ್ಕರ್ಮಿಗಳತೆರದೆ ಲೋಕದೊಳಗೆಲ್ಲೆಡೆಯೊಳು ॥
ಹರಡಿಕೊಂಡಿಹ ಚಳಿಯ ಬಾಧೆಗಂಜುತೆ ಜನರು।
ನಿರುತದಲಿ ಹಿಮನೃಪನ ಸದೆಬಡೆದು ಸೋಲಿಸಲ್ ।
ತರಣಿಯಂ ಭಜಿಸುವರ್ ಬಿಸಿಲೊಳಗೆ ಕುಳಿತುಕೊಂಡೇಕಾಗ್ರ ಚಿತ್ತದಿಂದ ॥೨॥

ಕುಗ್ಗಿರಲು ತಾರುಣ್ಯ ವೃದ್ಧಾಪ್ಯವಡರಿಸಿರ।
ಲಗ್ಗಿಯಂ ಬಹುಕಷ್ಟದಿಂ ಹೊತ್ತಿಸುತೆ ಮೇಲೆ ।
ಪೇಗ್ಗೊರಡುಗಳ ಹಾಕಿಮಾಡಿದರೊಲೆಗಳಾಶ್ರಯವನ್ನು ವೃದ್ಧಜನರು ॥

* * * *

ಬಾಲಕನು ಪಾಸುಗೆಯೊಳೊರಗಿರಲು ನಸುಕಿನೊಳು।
ವೇಳೆಯಾಗಿಹುದೀಗ ಭಾಸ್ಕರನು ಮೂಡಿಹನು ।
ಸಾಲೆಯನು ಸಾರೆನಲು ಹೋಗಲಾರೆನು ಜನನಿ ನೊರೆವಾಲನೀವೆ ನಿನಗೆ ॥
ಲೀಲೆಯಿಂ ಕುಡಿ ನಿನ್ನನೆಂತು ಚಳಿಬಾಧಿಪುದು।
ನಾಲಿಗೆಗೆ ರುಚಿಯೆನಿಸುವವಲಕ್ಕಿಯಂ ತಿಂದು ।
ಮೇಲೆ ಬಿಸಿನೀರನ್ನು ಕುಡಿದು ಹೋಗುವೆನೆಂಬನಿದು ಸಹಜಮಲ್ತೆ ॥೪॥

ಭರದಿಂದೆ ಪ್ರಜ್ವಲಿಪ ಬೆಂಕಿಯಲ್ಲೊಣಗಿರುವ।
ಕೊರಡುಗಳ ಹಾಕಲಾಕ್ಷಣದೊಳಗೆ ಬೆಂಕಿಯೂ ।
ಗುರುತರದ ಶಕ್ತಿಯದು ಕಡಿಮೆಯಾಗುವ ತೆರದಿ ಹೇಮಂತಋತುವಿನೊಳಗೆ ॥
ತರತರದ ಪಕ್ವಾನಗಳನ್ಮುಂಡೊಡಂ ದೇಹದೊಳ।
ಗಿರುವನಲ ಶಕ್ತಿಯದು ಕುಂದುತಿರೆ ಮೈನಡುಗೆ।
ಸರಸ ಗುಣಯುಕ್ತ ತಾಂಬೂಲಮಂ ಸೇವಿಪರ್ ಘರ್ಮಾತುರರ್ಮುತ್ತೆ ಮುತ್ತೆ ॥೫॥

ನಾರಾಯಣ ನರಸಿಂಹ ಜವಳಿ
ಅ। ಮಾಸ್ತರ ಹಾರೋಬೆಳವಡಿ
ತಾ॥ ಧಾರವಾಡ

ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೪೧

ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೧ನೆಯ ಇಸ್ವಿಯ ಫೆಬ್ರುವರಿ ತಿಂಗಳ ೧೩ ಮತ್ತು ೧೪ನೆಯ ತಾರೀಖು ಗುರುವಾರ ಮತ್ತು ಶುಕ್ರವಾರ ದಿವಸ ನಡೆಯುವದೆಂದು ಸರಕಾರದಿಂದ ಗೊತ್ತಾಗಿರುವದು. ಧಾರವಾಡ ಜಿಲ್ಲೆಯೊಳಗಿನ ವೆಂಕಾಸಾನಿ ಮತ್ತು ಮಹ್ಮದನ್ ಬರ್ಸರಿ ಫಂಡಿನ ಸ್ಕಾಲರಶಿಪ್ಪುಗಳ ಪರೀಕ್ಷೆಯು ಸಹ ಮೇಲೆ ಹೇಳಿದ ದಿವಸಗಳಲ್ಲಿಯೇ ನಡೆಯುವವು.

೨. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರ ಅರ್ಜಿಗಳು ಆಯಾ ಸೆಂಟರುಗಳ ಪ್ರೆಸಿಡೆಂಟರಿಗೆ ೧೯೪೧ನೆಯ ಇಸ್ವಿಯ ಜನವರಿ ತಿಂಗಳ ೩೧ನೆಯ ತಾರೀಖಿನೊಳಗಾಗಿ ಮುಟ್ಟಬೇಕು. ಅರ್ಜಿಯ ಸಂಗಡ ಒಂದು ರೂಪಾಯಿ ಫೀಯನ್ನು ಕಳುಹಿಸಬೇಕು. ವೆಂಕಾಸಾನಿ ಮತ್ತು ಮಹಮ್ಮದನ್ ಬರ್ಸರಿ ಫಂಡ ಸ್ಕಾಲರ್‌ಶಿಪ್ಪುಗಳಿಗೆ ಕೂಡ್ರುವ ಉಮೇದುವಾರರಿಗೆ ಫೀ ಇಲ್ಲ.

೩. ಸ್ಕಾಲರ್‌ಶಿಪ್ ಪರೀಕ್ಷೆಯ ನಿಯಮಗಳಲ್ಲಿಯು ಅನೆಯ ನಿಯಮದಂತೆ (೧) ಹಾಜರಿಯಲ್ಲಿ ಕ್ರಮವಿಲ್ಲದೆ ಕಂಡೋನ ಮಾಡಬೇಕಾಗಿರುವ (೨) ಅಥವಾ ಸಾಲೆಗಳನ್ನು ಬದಲಿಸಿರುವ ಸಂದರ್ಭಗಳಲ್ಲಿ ದಕ್ಷಿಣಭಾಗದ ಎಜ್ಯುಕೇಶನ್ ಇನ್‌ಸ್ಪೆಕ್ಟರರಿಂದ ವಿಶೇಷ ಅಪ್ಪಣೆಯನ್ನು ಪಡೆದುಕೊಳ್ಳಬೇಕಾಗಿದ್ದು ಅಂಥ ಅಪ್ಪಣೆಯನ್ನು ಸಹ ಅರ್ಜಿಯ ಸಂಗಡಲೇ ಪ್ರೆಸಿಡೆಂಟರಿಗೆ ಕಳುಹಿಸಿಕೊಡಬೇಕು.

ಯಾವದೇ ವಿಷಯದಲ್ಲಿ ಅಪೂರ್ಣವಾಗಿರುವ ಇಲ್ಲವೆ ಫೀ ಬಾರದಿರುವ ಅರ್ಜಿಯನ್ನು ಯಾವ ತಕರಾರನ್ನೂ ಕೇಳದೆ ತಿರಸ್ಕರಿಸಲಾಗುವದು.

೪. ಈ ಸಂಬಂಧದ ನೋಟೀಸು ಎಂದಿನಂತೆಯೇ ಮುಂಬಯಿ ಸರಕಾರದ ಗ್ಯಾಝೆಟಿನಲ್ಲಿ ಸದ್ಯದಲ್ಲಿಯೇ ಪ್ರಕಟವಾಗುವದು.

ಸಹಿ:— ಜೆ. ಆರ್. ಭಂಡಿವಾಡ
ದ. ಭಾ. ದ ಎಜ್ಯುಕೇಶನಲ್
ಇನ್‌ಸ್ಪೆಕ್ಟರರ ಪರವಾಗಿ.

ಪಿಸಿ–೧೧೧–೧೯೪೧

ಪ್ರ ಕ ಟ ನೆ

ಉರ್ದು ಸ್ಕೂಲ ಬುಕ್ ಕಮೀಟ ಮುಂಬಯಿ ಇವರು ತಾರೀಖು ೨೯–೬–೧೯೪೦ ನೆಯ ದಿವಸ ಕೂಡಿದ ಮೀಟಿಂಗದಲ್ಲಿ ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಲ್ಲಿ ಉಪಯೋಗಿಸುವ ಸಲುವಾಗಿ ಮಂಜೂರ ಮಾಡಿದ ಪುಸ್ತಕಗಳು

ಅ.ನ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು	ಬೆಲೆ.	ಯಾತರ ಸಲುವಾಗಿ ಮಂಜೂರಾಗಿರುವದು.
೧	ಫಲಾದ ಕೀ ರಾಹ	ಮುನಸೀ ತಾಲೀಬ ಅಲಿ ಪಾಬಂದ ಖುರೇಶಿ	ತಾಲೀಮ ಎಜನ್ಸಿ ಲಾಹೋರ	೦–೬–೬	ಪ್ರಾ.ಶಾ. ವಿ.ವಾ.
೨	ಮೇರೀ ಕವಾಯಿದಕೀ ಪಹಲೀ ಕಿತಾಬ	ಮುನಸೀ ಅಬ್ದುಲ್ ರಹಮಾನ ಅಹಮ್ಮದ ಸಾಹಿ ಪುಣೆ	ದಿವಾನ ಪ್ರಿಂಟಿಗ ಪ್ರೆಸ್ ಲಾಹೋರ	೦–೩–೬	ಪ್ರಾ.ಶಾ. ಶಿ. ವಾ.
೩	ಸದರ (ಎಡು) ಸಾವರಾಜಿ	ಹಸನ ಅಜೀಜ ಜಾವೀದ	ಓರಿಯಂಟ ಲಿಟರೇಚರ ಕಂ. ಲಾಹೋರ	೦–೫–೦	ಪ್ರಾ.ಶಾ. ವಿ.ವಾ.
೪	ಸುಖಿ ಕಿಸಾನ್	ಮಹಮ್ಮದ ಅಬ್ದುಲ್ ಹಮೀದ ಬೀ. ಏ. ತಹಸೀಲದಾರ ನಿಜಾಮಾಬಾದ	ಅಜಾಮ ಸ್ಟೀಮ ಪ್ರೆಸ್ ಹೈದ್ರಾಬಾದ	೧–೦–೦	ಪ್ರಾ.ಶಾ. ಶಿ. ವಾ.
೫	ತಾಲಿಮಿ ಖಯಾಲ್ ಪಹಲೀ ಕಿತಾಬ	ಡಿ. ಎಮ್. ರೈ. ಬ್ಯಾರನ್	ಆಕ್ಸಫರ್ಡ ಯುನಿವ್ಹರ್ಸಿಟಿ ಪ್ರೆಸ್ ಬಾಂಬೆ	೦–೩–೦	ಪ್ರಾ. ಶಾ. ಉಪ–ಪಠ್ಯ ಪುಸ್ತಕ

೬	ತಾಲಿಮಿ ಖಯಾಲ್ ದುಸರೀ ಕಿತಾಬ	ಸದರ	ಸದರ	೦-೪-೦	ಸದರ
೭	ತಾಲಿಮಿ ಖಯಾಲ್ ತಿಸರೀ ಕಿತಾಬ	ಸದರ	ಸದರ	೦-೪-೦	ಸದರ
೮	ಉರ್ದು ಜಬಾನಕೀ ಪಹಲೀ ಕಿತಾಬ	ಖಾನಸಾಹೇಬ ಮೌಲವೀ ಮಹಮ್ಮದ ಇಸ್ಮಾಯಿಲ್	ನವಾಲ್ ಕಿಶೋರ ಪ್ರೆಸ್ ಲಖನೌ	೦-೧-೬	ಪ್ರಾ.ಶಾ. ವಿ. ವಾ.
೯	ಉರ್ದು ಜಬಾನಕೀ ದುಸರೀ ಕಿತಾಬ	ಸದರ	ಸದರ	೦-೩-೦	ಸದರ
೧೦	ಉರ್ದು ಜಬಾನಕೀ ತಿಸರೀ ಕಿತಾಬ	ಸದರ	"	೦-೪-೦	"
೧೧	ಉರ್ದು ಜಬಾನಕೀ ಚೌಥೀ ಕಿತಾಬ	ಸದರ	"	೦-೬-೦	"
೧೨	ಉರ್ದು ಜಬಾನಕೀ ಪಾಂಚವೀ ಕಿತಾಬ	ಸದರ	"	೦-೮-೦	"
೧೩ ರಿಂದ ೧೬	ಕವಾಯಿದ್ ಉರ್ದು ಇನ್ಷಾ-ಪರ್ದಾಜಿ ಭಾಗ ೧,೨,೩,೪	ಸೈಯ್ಯದ ತಜಮುಲ್ಲಹುಸೇನ	"	ಪ್ರತಿಯೊಂದಕ್ಕೆ ೦-೪-೦	ಪ್ರಾ.ಶಾ. ತಿ. ವಾ.

ಪ್ರಾ.ಶಿ.ಪ.

ಆ.ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೧೭	ಪ್ರಿನ್ಸ್ ರೀಡರ ಭಾಗ ೧	ಖಾಜಿ ಸೈಯ್ಯದ ನಾಸೀರುದ್ದೀನ ಅಹಮ್ಮದ ಎಂ. ಏ.	ನವಾಲ ಕಿಶೋರ ಪ್ರೆಸ್ ಲಖನೌ	೦– ೪–೦	ಪ್ರಾ.ಶಾ.ಶಿ.ವಿ.ವಾ.
೧೮	ಪ್ರಿನ್ಸ್ ರೀಡರ ಭಾಗ ೨		ಸದರ	೦– ೫–೯	ಸದರ
೧೯	ಪ್ರಿನ್ಸ್ ರೀಡರ ಭಾಗ ೩		ಸದರ	೦– ೭–೦	ಸದರ
೨೦	ಪ್ರಿನ್ಸ್ ರೀಡರ ಭಾಗ ೪		ಸದರ	೦– ೭–೬	ಸದರ
೨೧	ಹಿಂದುಸ್ತಾನಕೀ ತಾರೀಖಿ ಕಹಾನಿಯಾಂ	ಕಾಲಿದಾಸ ಕಪೂರ ಎಂ ಏ., ಎಲ್. ಟಿ.	ಸದರ	೦–೧೪–೦	ಸದರ
೨೨	ಅದಬ ರೀಡರ	ಸಯ್ಯದ ತಜಮುಲ್ಲ ಹುಸೇನ ಎಂ. ಏ.,	ಸದರ	೦– ೭–೦	ಪ್ರಾ. ಶಾ. ವಿ. ವಾ.
೨೩	ಕವಾಯಿದೆ ಉರ್ದು	ಪ್ರೊ. ಹವೀದುಲ್ಲಾಖಾನ ಯುಸುಫ ಜಾಯಿ	ಸದರ	೧– ೦–೦	ಟ್ರೇ. ಸಂ. ಪ. ಪು. ಪ್ರಾ. ಶಾ. ಶಿ. ವಾ.
೨೪	ನಿಗಾರಿಸ್ತಾನಯೆ ಅದಬ ಭಾಗ ೧	ಹವಿದುಲ್ಲಾ ಅಫ್‌ಸರ	ಸದರ	೧– ೦–೦	ಮಾ. ಟ್ರೇ. ಪ. ಪು. ಪ್ರಾ. ಶಾ. ಶಿ. ವಾ.
೨೫	ಸದರ ಭಾಗ ೨	ಸದರ	ಸದರ	೧– ೦–೦	

ಪ್ರಾಥಮಿಕ ಶಿಕ್ಷಣ ಇಲಾಖೆ

೨೬	ಬಚ್ಚೌಂಕಿ ಕಹಾನಿಯಾಂ	ಜಾಫರ ಹುಸೇನಖಾನ್	ಸದರ	೦– ೧–೬ ಪ್ರಾ. ಶಾ. ವಿ, ವಾ.
೨೭	ನಯಾಹಿಸಾಬ ಭಾಗ ೪ ಸನ್ ೧೯೪೦	ಅಬ್ದುಲ್ ಅಜೀಜ, ಬಿ. ಎಸ್‌ಸಿ.	ಪಬ್ಲಿಶರ ಸಿಂಡಿಕೇಟ ಬಾಂಬೇ ೯	೦– ೭–೬ ಪ್ರಾ. ಶಾ. ಪಠ್ಯ ಪುಸ್ತಕ
೨೮	ರಹಸೂಮಾಯೆ ಹಿಸಾಬ (ಮಿಡಲ್ ಸ್ಕೂಲಗಳಿಗಾಗಿ ಸನ್ ೧೯೪೦)	ಅಬ್ದುಲ್ ಅಜೀಜ, ಬಿ. ಎಸ್‌ಸಿ. ಎಂ. ಎಚ್. ರಾಠೋಡ ಬಿ. ಏ. ಬಿ. ಟಿ.	ಸದರ	ಪ್ರಾ. ಶಾ. ಗಳ ೧–೧೨–೦ ಮೇಲಿನ ಇಯತ್ತೆ-ಗಳಲ್ಲಿ ಪಠ್ಯ ಪುಸ್ತಕ
೨೯	ನಿಹಾಲೆ ಉರ್ದು	ಮೌಲ್ವಿ ಸೈಮೂರ ರಹಮಾನ	ಇಂಡಿಯನ್ ಪ್ರೆಸ್ ಲಿಮಿಟೆಡ್ ಅಲಹಾಬಾದ	೦– ೪–೦ ಪ್ರಾ.ಶಾ.ವಿ.ಶಿ.ವಾ.
೩೦	ಮುಸಾಹಿರೇ ತಾರೀಖೆ ಹಿಂದ	ಡಾ. ಈಶ್ವರಿಪ್ರಸಾದ	ಸದರ	೦–೧೪–೦ ಪ್ರಾ. ಶಾ. ಶಿ.ವಾ.
೩೧	ವತನಕೀ ರಾಗ ಭಾಗ ೨	—	ಸದರ	೦– ೯–೦ ವಿ. ವಾಚನಾಲಯ
೩೨	ವತನಕೀ ರಾಗ ಭಾಗ ೩	—	ಸದರ	೦– ೧೦–೦ ವಿ. ವಾಚನಾಲಯ
೩೩	ನುಗವಮಾಯೆ ಇತ್ತೆಹಾಲ್	ಪಿರೇಲಾಲ ಶಕೀರ	ಸದರ	೦– ೧೧–೦ ಪ್ರಾ. ಶಾ. ವಿ. ವಾ.
೩೪	ತಬ್ಸಿದ್ ಉಲ್ ಖವಾಯಿದ್ ಭಾಗ ೧	ಎಂ. ಎಚ್. ಎಸ್. ಜಲಾಲುದ್ದೀನ ಅಹಮ್ಮದ ಜಾಫ್ರಿ	ಸದರ	೦– ೧–೬ ಪ್ರಾ. ಶಾ. ಶಿ. ವಾ.
೩೫	ಸದರ ಭಾಗ ೨	ಅಲಹಾಬಾದ		

ಅ.ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೩೬	ಲೋವರ ಪ್ರಾಯಮರಿ ಗರ್ಲ್ಸ್ ರೀಡರ ಭಾಗ ೧	ಎಮ್. ವರ್ಮಾ ಮತ್ತು ಕೃಷ್ಣ ಪೀರೇಲಾಲ	ಇಂಡಿಯನ್ ಪ್ರೆಸ್ ಲಿಮಿಟೆಡ್ ಅಲಹಾಬಾದ	೦– ೫–೦	ಪ್ರಾ. ಶಾ. ವಿ. ವಾ.
೩೭	ಸದರ ಭಾಗ ೨	ಸದರ	ಸದರ	೦– ೫–೦	ಸದರ
೩೮	ಅಪ್ಪರ ಪ್ರಾಯಮರಿ ಗರ್ಲ್ಸ್ ರೀಡರ ಭಾಗ ೧	—	ಸದರ	೦– ೬–೦	ಪ್ರಾ. ಶಾ. ಶಿ. ವಾ.
೩೯	ಸದರ ಭಾಗ ೨	—	ಸದರ	೦– ೬–೦	ಸದರ
೪೦	ಮಿಡ್ಲ್ ಸ್ಕೂಲರ ಫಾಯನಲ್ ಜಾಮೇಟ್ರಿ ಭಾಗ ೧	ಡಾ. ಗೋಕುಲಪ್ರಸಾದ	ಸದರ	೦– ೮–೦	ಪ್ರಾ. ಶಾ. ಶಿ. ವಾ.
೪೧	ಸದರ ಭಾಗ ೨	ಸದರ	ಸದರ	೦– ೮–೦	ಸದರ
೪೨	ಸದರ ಭಾಗ ೩	ಸದರ	ಸದರ	೦–೧೦–೦	ಸದರ
೪೩	ಆಯಿನಯೆ ತನ್‌ದುರಸ್ತಿ ಭಾಗ ೧	ಭೀರೂನಾಥ ಝಾ. ಬಿ. ಎಸ್‌ಸಿ.	ಸದರ	೦– ೫–೦	ಸದರ
೪೪	ಸದರ ಭಾಗ ೨	ಸದರ	ಸದರ	೦– ೫–೦	ಸದರ

ಮಿಡ್ಲ್ ಸ್ಕೂಲ್ ಕ್ಲಾಸ್

೪೫	ಸದರ	ಭಾಗ ೩	ಸದರ
೪೬	ಸದರ	ಭಾಗ ೪	ಸದರ
೪೭	ಇಂಡಿಯನ್ ಪ್ರೆಸ್ ವ್ಹರ್ನ್ಯಾಕ್ಯುಲರ ಫಾಯನಲ್ ಅರ್ಥಮೆಟಿಕ್		ಡಾ. ಗೋರಖಪ್ರಸಾದ
೪೮	ಇಲ್ಮಿಯುಸ್‌ಸೆಹಾತ್	ಭಾಗ ೧	—
೪೯	ಸದರ	ಭಾಗ ೨	—
೫೦	ಸೀನಿಯರ ಮಾಡರ್ನ ಅರ್ಥಮೆಟಿಕ್ ೧೯೩೩		—
೫೧	ಗುಲ್ಜಾರಯೆ ನಿಸ್ಸಾನ್	ಭಾಗ ೧	ಶ್ರೀಮತಿ ಲಲಿತಾದೇವಿ ಪಾಠಕ
೫೨	ಸದರ	ಭಾಗ ೨	ಸದರ
೫೩	ಸದರ	ಭಾಗ ೩	ಸದರ
೫೪	ಸದರ	ಭಾಗ ೪	ಸದರ
೫೫	ಪ್ರಾಯಮರಿ ಅರ್ಥಮೆಟಿಕ್ ಬುಕ್	ಭಾಗ ೧	ಕೇ. ಸೀ. ಭಟ್ಟಾಚಾರ್ಯ ಎಮ್. ಎಸ್‌ಸಿ.

ಸದರ	೦– ೪–೦	ಸದರ
ಸದರ	೦– ೮–೦	ಸದರ
ಸದರ	೦–೧೨–೦	ಸದರ
ಸದರ	೦– ೬–೦	ಸದರ
ಸದರ	೦– ೮–೦	ಸದರ
ಸದರ	೧– ೪–೦	ಸದರ
ಸದರ	೦– ೪–೦	ಸದರ
ಸದರ	೦– ೫–೦	ಸದರ
ಸದರ	೦– ೭–೦	ಸದರ
ಸದರ	೦– ೪–೦	ಸದರ
ಸದರ	೦–೧೦–೦	ಸದರ

ಆ ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತರ ಸಲುವಾಗಿ ಮಂಜೂರಾಗಿರುವದು.
೫೬	ಪ್ರಾಯ್ಮರಿ ಅಥಮೆಟಿಕ್ ಬುಕ್ ಭಾಗ ೨	ಕೆ. ಸಿ. ಭಟ್ಟಾಚಾರ್ಯ, ಎಂ. ಎಸ್‌ಸಿ.	ಇಂಡಿಯನ್ ಪ್ರೆಸ್ ಲಿಮಿಟೆಡ್ ಅಲಾಹಾಬಾದ	೦-೧೨-೦	ಪ್ರಾ. ಶಾ. ಶಿ. ವಾ.
೫೭	ಪ್ರಾಯ್ಮಕ್ಟಿಕಲ್ ಅರ್ಥಮೆಟಿಕ್ ಬುಕ್ ೧ ಭಾಗ ೧	—	ಸದರ	೦- ೫-೬	ಸದರ
೫೮	ಸದರ ಭಾಗ ೨	—	ಸದರ	೦- ೬-೦	ಸದರ
೫೯	ಪ್ರಾಯ್ಮಕ್ಟಿಕಲ್ ಅರ್ಥಮೆಟಿಕ್ ಬುಕ್ ೨ ಭಾಗ ೧	—	ಸದರ	೦- ೬-೦	ಸದರ
೬೦	ಸದರ ಭಾಗ ೨	—	ಸದರ	೦- ೬-೦	ಸದರ
೬೧	ಹಿಂದುಸ್ತಾನಕಾ ಇಪ್ತೆದಾಯಿ ಜುಗ್ರಾಫಿಯಾ ಭಾಗ ೨	ಬೀ. ಎನ್. ಶ್ರೀ ವಾಸ್ತವ ಪುಟ್ಟುಲಾಲ	ಸದರ	೦-೧೨-೦	ಟ್ರೇ.ಸಂ. ಪತ್ಯ ಪು. ಪ್ರಾ. ಶಾ. ಶಿ. ವಾ.
೬೨	ಏಶಿಯಾಕಾ ಇಪ್ತೆದಾಯಿ ಜುಗ್ರಾಫಿಯಾ ಭಾಗ ೩	—	ಸದರ	೦-೧೨-೦	ಸದರ
೬೩	ಯುರೋಪ, ಅಮೇರಿಕಾ, ಆಫ್ರಿಕಾ, ಆಸ್ಟ್ರೇಲಿಯಾಕಾ ಇಪ್ತೇದಾಯಿ ಜುಗ್ರಾಫಿಯಾ	—	ಸದರ	೧- ೦-೦	ಸದರ

ಟಿಪ್ಪಣಿ ಪುಸ್ತಕಗಳು

೬೪	ಜದೀದ ಹಾಯ್ಯಸ್ಕೂಲ ಜಾಮೆಟ್ರಿ	ರಾಜವಂತಸಿಂಗ ಎಮ್.ಎಸ್.ಸಿ.	ಸದರ	೧– ೮–೦	ಪ್ರಾ. ಶಾ. ವಿ. ವಾ.
೬೫	ತಾರೀಖಯೇ ಹಿಂದ ಭಾಗ ೨	ಡಾ. ಈಶ್ವರೀಪ್ರಸಾದ ಎಮ್.ಎ.	ಸದರ	೦–೧೪–೦	ಸದರ
೬೬	ಸದರ ಭಾಗ ೩	ಸದರ	ಸದರ	೦–೧೨–೦	ಸದರ
೬೭	ಮುಬ್ದಿಯಾತೆ ಜುಗ್ರಾಫಿಯಾ	ಡಾ. ಇಬೇದೂರ ರಹಮಾನಖಾನ	ಸದರ	೦– ೬–೦	ಸದರ
೬೮	ಮುಬ್ದಿಯಾತೆ ಸಾಯಿನ್ಸ	ಮೇಸರ್ಸ ಮೀರಸಜಾದಅಲಿ ಶಕೀರ ಮತ್ತು ಮಹಮ್ಮದ ಹುಸೇನ ಅಲಹಾಬಾದಿ ಟೀಚರ್ಸ ಮೆನ್ ಉರ್ದುಸ್ಕೂಲ ನಾಗ್ಪಾಡಾ. ಬಾಂಬೇ	—	೦–೧೨–೦	ಪ್ರಾ. ಶಾ. ಪಠ್ಯಪುಸ್ತಕ
೬೯	ಮುಬ್ತೇಸರ್ ತಾರೀಖ ಏ ಇಂಗ್ಲಿಸ್ತಾನ	ಪ್ರೋ. ಬೀ. ಕೇ. ಮದನ ಎಂ.ಎ.	ಮ್ಯಾಕ್ಮಿಲನ್ ಅ್ಯಂಡ್ ಕೋ. ಲಿ. ಬಾಂಬೇ	೧– ೮–೦	ಪ್ರಾ.ಮಾ.ಶಾ. ಪಠ್ಯಪು. ಪ್ರಾ.ಶಾ.ಶಿ.ವಿ.ವಾ.
೭೦	ತಾರೀಖಯೆ ಹಿಂದುಸ್ತಾನ	ಕೇ. ಪೀ. ಮಿತ್ರ	ರಾಮನಾರಾಯಣಲಾಲ ಅಲಾಹಾಬಾದ	೨– ೮–೦	ಸದರ
೭೧	ಜವಾಹಿರಾತ್	—	ಶೇಖ ಗುಲಾಮಲಿ ಅ್ಯಂಡ ಸನ್ಸ ಲಾಹೋರ	೦ –೫–೦	ಪ್ರಾ. ಶಾ. ವಿ. ವಾ.
೭೨	ಮೊಹರೆ ನಬುವತ್	—	ಸದರ	೦– ೪–೦	ಸದರ
೭೪	ಉರ್ದು ಕಾಂಪೋಜಿಶನ್ ಅ್ಯಂಡ ಗ್ರಾಮರ ಎರಡನೆಯ ಆವೃತ್ತಿ ೧೯೪೦	ಚೌಧರೀ ಮಹಮ್ಮದ ಶಫೀ ಬೀ. ಏ., ಬೀ. ಟಿ.	ಸದರ	೧– ೬–೦	ಪೂರ್ವಮಿಕ ಶಾಲೆ. ವಿ. ವಾ.

ಪ್ರಕಟನೆ

೧೯೪೧ನೆಯ ಇಸವಿಯ ಎಪ್ರಿಲ್ ತಿಂಗಳಲ್ಲಾಗುವ ಪರೀಕ್ಷೆಯನ್ನು ಮೊದಲುಗೊಂಡು ಎರಡು ವರುಷಗಳ ವರೆಗೆ ಗಂಡುಮಕ್ಕಳ ಪಿ. ಎಸ್. ಎಲ್. ಸಿ. ಪರೀಕ್ಷೆಯು ತಾತ್ಪೂರ್ತಿಕವಾಗಿ ಕಾರವಾರ ಜಿಲ್ಲೆಯೊಳಗಿನ ಕುಮಟಾ ಕೇಂದ್ರದಲ್ಲಿಯೂ ನಡೆಯಬೇಕೆಂದು ಮೈ। ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನ ರವರು ಅಪ್ಪಣೆ ಕೊಡಿಸಿರುವರು. ಕುಮಟಾ, ಹೊನ್ನಾವರ, ಸಿಸಿ, ಸಿದ್ದಾಪುರ ತಾಲೂಕುಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದುವಾರರಿಗೆ ಈ ಕೇಂದ್ರವು ಹೆಚ್ಚು ಅನುಕೂಲದ್ದಾಗುವದೆಂದು ಭಾವಿಸಲಾಗಿದೆ. ಅಗ್ರಿಕಲ್ಚರಲ್ ಬಾಯಸದ (ಒಕ್ಕುಲತನದ ಒಲವಿನ) ಪರೀಕ್ಷೆಗೆ ಕೂಡ್ರುವ ಎಲ್ಲ ಉಮೇದವಾರರು ಕಾರವಾರ ಕೇಂದ್ರದಲ್ಲಿಯೇ ಪರೀಕ್ಷೆಗೆ ಕೂಡ್ರಬೇಕು.

R. S. Madiman

ತಾ. ೭-೧೨-೧೯೪೦ ಹೆಡ್‌ಮಾಸ್ತರ ಟ್ರೇನಿಂಗ ಸ್ಕೂಲ್, ಧಾರವಾಡ.

ಪತ್ರಗಳ ಸಾರಾಂಶ

ಹಾರೋಬೆಳವಡಿ (ಜಿಲ್ಲೆ ಧಾರವಾಡ) :—" ತಾರೀಖು ೩೧-೧೦-೧೯೪೦ನೆಯ ದಿವಸ ನಮ್ಮೂರ ಹೊಸ ಶಾಲೆಯ ಉದ್ಘಾಟನ ಸಮಾರಂಭವು ನೆರವೇರಿತು. ಊರವರು ಸ್ವಯಂಸ್ಫೂರ್ತಿಯಿಂದ ಹಂದರ ಹಾಕಿ ಸಿಂಗರಿಸಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಮಾನ್ ಕೆ. ಎಫ್. ಪಾಟೀಲರು ವಹಿಸಿದ್ದರು. ದ. ಭಾ. ದ ಮೈ। ಎಜ್ಯೂಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ತಾವಡೇರಾಯರೂ ಶ್ರೀ. ಭಂಡಿವಾಡ, ಶ್ರೀ. ಕೊಪ್ಪಳ, ಶ್ರೀ. ನಾಡಗೇರ, ಶ್ರೀ. ಉಮಡಿ, ಶ್ರೀ. ಅಡಿಕೆ, ಶ್ರೀ. ಪುಂಕಣಿ, ಶ್ರೀ. ಜೇ. ಪೀ. ನಾಯಿಕ ಮೊದಲಾದ ಮಹನೀಯರೂ ಬಂದಿದ್ದರು. ಈಶ-ಸ್ತವನ, ಸ್ವಾಗತಪದ್ಯ, ಸಂಭಾಷಣೆಗಳಾದ ತಾವಡೇಸಾಹೇಬರು ಇಂಗ್ಲೀಷದಲ್ಲಿ ಉಪದೇಶಪರ ಭಾಷಣ ಅದನ್ನೇ ಶ್ರೀ. ಭಂಡಿವಾಡರವರು ಕನ್ನಡದಲ್ಲಿ ತಿಳಿಸಿದರು. ಸಂತ[illegible] ಹಸ್ತದಿಂದ ಕಟ್ಟಡದ ಬಾಗಿಲವು ತೆರೆಯಲ್ಪಟ್ಟಿತು." ಎಂದು ಹ[illegible] ಶಾಲೆಯ ಅ. ಮಾಸ್ತರರಾದ ಶ್ರೀ. ಜವಳಿಯವರು ತಿಳಿಸುತ್ತಾರೆ.

ಹಿಂದುಸ್ತಾನೀ ಕನ್ನಡ ವ್ಯಾಕರಣ

ಬೆಲೆ ೮ ಆಣೆಗಳು.

●

ಲೇಖಕರು :

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ, ಟ್ರೇನಿಂಗ್ ಸ್ಕೂಲ್, ಧಾರವಾಡ.

ಶ್ರೀ. ಭಾ. ಮಾ. ಕುಲಕರ್ಣಿ, ಬೇಸಿಕ್ ಟ್ರೇನಿಂಗ್ ಸ್ಕೂಲ್, ಧಾರವಾಡ.

●

ಕನ್ನಡ ೫, ೬, ೭, ಮತ್ತು ಇಂಗ್ಲಿಷ ೧, ೨, ೩, ಇಯತ್ತೆಗಳಿಗೂ, ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಖಾಸಗಿಯಿಂದ ಹಿಂದೀ ಕಲಿಯುವವರಿಗೂ ಹಿಂದೀ ಅಧ್ಯಾಪಕರಿಗೂ ಬಹಳ ಉಪಯೋಗವಾಗುವಂತೆ ಸರಳವಾದ ಶೈಲಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳೂ ಮುಂಬೈ ಸರಕಾರದ ಹಿಂದುಸ್ತಾನೀ ಬೋರ್ಡಿನ ಸದಸ್ಯರೂ ಆದ ಶ್ರೀ. ಸಿದ್ಧನಾಥ ಪಂತರು ಮುನ್ನುಡಿಯನ್ನು ಬರೆದಿದ್ದಾರೆ.

●

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೋ, ಧಾರವಾಡ.

ವಿ. ಸೂ.— ನಮ್ಮಲ್ಲಿ ಟೀಚರ್ಸ ಸೊಸಾಯಿಟಿಗಳಿಗೂ, ವಿವಿಧ ಉದ್ದೇಶಗಳ ಸಹಕಾರೀ ಸಂಘಗಳಿಗೂ ಬೇಕಾಗುವ ಬುಕ್ಕುಗಳೂ ಫಾರ್ಮುಗಳೂ ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಸಿಗುತ್ತವೆ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾ. ಸ್ಕೂ. ಲೀವ್ಹಿಂಗ್ ಸರ್ಟಿಫಿಕೇಟ್ ಪರೀಕ್ಷೆಯ ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ಸಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. **ಶ್ರೀ. ಕುರಡಿಯವರು ರಚಿಸಿರುವ,**

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಪ್ರತಿ ಪಾಠದ ಕೊನೆಗೆ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣದ ಸಮಿತಿಯು ಶಿಫಾರಸಿಗೆ ಅನುಸರಿಸಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕ

ಶರೀರ ಶಿಕ್ಷೆ

ಬರೆದವರು :— ಶ್ರೀ. ಜ. ಬಾಪಟೆ. ಬಿ. ಪಿಎಚ್. ಸಿ. (ಅಮೇರಿಕಾ)

ಪ್ರತಿಯೊಬ್ಬ ಶಿಕ್ಷಕನಿಗೂ ಉಪಯುಕ್ತವಾದ ಈ ಪುಸ್ತಕದಲ್ಲಿ ಹಿಂದೀ ಕವಾಯತ; ಸರ್ವಾಂಗಸುಂದರ ವ್ಯಾಯಾಮ, ಆಸನ, ನಮಸ್ಕಾರ, ಲಾಠೀ. ಲೇಝೀಮ, ಜೋಡಿ, ಕೋಲಾಟ ಇತ್ಯಾದಿಗಳ ಮಾಹಿತಿಯನ್ನು ಕೊಟ್ಟಿದೆ. ಆಟ-ಬೈಲಾಟಗಳನಿಯಮಗಳನ್ನೂ ಕೊಟ್ಟಿದೆ. ಬೆಲೆ: ೩ ರೂಪಾಯಿಗಳು.

ಈ ಪುಸ್ತಕದಲ್ಲಿ ಕೊಟ್ಟ ನಮಸ್ಕಾರಗಳ ಚಿತ್ರಪಟ ಬೆಲೆ: ೪ ಆಣೆ.

ದೊರೆಯುವ ಸ್ಥಳ:—

ವಿಳಾಸ:— ಶ್ರೀ. ಜ. ಬಾಪಟೆ,
ಮದಿಹಾಳ, ಧಾರವಾಡ